TIGHT BINDING BOOK

UNIVERSAL LIBRARY
OU_200426
UNIVERSAL LIBRARY

ಶ್ರೀ ಛಾಇ ಗ್ರಂಥಮಾಲೆಯ ಬಿಡಿಮುತ್ತು: ಸುಲಭ ಸಾಹಿತ್ಯ ೧

# ಶ್ಯಾಮನ ತಾಯಿ

**ತಾಯಿಯ ಪ್ರೀತಿ, ಔದಾರ್ಯ, ಸಹೃದಯತೆ**
**ಕರುಣೆ ಮತ್ತು ಸುಂದರ ಸಂಸ್ಕೃತಿಗಳ**
**ಕಥನ ಚಿತ್ರ**

( ದಿವಂಗತ ಸಾನೇ ಗುರೂಜಿಯವರು ಬರೆದುದು )

**ಅನುವಾದಕ :**

ಭಾಲಚಂದ್ರ ಖಾಂಡೇಕರ

**ಬೆಲೆ : ರೂ. ೧—೮—೦**

ಮೊದಲ ಮುದ್ರಣ ೧೯೫೪

ಈ ಕನ್ನಡ ಅನುವಾದದ ಪ್ರಕಟನೆಯ ಶಾಶ್ವತ ಹಕ್ಕು ಸಮಾಜ ಪುಸ್ತ
ಕಾಲಯದ ಕಡೆಗೆ ಇರುತ್ತದೆ. ಆದರೆ ಇದರಿಂದ ಅವತರಣಿಕೆ
ಗಳನ್ನು ಕೊಡುವ, ರೇಡಿಯೋ ರೂಪಕ, ನಾಟಕ ಮತ್ತು
ಸಂಕ್ಷಿಪ್ತ ಕಥಾನಕಗಳಿಗೆ ಅಪ್ಪಣೆ ಕೊಡುವ ಹಕ್ಕುಗಳು
ಪುಣೆಯ ಅನಾಥ ವಿದ್ಯಾರ್ಥಿಗೃಹದ ಕಡೆಗೆ ಇರುತ್ತವೆ.

ಮುದ್ರಕರು ಮತ್ತು ಪ್ರಕಾಶಕರು.
**ಭಾಲಚಂದ್ರ ವೆಂಕಟೇಶ ಘಾಣೇಕರ**

ಮುದ್ರಣ: ಪ್ರತಿಭಾ ಮುದ್ರಣಾಲಯ.

ಪ್ರಕಾಶನ: ಸಮಾಜ ಪುಸ್ತಕಾಲಯ.

ಸ್ಥಳ:
**ಭಗತಸಿಂಗಬೀದಿ, ಧಾರವಾಡ.**

# ಮುನ್ನುಡಿ

ಪವಿತ್ರ ವಸ್ತುವಿಗೆ ಮುನ್ನುಡಿಯ ಅವಶ್ಯಕತೆಯೇನು ? ಸುಂದರ ಮತ್ತು ಸುವಾಸನೆಯುಳ್ಳ ವಸ್ತುವಿನ ಪರಿಚಯ ಮಾಡಿ ಕೊಡಬೇಕಾಗುವದೇನು ? 'ಶ್ಯಾಮನ ತಾಯಿ' ಪುಸ್ತಕವು ಸುಂದರ, ಸುರಸ ಮತ್ತು ಸುಮನೋಹರವಾಗಿರುವುದೋ ಇಲ್ಲವೋ ನನಗೆ ಗೊತ್ತಿಲ್ಲ. ಆದರೆ ಪವಿತ್ರವಾದುದೆಂದು ಆತ್ಮಪೂರ್ವಕವಾಗಿ ಹೇಳಬಲ್ಲೆ. ಹೃದಯದಲ್ಲಿರುವ ಕಕ್ಕುಲತೆಯನ್ನೆಲ್ಲ ಇದರಲ್ಲಿ ಸುರುವಿದ್ದೇನೆ. ಈ ಕಥೆಗಳನ್ನು ಬರೆಯುವಾಗಲೆಲ್ಲ ಕಣ್ಣು ಒದ್ದೆಯಾಗುತ್ತಿದ್ದವು. ಅನೇಕ ಸಲ ಕಣ್ಣಿಗೆ ಮಹಾಪೂರ ಬಂದದ್ದೂ ಉಂಟು. ಹೃದಯದಲ್ಲಿ ತಾಯಿಯ ಬಗೆಗೆ ಇರುವ ಪ್ರೀತಿ, ವಿಶ್ವಾಸ ಮತ್ತು ... ಅಪಾರ ಭಾವನೆಗಳು 'ಶ್ಯಾಮನ ತಾಯಿ' ಯನ್ನು ಓದುವವರ ...ಯೂ ಉತ್ಪನ್ನವಾದರೆ ಈ ಪುಸ್ತಕ ಬರೆದುದರ ಸಾರ್ಥಕವಾಯಿತೆಂದು ಹೇಳಬಹುದು. ಈ ಪುಸ್ತಕವನ್ನು ಓದಿದವರ ಕಣ್ಣು ಮತ್ತು ಹೃದಯ ... ಬತ್ತಿ ಬರಡಾಗಿಯೇ ಇದ್ದರೆ ಈ ಪುಸ್ತಕವು ತ್ಯಾಜ್ಯವೆಂದೂ, ನಿರರ್ಥಕವೆಂದೂ, ನಿರಸವೆಂದೂ ತಿಳಿಯಬೇಕು.

ಜೇಲಿನಲ್ಲಿರುವಾಗ ಈ ರಾತ್ರಿಗಳನ್ನು ನಾನು ಬರೆದೆ. ಹಗಲು ಕೆಲಸ ಮಾಡಬೇಕು, ರಾತ್ರಿ ಜಗನ್ಮಾತೆ, ಭಾರತಮಾತೆ ಮತ್ತು ಜನ್ಮಕೊಟ್ಟ ಮಾತೆಯರ ವಿಚಾರದಲ್ಲಿ ಮಗ್ನನಾಗಬೇಕು, ಈರೀತಿ ಕಾರ್ಯಕ್ರಮವಿಟ್ಟಿದ್ದೆ. ಜೊತೆಯಲ್ಲಿದ್ದ ಗೆಳೆಯರಿಗೆ ಈ ರಾತ್ರಿಗಳು ಮೆಚ್ಚಿದ್ದವು. ಅವರಿಗೆ ಓದಿತೋರಿಸುವಾಗ ನಾನೂ ಅಳುತ್ತಿದ್ದೆ. ಅವರೂ ಅಳುತ್ತಿದ್ದರು. ಹೊರಗೆ ಬಂದ ಮೇಲೆ ಓದಿನೋಡಿದ ಅನೇಕ ಬಂಧು ಭಗಿನಿಯರಿಗೂ ಇದೇ ಅನುಭವ ಬಂದಿದೆ. ಮಕ್ಕಳಿಗಾಗಿ ನಡೆಸುತ್ತಿದ್ದ 'ಶಾಲಾಪತ್ರಿಕೆ' ಯಲ್ಲಿ ಕೆಲವು ಭಾಗವನ್ನು ಪ್ರಕಟಿಸಿದ್ದೆ. ಈ ಸುಲಭ, ಸುಂದರ ಮತ್ತು ಭಾವನಾಮಯವಾದ ಕಥೆಗಳ ಬಗ್ಗೆ ಅನೇಕರು ಗುಣಗಾನಮಾಡಿ ಸಂಪಾದಕರಿಗೆ ಪತ್ರ ಬರೆದಿದ್ದರು. ಈ ಎಲ್ಲ ಕಾರಣಗಳಿಂದ ಪುಸ್ತಕ ರೂಪದಲ್ಲಿ ಇದನ್ನು ಪ್ರಕಟಿಸಲು ಧೈರ್ಯ ತಾಳಿದೆ. ತಾಯಿಯ ಬಗ್ಗೆ ಸದ್ಭಾವನೆಯುಳ್ಳವರೂ ತಾಯಿಮಕ್ಕಳ ಪವಿತ್ರ ಪ್ರೇಮದ

ಬಗ್ಗೆ ಆಸ್ಥೆಯುಳ್ಳವರೂ ‘ ಶ್ಯಾಮನ ತಾಯಿ ’ ಪುಸ್ತಕವನ್ನು ಪ್ರೀತಿಯಿಂ
ಸ್ವಾಗತಿಸುವರೆಂದು ನಂಬಿದ್ದೇನೆ.

ಇದರಲ್ಲಿ ಮೂವತ್ತಾರು ರಾತ್ರಿಗಳನ್ನು ನಾಶಿಕ ಸೆರೆಮನೆ
೯–೨–೩೩ ಕ್ಕೆ ಬರೆಯಲು ಆರಂಭಿಸಿ ಐದು ದಿವಸಗಳಲ್ಲಿ – ಅಂದ
೧೩–೨–೩೩ ರ ನಸುಕಿನೊಳಗಾಗಿ ಮುಗಿಸಿದ್ದೇನೆ. ಹೃದಯದಲ್ಲಿ ತುಂಬಿಕೊಂ
ಡಿರುವದನ್ನೇ ಸರಸರನೆ ಮಸಿಯಿಂದ ಕಾಗದದ ಮೇಲೆ ಇಳಿಸಿದ್ದೇನೆ. ಇದನ್ನು
ನನ್ನ ಚರಿತ್ರವೆಂದೇ ತಿಳಿಯಬಾರದು. ಇವು ಸತ್ಯಕಥೆಗಳೇ ಆಗಿದ್ದರೂ ಅ
ಸ್ಮಾತ್ತಾಗಿ ಇವುಗಳಲ್ಲಿ ಬಂದಿರುವ ಯಾವುದೊಂದು ಪ್ರಸಂಗ, ಯಾವುದೊಂದು
ಸನ್ನಿವೇಶ ಕಾಲ್ಪನಿಕವಾಗಿರುವ ಸಂಭವವಿದೆ.

ತಾಯಿಯ ಮಹಿಮೆಯೇ ಈ ಪುಸ್ತಕದ ಮುಖ್ಯವಾದ ಸೂತ್ರವಾಗಿದೆ.
ಅದರ ಜೊತೆಗೇ ಸುಸಂಸ್ಕೃತ ಬ್ರಾಹ್ಮಣ ಮನೆತನದಲ್ಲಿಯ ಸಾದಾ, ಸರಳ
ಮತ್ತು ಸುಂದರವಾದ ಸಂಸ್ಕೃತಿಯ ಚಿತ್ರವೂ ಚಿತ್ರಿತವಾಗಿದೆ. ಶ್ಯಾಮನ
ತಾಯಿಯ ಸ್ಮೃತಿಚಿತ್ರದೊಡನೆ ಶ್ಯಾಮನ ಕಥೆಗಳೂ ಬರತಕ್ಕವೇ. ಆದರೆ
ಆ ಕಥೆಗಳಲ್ಲಿಯೂ ಕೊನೆಗೆ ತಾಯಿಯ ಪ್ರೇಮವೇ ಹೊರಹೊಮ್ಮಿದೆ. ಗಿಡದ
ಎಲ್ಲ ಟೊಂಗೆ ಮತ್ತು ಎಲೆಗಳ ವಿಸ್ತಾರವು ಮೇಲೆ ಬರಲಿರುವ ಕೆಲವೊಂದು
ಹೂ-ಕಾಯಿ-ಹಣ್ಣುಗಳಿಗಾಗಿ ಇರುತ್ತದೆ. ಅದೇ ರೀತಿ ಶ್ಯಾಮನ ಹಲವಾರು
ಆಗು-ಹೋಗುಗಳ ಕಥೆಗಳು ಕೊನೆಗೆ ಅವುಗಳಿಂದ ಹೊರಬೀಳುವ ತಾಯಿಯ
ಅಮೃತಮಯ ಪ್ರೇಮಕ್ಕಾಗಿಯೇ ಇವೆ. ತಾಯಿಯ ಯಾವುದೊಂದು ಮಾ
ತ್ವದ ಮಾತನ್ನು, ಶಬ್ದವನ್ನು ಹೇಳುವದಕ್ಕಾಗಿ ಶ್ಯಾಮನು ತನ್ನ ನಡತೆಯ
ಮತ್ತು ಸುತ್ತುಮುತ್ತಲಿನ ಪರಿಸ್ಥಿತಿಯ ಕಲ್ಪನೆಯನ್ನು ಕೊಡುವ ಪ್ರಸಂಗ
ಬಂದಿದೆ. ಅನಂತ ನೀಲ ಆಕಾಶದಲ್ಲಿ ಚಂದ್ರನು ವಿರಾಜಿಸುವಂತೆ ಶ್ಯಾಮನ
ಕಥೆಯ ಹಿನ್ನೆಲೆಯಲ್ಲಿ ಮಾತೃಪ್ರೇಮದ ಚಂದ್ರನು ವಿರಾಜಿಸಿದ್ದಾನೆ. ಶ್ಯಾಮ
ನಿಗೆ ತನ್ನ ಹಿರಿಮೆಯನ್ನು ಹೇಳಿಕೊಳ್ಳುವದಿರದೆ ತಾಯಿಯ ಪ್ರೇಮದ ಪಾತ
ಗಳನ್ನು ಪ್ರಕಟಗೊಳಿಸುವದಿದೆ. ತಾಯಿಯನ್ನು ಪೂರ್ಣವಾಗಿ ಪ್ರಕಟಗೊಳಿಸ
ಬೇಕೆಂದೇ ತನ್ನನ್ನು ಪ್ರಕಟಗೊಳಿಸಿಕೊಂಡಿದ್ದಾನೆ. ಅವನು ಪ್ರಕಟವಾಗುವ
ದೆಂದರೆ ತಾಯಿಯು ಪ್ರಕಟವಾದಂತೆಯೇ.

ಇದರ ಹಸ್ತಪ್ರತಿಯನ್ನು ಅರವತ್ತು ಎಪ್ಪತ್ತು ಜನ ಓದಿ ಮೆಚ್ಚಿದ್ದಾರೆ. 'ಇದನ್ನೋದಿ ಮಾತೃಪ್ರೇಮ ಹೆಚ್ಚಿದೆ' ಯೆಂದು ತಾವಾಗಿ ನನ್ನ ಮುಂದೆ ನುಡಿದಿದ್ದಾರೆ. ಇದರ ಸಾರ್ಥಕವಾಯಿತೆಂದು ಆಗಲೇ ನಾನು ತಿಳಿದುಕೊಂಡೆ. ಇನ್ನು ಇದರ ಮಾರಾಟವಾಗದಿದ್ದರೂ ಅಷ್ಟೇ. ಅದನ್ನು ಬರೆಯುತ್ತಿರುವಾಗ ನಾನು ಸೂರೆಗೊಳ್ಳುತ್ತಿದ್ದ ಆನಂದವೇನು ಕಡಮೆ ಲಾಭದ್ದೇ? ಆದರೂ 'ಶ್ಯಾಮನ ತಾಯಿ' ಮನೆಮನೆಗೂ ಹೋದೀತೆಂದು ನಾನು ವಿಶ್ವಾಸ ತಾಳಿದ್ದೇನೆ. ಮಕ್ಕಳ ಮನಸ್ಸನ್ನು ರೂಪಿಸುವ ಪಾಠಶಾಲೆಗಳಲ್ಲಿ ಅದು ಬೆಳಗುವದೆಂದು ಆಶಿಸಿದ್ದೇನೆ. ಅದು ಹೋಗಲಿ, ಹೋಗದಿರಲಿ, ಗೆಳೆಯರನೇಕರ ಪ್ರೋತ್ಸಾಹನದಿಂದ ಇಂದು 'ಶ್ಯಾಮನ ತಾಯಿ' ನನ್ನ ಮನೆಯಿಂದಾದರೂ ಹೊರಬಿದ್ದು ಎಲ್ಲರ ಭೆಟ್ಟಿಗೆ ಹೊರಟಿರುತ್ತಾಳೆ. ಅವಳು ತನ್ನ ಮಗನನ್ನು ಬೆಳೆಸಿದಂತೆ ಬೇರೆ ಮಕ್ಕಳುಮರಿಗಳನ್ನೂ ಬೆಳೆಸುವದಕ್ಕಾಗಿ ಹೊರಗೆ ಬಂದಿದ್ದಾಳೆ. ತೆರೆದ ಬಾಗಿಲುಗಳಿಂದ ಅವಳು ಒಳಗೆ ಪ್ರವೇಶ ಮಾಡುವಳು. ಮುಚ್ಚಿದ ಬಾಗಿಲುಗಳಿದ್ದರೆ ಹೊರಗೇ ನಿಲ್ಲುವಳು. ಆದರೆ ಎಲ್ಲ ಬಾಗಿಲುಗಳೂ ಮುಚ್ಚಿದ್ದರೇನು ಗತಿ? ಹಾಗಿದ್ದರೆ ನನ್ನ ಮನೆಗೆ ಮರಳಿ ಬಂದು ಇರುವಳು. ನನ್ನ ಹೃದಯದಲ್ಲಂತೂ ಇದ್ದೇ ಇರುವಳು.

ದಾಸನವಮಿ, ಶಕೆ ೧೮೫೭
ಕಲಾಸದನ, ಪುಣೆ ೨

**ಪಾಂಡುರಂಗ ಸದಾಶಿವ ಸಾನೆ**

# ಸಾನೇ ಗುರೂಜಿಯವರ ಅಲ್ಪ ಪರಿಚಯ.

ಸಾನೇ ಗುರೂಜಿಯವರ ತಂದೆ ಸದಾಶಿವರಾಯರು ಕೊಂಕಣದಲ್ಲಿ ಪಾಲಗಡವೆಂಬಲ್ಲಿ ಇರುತ್ತಿದ್ದರು. ಅವರು ಅಲ್ಲಿಯ ಖೋತ (ಸರದಾರ) ಮನೆತನದವರಾಗಿದ್ದರೂ ಸದಾಶಿವರಾಯರ ಕಾಲದಿಂದ ಅವರ ಮನೆತನದ ಪರಿಸ್ಥಿತಿ ತೀರ ಕೆಟ್ಟಿತ್ತು. ಅದರಿಂದಾಗಿ ಅವರ ಮನೆಮಾರುಗಳೆಲ್ಲ ಜಪ್ತಾಗಿ ಹೋದವು. ಇಂಥ ಬಡ ಮನೆತನದಲ್ಲಿ ೧೮೯೯ನೇ ಡಿಸೆಂಬರ್ ೨೪ ರಲ್ಲಿ ಗುರೂಜಿಯವರ ಜನ್ಮವಾಯಿತು.

ಗುರೂಜಿಯವರ ತಾಯಿಯ ಹೆಸರು ಯಶೋದೆ. ಬಾಲ್ಯದಿಂದಲೂ ತಾಯಿಯ ಮೇಲೆ ಗುರೂಜಿಯವರ ಪ್ರೇಮ ಅತಿಶಯವಾಗಿತ್ತು. 'ಶ್ಯಾಮನ ತಾಯಿ' ಯಲ್ಲಿ ಅವರು ತಮ್ಮ ತಾಯಿಯ ಸ್ಮೃತಿಚಿತ್ರಗಳನ್ನು ಕೊಟ್ಟಿದ್ದಾರೆ.. ಗುರೂಜಿಯವರ ಜೀವನ ವಿಕಾಸವಾದದ್ದು ಅವರ ತಾಯಿಯಿಂದ. ಗುರೂಜಿಯವರು ಸುಸಂಸ್ಕೃತರೂ ಭಾವನಾಪ್ರಧಾನರೂ ಆಗಿದ್ದರು.

ಪಾಲಗಡದಲ್ಲಿ ಪ್ರಾಥಮಿಕ ಶಿಕ್ಷಣ ಮುಗಿದ ಮೇಲೆ ಇವರು ಪುಣೆಯಲ್ಲಿ ಸೋದರಮಾವನ ಹತ್ತಿರ ಇಂಗ್ಲೀಷು ಕಲಿಯಲಿಕ್ಕೆ ಇದ್ದರು. ಅಲ್ಲಿ ಇವರಿಗೆ ಸರಿಬೀಳದೆ ಪಾಲಗಡಕ್ಕೆ ಮರಳಿ ಬಂದರು. ಮುಂದೆ ದಾಪೋಲಿಯ ಮಿಶನ್ ಹೈಸ್ಕೂಲಿನಲ್ಲಿ ಸೇರಿಕೊಂಡರು. ಇವರು ಜಾಣ ವಿದ್ಯಾರ್ಥಿಗಳೆಂದು ಹೆಸರು ಗಳಿಸಿಕೊಂಡರು. ಮರಾಠಿ ಮತ್ತು ಸಂಸ್ಕೃತದಲ್ಲಿ ಇವರು ಬೇಗನೆ ನೈಪುಣ್ಯವನ್ನು ಪಡೆದರು. ಕವಿತೆ ಮಾಡುವ ಹುಚ್ಚು ಇವರಿಗಿತ್ತು. ಶಾಲೆಯಲ್ಲಿ 'ಕವಿ' ಗಳೆಂದು ವಿಖ್ಯಾತರಾಗಿದ್ದರು.

ಮನೆಯಲ್ಲಿ ಬಡತನದ ಬೇಗೆಯು ಹೆಚ್ಚುತ್ತಲೇ ಇತ್ತು. ಗುರೂಜಿಯವರ ಅಣ್ಣನು ನೌಕರಿ ಹಿಡಿಯಬೇಕಾಯಿತು. ಇವರಾದರೂ ತಂದೆಯವರಿಗೆ ಭಾರವಾಗಿ ಇರಬಾರದೆಂದು ಔಂಧ ಸಂಸ್ಥಾನಕ್ಕೆ ಹೋದರು. ಅಲ್ಲಿ ವಿದ್ಯಾರ್ಥಿಗಳಿಗೆ ಪುಕ್ಕಟೆ ಊಟ ಸಿಗುತ್ತದೆಂದು ಯಾರೋ ಹೇಳಿದ್ದರು. ಅಲ್ಲಿ ಶಿಕ್ಷಣ ಪಡೆಯುವದಕ್ಕಾಗಿ ಇವರು ಬಹಳ ಕಷ್ಟಪಡಬೇಕಾಯಿತು. ಆದರೆ ಇವರ ದುರ್ದೈವದಿಂದ ಅಲ್ಲಿ ಪ್ಲೇಗಿನ ಹಾವಳಿ ಆರಂಭವಾಗಿ ಶಾಲೆ ಮುಚ್ಚಲ್ಪಟ್ಟಿತು.

ಗುರೂಜಿಯವರು ನಿರುಪಾಯರಾಗಿ ತಮ್ಮ ಊರನ್ನು ಸೇರಬೇಕಾಯಿತು. ಅವರ ತಂದೆಯವರಿಗೆ ಮಾತ್ರ ಅದು ನಿಜವೆನಿಸಲಿಲ್ಲ. ಕಲಿಯಲಿಕ್ಕಾಗದೆ ಬಂದನೆಂದು ಹೆಸರಿಟ್ಟರು. ತಂದೆಯವರ ಮಾತಿನಿಂದ ಗುರೂಜಿಯವರು ದುಃಖಿತರಾದರು. ಕೂಡಲೆ ಅವರು ಪುಣೆಗೆ ಹೊರಟುಹೋದರು.

ಪುಣೆಯಂಥ ಪಟ್ಟಣದಲ್ಲಿ ಗುರೂಜಿಯವರು ಇನ್ನೂ ಹೆಚ್ಚಿನ ಕಷ್ಟಗಳನ್ನು ಅನುಭವಿಸಬೇಕಾಗಿ ಬಂದಿತು. ಭಿಕ್ಷಾನ್ನದಿಂದಲೋ, ವಾರದ ಮನೆಗಳಿಂದಲೋ, ಹೇಗೆ ಹೇಗೋ ಜೀವನ ಸಾಗಿಸಿಕೊಂಡು, ಎಲ್ಲ ಸಂಕಟಗಳಿಗೂ ಎದೆಗೊಟ್ಟು, ಅವರು ಶಿಕ್ಷಣ ಸಾಗಿಸಿದ್ದರು. ಮ್ಯಾಟ್ರಿಕ್ಯು ಪಾಸಾದ ನಂತರ ನ್ಯೂ ಪೂನಾ ಕಾಲೇಜಿನಲ್ಲಿ ಹೆಸರು ಹಚ್ಚಿದರು. ಆ ಕಾಲೇಜಿನಲ್ಲಿಯೇ ಅವರು ಎಂ. ಎ. ವರೆಗೆ ಓದಿದರು. ಎಂ. ಎ. ಪಾಸಾದ ಮೇಲೆ ಮುಂದೇನು ಮಾಡುವದೆಂದು ಯೋಚಿಸುತ್ತಿರುವಷ್ಟರಲ್ಲಿ ಅಮಳನೇರ ತತ್ವಜ್ಞಾನ ಮಂದಿರದಲ್ಲಿ ಅವರಿಗೆ ' ಫೆಲೋ ' ಸ್ಥಳ ದೊರೆಯಿತು. ಆದರೆ ಬೇಗನೆ ಆ ಕೆಲಸಕ್ಕೆ ಅವರು ಶರಣು ಹೊಡೆಯಬೇಕಾಯಿತು. ಆ ಬಳಿಕ ಅವರು ಅಮಳನೇರ ಶಾಲೆಯ ಶಿಕ್ಷಕರಾಗಿ ಕೆಲಸ ಮಾಡಿದರು. ವಸತಿಗೃಹದ ಮೇಲ್ವಿಚಾರಣೆಯ ಕೆಲಸ/ಇವರ ಮೇಲೆಯೇ ಬಿತ್ತು. ವಿದ್ಯಾರ್ಥಿಗಳ ಸರ್ವಾಂಗೀಣ ಉನ್ನತಿಗಾಗಿ ತಮ್ಮ ಬುದ್ಧಿಯನ್ನೂ ಸಾಹಸವನ್ನೂ ಧಾರೆ ಎರೆದು ಬಿಟ್ಟಿದ್ದರ ಫಲವಾಗಿಯೇ ಅವರಿಗೆ 'ಗುರೂಜಿ' ಯೆಂಬ ಹೆಸರು ಬಿದ್ದಿತು. ಅದಕ್ಕೆ ಅವರು ಅರ್ಹರೂ ಆಗಿದ್ದರು. ೧೯೨೮ರಲ್ಲಿ 'ವಿದ್ಯಾರ್ಥಿ' ಯೆಂಬ ಮಾಸಪತ್ರಿಕೆಯನ್ನು ಹೊರಡಿಸಿದರು. ೧೯೩೦ ರಲ್ಲಿ ಮಹಾತ್ಮರ ಆಂದೋಲನ ಆರಂಭವಾಗಲು ಗುರೂಜಿಯವರು ತಮ್ಮ ಶಾಲೆಯ ಜೀವನದಿಂದ ಬಿಡುಗಡೆ ಹೊಂದಿ ರಾಜಕೀಯ ರಂಗದಲ್ಲಿ ಅಡಿಯಿಟ್ಟರು. ಅಂದಿನಿಂದ ತಮ್ಮ ಮರಣಪರ್ಯಂತರವೂ ದೇಶಸೇವೆ, ಸಮಾಜಸೇವೆಯಲ್ಲಿಯೇ ತಮ್ಮ ದೇಹವನ್ನು ಸವೆಸಿದರು. ಪಂಢರಪುರದ ದೇವಸ್ಥಾನದಲ್ಲಿ ಹರಿಜನರಿಗೆ ಪ್ರವೇಶ ದೊರಕಿಸಿ ಕೊಟ್ಟ ಶ್ರೇಯವು ಗುರೂಜಿಯವರಿಗೇ ಸಲ್ಲುತ್ತದೆ.

ಮರಾಠೀ ಸಾಹಿತ್ಯದಲ್ಲಿ ಗುರೂಜಿಯವರು ಶ್ರೇಷ್ಠ ಸ್ಥಾನವನ್ನು ಗಳಿಸಿಕೊಂಡಿದ್ದಾರೆ. ಕಾದಂಬರಿ, ಕಥೆ, ಕಾವ್ಯ, ಪ್ರಬಂಧ, ಚರಿತ್ರೆ ಮತ್ತು ನಾಟಕ

ಮೊದಲಾದ ವಿವಿಧ ಕ್ಷೇತ್ರಗಳಲ್ಲಿ ದುಡಿದು ಕೀರ್ತಿ ಪಡೆದಿದ್ದಾರೆ. ಇವರ ವಾಙ್ಮಯದಲ್ಲಿ ಸಹೃದಯತೆ, ಸ್ನೇಹ, ಪ್ರೇಮ ಮೊದಲಾದ ಸಂಗತಿಗಳು ಒಡೆದು ಕಾಣುತ್ತವೆ. ಇವರ ಭಾಷೆ ಸರಳವಾದುದು. ಪ್ರಭಾವಶಾಲಿಯಾದುದು. ಸಾಮಾನ್ಯ ಜನರಿಗೂ ತಿಳಿಯುವಂಥದು.

ಗುರೂಜಿಯವರು ತಮ್ಮ ಸಾಹಿತ್ಯ ನಿರ್ಮಾಣವನ್ನು ಸಮಾಜೋದ್ಧಾರಕ್ಕಾಗಿ ಮಾಡಿದ್ದಾರೆ. ರಾಜಕೀಯ, ಸಾಮಾಜಿಕ ಮತ್ತು ಶೈಕ್ಷಣಿಕ ವಿಷಯಗಳ ಬಗ್ಗೆ ಇರುವ ತಮ್ಮ ವಿಚಾರಗಳನ್ನೂ ಭಾವನೆಗಳನ್ನೂ ಲೆಕ್ಕಣಿಕೆಯ ಮೂಲಕ ಬಹಿರಂಗಪಡಿಸಿದ್ದಾರೆ. ಸಾಮಾನ್ಯ ಮನೆತನದ ವಿಷಯಗಳನ್ನು ಕೂಡ ಹೃದಯಂಗಮವಾಗಿ ವರ್ಣಿಸುವ ಕಲೆ ಇವರಿಗೆ ಚೆನ್ನಾಗಿ ಸಾಧಿಸಿತ್ತು. ಇವರ ಸಾಹಿತ್ಯ ಕೃತಿಗಳು ಹಿರಿ-ಕಿರಿಯರಿಗೆಲ್ಲ ಉಪಯುಕ್ತವಾಗಿವೆ. ಇವರ ಸಾಹಿತ್ಯದಲ್ಲಿಯ ಪ್ರಭಾವಶಾಲಿ ರತ್ನಗಳೆಂದರೆ ‘ ಶ್ಯಾಮನ ತಾಯಿ ’ ಮತ್ತು ‘ ಶ್ಯಾಮ ’ ಈ ಎರಡು ಪುಸ್ತಕಗಳು.

ಗುರೂಜಿಯವರು ದೇಶಸೇವೆ, ಸಾಹಿತ್ಯಸೇವೆ ಮತ್ತು ಸಮಾಜಸೇವೆಯನ್ನು ಮಾಡುತ್ತಿರುವಾಗಲೇ ೧೧ ನೇ ಜೂನ್ ೧೯೫೦ ರಂದು ಪ್ರಾಣವನ್ನು ನೀಗಿದರು.

# ಶ್ಯಾಮನ ತಾಯಿ

# ಪ್ರಕಾಶಕರ ಮಾತು

'ಬೆಂಗಳೂರು ಮೈಸೂರು ಕಡೆಯವರಂತೆ ನೀವೂ ಕೆಲವು ಅಗ್ಗದ ಪುಸ್ತಕಗಳನ್ನು ಏಕೆ ಪ್ರಕಟಿಸಬಾರದು?' ಎಂದು ಕೆಲವರು ನಮಗೆ ಕೇಳುತ್ತಿದ್ದಾರೆ. ಏಳು ರೂ. ಚಂದಾಹಣದಲ್ಲಿ ಸಾವಿರಕ್ಕಿಂತ ಹೆಚ್ಚು ಪುಟ ಸಾಹಿತ್ಯವನ್ನು ಅಂಚೆವೆಚ್ಚ ಕೂಡ ನಾವೇ ವಹಿಸಿ ಕಳಿಸುತ್ತಿರುವ ವಿಷಯವನ್ನು ಅವರ ಗಮನಕ್ಕೆ ತಂದುಕೊಟ್ಟಿದ್ದೇವೆ. ಇದಕ್ಕಿಂತ ಕಡಿಮೆ ಬೆಲೆ ಇಡುವದೆಂದರೆ ಕೊನೆಯವರೆಗೆ ಪೂರೈಸುವ ಮಾತಲ್ಲ. ತೀರ ಕಡಿಮೆ ಬೆಲೆ ಇಟ್ಟರೆ ಒಮ್ಮೆಲೆ ಹತ್ತುಪಟ್ಟು ಗ್ರಾಹಕರು ಬೆಳೆಯುತ್ತಾರೆಂದು ನಮಗೆನಿಸುವದಿಲ್ಲ. ಅಗ್ಗ ಬೆಲೆಯ ವಿಚಾರಕ್ಕಿಂತ ಯೋಗ್ಯಬೆಲೆಯ ವಿಚಾರವಾಗಿ ಯಾರಾದರೂ ಒಪ್ಪಬಹುದು. ಕಾಲಕ್ಕೆ ತಕ್ಕಂತೆ ತುಸು ಬೆಲೆಯನ್ನು ಇಳಿಸುವುದು ಯೋಗ್ಯವಾದುದೇ ಆದರೆ ಒಮ್ಮೆಲೆ ದುಡುಕಿ ತೀರ ಕಡಿಮೆ ಬೆಲೆ ಇಡುವುದು ತೊಂದರೆಯ ಕೆಲಸ. ನಿರೀಕ್ಷಿಸುವಷ್ಟು ಪ್ರತಿಗಳು ಅಲ್ಪಾವಧಿಯಲ್ಲಿ ಮಾರದಂತಾದರೆ ಪ್ರಕಾಶಕರು ಬಾಳುವದೇ ಕಷ್ಟ.

ಇರಲಿ. ಕನ್ನಡ ಓದುಗರ ಬೆಂಬಲ ಸಿಕ್ಕೀತೆಂಬ ಭರವಸೆಯುಟ್ಟು ನಾವೂ ಕೆಲವು ಪುಸ್ತಕ ಪ್ರಕಟಿಸಬೇಕೆಂದು ಮಾಡಿದ್ದೇವೆ. ಅಗ್ಗ ದರಕ್ಕೆ ಕೊಡುವದರಿಂದ ನಮಗೆ ಲಾಭವಾಗದಿದ್ದರೂ ಒಳ್ಳೇ ಸಾಹಿತ್ಯವನ್ನು ಓದುಗರ ಕೈಗೆ ಕೊಟ್ಟೆವೆಂಬ ಆನಂದವಾದರೂ ದೊರೆಯಲೆಂದು 'ಶ್ಯಾಮನ ತಾಯಿ' ಯಿಂದ ಈ ಸುಲಭ ಸಾಹಿತ್ಯದ ಆರಂಭವನ್ನು ಮಾಡಿದ್ದೇವೆ. ಇಂಥ ಸಾಹಿತ್ಯ ಕನ್ನಡಿಗರಿಗೆ ಅವಶ್ಯವಾಗಿದೆಯೆಂಬುದನ್ನು ಓದುಗರು ಹೇಳಿದರೆ ಸಾಕು.

ಈ ಪುಸ್ತಕದ ಅನುವಾದ–ಕೃತಿಯನ್ನು ಓದಿ, ಅಲ್ಲಲ್ಲಿ ತಿದ್ದುಪಡೆಯ ಸೂಚನೆಯನ್ನು ಕೂಡ ಅಂತಃಕರಣಪೂರ್ವಕವಾಗಿ ಮಾಡಿದ ಗೆ. ಜನಾರ್ದನ ಗುರ್ಕಾರ್‌ರವರಿಗೆ ಕೃತಜ್ಞರಾಗಿದ್ದೇವೆ. ಗೆ. ವೆಂ. ಮು. ಜೋಶಿ ಮತ್ತು ಶ್ರೀ. ದ. ಬಾ. ಕುಲಕರ್ಣಿಯವರು ಇದನ್ನು ಅನುವಾದ ಮಾಡಲು ಹುರುದುಂಬಿಸಿದ್ದಕ್ಕಾಗಿ ಅವರನ್ನೂ ಇಲ್ಲಿ ನೆನೆಯದೆ ಇರಲಾರೆವು.

ಅದೇ ರೀತಿ ಪುಣೆಯ ಅನಾಥ ವಿದ್ಯಾರ್ಥಿ ಗೃಹದವರು ಇದನ್ನು ಕನ್ನಡಕ್ಕೆ ಅನುವಾದಿಸಿ ಪ್ರಕಟಿಸಿಕೊಳ್ಳಲು ಅನುಮತಿ ಇತ್ತದ್ದಕ್ಕಾಗಿ ಅವರಿಗೆ ಚಿರಋಣಿಯಾಗಿದ್ದೇವೆ.

## ಪರಿವಿಡಿ


| ಪ್ರಕರಣ | | ಪುಟ |
|---|---|---|
| ಆರಂಭ | .... .... | ೧ |
| ರಾತ್ರಿ: ೧ | ಸಾವಿತ್ರೀ ವ್ರತ | ೯ |
| ರಾತ್ರಿ: ೨ | ಅಕ್ಕನ ಮದುವೆ | ೨೦ |
| ರಾತ್ರಿ: ೩ | ಮೂಕ ಹೂ | ೨೮ |
| ರಾತ್ರಿ: ೪ | ಪುಣ್ಯಪುರುಷ ಯಶವಂತ | ೩೪ |
| ರಾತ್ರಿ: ೫ | ಮಧುರಿ | ೩೭ |
| ರಾತ್ರಿ: ೬ | ಕನಿಕರದ ಕಣ್ಣೀರು | ೪೨ |
| ರಾತ್ರಿ: ೭ | ಪತ್ರಾವಳಿ | ೪೫ |
| ರಾತ್ರಿ: ೮ | ಕ್ಷಮೆಗಾಗಿ ಪ್ರಾರ್ಥನೆ | ೫೧ |
| ರಾತ್ರಿ: ೯ | ಕಪಿಲೆ ಆಕಳು | ೬೦ |
| ರಾತ್ರಿ: ೧೦ | ಪರ್ಣಕುಟಿ | ೬೪ |
| ರಾತ್ರಿ: ೧೧ | ಭೂತದಯೆ | ೭೦ |
| ರಾತ್ರಿ: ೧೨ | ಶ್ಯಾಮನ ಈಜಾಟ | ೭೬ |
| ರಾತ್ರಿ: ೧೩ | ಸ್ವಾಭಿಮಾನದ ರಕ್ಷಣೆ | ೮೨ |
| ರಾತ್ರಿ: ೧೪ | ಶ್ರೀಖಂಡದ ವಡೆಗಳು | ೮೮ |
| ರಾತ್ರಿ: ೧೫ | ರಘುಪತಿ ರಾಘವ ರಾಜಾರಾಮ | ೯೫ |
| ರಾತ್ರಿ: ೧೬ | ತೀರ್ಥಯಾತ್ರೆಗಾಗಿ ಪಲಾಯನ | ೧೦೦ |
| ರಾತ್ರಿ: ೧೭ | ಸ್ವಾವಲಂಬನದ ಶಿಕ್ಷಣ | ೧೧೦ |
| ರಾತ್ರಿ: ೧೮ | ಉಪ್ಪಿಲ್ಲದ ಪಲ್ಲೆ | ೧೧೮ |
| ರಾತ್ರಿ: ೧೯ | ಪುನರ್ಜನ್ಮ | ೧೨೪ |
| ರಾತ್ರಿ: ೨೦ | ಪ್ರೇಮದ ಹಸಿವು | ೧೩೦ |
| ರಾತ್ರಿ: ೨೧ | ದೂರ್ವೆಯ ಅಜ್ಜಿ | ೧೪೬ |
| ರಾತ್ರಿ: ೨೨ | ಸಂತೋಷದ ದೀಪಾವಳಿ | ೧೫೨ |
| ರಾತ್ರಿ: ೨೩ | ಅರ್ಧನಾರೀ ನಟೇಶ್ವರ | ೧೫೯ |

| ಪ್ರಕರಣ | | ಪುಟ |
|---|---|---|
| ರಾತ್ರಿ: ೨೪ | ಸೋಮವತೀ ಅಮಾವಾಸ್ಯೆ | ೧೬೪ |
| ರಾತ್ರಿ: ೨೫ | ಎಲ್ಲರೂ ದೇವರ ಮಕ್ಕಳು | ೧೭೦ |
| ರಾತ್ರಿ: ೨೬ | ಬಂಧುಪ್ರೇಮದ ಪಾಠ | ೧೭೭ |
| ರಾತ್ರಿ: ೨೭ | ತಂದೆಯವರ ಉದಾರ ಹೃದಯ | ೧೮೮ |
| ರಾತ್ರಿ: ೨೮ | ಸಾಂಬಸದಾಶಿವ ಮಳೆ ಸುರಿಸು | ೧೯೩ |
| ರಾತ್ರಿ: ೨೯ | ದೊಡ್ಡವನಾಗಲು ಕಳ್ಳತನ | ೧೯೭ |
| ರಾತ್ರಿ: ೩೦ | ವಯಸ್ಸಿನಿಂದ ದೊಡ್ಡವನಲ್ಲ; ಮನಸ್ಸಿನಿಂದ | ೨೦೪ |
| ರಾತ್ರಿ: ೩೧ | ಲಾಡಘರದ ತಾನುಸ್ತೀರ್ಥ | ೨೧೦ |
| ರಾತ್ರಿ: ೩೨ | ಸಾಲವೆಂದರೆ ಇಹಲೋಕದ ನರಕ | ೨೨೯ |
| ರಾತ್ರಿ: ೩೩ | ಬಡವರ ಬಯಕೆ | ೨೩೬ |
| ರಾತ್ರಿ: ೩೪ | ನಿರ್ಧನಿಕರ ತಿರಸ್ಕಾರ | ೨೪೭ |
| ರಾತ್ರಿ: ೩೫ | ತಾಯಿಯ ಚಿಂತಾಮಯ ಜೀವನ | ೨೫೩ |
| ರಾತ್ರಿ: ೩೬ | ಎಣ್ಣೆ ಇದ್ದರೆ ಉಪ್ಪು ಇಲ್ಲ | ೨೫೯ |
| ರಾತ್ರಿ: ೩೭ | ಮಾನಗೇಡಿತನ | ೨೬೫ |
| ರಾತ್ರಿ: ೩೮ | ತಾಯಿಯ ಅಂತಿಮ ಬೇನೆ | ೨೬೮ |
| ರಾತ್ರಿ: ೩೯ | ಎಲ್ಲರೂ ಪ್ರೀತಿಯಿಂದ ಬಾಳಿರಿ | ೨೮೦ |
| ರಾತ್ರಿ: ೪೦ | ಕೊನೆಯ ಸಂದೇಶ | ೨೮೪ |
| ರಾತ್ರಿ: ೪೧ | ಭಸ್ಮಮಯ ಮೂರ್ತಿ | ೨೮೯ |
| ರಾತ್ರಿ: ೪೨ | ತಾಯಿಯ ಸ್ಮೃತಿಶ್ರಾದ್ಧ | ೨೯೭–೩೦೦ |

# ಶ್ಯಾಮನ ತಾಯಿ

## ಪ್ರಾರಂಭ

ಮನುಷ್ಯನ ಹಿರಿಮೆ-ದೊಡ್ಡಸ್ತಿಕೆಗಳು ತಾಯಿತಂದೆಗಳನ್ನೇ ಹೆಚ್ಚಾಗಿ ಅವಲಂಬಿಸಿರುತ್ತವೆ. ಅವನ ಮುಂದಿನ ಜೀವನದ ಒಳಿತು-ಕೆಡಕುಗಳೂ ಅವರನ್ನೇ ಕೂಡಿರುತ್ತವೆ. ಅವನ ಆಗು-ಹೋಗುಗಳ ಅಡಿಗಲ್ಲನ್ನು ಕೂಡಿಸುವದು ಚಿಕ್ಕಂದಿನಲ್ಲಿಯೇ ತೊಟ್ಟಿಲಲ್ಲಿರುವಾಗಲೂ, ತಾಯಿಯ ಕಂಕುಳಲ್ಲಿ-ಮೈಮೇಲೆ ಆಡುತ್ತಿರುವಾಗಲೂ ಭಾವೀ ಜೀವನ ವಿಕಾಸದ ಬೀಜಾರೋಪಣವನ್ನು ಮಾಡಲಾಗುತ್ತದೆ. ಜಗತ್ತಿನಲ್ಲಿಯ ಕೆಲವು ವ್ಯಕ್ತಿಗಳ ಬಾಯಿಯಲ್ಲಿ ತಮ್ಮ ಹೆಸರು ಕೆಲವು ಕಾಲ ಕುಣಿದ ಮಾತ್ರಕ್ಕೆ ಅದಕ್ಕೆ ದೊಡ್ಡಸ್ತಿಕೆಯೆಂದು ನಾನು ತಿಳಿಯುವದಿಲ್ಲ. ಹಿಮಾಲಯದ ಕೊಳ್ಳ ಕಂದರಗಳಲ್ಲಿ ಆಕಾಶವನ್ನು ಮುದ್ದಿಡುವಂಥ ಪ್ರಚಂಡವಾದ ಮರಗಳು ಇದ್ದಿರಬಹುದು. ಆದರೆ ಅವುಗಳ ಹೆಸರು ಜಗತ್ತಿಗೆ ಗೊತ್ತಿರಲಿಕ್ಕಿಲ್ಲ. ಯಾರಿಗೂ ಗೊತ್ತಿಲ್ಲದಂಥ ರಮಣೀಯವಾದ ಸುಗಂಧ ಪುಷ್ಪವು ಅಡವಿಯ ಯಾವುದೊಂದು ಮೂಲೆಯಲ್ಲಿ ಅರಳಿರಬಹುದು. ಜಗತ್ತಿಗೆ ಗೊತ್ತಿಲ್ಲದಂತೆ ಸಮುದ್ರದ ಹೊಟ್ಟೆಯಲ್ಲಿ ಒಳ್ಳೇ ಪ್ರಭಾವಶಾಲಿಗಳಾದ ಗುಂಡುಗುಂಡಾದ ಮುತ್ತುಗಳು ಇರಬಹುದು. ಮಾನವ ಜಾತಿಗೆ ಇದುವರೆಗೆ ಗೋಚರವಾಗದಂಥ, ನಕ್ಷತ್ರಗಳಂತೆ ಹೊಳಪುಳ್ಳ ರತ್ನಗಳು ಪೃಥ್ವಿಯ ಹೊಟ್ಟೆಯಲ್ಲಿ ಅಡಗಿಕೊಂಡಿರಬಹುದು. ಅತ್ಯಂತ ತೀಕ್ಷ್ಣವಾದ ಸೂಕ್ಷ್ಮದರ್ಶಕ ಯಂತ್ರದಲ್ಲಿಯೂ ಇದುವರೆಗೆ ಕಾಣದಂಥ ಅನೇಕ ನಕ್ಷತ್ರಗಳು ಅನಂತ ಆಕಾಶದಲ್ಲಿ ಇರಬಹುದು. ಜಗತ್ತಿಗೆ ಗೊತ್ತಿದ್ದ ಮಾತ್ರಕ್ಕೆ ಅದು ದೊಡ್ಡದೆಂದು ನಾನು ಅನ್ನಲಾರೆ. ನಾನು ನಿರ್ದೋಷನಾಗುತ್ತಿದ್ದೇನೆ, ಕ್ರಮವಾಗಿ ಮೇಲೆ ಮೇಲೆ ಏರುತ್ತಿದ್ದೇನೆ, ಎಂಬ ಅರಿವಿದ್ದವನು ದೊಡ್ಡವನಾಗುತ್ತಲೇ ಇರುತ್ತಾನೆ. ಈ ರೀತಿ ದೊಡ್ಡವನಾಗುವ ಪ್ರವೃತ್ತಿಯನ್ನು ಉಂಟುಮಾಡುವವರು ತಾಯಿತಂದೆಗಳೇ. ಅದೋಂದು ಅವರಿಂದ ದೊರೆತ ವರವೇ

ಅನ್ನಬಹುದು. ತಾಯಿತಂದೆಗಳು ಅರಿತೋ ಅಥವಾ ಅರಿಯದೆಯೋ ಮಕ್ಕಳನ್ನು ಸಣ್ಣವರನ್ನಾಗಿಯೋ ದೊಡ್ಡವರನ್ನಾಗಿಯೋ ಮಾಡುತ್ತಿರುತ್ತಾರೆ.

ಮನುಷ್ಯನು ಹುಟ್ಟುವ ಮೊದಲೇ ಅವನ ಶಿಕ್ಷಣವು ಆರಂಭವಾಗುತ್ತದೆ. ತಾಯಿಯ ಹೊಟ್ಟೆಯಲ್ಲಿ ಗರ್ಭರೂಪದಿಂದ ಜೀವನು ಬರುವ ಮೊದಲೇ ಅವನ ಶಿಕ್ಷಣದ ಸಿದ್ಧತೆಯಾಗಿರುತ್ತದೆ. ಗರ್ಭಧಾರಣೆಯ ಮೊದಲು ತಾಯಿತಂದೆಗಳು ತಮ್ಮ ತಮ್ಮ ಜೀವನದಲ್ಲಿ ನಡೆಯಿಸಿದ ವಿಚಾರಗಳು, ಹೃದಯದಲ್ಲಿನ ವಿವಿಧ ಭಾವನೆಗಳು, ಮಾಡಿದಂಥ ಬಗೆಬಗೆಯ ಕರ್ಮಗಳು, ಇವೇ ಮೊದಲಾದವು ನವಶಿಶುವಿನ ಶಿಕ್ಷಣದ ಪುಸ್ತಕಗಳನ್ನು ರಚಿಸುತ್ತಿರುತ್ತವೆ. ಶಿಕ್ಷಣ ಕೊಡುವವರೆಂದರೆ ಕೇವಲ ತಂದೆತಾಯಿಗಳು ಮಾತ್ರವೇ ಅಲ್ಲ ಸುತ್ತುಮುತ್ತಲಿನ ಪ್ರಪಂಚವೂ, ಎಲ್ಲ ಸಜೀವ-ನಿರ್ಜೀವ ನಿಸರ್ಗವೂ ಶಿಕ್ಷಣ ಕೊಡುತ್ತವೆ. ಆದರೆ ಸುತ್ತುಮುತ್ತಲಿನ ಪ್ರಪಂಚದಲ್ಲಿ ಯಾವುದನ್ನು ಕಲಿಯಬೇಕು, ಹೇಗೆ ಕಲಿಯಬೇಕೆಂಬುದರ ಮಾರ್ಗದರ್ಶನ ಮಾಡುವವರು ತಾಯಿತಂದೆಗಳೇ. ಅದರಲ್ಲಿಯೂ ಹೆಚ್ಚಾಗಿ ಕಲಿಸಿಕೊಡುವವಳು ತಾಯಿಯೆ. ತಾಯಿಯ ಹೊಟ್ಟೆಯಲ್ಲಿ ಜೀವವು ವಾಸಮಾಡಿ, ತಾಯಿಯಲ್ಲಿ ಏಕರೂಪತೆಯನ್ನು ತಾಳಿ ಹೊರಗೆ ಬರುವದು. ಹೊರಗೆ ಬಂದಮೇಲೆ ಕೂಡ ಬಾಲ್ಯವನ್ನು ತಾಯಿಯ ಸಾನ್ನಿಧ್ಯದಲ್ಲಿಯೆ ಸದಾಕಾಲ ಕಳೆಯುವದು. ತಾಯಿಯ ಹತ್ತರ ನಗುವದು, ತಾಯಿಯ ಹತ್ತರ ಅಳುವದು, ಅವಳ ಬಳಿಯಲ್ಲಿಯೇ ಚಿನ್ನಾಟನಾಡುವದು, ಅವಳ ಹತ್ತರವೇ ಮಲಗುವದು-ಕೂಡುವದು-ಏಳುವದು, ಅವಳ ಬಳಿಯಲ್ಲಿಯೇ ತಿಂದುಂಡು ತಿರುಗುವದು. ಆದುದರಿಂದ ನಿಜವಾದ ಶಿಕ್ಷಣದಾತ್ರಳು ತಾಯಿಯೇ ಅನ್ನಬಹುದು.

ತಾಯಿಯು ಶರೀರವನ್ನೂ ಕೊಡುತ್ತಾಳೆ, ಮನಸ್ಸನ್ನೂ ಕೊಡುತ್ತಾಳೆ. ಜನ್ಮವನ್ನು ಕೊಡುವವಳೂ ಅವಳೇ. ಜ್ಞಾನವನ್ನು ಕೊಡುವವಳೂ ಅವಳೇ. ಬಾಲ್ಯದಲ್ಲಿ ಮಗುವಿನ ಮೇಲಾಗುವ ಪರಿಣಾಮವು ಸ್ಥಿರವಾಗಿ ಇರುತ್ತದೆ. ಮಗುವಿನ ಮನಸ್ಸು ತೆರೆದ ಮನಸ್ಸು. ಹಸಿದು ಕಂಗಾಲಾದವನೂ, ಭಿಕ್ಷುಕನೂ ಒಳಿತು ಕೆಡಕುಗಳನ್ನು ಲೆಕ್ಕಿಸದೆ ಕೈಗೆ ಸಿಕ್ಕದ್ದನ್ನು ಹೊಟ್ಟೆಗೆ ತುರುಕಿಕೊಳ್ಳುವಂತೆ ಮಗುವಿನ ಬರಿದಾದ ಮನಸ್ಸು ಸುತ್ತುಮುತ್ತಲಿನ ವಸ್ತುಗಳನ್ನು ಯಾವ ವಿಚಾರವನ್ನೂ ಮಾಡದೆ ಸಂಗ್ರಹಿಸತೊಡಗುತ್ತದೆ. ಮೂರು ನಾಲ್ಕು

ತಿಂಗಳ ಮಗುವನ್ನು ಅಂಗಳದಲ್ಲಿ ಬಿಟ್ಟರೆ ಸುತ್ತಲೂ ಇರುವ ಹಸಿರು ಗಿಡಗಂಟೆಗಳಿಂದ ಕೂಡ ಅದರ ಮನಸ್ಸಿನಮೇಲೆ ಮತ್ತು ಅದರ ಶರೀರದಮೇಲೆ ತುಂಬ ಪರಿಣಾಮವಾಗಿ ಅದರ ಮನಸ್ಸಿಗೂ ಹಸಿರು ಬಣ್ಣವೇರುವದೆಂದು ಹೆಣ್ಣು ಮಕ್ಕಳು ಹೇಳುವದುಂಟು. ಚಿಕ್ಕಂದಿನಲ್ಲಿ ಮಗುವಿನ ಮನಸ್ಸು ಸಂಸ್ಕಾರಕ್ಕೆ ತಕ್ಕದ್ದಾಗಿರುತ್ತದೆಂಬುದೇ ಇದರ ತಾತ್ಪರ್ಯವೆಂದು ಹೇಳಬಹುದು. ಮಿದುವಾದ ಮಣ್ಣಿನಂತೆ, ಮೇಣದಂತೆ ಅದರ ಮನಸ್ಸು ಇರುತ್ತದೆ. ಕಡೆದಂತೆ ಅದರ ಆಕಾರವಾಗಬಹುದು.

ತಾಯಿಯು ಕರಿದ ಪದಾರ್ಥ ತಿಂದರೆ ಮಗುವಿಗೆ ಕೆಮ್ಮು ಬರುವದು. ಕಬ್ಬಿನ ರಸವನ್ನೋ, ಮಾವಿನಹಣ್ಣಿನ ಸೀಕರಣೆಯನ್ನೋ ಹೆಚ್ಚಾಗಿ ಸೇವಿಸಿದರೆ ಮಗುವಿಗೆ ಥಂಡಿಯಾಗುವದು. ಅದೇ ರೀತಿಯಾಗಿ ಮಗುವಿನ ಎದುರಿನಲ್ಲಿ ತಾಯಿಯು ಸಿಟ್ಟುಸೆಡವಿನಿಂದ ಗಂಬಾಟ ಮಾಡಿದರೆ, ಜಗಳಾಟ ಮಾಡಿದರೆ – ಮಗುವಿನ ಮನಸ್ಸಿನ ಮೇಲೆ ಅದರ ಪರಿಣಾಮವಾಗುವದೆಂಬುದನ್ನು ತಾಯಂದಿರು ಮರೆತುಬಿಡುತ್ತಾರೆ. ತಾಯಿಯ ನಡೆ-ನುಡಿ, ನಲಿವು-ಒಲವು ಮೊದಲಾದ ಕ್ರಿಯೆಗಳು ಮಗುವಿನ ಮನಸ್ಸು, ಬುದ್ಧಿ ಮತ್ತು ಹೃದಯಗಳಿಗೆ ಎರೆಯುವ ಹಾಲಿನಂತಿರುತ್ತವೆ. ಮಗುವಿಗೆ ಹಾಲು ಕುಡಿಸುವಾಗ ತಾಯಿಯ ಕಣ್ಣುಗಳು ಕ್ರೋಧ-ಮತ್ಸರಗಳಿಂದ ಕೆಂಪಾಗಿದ್ದರೆ ಮಗುವೂ ಸಿಡುಕಿನದಾಗುವದು.

ಈ ಬಗೆಯಾಗಿ ಮಕ್ಕಳ ಶಿಕ್ಷಣವು ತಾಯಿ, ತಂದೆ, ಆಪ್ತೇಷ್ಟರು ಮತ್ತು ಸುತ್ತುಮುತ್ತಲಿನ ಸಜೀವ ನಿರ್ಜೀವ ಪ್ರಪಂಚವನ್ನೇ ಅವಲಂಬಿಸಿರುತ್ತದೆ. ಮಕ್ಕಳ ಹತ್ತರ ಎಚ್ಚರಿಕೆಯಿಂದ ನಡೆಯಬೇಕು. ತಿಳಿಯಾದ ವಾತಾವರಣವನ್ನು ಇಡಬೇಕು. ಸೂರ್ಯ ಚಂದ್ರರಿಗೆ ಗೊತ್ತಿರಲಿ, ಇಲ್ಲದಿರಲಿ - ಅವರ ಕಿರಣಗಳಿಂದ ಕಮಲಗಳು ಅರಳುವವೆಂಬುದು ಸುಳ್ಳಲ್ಲ. ಅದೇ ರೀತಿ ತಾಯಿ ತಂದೆಗಳಿಗೆ ಮತ್ತೂ ಸುತ್ತಲಿನ ಜನಕ್ಕೆ ಗೊತ್ತಿರಲಿ, ಇಲ್ಲದಿರಲಿ - ಅವರ ಕೃತ್ಯಗಳಿಂದ ಮಕ್ಕಳ ಜೀವನ ಕುಸುಮಗಳು ಅರಳುತ್ತಿರುತ್ತವೆ. ಸೂರ್ಯ-ಚಂದ್ರರಂತೆಯೇ ತಂದೆತಾಯಿಗಳ ನಡತೆಯು ಪರಿಶುದ್ಧ ಹಾಗು ಉಜ್ವಲವಾಗಿದ್ದಲ್ಲಿ ಮಕ್ಕಳ ಮನಸ್ಸು ಕಮಲದಂತೆಯೇ ರಸಪೂರ್ಣ, ಸುಗಂಧಮಯ, ರಮ್ಯ ಹಾಗು ಪವಿತ್ರವಾಗಿ ವಿಕಾಸಗೊಳ್ಳುತ್ತದೆ. ಇಲ್ಲದೆ ಹೋದರೆ ಅದು ಹುಳುಕು,

ಕೊಳಕು, ತೇಜಹೀನ, ರೋಗಿಷ್ಟ ಮತ್ತು ಅಪವಿತ್ರವಾಗಬಹುದು.

ಮಕ್ಕಳ ಜೀವನವನ್ನು ಕೆಡಿಸುವದೂ, ತಿಳಿಯಾದ ಕೊಳದ ನೀರನ್ನು ಕದಡಿ ರಾಡಿ ಮಾಡುವದೂ, ಇದರಂಥ ಘೋರ ಪಾಪ ಬೇರೊಂದಿಲ್ಲ. ಮಕ್ಕಳ ಬಳಿಯಲ್ಲಿರುವವರು ಯಾವಾಗಲೂ ಇದನ್ನು ನೆನಪಿನಲ್ಲಿಡಬೇಕು. ವಸಿಷ್ಠ ಋಷಿಗಳು ವೇದದಲ್ಲಿ ವರುಣದೇವನಿಗೆ ಅಂದಿದ್ದಾರೆ, "ಹೇ, ವರುಣದೇವರೇ, ನನ್ನ ಕೈಯಿಂದ ಏನಾದರೂ ಕೆಟ್ಟ ಕೆಲಸಗಳಾಗಿದ್ದರೆ ಅದರ ಬಗ್ಗೆ ನನ್ನ ಹಿರಿಯರೇ ಹೊಣೆಗಾರರು. ಅವರನ್ನೇ ಆಬಗ್ಗೆ ವಿಚಾರಿಸಿಕೊಳ್ಳಿರಿ."

'ಅಸ್ತಿ ಜ್ಯಾಯಾನ್ ಕನೀಯಸ ಉಪಾರೆ'

ಕನಿಷ್ಠನ ಬಳಿಯಲ್ಲಿ ಜೇಷ್ಠನು ಇರುತ್ತಾನೆ. ಈ ಜೇಷ್ಠನು ತನ್ನ ಹೊಣೆಗಾರಿಕೆಯನ್ನರಿತುಕೊಂಡು ನಡೆಯಬೇಕು. ತಾಯಿತಂದೆ, ಗುರುಗಳು, ನೆರೆಯವರು ಎಲ್ಲರೂ ಚಿಕ್ಕ ಮಕ್ಕಳ ವಿಕಾಸದತ್ತ ಹೆಚ್ಚು ಗಮನ ಕೊಟ್ಟು ಅವರೊಡನೆ ನಡೆದುಕೊಳ್ಳಬೇಕು.

ಶ್ಯಾಮನ ಭಾಗ್ಯದಿಂದ ಅವನಿಗೆ ಒಳ್ಳೆಯ ತಾಯಿ ದೊರಕಿದ್ದಳು. ಪ್ರತಿನಿತ್ಯ ಅವನು ತನ್ನ ಮನಸ್ಸಿನಲ್ಲಿಯೇ ತಾಯಿಗೆ ಧನ್ಯವಾದಗಳನ್ನು ಅರ್ಪಿಸುತ್ತಿದ್ದನು. ಕೆಲವು ಸಲ ಕಣ್ಣೀರಿನ ನಾಲ್ಕು ಹನಿಗಳಿಂದ ತರ್ಪಣವನ್ನೂ ಕೊಡುತ್ತಿದ್ದನು. ಆಶ್ರಮದಲ್ಲಿ ಗೆಳೆಯರು ಅವನ ಜೀವನ ಚರಿತ್ರೆಯನ್ನು ಕುರಿತು ಕೇಳುತ್ತಿದ್ದರು. ಆದರೆ ಶ್ಯಾಮನು ಮಾತ್ರ ತನ್ನ ಚರಿತ್ರೆಯನ್ನು ಹೇಳುತ್ತಿರಲಿಲ್ಲ. ಮಿಕ್ಕ ಗೆಳೆಯರು ತಮ್ಮ ತಮ್ಮ ಜೀವನದ ಕಹಿ-ಸಿಹಿ ಅನುಭವಗಳನ್ನು ಹೇಳುತ್ತಿದ್ದರು. ಅವನ್ನು ಕೇಳುವಾಗ ಕೆಲವುಸಲ ಒಮ್ಮಿಂದೊಮ್ಮೆಲೆ ಶ್ಯಾಮನ ಕಣ್ಣುಗಳು ತುಂಬಿಬರುತ್ತಿದ್ದವು. ಆಗ ಅಂಥವೇ ಕೆಲವು ತನ್ನ ಜೀವನದೊಳಗಿನ ಅನುಭವಗಳು ಅವನ ನೆನಪಿಗೆ ಬರುತ್ತಿದ್ದವು. "ಶ್ಯಾಮ, ನೀನು ಎಲ್ಲರೂ ಹೇಳುವುದನ್ನು ಕೇಳುತ್ತೀ. ನೀನು ಮಾತ್ರ ಸ್ವಂತದ ಒಂದು ಅನುಭವವನ್ನೂ ಹೇಳುವುದಿಲ್ಲವಲ್ಲ?" ಎಂದು ಗೆಳೆಯರು ಆಗಾಗ್ಗೆ ಪೀಡಿಸುತ್ತಿದ್ದರು.

ಇದೇ ಬಗೆಯಾಗಿ ಗೆಳೆಯರು ಒಂದು ದಿವಸ ಆಗ್ರಹಪಡಿಸುತ್ತಿದ್ದಾಗ ಶ್ಯಾಮನು ತುಂಬಿದಹೃದಯದಿಂದ ನುಡಿದನು, "ನನ್ನ ಹಿಂದಿನ ಜೀವನವನ್ನು ಜ್ಞಾಪಿಸಿಕೊಳ್ಳುವದಕ್ಕೆ ದುಃಖವಾಗುತ್ತದೆ. ಯಾಕಂದರೆ ಗತಾಯುಷ್ಯದ ಒಳ್ಳೇ ಕೆಲಸಗಳ ಜೊತೆಗೆ ಪಾಪವೂ ನೆನಪಿಗೆ ಬರುತ್ತದೆ. ನಾನು ನನ್ನ

ಒಂದೊಂದು ದುರ್ಗುಣಗಳನ್ನೂ ಆಳವಾದ ತಗ್ಗನ್ನು ತೋಡಿ ಅದರಲ್ಲಿ ಹುಗಿದು ಬಿಡುತ್ತಿದ್ದೇನೆ. ಈ ಪಿಶಾಚಿಗಳು ಪುನಃ ಮೇಲಕ್ಕೆ ಬಂದು ನನ್ನನ್ನು ಬಾಧಿಸ ಬಾರದೆಂದು ನನ್ನ ಅಪೇಕ್ಷೆ. ಜೀವನವು ನಿರ್ದೋಷ ಮತ್ತು ನಿರ್ಮಲವಾಗ ಬೇಕೆಂದು ನನ್ನ ಹಂಬಲ. ಅದುವೇ ನನ್ನ ಧ್ಯೇಯ. ಆದುದರಿಂದ ಹಿಂದಿನ ನೆನಪನ್ನೇಕೆ ತಂದುಕೊಳ್ಳಲು ಹಚ್ಚುತ್ತೀರಿ ? ”

‘ ಎಂದಾಗುವದೋ ಜೀವನವೆನ್ನದು ತಾರೆಗಳಂದದಿ ನಿರ್ಮಲವು ।

ಒಂದೇ ಚಿಂತೆಯು ಅಂತರಾತ್ಮನನು ಎಡೆಬಿಡದಲೆ ತಾ ಕೊರೆಯುವದು॥’

“ ಹಾಗಾದರೆ ನಮಗೆ ನಿಮ್ಮ ಜೀವನದ ಒಳ್ಳೆ ಸಂಗತಿಗಳನ್ನೇ ತಿಳಿಸಿರಿ. ಸತ್ಕಥೆಗಳ ಸ್ಮರಣೆಯಿಂದ ಮನುಷ್ಯನು ಒಳ್ಳೆಯವನಾಗುತ್ತಾನೆಂದು ನೀವು ಯಾವಾಗಲೂ ಹೇಳುತ್ತೀರಿ. ” ಎಂದು ಚಿಕ್ಕಗೋವಿಂದ ನುಡಿದನು.

“ ತಾವು ಒಳ್ಳೆಯ ಮಾತುಗಳನ್ನಷ್ಟೇ ಹೇಳಿದರೆ ನಿರ್ದೋಷರಾಗಿದ್ದೇ ವೆಂಬ ಅಹಂಕಾರವು ತಮಗೆ ಬರಬಹುದಲ್ಲವೇ ? ” ಭಿಕ್ಕನು ಹೇಳಿದ.

ಶ್ಯಾಮನು ಗಂಭೀರನಾಗಿ ನುಡಿದ, “ ಮನುಷ್ಯನಿಗೆ ತನ್ನ ಅಧಃಪತನದ ಬಗ್ಗೆ ಹೇಳಲು ನಾಚಿಕೆಯಾಗುವಂತೆಯೇ, ತನ್ನ ಹಿರಿಮೆಯ ಬಗ್ಗೆ ಹೇಳಿ ಕೊಳ್ಳಲು ನಾಚಿಕೆ ಬರುತ್ತದೆ. ಸ್ವಪ್ರತಿಷ್ಠೆಯ ಮತ್ತು ಆತ್ಮಸ್ತುತಿಯಬಗ್ಗೆ ಒಂದು ಶಬ್ದವೂ ನನ್ನ ಬಾಯಿಯಿಂದ ಹೊರಬೀಳದಿರಲೆಂದು ದೇವರನ್ನು ಬೇಡಿಕೊಳ್ಳು ತ್ತೇನೆ. ”

ನಾರಾಯಣನು ನಸುನಕ್ಕು ನುಡಿದ, “ ನಾನು ನಿರಹಂಕಾರಿಯೆಂದು ಹೇಳಿಕೊಳ್ಳುವಾಗ ಕೂಡ ಅಹಂಕಾರ ಭಾವ ಬರುವ ಸಂಭವವಿರುತ್ತದೆ. ನಾನು ಆತ್ಮಸ್ತುತಿಯನ್ನು ಮಾಡಿಕೊಳ್ಳುವದಿಲ್ಲವೆಂದು ಹೇಳುವ ಕಾಲಕ್ಕೇ ಆತ್ಮಸ್ತುತಿ ಬಂದುಬಿಡಬಹುದು ! ”

ಶ್ಯಾಮನೆಂದನು, “ ಈ ಪ್ರಪಂಚದಲ್ಲಿ ಎಚ್ಚರಿಕೆ ವಹಿಸಿದಷ್ಟು ಕಡಿ ಮೆಯೇ. ಹೆಜ್ಜೆಹೆಜ್ಜೆಗೂ ಮೋಹನಾಸ್ತ್ರಗಳಿವೆ. ಜಾರಿ ಬೀಳಲು ಕೊಳ್ಳ ಗಳಿವೆ. ಸಾಧ್ಯವಿದ್ದಷ್ಟು ಜಾಗರೂಕರಾಗಿರಬೇಕು. ಪ್ರಯತ್ನ ಮಾಡಬೇಕು. ಪ್ರಾಮಾಣಿಕತನದಿಂದ ಹೋರಾಡಬೇಕು. ಆತ್ಮವಂಚನೆ ಮಾಡಿಕೊಳ್ಳ ಬಾರದು. ಅಹಂಕಾರದ ರೂಪವು ಬಹಳ ಸೂಕ್ಷ್ಮವಾಗಿರುತ್ತದೆ. ಯಾವಾಗಲೂ ಮೈತುಂಬ ಕಣ್ಣುಳ್ಳವರಾಗಿರಬೇಕು. ”

ಶ್ಯಾಮನ ಪ್ರೀತಿಯ ಗೆಳೆಯ ರಾಮನೆಂದನು, “ ನಾವೇನು ಪರಕೀಯ ರಾಗಿದ್ದೇವೆಯೆ ? ನೀನು ಮತ್ತು ನಾವು ಇನ್ನೂ ಏಕರೂಪವಾಗಿಲ್ಲವೇ ? ನಮ್ಮ ಆಶ್ರಮದಲ್ಲಿ ಈಗ ನಾನು ನೀನೆಂಬ ಮಾತು ಇಲ್ಲ. ನಾವೆಲ್ಲರೂ ಒಂದೇ. ಇದ್ದುದೆಲ್ಲ ಎಲ್ಲರ ಸೊತ್ತಾಗಿದೆ. ಹೀಗಿರಲು ನೀನು ನಿನ್ನ ಅನುಭವ ಸಂಪತ್ತ ನ್ನೇಕೆ ಬಚ್ಚಿಡುತ್ತೀ ? ನಿನ್ನೊಡನೆ ನಾವು ವಾದ ಹಾಕಬೇಕೆನ್ನುವದಿಲ್ಲ. ನಮಗೆ ಹೇಳುವದರಲ್ಲಿ ಪ್ರತಿಷ್ಠೆಯ ಮಾತೆಲ್ಲಿ ಬರುವದು ? ಗರ್ವದ ಮಾತೆಲ್ಲಿ ಬರುವದು ? ನಿನ್ನ ಜೀವನದಲ್ಲಿ ಈ ಮಾಧುರ್ಯ, ಈ ಸರಲತೆ, ಈ ಕೋಮ ಲತೆ, ಈ ಪ್ರೇಮ, ಈ ಮಧುರ ಹಾಸ್ಯ, ಈ ಸೇವಾವೃತ್ತಿ, ಈ ನಿರಹಂಕಾರತೆ, ಯಾವದೇ ಕೆಲಸವನ್ನು ಮಾಡಲು ಹಿಂಜರಿಯದ ವೃತ್ತಿ, ಇವೆಲ್ಲ ಎಲ್ಲಿಂದ ಬಂತು ಹೇಳು ! ಕಾಹಿಲೆ ಬಿದ್ದವರ ಆರೈಕೆ ನಾವೂ ಮಾಡುತ್ತೇವೆ. ನೀನೂ ಮಾಡುತ್ತೀ. ಆದರೆ ನೀನು ಅವರ ತಾಯಿಯಂತೆ ಆಗುತ್ತೀ. ನಮಗೇಕೆ ಹೀಗೆ ಆಗಲು ಬರುವದಿಲ್ಲ ? ನೀನು ನಿನ್ನ ಮಧುರ ಹಾಸ್ಯದಿಂದ ಪರಕೀಯ ರನ್ನು ಸ್ವಕೀಯರನ್ನಾಗಿ ಮಾಡುತ್ತೀ. ಆದರೆ ನಾಲ್ಕು ತಾಸುಗಳ ವರೆಗೆ ಬೇರೆ ಯವರೊಡನೆ ನಾವು ಮಾತು-ಕತೆ ನಡೆಯಿಸಿದರೂ ನಮ್ಮವರನ್ನಾಗಿ ಮಾಡಿ ಕೊಳ್ಳಲು ನಮಗೇಕೆ ಬರುವದಿಲ್ಲ ಹೇಳು. ಈ ಮಂತ್ರವನ್ನು ನೀನೆಲ್ಲಿ ಕಲಿತು ಕೊಂಡೆ ? ನಿನ್ನ ಜೀವನದಲ್ಲಿ ಈ ಸುಗಂಧವನ್ನು ಯಾರು ಬೆರೆಯಿಸಿದರು ? ಈ ಕಸ್ತೂರಿಯನ್ನು ಯಾರು ಬೀರಿದರು ? ಶ್ಯಾಮಾ, ವರ್ಹಾಡದಲ್ಲಿಯ ಒಂದು ದಂತಕಥೆಯು ಗೊತ್ತಿದೆಯೇ ? ಅಲ್ಲಿಯ ಶ್ರೀಮಂತನೊಬ್ಬನು ಒಂದು ದೊಡ್ಡ ಮನೆ ಕಟ್ಟಿಸಹತ್ತಿದ್ದನು. ಆಗ ನೇಪಾಳದ ಕಸ್ತೂರಿ ವ್ಯಾಪಾರಿಯೊಬ್ಬನು ಕಸ್ತೂರಿಯನ್ನು ಮಾರುತ್ತ ಆ ಕಡೆಯಿಂದ ಹೊರಟಿದ್ದನು. ಆ ಶ್ರೀಮಂತನು ಆವನನ್ನು ಕರೆದು ಕಸ್ತೂರಿಯ ದರವನ್ನು ಕೇಳಿದನು. ಆ ಕಸ್ತೂರಿ ವ್ಯಾಪಾ ರಿಯು ತಿರಸ್ಕಾರದಿಂದ ನುಡಿದನು: “ ದಕ್ಷಿಣದಲ್ಲಿನ ಬಡವರಾದ ನೀವೇನು ಕಸ್ತೂರಿ ತೆಗೆದುಕೊಳ್ಳುವಿರಿ ? ಪುಣೆಗೆ ಹೋಗಿ ಏನೋ ವ್ಯಾಪಾರ ಮಾಡಬೇ ಕೆಂದಿದ್ದೇನೆ. ” ಆ ಶ್ರೀಮಂತನಿಗೆ ಸಿಟ್ಟು ಬಂದಿತು. “ ನಿನ್ನ ಕಸ್ತೂರಿ ಎಷ್ಟಿದೆ ತೂಕ ಮಾಡು. ಆ ಗಚ್ಚಿನಲ್ಲಿ ಅದನ್ನು ಚೆಲ್ಲಿ ಬಿಡುತ್ತೇನೆ. ದಕ್ಷಿಣದ ಕಡೆಯ ಜನರು ಕಸ್ತೂರಿಯ ಗೋಡೆಗಳನ್ನು ಕಟ್ಟುತ್ತಾರೆಂದು ನಿಮ್ಮ ಉತ್ತರದ ಜನ ಗಳಿಗೆ ಹೇಳು. ” ಎಂದು ಹೆಮ್ಮೆಯಿಂದ ನುಡಿದನು. ಆ ವ್ಯಾಪಾರಿಯಿಂದ ಎಲ್ಲ

ಕಸ್ತೂರಿಯನ್ನು ಕೊಂಡುಕೊಂಡು ಗಚ್ಚಿನಲ್ಲಿ ಬೆರಿಸಿಬಿಟ್ಟನು. ವರ್ಷಾಡವಲ್ಲಿಯ ಆ ಮನೆಯ ಗೋಡೆಗಳಿಗೆ ಇನ್ನೂ ಕಸ್ತೂರಿಯ ವಾಸನೆ ಬರುತ್ತದೆ ಎಂದು ಹೇಳುತ್ತಾರೆ. ಶ್ಯಾಮಾ, ನಿನ್ನ ಜೀವನದ ಗೋಡೆಗಳನ್ನು ಕಟ್ಟುತ್ತಿರುವಾಗ ಕಸ್ತೂರಿಯನ್ನು ಯಾರು ಸುರುವಿದರು? ನಮ್ಮ ಜೀವನಕ್ಕಂತೂ ವಾಸನೆ, ರೂಪ, ಗಂಧ ಯಾವುದೂ ಇಲ್ಲ. ನಿನ್ನ ಜೀವನಕ್ಕೆ ಈ ಸುಗಂಧ ಎಲ್ಲಿಂದ ಬಂದಿತು ? ಈ ಬಣ್ಣವನ್ನು ಯಾರು ಕೊಟ್ಟರು ? ”

ಶ್ಯಾಮನಿಗೀಗ ತಡೆಯದಾಯಿತು. ಕಂಠವು ಬಿಗಿದು ಬಂದು ಗಂಭೀರ ನಾಗಿ ನುಡಿದನು: “ ಗೆಳೆಯರೇ ! ಇದು ನನ್ನ ತಾಯಿಯ ಕೊಡುಗೆ. ನನ್ನಲ್ಲಿ ಒಳ್ಳೆಯದೇನಾದರೂ ಇದ್ದಲ್ಲಿ ಅದು ನನ್ನ ತಾಯಿಯದು. ತಾಯಿಯೇ ನನ್ನ ಗುರು, ತಾಯಿಯೇ ನನ್ನ ಕಲ್ಪವೃಕ್ಷ. ಪ್ರೀತಿಯಿಂದ ಮಾತನಾಡುವದಕ್ಕೂ ಅವಳೇ ನನಗೆ ಕಲಿಸಿದಳು. ಬರಿ ಮನುಷ್ಯಮಾತ್ರರ ಮೇಲಷ್ಟೇ ಅಲ್ಲ; ದನ ಕರು, ಗಿಡ, ಹೂವು, ಹಕ್ಕಿ-ಪಕ್ಕಿ ಎಲ್ಲದರ ಮೇಲೂ ಪ್ರೀತಿ ಮಾಡಲು ಅವಳೇ ಕಲಿಸಿದಳು. ಎಂಥ ಎಡರು ತೊಡರುಗಳಿದ್ದರೂ ಪಿಟ್ಟೆಂದು ನುಡಿಯದೆ ಸಾಧ್ಯ ವಿದ್ದ ಮಟ್ಟಿಗೂ ತನ್ನ ಕೆಲಸವನ್ನು ಉತ್ತಮವಾಗಿ ಮಾಡಬೇಕೆಂದು ಕಲಿಸಿ ದವಳು ಅವಳೇ. ತೌಡಿನ ಮುಂಡಿಗೆಯನ್ನು ಮಾಡಿಕೊಂಡು ಹೇಗೆ ತಿನ್ನ ಬೇಕು ? ಮತ್ತು ಬಡತನದಲ್ಲಿಯೂ ತನ್ನ ಗೌರವವನ್ನು ಕಾಪಾಡಿಕೊಂಡು ಹೇಗೆ ಬದುಕಬೇಕು ಎಂಬುದನ್ನು ಅವಳೇ ಕಲಿಸಿದಳು. ತಾಯಿಯು ಕಲಿಸಿ ದುದರಲ್ಲಿ ಒಂದು ತಿಲಾಂಶವನ್ನು ಕೂಡ ನನ್ನ ಜೀವನದಲ್ಲಿ ಪ್ರಕಟಿಸಲು ಸಾಧ್ಯ ವಾಗಿಲ್ಲ. ಇನ್ನೂ ಅದು ಮನೋಭೂಮಿಯಲ್ಲಿಯೇ ನೆನೆಯುತ್ತಲಿದೆ. ಭರ ದಿಂದ ಮೊಳಕೆಯೊಡೆದು ಯಾವಾಗ ಹೊರಬೀಳುವದೋ ದೇವರೇ ಬಲ್ಲ. ನನ್ನ ಜೀವನದಲ್ಲಿ ಸುಗಂಧವನ್ನು ಬೀರಿದವಳು ನನ್ನ ತಾಯಿ ! ನಾನು ಮನಸ್ಸಿ ನಲ್ಲಿಯೇ ಬೇಡಿಕೊಳ್ಳುತ್ತೇನೆ.

“ ನನ್ನಂತರಂಗದಲಿ ಮನೆಮಾಡು ತಾಯಿ !
ನನ್ನಿಯಲಿ ಜೀವನಕೆ ಸೌಗಂಧವೀಯೆ ॥

ಅವಳೇ ಸುಗಂಧವನ್ನು ಕೊಡುವವಳು, ಬಣ್ಣವನ್ನು ಕೊಡುವವಳು. ಎಲ್ಲವೂ ಆ ಮಹಾಮಹಿಮಳದೇ ಪುಣ್ಯ ! ಎಲ್ಲವೂ ನನ್ನ ತಾಯಿ ! ತಾಯಿ !! ತಾಯಿ !!!

ಹೀಗೆ ಹೇಳುತ್ತಿರುವಾಗ ಶ್ಯಾಮನ ಹೃದಯ ತುಂಬಿಬಂದಿತು. ಅವನ ಕಣ್ಣುಗಳಲ್ಲಿ ಬಳಬಳನೆ ನೀರು ಉದುರಿತು. ಭಾವನೆಯ ಭರದಲ್ಲಿ ತುಟಿ, ಕೈ ಮತ್ತು ಕೈಬೆರಳುಗಳು ನಡುಗಿದವು. ತುಸು ಹೊತ್ತು ಎಲ್ಲರೂ ಮೌನವಾಗಿದ್ದರು. ಸುತ್ತಲೂ ಶಾಂತತೆಯು ಪಸರಿಸಿತ್ತು. ಕೆಲವು ವೇಳೆಯ ನಂತರ ಮನಸ್ಸು ಹಗುರಾಗಲು ಶ್ಯಾಮನು ಹೇಳಿದನು, " ಗೆಳೆಯರೆ, ನನ್ನದೆಂಬುದನ್ನು ಏನೂ ಹೇಳುವ ಹಾಗಿಲ್ಲ. ಆದರೂ ನಮ್ಮ ತಾಯಿಯ ವಿಚಾರವಾಗಿ ನಿಮಗೆ ಹೇಳುವೆನು; ತಾಯಿಯ ಗುಣಗಾನ ಮಾಡಿ ಈ ತುಟಿಗಳನ್ನು ಪರಿಶುದ್ಧಗೊಳಿಸುವೆನು. ತಾಯಿಯ ಬಗ್ಗೆ ನೆನಪಾದ ಕಥೆಗಳನ್ನು ಹೇಳುವೆನು. ನೆನಪು ಮಾಡಿಕೊಂಡು ಪ್ರತಿದಿನ ರಾತ್ರಿ ಒಂದೊಂದು ಸಂಗತಿಯ ಬಗ್ಗೆ ಹೇಳುತ್ತಾ ಬರುತ್ತೇನೆ, ಆಗದೆ ? "

" ಹೋ, ಆದೀತು. " ಎಲ್ಲರೂ ನುಡಿದರು.

ರಾಮನೆಂದನು, " ದೇವರಿಗೆ ಒಂದು ಕಣ್ಣು ಕೇಳಿದರೆ, ಎರಡು ಕಣ್ಣು ಕೊಟ್ಟನು. "

ಗೋವಿಂದನೆಂದನು, " ಪ್ರತಿನಿತ್ಯವೂ ಸುಧಾರಸವನ್ನು ಕುಡಿಯಲಿಕ್ಕೆ ದೊರೆಯುವದು. ಪಾವನವಾದ ಗಂಗೆಯಲ್ಲಿ ಮುಳುಗುಹಾಕಲು ದೊರೆಯುವದು ! "

ರಾತ್ರಿ : ೧

## : : ಸಾವಿತ್ರೀ ವ್ರತ

ಆಶ್ರಮದಲ್ಲಿಯ ಪ್ರಾರ್ಥನೆ ಮುಗಿಯಿತು. ಜೊತೆಗಾರರೆಲ್ಲ ಸುತ್ತಲೂ ಮಂಡಲಾಕಾರವಾಗಿ ಕುಳಿತುಕೊಂಡಿದ್ದರು. ಶ್ಯಾಮನ ಮುಖ ಚಂದ್ರನತ್ತ ಎಲ್ಲರೂ ದಿಟ್ಟಿಸತೊಡಗಿದರು. ಆ ಗೆಳೆಯರ ಕೂಟವೆಂದರೆ ಒಂದು ಆದರ್ಶ ಸಮೂಹವಾಗಿತ್ತು. ಮಳಲಿನಲ್ಲಿಯ ಝರಿಯು ಬಹಳ ಸುಂದರ ಮತ್ತು ಪವಿತ್ರವಾಗಿರುತ್ತದೆ. ಪ್ರೇಮರಹಿತವಾದ ಈ ಕಾಲದಲ್ಲಿ-" ನಮಗೇಕೆ ಇಲ್ಲದ ಗೊಡವೆ " ಎಂಬುವ ಕಾಲದಲ್ಲಿ ಈ ಗೆಳೆಯರ ಕೂಟವು ಒಂದು ಆಶಾ ಕಿರಣವೇ ಆಗಿದ್ದಿತು. ಆ ಗೆಳೆಯರ ಬಳಗದಲ್ಲಿರುವ ಕಕ್ಕುಲತೆಯನ್ನು ಜೇರೆಡೆ ಗಳಲ್ಲಿ ಕ್ವಚಿತ್ತಾಗಿ ಕಾಣಬಹುದು. ಆ ಆಶ್ರಮವೆಂದರೆ ಆ ಊರಿನ ಜೀವನ-ಸಾಮೂಹಿಕ ಜೀವನವನ್ನು ಸ್ವಚ್ಛವಾಗಿ ಇಡುವ ಸಜೀವ ಮತ್ತು ಪವಿತ್ರವಾದ ಝರಿಯೇ ಆಗಿದೆ.

ಊರಲ್ಲೆಲ್ಲ ಶಾಂತತೆ ಇತ್ತು. ಆಕಾಶವು ಸ್ತಬ್ಧವಾಗಿತ್ತು. ಕೆಲವು ಎತ್ತಿನ ಕೊರಳೊಳಗಿನ ಗಂಟೆಗಳ ಮಧುರ ನಿನಾದವು ದೂರದಿಂದ ಕೇಳಿಬರುತ್ತಿತ್ತು. ಗಾಳಿಯು ಮಾತ್ರ ಮೌನವಾಗಿರಲಿಲ್ಲ ಅದು ತ್ರಿಭುವನ ಮಂದಿರದ ಸುತ್ತಲೂ ಪ್ರದಕ್ಷಿಣೆ ಹಾಕುತ್ತ ತನ್ನ ಪ್ರಾರ್ಥನೆಯನ್ನು ಅಖಂಡವಾಗಿ ಸಾಗಿಸಿತ್ತು.

ಶ್ಯಾಮನು ಕಥೆ ಆರಂಭಿಸಿದನು :

" ನನ್ನ ತಾಯಿಯ ತವರುಮನೆಯವರು ದೊಡ್ಡ ಶ್ರೀಮಂತರಾಗಿರಲಿಲ್ಲ. ಆದರೂ ಸುಖಿಗಳಾಗಿದ್ದರು. ತಿನ್ನುಣ್ಣಲು ಕೊರತೆಯಿರಲಿಲ್ಲ. ನನ್ನ ತಾಯಿಯ ತವರುಮನೆ ಊರಲ್ಲಿಯೇ ಇತ್ತು. ನನ್ನ ತಾಯಿಯ ತಂದೆ ಒಳ್ಳೇ ಕರ್ಮಠರೂ ಧರ್ಮಿಷ್ಠರೂ ಆಗಿದ್ದರು. ಅವರ ಮಕ್ಕಳಲ್ಲಿ ನನ್ನ ತಾಯಿಯೇ ಹಿರಿಯವಳು. ನನ್ನ ತಾಯಿಯನ್ನು ಅವಳ ತಾಯಿ ತಂದೆ ತುಂಬ ಪ್ರೀತಿಸುತ್ತಿದ್ದರು. ತವರು ಮನೆಯಲ್ಲಿ ಆಕೆಗೆ ಆವಡಿ ಎಂದು ಕೆಲವರು, ಬಯೋ ಎಂದು ಕೆಲವರು ಕರೆಯುತ್ತಿದ್ದರು. ಬಯೋ ಎಂಬುದು ಸಲುಗೆಯಿಂದ ಕರೆಯುವ ಹೆಸರಾಗಿದ್ದಿತು. ' ತಾಯೀ ' ಅಂದ ಹಾಗೆ. ತವರುಮನೆಯ ಆಳುಮಕ್ಕಳು, ಒಕ್ಕಲುಗಿತ್ತಿ

ಯರು, ಮುಂದೆ ದೊಡ್ಡವಳಾದಾಗ ಕೂಡ 'ಬಯೋ' ಎಂದು ಕರೆಯುವಾಗ ಆಗುವ ಆನಂದ ಅಂಥಿಂಥದಲ್ಲ! ಹಾಗೆ ಕರೆಯುವದರಲ್ಲಿ ಇರುವ ಅಂತಃಕರಣವು ಹೃದಯಕ್ಕೇ ಗೊತ್ತು!

"ನನ್ನ ತಾಯಿಗೆ ಇಬ್ಬರು ಸಹೋದರರೂ, ಒಬ್ಬ ತಂಗಿಯೂ ಇದ್ದರು. ನಮ್ಮ ತಾಯಿಯ ತಾಯಿ ತುಂಬ ನಿಯಮಿತತನದವಳೂ, ದಕ್ಷಳೂ ಆಗಿದ್ದಳು. ಅವಳ ಮನೆಯಲ್ಲಿನ ಪಾತ್ರೆಗಳು ಕನ್ನಡಿಯಂತೆ ಹೊಳೆಯುತ್ತಿದ್ದವು. ನನ್ನ ತಾಯಿಯ ಮದುವೆಯು ಚಿಕ್ಕಂದಿನಲ್ಲಿಯೇ ಆಗಿದ್ದಿತು. ಅತ್ತೆಯ ಮನೆಯವರು ಶ್ರೀಮಂತರಾಗಿದ್ದರು. ಆವರು ಊರಲ್ಲಿ ಸರದಾರರೆಂದು ಮನ್ನಿಸಲ್ಪಡುತ್ತಿದ್ದರು. ಅಥವಾ ತಾವೇ ಹಾಗೆ ತಿಳಿದುಕೊಳ್ಳುತ್ತಿದ್ದರು. ತಾಯಿಯ ಮೈಮೇಲೆ ಬಂಗಾರ ಹಾಗು ಮುತ್ತಿನ ಆಭರಣಗಳು, ವಂಕಿ, ಸರಿಗೆ, ಗೋಟು, ಪಾಟ್ಲಿ ಮೊದಲಾದ ಎಲ್ಲ ವಸ್ತುಗಳೂ ಇದ್ದವು. ತುಂಬಿದ ಗೋಕುಲದಂಥ ಮನೆಯಲ್ಲಿ ಅವಳು ಬಂದು ಬಿದ್ದಿದ್ದಳು. ಅತ್ತೆಯಮನೆಯ ಹೆಸರು ಯಶೋದೆ ಎಂಬುದಾಗಿತ್ತು. ಅತ್ತೆಯ ಮನೆಯಲ್ಲಿಯೇ ಅವಳು ಬೆಳೆದು ದೊಡ್ಡವಳಾಗ ತೊಡಗಿದ್ದಳು. ಯಾವುದಕ್ಕೂ ಕೊರತೆಯಿರಲಿಲ್ಲ. ಉಣ್ಣಲು-ತಿನ್ನಲು ಬೇಕಾದದ್ದು ದೊರೆಯುತ್ತಿತ್ತು. ಏಕತ್ರ ಕುಟುಂಬವಾಗಿದ್ದರಿಂದ ಮನೆಯಲ್ಲಿ ಕೆಲಸವೂ ಹೆಚ್ಚಾಗಿತ್ತು. ಉತ್ಸಾಹವುಳ್ಳ ಪರಿಸ್ಥಿತಿ ಮತ್ತು ಸಹಾನುಭೂತಿಪರ ವಾತಾವರಣವಿದ್ದಲ್ಲಿ ಕೆಲಸ ಮಾಡಲು ಮನುಷ್ಯನು ಹಿಂಜರಿಯುವದಿಲ್ಲ. ಅದಕ್ಕೆ ಬದಲಾಗಿ ಇನ್ನೂ ನಾಲ್ಕು ಕೆಲಸ ಹೆಚ್ಚಾಗಿಯೇ ಮಾಡಬಹುದು.

"ಗೆಳೆಯರೆ, ನನ್ನ ತಂದೆಯವರು ೧೭-೧೮ ವಯಸ್ಸಿನವರಿರುವಾಗಲೇ ಸಂಸಾರದ ಹೊಣೆಯೆಲ್ಲ ಅವರ ಮೈಮೇಲೆ ಬಿದ್ದಿತ್ತು. ಅಜ್ಜ ಕೈಸಾಗದವರಾಗಿದ್ದರು. ತಂದೆಯವರೇ ಎಲ್ಲ ಆಡಳಿತೆ ವಹಿಸಿಕೊಳ್ಳಬೇಕಾಯಿತು. ಕೊಡಕೊಳ್ಳುವ ವ್ಯವಹಾರವನ್ನೂ ಅವರೇ ನೋಡುತ್ತಿದ್ದರು. ನಾವು ನಮ್ಮ ತಂದೆಗೆ ಭಾವೂ ಎಂದು ಕರೆಯುತ್ತಿದ್ದೆವು. ಜನರೆಲ್ಲ ಭಾವೂರಾಯರೆಂದು ಕರೆಯುತ್ತಿದ್ದರು. ನೆರೆಹೊರೆಯ ಹಳ್ಳಿಯ ಜನರೆಲ್ಲ ನಮಗೆ 'ಖೋತ' ರೆಂದು ಕರೆಯುತ್ತಿದ್ದರು.

"ಖೋತ ಎಂದರೆ ಏನು?" ಭಿಕ್ಷನು ವಿಚಾರಿಸಿದನು.

ಶ್ಯಾಮನು ಉತ್ತರಿಸಿದನು, "ಖೋತರೆಂದರೆ ಹೊಲದ ತೆರಿಗೆಯನ್ನು

ನಿರ್ಧರಿಸಿ ಒಡೆಯರಿಂದ ವಸೂಲು ಮಾಡಿ ಸರಕಾರಕ್ಕೆ ಜಮೆ ಮಾಡುವ ವೇತನವಿಲ್ಲದ ಒಬ್ಬ ದಲ್ಲಾಳಿ. ”

“ ಅವನಿಗೇನೂ ದೊರೆಯುವದಿಲ್ಲವೇನು ? ” ರಾಮನು ಕೇಳಿದನು.

“ ಹೋ, ದೊರೆಯದೆ ಇದ್ದೀತೆ ? ಖಂಡಿತ ದೊರೆಯುತ್ತದೆ. ಸರಕಾರೀ ತೆರಿಗೆಯ ಕಾಲು ಭಾಗದಷ್ಟು ಲಾಭ ಅವನಿಗಿದೆ. ಖೋತನು ಹೊಲಗಳ ಬೆಳೆಯ ಅಂದಾಜು ಮಾಡುತ್ತಾನೆ. ಅದಕ್ಕೆ ಆಣೇವಾರಿ ಮಾಡುವದು ಎನ್ನುತ್ತಾರೆ. ಒಂದುವೇಳೆ ಬೆಳೆಯು ಚೆನ್ನಾಗಿರದಿದ್ದರೂ ಚೆನ್ನಾಗಿದೆಯೆಂದು ಅವನು ಶಿಫಾರಸು ಮಾಡಿಬಿಡುತ್ತಾನೆ. ಜನರು ತೆರಿಗೆ ಸಕಾಲಕ್ಕೆ ಕೊಡದೆ ಹೋದರೆ ಅಂಥವರ ಮನೆ ಜಪ್ತೀ ಮಾಡಿಸುತ್ತಾನೆ. ಅವನಿಗೆ ಸರಕಾರದ ಸಹಾಯ ದೊರೆಯುತ್ತದೆ. ಹೊಲದೊಡೆಯರಿಂದ ಹೊತ್ತಿಗೆ ಸರಿಯಾಗಿ ತೆರಿಗೆ ತುಂಬಿಸುವದು ಅವನ ಕೆಲಸವೇ ಆಗಿದೆ. ”

“ ನಮ್ಮ ವರ್‍ಹಾಡ–ನಾಗಪುರಗಳ ಕಡೆಗೆ ‘ಮಾಲಗುಜಾರ’ ರೆಂದು ಇರುತ್ತಾರೆ. ಅಂಥವೇ ಇದೊಂದು ಬಗೆಯಾಗಿರಬಹುದು. ” ಭಿಕ್ಕನೆಂದನು.

ಗೋವಿಂದನು ಒಳ್ಳೇ ಆತುರನಾಗಿ ನುಡಿದನು, “ ಸಾಕಪ್ಪಾ, ನಿಮ್ಮ ಕಡೆಯ ಸುದ್ದಿ. ನೀವು ಕಥೆ ಮುಂದರಿಸಿರಿ. ”

ಶ್ಯಾಮನು ಮತ್ತೆ ಹೇಳತೊಡಗಿದನು, “ ನಾವು ವಡವಲಿ ಎಂಬ ಊರಿನ ಖೋತರಾಗಿದ್ದೆವು. ಆ ವಡವಲಿಯಲ್ಲಿ ನಮ್ಮದೊಂದು ದೊಡ್ಡ ತೋಟವಿತ್ತು. ಧೋ ಧೋ ಎಂದು ಸುತ್ತಲೂ ನೀರು ಹರಿಯುತ್ತಿತ್ತು. ಕಾಲುವೆ ತೋಡಿ ದೂರದಿಂದ ನೀರು ತಂದಿದ್ದರು. ಅದು ಎತ್ತರದ ಮೇಲಿಂದ ಬೀಳುತ್ತಿತ್ತು. ತೋಟದಲ್ಲಿ ಬಾಳೆ, ಪಪ್ಪಾಯಿ, ಪರಂಗಿ ಹಲಸು ಮತ್ತು [illegible] ವಾರು ಬಗೆಯ ಹಲಸಿನ ಮರಗಳು ಅಲ್ಲಿದ್ದವು. ಬಕ್ಕೆ ಹಲಸು, ಅರಬಕ್ಕೆ ಹಲಸು, ಕಾಪು ಹಲಸು ಹೀಗೆ ಬಗೆಬಗೆಯ ಹಲಸಿನ ಮರಗಳಿವೆ. ನೀವು ನಮ್ಮ ಕೊಂಕಣ ಸೀಮೆಗೆ ಬಂದರೆ ಅವನ್ನೆಲ್ಲ ನಿಮಗೆ ತೋರಿಸಬಹುದು. ಆ ತೋಟವೆಂದರೆ ನಮ್ಮ ವೈಭವವಾಗಿದ್ದಿತು. ಅದುವೇ ನಮ್ಮ ಭಾಗ್ಯನಿಧಿಯೆಂದು ಹೇಳುತ್ತಿದ್ದರು. ಆದರೆ ಗೆಳೆಯರೆ, ಅದು ವೈಭವವಲ್ಲ ! ನಮ್ಮ ಪಾಪದ ಖನಿಯಾಗಿದ್ದಿತು. ಪಾಪವು ಕ್ಷಣಕಾಲ ಮಾತ್ರ ನಗುತ್ತದೆ. ಮುಂದೆ ಕೊನೆಯವರೆಗೂ ಅಳುವದೇ ! ಪಾಪವು ತುಸು ಹೊತ್ತು ತಲೆ ಮೇಲೆ ಮಾಡಿ

ಕೊಂಡು ಮೆರೆಯುವದು. ಆಮೇಲೆ ಶಾಶ್ವತವಾಗಿ ಮಣ್ಣುಗೂಡತಕ್ಕದ್ದೇ. ಪಾಪಕ್ಕೆ ಮಾನ-ಮರ್ಯಾದೆ ಕ್ಷಣಿಕ! ಜಗತ್ತಿನಲ್ಲಿ ಸದ್ಗುಣವು ಮಾತ್ರ ಶುಕ್ರ ನಕ್ಷತ್ರದಂತೆ ಶಾಂತ ಮತ್ತು ಸ್ಥಿರವಾಗಿ ಯಾವಾಗಲೂ ಬೆಳಗುತ್ತದೆ.

"ಖೋತನು ತನಗೆ ಬೇಕಾದವರನ್ನು ಕೆಲಸಕ್ಕೆ ಕರೆದರೂ ಅವರು ಕೂಡಲೆ ಬರಬೇಕು. ಬರದೆ ಹೋದರೆ ಅವರ ಮೇಲೆ ಉರಿದು ಬೀಳುವನು. ಊರಲ್ಲಿಯ ಶ್ರಮಜೀವಿ ಹೆಣ್ಣುಮಕ್ಕಳು ಹಿತ್ತಲಲ್ಲಿ ಬದನೇಕಾಯಿ, ಮೆಣಸಿನ ಕಾಯಿ, ಗೆಣಸು, ಕಲ್ಲಂಗಡಿ ಮತ್ತು ಕುಂಬಳಕಾಯಿ ಬೆಳೆಯಬೇಕು. ಪಾಪ! ಅವುಗಳ ಮೇಲೆ ಖೋತನ ಕಣ್ಣು! ನಿಜವಾಗಿ ಈ ಜಗತ್ತಿನಲ್ಲಿ ಬೇರೆಯವರ ಶ್ರಮದ ಮೇಲೆ ಜೀವಿಸುವಷ್ಟು ಪಾಪ ಬೇರೊಂದಿಲ್ಲ. ಬೇರೆಯವರನ್ನು ಹಗಲಿರುಳು ಒಂದೇಸಮನೆ ದುಡಿಸಿ ಅವರನ್ನೇ ಕಡೆಗಣಿಸುತ್ತ ತಾವು ಗಾದಿ-ಲೋಡುಗಳ ಮೇಲೆ ಹೊರಳಾಡುವದು ಅಕ್ಷಮ್ಯ ಅಪರಾಧವಾಗಿದೆ. ನಮ್ಮ ತಾಯಿಯ ಮೈಮೇಲೆ ಇದ್ದ ಆಭರಣಗಳೆಲ್ಲ ಎಲ್ಲಿಂದ ಬಂದವು? ಆ ಶುಭ್ರವಾದ ಮುತ್ತಿನ ನತ್ತು! ಅದು ಹಳ್ಳಿಯ ಬಡ ಹೆಣ್ಣುಮಕ್ಕಳ ಮುತ್ತಿನಂಥ ಕಣ್ಣೀರಿನ ಹನಿಗಳಿಂದ ತಯಾರಿಸಲಾಗಿತ್ತು! ಆ ಬಡಜನರ ಬಂಗಾರದಂಥ ಮಕ್ಕಳ ಮುಖದ ಮೇಲಿನ ಹಾಸ್ಯವನ್ನೂ, ಮೈಮೇಲಿನ ಗೌರ ಕಾಂತಿಯನ್ನೂ ಕಸಿದು ತಂದು ನನ್ನ ತಾಯಿಗೆ ಗೋಟು-ಪಾಟ್ಲಿಗಳನ್ನು ಮಾಡಿಸಲಾಗಿದ್ದಿತು. ಪರಮೇಶ್ವರನು ಈ ಸತ್ಯವನ್ನು ನನ್ನ ತಾಯಿಗೆ ಮನವರಿಕೆ ಮಾಡಿ ಕೊಡಬೇಕಾಗಿದ್ದಿತು. ಅವನು ನನ್ನ ತಾಯಿಯನ್ನು ಎಚ್ಚರಿಸತಕ್ಕವನಿದ್ದನು.

"ನನ್ನ ತಂದೆ ದುಷ್ಟ ಸ್ವಭಾವದವರೇನೂ ಆಗಿರಲಿಲ್ಲ. ಆದರೆ ಪೂರ್ವಜರ ಪರಂಪರೆಯನ್ನೇ ಸಾಗಿಸಿದ್ದರು. ಖೋತರಿಗಿದ್ದ ನಿರಂಕುಶ ಅಧಿಕಾರದ ಬಗ್ಗೆ ಅವರಿಗೆ ಅಭಿಮಾನವೆನಿಸುತ್ತಿತ್ತು. ಯಾವನಾದರೂ ತಮ್ಮ ಮಾತು ಕೇಳದಿದ್ದರೆ, "ಈ ಒಕ್ಕಲಿಗನಿಗೆ ಸೊಕ್ಕು ಬಂದಿದೆ" ಎನ್ನುತ್ತಿದ್ದರು. ಹೀಗೆ ಹೇಳುವದೊಂದು ಪದ್ಧತಿಯೇ ಆಗಿದ್ದಿತು. ಹೀಗೆ ಹೇಳುವಾಗ ತಾವೇ ಉದ್ದಾಮರೂ, ಅಧಿಕಾರಾಂಧರೂ ಆಗಿದ್ದೇವೆಂಬುದರ ಕಲ್ಪನೆ ಅವರಿಗೆ ಇರುತ್ತಿರಲಿಲ್ಲ.

"ತಂದೆಯವರ ಕೈಗೆ ಆಗ ತಾನೆ ಆಡಳಿತೆ ಬಂದಿತ್ತು. ಇನ್ನೂ ಅವರಿಗೆ ಹೆಚ್ಚಿನ ಅನುಭವವಿರಲಿಲ್ಲ. ಖೋತರೆಂಬ ಬಿಂಕದಲ್ಲಿ ಕಂಡವರಿಗೆ ಕಂಡಂತೆ

ಮಾತನಾಡಿ ಕೆಲವರ ಮನಸ್ಸನ್ನು ನೋಯಿಸಿದರು. ಹಿಂದಿನವರ ಪಾಪಗಳೂ ಕಟುಮಾತುಗಳೂ ಹೆಚ್ಚಾಗಿದ್ದವು. ಮಾಡಿದ ಪಾಪಗಳಾಗಲಿ, ಪುಣ್ಯಗಳಾಗಲಿ ಸತ್ತು ಹೋಗುವದಿಲ್ಲ. ಯಾವದೂ ವ್ಯರ್ಥ ಹೋಗುವದಿಲ್ಲ. ಬಿತ್ತಿದ್ದು ಬೆಳೆಯತಕ್ಕದ್ದೇ. ಹಚ್ಚಿದ ಬಳ್ಳಿ ಹಬ್ಬಿ ಹೂ–ಕಾಯಿಗಳನ್ನು ಬಿಡತಕ್ಕದ್ದೇ.

"ಅದೊಂದು ಅಮಾವಾಸ್ಯೆಯಾಗಿದ್ದಿತು. ಭಾವೂ ವಡವಲಿಗೆ ಹೋಗಿದ್ದರು. ಬೆಳಗ್ಗೆ ೮ ಗಂಟೆಗೇ ಅವರು ಹಳ್ಳಿಯನ್ನು ತಲುಪಿದ್ದರು. 'ಇಂದು ಅಮಾವಾಸ್ಯೆಯಿದೆ ಊರಿಗೆ ಹೋಗಬೇಡಿ' ಎಂದು ಮನೆಯ ಜನರು ಎಷ್ಟು ಹೇಳಿದರೂ ಅವರು ಕೇಳಲಿಲ್ಲ. 'ಅಮಾವಾಸ್ಯೆ ಇದ್ದರೇನು, ಶನಿವಾರವಿದ್ದರೇನು? ಆಗುವದು ಆಗತಕ್ಕದ್ದೇ. ಹಾಗೆ ನೋಡಿದರೆ ಪ್ರತಿಯೊಂದು ದಿವಸವೂ ಪವಿತ್ರವಾದದ್ದೇ. ಎಲ್ಲವೂ ದೇವರ ವಾರಗಳೇ.' ಎಂದು ಅವರು ಹೇಳಿಬಿಟ್ಟರು. ಅವರು ವಡವಲಿಯಲ್ಲಿ ಸಾಯಂಕಾಲದ ವರೆಗೂ ಇದ್ದರು. ಸಂಜೆಯಾದೊಡನೆ ಮರಳಿ ಮನೆಗೆ ಹೊರಟರು.

ತೋಟಿಗರ ಮುದುಕಿ ಹೇಳಿದಳು, "ಭಾವಣ್ಣಾ, ರಾತ್ರೀ ಹೊತ್ತೆಂದರೆ ದೈತ್ಯರು ಸಂಚರಿಸುವ ಹೊತ್ತು. ಇಂಥ ಹೊತ್ತಿನಲ್ಲಿ ಹೊರಡಬೇಡಿರಿ. ಮೇಲಾಗಿ ಇಂದು ಅಮಾವಾಸ್ಯೆಯ ಕಾಳ ರಾತ್ರಿ. ನೀವು ಹಳ್ಳದ ಸಮೀಪಕ್ಕೆ ಹೋಗುವಷ್ಟರಲ್ಲಿ ಕತ್ತಲೆ ಕವಿದು ಹೋಗುವದು. ಇಲ್ಲಿಯೇ ವಸತಿ ಮಾಡಿರಿ. ತೀರ ನಸುಕಿನಲ್ಲಿ – ಕೋಳಿ ಕೂಗುತ್ತಲೇ ಎದ್ದು ಹೊರಡಬಹುದು."

ಭಾವೂ ಇದನ್ನು ಕೇಳಲಿಲ್ಲ. ಅವರೆಂದರು, "ಮುದುಕೀ, ನಿತ್ಯದ ವಹಿವಾಟದ ದಾರಿ. ರಾತ್ರಿಯಾದರೇನಾಯಿತು? ನಾನು ಸರ್ರನೇ ಹೋಗಿ ಬಿಡುತ್ತೇನೆ. ಹಾಲು ಹಿಂಡುವ ಹೊತ್ತಿಗೆ ಮನೆ ಮುಟ್ಟುತ್ತೇನೆ."

ಭಾವೂ ಹೊರಟರು. ಜೊತೆಗೆ ಆಳು ಇದ್ದ. ಆ ಮುದುಕಿಯ ನುಡಿ "ಹೋಗಬೇಡಿರಿ" ಎನ್ನುತ್ತಲೇ ಇತ್ತು. ಪಕ್ವವಾಗಲಿರುವ ಪಾಪಗಳು, "ನಡೆ, ನಿಲ್ಲಬೇಡ" ಎನ್ನುತ್ತಿದ್ದವು. ಹಳ್ಳಿಯ ಜನ ಬೀಳ್ಕೊಟ್ಟರು. ಒಬ್ಬನು ಚೀರುಧ್ವನಿ ತೆಗೆದು ನಕ್ಕನು. ಕೆಲವರು ತಮ್ಮ ತಮ್ಮಲ್ಲಿ ಪಿಳಿಪಿಳಿ ನೋಡಿಕೊಂಡರು. ಆಳಿನೊಡನೆ ಭಾವೂ ಹೊರಟುಬಿಟ್ಟರು. ಕತ್ತಲು ಪಸರಿಸತೊಡಗಿತು. ಪರಮೇಶ್ವರನ, ಸಾಧು ಜನರ ಮತ್ತು ಸಾಧ್ವಿಯರ ಕಣ್ಣೀರು ಮಿಂಚತೊಡಗಿದವು.

ವಡವಲಿಯಿಂದ ಒಂದೂವರೆ ಹರದಾರಿಯ ಮೇಲೆ ಒಂದು ಹಳ್ಳವಿತ್ತು. ಅದು ಮಳೆಗಾಲದಲ್ಲಿ ಇಳಿಯುತ್ತಲೇ ಇರಲಿಲ್ಲ. ಅದೊಂದು ದೊಡ್ಡ ಕೊಳ್ಳದಲ್ಲಿ ಹರಿಯುತ್ತಿತ್ತು. ಅದರ ಎರಡೂ ದಂಡೆಗಳಲ್ಲಿ ಗಾಳಿಯ ಮರಗಳಿದ್ದವು. ಆ ನಿಬಿಡವಾದ ಗಿಡಗಳ ಗುಂಪಿನಲ್ಲಿ ಹುಲಿಗಳೂ ಇರುತ್ತಿದ್ದವು. ಹೊಸಬರಿಗೆ ಹಗಲಿನಲ್ಲಿ ಕೂಡ ಅಲ್ಲಿ ಹೋಗಲು ಹೆದರಿಕೆಯಾಗುತ್ತಿತ್ತು. ಆದರೆ ಭಾವೂ ನಿರ್ಭಯರಾಗಿ ಹೊರಟಿದ್ದರು. ಅವರಿಗೆ ಹೆದರಿಕೆ ಎಂಬುದು ಗೊತ್ತಿರಲಿಲ್ಲ. ಭೂತ–ಪ್ರೇತ, ಪ್ರಾಣಿ–ಕೀಟಕ ಯಾವುದರ ಭಯವೂ ಅನಿಸುತ್ತಿರಲಿಲ್ಲ.

ಭಾವೂ ಆ ಕೊಳ್ಳದ ಹತ್ತಿರ ಬರುತ್ತಲೇ ಒಮ್ಮೆಲೇ ಯಾರೋ ಸಿಳ್ಳು ಹಾಕಿದ್ದು ಕೇಳಿಸಿತು. ಅವರು ಬೆಚ್ಚಿಬಿದ್ದರು. ಪಾಪವು ಅಂಜುಗುಳಿಯಾಗಿರುತ್ತದೆ. ದಟ್ಟವಾದ ಗಿಡಗಂಟಿಯೊಳಗಿಂದ ನೈಗೆ ಕೆಮ್ಮಣ್ಣು ಬಳಿದುಕೊಂಡ ಭಿಲ್ಲರು ಹೊರಗೆ ಬಿದ್ದರು. ಭಾವೂರ ಬೆನ್ನ ಮೇಲೆ ಲಾಠೀ ಏಟು ಬೀಳುತ್ತಲೆ ಅವರು ಕುಸಿದುಬಿದ್ದರು. ಜೊತೆಗೆ ಬಂದ ಆಳು ಹೆದರಿ ಓಡಿ ಹೋದನು. ಭಾವೂರ ಎದೆಯ ಮೇಲೆ ಒಬ್ಬ ಭಿಲ್ಲನು ಕುಳಿತು ಇನ್ನು ಕುತ್ತಿಗೆಯನ್ನು ಕರಕರನೆ ಕೊಯ್ಯಬೇಕೆಂದಿದ್ದ. ಹೊರಗೆ ರಾತ್ರಿಯ ಕೀಟಕಗಳು ಕಿರಿಚಿಕೊಳ್ಳುತ್ತಿದ್ದವು. ಅಲ್ಲಿಯೇ ಒಂದು ಹುತ್ತಿನೊಳಗಿಂದ ನಾಗರಹಾವೊಂದು ಘೂತ್ಕರಿಸುತ್ತ ಸರ್ರನೆ ಹೊರಟು ಹೋಯಿತು. ಭಿಲ್ಲರ ಲಕ್ಷ್ಯ ಅತ್ತ ಹೋಗಲಿಲ್ಲ. ಅಷ್ಟರಲ್ಲಿ ಒಬ್ಬ ಮುದುಕಿ ಬೊಬ್ಬೆ ಇಟ್ಟಳು, “ಲೋ, ಹಾರುವನನ್ನು ಹೊಡೆದರು. ಖೋತನನ್ನು ಹೊಡೆದರೋ ಬನ್ನಿರಿ.” ಆ ಭಿಲ್ಲರೂ ತುಸು ಅಂಜಿದರು.

ಭಾವೂ ಆ ಭಿಲ್ಲರಿಗೆ ಅಂಗಲಾಚಿ ಬೇಡಿದರು, “ಹೊಡೆಯಬೇಡಿರೋ, ನಾನೇನು ನಿಮಗೆ ಕೇಡು ಮಾಡಿದ್ದೇನೆ? ನನ್ನನ್ನು ಬಿಡಿರಿ. ಈ ಉಂಗುರ, ಈ ಬಂಗಾರದ ಕಡೆ, ಮತ್ತು ಈ ನೂರು ರೂಪಾಯಿಯ ನೋಟು ತೆಗೆದುಕೊಳ್ಳಿರಿ. ನನ್ನ ಪ್ರಾಣವನ್ನು ಮಾತ್ರ ತೆಗೆದುಕೊಳ್ಳಬೇಡಿರಿ.”

ಮುದುಕಿಯ ಆರ್ಭಟ ಕೇಳಿ ಯಾರೋ ಬರುತ್ತಿರುವಂತೆ ಕಂಡಿತು. ಕಾಲು ಹೆಜ್ಜೆಯ ಸಪ್ಪಳ ಕೇಳಿದೊಡನೆ ಆ ಭಿಲ್ಲರು ಉಂಗುರ, ಕಡೆ ಮತ್ತು ನೂರು ರೂಪಾಯಿ ದೋಚಿಕೊಂಡು ಪಲಾಯನ ಮಾಡಿದರು. ಆ ಭಿಲ್ಲರೇನು ನುರಿತ ದರೋಡೆಖೋರರಾಗಿರಲಿಲ್ಲ. ಪಕ್ಕಾ ಕೊಲೆಗಡಕರಾಗಿರಲಿಲ್ಲ. ಬಡತನದ ಬೇಗೆಯಿಂದಾಗಿ ಈ ಕೆಲಸಕ್ಕೆ ಕೈ ಹಾಕಿದಂತಿತ್ತು. ಆ ಕ್ರೂರ ಕರ್ಮದ

ಹಿಂದೆಯೂ ದಯೆಯಿತ್ತು. ಪ್ರೇಮವಿತ್ತು. ತಮ್ಮ ಮಕ್ಕಳು ಮರಿಗಳ ಮೇಲಿನ ಪ್ರೇಮದಿಂದಾಗಿ, ಅವರ ಹಸಿವೆಯನ್ನು ಹಿಂಗಿಸಬೇಕೆಂದು ಆ ಭಿಲ್ಲರು ಈ ಕೊಲೆಗೆ ಪ್ರವೃತ್ತರಾಗಿದ್ದರು. ಜಗತ್ತಿನಲ್ಲಿ ಕಲಹ ಮತ್ತು ಸ್ಪರ್ಧೆ ಇವುಗಳಲ್ಲಿಯೇ ಸತ್ಯವಿದೆಯೆಂದು ಕೆಲವರು ಅನ್ನುವರು. ಆದರೆ ಈ ಕಲಹದ ಹಿಂದೆ, ಈ ಹೋರಾಟದ ಹಿಂದೆ ಪ್ರೇಮವು ಇದ್ದೇ ಇದೆ. ಈ ಪ್ರೇಮವು ಮಾತ್ರ ಸಂಕುಚಿತವಾದದ್ದು. ಜಗತ್ತಿನ ಅಂತಿಮ ಸ್ವರೂಪವು ಪ್ರೇಮವಾಗಿದೆ, ಯುದ್ಧವಲ್ಲ; ಸಹಕಾರವಾಗಿದೆ. ದ್ವೇಷ ಅಥವಾ ಮತ್ಸರವಲ್ಲ.

ಭಾವೂಅವರ ಜೊತೆಗೆ ಬಂದಿದ್ದ ಆಳು ಓಡಿಯೋಡಿ ನೇರವಾಗಿ ನಮ್ಮ ಪಾಲಗಡವನ್ನು ಸೇರಿದ. ನಮ್ಮ ಮನೆಗೆ ಹೋಗಿ ಗಾಬರಿಯಲ್ಲಿಯೇ ತೇಕುತ್ತ ತೇಕುತ್ತ ನಡೆದ ಸಂಗತಿಯನ್ನು ಅರುಹಿದ. ನಮ್ಮ ಮನೆಯಲ್ಲಿಯ ಹಾಗೂ ಊರಲ್ಲಿಯ ಕೆಲವು ಜನರು ಕೂಡಲೆ ಆ ಸ್ಥಳಕ್ಕೆ ಧಾವಿಸಿದರು. ಪಾಲಗಡದಲ್ಲಿದ್ದ ಪೋಲೀಸ ಠಾಣೆಗೂ ವರದಿ ಕೊಡಲಾಯಿತು.

ಮನೆಗೆ ಈ ಸುದ್ದಿ ಹತ್ತಿದೊಡನೆ ಎಲ್ಲರೂ ಹೌಹಾರಿದರು. ನಿಂತಲ್ಲಿಯೇ ಕುಸಿದು ಬಿದ್ದಂತಾದರು. ಮನೆಯಲ್ಲಿ ದೀಪಗಳು ಬೆಳಗುತ್ತಿದ್ದವಾದರೂ ಎಲ್ಲರ ಮೋರೆಗಳು ಕಪ್ಪಿಟ್ಟಿದ್ದವು. ಎಲ್ಲಿಯ ಊಟ! ಎಲ್ಲಿಯ ನಿದ್ದೆ! ಆಗ ನಾವು ಇನ್ನೂ ಹುಟ್ಟಿರಲಿಲ್ಲ. ತಾಯಿ ಆಗಲೇ ಸಾಕಷ್ಟು ತಿಳಿವಳಿಕೆಯುಳ್ಳವಳಾಗಿದ್ದಳು. ಹೆಣ್ಣುಮಕ್ಕಳಿಗೆ ತಿಳಿವಳಿಕೆ ಬೇಗ ಬರುತ್ತದೆ. ನಮ್ಮ ತಾಯಿ ಆ ಎಲ್ಲ ಕಥೆಯನ್ನು ನಮಗೆ ಹೇಳುತ್ತಿದ್ದಳು. ತಾಯಿ ದೇವರ ಕೋಣೆಗೆ ಹೋಗಿ ದೇವರ ಮೊರೆ ಹೊಕ್ಕಳು ಕಷ್ಟಕಾಲದಲ್ಲಿ ಅವನೇ ಪರಮ ಮಿತ್ರ. ದೇವರ ಬಳಿ ತಾಯಿ ಸೆರಗೊಡ್ಡಿ ಬೇಡಿಕೊಂಡಳು, " ದೇವರೇ, ನಾರಾಯಣಾ, ನನ್ನ ಚಿಂತೆ ಯೋಚನೆ ಎಲ್ಲವೂ ನಿನ್ನನ್ನೇ ಕೂಡಿವೆ. ತಾಯಿ, ಜಗದಂಬೆ, ನಾನು ನಿನ್ನ ಕುವರಿ. ನನ್ನನ್ನು ನಿನ್ನ ಉಡಿಯಲ್ಲಿ ಹಾಕಿಕೋ. ನನ್ನ ಕುಂಕುಮವನ್ನು ಕಾಪಾಡು. ಬಳೆಗಳನ್ನು ಭದ್ರವಾಗಿರಿಸು. ನನ್ನ ಸೌಭಾಗ್ಯ..........ಬೇಡ, ತಾಯಿ, ತಾಯಿ! ಅವರ ಮೇಲೆ ಕೊಡಲಿ ಏಟು ಬೀಳದಿರಲಿ. ನಾನೇನು ಮಾಡಲಿ? ಯಾವ ವ್ರತವನ್ನು ಆರಂಭಿಸಲಿ? ದೇವರೇ, ನನ್ನ ಬಗ್ಗೆ ನಿನಗೆ ಕರುಣೆ ಬರಲಿ. ನೀನು ಕರುಣಾಸಾಗರನಲ್ಲವೇ? ಅವರನ್ನು ಸುಖದಿಂದ ತಂದು ಮುಟ್ಟಿಸು. ಕಣ್ತುಂಬ ಅವರನ್ನು ನೋಡಗೊಡು. ನಿನ್ನಾಶೀರ್ವಾದ

ದಿಂದ ಅವರೊಂದಿಗೆ ಸುಖದಿಂದ ಇರಗೊಡು. ನನಗೆ ಬೇರೆ ಏನೂ ಬೇಕಾಗಿಲ್ಲ. ಈ ಆಭರಣಗಳು ಬೇಡ. ಈ ವೈಭವದ ವಸ್ತ್ರಗಳು ಬೇಡ ಈ “ ಖೋತ ” ಕೆಲಸವಾದರೂ ಏತಕ್ಕೆ? ನನಗೆ ಅದಾವುದೂ ಬೇಡ. ಪತಿಯೇ ನನ್ನ ಒಡವೆ! ಅವರನ್ನಷ್ಟು ದಯಪಾಲಿಸು. ದೇವರೇ, ದಯಪಾಲಿಸು.” ಹೀಗೆಂದು ತಾಯಿ ಕಣ್ಣೀರು ಸುರಿಸುತ್ತ ದೇವರಲ್ಲಿ ಅಂಗಲಾಚಿ ಬೇಡಿಕೊಳ್ಳುತ್ತಿದ್ದಳು.

ತಾಯಿಯು ದೇವರ ಮೊರೆ ಹೊಕ್ಕಳು. ಪ್ರಾರ್ಥಿಸಿದಳು. ಆದರೆ ಕೇವಲ ಪ್ರಾರ್ಥನೆಯಿಂದೇನು ಪ್ರಯೋಜನ. ಪ್ರತಿಯೊಂದು ವಿಷಯದಲ್ಲಿಯೂ ತ್ಯಾಗವು ಬೇಕು. ವ್ರತವು ಬೇಕು. ನನ್ನ ತಾಯಿಯು ಆ ರಾತ್ರಿ ಸಾವಿತ್ರಿಯ ವ್ರತವನ್ನು ಸ್ವೀಕರಿಸಿದಳು. ಗೆಳೆಯರೆ, ಜೀವನದಲ್ಲಿ ಕಠಿಣ ಪ್ರಸಂಗದಲ್ಲಿ ಧೈರ್ಯ ವನ್ನು ಕೊಡಲಿಕ್ಕೆ ‹ ಭಾರತದ ಇತಿಹಾಸದಲ್ಲಿ ದಿವ್ಯ ಸ್ತ್ರೀ-ಪುರುಷ ರತ್ನಗಳು ರಾಶಿ, ರಾಶಿಯಾಗಿವೆ. ರಾಮನಿದ್ದಾನೆ, ಹರಿಶ್ಚಂದ್ರನಿದ್ದಾನೆ. ಸಾವಿತ್ರಿ ಇದ್ದಾಳೆ- ಸೀತೆ ಇದ್ದಾಳೆ. ನೀವು ಇತಿಹಾಸವನ್ನು ಓದಿರಿ ಅಥವಾ ಬಿಡಿರಿ. ಸಾವಿತ್ರಿಯು ಅಮರಳಾಗಿದ್ದಾಳೆ! ಸ್ತ್ರೀಯರಿಗೆ ಅವಳು ಯಾವಾಗಲೂ ಧೈರ್ಯವನ್ನು ಕೊಡುವಳು. ಮನುಷ್ಯನ ಪವಿತ್ರವಾದ ಮತ್ತು ಪರಿಶುದ್ಧವಾದ ನಿರ್ಧಾರವು ಮರಣದೊಂದಿಗೆ ಹೋರಾಡುವ ಸಾಮರ್ಥ್ಯವನ್ನು ಕೊಡುತ್ತದೆ. ನನ್ನ ತಾಯಿ ಸೌಭಾಗ್ಯವನ್ನು ಪಡೆದಳು. ಭಾವೂ ಮನೆಗೆ ಬಂದರು. ಆ ವರುಷ ದಿಂದ ನನ್ನ ತಾಯಿ ಸಾವಿತ್ರೀ ವ್ರತವನ್ನು ಆರಂಭಿಸಿದಳು. ಪ್ರತಿ ವರುಷ ಜೇಷ್ಠಮಾಸದ ಹುಣ್ಣಿಮೆಗೆ ಎರಡು ದಿವಸ ಮೊದಲು ಅವಳು ಉಪವಾಸ ವನ್ನು ಕೈಕೊಳ್ಳುತ್ತಿದ್ದಳು. ಹಿಡಿದಂಥ ವ್ರತವನ್ನು ಬಿಡಲಿಕ್ಕಾಗದು. ಈ ವ್ರತ ದಲ್ಲಿ ಆಲದ ಗಿಡದ ಪೂಜೆ ಮಾಡುವದಿರುತ್ತದೆ. ಆಕಾಶವನ್ನು ದಿಟ್ಟಿಸಿ ನೋಡುವ ಚಿರಂಜೀವಿಯೂ, ಅಕ್ಷಯವೂ ಆದ ಆಲದ ಮರದ ಪೂಜೆ ಮಾಡಿ ಅಕ್ಷಯ ಸೌಭಾಗ್ಯವನ್ನು ಪಡೆಯುವದಿರುತ್ತದೆ. ಆಲದ ಮರದಂತೆ ವಂಶವು ಬೆಳೆಯಲಿ, ಜಗತ್ತಿಗೆ ನೆರಳನ್ನು ಕೊಡಲಿ. ಆಲದ ಮರವು ಬೆಳೆದು ಮೇಲೆ ಮೇಲೇರಿ ದೇವರ ಪಾದ ಸ್ಪರ್ಶ ಮಾಡುತ್ತದೆ. ಅದೇ ಮೇರೆಗೆ ಪೀಳಿಗೆಯ ಜನಕ್ಕೂ ಮೇಲೇರುವ ಸದಿಚ್ಛೆ ಇರಲಿ. ಆಲದ ಮರಕ್ಕೆ ಅನೇಕ ರೆಂಬೆಗಳೂ, ಜಡೆಗಳೂ ಒಡೆದಿರುತ್ತವೆ. ಅದೇ ಮೇರೆಗೆ ವಂಶವು ವಿಸ್ತಾರವಾಗಿ ಬಲಯುತ

ವಾಗಲಿ. ಇಂಥವೇ ನೂರಾರು ಭಾವನೆಗಳು ಈ ಆಲದ ಮರದ ಪೂಜೆಯಿಂದ ತಿಳಿದೋ ತಿಳಿಯದೆಯೋ ಹೆಣ್ಣುಮಕ್ಕಳಿಗೆ ಬರುತ್ತಿರಬಹುದು.

ಸಾವಿತ್ರೀ ವ್ರತದ ದಿವಸಗಳು ಸಮೀಪಿಸಿದಾಗ ನನ್ನ ತಾಯಿ ಗಂಭೀರಳಾಗುತ್ತಿದ್ದಳು. ನಾನು ಆ ಸಂಬಂಧವಾಗಿಯೇ ಒಂದು ಸಂಗತಿಯನ್ನು ಹೇಳತಕ್ಕವನಿದ್ದೇನೆ. ಇದುವರೆಗೆ ಹೇಳಿದ್ದು ಅದರ ಮುನ್ನುಡಿ ಮಾತ್ರ. ಆಗ ನಾನು ಎಂಟು-ಒಂಬತ್ತು ವರ್ಷದವನಿದ್ದಿರಬಹುದು. ಸಾವಿತ್ರೀ ವ್ರತದ ದಿವಸಗಳು ಸಮೀಪಿಸಿದ್ದವು. ನನ್ನ ತಾಯಿ ಚಳಿಜ್ವರದಿಂದ ಬಳಲುತ್ತಿದ್ದಳು. ಈ ವ್ರತದಲ್ಲಿ ಆಲದ ಮರಕ್ಕೆ ೧೦೮ ಪ್ರದಕ್ಷಿಣೆ ಹಾಕುವದಿರುತ್ತದೆ. ತಾಯಿಗೆ ಕೊಂಚ ನಡೆದರೂ ಬವಳಿ ಬರುತ್ತಿತ್ತು.

ತಾಯಿಯು ' ಶ್ಯಾಮಾ ' ಎಂದು ಕೂಗಿದಳು. ನಾನು ತಾಯಿಯ ಬಳಿಗೆ ಹೋಗಿ ಕೇಳಿದೆ, " ಏನಮ್ಮ, ಏನಾಗುತ್ತದೆ ? ಕಾಲು ಒತ್ತಬೇಕೇ ? "

ತಾಯಿ ಹೇಳಿದಳು, " ಬೇಡಪ್ಪಾ, ದಿನಾಲು ಎಷ್ಟೆಂದು ಕಾಲು ಒತ್ತುವದು ? ನಿನಗೂ ಬೇಜಾರು ಬಂದು ಹೋಗಿದ್ದೀತು ! ಆದರೆ ನಾನಾದರೂ ಏನು ಮಾಡಲಿ ? "

ತಾಯಿಯ ಆ ಕರುಣಾಮಯ ನುಡಿಯನ್ನು ಕೇಳಿ ನನಗೆ ಕಳವಳವಾಯಿತು. ನಾನು ಅಳತೊಡಗಿದೆ. ತಾಯಿ ಮತ್ತೆ ನುಡಿದಳು, " ಶ್ಯಾಮಾ, ನೀನು ಸದಾಕಾಲ ಕೆಲಸ ಮಾಡಿ ದಣಿದುಕೊಳುತ್ತೀಯಪ್ಪ. ಆದರೂ ನಾಳೆಯಿಂದ ಮೂರು ದಿವಸ ಮತ್ತೊಂದು ಕೆಲಸ ಹಚ್ಚತಕ್ಕವಳಿದ್ದೇನೆ. ಮಾಡುವೆಯಲ್ಲವೇ ಮಗೂ ? "

" ಅದಾವ ಕೆಲಸ ಹೇಳು, ತಾಯಿ. ನಾನೆಂದಾದರೂ ಇಲ್ಲವೆಂದಿರುವೆನೇ ? " ನಾನೆಂದೆ.

ತಾಯಿ ಕನಿಕರದಿಂದ ನುಡಿದಳು, " ಇಲ್ಲ. ನೀನೆಂದೂ ಇಲ್ಲವೆನ್ನುವದಿಲ್ಲ. ಇದು ನೋಡು - ನಾಳೆಯಿಂದ ವಟಸಾವಿತ್ರೀ ವ್ರತವು ಪ್ರಾರಂಭವಾಗುವದು. ನಾನು ಆಲದ ಗಿಡಕ್ಕೆ ೧೦೮ ಪ್ರದಕ್ಷಿಣೆ ಹಾಕಲಾರೆ. ನನಗೆ ಮೂರ್ಛೆ ಬರಬಹುದು. ಹೇಗೂ ನಿನ್ನ ಕೈ ಹಿಡಿದುಕೊಂಡು ಅಲ್ಲಿಯ ವರೆಗೆ ಹೋಗಿ ಪೂಜೆ ಮಾಡೇನು. ಮೂರು ಪ್ರದಕ್ಷಿಣೆ ಹಾಕೇನು. ಉಳಿದವುಗಳನ್ನು ನೀನು ಹಾಕಬೇಕು ಮಗು. "

ಹೀಗೆಂದು ನನ್ನ ಕೈಯನ್ನು ತನ್ನ ಕೈಯಲ್ಲಿ ಹಿಡಿದು ಪ್ರೀತಿ ಹಾಗು ಕರುಣಾದೃಷ್ಟಿಯಿಂದ ನನ್ನನ್ನು ದಿಟ್ಟಿಸಿದಳು.

“ ತಾಯೀ, ನಾನು ಪ್ರದಕ್ಷಿಣೆ ಹಾಕಿದರೆ ಹೇಗೆ ನಡೆದೀತು ? ” ನಾನು ಕೇಳಿದೆ.

“ ಹೋ, ನಡೆಯುವದು ಕಂದಾ, ದೇವರಿಗೆ ಕಣ್ಣಿವೆ. ದೇವರೇನೂ ಸತ್ತಿಲ್ಲ. ಅವನಿಗೆಲ್ಲ ತಿಳಿಯುತ್ತದೆ. ನೀನೆಂದರೆ ನಾನೇ ಅಲ್ಲವೇನು ? ನೀನು ನನ್ನ ಹೊಟ್ಟೆಯ ಕರುಳು. ನನ್ನದೇ ಅಂಶ. ನನ್ನ ದೇಹರೂಪ. ನೀನು ಪ್ರದಕ್ಷಿಣೆ ಹಾಕಿದರೆ ನನ್ನವೇ ಆಗಬಹುದು. ನಾನು ಅಶಕ್ತಳು. ಕಾಹಿಲೆಯವಳು. ಇದೆಲ್ಲ ದೇವರಿಗೆ ಗೊತ್ತು ” ತಾಯಿಯೆಂದಳು.

“ ಆದರೆ ನನ್ನನ್ನು ಕಂಡು ಹೆಣ್ಣುಮಕ್ಕಳು ನಗಬಹುದು. ನಾನು ಆಲದ ಗಿಡದ ಬಳಿಗೆ ಹೋಗಲಾರೆ. ಶಾಲೆಗೆ ಹೋಗುವ ಮಕ್ಕಳು ನನ್ನನ್ನು ನೋಡಿ “ ಹೆಣ್ಣ್ಯಾ, ಹೆಣ್ಣ್ಯಾ ” ಎಂದು ಗೇಲಿ ಮಾಡಬಹುದು. ನಾನು ಹೋಗುವುದಿಲ್ಲ. ನನಗೆ ಲಜ್ಜೆಯಾಗುತ್ತದೆ. ನನ್ನ ಶಾಲೆಯ ಅಭ್ಯಾಸಕ್ಕೂ ವ್ಯತ್ಯಯ ಬರುತ್ತದೆ. ಆಮೇಲೆ ಗುರುಗಳು ಸಿಟ್ಟಿಗೇಳುತ್ತಾರೆ ” ಎಂದು ಮೊದಲಾಗಿ ಅನೇಕ ನೆಪಗಳನ್ನು ಮುಂದೊಡ್ಡಿದೆನು.

ತಾಯಿಯ ಮುಖವೂ ಬಾಡಿ ಖಿನ್ನವಾಯಿತು. ಅವಳೆಂದಳು “ಶ್ಯಾಮಾ, ತಾಯಿಯ ಕೆಲಸವನ್ನು ಮಾಡಲಿಕ್ಕೆಂತಹ ನಾಚಿಕೆ ? ಇದು ದೇವರ ಕೆಲಸ. ಇದನ್ನು ಮಾಡುತ್ತಿರುವಾಗ ಯಾರಾದರೂ ನಕ್ಕರೆ ಅವರೇ ಹುಚ್ಚರೆನ್ನಿಸಿಕೊಳ್ಳುವರು. ಪಾಪದ ವಿಷಯಕ್ಕೆ ನಾಚಿಕೊಳ್ಳಬೇಕೇ ವಿನಾ ದೇವರ ಕೆಲಸಕ್ಕೆ ನಾಚಿಕೊಳ್ಳಬಾರದು. ಆ ದಿವಸ ನೀನು ಒಲೆಯ ಬಳಿಯಲ್ಲಿಟ್ಟಿದ್ದ ಕೊಬ್ಬರಿಯ ತುಂಡನ್ನು ಹಾರಿಸಿ ತಿಂದೆ. ನಾನು ಕಂಡರೂ ಸುಮ್ಮನಿದ್ದೆ. ಹುಡುಗ ಬುದ್ಧಿ ! ತಿಂದಿರಬಹುದೆಂದುಕೊಂಡೆ. ಅಂದು ನಿನಗೆ ನಾಚಿಕೆ ಬರಲಿಲ್ಲವೇನೋ. ಇಂದು ದೇವರ ಕೆಲಸಕ್ಕೆ ನಾಚುತ್ತಿದ್ದೀ. ಸುಮ್ಮನೆ ಆ ಭಕ್ತಿವಿಜಯವನ್ನು ಏಕೆ ಓದುತ್ತೀ ? ಪಾಂಡವ ಪ್ರತಾಪವನ್ನು ಓದುವದರಿಂದೇನು ಲಾಭ ? ನಿನ್ನ ಪ್ರೀತಿಯ ಕೃಷ್ಣನು ರಥವನ್ನು ಹೊಡೆಯುತ್ತಿದ್ದನು. ಧರ್ಮರಾಜನು ಎಂಜಲು ಬಳಿದನು. ನಿನಗೆ ಪ್ರದಕ್ಷಿಣೆ ಹಾಕಲು ನಾಚಿಕೆಯೇ ? ” ಎಂದು ಸೆರಗಿನಿಂದ ಕಣ್ಣೀರು ಒರಸಿಕೊಂಡಳು.

" ತಾಯಿಯ ಮಾತು ನನ್ನ ಹೃದಯವನ್ನು ಕೆದಕಿತು. ನನ್ನ ಎದೆಯು ಕರಗಿ ನೀರಾಯಿತು. ತೊಳೆದು ಶುದ್ಧವಾಯಿತು. ' ದೇವರ ಕೆಲಸ ಮಾಡಲು ನಾಚಿಕೊಳ್ಳಬೇಡ. ಪಾಪದ ಕೆಲಸಗಳಿಗೆ ಮಾತ್ರ ನಾಚಿಕೊಳ್ಳಬೇಕು.' ಎಂಥ ಅಮೃತವಾಣಿ ಅದು ! ಇಂದೂ ಆ ಶಬ್ದಗಳು ನನ್ನ ನೆನಪಿಗೆ ಬರುತ್ತಿವೆ. ಇಂದಿನ ಕಾಲದಲ್ಲಿ ಈ ಶಬ್ದಗಳ ಅಗತ್ಯವು ಬಹಳ ಇರುವದಲ್ಲವೇ ? ದೇವರ ಸೇವೆ, ದೇಶದ ಸೇವೆ, ಭಾರತಮಾತೆಯ ಸೇವೆಗೆ ನಾವು ನಾಚುತ್ತೇವೆ. ಆದರೆ ಕೆಟ್ಟ ಪುಸ್ತಕ ಓದುವದಕ್ಕೆ, ಕೆಟ್ಟ ಸಿನೇಮಾ ನೋಡುವದಕ್ಕೆ, ನಸ್ಯ ಏರಿಸುವ ದಕ್ಕೆ, ಚುಟ್ಟ–ಸಿಗರೇಟು ಸೇದುವದಕ್ಕೆ, ಮೋಜಿನಿಂದ ಮೆರೆಯಲಿಕ್ಕೆ ನಮಗೆ ಲಜ್ಜೆ ಎನ್ನಿಸುವದಿಲ್ಲ. ಪುಣ್ಯದ ಕೆಲಸ, ಸತ್ಕರ್ಮಗಳಿಗೆ ಮಾತ್ರ ನಾಚಿಕೊಳ್ಳು ತ್ತೇವೆ. ಕೆಟ್ಟ ಕೆಲಸಗಳ ಕಡೆಗೇ ಒಲವು ಹೆಚ್ಚಾಗುತ್ತಿದೆ. ಬಲು ಶೋಚನೀಯ ಪರಿಸ್ಥಿತಿಯೇ ಸರಿ !

ನಾನು ತಾಯಿಯ ಕಾಲುಬಿದ್ದು ಹೇಳಿದೆ, " ತಾಯಿ, ನಾನು ದೇವರ ಕೆಲಸಕ್ಕೆ ಸಿದ್ಧನಿದ್ದೇನೆ. ಯಾರೇ ನಗಲಿ– ಆಡಿಕೊಳ್ಳಲಿ ಹೆದರುವದಿಲ್ಲ. ಪುಂಡಲೀಕನು ತಾಯಿ ತಂದೆಗಳ ಸೇವೆ ಮಾಡಿ ದೊಡ್ಡವನಾದ. ದೇವರನ್ನು ಕಟ್ಟಿ ತಂದು ಕೀರ್ತಿಶಾಲಿಯಾದ. ನಿನ್ನ ಕೆಲಸವನ್ನು ಮಾಡಿ ನಿನ್ನ ಹಾಗೂ ದೇವರ ಮೆಚ್ಚುಗೆಗೆ ಪಾತ್ರನಾಗುತ್ತೇನೆ. ಶಾಲೆಯಲ್ಲಿ ಗುರುಗಳು ಸಿಟ್ಟಾದರೂ ಅಡ್ಡಿಯಿಲ್ಲ. ಹೊಡೆದರೂ ಚಿಂತೆಯಿಲ್ಲ. ನಿನಗೆ ನನ್ನ ಮೇಲೆ ಕೋಪವೇ ? ನಿನಗೆ ಕೆಡುಕೆನಿಸಿತೇ ? " ಎಂದು ನಾನು ದೈನ್ಯದಿಂದ ಕೇಳಿದೆ.

" ಇಲ್ಲ ನನ್ನ ಕಂದಾ, ನಾನೇಕೆ ನಿನ್ನ ಮೇಲೆ ಕೋಪಿಸಲಿ ? ನಿನ್ನ ಮೇಲೆ ನಾನು ಸಿಟ್ಟಾಗಲು ಸಾಧ್ಯವೇ ಶ್ಯಾಮಾ? " ತಾಯಿ ನುಡಿದಳು.

ಮಿತ್ರರೇ, ನಾನು ಮನೆಯಲ್ಲಿದ್ದಾಗಲೆಲ್ಲ ವಟಸಾವಿತ್ರೀ ವ್ರತದ ದಿವಸಗಳಲ್ಲಿ ಆಲದ ಮರಕ್ಕೆ ಪ್ರದಕ್ಷಿಣೆ ಹಾಕಲು ಹೋಗುತ್ತಿದ್ದೆ. ನನ್ನ ತಾಯಿಯ ಆ ದಿನದ ಹಿತೋಕ್ತಿಯನ್ನು ನಾನೆಂದಿಗೂ ಮರೆಯಲಾರೆ. " ಪಾಪ ವನ್ನು ಮಾಡುವಾಗ ನಾಚಿಕೆ ಬರಬೇಕು ! ಸತ್ಕಾರ್ಯಗಳಿಗೆ ಎಂದೂ ನಾಚಿ ಕೊಳ್ಳಬಾರದು. "

ರಾತ್ರಿ : ೨

## : : ಅಕ್ಕನ ಮದುವೆ

ಆಶ್ರಮವಾಸಿಗಳ ಸಾಯಂಕಾಲದ ಊಟವಾಯಿತು. ಸಾಯಂಕಾಲದ ಊಟದ ನಂತರ ಪ್ರಾರ್ಥನೆಯ ಸಮಯದವರೆಗೂ ಗೆಳೆಯರೆಲ್ಲ ತಿರುಗಾಡ ಲಿಕ್ಕೆ ಹೋಗುತ್ತಿದ್ದರು. ಆ ಊರಲ್ಲಿ 'ಬಹುಳಾ' ಎಂಬ ಹೊಳೆಯಿತ್ತು. ಹೊಳೆಯ ದಂಡೆಯ ಮೇಲೆ ಚಿಕ್ಕದೊಂದು ಈಶ್ವರನ ಗುಡಿ. ಗುಡಿಯ ಹತ್ತಿರ ಒಂದು ಪುರಾತನ ಅಶ್ವತ್ಥ ವೃಕ್ಷವಿತ್ತು. ಅದಕ್ಕೆ ಸುತ್ತಲೂ ವಿಶಾಲವಾದ ಕಟ್ಟೆ ಯನ್ನು ಕಟ್ಟಿದ್ದರು. ಊರ ಜನರೂ ಆಗಾಗ್ಗೆ ವಿಶ್ರಾಂತಿಗಾಗಿ ಅಲ್ಲಿ ಬಂದು ಕುಳಿತುಕೊಳ್ಳುತ್ತಿದ್ದರು.

ಶ್ಯಾಮನೂ ಗೋವಿಂದನೂ ತಿರುಗಾಡಲಿಕ್ಕೆ ಹೋಗಿದ್ದರು. ಅವರು ಗುಡ್ಡವನ್ನೇರಿ ಕುಳಿತುಕೊಂಡಿದ್ದರು. ಚಿಕ್ಕ ಗೋವಿಂದನು ಕೊಳಲನ್ನು ಇಂಪಾಗಿ ನುಡಿಸುತ್ತಿದ್ದನು. ಅವನು ತಮ್ಮ ಅಣ್ಣನ ಕೊಳಲನ್ನು ಜೊತೆಗೆ ತಂದಿದ್ದನು. ಅದನ್ನು ಅವನು ನುಡಿಸುತ್ತಿದ್ದನು. ಕವಿಹೃದಯದ ಶ್ಯಾಮನು ಅದನ್ನು ಆಲಿಸುತ್ತಿದ್ದನು. ಒಮ್ಮೆಲೆ ಕೊಳಲ ನಾದವನ್ನು ನಿಲ್ಲಿಸಿ ಗೋವಿಂದನು ಶ್ಯಾಮನ ಕಡೆಗೆ ನೋಡಿದನು. ಶ್ಯಾಮನ ಕಣ್ಣುಗಳು ಮುಚ್ಚಿದ್ದುವು. ಮುಖದ ಮೇಲೆ ಮಧುರ ಹಾಸ್ಯವು ಮಿನುಗುತ್ತಿತ್ತು.

"ಪ್ರಾರ್ಥನೆಯ ಸಮಯವಾಗುತ್ತ ಬಂತು. ಆಶ್ರಮಕ್ಕೆ ಹೋಗೋಣ ವಲ್ಲವೇ?" ಗೋವಿಂದ ಎಚ್ಚರಿಸಿದನು.

ಶ್ಯಾಮನು ಕಣ್ತೆರೆದು ನುಡಿದನು, "ಗೋವಿಂದಾ, ಕೊಳಲು ಒಂದು ದಿವ್ಯವಾದ ವಸ್ತುವಾಗಿದೆ. ಕೃಷ್ಣನ ಮುರಲಿಗೆ ಪಶು-ಪಕ್ಷಿಗಳೂ ಮುಗ್ಧವಾಗು ತ್ತಿದ್ದವು. ಕಲ್ಲುಬಂಡೆಗಳು ಕೂಡ ಕರಗಿ ಹೋಗುತ್ತಿದ್ದವೆಂದು ಹಿಂದಿನ ಕವಿ ಗಳು ವರ್ಣಿಸಿದ್ದಾರೆ. ಗೋವಿಂದಾ, ಚಿಕ್ಕವನಿದ್ದಾಗ ನಾನು ರಜೆಯ ದಿನ ಗಳಲ್ಲಿ ಮಳೆಗಾಲದಲ್ಲಿ ದನಗಾಹಿಗಳೊಡನೆ ಅಡವಿಗೆ ಹೋಗುತ್ತಿದ್ದೆನು. ದನ ಗಳು ಮೇಯುತ್ತಿದ್ದವು. ದನಗಾಹಿಗಳು ಕೊಳಲನ್ನೂದುತ್ತಿದ್ದರು. ನನ್ನ ಕಕ್ಕ ಒಳ್ಳೇ ಕೊಳಲುಗಳನ್ನು ತಯಾರಿಸುತ್ತಿದ್ದರು. ಚಿಕ್ಕ ಗಳದ ತುಂಡು! ಆದರೂ ಅದರಲ್ಲಿ ಎಂಥ ಅದ್ಭುತ ಸಾಮರ್ಥ್ಯ! ಇತ್ತೀಚೆಗೆ ಹಿತ್ತಾಳೆಯ ಕರ್ಕಶ ಪರ

ದೇಶದ ಕೊಳಲುಗಳು ಬಂದಿವೆ. ಎರಡು ರೂಪಾಯಿ ಬೆಲೆಯಂತೆ! ಆದರೆ ಹಳ್ಳಿಯ ಬಡವರಿಗೆ ಸುಲಭವೂ ಸುಂದರವೂ ಆದ ಗಳದಿಂದ ತಯಾರಿಸಲ್ಪಟ್ಟ ಕೊಳಲುಗಳೇ ಚೆನ್ನು. ಕೊಳಲು ನಮ್ಮ ರಾಷ್ಟ್ರೀಯ ವಾದ್ಯ. ಶ್ರೀಕೃಷ್ಣನು ನುಡಿಸಿದ ಆ ಕೊಳಲು ಏಳು ಲಕ್ಷ ಹಳ್ಳಿಗಳಲ್ಲಿ ಮನ್ನಣೆ ಪಡೆಯುತ್ತಿದೆ. ನುಡಿಸು ಇನ್ನೊಮ್ಮೆ ಆ ಹಾಡನ್ನು!"

"ಆಗಬಹುದು. ಆದರೆ ಅದೋ ಗಂಟೆ ಬಾರಿಸಿತು. ಪ್ರಾರ್ಥನೆಗೆ ಹೋಗೋಣ."

"ಹೌದು ಹೊತ್ತಾಯಿತು ನಡೆ. ಗೋವಿಂದಾ, ನಿನ್ನೆ ನಾನು ಬಹಳ ಹೊತ್ತು ಕಥೆ ಹೇಳಿದೆನಲ್ಲವೇ? ಆದರೆ ನಮ್ಮ ತಾಯಿಯ ಪೂರ್ವ ವೃತ್ತಾಂತ ವನ್ನು ಹೇಳಲಿಲ್ಲ. ಇಂದು ಬೇಗನೇ ಮುಗಿಸುವೆನು." ಶ್ಯಾಮನೆಂದನು.

"ನಿನ್ನೆ ನೀವು ೧೦–೧೨ ನಿಮಿಷ ಮಾತ್ರ ಹೇಳಿದಿರಿ. ನೀವು ಸುಮ್ಮನೆ ಹೊತ್ತಾಗುವದೆಂಬ ವಿಚಾರ ಮಾಡಬೇಡಿರಿ. ನಡುನಡುವೇ ವಿವಿಧ ವಿಚಾರ ಗಳೂ - ಕಲ್ಪನೆಗಳೂ ಬರುತ್ತವೆ. ಅವೆಲ್ಲವುಗಳಿಂದ ನಮಗೂ ಲಾಭವಾಗು ತ್ತದೆ. ಆ ಹೊತ್ತೇನು ವ್ಯರ್ಥ ಹೋಗುತ್ತದೆಯೇ?" ಗೋವಿಂದನೆಂದನು.

ಭರದಿಂದ ಮಾತನಾಡುತ್ತ ಇಬ್ಬರೂ ಆಶ್ರಮಕ್ಕೆ ಬಂದರು. ಪ್ರಾರ್ಥ ನೆಯ ಸಿದ್ಧತೆಯಾಗಿತ್ತು. ಎಲ್ಲರೂ ಸೇರಿದ್ದರು. ಊರಲ್ಲಿಯ ಕೆಲ ಜನರೂ ಬಂದಿದ್ದರು. ಮತ್ತೊಂದು ಗಂಟೆ ಬಾರಿಸಿತು. ಪ್ರಾರ್ಥನೆಗೆ ಆರಂಭವಾಯಿತು. ಸ್ಥಿತಪ್ರಜ್ಞನೆಂದೂ, ಸಮಾಧಿಸ್ಥನೆಂದೂ ಯಾರಿಗೆ ಅನ್ನಬೇಕು? ಸ್ಥಿತಪ್ರಜ್ಞನ ಲಕ್ಷಣಗಳೇನು? ಇವೇ ಮೊದಲಾದ ಭಗವದ್ಗೀತೆಯ ಶ್ಲೋಕಗಳಿಂದ ಆ ಪ್ರಾರ್ಥನೆ ಕೂಡಿದ್ದಾಗಿದ್ದಿತು. ಈ ಪ್ರಾರ್ಥನೆಯು ಈಗ ಅಂತರ್ರಾಷ್ಟ್ರೀಯ ಪ್ರಾರ್ಥನೆಯೇ ಆದಂತಾಗಿದೆ.

ಪ್ರಾರ್ಥನೆ ಮುಗಿಯುತ್ತಲೇ ಎಲ್ಲರೂ ಶ್ಯಾಮನ ಕತೆ ಕೇಳಲು ಆತುರ ರಾಗಿ ಕುಳಿತರು. ಶ್ಯಾಮನು ಕಥೆ ಹೇಳಲು ಪ್ರಾರಂಭಿಸಿದನು.

"ನಮ್ಮ ತಾಯಿಯ ಪ್ರೇಮವು ಎಲ್ಲ ಹುಡುಗರಿಗಿಂತ ನಮ್ಮ ಅಕ್ಕನ ಮೇಲೆ ತುಸು ಹೆಚ್ಚಾಗಿದ್ದಿತು. ನಮ್ಮ ಅಕ್ಕ ನಮ್ಮ ತಾಯಿಯ ಪ್ರತಿಮೂರ್ತಿ ಯಂತಿದ್ದಳು. ಅವಳು ದಯೆ, ಕ್ಷಮೆ, ಕಷ್ಟ ಮತ್ತು ಸಹನಶೀಲತೆಗಳ ಮೂರ್ತಿಯಾಗಿದ್ದಾಳೆ. ಅವಳು ಮೊದಲ ಬಾರಿ ಅತ್ತೆಯ ಮನೆಯ ವಾಸದಿಂದ

ಬಂದಿದ್ದಳು. ಆದರೆ ತವರುಮನೆಯಲ್ಲಿ ತನ್ನ ಕಷ್ಟವನ್ನು ಎಂದೂ ಆಡಿದವಳಲ್ಲ. ಮಗುವಿನ ಮೇಲೆ ಎಂದೂ ಕೈಮಾಡುತ್ತಿರಲಿಲ್ಲ. ಮಕ್ಕಳ ಹಟಮಾರಿತನದ ಬಗ್ಗೆ ಸಿಟ್ಟು ಬಂದರೆ ಮಗುವನ್ನು ದೂರ ಎತ್ತಿಕೊಂಡು ಹೋಗಿ ಸಮಾಧಾನ ಮಾಡಿಕೊಂಡು ಬರುತ್ತಿದ್ದಳು.

ನನ್ನ ಅಕ್ಕನ ಮದುವೆಯ ಕಾಲದ ಸಂಗತಿ. ಎಷ್ಟೋ ದಿವಸಗಳವರೆಗೆ ಅವಳ ಮದುವೆಯೇ ಕೂಡಿಬಂದಿರಲಿಲ್ಲ. ಅವಳಿಗೆ ಮಂಗಳವಿತ್ತು. ಮೇಲಾಗಿ ವರದಕ್ಷಿಣೆಯ ತಾಪತ್ರಯವೊಂದು. ನಮ್ಮ ಮನೆತನದ ಹೆಸರೇನೋ ದೊಡ್ಡ ದಾಗಿತ್ತು. ಆದರೆ " ಹೊರಗೆ ಝಗ-ಝಗ, ಒಳಗೆ ಭಗ-ಭಗ " ಎಂಬ ಸ್ಥಿತಿ ಯಾಗಿತ್ತು. ಮನೆತನದ ಹೆಸರಿಗೆ ತಕ್ಕಂತೆ ಠೀವಿ ಇಡಬೇಕೆಂದು ಕುಟುಂಬದ ಕೆಲವರು ಬಯಸುತ್ತಿದ್ದರು. ಸಾಲವು ದಿನದಿನಕ್ಕೂ ಏರುತ್ತಲೇ ಇತ್ತು. ನನ್ನ ಅಕ್ಕನನ್ನು ಹಲವಾರುಕಡೆಗೊಯ್ದು ತೋರಿಸಿದರು. ಕನ್ಯೆ ಮನಸ್ಸಿಗೆ ಬಂದರೆ ವರದಕ್ಷಿಣೆ ವಿಚಾರ ಅಡ್ಡ ಬಂದು ಬಿಡುತ್ತಿತ್ತು. ವರದಕ್ಷಿಣೆಯೆಂಬುದು ಹೆಣ್ಣು ಮಕ್ಕಳ ಕುತ್ತಿಗೆಗೆ ಬಿದ್ದ ಹಗ್ಗವೇ ಸರಿ. ಈ ವರದಕ್ಷಿಣೆಯ ತೊಂದರೆಯಿಂದ ಹುಡುಗಿಯರ ಬೆಳವಣಿಗೆ ಸರಿಯಾಗಿ ಆಗುವದಿಲ್ಲ. ಒಳಗೊಳಗೇ ಚಿಂತೆಯು ಅವರನ್ನು ದಹಿಸುತ್ತಿರುತ್ತದೆ. " ಹುಡುಗಿ ದೆವ್ವನಂತೆ ಬೆಳೆದು ಕುಳಿತಿದ್ದಾಳೆ. ತಾಯಿ-ತಂದೆಗೆ ಇಷ್ಟೂ ತಿಳಿಯಬಾರದೇ ? " ಎಂಬ ಕಠೋರ ಶಬ್ದಗಳು ಹುಡುಗೀಯರ ಕಿವಿಗೆ ಬಿದ್ದಾಗ ಅವರಿಗೆ ಜೀವನವೇ ಬೇಡವೆನ್ನಿಸುತ್ತದೆ. ನಮ್ಮ ದೇಶದ ತರುಣರಿಗೆ ನಾಚಿಕೆ ಬರಬೇಕು !

ಈ ವರದಕ್ಷಿಣೆಯ ಪದ್ಧತಿಯನ್ನು ಹೋಗಲಾಡಿಸಬೇಕೆಂದು ಇಪ್ಪತ್ತು ವರ್ಷಗಳ ಹಿಂದೆ ಸ್ನೇಹಲತೆ ಎಂಬಾಕೆ ಬಂಗಾಲದಲ್ಲಿ ಸುಟ್ಟುಕೊಂಡು ಸತ್ತಳು. ಆಗ ತರುಣರು ತುಸು ಗೋಣು ಕೊಡಹಿದ್ದರು, ಸಭೆಗಳನ್ನು ಸೇರಿಸಿದ್ದರು. ಠರಾವುಗಳನ್ನು ಮಾಡಿದ್ದರು. ಆದರೆ ಮತ್ತೆ ಎಲ್ಲವೂ ತಣ್ಣಗಾಗಿ ಹೋಗಿದೆ ! ವರದಕ್ಷಿಣೆ ಬೇಕು, ಶಿಕ್ಷಣದ ವೆಚ್ಚಕ್ಕೆ ಹಣ ಬೇಕು, ಉದ್ಯೋಗಕ್ಕೆ ಹಣ ಬೇಕು, ಉಂಗುರ ಬೇಕು, ಗಡಿಯಾರ ಬೇಕು ಏನೆಲ್ಲವೂ ಬೇಕು. ಕನ್ಯೆಯಿಂದ ಹಣವನ್ನು ಪಡೆಯುವದಾಗಲೀ ವರನಿಂದ ಹಣ ಪಡೆಯುವದಾಗಲೀ ಎರಡೂ ನಿಂದ್ಯವಾದವುಗಳೇ. ಆಕಳನ್ನು ಸಹ ಮಾರಕೂಡದೆಂದು ನಮ್ಮ ಉದಾತ್ತ ಧರ್ಮವು ಹೇಳುತ್ತದೆ. ಆದರೆ ಅದೇ ಧರ್ಮದ ಅನುಯಾಯಿಗಳು ಹುಡುಗ-

ಹುಡುಗೆಯರನ್ನೂ ಮಾರುತ್ತಾರೆ! ಇದಕ್ಕಿಂತ ಹೆಚ್ಚಿನ ಅಧರ್ಮವಾವುದು? ಬಾಯಿಯಿಂದ ಧರ್ಮದ ಬಗ್ಗೆ ದೊಡ್ಡ ದೊಡ್ಡ ಮಾತು ಆಡುತ್ತಾರೆ ಕೃತಿ ಯಿಂದ ಮಾತ್ರ ಧರ್ಮದ ಅಪಹಾಸ್ಯವೇ ನಡೆದಿರುತ್ತದೆ. ಏನದು ಅಸಹ್ಯತನ? ಉದಾರಹೃದಯಿಗಳಾಗಿರಬೇಕಾದಂಥ ತರುಣರು ಕೂಡ ನರಪೇತರೇ ಆಗಿ ದ್ದಾರೆ. ನಿಂದ್ಯವಾದ ಸಂಗತಿಗಳ ವಿರುದ್ಧ ಬಂಡೆಬ್ಬಿಸುವ ಧೈರ್ಯವು ನಮ್ಮ ಜನಕ್ಕೆ ಬರುವವರೆಗೆ ದೇಶದ ಉದ್ಧಾರವಾಗಲಾರದು. ನಮ್ಮ ಸಹೋದರಿ ಯರ ಜೀವನಕ್ಕೆ ಕಂಟಕಪ್ರಾಯವಾದಂಥ ಅನಿಷ್ಟ ರೂಢಿಗಳನ್ನು ಕಿತ್ತೊಗೆ ಯಲು ಸಾಧ್ಯವಿಲ್ಲದವರಿಗೆ ಸ್ವಾತಂತ್ರ್ಯಪ್ರಿಯರೆಂದು ಕರೆವುದಾದರೂ ಹೇಗೆ? ಹೋಗಲಿ! ನಾನೀಗ ಭಾವನೆಗಳ ಸುಳಿಯಲ್ಲಿ ಸಿಕ್ಕು ಎಲ್ಲಿಗೋ ತೇಲುತ್ತ ಹೊರಟೆ.

"ನೀವು ಯಾವ ಕಡೆಗೆ ಎಳೆದುಕೊಂಡು ಹೋದರೂ ನಮಗೆ ಜೇನು ತುಪ್ಪವೇ ದೊರೆಯುವದು. ದಾರಿ ತಪ್ಪಿ ಅಡವಿಗೆ ಕೊಂಡೊಯ್ದರೂ ಹೂ ಗಳನ್ನೇ ತೋರಿಸುವಿರಿ. ನೀವು ಮಾತನಾಡುತ್ತ ಇದ್ದಿರೆಂದರೆ ಹಾವುಗಾರನ ಮುರಲಿಯ ನಾದಕ್ಕೆ ನಾಗರಹಾವು ಮೈಮರೆಯುವಂತೆ ನಮ್ಮ ಅಂತರಾತ್ಮವೂ ಮೈಮರೆತು ಬಿಡುತ್ತದೆ." ನಾಮದೇವನೆಂದನು.

"ನೀವು ಏನು ಹೇಳಿದರೂ ಮಧುರವಾಗಿರುತ್ತದೆ. ನೀವು ಅಲ್ಲವೇ ಆ ಶಾಹೂನಗರವಾಸೀ ನಾಟಕ ಕಂಪನಿಯೊಳಗಿನ ಪ್ರಖ್ಯಾತ ನಟ ಗಣಪತ ರಾಯರ ಕಥೆ ಹೇಳಿದವರು? ಹೆಮ್ಲೆಟ್ ನಾಟಕವೆಂದು ಜಾಹೀರು ಪಡಿಸಿರು ವದು, ಗಣಪತರಾಯರು ಬಂದು ತುಕಾರಾಮ ನಾಟಕದೊಳಗಿನ ಸಂಭಾಷಣೆ ನಡೆಸುವದು. ಪ್ರೇಕ್ಷಕರು 'ಆಗಲಿ – ಅದೇ ಆಗಬಹುದು' ಎನ್ನುತ್ತಿದ್ದರು. ಗಣಪತರಾಯ ಮಾಡಿದ್ದೇ ಚಂದ. ಹಾಗೇ ನೀವೂ ನಿಮ್ಮ ಕತೆಯನ್ನಾದರೂ ಹೇಳಿರಿ, ಪ್ರವಚನವನ್ನಾದರೂ ಹೇಳಿರಿ ನಮಗೆ ಆನಂದವೇ ಆಗುವದು." ಗೋವಿಂದನೆಂದನು.

"ಆಮೇಲೆ ಲಗ್ನದ ವಿಚಾರವೇನಾಯಿತು?" ರಾಮು ಕೇಳಿದನು.

ಶ್ಯಾಮನೆಂದನು, "ರಾಮನ ಅಪೇಕ್ಷೆಯಂತೆ ಆ ವಿಷಯವನ್ನೇ ಮುಂದು ವರಿಸುತ್ತೇನೆ ಕೇಳಿರಿ. ಬಹಳ ಕಡೆ ತಿರುಗಾಡಿದ ಬಳಿಕ ಲಗ್ನವೇನೋ ಕೂಡಿ ಬಂದಿತು. ಲಗ್ನವು ರತ್ನಾಗಿರಿಯಲ್ಲಿ ಆಗತಕ್ಕದ್ದಿತ್ತು. ನಾವೆಲ್ಲರೂ ಪಾಲಗಡ

ದಿಂದ ರತ್ನಾಗಿರಿಗೆ ಹೋಗುವದಿತ್ತು. ಆಗ ನಾನು ಆರೇಳು ವರ್ಷದವನಿದ್ದಿರಬಹುದು. ನನಗೇನು ಜ್ಞಾಪಕಕ್ಕೆ ಬರುವದಿಲ್ಲ. ತಾಯಿಯೇ ಆ ವಿಷಯವನ್ನು ಹೇಳುತ್ತಿದ್ದಳು. ನನಗೆ ಆ ವಿಶಾಲ ಸಮುದ್ರ, ಎತ್ತಿನ ಬಂಡಿಗಳು, ಅವೆಲ್ಲ ನೆನಪಾಗುತ್ತವೆ ಮನೆಯ ಹಾಗು ಊರಲ್ಲಿಯ ಐವತ್ತು-ಅರವತ್ತು ಜನರು ಹೊರಟಿದ್ದರು. ಜೊತೆಗೆ ಆಳುಮಕ್ಕಳೂ ಇದ್ದರು. ಎತ್ತಿನ ಬಂಡಿಗಳು ಹರ್ಣೆ ಬಂದರಕ್ಕೆ ಬಂದು ಮುಟ್ಟಿದವು. ಆಗ ಹಡಗಗಳ ಸ್ಥಿತಿ ಶೋಚನೀಯವಾಗಿತ್ತು. ಹರ್ಣೆ ಬಂದರಕ್ಕೆ ನಿಲ್ವಾಣವಿದ್ದಿಲ್ಲ. ದೋಣಿ ಸಮುದ್ರವಲ್ಲಿ ಟೊಂಕಮಟ ನೀರಿನಲ್ಲಿ ನಿಲ್ಲುತ್ತಿತ್ತು. ಜನ ಕೂಲಿಯಾಳುಗಳ ಹೆಗಲ ಮೇಲೆ ಕುಳಿತುಕೊಂಡು ಹೋಗಿ ದೋಣಿಯನ್ನೇರುತ್ತಿದ್ದರು. ಆ ಮೇಲೆ ದೋಣಿ ಹಡಗಕ್ಕೆ ಜನರನ್ನು ಮುಟ್ಟಿಸುತ್ತಿತ್ತು.

ಹರ್ಣೆಬಂದರವು ತುಸು ತೊಂದರೆಯುಳ್ಳದ್ದಾಗಿದ್ದರೂ ಅಲ್ಲಿನ ನೋಟವು ಬಲು ರಮ್ಯವಾಗಿತ್ತು. ಆ ಬಂದರದ ಮೊದಲಿನ ಹೆಸರು ಸುವರ್ಣದುರ್ಗ ಆಂಗ್ಲರು ಚಂದ್ರಸೇನ ರಾಜನನ್ನು ಅಲ್ಲಿಂದ ತಳ್ಳಿ ಹಾಕಿದರೆಂದು ಅಲ್ಲಿಯ ಹಳ್ಳಿಯ ಹಾಡುಗಳಿಂದ ತಿಳಿದುಬರುತ್ತದೆ.

ಹರ್ಣೆಯ ಸಮುದ್ರ ತೀರದ ಮೇಲೆ ದಟ್ಟವಾದ ತೆಂಗಿನ ತೋಟಗಳಿವೆ. ಎದುರಿನಲ್ಲಿಯೇ ಉಕ್ಕುವ ಸಮುದ್ರವನ್ನು ಕಂಡು ಆ ತೆಂಗಿನ ಮರಗಳು ತಮ್ಮ ತಲೆಯನ್ನು ಒಂದೇ ಸವನೆ ಅಲ್ಲಾಡಿಸುತ್ತಿರುತ್ತವೆ. ಸಮುದ್ರದ ಭಯಂಕರವಾದ ಗರ್ಜನೆಯು ಆರು ಹರದಾರಿಗಳ ವರೆಗೂ ಕೇಳಿಸುತ್ತಿರುತ್ತದೆ. ಹರ್ಣೆಗೆ ದೀಪಗೃಹವಿದೆ. ಎತ್ತರವಾದ ಗುಡ್ಡದ ಮೇಲೆ ತಿರುಗುವ ಕೆಂಪು ದೀಪವಿದೆ. ಸಂತ ಜನರೂ ಅದೇ ರೀತಿ ಉನ್ನತವಾದ ಜೀವನದ ಮೇಲೆ ನಿಂತುಕೊಂಡು ಜಗತ್ತಿಗೆ ಮೌನವಾಗಿ ಮಾರ್ಗದರ್ಶನ ಮಾಡುತ್ತಿರುತ್ತಾರೆ. ಸಂತರು ಭವ ಸಾಗರದಲ್ಲಿನ ದೀಪಸ್ತಂಭಗಳೇ!

“ಸಂತಕೃಪೆಯೆಂಬ ಈ ದೀಪ! ಮಾಡುವದು ಸಾಧಕರನ್ನು ನಿಷ್ಪಾಪ!”

ಕೂಡಿದ ಜನರಲ್ಲೊಬ್ಬ ಈ ಅಭಂಗವನ್ನು ನುಡಿದ. ಹಳ್ಳಿಯ ದಾಸರೂ ವಾರಕರೀ ಜನರೂ ಈ ಬಗೆಯ ಎಷ್ಟೋ ಅಭಂಗಗಳನ್ನು ಹೇಳುತ್ತಿರುತ್ತಾರೆ. ಅವರಿಗೆ ಕಂಠಪಾಠವಿದ್ದಷ್ಟು ಸುಶಿಕ್ಷಿತರಾದ ನಮಗೆ ಇರುವದಿಲ್ಲ. ಸುಶಿಕ್ಷಿತರಿಗೆ ಆಂಗ್ಲ ಕವಿಗಳ ವಚನ, ಪದ್ಯ ಗೊತ್ತು. ಆದರೆ ಪುರಂದರದಾಸರ ಪದಗಳನ್ನೂ,

ಬಸವಣ್ಣನವರ ವಚನಗಳನ್ನೂ, ತುಕಾರಾಮರ ಅಭಂಗಗಳನ್ನೂ ಅರಿಯರು.

ಶ್ಯಾಮನೆಂದನು, "ರಾತ್ರಿಯ ಹೊತ್ತು ಆ ಕೆಂಪು ದೀಪವು ಎಷ್ಟು ಸುಂದರವಾಗಿ ಕಾಣುತ್ತದೆ. ಆಕಾಶದಲ್ಲಿ ಚಂದ್ರನಿರಬೇಕು, ಸಮುದ್ರಕ್ಕೆ ಪ್ರೇಮದ ಭರತಿ ಬಂದಿರಬೇಕು, ಆ ಸಮಯದಲ್ಲಿ ಸಮುದ್ರದ ವಕ್ಷಸ್ಥಳದ ಮೇಲೆ ನೂರಾರು ಚಂದ್ರರು ಕುಣಿಯುತ್ತಿರುವಂತೆ ಕಾಣುತ್ತದೆ. ತನ್ನ ಮುತ್ತಿನಂಥ ಮುದ್ದು ಮಕ್ಕಳ ನೂರಾರು ಫೋಟೋಗಳನ್ನೇ ಸಮುದ್ರವು ತೆಗೆದುಕೊಳ್ಳುತ್ತಿದೆಯೋ ಎಂದು ಭಾಸವಾಗುತ್ತದೆ."

"ಚಂದ್ರನು ಸಮುದ್ರದ ಮಗನೇ?" ಎಂದು ಒಬ್ಬ ಚಿಕ್ಕ ಹುಡುಗನು ಕೇಳಿದನು.

"ಹೌದು, ಸಮುದ್ರ ಮಂಥನದ ಕಾಲಕ್ಕೆ ಹದಿನಾಲ್ಕು ರತ್ನಗಳ ಜೊತೆಗೆ ಹೊರಬಿದ್ದನೆಂದು ಕಥೆಯಿದೆ." ನಾಮದೇವನೇ ಅದಕ್ಕೆ ಉತ್ತರವಿತ್ತನು.

ಶ್ಯಾಮನು ಇನ್ನೂ ವರ್ಣನೆಯ ಭರದಲ್ಲಿಯೇ ಇದ್ದನು. "ತಮ್ಮ ಮಕ್ಕಳ ಮೈಗೆ ತೊಡಿಸುವುದಕ್ಕಾಗಿ ಸಮುದ್ರವು ಬಗೆಬಗೆಯ ವಸ್ತ್ರ-ಒಡವೆಗಳನ್ನು ತಂದಿದೆಯೋ ಎಂದೆನಿಸುತ್ತದೆ. ಅಥವಾ ಚಂದ್ರನೇ ನೂರಾರು ರೂಪುಗಳನ್ನು ತಾಳಿ ಸಮುದ್ರದ ತೆರೆಗಳೊಡನೆ ಸರಸವಾಡಲು ಇಳಿದು ಬಂದಿದ್ದಾನೋ ಎಂದೆನಿಸುತ್ತದೆ. ಎಲ್ಲವೂ ತಮಾಷೆಯಾಗಿರುತ್ತದೆ. ಗಾಳಿ ಬೀಸುತ್ತಿರುತ್ತದೆ, ತೆಂಗಿನ ಮರಗಳು ತೂಗಾಡುತ್ತಿರುತ್ತವೆ, ತೆರೆಗಳು ಅಪ್ಪಳಿಸುತ್ತಿರುತ್ತವೆ, ದೀಪವು ಬೆಳಗುತ್ತಿರುತ್ತದೆ, ಚಂದ್ರನು ಸಡಗರದಿಂದ ತಿರುಗುತ್ತಿರುತ್ತಾನೆ, ಮತ್ತು ದೋಣಿಗಳೂ ಸಂಚರಿಸುತ್ತವೆ. ಅಂಬಿಗರ ಹಾಗೂ ಕೂಲಿಕಾರರ ಕೂಗಾಟ-ಚೀರಾಟ ನಡೆದಿರುತ್ತವೆ. ಯಾರದೋ ಸಾಮಾನು ಕಳೆಯುವದು, ಯಾರದೋ ಸಾಮಾನು ಬದಲಾಗುವದು, ಯಾರಿಗೆ ದೋಣಿ ತಾಕುವದು, ಯಾರುಯಾರೋ ವಾಂತಿ ಮಾಡಿಕೊಳ್ಳುವದು, ಯಾರದೋ ಮೈಮೇಲೆ ಸಿಡಿಯುವದು, ಗಲಾಟೆಯೇ ಗಲಾಟೆ! ಹಿಂದುಸ್ತಾನದಲ್ಲಿಯ ಎಲ್ಲ ಅವ್ಯವಸ್ಥೆ, ಗಲಾಟೆ, ಉದಾಸೀನತೆ ಮತ್ತು ಸಹಾನುಭೂತಿ ಶೂನ್ಯತೆಯನ್ನು ಇಲ್ಲಿ ಕಾಣಬಹುದು.

ನಾವು ದೋಣಿಯನ್ನೇರಿದೆವು. ದೋಣಿ ಸಾಗಿತು. ಅಂಬಿಗರು ಹುಟ್ಟು ಹಾಕಿಸತೊಡಗಿದರು. 'ಚುಬುಕ್-ಚುಬುಕ್' ಎಂದು ನೀರು ಸದ್ದು ಮಾಡುತ್ತಿತ್ತು.

ಗಾಳಿಯಿಂದಾಗಿ ನೀರಿನ ತುಂತುರ ಹನಿಗಳು ಮೈಮೇಲೆ ಸಿಡಿಯುತ್ತಿದ್ದವು. "ಭಲೆ, ಭಲೆ, ಇನ್ನಿಷ್ಟು ವೇಗವಾಗಲಿ" ಎಂದು ಅಂಬಿಗರು ಹೇಳಿಕೊಳ್ಳುತ್ತಿದ್ದರು. ಡೋಣಿಯಲ್ಲಿ ಜನ ಕಿಕ್ಕಿರಿದು ಕುಳಿತಿದ್ದರು. ನನ್ನ ತಾಯಿ ಮಗುವನ್ನೆತ್ತಿಕೊಂಡು ಕುಳಿತಿದ್ದಳು. ನನ್ನ ಅತ್ತೆಯೂ ತನ್ನ ಮಗುವನ್ನು ತೆಗೆದುಕೊಂಡು ಕುಳಿತಿದ್ದಳು. ಅತ್ತೆ ಕಾಹಿಲೆಯವಳಿದ್ದುದರಿಂದ ಮೈಮೇಲೆ ಹಾಲಿರಲಿಲ್ಲ. ಮಗುವಿಗೆ ಹಸುವಿನ ಹಾಲನ್ನೇ ಹಾಕಬೇಕಾಗುತ್ತಿತ್ತು. ಮೇಲಿನ ಹಾಲಿನಿಂದ ಮಗುವಿಗೆ ಸಮಾಧಾನವೆನ್ನಿಸುವದಿಲ್ಲ. ತಾಯಹಾಲಿನ ರುಚಿಯೇ ಬೇರೆ. ಅದು ಬರಿ ಹಾಲು ಆಗದೆ, ಪ್ರೇಮ ಹಾಗೂ ವಾತ್ಸಲ್ಯದಿಂದ ತುಂಬಿದ ಅಮೃತವಾಗಿರುತ್ತದೆ. ಮಗುವಿನ ಬೆಳವಣಿಗೆಗೆ ಅದುವೇ ಉತ್ತಮವಾದುದು. ಯಾವ ಕೊಡುಗೆಯಲ್ಲಿ ಪ್ರೇಮವಿದೆಯೋ ಅಂಥ ಕೊಡುಗೆಯನ್ನು ಕೊಡುವವನಿಗೂ ಪಡೆಯುವವನಿಗೂ ಕೂಡಿಯೇ ಪರಮ ಸುಖವಿರುತ್ತದೆ.

ದಂಡೆಯ ಮೇಲಿನ ಎತ್ತಿನ ಬಂಡಿಗಳ ದುಡುದುಡು ಶಬ್ದ, ಎತ್ತಿನ ಕೊರಳೊಳಗಿನ ಗಂಟೆಗಳ 'ಗೊಳ್-ಗೊಳ್' ಶಬ್ದ ದೂರದಿಂದಲೇ ಕೇಳಿಸುತ್ತಿತ್ತು. ಬಂದರದ ಮೇಲಣ ದೀಪಗಳ ಮಿಣಿಮಿಣಿ ಪ್ರಕಾಶವು ಮಸುಕು ಮಸುಕಾಗಿ ಕಾಣಿಸುತ್ತಿತ್ತು. ದೂರದಲ್ಲಿಸಿಂದ ಹಡಗ ಕಾಣಿಸುತ್ತಿತ್ತು. ಅದರ ಮೇಲಿನ ದೀಪವೂ ಕಾಣತೊಡಗಿತ್ತು. ಆದರೂ ಹಡಗವನ್ನು ತಲುಪಲು ಇನ್ನೂ ಅರ್ಧ ಗಂಟೆಯಾದರೂ ಹಿಡಿಯಬಹುದಾಗಿತ್ತು.

"ಅಲ್ಲಾ, ಹೀಗೇನೆಂದು ಕಚ್ಚುವಿ? ಕುಡಿಯಲಿಕ್ಕೇನಿದೆ ಅದರಲ್ಲಿ ಮಣ್ಣು?" ಎಂದು ಅತ್ತೆ ತನ್ನ ಕೂಸಿನ ಮೇಲೆ ಗದರಿದಳು. ಆ ಮಗು ಇನ್ನಷ್ಟು ಜೋರಿನಿಂದ ಅಳತೊಡಗಿತು. ಏನು ಮಾಡಿದರೂ ಸುಮ್ಮನಾಗಲಿಲ್ಲ. ಡೋಣಿಯಲ್ಲಿ ಅತ್ತಿತ್ತ ಸರಿಯದಷ್ಟು ದಟ್ಟಣೆಯಿತ್ತು. ತನ್ನ ಸುತ್ತಲೂ ಜನರಿದ್ದಾಗ ಮಗು ಅಳಹತ್ತಿದ್ದರೆ ತಾಯಿಗೆ ಬಹಳ ಕೆಡಕೆನ್ನಿಸುತ್ತದೆ. ತನ್ನ ಮಗು ನಕ್ಕು ನಲಿಯಬೇಕು, ಬಾಲಲೀಲೆಯಿಂದ ಎಲ್ಲರನ್ನೂ ಮೆಚ್ಚಿಸಬೇಕು, ಎಲ್ಲರೂ ಅದನ್ನೆತ್ತಿಕೊಂಡು ಮುದ್ದಾಡಬೇಕು ಎಂಬುದೇ ತಾಯಿಯ ಅಭಿಲಾಷೆಯಾಗಿರುತ್ತದೆ. ಅದರಿಂದಲೇ ತಾಯಿಗೆ ಪರಮಾನಂದವಾಗುವದು. ಕೃತಾರ್ಥತೆ ಎನ್ನಿಸುವದು. ಹೀಗಿರಲು ಮಗು ಅಳಹತ್ತಿದರೆ ಎಷ್ಟು ಕೆಡಕೆನ್ನಿಸಲಿಕ್ಕಿಲ್ಲ? ನಗುವ ಮಗುವನ್ನು ಎಲ್ಲರೂ ಎತ್ತಿಕೊಳ್ಳುತ್ತಾರೆ. ಅಳುವವರನ್ನು

ಯಾರು ಕೇಳಬೇಕು ? ನಿಜವಾಗಿ ನೋಡಿದರೆ ಅಳುವ ಮಗುವನ್ನೆತ್ತಿಕೊಳ್ಳು ವದೇ ಅವಶ್ಯವಾಗಿರುತ್ತದೆ. ಆದರೆ ಅದನ್ನೇ ಎಲ್ಲರೂ ತಿರಸ್ಕರಿಸುತ್ತಾರೆ. ಜಗತ್ತಿನಲ್ಲಿ ಎಲ್ಲರೂ ಸುಖದ ಸಂಗಾತಿಗಳೇ ! ದುಃಖದ ಸಹವಾಸ ಯಾರೂ ಬಯಸುವದಿಲ್ಲ. ಹೀನ–ದರಿದ್ರರನ್ನು, ಪತಿತರನ್ನು ಮೊದಲಾಗಿ ಸಹಾನು ಭೂತಿಗೆ ಯೋಗ್ಯರಾದವರನ್ನು ಕೇಳುವವರೇ ಇರುವದಿಲ್ಲ.

" ದೀನಕೋ ದಯಾಲು ದಾನಿ ದೂಸರಾ ನ ಕೋಯೀ "

ಮಗು ಅಳಹತ್ತಿದರೆ ಕಿರಿಕಿರಿ ಎನಿಸುತ್ತದೆ. ' ಏನಾಗಿದ್ದೀತು - ಕೇಸರೆ ಬ್ಬಿಸಲಿಕ್ಕೆ ಈ ಪೋರನಿಗೆ. ' ' ಯಾವಾಗಲೂ ಕರ್ಕಶ ರಾಗವೇ ' ಎಂದು ಮೊದಲಾಗಿ ಜನರಾಡುವದನ್ನು ತಾಯಿ ಕೇಳಿದರೆ ಅವಳಿಗೆ ತುಂಬಾ ಕಳವಳ ವಾಗುತ್ತದೆ. ಮಗುವಿನೊಂದಿಗೆ ತಾನು ಪೃಥ್ವಿಯ ಹೊಟ್ಟೆಯಲ್ಲಿ ಅಡಗಿಬಿಡ ಬೇಕೆನ್ನಿಸುತ್ತದೆ.

ನನ್ನ ಅತ್ತೆಗೂ ಆ ಕಾಲಕ್ಕೆ ಹಾಗೇ ಅನ್ನಿಸಿರಬೇಕು, ಮಗು ಹಟ ನಿಲ್ಲಿಸಲಿಲ್ಲ. ನನ್ನ ತಾಯಿ ಹತ್ತರವೇ ಇದ್ದಳು. ಅವಳು ತನ್ನ ಮಗುವನ್ನು ಆಳಿನ ಕೈಯಲ್ಲಿ ಕೊಟ್ಟು ಅತ್ತೆಗೆ ಹೇಳಿದಳು, " ನನ್ನ ಬಳಿಗೆ ಅದನ್ನು ಕೊಡಿರಿ ನಾನು ಅದನ್ನು ಕರೆದುಕೊಳ್ಳುತ್ತೇನೆ. " ತಾಯಿಯು ಪ್ರೇಮದಿಂದ ಆ ಮಗು ವನ್ನು ಎತ್ತಿಕೊಂಡು ಮೊಲೆಯುಣಿಸಿದಳು. ಆ ಮಗು ನನ್ನ ತಾಯಿಯ ಸ್ತನ ಪಾನವನ್ನು ಹೊಟ್ಟೆತುಂಬ ಮಾಡಿತು. ನಕ್ಕು ನಲಿದಾಡಿತು.

ತಾಯಿಯು ಆ ಮದುವೆಯಲ್ಲಿ ಸ್ವಂತ ಮಗುವನ್ನು ಅಳಿಸಿಯಾದರೂ ಅತ್ತೆಯ ಮಗುವನ್ನು ಸಮಾಧಾನಪಡಿಸುತ್ತಿದ್ದಳು. ಮಕ್ಕಳಿಗೇನು ಮಾತೆಯ ಮಮತೆಯ ಹಾಲು ದೊರೆತರೆ ಸಾಕು, ಅವರು ರಾಜರೇ ! ಅತ್ತಿಗೆಯ ಕೂಸು ಅಳಹತ್ತಿದರೆ ಕೂಡಲೇ ತಾಯಿ ಕರೆದುಕೊಳ್ಳುತ್ತಿದ್ದಳು. ನನ್ನ ತಾಯಿಗೆ ಆ ಬಗ್ಗೆ ಸ್ವಲ್ಪವೂ ಬೇಸರವಾಗುತ್ತಿರಲಿಲ್ಲ; ಪ್ರತಿಯಾಗಿ ಪರಮ ಸಂತೋಷವೇ ಆಗುತ್ತಿದ್ದಿತು- ಸಾರ್ಥಕತೆ ಎನ್ನಿಸುತ್ತಿತ್ತು.

ನನ್ನ ತಾಯಿಯು ಈ ಕಥೆಯನ್ನು ಹೇಳುವಾಗ ಅನ್ನುತ್ತಿದ್ದಳು, 'ಎಲೋ ಶ್ಯಾಮ, ಹತ್ತಿರ ಇದ್ದುದನ್ನು ಎರಡನೆಯವರಿಗೆ ಕೊಡಬೇಕು. ಎರಡನೆಯವರ ಕಣ್ಣೀರನ್ನು ನಿಲ್ಲಿಸಬೇಕು. ಅವರನ್ನು ನಗಿಸಬೇಕು. ಸುಖಪಡಿಸಬೇಕು. ಇದರಂಥ ಆನಂದ ಬೇರೊಂದಿಲ್ಲ. ಸ್ವಂತ ಮಗುವನ್ನೇನು ಯಾರಾದರೂ

ಮುದ್ದಾಡುವರು. ಹೆರವರ ಮಕ್ಕಳನ್ನು ಅಷ್ಟೇ ಅಕ್ಕರೆಯಿಂದ ಮುದ್ದಾಡುವದರಲ್ಲಿಯೇ ಧನ್ಯತೆ ಇದೆ!

ರಾತ್ರಿ : ೪

# ಮೂಕ ಹೂ

" ಬಾರಕೂ, ರೊಟ್ಟೀ ತಿಂದಾಗಲಿಲ್ಲವೇ ? ಆಶ್ರಮಕ್ಕೆ ಬರುವಿಯಷ್ಟೇ ?" ಶಿವಣ್ಣಾ ಕೇಳಿದ.

" ಅವ್ವಾ, ಬೇಗ ನೀಡು. ಅಲ್ಲಿ ಕಥೆ ಆರಂಭವಾಗುವದು. " ಬಾರಕೂ ತನ್ನ ತಾಯಿಗೆ ಅವಸರ ಪಡಿಸಿದ.

" ದಿನಾಲು ಹೋಗಿ ಎಂಥ ಕಥೆ ಕೇಳುತ್ತೀರಿ? ದಿನವೂ ಅವಸರವೇ ? ಹೋಗು, ಉಪಾಸವೇ ಹೋಗು. ಬೇಕಾದರೆ ಬಂದ ಮೇಲೆ ಉಣ್ಣು " ಎಂದಳು ಬಾರಕೂನ ತಾಯಿ.

ಬಾರಕೂ ಹೊರಟೇ ಬಿಟ್ಟ. ರೊಟ್ಟಿಗಿಂತ ಕಥೆಗಳೇ ಅವನಿಗೆ ಪ್ರಿಯಕರವಾಗಿದ್ದವು. ಹೊಟ್ಟೆಗೆ ರೊಟ್ಟಿ ಬೇಕಾಗಿತ್ತು. ಆದರೆ ಹೃದಯಕ್ಕೆ ಶ್ಯಾಮನ ಕಥೆಗಳೇ ಬೇಕಾಗಿದ್ದವು.

ಬಾರಕೂ ಮತ್ತು ಶಿವು ಆತುರದಿಂದ ಹೊರಟರು. ದಾರಿಯಲ್ಲಿ ಎಡವಿ ಬಿದ್ದೇವೆಂಬ ಪರಿವೆಯೂ ಇರಲಿಲ್ಲ. ' ಕೊಳಲ ನುಡಿಸು, ಕಿವಿಯೊಳೆನಗೆ ಚೆಲುವ ಮೋಹನಾ ' ಆಶ್ರಮವಾಸಿಗಳು ಹೇಳುವ ಪದ್ಯ ದೂರದಿಂದ ಕೇಳಿಸುತ್ತಿತ್ತು. ಕಥೆ ಆರಂಭವಾಗುವ ಹೊತ್ತಿಗೆ ಸರಿಯಾಗಿ ಬಾರಕೂ ಮತ್ತು ಶಿವು ಅಲ್ಲಿ ಹೋಗಿ ತಲುಪಿದರು.

ಶ್ಯಾಮನು ಕಥೆ ಆರಂಭಿಸಿದನು :

ನಾನು ಇಂದು ಹೂವಿನ ಕಥೆಯನ್ನು ಹೇಳತಕ್ಕವನಿದ್ದೇನೆ. ಚಿಕ್ಕಂದಿನಲ್ಲಿ ನನಗೆ ಹೂಗಳೆಂದರೆ ಪ್ರಾಣ. ಹೂವಿನಂಥ ಸುಂದರ ಹಾಗು ಪವಿತ್ರ ವಸ್ತು ಜಗತ್ತಿನಲ್ಲಿ ಬೇರೊಂದು ಇರಲಿಕ್ಕಿಲ್ಲ. ಭೂಮಿಯ ಮೇಲಿನ ಹೂಗಳೂ ಆಕಾಶದ ಮೇಲಿನ ನಕ್ಷತ್ರಗಳೂ ನನ್ನ ಜೀವನದ ಮೇಲೆ ಅನಂತ ಪರಿಣಾಮ

ವನ್ನುಂಟು ಮಾಡಿವೆ. ನನ್ನ ತಂದೆಯವರಿಗೂ ಹೂವಿನ ಹುಚ್ಚು ಬಹಳ. ಪೂಜೆಗೆ ಬುಟ್ಟಿತುಂಬ ಹೂ ಬೇಕು. ಜಾಜಿ, ಮಲ್ಲಿಗೆ, ಗುಲಾಬಿ, ಕೊರಟಿಗೆ ಮೊದಲಾದ ಹೂವಿನ ಗಿಡಗಳು ಹೊಲದ ದಂಡೆಯಲ್ಲಿದ್ದವು. ನನ್ನ ತಂದೆ ಗಣಪತಿಯ ಉಪಾಸಕರು. ಪ್ರತಿದಿವಸ ಇಪ್ಪತ್ತೊಂದು ಕರಿಕೆಯ ಕಟ್ಟನ್ನು ಗಣಪತಿಗೆ ಏರಿಸುತ್ತಿದ್ದರು. ಬಾಡಿದ, ಕೊಳೆಯಾದ ಕರ್ಕಿಯನ್ನು ಎಂದೂ ಅವರು ಏರಿಸಲಿಲ್ಲ ದೂರ ಹೋಗಿಯಾದರೂ ಹಚ್ಚ ಹಸುರು ಕರ್ಕಿಯನ್ನೇ ತಂದು ಏರಿಸುತ್ತಿದ್ದರು. " ದೇವರಿಗೆ ಸಾದಾ ಕರ್ಕಿಯನ್ನು ಏರಿಸುವದು — ಅದಾದರೂ ಒಳ್ಳೆಯದು ಇರಬೇಡವೇ ? " ಎಂದೆನ್ನುತ್ತಿದ್ದರು.

ನನ್ನ ತಂದೆಯವರಿಂದ ಹೂವಿನ ಹುಚ್ಚನ್ನು ಹಿಡಿಸಿಕೊಂಡಿದ್ದೆ. ತಾಯಿ ಯವರಿಂದ ಹೂವಿನ ಮೇಲೆ ಪ್ರೇಮ ಮಾಡುವದನ್ನು ಕಲಿತುಕೊಂಡೆ.

ನಾನು ಹೂವಿಗಾಗಿ ನಸುಕಿನಲ್ಲಿಯೇ ಏಳುತ್ತಿದ್ದೆ ನಮ್ಮ ಊರಲ್ಲಿ ಬಕುಲ ವೃಕ್ಷಗಳು ಧಾರಾಳವಾಗಿ ಇದ್ದವು. ಬಕುಲ ಪುಷ್ಪಗಳು ಸುಂದರ ಮತ್ತು ಸುವಾಸನೆಯಿಂದ ಕೂಡಿರುತ್ತವೆ. ಅವುಗಳಲ್ಲಿ ಜೇನುತುಪ್ಪವೂ ಇರು ತ್ತದೆ. ಸಣ್ಣ ಸಣ್ಣ ಮುತ್ತುಗಳಂತೆ, ಅಂದವಾದ ಗುಂಡಿಗಳಂತೆ ಅವು ಶೋಭಿ ಸುತ್ತವೆ. ನಸುಕಿನಲ್ಲೇ ನಾನು ಕರಡಿಗೆ ತುಂಬ ಹೂ ತಂದು ಇಡುತ್ತಿದ್ದೆ. ಹತ್ತು ಗಂಟೆಗೆ ಶಾಲೆ ಬಿಟ್ಟು ಬಂದಮೇಲೆ ಸರವನ್ನು ಮಾಡುತ್ತಿದ್ದೆ. ತಂದೆ ಯವರು ಆ ಪುಷ್ಪಮಾಲೆಗಳನ್ನು ದೇವಸ್ಥಾನಕ್ಕೆ ಹೋಗುವಾಗ್ಗೆ ತೆಗೆದುಕೊಂಡು ಹೋಗುತ್ತಿದ್ದರು. ಮುಂಜಾನೆ ಬಕುಲದ ಹೂ ಆರಿಸುತ್ತಿದ್ದರೆ ಸಾಯಂಕಾಲ ಗುಲಬಾಕ್ಷಿಯ ಹೂವನ್ನು ಕೊಯ್ದು ತರುತ್ತಿದ್ದೆ. ಸಂಜೆಯ ಮುಂದೆ ಸಾಲೆ ಬಿಟ್ಟೊಡನೆ ನಾನು ಗುಲಬಾಕ್ಷಿ ಹೂಗಳನ್ನು ಕೊಯ್ಯಲು ಓಡಿ ಓಡಿ ಹೋಗು ತ್ತಿದ್ದೆ. ಬೇರೆಯವರ ಮನೆಗೆ ಹೋಗಿ ಅವರ ಹಿತ್ತಲಿನಿಂದ ಗುಲಬಾಕ್ಷಿ ಹೂ ತರುತ್ತಿದ್ದೆ. ಅವರಿಗೆಲ್ಲಿ ಆ ಹೂವಿನ ಮೇಲೆ ಅಷ್ಟು ಪ್ರೀತಿ! ದೇವರ ಪೂಜೆ ಯನ್ನಾದರೂ ಮಾಡುವ ಜನ ಎಷ್ಟಿದ್ದಾರೆ? ಮಾಡಿದರೂ ತುಸು ಹೂ ಕೊಯ್ಯುತ್ತಾರೆ. ಬಹಳವಾದರೆ ಜವರಿಸಿಂದ ನಾರುವ ತಲೆಗೂದಲಲ್ಲಿ ಮಾಲೆ ಸಿಕ್ಕಿಸಿಕೊಂಡು ಮೆರೆಯುವವರೇ ದೊರೆಯಬಹುದು. ನಿಜಕ್ಕೂ ದೇವರ ಪೂಜೆಗೆ ಕೆಲವು ಹೂ ಮಾತ್ರ ತೆಗೆಯಬೇಕು. ಮಿಕ್ಕವುಗಳನ್ನು ಗಿಡದ ಮೇಲೆಯೇ ಬಿಡಬೇಕು. ಅಲ್ಲಿರುವದು ದೇವರಿಗೆ ಮುಡಿಸಿದಂತೆಯೇ !

ಇಂದು ನಾನು ಹೂ ಹರಿಯಲಾರೆ. ಹೂವೆಂದರೆ ಪರಮೇಶ್ವರನ ರಸಮಯ ಮತ್ತು ಸೌಂದರ್ಯಮಯ ಮೂರ್ತಿಯೆಂದು ನಾನು ತಿಳಿಯುತ್ತೇನೆ. ಆದರೆ ಚಿಕ್ಕಂದಿನಲ್ಲಿ ದೇವರಿಗಾಗಿಯೇ ನಾನು ಹೂ ಕೊಯ್ದು ತರುತ್ತಿದ್ದೆ. ಗುಲಬಾಕ್ಷಿ ಹೂಗಳಿಗಾಗಿ ಹುಡುಗ-ಹುಡುಗಿಯರಲ್ಲಿ ಜಗಳ ನಡೆಯುತ್ತಿತ್ತು. ಗುಲಬಾಕ್ಷಿ ಹೂಗಳು ಸುಂದರವಾಗಿರುತ್ತವೆ. ದೇಟು ಸೀರಾಗಿದ್ದು ಉದ್ದವಾಗಿರುತ್ತದೆ. ಅದರ ತುದಿಗೆ ಚಿಕ್ಕ ಮಣಿ ಇರುತ್ತದೆ. ಹಳದಿ, ಕೇಸರಿ, ಜಾಂಬಳಿ ಮತ್ತು ಬಿಳಿ ಮೊದಲಾದ ಹಲವಾರು ಬಣ್ಣಗಳ ಗುಲಬಾಕ್ಷಿ ಇರುತ್ತವೆ. ಅವರ ಕರಿಮಣಿಗಳು ಬಹಳ ಸುಂದರವಾಗಿರುತ್ತವೆ. ನನ್ನ ತಾಯಿ ತುಳಸಿಕಟ್ಟೆಯ ಮುಂದೆ ಕುಳಿತು ಅವುಗಳ ಮಾಲೆಯನ್ನು ಹೆಣೆಯುತ್ತಿದ್ದಳು. ದೇಟಿನಲ್ಲಿ ದೇಟು ತೊಡಗಿಸಿಯೇ ಜಡೆ ಹೆಣೆಗಂತೆ ಅವುಗಳ ಮಾಲೆಯನ್ನು ಮಾಡುತ್ತಾರೆ. ಅದಕ್ಕೆ ಸೂಜಿ–ದಾರ ಬೇಕಾಗುವದಿಲ್ಲ. ಈ ಮಾಲೆಯಲ್ಲಿಯೂ ಕೆಲವು ಪ್ರಕಾರಗಳಿವೆ. ಜಡೆಯ ಮಾದರಿ, ತೋಡೆಯ ಮಾದರಿ ಇತ್ಯಾದಿ ಕೆಲವು ಮಾದರಿಯ ಮಾಲೆಗಳನ್ನು ಹೆಣ್ಣುಮಕ್ಕಳು ಕಟ್ಟುತ್ತಾರೆ.

ಅಂದು ಭಾನುವಾರವಾಗಿತ್ತು. ದಿನಾಲು ಶಾಲೆ ಬಿಟ್ಟ ಮೇಲೆಯೇ ಎಲ್ಲರೂ ಹೂವಿಗಾಗಿ ಹೋಗುತ್ತಿದ್ದೆವು. ಪಾಟಿ-ಗಂಟು ಮನೆಯಲ್ಲಿ ಬಿಸಾಡಿ ಯಾವನು ಮೊದಲು ಓಡುವನೋ ಅವನಿಗೆ ಹೆಚ್ಚು ಹೂ ದೊರೆಯುತ್ತಿದ್ದವು. ಆದರೆ ಭಾನುವಾರ ಯಾರು ಯಾವಾಗ ಹೋಗುತ್ತಿದ್ದರೊ ತಿಳಿಯುತ್ತಿರಲಿಲ್ಲ. ಈ ಮೊದಲಿನ ಭಾನುವಾರ ನನಗೆ ಗಿಡದ ಮೇಲೆ ಒಂದು ಹೂ ಕೂಡ ದೊರೆತಿರಲಿಲ್ಲ. ಆದ್ದರಿಂದ ಇಂದು ಎಲ್ಲ ಹೂ ನಾನೇ ಕೊಯ್ದು ತರಬೇಕೆಂದು ನಿರ್ಧರಿಸಿದೆ. ಬೇಗನೆ ಹೋಗಿ ಮೊಗ್ಗೆಗಳನ್ನೇ ಕೊಯ್ದು ತರುವದೆಂದು ಯೋಚಿಸಿದೆ. ಗುಲಬಾಕ್ಷಿ ಹೂ ನಾಲ್ಕು ಗಂಟೆಗೆ ಅರಳಹತ್ತುತ್ತವೆ. ಸಾಯಂಕಾಲವಾಗಲು ಚೆನ್ನಾಗಿ ಅರಳುತ್ತವೆ. ಹೂ ಅರಳುವ ಮೊದಲೇ ನಾನು ಹೋಗುವ ಸಿದ್ಧತೆ ಮಾಡಿಕೊಂಡೆ.

ಹೊರಗಡೆ ಬಿಸಿಲಿನ ಬೇಗೆ ಇರುವಾಗಲೇ ನಾನು ಹೊರಟೆ. ಜೊತೆಗೆ ಒಂದು ವಸ್ತ್ರವನ್ನು ತೆಗೆದುಕೊಂಡಿದ್ದೆ. ಆಗ ಮಧ್ಯಾಹ್ನ ಮೂರು ಗಂಟೆ ಇರಬಹುದು. ನಮ್ಮ ನೆರೆಮನೆಯ ಥೋಂಡೋಪಂತ ಮಾಸ್ತರರ ಮತ್ತು ಗೋವಿಂದಶಾಸ್ತ್ರಿಗಳ ಮನೆಯ ಹಿತ್ತಲದಲ್ಲಿಯ ಎಲ್ಲ ಗುಲಬಾಕ್ಷಿಯ ಮೊಗ್ಗೆ

ಗಳನ್ನು ಕೊಯ್ದುಕೊಂಡೆನು. ಮನೆಗೆ ಹೋಗಿ ಒಂದು ಹರಿವಾಣದಲ್ಲಿ ನೀರು ಹಾಕಿ ಅವರಲ್ಲಿ ಆ ಮೊಗ್ಗೆಗಳನ್ನು ಹಾಕಿಟ್ಟೆನು.

ಸಾಯಂಕಾಲ ತಾಯಿ ಹೇಳಿದಳು, " ಇಂದು ಹೂ ತರಲು ಹೋಗುವದಿಲ್ಲವೇನೋ ಶ್ಯಾಮಾ ? ಹೋದ ವಾರದಂತೆ ಒಂದೂ ಹೂ ಸಿಗದೆ ಅಳುತ್ತ ಕೂಡುವಿ ನೋಡು. ಮಾಲೆ ಕಟ್ಟಲು ದೊರೆಯದಿದ್ದರೂ ದೇವರಿಗೆ ಏರಿಸುವ ಮಟ್ಟಿಗೆ ತುಸು ಹೂ ತಂದರೂ ಸಾಕು. ಹೋಗು. "

" ನಾನು ಆಗಲೇ ಹೂ ತಂದುಬಿಟ್ಟಿದ್ದೇನೆ. ಮಾಲೆ ಕಟ್ಟುವಿಯೇನು?" ನಾನು ಕೇಳಿದೆ.

" ತೆಗೆದುಕೊಂಡು ಬಾ ಹಾಗಾದರೆ. ಹೊರಗೆ ತುಳಸಿಯ ಮುಂದೆ ಕುಳಿತು ಅಲ್ಲಿಯೇ ಮಾಲೆ ಕಟ್ಟುತ್ತೇನೆ. ಅಂದರೆ ಇಲ್ಲಿ ಕಸವೂ ಬೀಳುವದಿಲ್ಲ. "

ನಾನು ಹರಿವಾಣ ಎತ್ತಿಕೊಂಡು ಬರಲು ಹೋದೆ. ಹೂ ಚೆನ್ನಾಗಿ ಅರಳಿರಲೇ ಇಲ್ಲ ನಾನು ಬೆಪ್ಪನಂತಾದೆ. ಅವುಗಳನ್ನು ಹೂವಿನ ಬುಟ್ಟಿಯಲ್ಲಿ ಹಾಕಿಕೊಂಡು ತಾಯಿಯ ಬಳಿಗೆ ಹೋದೆ.

" ಇದು ಏನೋ ಶ್ಯಾಮ ? ನೀರು ಬಸಿಯುತ್ತಿದೆಯಲ್ಲ. ಮೊಗ್ಗೆಗಳನ್ನೇ ಕೊಯ್ದುಕೊಂಡು ಬಂದಿದ್ದೆಯೆಂದು ಕಾಣುತ್ತದೆ. ಅದಕ್ಕೆಂದೇ ಅವು ಅರಳಿಲ್ಲ. ಶ್ಯಾಮಾ, ಗಿಡಗಳ ಮೇಲೆಯೇ ಅವುಗಳನ್ನು ಅರಳಲು ಬಿಡಬೇಕಾಗಿತ್ತು. ಇಷ್ಟೊಂದು ಆಶೆಬುರುಕನಂತೆ ಏಕೆ ಧಾವಿಸಿ ಹೋಗಿದ್ದೆ ? " ಎಂದು ತಾಯಿ ನುಡಿಯುತ್ತಿರುವಷ್ಟರಲ್ಲಿಯೇ ಘೋಂಡೋಪಂತರ ಮತ್ತು ಶಾಸ್ತ್ರಿಗಳ ಮನೆಯ ಬನ್ಯಾ, ಬಾಪೂ ಮತ್ತು ಬೇಬಿ ಒಟ್ಟಾಗಿ ಬಂದರು.

" ನಿಮ್ಮ ಶ್ಯಾಮನು ನಮಗೆ ಒಂದೂ ಬಿಡದಂತೆ ಎಲ್ಲ ಹೂಗಳನ್ನೂ ಕೊಯ್ದು ತಂದಿದ್ದಾನೆ ನೋಡಿರಿ. " ಬೇಬಿ ದೂರು ಕೊಟ್ಟಳು.

"ಯಾಕೋ ಶ್ಯಾಮಾ, ಕಳ್ಳನಂತೆ ಹೂ ತರಲು ಯಾವಾಗ್ಗೆ ಹೋಗಿದ್ದೆ?" ಬಾಪೂ ಪ್ರಶ್ನಿಸಿದ.

" ಕಳ್ಳನಂತೆ ಅನ್ನುವಿಯಾ ? ದಿನಾಲು ನಾನು ಹೂ ತರಲು ಬರುವದಿಲ್ಲವೇ ? " ನಾನು ಕೇಳಿದೆ.

" ದಿನಾಲು ನಮ್ಮೊಟ್ಟಿಗೇ ಬರುತ್ತೀ " ಬನ್ಯಾ ಎಂದ.

" ಕಳೆದ ಭಾನುವಾರ ನನಗೊಂದೂ ಹೂ ನೀವು ಬಿಟ್ಟಿರಲಿಲ್ಲವಲ್ಲ ? " ನಾನು ವಿಚಾರಿಸಿದೆ.

" ಆದರೆ, ನಾನು ನನ್ನ ತಟ್ಟೆಯಲ್ಲಿಯ ಹೂ ಕೊಡಲು ಬಂದರೆ ನೀನೇ ಸಿಟ್ಟುಸಿಟ್ಟಾಗಿ, ' ಆಗಲಿ, ನೋಡುತ್ತೇನೆ ' ಎನ್ನುತ್ತ ಹೋಗಿಬಿಟ್ಟೆ. ಇಂದು ಈ ರೀತಿ ಸೇಡು ತೀರಿಸಿಕೊಂಡೆಯಲ್ಲವೇ ? " ಬೇಬಿ ನುಡಿದಳು.

ನನ್ನ ತಾಯಿ ಎಲ್ಲವನ್ನೂ ಕೇಳಿಕೊಂಡು ಶಾಂತಚಿತ್ತಳಾಗಿ ನುಡಿದಳು, " ಬನ್ಯಾ, ಬಾಪೂ ! ಇದೋ ತೆಗೆದುಕೊಳ್ಳಿರಿ ಹೂ. ಇನ್ನು ಮುಂದೆ ನಮ್ಮ ಶ್ಯಾಮ ಹೀಗೆ ಮಾಡುವದಿಲ್ಲ. ಅಲ್ಲವೇನೋ ಶ್ಯಾಮಾ ? " ಎಂದು ಹೇಳಿ ಅವರಿಗೆ ಹೂ ಕೊಟ್ಟಳು.

" ಶ್ಯಾಮಾ, ಸಿಟ್ಟು ಮಾತ್ರ ಹಚ್ಚಿಕೊಳ್ಳಬೇಡಪ್ಪಾ, ನಾಳೆ ಹೂವಿಗೆ ಬರಬೇಕು ನೋಡು. ನೀನೇನು ಮನಸ್ಸಿಗೆ ಹಚ್ಚಿಕೊಂಡು ಕುಳಿತು ಬಿಡುವವ. ಇಲ್ಲವೆ ಈಗಲೇ ಆಟಕ್ಕೆ ಬಂದು ಬಿಡು. ಆನೆ ಆಟ, ' ಖಾನಖಾನ ಉತ್ತುತ್ತಿ ಆಟ ಅಥವಾ ' ಮುಟ್ಟಾಕ ಬಾ ಮುಲ್ಲಂಗಿ ಜಾಣ ' ಆಟ, ಯಾವುದಾದರೊಂದು ಆಟ ಆಡೋಣ. " ಬನ್ಯಾ ನುಡಿದ.

" ಇಂದು ಹೊತ್ತಾಗಿದೆ. ನಾಳೆ ಆಡುವಿರಂತೆ " ಎಂದು ಹೇಳಿ ನಮ್ಮ ತಾಯಿ ಅವರನ್ನು ಕಳಿಸಿದಳು.

ಹುಡುಗರು ಹೊರಟುಹೋದರು. ನಾಚಿಕೆಯಿಂದ ನನ್ನ ಮೋರೆ ಕೆಂಪಾಗಿದ್ದಿತು. ತಾಯಿ ನುಡಿದಳು, " ಶ್ಯಾಮಾ, ಬೇರೆಯವರ ಮನೆಯ ಹೂವನ್ನು ಅವರಿಗೆ ಕೇಳದೆ ಕೊಯ್ದು ತರಬಾರದು. ಅವರನ್ನು ಕೇಳಿ ತರಬೇಕು. ಮೊದಲು ತಾವು ಹೋದರೂ ಅವರನ್ನು ಕರೆದು ಅವರಿಗೆ ತಿಳಿಸಿ ಕೊಯ್ಯಬೇಕು. ಆದರೆ ಎಲ್ಲಕ್ಕೂ ಹೆಚ್ಚಿನ ವಿಷಾದದ ಸಂಗತಿಯೆಂದರೆ ಮೊಗ್ಗಿ ಹೂಗಳನ್ನು ಕೊಯ್ಯುವದು. ನೀನು ತಾಳ್ಮೆಗೆಟ್ಟವನಾಗಿದ್ದೆ. ಆದರೆ ನಿನಗೇನೂ ಲಾಭವಾಗಲಿಲ್ಲ. ಹೂಗಳನ್ನು ಅರಳುವತನಕ ಗಿಡದ ಮೇಲೆಯೇ ಬಿಡಬೇಕು. ಹೊರಗಡೆ ನೀರಿನಲ್ಲಿ ಎಷ್ಟೊತ್ತು ಇಟ್ಟರೂ ಅವು ಚೆನ್ನಾಗಿ ಅರಳಲಾರವು. ಮಗು ತಾಯಿಯ ಹಾಲನ್ನುಂಡು ಬೆಳೆಯುವಂತೆ ಹೊರಗಿನ ಹಾಲಿನಿಂದ ಬೆಳೆಯಲಾರದು. ಮನೆಯ ಸಾದಾ ಅನ್ನ ರೊಟ್ಟಿಯಿಂದ ಬರುವಷ್ಟು ಬಲವು ಹೋಟೆಲ್ಲಿನ ಹಾಲು-ತುಪ್ಪದ ತಿಂಡಿಯಿಂದ ಬರಲಾರದು. ಗಿಡಗಳೆಂದರೆ ಹೂ

ವಿನ ತಾಯಿ. ಗಿಡಗಳು ಮೊಗ್ಗೆಗಳಿಗೆ ಜೀವನರಸವನ್ನು ಕುಡಿಸುತ್ತವೆ. ಅವುಗಳನ್ನು ಅರಳಿಸುತ್ತವೆ. ಗಿಡಗಳ ತೊಡೆಯ ಮೇಲೆಯೇ ಮೊಗ್ಗೆಗಳು ಸರಿಯಾಗಿ ಅರಳುತ್ತವೆ. ಹೂಗಳು ಚೆನ್ನಾಗಿ ಅರಳಿದ ಮೇಲೆ ಅವುಗಳನ್ನು ದೇವರಿಗಾಗಿ ತೆಗೆದುಕೊಂಡು ಬಾ. ನಮ್ಮ ದೇವರಿಗೆ ನಾಲ್ಕು ಹೂ ಕಡಿಮೆ ಸಿಕ್ಕರೂ ಅಡ್ಡಿಯಿಲ್ಲ. ಬನ್ಯಾನ ಮನೆ ದೇವರಿಗೆ ಸಿಕ್ಕರೂ ಅವೂ ದೇವರಿಗೇ ಅಲ್ಲವೇ? ಎಲ್ಲಿ ಹೋದರೂ ದೇವರಿಗೇ ಸಲ್ಲುತ್ತವೆ. ನಮ್ಮ ಮನೆದೇವರಿಗೇ ಎಲ್ಲ ಹೂ ಬೇಕೆಂದು ಅನಿಸಬಾರದು. ಅದು ದೇವರಿಗೆ ಮೆಚ್ಚುವದಿಲ್ಲ. ದೇವರ ಪೂಜೆಯಲ್ಲಿ ಎಲ್ಲರೂ ಭಾಗ ವಹಿಸಬೇಕು. ದೇವರಿಗೆ ಒಂದು ಹೂ ಸಿಕ್ಕರೂ ಸಾಕು. ಆದರೆ ಚೆನ್ನಾಗಿ ಅರಳಿದ್ದಿರಬೇಕು. ”

ಗೆಳೆಯರೆ, ಈ ರೀತಿ ತರೆದುಕೊಂಡು ಬಂದ ಮೊಗ್ಗೆಗಳ ಬಗ್ಗೆ ತಾಯಿಗೆ ಮಾತ್ರ ಕೆಡುಕೆನಿಸೀತು. ತಾಯಿ ತನ್ನ ಚಿಕ್ಕ ಮಕ್ಕಳನ್ನು ತೊಡೆಯ ಮೇಲೆ ಆಡಿಸುತ್ತಾಳೆ, ಮನೆಯಲ್ಲಿ ಬೆಳಸುತ್ತಾಳೆ, ಆಮೇಲೆ ಅವರನ್ನು ಜಗತ್ತಿನ ಸೇವೆಗೆ ಕೊಟ್ಟುಬಿಡುತ್ತಾಳೆ. ಅದೇ ರೀತಿ ಹೂವಿನ ಗಿಡಗಳು ಹೂಗಳನ್ನು ಬೆಳಿಸಿ, ರಸಮಯ–ಗಂಧಮಯವನ್ನಾಗಿ ಮಾಡಿ ಅವುಗಳನ್ನು ವಿಶ್ವಂಭರನ ಪೂಜೆಗಾಗಿ ಕೊಡಲು ಸಿದ್ಧವಾಗಿರುತ್ತವೆ. ಅರ್ಧಮರ್ಧ ಅರಳಿದ ಮೊಗ್ಗೆಗಳನ್ನು ಹರಿದು ತಂದರೆ ಅವು ಅರಳುವದಿಲ್ಲ. ಅರ್ಧಕ್ಕೇ ಬಿಟ್ಟುಕೊಟ್ಟ ಕೆಲಸಗಳೂ ಚೆನ್ನಾಗಿ ಅರಳುವದಿಲ್ಲ–ಫಲಿಸುವದಿಲ್ಲ. ಜಗತ್ತಿನಲ್ಲಿ ಯಾವ ಅರ್ಧಮರ್ಧ ಕೆಲಸವೂ ಪ್ರಯೋಜನದ್ದಲ್ಲ. ಮಾಡುವ ಕೆಲಸವನ್ನು ನೀಟಾಗಿ, ಸರಿಯಾಗಿ, ಸುವ್ಯವಸ್ಥಿತವಾಗಿ ಮತ್ತು ಪರಿಪೂರ್ಣವಾಗಿ ಮಾಡಿರಿ. ಅದಕ್ಕಾಗಿ ತುಸು ಹೊತ್ತು ಹಿಡಿದರೂ ಅಡ್ಡಿಯಿಲ್ಲ. ಏನಾದರೂ ಹುಚ್ಚುಚ್ಚಾರ ಕೆಲಸ ಮಾಡುವದಕ್ಕಿಂತ ಅದನ್ನು ಮಾಡದಿರುವದೇ ಲೇಸು. ನನ್ನ ತಾಯಿ ನನಗೆ ಪದೇ ಪದೇ ಹೇಳುತ್ತಿದ್ದಳು:

“ ಶ್ಯಾಮಾ, ಮೂಕ ಮೊಗ್ಗೆಗಳನ್ನು ಕೊಯ್ಯಬೇಡ. ಅವಕ್ಕೆ ಅರಳಲಿಕ್ಕೆ ಅವಕಾಶ ಕೊಡು. ಅವು ಚೆನ್ನಾಗಿ ಅರಳಲಿ. ”

ರಾತ್ರಿ : ೪

# : : ಪುಣ್ಯಪುರುಷ ಯಶವಂತ

"ಅಂದು ಶನಿವಾರವಾಗಿತ್ತು. ಅಂದು ಏಕಾದಶಿಯೂ ಇತ್ತು." ಶ್ಯಾಮನು ಕಥೆ ಹೇಳತೊಡಗಿದನು.

"ತುಸು ತಡೆ. ಬಾರಕೂ ಬರತಕ್ಕವನಿದ್ದಾನೆ, ನಿನ್ನೆ ಆವನು ರೊಟ್ಟಿಯನ್ನು ತಿನ್ನದೇ ಬಂದಿದ್ದ" ಶಿವ್ಯಾ ಹೇಳಿದ.

"ಅದೋ ಬಂದೇ ಬಿಟ್ಟ. ಬಾ, ಬಾರಕೂ ನನ್ನ ಹತ್ತಿರ ಕುಳಿತುಕೋ." ಎಂದು ಹೇಳಿ ಗೋವಿಂದನು ಬಾರಕೂನನ್ನು ತನ್ನ ಒಳಿ ಕುಳ್ಳಿರಿಸಿಕೊಂಡನು.

ಶ್ಯಾಮನು ಹೇಳತೊಡಗಿದನು:

ಅವು ಮಳೆಗಾಲದ ದಿನಗಳಾಗಿದ್ದವು. ಕೊಂಕಣ ಸೀಮೆಯ ಮಳೆ! ಮುಸಲಧಾರೆಯಾಗಿ ಹೊಯ್ಯುತ್ತಿತ್ತು. ಎಲ್ಲಿ ನೋಡಿದಲ್ಲಿ ನೀರೇ ನೀರು. ಮಳೆಯಲ್ಲಿ ತಲೆಯ ಮೇಲೆ ಗೊರಬು ಹೊತ್ತುಕೊಂಡು ನಡುಗುತ್ತ ನಾವು ಶಾಲೆಗೆ ಹೋದೆವು. ಆ ಕಾಲಕ್ಕೆ ಅಲ್ಲಿ ಕೊಡೆಗಳ ಹಾವಳಿ ಇರಲಿಲ್ಲ. ಗೊರಬುಗಳು ಸಾದಾ ಮತ್ತು ಸುಂದರವಾಗಿರುತ್ತವೆ. ನಮ್ಮ ತಮ್ಮನು ತುಸು ಕಾಹಿಲೆ ಇದ್ದುದರಿಂದ ನಾನೂ ಮತ್ತು ನಮ್ಮ ಅಣ್ಣನು ಮಾತ್ರ ಶಾಲೆಗೆ ಹೋಗಿದ್ದೆವು.

ನಾವು ಶಾಲೆಗೆ ಹೋದದ್ದೇನೋ ಸರಿ. ಆದರೆ ಮನೆಯಲ್ಲಿ ಯಶವಂತನಿಗೆ ಒಮ್ಮೆಲೆ ಕಾಹಿಲೆ ಹೆಚ್ಚಾಯಿತು. ಮೊದಲು ಚಳಿ-ಜ್ವರದಿಂದ ಬಳಲುತ್ತಿದ್ದ. ತುಸು ವಾಸಿಯಾಗಿತ್ತು. ಈಗ ಎರಡನೆ ಬೇನೆಯೇ ಸೇರಿಕೊಂಡಿದ್ದಿತು. ನಸುಕಿನಲ್ಲಿ ಅವನಿಗೆ ಹೊಟ್ಟೆನೋವಿನ ನಿಮಿತ್ತವಾದದ್ದು ಹೊಟ್ಟೆ ಹೆಚ್ಚೆಚ್ಚು ನೋಯಹತ್ತಿತು. ಹೊಟ್ಟೆಯುಬ್ಬತೊಡಗಿತು. ಆವನಿಗೆ ಶೌಚ-ಮೂತ್ರ ಸಹ ಆಗದಂತಾಯಿತು. ಹಳ್ಳಿಯಲ್ಲಿ ಡಾಕ್ಟರೆಲ್ಲಿ ಬರಬೇಕು? ಎನಿಮಾ ಎಲ್ಲಿ ದೊರೆಯಬೇಕು ? ಮನೆಮಾರಿಗೆ ಉಪಾಯಗಳೇ ನಡೆದವು. ನಮ್ಮ ಆಳು ಗೋವಿಂದ ನಮ್ಮನ್ನು ಕರೆಯಲಿಕ್ಕೆ ಬಂದ. "ಅಣ್ಣಾ, ದಾದಾ," ಎಂದು ಯಶವಂತನು ನಮ್ಮ ಹೆಸರುಗೊಂಡು ಕರೆಯುತ್ತಿದ್ದಾನೆಂದು ತಿಳಿಸಿದ.

ನಾವು ಮನೆಗೆ ಬರುವಷ್ಟರಲ್ಲಿ ಮನೆಯಲ್ಲಿ ಜನಜಾತ್ರೆ ನೆರೆದಿತ್ತು. ಊರೊಳಗಿನ ಕೆಲವು ವೈದ್ಯರೂ ಬಂದಿದ್ದರು. ಪೀತಾಂಬರಭಾಯಿ ಮತ್ತು ಕುಶಪ್ಪ ಬಂದಿದ್ದರು. ನನ್ನ ತಮ್ಮ ಕಕ್ಕಾವಿಕ್ಕಿಯಾಗಿ ಹೊರಳಾಡುತ್ತಿದ್ದ. ಹೊಟ್ಟೆ ಉಬ್ಬುತ್ತಿದ್ದರೂ ಅವನಿಗೆ ನೀರಡಿಕೆಯಾಗುತ್ತಿತ್ತು. ಅವನಿಗೆ ನೀರು ಕೊಡುತ್ತಿದ್ದಿಲ್ಲ. ಅವನು ನೀರಿನ ಲೋಟವಿದ್ದೆಡೆ ಧಾವಿಸುತ್ತಿದ್ದ. ಅವನನ್ನು ತಡೆಯುತ್ತಿದ್ದರು.

ಆಗ ಅವನು ಆರು ವರ್ಷದವನಿರಬಹುದು. ಮೊದಲನೇ ದಿವಸವೇ ತಾಯಿ ಅವನಿಗೆ ಸಿಟ್ಟು ಮಾಡಿದ್ದಳು. ಅಂಗಳದಲ್ಲಿ ಕಡಲೆಬೇಳೆ ಒಣಗಲು ಹಾಕಿದ್ದರು. ಒಂದು ಆಡು ಬಂದು ಬೇಳೆಗೆ ಬಾಯಿ ಹಾಕಿತು, ಯಶವಂತನು ಅದನ್ನು ಕೂಡಲೆ ಹೊಡೆದಟ್ಟಿದನು. ಚೆಲ್ಲಾಪಿಲ್ಲಿಯಾದ ಬೇಳೆಯನ್ನು ಸರಿ ಪಡಿಸಹತ್ತಿದನು. ಇದನ್ನು ನೋಡಿದ ಅವರ ಅಜ್ಜಿ "ಬೇಳೆ ತಿನ್ನುವಿಯಾ ಕಳ್ಳಾ, ಮತ್ತೆ ಗೊತ್ತಾಗಬಾರದೆಂದು ಸರಿಪಡಿಸುತ್ತೀಯಲ್ಲವೇ?" ಎಂದು ಗದರಿಸಿದಳು.

"ಇಲ್ಲ ಅಜ್ಜಿ, ನಾನು ಬೇಳೆ ತಿನ್ನುತ್ತಿರಲಿಲ್ಲ. ಸುಮ್ಮನೆ ನನ್ನ ಮೇಲೆ ಆರೋಪ ಹೊರಿಸುತ್ತೀ" ಯಶವಂತ ಅಳುಮೋರೆ ಮಾಡಿಕೊಂಡು ಹೇಳಿದ.

ತಾಯಿ ಮನೆಯಲ್ಲಿ ಸಂಧಿವಾತದಿಂದ ಹಾಸಿಗೆ ಹಿಡಿದಿದ್ದಳು. ಅವಳಿಂದ ನಡೆಯಲಿಕ್ಕಾಗುತ್ತಿರಲಿಲ್ಲ. ಕೋಣೆಯಲ್ಲಿ ಮಲಗಿಕೊಂಡೇ ಇರುತ್ತಿದ್ದಳು. ಯಶವಂತನು ತಾಯಿಯ ಬಳಿಗೆ ಹೋದ. ಅವಳೂ ತುಸು ಸಿಟ್ಟು ಮಾಡಿದಳು, "ಬೇಳೆ ತಿನ್ನುತ್ತಿದ್ದಿಯೇನೋ? ಪದಾರ್ಥಗಳಿಗೆ ಕೈಹಚ್ಚಕೂಡದೆಂದು ಎಷ್ಟುಸಲ ಹೇಳಿಲ್ಲ ನಿನಗೆ?"

"ಅವ್ವಾ, ದೇವರಾಣೆಗೂ ನಾನು ಬೇಳೆ ತಿಂದಿಲ್ಲ. ಎಲ್ಲರೂ ಸುಮ್ಮನೆ ನನ್ನ ಮೇಲೆ ಕಳವು ಹೊರಿಸುವಿರಲ್ಲ?" ಎಂದು ನುಡಿದು ಯಶವಂತನು ಬಿಕ್ಕಿ ಬಿಕ್ಕಿ ಅಳುತ್ತ ಹೊರಗೆ ಕರಿಮಾವಿನ ಮರದ ಅಡಿಯಲ್ಲಿ ಕುಳಿತುಕೊಂಡ.

ಮೊದಲನೆ ದಿವಸ ನಡೆದ ಸಂಗತಿಯಿದು. ಆದರೆ ಇಂದು ಯಶವಂತನು ಸಾವಿನ ಉಡಿಯಲ್ಲಿ ಬಿದ್ದುಕೊಂಡಿದ್ದಾನೆ. ಸತ್ಯದ ಪರೀಕ್ಷೆಯು ಮರಣದ ನ್ಯಾಯಾಲಯದಲ್ಲಿ ನಡೆಯುತ್ತಿರುತ್ತದೆ. ನಿರ್ಣಯವನ್ನು ಕೇಳುವದಕ್ಕಾಗಿಯೇ ಯಶವಂತನು ದೇವರಬಳಿ ಹೊರಟಿದ್ದನೋ ಏನೋ. ಇಷ್ಟೇಕೆ ಅವನು

ಮನಸ್ಸಿಗೆ ಹಚ್ಚಿಕೊಂಡನೋ?

ಯಶವಂತನು ಬದುಕುವ ಆಶೆ ಕಂಡು ಬರಲಿಲ್ಲ. ಒಂಬತ್ತು ಗಂಟೆಯ ಹೊತ್ತಿಗೆ ಬೇನೆ ಇನ್ನೂ ಬಲಿಯಿತು. "ಅವ್ವಾ........, ನನ್ನನ್ನು ಅವ್ವನ ಬಳಿ ಇರಿಸಿರಿ." ಅವನು ಕ್ಷೀಣಸ್ವರದಲ್ಲಿ ನುಡಿದನು.

"ನನ್ನ ಬಳಿಯಲ್ಲಿಯೇ ಇರುವಿ ಕಂದಾ," ತಾಯಿ ಹೇಳಿದಳು.

ಅಶಕ್ತಳೂ ಜಡ್ಡಿನವಳೂ ಆಗಿದ್ದ ತಾಯಿ ಮರಣೋನ್ಮುಖನಾದ ಯಶವಂತನ ತಲೆಯನ್ನು ತನ್ನ ತೊಡೆಯ ಮೇಲೆ ಇರಿಸಿಕೊಂಡಿದ್ದಳು. ಅವಳ ಕಣ್ಣುಗಳಲ್ಲಿ ನೀರು ಬಂದಿದ್ದವು.

"ಅವ್ವಾ, ನನ್ನ ತಲೆಯನ್ನು ಕೆಳಗೆ ಇರಿಸು. ನಿನ್ನ ತೊಡೆ ನೊಂದೀತು. ನಿನ್ನ ಸಂದುಗಳು ನೋಯುತ್ತವೆ." ಯಶವಂತನು ತಗ್ಗಿದ ದನಿಯಲ್ಲಿ ನುಡಿದನು.

ತಾಯಿಯ ಹೃದಯ ಉಕ್ಕಿ ಬಂದಿತು. "ಇಲ್ಲ ಮಗು. ಸಂದುಗಿಂದು ಏನೂ ನೋಯುವದಿಲ್ಲ. ಮಗನ ಬೇನೆಯ ಮುಂದೆ ತಾಯಿಯ ಬೇನೆ ನಿಲ್ಲುವದೇ? ಮಗನನ್ನು ರಕ್ಷಿಸುವದಕ್ಕಾಗಿ ತಾಯಿಯ ಶರೀರದಲ್ಲಿ ಇಲ್ಲದ ಶಕ್ತಿ ಬರುತ್ತದೆ. ನನ್ನ ತೊಡೆಯೇನೂ ನೋಯುವದಿಲ್ಲ. ನನ್ನ ತೊಡೆ ಎಲುಬು ನಿನಗೆ ಚುಚ್ಚಿ ಪೀಡೆ ಕೊಡುತ್ತಿರಬಹುದು." ಎಂದು ಹೇಳಿದಳು.

ಕೊನೆಯದಾಗಿ ತಾಯಿಯನ್ನೊಮ್ಮೆ ಪ್ರೀತಿಯಿಂದ ದಿಟ್ಟಿಸಿ ನೋಡುತ್ತ ಅವಳ ಕೈಯನ್ನು ತನ್ನ ಕೈಯಲ್ಲಿ ತೆಗೆದುಕೊಂಡು ಯಶವಂತನು ನುಡಿದ, "ಅವ್ವಾ, ನೀನು ನನ್ನ ಬಳಿಯಲ್ಲಿ ಕುಳಿತಿರು ಅಂದರಾಯಿತು."

ಯಶವಂತನ ಒಂದೊಂದು ಶಬ್ದಗಳೂ ತಾಯಿಯ ಮತ್ತು ನಮ್ಮ ಹೃದಯವನ್ನು ಹೊಕ್ಕು ಮನೆ ಮಾಡುತ್ತಿದ್ದವು. ತಾಯಿಗೆ ಮೊದಲನೆ ದಿವಸದ ಘಟನೆ ನೆನಪಿಗೆ ಬಂದು ಕಣ್ಣು ತುಂಬಿ ಬಂದವು. ಕುತ್ತಿಗೆ ಬಿಗಿದು ಬಂದಿತು. ಅವಳು ಒಮ್ಮೆಲೆ ಆ ಮರಣೋನ್ಮುಖ ಬಾಲಕನನ್ನು ಚುಂಬಿಸಿದಳು. ಆ ಬಾಡುತ್ತಿದ್ದ ಮುಖಕಮಲದ ಮೇಲೆ ಅಶ್ರುಶಿಂಚನವನ್ನು ಮಾಡಿದಳು. ಅದೋ, ಯಶವಂತನು ತನ್ನ ಪ್ರೇಮದುಂಬಿದ ಕಣ್ಣುಗಳನ್ನು ತೆರೆದು ಭಕ್ತಿಪೂರ್ವಕವಾಗಿ ತಾಯಿಯನ್ನು ದಿಟ್ಟಿಸಿದನು.

ಆಮೇಲೆ ತುಸು ಹೊತ್ತಿನಲ್ಲಿಯೇ ಯಶವಂತನು "ರಾಮ ರಾಮ"

ಎನ್ನುತ್ತ ನಮ್ಮನ್ನಗಲಿ ಹೋದನು.

ತಾಯಿ ಯಾವಾಗಲೂ ಅನ್ನುತ್ತಿದ್ದಳು, "ಯಶವಂತನು ಪುಣ್ಯಾತ್ಮನಾಗಿದ್ದನು. ಏಕಾದಶಿಯ ದಿವಸ ದೇವರ ಬಳಿಗೆ ಹೋದನು."

ಸಣ್ಣವರಿದ್ದಾಗ ನಾವು ಆಕಾಶದ ಕಡೆ ನೋಡುತ್ತ 'ಆ ನಕ್ಷತ್ರವು ಯಶವಂತನದಾಗಿರಬಹುದು.' ಎಂದು ನಮ್ಮೊಳಗೇ ಆಡಿಕೊಳ್ಳುತ್ತಿದ್ದೆವು. ಪುಣ್ಯಾತ್ಮರು ನಕ್ಷತ್ರವಾಗುತ್ತಾರೆಂದು ನಮ್ಮ ಹಿರಿಯರು ಹೇಳುತ್ತಿದ್ದರು. ನಮಗೂ ಅದು ನಿಜವೆಂದು ತೋರುತ್ತಿದ್ದಿತು.

ಇಂದು ಯಶವಂತನೂ ಇಲ್ಲ. ನಮ್ಮ ತಾಯಿಯೂ ಇಲ್ಲ. ಆದರೆ ಆ ಮರಣ ಸಮಯದಲ್ಲಿಯ ಉಭಯತರ ನಿಜವಾದ ಪ್ರೇಮವು ಅಮರವಾಗಿದೆ ಇಂಥ ಶ್ರೇಷ್ಠ ತಮ್ಮನೂ ಉತ್ತಮ ತಾಯಿಯೂ ಲಭಿಸಿದ್ದರು. ಈ ವಿಚಾರ ಮಾತ್ರದಿಂದ ನನಗೆ ಧನ್ಯತೆಯನಿಸುತ್ತದೆ. ಅವರ ಉಗುರುದಳದ ಬೆಲೆ ನನಗಿಲ್ಲ. ನಾನು ಪಾಮರ, ಕೀಟಕ. ನನ್ನಲ್ಲಿ ಏನಾದರೂ ಒಳ್ಳೆ ಗುಣ, ಏನಾದರೂ ಪ್ರೇಮಳ ಸ್ವಭಾವ ಇದ್ದುದಾದರೆ ಅದರ ಶ್ರೇಯಸ್ಸು ಮಾತೃನಿಷ್ಠ ಸಹೋದರನಿಗೂ ಮತ್ತು ಮಕ್ಕಳ ನಡತೆಯ ಬಗ್ಗೆ ಎಚ್ಚರಿಕೆ ವಹಿಸುತ್ತಿದ್ದ ಆ ಮಹಾಮಹಿಮಳಾದ ತಾಯಿಗೂ ಸಲ್ಲುತ್ತದೆ. ಇಂಥ ತಾಯಿ, ಇಂಥ ಬಂಧು ದೊರೆಯಲು ಪೂರ್ವಜನ್ಮದ ಪುಣ್ಯವೇ ಬೇಕು. ಸತ್ಸಂಗತಿ ದೊರೆಯಬೇಕಾದರೆ ಹೇಗೆ ಪೂರ್ವ ಸಂಚಿತ ಪುಣ್ಯವು ಅಗತ್ಯವೋ ಅದೇ ರೀತಿ ಒಳ್ಳೆ ತಾಯಿ ತಂದೆ, ಘನವಂತರಾದ ಸಹೋದರರು ಲಭಿಸಲಿಕ್ಕೂ ಪುಣ್ಯ ಬೇಕಾಗುತ್ತದೆ. ಇದು ನನ್ನ ಪುಣ್ಯ ಸಂಚಯಕ್ಕಿಂತ ಈಶ್ವರನ ಕೃಪೆಯಿಂದಲೇ ಲಭಿಸಿತೆನ್ನಬಹುದು.

## ರಾತ್ರಿ : ೫

## : : ಮಾಧುರಿ

ಶ್ಯಾಮನಿಗಿಂದು ಮೈಯಲ್ಲಿ ಚೆನ್ನಾಗಿರಲಿಲ್ಲ. "ಇಂದು ಕಥೆ ಹೇಳದಿದ್ದರೂ ನಡೆದೀತು. ನೀನು ಮಲಗಿಕೋ" ಎಂದು ರಾಮನು ಹೇಳಿದನು.

" ಎಲೋ, ತಾಯಿಯ ಸ್ಮರಣೆಯೆಂದರೆ ಎಲ್ಲ ದುಃಖಗಳನ್ನು ಪರಿಹರಿಸುವ ರಾಮಬಾಣ ಮದ್ದಲ್ಲವೇ ? ಭಕ್ತನಿಗೆ ದೇವರ ಸ್ಮರಣಮಾತ್ರದಿಂದ ದುಃಖ ಪರಿಹಾರವಾಗುವಂತೆ ತಾಯಿಯ ನೆನಪಿನಿಂದ ನನ್ನ ದುಃಖ ಪರಿಹಾರವಾಗುತ್ತದೆ. ಇಂದು ತಾಯಿಯ ಸುಂದರ ಸ್ಮೃತಿಚಿತ್ರ ನೆನಪಾಗಿದೆ. ಹೇಳುತ್ತೇನೆ ಕುಳಿತುಕೊಳ್ಳಿರಿ. " ಎಂದು ನುಡಿದು ಶ್ಯಾಮನು ಕಥೆಯನ್ನಾರಂಭಿಸಿದನು:

ಗೆಳೆಯರೆ, ಮನುಷ್ಯನು ಬಡವನಾಗಿದ್ದರೂ, ನೋಡಲಿಕ್ಕೆ ದರಿದ್ರನಾಗಿದ್ದರೂ ಮನಸ್ಸಿನಿಂದ ಶ್ರೀಮಂತನಾಗಿರಬೇಕು. ಪ್ರಪಂಚದಲ್ಲಿಯ ಅನೇಕ ದುಃಖಗಳು ಹೃದಯದಲ್ಲಿಯ ದಾರಿದ್ರ್ಯದಿಂದಲೇ ಉತ್ಪನ್ನವಾಗಿರುತ್ತವೆ. ಹಿಂದುಸ್ತಾನದಲ್ಲಿರುವ ಬಾಹ್ಯ ಸಂಪತ್ತನ್ನೆಲ್ಲ ಜಗತ್ತಿನ ಜನರು ಸೂರೆಗೊಂಡರೂ ಚಿಂತಿಲ್ಲ, ಭಾರತೀಯರ ಹೃದಯದಲ್ಲಿರುವ ವಿಶಾಲವಾದ ಮತ್ತು ದಿವ್ಯವಾದ ಸಂಪತ್ತನ್ನು ಅಪಹರಿಸದಿದ್ದರೆ ಸಾಕು.

ನಮ್ಮ ಮನೆಯಲ್ಲಿ ಮಥುರಿಯೆಂಬವಳೊಬ್ಬ ಭತ್ತ ಕುಟ್ಟುವಾಕೆಯಿದ್ದಳು. ಕೊಂಕಣ ಸೀಮೆಯಲ್ಲಿ ಮನೆಮನೆಗೂ ಭತ್ತದ-ಕಲ್ಲು, ಒರಳು ಇರುತ್ತವೆ. ಎಲ್ಲರಲ್ಲಿಯೂ ಭತ್ತದ ಸಂಗ್ರಹ ಇರುತ್ತದೆ. ಎಲ್ಲರೂ ಭತ್ತ ಕುಟ್ಟುವವರನ್ನು ನಿಯಮಿಸಿಕೊಂಡಿರುತ್ತಾರೆ. ಒಬ್ಬೊಬ್ಬರ ಮನೆಯಲ್ಲಿ ಈ ಜನರು ವಂಶಪಾರಂಪರ್ಯವಾಗಿ ಕೆಲಸ ಮಾಡುತ್ತಾ ಇರುತ್ತಾರೆ. ಅದು ಅವರವರಿಗೆ ಗುತ್ತಿಗೆ ಇದ್ದ ಹಾಗೆ. ನಮ್ಮ ಮನೆಯಲ್ಲಿ ಮಥುರಿ, ಗಜರಿ, ಲಕ್ಷ್ಮಿ ಹೀಗೆ ಮೂವ್ವರು ಭತ್ತ ಕುಟ್ಟುವ ಕೆಲಸ ಮಾಡುತ್ತಿದ್ದರು. ಮಥುರಿಯ ಮಗ ಶಿವರಾಮನು ನಮ್ಮಲ್ಲಿ ಕೆಲಸಕ್ಕೆ ಇದ್ದನು. ಅವನು ೧೦-೧೨ ವರುಷದ ಚಿಕ್ಕ ಬಾಲಕ.

ಮಥುರಿ ಬಿಸಿಲುಗಾಲದಲ್ಲಿ ನಮಗೆ ಕವಳೆಹಣ್ಣು, ಮುರಗಲಹಣ್ಣು ತಂದು ಕೊಡುತ್ತಿದ್ದಳು. ಹಣ್ಣುಹಣ್ಣಾದ ಕರ್ರಗಿನ ಕವಳೆಹಣ್ಣುಗಳು ಬಡ ಕೊಂಕಣ ಸೀಮೆಯವರಿಗೆ ದ್ರಾಕ್ಷೆಹಣ್ಣು ಇದ್ದ ಹಾಗೆ ! ಮುರಗಲಹಣ್ಣು ಕೂಡ ರುಚಿಕಟ್ಟಾಗಿರುತ್ತಿದ್ದವು. ಮಥರಿಯ ಮನೆಯಲ್ಲಿಯೇ ಮುರಗಲಹಣ್ಣಿನ ಗಿಡವಿತ್ತು. ಆ ಗಿಡದ ಹಣ್ಣು ಬಲು ಸಿಹಿ ಎಂದು ಪ್ರಸಿದ್ಧವಾಗಿತ್ತು. ಬಡ ಜನರು ಯಾವಾಗಲೂ ಕೃತಜ್ಞರು. ಆಗಾಗ್ಗೆ ಎಲೆ, ಹಣ್ಣು, ಹೂ, ಕಾಯಿ

ಕೊಟ್ಟು ತನ್ನ ಕೃತಜ್ಞತೆಯನ್ನು ತೋರಿರುತ್ತಾರೆ. ಕೃತಜ್ಞತಾ ಬುದ್ಧಿಯಂಥ ಘನವಾದ ವಸ್ತು ಈ ಜಗತ್ತಿನಲ್ಲಿ ಬೇರೊಂದಿಲ್ಲ.

" ಏನವ್ವಾ ಗಜರೀ, ಇಂದು ಭತ್ತ ಕುಟ್ಟಲು ಮುಥುರೆ ಏಕೆ ಬರಲಿಲ್ಲ ? ಇವಳು ಬೇರೆ ಯಾವಳೋ ಬಂದಿದ್ದಾಳಲ್ಲ ? " ತಾಯಿ ವಿಚಾರಿಸಿದಳು.

ಗಜರಿ ಹೇಳಿದಳು, " ಮುಥುರಿಗೆ ಜ್ವರ ಬಂದಿವೆ ಅವಳೇ ಈ ಚಂದ್ರಿಯನ್ನು ಕಳಿಸಿದ್ದಾಳೆ. "

ತಮ್ಮ ಕಡೆಯಿಂದ ಕೆಲಸವಾಗದಂತೆ ಇದ್ದಾಗ ಕೆಲಸಕ್ಕೆ ತಡೆಯುಂಟಾಗ ಬಾರದೆಂದು ತಮ್ಮ ಬದಲು ಬೇರೆಯವರನ್ನು ಕಳಿಸಿಕೊಡುವ ಕರ್ತವ್ಯ ಬುದ್ಧಿಯು ಆ ಒಕ್ಕಲಗಿತ್ತಿಯರಲ್ಲಿ ಇತ್ತು.

" ಜ್ವರ ಬಹಳ ಬಂದಿದೆಯೋ ? " ತಾಯಿ ಕೇಳಿದಳು.

ಇಷ್ಟರಲ್ಲಿ ಮುಥುರಿಯ ಮಗ ಶಿವರಾಮನು ಬಂದು ಹೇಳಿದ, " ಅಮ್ಮಾವ್ರೇ, ನಮ್ಮ ತಾಯಿಗೆ ಜ್ವರ ಬಂದಿವೆ. ನೆಟ್ಟಗಾಗುವವರೆಗೆ ಈ ಚಂದ್ರಕ್ಕ ಕೆಲಸಕ್ಕೆ ಬರುತ್ತಾಳೆ. "

" ಆಗಲಪ್ಪ, " ಎಂದಳು ತಾಯಿ. ಶಿವರಾಮ ತನ್ನ ಕೆಲಸಕ್ಕೆ ಹೊರಟು ಹೋದ. ಚಂದ್ರಿಯು ಭತ್ತವನ್ನು ಅಳೆದುಕೊಂಡು ತನ್ನ ಕೆಲಸಕ್ಕೆ ತೊಡಗಿದಳು. ತಾಯಿಯು ಬಟ್ಟೆ ಒಗೆಯಲಿಕ್ಕೆಂದು ಬಾವಿಯ ಬಳಿ ಹೋದಳು.

ಮುಧ್ಯಾಹ್ನ ೧ ಗಂಟೆಯ ಸುಮಾರಿಗೆ ನಮ್ಮ ಊಟವಾಯಿತು. ಶಿವ ರಾಮನು ಮನೆಗೆ ಹೋಗುವದಕ್ಕಾಗಿ ಅಪ್ಪಣೆ ಪಡೆದುಕೊಳ್ಳಲು ಬಂದನು.

" ಹಟ್ಟಿಯಲ್ಲಿಯ ಶಗಣಿ ಗೂಡಿಸಿದೆಯಾ ? ದನಕರುಗಳಿಗೆ ನೀರು ತೋರಿಸಿದೆಯಾ ? ಅವೇನು ಶಗಣಿಯನ್ನು ಒದ್ದು ಅದರ ಮೇಲೆಯೇ ಉರುಳಾಡುವವು. ರೊಜ್ಜು ಮಾಡುವವು. " ಎಂದು ನಮ್ಮ ತಾಯಿ ನುಡಿದಳು.

ಶಿವರಾಮನೆಂದನು, " ಎಲ್ಲ ಮುಗಿಸಿಯೇ ಹೊರಟಿದ್ದೇನಮ್ಮಾ. "

" ಒಳ್ಳೇದು ಶಿವರಾಮಾ, ತುಸು ಬಾ ಇಲ್ಲಿ. " ಎಂದು ತಾಯಿಯು ಮನೆಯೊಳಗೆ ಹೋಗಿ ಒಂದು ಬಾಳೆ ಎಲೆ ತುಂಡಿನಲ್ಲಿ ಒಂದು ಮುದ್ದೆ ಬಿಸಿ ಅನ್ನವನ್ನೂ ಲಿಂಬೆಹಣ್ಣಿನ ಉಪ್ಪಿನಕಾಯಿಯನ್ನೂ ಹಾಕಿ ತಂದಳು. ಒಂದು ಚಿಕ್ಕ ಲೋಟಾದಲ್ಲಿ ಮಜ್ಜಿಗೆಯನ್ನೂ ತೆಗೆದುಕೊಂಡು ಬಂದಳು. "ಶಿವರಾಮಾ, ಇದನ್ನು ನಿನ್ನ ತಾಯಿಗೆ ಒಯ್ದು ಕೊಡು. ರೊಟ್ಟೀ ತಿನ್ನಬೇಡವೆಂದು ಹೇಳು.

ಬೇಗ ಗುಣವಾಗುತ್ತದೆ. ”

ಶಿವರಾಮ ತನ್ನ ಕರವಸ್ತ್ರದಲ್ಲಿ ಆ ಅನ್ನವನ್ನು ಸುತ್ತಿಕೊಂಡು, ಮಜ್ಜಿಗೆ ಲೋಟಾ ಹಿಡಿದುಕೊಂಡು ಮನೆಗೆ ತೆರಳಿದನು.

ಸಾಯಂಕಾಲ ಮಗ್ಗಿಪಾಠ ಮುಗಿದೊಡನೆ ನಮ್ಮ ಶಾಲೆ ಬಿಟ್ಟಿತು. ನಾವು ಮನೆಗೆ ಬಂದೆವು. ತಾಯಿ ಗಜರಿಗೆ ಹೇಳುತ್ತಿದ್ದಳು, “ ಗಜರೀ, ಆ ಸಮಯವನ್ನು ಬೆಳಗಿ ಕೊಟ್ಟು ಹೋಗು. ”

ನಮ್ಮ ಮನೆಯಲ್ಲಿ ದೇವರ ಮುಂದೆ ನಂದಾದೀಪವಿಡುವ ಪದ್ಧತಿ ಇತ್ತು. ಭತ್ತ ಕುಟ್ಟುವವರು ಆಗಾಗ್ಗೆ ಅದನ್ನು ಬೆಳಗಿ ಕೊಡುತ್ತಿದ್ದರು. ಭತ್ತದ ಗೊಳಲಿಯಿಂದ ಅದನ್ನು ಬೆಳಗಿದರೆ ತುಂಬ ಹಸನವಾಗುತ್ತದೆ. ಗಜರಿ ಸಮಯವನ್ನು ಬೆಳಗಿಟ್ಟಳು. ತಾಯಿ ಅಕ್ಕಿಯನ್ನು ಅಳೆದುಕೊಂಡು ಕುಟ್ಟುವವರಿಗೆ ಸಂಪ್ರದಾಯದಂತೆ ಕೊಡಬೇಕಾಗಿದ್ದ ದೊಡ್ಡ ನುಚ್ಚು ಸಣ್ಣ ನುಚ್ಚು ಕೊಟ್ಟು ಕಳಿಸಿದಳು.

ಶಿವರಾಮನು ಎಂದಿನಂತೆ ಗಿಡಗಳಿಗೆ ನೀರು ಹಣಿಸಿದನು. ದನಗಳನ್ನು ಕರೆಯಿಸಿದನು. ಅವನು ಮನೆಗೆ ಹೊರಟಾಗ ತಾಯಿ ಅವನಿಗೆ ಒಂದು ಗಿಂಡಿಯಲ್ಲಿ ಆಕಳ ಹಾಲನ್ನೂ, ನನ್ನಿಂದ ಮೊದಲೇ ತರಿಸಿ ಇಟ್ಟ ಮಜ್ಜಿಗೆಹುಲ್ಲನ್ನೂ ತುಳಸಿಕಟ್ಟೆಯಲ್ಲಿ ಹುಗಿದಿಟ್ಟಂಥ ಹಸಿ ಶುಂಠೀ ಬೇರನ್ನೂ ಕೊಟ್ಟು ಹೇಳಿದಳು, “ ಶಿವರಾಮ, ಇದರ ಕಷಾಯವನ್ನು ಮಾಡಿ ನಿಮ್ಮ ತಾಯಿಗೆ ಕೊಡು. ಇದರಲ್ಲಿ ನಾಲ್ಕು ಹವೀಜಕಾಳು ಮತ್ತು ಅರಳಿ ಎಲೆ ಕೂಡ ಹಾಕಿ ಮರಳಿಸಿ ತುಸು ಬಿಸಿಬಿಸಿ ಇರುವಾಗಲೇ ತಾಯಿಗೆ ಕುಡಿಸು. ಆಮೇಲೆ ಬೆಚ್ಚಗೆ ಹೊದಿಸಿ ಮಲಗಿಸು ಅಂದರೆ ಬೆವರು ಬಿಟ್ಟು ಜ್ವರ ಹಗುರಾಗುವದು. ” ಎಂದು ಹೇಳಿ ಕಷಾಯದಲ್ಲಿ ಹಾಕುವದಕ್ಕಾಗಿ ನಾಲ್ಕು ಕಲ್ಲುಸಕ್ಕರೆಯ ಹರಳುಗಳನ್ನೂ ಒಳಗಿನಿಂದ ತಂದು ಕೊಟ್ಟಳು. ಶಿವರಾಮನು ಪ್ರಸನ್ನ ಚಿತ್ತದಿಂದ ಮನೆಗೆ ಹೋದನು.

ಮಥುರೆಯು ಶಿವರಾಮನಿಗೆ “ ಇವನ್ನೆಲ್ಲ ಯಾರು ಕೊಟ್ಟರು ? ” ಎಂದು ಕೇಳಿದಳು.

“ ಶ್ಯಾಮನ ತಾಯಿ ! ”

“ ಅವಳು ದೇವತಾ ಮನುಷ್ಯಳು. ಎಲ್ಲರ ಪರಾಂಬರಿಕೆ ಮಾಡುತ್ತಾಳೆ. ”

ರಾತ್ರಿ ಕಷಾಯ ಕುಡಿದು ಮಲಗಿದ್ದರೂ ಜ್ವರ ಬಿಡಲಿಲ್ಲ. ಮಧುರಿಯ ಜ್ವರವೇನೂ ಆರಲಿಲ್ಲ. ಶಿವರಾಮ ಎಂದಿನಂತೆ ತನ್ನ ಕೆಲಸಕ್ಕೆ ಬಂದ.

ಬಂದೊಡನೆ ತಾಯಿಯ ಮೊದಲ ಪ್ರಶ್ನೆ, "ಶಿವರಾಮ, ನಿನ್ನ ತಾಯಿಗೆ ಹೇಗಿದೆಯೋ ?"

"ಜ್ವರ ಬಿಟ್ಟಿಲ್ಲ. ತಲೆನೋವೂ ತುಂಬಾ ಇದೆ. ರಾತ್ರಿ ನಿದ್ದೆಯೂ ಹತ್ತಿಲ್ಲ."

ಶಿವರಾಮನು ತನ್ನ ದಿನದ ಕೆಲಸಕ್ಕೆ ತೊಡಗಿದನು. ಕೊಟ್ಟಿಗೆಗೂಡಿಸಿ ಶಗಣಿ ಕಸಕಡ್ಡಿಗಳನ್ನೆಲ್ಲ ತಿಪ್ಪೆಗೆ ಹಾಕಿದನು. ತಾಯಿ ಕಾಯಿಪಲ್ಲೆ ಕೊಯ್ಯುವದರಲ್ಲಿ ಮಗ್ನಳಾಗಿದ್ದಳು.

ತಾಯಿಯು ಈ ದಿನವೂ ಶಿವರಾಮನು ಹೋಗುವಾಗ್ಗೆ ಅನ್ನ-ಉಪ್ಪಿನಕಾಯಿ ಕೊಟ್ಟದ್ದಲ್ಲದೆ, ಶುಂಠಿ, ಬಜಿ ಮತ್ತು ಸಾರಂಗದ ಕೋಡು ಅವನ ಕೈಯಲ್ಲಿ ಕೊಟ್ಟು ಹೇಳಿದಳು, "ತಲೆನೋವಿಗೆ ಇದು ಒಳ್ಳೆ ಮದ್ದು. ಇವನ್ನು ಗಂಧದಂತೆ ತೆಯ್ದು ಇದರ ರಾಡಿಯನ್ನು ಹಣೆಗೆಲ್ಲ ಸವರಿ ಚೆನ್ನಾಗಿ ಕಾಸಿಕೊಂಡು ಮಲಗಲಿಕ್ಕೆ ಹೇಳು ನಿಮ್ಮ ತಾಯಿಗೆ. ಏನೂ ಚಿಂತಿಸಬೇಡ. ಬೇಗ ಗುಣವಾಗುತ್ತದೆ ಹೋಗು."

ಎಷ್ಟೋ ದಿನಗಳ ಮೇಲೆ ಮಧುರಿಗೆ ಗುಣವಾಯಿತು. ಆದರೆ ಮೈಯಲ್ಲಿ ರಕ್ತ-ಮಾಂಸಗಳೇ ಇರಲಿಲ್ಲ. ಎಲುಬಿನ ಹಂದರದಂತಾಗಿದ್ದಳು. ಆದರೂ ಕೂತುಕೊಂಡರೆ ಹೇಗೆ ಸಾಗಬೇಕು ? ಮತ್ತೆ ಕೆಲಸದ ಮೇಲೆ ಬಂದು ಹಾಜರಾದಳು. ಅವಳ ಕೃಶವಾದ ಶರೀರವನ್ನು ಕಂಡು ತಾಯಿ ಕೇಳಿದಳು, "ಮಧುರಾ, ಎಷ್ಟು ಬಡಕಲಾಗಿದ್ದಿಯೇ ? ಭತ್ತ ಕುಟ್ಟುವದಕ್ಕೆ ಸಾಧ್ಯವಿದೆಯೇ ?"

"ಹೇಗಾದರೂ ಸಾಗಿದಷ್ಟು ಕುಟ್ಟುವೆನಮ್ಮಾ. ಬಿದ್ದಲ್ಲಿಯೇ ತಿಂದು ತಿಂದು ಸಾಕಾಗಿದೆ. ಈಗ ತುಸು ಶಕ್ತಿ ಬಂದಿದೆ. ಇನ್ನು ನಾಲ್ಕಾರು ದಿವಸದಲ್ಲಿ ಪೂರ್ಣ ಸುಧಾರಿಸಿಕೊಳ್ಳಬಹುದು. ನಿಮ್ಮ ದಯೆ ಇದ್ದರೆ ಸಾಕು. ಏತರ ಕೊರತೆ ?"

"ಮನುಷ್ಯನ ದಯೆ ಎಷ್ಟರ ಮಟ್ಟಿನದು ? ಎಲ್ಲವೂ ದೇವರ ದಯೆ ! ನಾವು ಕೊಡುವವರು ಎಷ್ಟರವರು ? ಒಳ್ಳೇದು. ಈಗ ಹುಡುಗರಿಗಾಗಿ ಅಡಿಗೆ

ತಯಾರಾಗಿದೆ. ನೀನೂ ಅವರ ಜೊತೆಗೇ ಎಗಡು ತುತ್ತು ಊಟ ಮಾಡು. ಅಂದರೆ ಕೆಲಸಕ್ಕೆ ಸಾಮರ್ಥ್ಯವಾದರೂ ಬಂದೀತು. ಆಮೇಲೆ ಮಧ್ಯಾನ್ಹ ಆಯಾಸಪಟ್ಟುಕೊಂಡು ಮನೆಗೆ ಹೋಗಬೇಡ. ಇಲ್ಲಿಯೇ ಉಂಡು ಬಿಡುವಿಯಂತೆ. ತಿಳಿಯಿತೇ ?" ಎಂದು ತಾಯಿ ನುಡಿದಳು.

ಆ ದಿವಸ ಮಥುರಿ ನಮ್ಮ ಜೊತೆಗೇ ಊಟ ಮಾಡಿದಳು. ಆಕೆಯ ಮೋರೆಯ ಮೇಲೆ ಆಗ ಅದೆಷ್ಟು ಕೃತಜ್ಞತಾಭಾವ ಮೂಡಿತ್ತು !

ಇಂದು ಆ ಮಥುರಿ ಮುದುಕೆಯಾಗಿದ್ದಾಳೆ. ನಾನು ಎಂದಾದರೂ ನಮ್ಮ ಕೊಂಕಣ ಸೀಮೆಗೆ ಹೋದಾಗ ಮಥುರಿಯನ್ನು ಭೆಟ್ಟಿಯಾಗುತ್ತೇನೆ. ಆಕೆಯ ಮುಖವೀಗ ನಿರಿಗೆಗಟ್ಟಿದೆ. ಕೂದಲು ಹಣ್ಣಾಗಿ ಹೋಗಿವೆ. ಆದರೂ ಒಂದು ಬಗೆಯ ವಾತ್ಸಲ್ಯವೂ ಪ್ರಸನ್ನತೆಯೂ ಆ ಮುಖದ ಮೇಲೆ ಎದ್ದು ಕಾಣುತ್ತದೆ. ನಾನು ಹೋಗಿ ಅವಳ ಕಾಲಿಗೆ ಬಿದ್ದರೆ, "ಇದೇನಪ್ಪಾ ಶ್ಯಾಮಣ್ಣಾ ?" ಅನ್ನುತ್ತಾಳೆ. ಅವಳಿಗೆ ನನ್ನ ತಾಯಿಯ ನೆನಪು ಬಂದು, "ಶ್ಯಾಮಣ್ಣಾ, ನಿನ್ನ ತಾಯಿಯಿದ್ದಿದ್ದರೆ ಹೀಗೆ ಒಂಟಿಗನನ್ನಾಗಿ ನಿನ್ನನ್ನು ಬಿಡುತ್ತಿದ್ದಿಲ್ಲ. ನಿನ್ನ ಮದುವೆ ಮಾಡಿ ಬಿಡುತ್ತಿದ್ದಳು. ಪಾಪ! ಬೇಗನೆ ಕಣ್ಣು ಮುಚ್ಚಿದಳು ಪುಣ್ಯಾತ್ಮಳು! ಎಲ್ಲರ ಮೇಲೆಯೂ ಅವಳ ಮಮತೆ."

ಇಂಥ ಮಮತೆಯ ಮೂರ್ತಿಯೂ, ದಯಾನಿಧಿಯೂ ಆಗಿದ್ದಂಥ ತಾಯಿ ನನಗೆ ದೊರೆತಿದ್ದಳು.

ರಾತ್ರಿ : ೬

## : : ಕನಿಕರದ ಕಣ್ಣೀರು

"ಬಾಲ್ಯದಿಂದಲೂ ನನಗೆ ದಿನಾಲು ಎರಡು ಹೊತ್ತು ಜಳಕಮಾಡುವ ಅಭ್ಯಾಸವಿದೆ." ಶ್ಯಾಮನು ಕಥೆಯನ್ನು ಆರಂಭಿಸಿದನು. "ಸಾಯಂಕಾಲ ನಾನು ಆಟ ಆಡಲು ಹೋಗುತ್ತಿದ್ದೆ. ಕುಂಟಾಟ, ಕಣ್ಣುಮುಚ್ಚಾಟ, ಆನೆ ಆಟ, ಖೋ ಖೋ ಆಟ, ಹೀಗೆ ಬೇರೆ ಬೇರೆ ಆಟಗಳನ್ನು ಆಡುತ್ತಿದ್ದೆವು. ಆಟವಾಡಿ ಬಂದನಂತರ ನಾನು ಸ್ನಾನ ಮಾಡುತ್ತಿದ್ದೆ. ತಾಯಿ ನೀರು ಕಾಸಿ

ಇಟ್ಟಿರುತ್ತಿದ್ದಳು. ನಾನು ಬಂದೊಡನೆ ಗಂಗಾಳದಲ್ಲಿ ನೀರು ತೋಡಿಕೊಡುತ್ತಿದ್ದಳು. ನಾನು ಹಾಸುಗಲ್ಲ ಮೇಲೆ ಕುಳಿತು ಮೈ ತೊಳೆದುಕೊಳ್ಳುತ್ತಿದ್ದೆ. ತಾಯಿ ನನ್ನ ಕೈ-ಮೈ ತಿಕ್ಕಿಕೊಡುತ್ತಿದ್ದಳು. ಎರಡು ಹೊತ್ತು ಸ್ನಾನ ಮಾಡುವ ರೂಢಿಯು ಬಹಳ ಉತ್ತಮವಾದದ್ದು. ರಾತ್ರಿ ಮಲಗುವ ಮೊದಲು ಸ್ನಾನ ಮಾಡಿದರೆ ಮೈ ಹಗುರಾಗಿರುವದಲ್ಲದೆ ಶುದ್ಧವೂ ನಿರ್ಮಲವೂ ಆಗಿರುತ್ತದೆ. ಮಲಗುವ ಮೊದಲು ಪ್ರಾರ್ಥನೆ ಮಾಡುವ ಪದ್ಧತಿಯು ಇನ್ನೂ ಶ್ರೇಷ್ಠವಾದದ್ದು. ಪ್ರಾರ್ಥನೆಯೆಂದರೆ ಮನಸ್ಸಿನ ಸ್ನಾನವಿದ್ದಂತೆ. ಶರೀರ ಮತ್ತು ಮನಸ್ಸು ನಿರ್ಮಲವಾಗಿದ್ದರೆ ನಿದ್ದೆಯೂ ಸರಿಯಾಗಿ ಹತ್ತುತ್ತವೆ.

ಒಂದು ದಿನ ಆಟ ಮುಗಿಸಿ ಮನೆಗೆ ಬಂದೆನು. ಕೊಳೆಯಾದ ಬಟ್ಟೆಗಳನ್ನು ಬಿಡಿಸಿಟ್ಟು ತಲೆಯ ಜುಟ್ಟಿಕ್ಕೆ ಎಣ್ಣೆಯುಜ್ಜಿಕೊಂಡು, ಸ್ನಾನದ ಕಲ್ಲಿನ ಮೇಲೆ ಕುಳಿತುಕೊಂಡೆನು. ಸ್ನಾನದ ನೀರು ತೊಂಡೇಬಳ್ಳಿಗೆ ಹೋಗುತ್ತಿತ್ತು.

ಸಂಜೆಯ ಸ್ನಾನಕ್ಕೆ ಹೆಚ್ಚು ನೀರನ್ನು ಬಳಸುತ್ತಿದ್ದಿಲ್ಲ. ತಾಯಿ ಮೈ-ಕೈ ತಿಕ್ಕಿದಳು. ನಾನು ಉಳಿದ ನೀರನ್ನು ಹಣಿಸಿಕೊಂಡು ತಾಯಿಯನ್ನು ಕೂಗತೊಡಗಿದೆ, " ಅವ್ವಾ, ಮೈ ಒರೆಸು. ನೀರೆಲ್ಲ ತೀರಿಸಿದೆ. ಚಳಿಯಾಗುತ್ತದೆ ಬೇಗ ಬಾ. "

ಆ ಕಾಲದಲ್ಲಿ ನಮ್ಮೂರ ಕಡೆ ಟಾವೆಲ್ಲು, ಪಂಚೆಗಳ ಬಳಕೆ ಹೆಚ್ಚಾಗಿರಲಿಲ್ಲ. ಹಿರಿಯರು ದೋತರವನ್ನೇ ಹಿಂಡಿಕೊಂಡು ಅದರಿಂದಲೇ ಮೈ ಒರೆಸಿಕೊಳ್ಳುತ್ತಿದ್ದರು. ಸಣ್ಣ ಹುಡುಗರಿಗೆ ತಾಯಂದಿರು ಸೀರೆಯ ತುಂಡಿನಿಂದಲೋ ಅಥವಾ ತಮ್ಮ ಸೆರಗಿನಿಂದಲೋ ಒರೆಸುತ್ತಿದ್ದರು.

ತಾಯಿ ಬಂದು ತನ್ನ ಸೆರಗಿನಿಂದ ನನ್ನ ಮೈ ಒರಸಿದಳು. " ಹೋಗು ಮಗು, ದೇವರಿಗಾಗಿ ಎರಡು ಹೂ ತೆಗೆ " ಎಂದಳು.

" ನನ್ನ ಅಂಗಾಲು ಒದ್ದೆ ಇದೆ. ಅವಕ್ಕೆ ಮಣ್ಣು ಹತ್ತುತ್ತದೆ. ನಾನು ಹೋಗುವದಿಲ್ಲ. ಅಂಗಾಲು ಒರಸು ಅಂದರೆ ನಾನು ಹೋಗುತ್ತೇನೆ. "

" ಅಂಗಾಲು ಏನು ಒರಸುತ್ತಾರೋ ? ತುಸು ಮಣ್ಣು ಹತ್ತಿದರೇನಂತೆ ? "

" ಊಂ-ಹೂಂ, ನಿನ್ನ ಸೆರಗು ಈ ಕಲ್ಲಮೇಲೆ ಹಾಸು. ನಾನು ಅಂಗಾಲು ಉಜ್ಜಿಕೊಳ್ಳುವೆ. ಆಮೇಲೆ ಹೂ ಕೊಯ್ಯುತ್ತೇನೆ " ನಾನು ಹಟವನ್ನೇ ಹಿಡಿದೆ.

"ಶ್ಯಾಮಾ, ನಿನ್ನ ಹಟ ಹೆಚ್ಚಾಯಿತು. ಒಂದೊಂದೇ ದುರ್ಬುದ್ಧಿ ಯಾರು ಕಲಿಸಿಕೊಡುತ್ತಾರೋ ತಿಳಿಯೆ. ಆಗಲಿ ಒರಸಿಕೋ." ಎಂದು ಹೇಳಿ ತಾಯಿ ಕಲ್ಲಿನ ಮೇಲೆ ತನ್ನ ಸೆರಗು ಹಾಸಿದಳು. ನಾನು ಗೆಲುವಿನ ನಗೆಯಿಂದ ಕಾಲನ್ನು ತಿಕ್ಕಿ ಒರಸಿಕೊಂಡು ಟಣ್ಣನೆಹಾರಿ ಹೂ ತರಲು ಹೋದೆನು. ತಾಯಿಯ ಸೀರೆ ಒದ್ದೆಯಾದೀತೆಂಬುದರ ವಿಚಾರ ನನಗಿರಲಿಲ್ಲ. ಅವಳಿಗೆ ಥಂಡಿಯಾದೀತೆಂಬುದರ ಅರಿವು ನನಗೆ ಬರಲಿಲ್ಲ. ಮಗನ ಕಾಲಿಗೆ ಮಣ್ಣು ತಗಲಬಾರದೆಂದೂ ಅವನ ಹಟವನ್ನು ಪೂರೈಸಿ ತೃಪ್ತಿಪಡೆಯಬೇಕೆಂದೂ ತಾಯಿಯು ಸೆರಗನ್ನು ನೀಡಿದ್ದಳು. ಮಕ್ಕಳಿಗಾಗಿ ತಾಯಿ ಯಾವ ಕಷ್ಟ ಸಹನ ಮಾಡಲಿಕ್ಕಿಲ್ಲ! ಯಾವ ತ್ಯಾಗ ಮಾಡಲಿಕ್ಕಿಲ್ಲ!

ನಾನು ಒಳಗೆ ಹೋಗಿ ದೇವರಿಗೆ ಹೂ ಮುಡಿಸಿದೆ. ತಾಯಿ ತುಪ್ಪದ ದೀಪ ಹಿಡಿದುಕೊಂಡು ಬಂದು ಹೇಳಿದಳು, "ಶ್ಯಾಮಾ, ಕಾಲಿಗೆ ಹೊಲಸು ಹಿಡಿಯಬಾರದೆಂದು ಎಚ್ಚರಿಕೆ ವಹಿಸುತ್ತೀ. ಹಾಗೆಯೇ ಮನಸ್ಸಿಗೂ ಹೊಲಸು ಹಿಡಿಯದಂತೆ ನೋಡಿಕೋ. ಒಳ್ಳೆ ಬುದ್ಧಿ ಕೊಡುಯೆಂದು ದೇವರನ್ನು ಬೇಡಿಕೋ."

ಗೆಳೆಯರೆ, ಎಷ್ಟು ಮಧುರ ವಿಚಾರವಿದು. ನಮ್ಮ ಶರೀರ ಮತ್ತು ಬಟ್ಟೆಗಳನ್ನು ಶುಭ್ರವಾಗಿಟ್ಟುಕೊಳ್ಳಲು ನಾವೆಷ್ಟು ಹೆಣಗುತ್ತೇವೆ! ಎಷ್ಟು ದಕ್ಷತೆ ವಹಿಸುತ್ತೇವೆ! ಬಟ್ಟೆಯೊಗೆಯಲು ಅಗಸರಿದ್ದಾರೆ, ಬೂಟು ಸ್ವಚ್ಛ ಮಾಡಲು ಪಾಲಿಷ್ ಮಾಡುವವರಿದ್ದಾರೆ, ಮೈಗೆ ಹಚ್ಚಲು ವಾಸನೆಯ ಸೋಪುಗಳಿವೆ. ಶರೀರಕ್ಕೂ ಬಟ್ಟೆಗೂ ಕೊಳೆ ಹತ್ತಬಾರದೆಂದು ಎಲ್ಲರೂ ಪ್ರಯತ್ನಿಸುತ್ತೇವೆ. ಆದರೆ ಮನಸ್ಸನ್ನು ಸ್ವಚ್ಛವಾಗಿಟ್ಟುಕೊಳ್ಳುವದಕ್ಕಾಗಿ ಯತ್ನಿಸುವವರೆಷ್ಟು ಜನ ಇದ್ದಾರೆ? ದೇವಸ್ಥಾನಗಳಿಗೆ ಬಣ್ಣ ಬಳಿಯುತ್ತೇವೆ. ಆದರೆ ದೇವರ ಚಿಂತನೆಯನ್ನು ಮಾಡುತ್ತೇವೆಯೋ? ಮನಸ್ಸು ಮಲಿನವಾಯಿತೆಂದು ಎಂದಾದರೂ ಕನಿಕರದ ಕಣ್ಣೀರು ಹರಿಸಿದ್ದೇವೆಯೋ? ನಮ್ಮ ಮನಸ್ಸು ಶುದ್ಧವಾಗಿಲ್ಲವೆಂದು ಅಳುವವರು ತೀರ ವಿರಳ. ಬಟ್ಟೆಯಿಲ್ಲ, ಅನ್ನವಿಲ್ಲ, ಪರೀಕ್ಷೆ ಪಾಸಾಗಲಿಲ್ಲ, ಯಾರಾದರೂ ಸತ್ತರು, ಇಂಥ ಪ್ರಸಂಗಗಳಲ್ಲೆಲ್ಲ ಎಲ್ಲರೂ ಕಣ್ಣೀರನ್ನು ಸುರಿಸುತ್ತಾರೆ. ಇಂಥವುಗಳಿಗಾಗಿ ಕಣ್ಣೀರಿನ ಕೆರೆ ಕಣ್ಣಿನ ಹತ್ತರ ಸಿದ್ಧವಾಗಿರುತ್ತದೆ. ಆದರೆ ಇನ್ನೂ ತಾವು ಶುದ್ಧರೂ ನಿಷ್ಪಾಪಿ

ಗಳೂ ಆಗಿಲ್ಲವಲ್ಲ ಎಂದು ಯಾರಾದರೂ ಕಳವಳ ಪಡುವರೇ? ಇನ್ನೂ ತನ್ನ ಹೃದಯ ಹಾಗು ಮನಸ್ಸು ಕೊಳೆಯಿಂದ ನಾರುತ್ತಿದೆಯೆಂದು ವ್ಯಥೆಪಡುವವರು ಅದೆಷ್ಟು ಜನ?

ಮೀರಾಬಾಯಿ ಅಂದಿದ್ದಾಳೆ,

' ಅಸುವನಜಲ ಸೀಂಚ ಸೀಂಚ ಪ್ರೇಮವೇಲಿ ಬೋಯೀ '

ಕಣ್ಣೀರನ್ನು ಹಣಿಸಿ ಹಣಿಸಿ, ಪ್ರೇಮ ಮತ್ತು ಈಶ್ವರನ ಭಕ್ತಿಯೆಂಬ ಬಳ್ಳಿಯನ್ನು ಹಬ್ಬಿಸಿದ್ದೇನೆ. ಈ ಮೀರಾಬಾಯಿಯ ಭಕ್ತಿಗೀತವನ್ನು ನಾನು ಆಗಾಗ್ಗೆ ಗುಣಗುಣಿಸುತ್ತೇನೆ. ಅಶ್ರುಪೂರ್ಣವಾದ ಗದ್ಗದಿತವಾದ ಹೃದಯದಲ್ಲಿ ಭಕ್ತಿಯೆಂಬ ಕಮಲದ ಉಗಮವಾಗುತ್ತದೆ.

ರಾತ್ರಿ : ೭

## : : ಪತ್ರಾವಳಿ

ನಮ್ಮ ಕೊಂಕಣಸೀಮೆಯಲ್ಲಿ ಬಹುಶಃ ಎಲ್ಲರ ಮನೆಯಲ್ಲಿಯೂ ಪತ್ರಾವಳಿಗಳಲ್ಲಿ ಊಟ ಮಾಡುವದೇ ಪರಿಪಾಠ. ಆ ಸಾದಾತನದಲ್ಲಿಯೇ ಒಂದು ಸೊಬಗಿರುತ್ತದೆ. ಸ್ವಚ್ಛತೆಯ ದೃಷ್ಟಿಯಿಂದಲೂ ಪತ್ರಾವಳಿ ಒಳ್ಳೆಯದೆ. ತಾಟುಗಳೇನು? ಮೇಲಿಂದ ಮೇಲೆ ಕಲಾಯಿ ಕೆತ್ತುವದು, ಕಿಲುಬುವದು, ಕೊಳೆಯಾಗುವದು, ಇತ್ಯಾದಿಯಾಗಿ ಹೊಲಸೇ ಹೊಲಸು. ನಮ್ಮ ತಂದೆಯವರಿಗೂ ಪತ್ರಾವಳಿಯ ಮೇಲಿನ ಊಟವೇ ರುಚಿಸುತ್ತಿತ್ತು. ಹೆಂಗುಸರಿಗೂ ಮುಸುರೆ ಪಾತ್ರೆ ತಿಕ್ಕುವ ಕೆಲಸ ಹಗುರಾಗುತ್ತಿತ್ತು. ತಂದೆಯವರು ನಸುಕಿನಲ್ಲಿ ಎದ್ದು ಹೊಲಕ್ಕೆ ಹೋಗುತ್ತಿದ್ದರು. ಬರುವಾಗ ಒಕ್ಕಲಿಗರು ಕೊಟ್ಟ ಅಥವಾ ತೋಟದಲ್ಲಿ ಬೆಳೆದ ಕಾಯಿಪಲ್ಲೆ, ಹೂ ಮತ್ತು ಪತ್ರಾವಳಿಗಾಗಿ ಬಿಡಿ ಎಲೆಗಳನ್ನು ತೆಗೆದುಕೊಂಡು ಬರುತ್ತಿದ್ದರು. ಆಮೇಲೆ ಅವರು ಸ್ನಾನ ಮಾಡಿ ಸಂಧ್ಯಾವಂದನೆ, ಪೂಜೆ ಮೊದಲಾದ ದೇವತಾಕಾರ್ಯದಲ್ಲಿ ತೊಡಗುತ್ತಿದ್ದರು. ನಾವು ಶಾಲೆಯಿಂದ ಬಂದವರೇ ಪತ್ರಾವಳಿಯನ್ನು ಹಚ್ಚುತ್ತ ಕೂಡುತ್ತಿದ್ದೆವು. ತಾಜಾ ಎಲೆಗಳಿಂದ ತಯಾರಿಸಿದ ಪತ್ರಾವಳಿ ಹಾಗೂ ದೊನ್ನೆಗಳನ್ನು ನಿತ್ಯವೂ

ಉಪಯೋಗಿಸುತ್ತಿದ್ದೆವು.

ನನಗೆ ಮೊದಮೊದಲು ಎಲೆ ಹಚ್ಚಲು ಬರುತ್ತಿರಲಿಲ್ಲ. ದೊನ್ನೆಯಂತೂ ಸಾಧಿಸುತ್ತಲೇ ಇರಲಿಲ್ಲ. ‘ ಪತ್ರಾವಳಿಗಿಂತ ಮೊದಲು ದೊನ್ನೆ ಹಚ್ಚಲು ಸಾಧಿಸಿದವನೇ ಜಾಣ ಅಳಿಯನೆಂದು ’ ನಮ್ಮ ಸೀಮೆಯಲ್ಲೊಂದು ಗಾದೆ ಯಿದೆ.

ಮನೆ ಜನರೆಲ್ಲ ಪತ್ರಾವಳಿ ಹಚ್ಚಲು ಕೂಡ್ರುತ್ತಿದ್ದರು. ಒಮ್ಮೊಮ್ಮೆ ಅಜ್ಜಿಯು ಎಲ್ಲರಿಗೂ ಎಲೆ ಹಂಚಿಕೊಟ್ಟು ಪ್ರತಿಯೊಬ್ಬರೂ ಐದೈದು ಎಲೆ ಗಳನ್ನು ಹಚ್ಚಲೇಬೇಕೆಂದು ಅಪ್ಪಣೆ ಕೊಡುತ್ತಿದ್ದಳು. ಅನೇಕ ತರದ ಎಲೆ ಗಳಿಂದ ಪತ್ರಾವಳಿಗಳನ್ನು ತಯಾರಿಸುತ್ತಾರೆ. ಆಲದ ಎಲೆ, ಹಲಸಿನ ಎಲೆ, ಮುತ್ತಲ ಎಲೆ, ಇಪ್ಪೀ ಎಲೆ, ಬಿಳೀ ಸಂಪಿಗೆ ಎಲೆ ಮೊದಲಾದ ಹಲವಾರು ಜಾತಿಯ ಎಲೆಗಳಿಂದ ಪತ್ರಾವಳಿ ಹಚ್ಚುತ್ತಾರೆ. ಕೆಲವರಂತೂ ಶ್ರಾದ್ಧದದಿವಸ ಇಪ್ಪಿಯ ಎಲೆ ಶ್ರೇಷ್ಠವೆಂದು ಉಪಯೋಗಿಸುತ್ತಾರೆ. ಚಾತುರ್ಮಾಸದಲ್ಲಿ ಹೆಂಗುಸರು ಮಾವಿನ ಎಲೆ ಅಥವಾ ಹಲಸಿನ ಎಲೆಯ ಮೇಲೆಯೇ ಊಟ ಮಾಡಬೇಕೆಂಬ ವ್ರತ ಹಿಡಿಯುವದುಂಟು. ಕೊಂಕಣದಲ್ಲಿ ಪತ್ರಾವಳಿ ಗೊಂದು ಧಾರ್ಮಿಕ ಸಂಸ್ಕೃತಿಯ ಸ್ಥಾನವು ದೊರೆತಿದೆ. ಗಿಡಗಳ ಹಾಗು ಅವು ಗಳ ಎಲೆಗಳ ಮಹಿಮೆ ಅದೆಷ್ಟು ದೊಡ್ಡದು!

“ ಶ್ಯಾಮಾ, ನೀನು ಎಲೆ ಹಚ್ಚಲು ಕಲಿ. ಇಲ್ಲದೆ ಹೋದರೆ ನಿನಗೆ ಊಟವೇ ಸಿಗಲಿಕ್ಕಿಲ್ಲ ” ತಾಯಿ ಗದರಿಸಿ ಹೇಳಿದಳು.

“ ನನಗೆ ಹಚ್ಚಲಿಕ್ಕೆ ಬರುವದಿಲ್ಲ ಹೋಗು. ನಾನೇನೂ ಹಚ್ಚುವದಿಲ್ಲ ” ಎಂದು ನಾನೂ ಸಿಟ್ಟಿನಿಂದ ನುಡಿದೆ.

ನನ್ನ ಅಕ್ಕ ತವರುಮನೆಗೆ ಬಂದಿದ್ದಳು. ಆಕೆ ನನಗೆ, ‘ ಶ್ಯಾಮಾ, ಇಲ್ಲಿ ಬಾ. ಅದರಲ್ಲೇನು ಮಹಾ. ನಾನು ನಿನಗೆ ಕಲಿಸಿ ಕೊಡುತ್ತೇನೆ. ” ಎಂದಳು.

“ ಬೇಡ. ನನಗೇನೂ ಕಲಿಸುವದು ಬೇಕಾಗಿಲ್ಲ ” ಎಂದು ಉದ್ಧಟ ತನದಿಂದಲೇ ನನ್ನ ಪ್ರೀತಿಯ ಅಕ್ಕನಿಗೆ ಉತ್ತರ ಕೊಟ್ಟೆ.

ನನ್ನ ಅಕ್ಕ ಬಲು ನೀಟಾಗಿ ಪತ್ರಾವಳಿ ಹಚ್ಚುತ್ತಿದ್ದಳು. ನನ್ನ ತಂದೆ ಯವರೂ ಆ ವೃತ್ತಿಯಲ್ಲಿ ಹೆಸರು ಗಳಿಸಿದ್ದರು. ನಮ್ಮ ಊರಲ್ಲಿ ರಾಮಭಟ್ಟ

ರೆಂಬವರಿದ್ದರು. ಅವರಂತೂ ಪತ್ರಾವಳಿ ವಿಶಾರದರಾಗಿದ್ದರು. ಅವರಿಗೆ ಪತ್ರಾವಳಿ ಹಚ್ಚಲು ಯಾವ ಎಲೆಯಾದರೂ ನಡೆಯುತ್ತಿತ್ತು. ಅಡ್ಡತಿಡ್ಡ ಎಲೆ ಸಣ್ಣ ಎಲೆ, ತುಂಡು ಎಲೆ ಯಾವುದಿದ್ದರೂ ಅದನ್ನು ಜಾಣ್ಮೆಯಿಂದ ಹೊಂದಿಸಿ ಕೊಂಡು ಎಲೆ ಹಚ್ಚುತ್ತಿದ್ದರು. ರಾಮಭಟ್ಟರ ಪತ್ರಾವಳಿ ಕಲೆಯೇ ಅಂಥದು. ಆಗ ನಮ್ಮ ಸೀಮೆಯಲ್ಲಿ ಯಾರದಾದರೂ ಮನೆಯಲ್ಲಿ ಲಗ್ನ, ಮುಂಜಿ ಮೊದ ಲಾದ ಕಾರ್ಯಗಳು ಇದ್ದಲ್ಲಿ ಊರ ಜನರೆಲ್ಲ ಒಂದೆಡೆ ಸೇರಿ ಪತ್ರಾವಳಿ ಹಚ್ಚು ತ್ತಿದ್ದರು. ಮಾತುಕತೆಯಾಡುತ್ತ ಸಹಕಾರ್ಯದಿಂದ ಕೆಲಸ ಮಾಡುತ್ತಿದ್ದರು ಈಗ ಆ ಪದ್ಧತಿ ನಷ್ಟವಾಗುತ್ತ ಬಂದಿದೆ. ಇಂಥ ಈ ಪತ್ರಾವಳಿ ಪರಂಪರೆ ಯಿಂದಾಗಿ ನನಗೂ ಕಲಿಯಬೇಕಾಗಿ ಬಂದಿತು. ಆದರೂ ನಾನು ಹಟಮಾರಿ ಯಾಗಿದ್ದರಿಂದ ಅಂದು ನಾನು ಎಲೆಯನ್ನು ಹಚ್ಚಲಿಲ್ಲ

ನಾನು ಪತ್ರಾವಳಿ ಹಚ್ಚಲಿಲ್ಲವಾದ್ದರಿಂದ ತಾಯಿ ನನಗೆ ಊಟಕ್ಕೆ ನೀಡ ಲಿಲ್ಲ. ಮೊದಲೇ ತಿಳಿಸಿದಂತೆ ಎಲ್ಲರೂ ತಾವು ಹಚ್ಚಿದ ಪತ್ರಾವಳಿಗಳನ್ನು ಹಾಕಿಕೊಂಡು ಕುಳಿತರು. ನನಗೆ ಪತ್ರಾವಳಿ ಇದ್ದಿಲ್ಲ. ಎಲ್ಲರೂ ನಗಹತ್ತಿ ದರು. ಆದರೂ ನನ್ನ ಸಲುವಾಗಿ ನನ್ನ ಅಕ್ಕ ಮಧ್ಯಸ್ಥಿಕೆ ವಹಿಸಿದಳು. “ ಶ್ಯಾಮಾ, ನಾಳೆ ಎಲೆ ಹಚ್ಚುತ್ತೀಯಲ್ಲವೇ ? ನಾನು ನಿನಗೆ ಕಲಿಸುತ್ತೇನೆ. ಅಮ್ಮಾ, ಶ್ಯಾಮ ಖಂಡಿತ ಹಚ್ಚುತ್ತಾನೆ. ಅವನಿಗೂ ನೀಡಿ ಬಿಡು ” ಎಂದು ಹೇಳಿದಳು. ಆದರೆ ನಾನು ನನ್ನ ದುರಭಿಮಾನವನ್ನು ಬಿಡಲಿಲ್ಲ. ಸೆಟೆದು ಕೊಂಡೇ ಇದ್ದೆನು.

“ ನನಗೇನೂ ನಿಮ್ಮ ಊಟ ಬೇಕಾಗಿಲ್ಲ. ಎಲೆಯನ್ನೂ ಹಚ್ಚುವದಿಲ್ಲ. ಉಪವಾಸವೇ ಇರುತ್ತೇನೆ ” ಎಂದು ಆರ್ಭಟಿಸಿ ಪಡಸಾಲೆಗೆ ಹೋಗಿ ಮೂಲೆ ಹಿಡಿದು ಕುಳಿತುಕೊಂಡೆ. ಹೊಟ್ಟೆ ಹಸಿದಿತ್ತು. ಮತ್ತೆ ಯಾರಾದರೂ ರಮಿ ಸಲು ಬರಬಹುದೆಂದು ದಾರಿ ಕಾಯುತ್ತಲಿದ್ದೆ.

ಕೊನೆಗೆ ಮತ್ತೆ ನಿರಭಿಮಾನಿಯೂ ದೊಡ್ಡ ಮನಸ್ಸಿನವಳೂ ಆದ ಅಕ್ಕನೇ ಬಂದು, “ ಏಳು ಶಾಮಾ, ಇದು ತರವಲ್ಲ. ನನ್ನ ಮಾತು ಕೇಳು. ನಾಳೆ ಅತ್ತೆಯ ಮನೆಗೆ ಹೋದ ಬಳಿಕ ನಿನಗೆ ನಾನೇನು ಹೇಳಲಿಕ್ಕೆ ಬರು ವುದು ಅಷ್ಟರಲ್ಲೇ ಇದೆ. ಏಳು. ಮೂರೇ ಎಲೆಯ ಚಿಕ್ಕ ಪತ್ರಾವಳಿ ಹಚ್ಚಿ ಕೊಂಡು ಊಟಕ್ಕೆ ಕೂಡ್ರು ” ಎಂದಳು.

ಚಿಕ್ಕವರಿಗಾಗಿ ಮೂರೆಲೆ ಪತ್ರಾವಳಿ, ನಾಲ್ಕೆಲೆ ಪತ್ರಾವಳಿಯನ್ನು ಹಚ್ಚುವ ರೂಢಿಯೂ ಇದೆ. ದೊಡ್ಡ ದೊಡ್ಡ ಮುತ್ತಲ ಎಲೆಗಳಿದ್ದರೆ ಒಂದೊಂದೇ ಎಲೆ ಕೂಡ ಮಕ್ಕಳಿಗೆ ಸಾಕಾಗುತ್ತದೆ. ನಮ್ಮ ತಂದೆಯವರಿಗೆ ಸಣ್ಣ ಪತ್ರಾವಳಿ ಸರಿಬರುತ್ತಿರಲಿಲ್ಲ. ದೊಡ್ಡದಾಗಿ ದುಂಡಗೆ ಹಚ್ಚಿದ ಪತ್ರಾವಳಿಯೇ ಅವರಿಗೆ ಬೇಕು. 'ಅಡವಿಯಲ್ಲಿ ಬೇಕಾದಷ್ಟು ಎಲೆ ಇರುವಾಗ ಆದಕ್ಕೇಕೆ ಬರಗಾಲ' ಎನ್ನುತ್ತಿದ್ದರು. 'ವಿಸ್ತೀರ್ಣ ಪಾತ್ರೇ ಭೋಜನಂ' 'ಊಟಕ್ಕೆ ದೊಡ್ಡ ಎಲೆ ಬೇಕು' ಎನ್ನುತ್ತಿದ್ದರು.

ಅಕ್ಕನ ಮಾತಿನಿಂದ ನನ್ನ ಹೃದಯ ಕರಗಿತು. ಅತ್ತೆಯ ಮನೆಗೆ ಹೋಗಿದ್ದರೆ ಮುನಿಸುಗೊಂಡ ತಮ್ಮನನ್ನು ಸಮಾಧಾನಗೊಳಿಸಲು ಬರುವದು ಅಷ್ಟರಲ್ಲೇ ಇತ್ತು ! ಎರಡು ದಿವಸಗಳ ಮಟ್ಟಿಗೆ ಬಂದವಳು. ಅಂಥವಳ ಜೊತೆಗೂ ನಾನು ಸರಿಯಾಗಿ ನಡೆಯಲಿಲ್ಲ. ನನಗೆ ಕೆಡುಕು ಅನಿಸಿ ಕಣ್ಣಿನಿಂದ ನೀರು ಬಂದಿತು. ಅಕ್ಕನು ನನ್ನ ಕೈಯಲ್ಲಿ ಎಲೆ ಕೊಟ್ಟು, 'ಕೆಳಗೆ ಆಧಾರಕ್ಕೆ ಈ ಎಲೆ ಹಚ್ಚು' ಎಂದಳು. ನಾನು ಕೈಯಲ್ಲಿ ಒಂದು ಸಿಬಿರು ಕಡ್ಡಿಯನ್ನು ತೆಗೆದುಕೊಂಡು ಎಲೆಗೆ ಚುಚ್ಚಿದೆ. ಆ ಕಡ್ಡಿಯು ನಾರುನಾರಾಗಿದ್ದರಿಂದ ಮುರಿಯಲಿಲ್ಲ. 'ಶ್ಯಾಮಾ, ಈ ಕಡ್ಡಿ ಚೆನ್ನಾಗಿದೆ ತೆಗೆದುಕೋ' ಎಂದು ಅಕ್ಕ ಬೇರೊಂದು ಕಡ್ಡಿಯನ್ನು ಕೊಟ್ಟಳು. ಹೇಗಾದರೂ ಮಾಡಿ ದೊಡ್ಡ ದೊಡ್ಡ ಕಡ್ಡಿಯನ್ನು ಚುಚ್ಚಿ ಎಲೆ ಹಚ್ಚಿಕೊಂಡು ಒಳಗೆ ನಡದೆ.

"ನನ್ನ ಪತ್ರಾವಳಿ ತಯಾರಿಸಿಕೊಂಡು ಬಂದಿದ್ದೇನೆ. ಊಟಕ್ಕೆಹಾಕು" ತಾಯಿಗೆ ಹೇಳಿದೆ.

"ಕೈಕಾಲು ತೊಳೆದುಕೊಂಡು ಬಂದೆಯೇನು" ತಾಯಿ ಕೇಳಿದಳು.

"ಆಗಲೇ ತೊಳೆದುಕೊಂಡಿದ್ದೇನೆ. ನಾನೇನೂ ಹೊಲಸು ಮಾಡಿಕೊಂಡಿಲ್ಲ."

"ಆದೀತು. ಆದರೆ ಸೂ, ಸೂ ಮಾಡುತ್ತಿದ್ದೀಯಲ್ಲ. ಮೂಗು ಸಾಫು ಮಾಡಿಕೊಂಡು ಬಾ ಹೋಗು, ಬಡಿಸಿ ಇಡುತ್ತೇನೆ."

ನಾನು ಮೂಗು ಸ್ವಚ್ಛ ಮಾಡಿಕೊಂಡು ಬಂದು ಊಟಕ್ಕೆ ಕುಳಿತುಕೊಂಡೆ.

"ಹೊಟ್ಟೆ ತುಂಬಾ ಉಣ್ಣು ಮಗು. ಸುಮ್ಮನೆ ಹಟ ಹಿಡಿದಿದ್ದೆ. ನೆರೆ

ಮನೆಯ ವಾಸೂ ನೋಡು, ಚಿಕ್ಕವನಾದರೂ ಹೇಗೆ ಪತ್ರಾವಳಿ ಹಚ್ಚುತ್ತಾನೆ?" ಎಂದಳು ತಾಯಿ.

ನಾನು ಸಿಟ್ಟಿನಿಂದ ಗಪ್ ಗಪ್ ಊಟ ಮಾಡುತ್ತಿದ್ದೆ. ಪತ್ರಾವಳಿಯನ್ನು ಹೇಗೆ ಹೇಗೋ ಹಚ್ಚಿದ್ದೆ. ಅದರ ಒಂದು ಕಡ್ಡಿ ಅನ್ನದೊಡನೆ ಸೇರಿ ಗಂಟಲನ್ನು ಹೊಕ್ಕಿತು. ಕಣ್ಣಲ್ಲಿ ನೀರೂರಿತು. ನಾನು ಗಾಬರಿಯಾದೆ. ಕೊನೆಗೊಮ್ಮೆ ಅದು ಹೊರಗೆ ಬಂದಿತು.

"ಗಂಟಲಲ್ಲಿ ಕಡ್ಡಿ ಸಿಗುತ್ತದೆ. ನನಗೆ ಎಲೆ ಹಚ್ಚಲು ಬರುವದಿಲ್ಲವೆಂದರೂ ನೀನು ಕೇಳುವದಿಲ್ಲ. ಪತ್ರಾವಳಿ ಹಚ್ಚು, ಪತ್ರಾವಳಿ ಹಚ್ಚು ಎನ್ನುತ್ತಿ" ಎಂದು ಸಿಟ್ಟುಸಿಟ್ಟಿನಿಂದ ತಾಯಿಯನ್ನು ದಿಟ್ಟಿಸುತ್ತ ನುಡಿದೆ.

"ನಮ್ಮ ಗಂಟಲಲ್ಲಿ ಏಕೆ ಕಡ್ಡಿ ಸೇರುವದಿಲ್ಲ. ನೀನು ಮನಸ್ಸಿಲ್ಲದೆ ಮಾಡುವ ಕೆಲಸದ ಕಟುಪರಿಣಾಮವಿದು. ಚೆನ್ನಾಗಿ ಪತ್ರಾವಳಿ ಹಚ್ಚುವವರೆಗೆ ನೀನು ಹಚ್ಚಿದ ಎಲೆಯ ಮೇಲೆಯೇ ನಿನಗೆ ಬಡಿಸುತ್ತೇನೆ." ತಾಯಿ ಹೇಳಿದಳು.

ನಾನು ಮರುದಿವಸದಿಂದ ಒಳ್ಳೆ ಪತ್ರಾವಳಿಗಳನ್ನು ಹಚ್ಚತಕ್ಕದ್ದೆಂದು ನಿರ್ಧರಿಸಿದೆ. ಅಕ್ಕನ ಪತ್ರಾವಳಿ ಹಚ್ಚುವ ರೀತಿ, ಕಡ್ಡಿ ಚುಚ್ಚುವ ವಿಧಾನ, ಎಲೆ ಜೋಡಣೆ ಮಾಡಿಕೊಳ್ಳುವ ಕುಶಲಗಾರಿಕೆ ಎಲ್ಲವನ್ನೂ ಚಿತ್ತಗೊಟ್ಟು ನೋಡಿಕೊಂಡೆ. ಕೆಲವು ಎಲೆಗಳನ್ನು ಮಡಚಿಕೊಂಡು ಸಿಬಿರು ಚುಚ್ಚಬೇಕಾಗುತ್ತದೆಂಬುದು ಆಗ ನನಗೆ ಗೊತ್ತಾಯಿತು. ಯಾವದೇ ವಿಷಯವಿರಲಿ, ಬಲ್ಲವರಿಂದ ಮೊದಲು ಚೆನ್ನಾಗಿ ಕಲಿತುಕೊಳ್ಳಬೇಕು. ಮನುಷ್ಯನು ಪ್ರತಿಯೊಂದು ಕೆಲಸವನ್ನು ಉತ್ತಮವಾಗಿ ಮಾಡಿಯೇ ತೀರೇನೆಂಬ ಧ್ಯೇಯವನ್ನಿಟ್ಟುಕೊಂಡಿರಬೇಕು. ಪತ್ರಾವಳಿಯಂಥ ಸಣ್ಣ ಕೆಲಸವೇ ಇರಲಿ, ಗ್ರಂಥ ಬರೆಯುವದಿರಲಿ, ಬಟ್ಟೆ ನೇಯುವದಿರಲಿ, ಯಾವ ಕೆಲಸವಿದ್ದರೂ ಮನಸ್ಸುಗೊಟ್ಟು ಕಲಾಪೂರ್ಣವಾಗಿ ಮಾಡಬೇಕು. ನನ್ನ ತಂದೆಯವರೂ ಇದೇ ವಿಚಾರದವರಾಗಿದ್ದರು. ಅವರು ಕೋಲಿನ ಮೇಲೆ ಬಟ್ಟೆ ಒಣಗಲು ಹಾಕಿದಾಗ ನೋಡಬೇಕು, ಅಂಚಿಗೆ ಅಂಚು ಸರಿಯಾಗಿ ಕೂತಿರುತ್ತಿತ್ತು. ನಮ್ಮ ಊರಲ್ಲಿ ಒಬ್ಬ ಬಡವನಿದ್ದ. ಅವನು ಅಗಸನೊಬ್ಬನಲ್ಲಿ ಬಟ್ಟೆ ಒಣಗಿಸುವ ಕೆಲಸಕ್ಕಿದ್ದ. ಅವನು ಒಳ್ಳೆ ಕುಶಲನಾದ ಕೆಲಸಗಾರ. ಅವನು ಕೆಲಸ ಮಾಡುವಾಗ ನಾವು ನೋಡುತ್ತ ಕೂಡ್ರು

ತ್ತಿದ್ದೆವು. ಅದೇರೀತಿ ನಮ್ಮ ತಂದೆಯವರೂ ಎಲ್ಲ ಕೆಲಸಗಳಲ್ಲಿ ನಿಷ್ಣಾತ ರಾಗಿದ್ದರು. ಅವರು ಗಿಡಗಳಿಗೆ ನೀರೆರೆಯುವಾಗ ನಾವು ನೋಡುತ್ತಿದ್ದೆವು. ಮಳೆಯೇ ಬೀಳುತ್ತದೆಯೋ ಎಂಬಂತೆ ನೀರು ಸಿಂಪಡಿಸುತ್ತಿದ್ದರು.

ನನ್ನ ತಾಯಿ ನನಗೆ ಪ್ರತಿಯೊಂದು ಕೆಲಸವನ್ನೂ ಮನಸ್ಸುಗೊಟ್ಟು ಮಾಡಲು ಕಲಿಸಿದಳು. ಪ್ರತಿಯೊಂದು ವಿಷಯದತ್ತ ಜಾಗ್ರತೆ ವಹಿಸಲು ಪ್ರೇರೇಪಿಸುತ್ತಿದ್ದಳು. ತಾವು ಮಾಡುವ ಪತ್ರಾವಳಿ ಸರಿಯಾಗಿಲ್ಲದೆ ಹೋದರೆ ಉಣ್ಣುವವರ ಗಂಟಲಲ್ಲಿ ಸಿಬಿರು ಹೋಗಿ ಅಪಾಯವಾಗಬಹುದು. ಪತ್ರಾವಳಿ ಯನ್ನು ಹಚ್ಚುವಾಗ್ಗೆ ನಾವು ಯಾವಾಗಲೂ ಗಮನ ಕೊಡತಕ್ಕದ್ದು. 'ಯಾರೇ ಇದರಲ್ಲಿ ಉಂಡರೂ ಸುಖವಾಗಿ ಉಂಡಿರಬೇಕು. ಸಿಬಿರು ಏಳಬಾರದು, ಸಂದು ಬಿಟ್ಟು ಕಲಸಿದ ಅನ್ನ ಕೆಳಗೆ ಇಳಿಯಬಾರದು.' ಇದನ್ನು ಅರಿತುಕೊಂಡು ನಾನು ಸುಂದರವಾದ ಪತ್ರಾವಳಿಗಳನ್ನು ಹಚ್ಚಲಿಕ್ಕೆ ಕಲಿತುಕೊಂಡೆ.

ಒಂದುದಿನ ನಾನು ತಯಾರಿಸಿದ ಎಲೆಯನ್ನು ತಂದೆಯವರಿಗೆ ಉಣ್ಣಲು ಇಟ್ಟಿದ್ದರು. ಅವರು ಅದನ್ನು ನೋಡಿ, "ಚಂದ್ರಾ, ಈ ಅಂದವಾದ ಪತ್ರಾವಳಿ ಯನ್ನು ನೀನು ಹಚ್ಚಿದೆಯೇನು ?" ಎಂದು ಕೇಳಿದರು.

ಅಕ್ಕ ಹೇಳಿದಳು, "ಇಲ್ಲ. ಇದನ್ನು ಶ್ಯಾಮ ಹಚ್ಚಿದ್ದಾನೆ."

"ನಿಜವೇ ? ಇಷ್ಟೊಂದು ಚೆನ್ನಾಗಿ ಹಚ್ಚಲಿಕ್ಕೆ ಯಾವಾಗ ಕಲಿತು ಕೊಂಡ ?"

ತಾಯಿ ಮುಂದೆ ಬಂದು ಉತ್ತರಿಸಿದಳು, "ಆ ದಿನ ಊಟಕ್ಕೆ ಚಕ್ರ ಕೊಟ್ಟ ಮೇಲೆ ಕಲಿತುಕೊಂಡ. ಚೆನ್ನಾಗಿ ಹಚ್ಚುವ ವರೆಗೆ ಅದರ ಮೇಲೆ ನೀನೇ ಊಟ ಮಾಡತಕ್ಕದ್ದೆಂದು ಅವನಿಗೆ ಬಜಾವಣೆ ಮಾಡಿದ್ದರಿಂದ ಈಗ ಅದನ್ನು ಕಲಿತಿದ್ದಾನೆ."

"ಅಮ್ಮಾ, ಹಿಂದಿನ ಸಂಗತಿಯನ್ನೇಕೆ ತೆಗೆಯುವಿ ? ಭಾವಣ್ಣಾ, ಈಗ ನನಗೆ ಆ ವಿದ್ಯೆ ಸರಿಯಾಗಿ ಬಂದಿದೆಯಲ್ಲವೇ ?" ಎಂದು ನಾನು ಕೇಳಿದೆ.

"ಭಲೆ, ಚೆನ್ನಾಗಿ ಸಾಧಿಸಿರುವೆ. ಆದರೆ ದೊನ್ನೆಯನ್ನು ಹಚ್ಚಲಿಕ್ಕೆಲ್ಲಿ ಬರುತ್ತದೆ ?" ತಂದೆ ನುಡಿದರು.

"ಅದನ್ನೂ ತಯಾರಿಸಿದ್ದೇನೆ. ಭಾವಿಯ ಕಟ್ಟೆಯ ಮೇಲೆ ಅಕ್ಕನು ಮಾಡಿಟ್ಟ ದೊನ್ನೆಯನ್ನು ನೋಡಿ ನಾನೂ ಅದರಂತೆಯೇ ತಯಾರಿಸಿದ್ದೇನೆ.

ಊಟವಾದ ಬಳಿಕ ತಂದು ತೋರಿಸುತ್ತೇನೆ ನಿಮಗೆ." ಎಂದು ನಾನು ಹೇಳಿದೆ.

ನನ್ನ ಪತ್ರಾವಳಿಯ ಪ್ರಶಂಸೆಯಿಂದಾಗಿ ನಾನು ಉಬ್ಬಿ ಹೋಗಿದ್ದೆ. ಊಟವಾದ ಮೇಲೆ ಒಳ್ಳೆ ಆಸ್ಥೆಯಿಂದ ದೊನ್ನೆಯನ್ನೂ ತಂದು ತೋರಿಸಿದೆ.

"ಶ್ಯಾಮೂ, ಇದನ್ನು ತಯಾರಿಸಿದ್ದೇನೋ ಸರಿಯೇ. ಆದರೆ ಇಲ್ಲಿ ತಪ್ಪಿರುವಿ ನೋಡು. ಮುಂಭಾಗದಲ್ಲಿರುವ ಮಡಿಕೆ ಸರಿಯಾಗಿ ಬೀಳಬೇಕು." ಎಂದು ಹೇಳಿ ತಂದೆಯವರು ಅದನ್ನು ಸರಿಪಡಿಸಿಕೊಟ್ಟರು. ಆಮೇಲೆ ಅದನ್ನು ತಾಯಿಗೆ ಹೋಗಿ ತೋರಿಸಿದೆ. ಅವಳಿಗೂ ಸಂತೋಷವಾಯಿತು.

"ನೋಡು ಶ್ಯಾಮಾ, ಈಗ ಹೇಗೆ ಈ ಕೆಲಸ ಬಂತು? ಹೀಗೆ ಸರಿಯಾಗಿ ಕೆಲಸ ಮಾಡಿದರೆ ಯಾರು ಸಿಟ್ಟಾಗುತ್ತಾರೆ? ಸುಮ್ಮನೆ ರೇಗಿಕೊಂಡು ಅದು ಬರುವದಿಲ್ಲ — ಇದು ಬರುವದಿಲ್ಲ ಎಂದು ಹೇಳಿದರೆ ಕೋಪ ಬರುವದು. ದೇವರು ಯಾರಿಗೆ ಕೈಕಾಲುಗಳನ್ನು ಕೊಟ್ಟಿದ್ದಾನೋ ಅವರಿಗೆ ಎಲ್ಲವನ್ನೂ ಮಾಡಲು ಸಾಧ್ಯವಿದೆ. ಮನಸ್ಸಿನಲ್ಲಿ ನಿರ್ಧಾರ ಮಾತ್ರ ಇರಬೇಕು. ಚಂದ್ರಾ, ಇವನಿಗೆ ಇನಾಮಾಗಿ ಒಂದು ಜರದಾಳ ಕೊಡು. ಚೆನ್ನಾಗಿ ಪತ್ರಾವಳಿ ಹಚ್ಚಿದ್ದಾನೆ." ತಾಯಿಯು ಹೇಳಿದಳು. ಅಕ್ಕನು ಒಂದು ಜರದಾಳವನ್ನು ತಂದು ಕೊಟ್ಟಳು. ಆಹಹಾ! ಎಷ್ಟು ರುಚಿಕರವಾಗಿತ್ತದು! ಸಮುದ್ರ ಮಂಥನದ ನಂತರ ದೇವತೆಗಳಿಗೆ ಅಮೃತವೂ ಅಷ್ಟು ರುಚಿಯೆನಿಸಿರಲಿಕ್ಕಿಲ್ಲ! ಸವಿಯು ಪದಾರ್ಥಗಳಲ್ಲಿರದೆ, ತಾನು ಮಾಡಿದ ಶ್ರಮದಲ್ಲಿದೆ! ನಿಜವಾದ ಆನಂದವಿರುವದು ಕರ್ಮದಲ್ಲಿಯೇ!

ರಾತ್ರಿ : ೮

## : : ಕ್ಷಮೆಗಾಗಿ ಪ್ರಾರ್ಥನೆ

ಹೊರಗೆ ಹಿಟ್ಟು ಚಲ್ಲಿದ ಹಾಗೆ ಬೆಳದಿಂಗಳು ಬಿದ್ದಿತ್ತು. ದೇವಸ್ಥಾನದ ಅಟ್ಟದ ಮುಂದಿನ ಚೌಕಿನಲ್ಲಿ ಎಲ್ಲರೂ ಕುಳಿತಿದ್ದರು. ದೂರದಲ್ಲಿ ನದಿಯ ಪ್ರವಾಹವು ಬೆಳ್ಳಿಯ ಪ್ರವಾಹದಂತೆ ಕಾಣುತ್ತಿತ್ತು. ನದಿಗೆ ವಿಶ್ರಾಂತಿ

ಯೆಂಬುದೇ ಗೊತ್ತಿಲ್ಲ. ಸತತವಾಗಿ ಹರಿಯುವದೊಂದೇ ಗೊತ್ತು. ಆ ಜಲ ದೇವತೆಯ ಪ್ರಾರ್ಥನೆಯೆಂದರೆ ಕರ್ಮಮಯವಾದ ಪ್ರಾರ್ಥನೆ. ಅದು ಇಪ್ಪತ್ತು ನಾಲ್ಕು ತಾಸೂ ಒಂದೇಸವನೆ ಸಾಗಿರುತ್ತದೆ. ಕರ್ಮದಲ್ಲಿ ಮಗ್ನವಾಗಿರುವಾಗಲೇ ಒಮ್ಮೊಮ್ಮೆ ಹಾಡುವದು, ಒಮ್ಮೊಮ್ಮೆ ನಗುವದು, ಆಡುವದು, ಒಮ್ಮೊಮ್ಮೆ ಗಂಭೀರವಾಗುವದು ಮತ್ತು ಸಿಟ್ಟಿನಿಂದ ಅಬ್ಬರಿಸುವುದು. ನದಿಯು ಒಂದು ಸುಂದರ, ನಿಗೂಢ ಮತ್ತು ಗಂಭೀರ ಸಮಸ್ಯೆಯಾಗಿದೆ. ಶ್ಯಾಮನು ಆ ನದಿಯ ಕಡೆಗೇ ನೋಡುತ್ತ ನಿಂತಿದ್ದನು. ಸೃಷ್ಟಿಸೌಂದರ್ಯವು ಶ್ಯಾಮನಿಗೆ ಹುಚ್ಚು ಹಿಡಿಸಿತ್ತು.

ಕೆಲವು ಸಲ ರಮ್ಯವಾದ ಸೂರ್ಯಾಸ್ತವನ್ನು ಕಂಡು ತನ್ಮಯನಾಗಿ ಹೋಗುತ್ತಿದ್ದನು. ಹೊಸ ಹೊಸ ಕಾವ್ಯಗಳನ್ನು ರಚಿಸುತ್ತಿದ್ದನೋ ಏನೋ? ಇಂದು ಕೂಡ ಆ ದೃಶ್ಯವನ್ನು ನೋಡುವದರಲ್ಲಿಯೇ ಮುಳುಗಿ ಹೋದಂತಿದ್ದನು. ರಾಮನು ಅವನ ಹತ್ತಿರ ಹೋಗಿ ಹೇಳಿದನು, “ ಶ್ಯಾಮಾ, ಎಲ್ಲರೂ ಬಂದಿದ್ದಾರೆ. ಪ್ರಾರ್ಥನೆಗೆ ಆರಂಭವಾಗುತ್ತದೆ ನಡೆ. ”

“ ಹೌದು, ನಾನು ಹೀಗೇ ನೋಡುತ್ತ ನಿಂತುಬಿಟ್ಟೆನಲ್ಲ. ” ಎಂದು ಹೇಳಿ ಶ್ಯಾಮನು ತನ್ನ ಸ್ಥಳದಲ್ಲಿ ಹೋಗಿ ಕುಳಿತ. ಪ್ರಾರ್ಥನೆ ಮುಗಿಯಿತು. ಶ್ಯಾಮನು ತನ್ನ ಕಥೆ ಆರಂಭಿಸಿದ:

“ ಗೆಳೆಯರೆ, ಪ್ರತಿಯೊಂದು ಸಂಗತಿಯಲ್ಲಿಯೂ ಸಂಸ್ಕೃತಿಯು ತುಂಬಿಕೊಂಡಿರುತ್ತದೆ. ಪ್ರತಿಯೊಂದು ಜಾತಿಗೆ ಒಂದೊಂದು ವಿಶಿಷ್ಟ ಸಂಸ್ಕೃತಿ ಇದ್ದೇ ಇರುತ್ತದೆ. ಅವೆಲ್ಲ ಸೇರಿಕೊಂಡು ರಾಷ್ಟ್ರೀಯ ಸಂಸ್ಕೃತಿಯ ನಿರ್ಮಾಣವಾಗುತ್ತದೆ. ಪ್ರತಿಯೊಂದು ನಡೆನುಡಿಗಳಲ್ಲಿ ಸಂಸ್ಕೃತಿಯ ಸುಗಂಧವಿರುತ್ತವೆ. ಅದನ್ನು ನಾವು ಸರಿಯಾಗಿ ಅರಿತುಕೊಳ್ಳುವದು ಅಗತ್ಯವಾಗಿದೆ. ನಮ್ಮ ಪ್ರತಿಯೊಂದು ರೀತಿ–ನೀತಿಗಳನ್ನು ವಿಮರ್ಶಿಸಿ ನೋಡಬೇಕು. ಯಾವದೊಂದು ನಡತೆ ಹುರುಳಿಲ್ಲದ್ದೆಂದು ತೋರಿದರೆ ಅದನ್ನು ಬಿಟ್ಟುಬಿಡಬೇಕು. ಆದರೆ ಸಂಸ್ಕೃತಿಯ ಬೆಳವಣಿಗೆಗೆ ಉಪಯುಕ್ತವಾದವುಗಳಿದ್ದರೆ ಅವುಗಳನ್ನು ತ್ಯಜಿಸುವದು ಯೋಗ್ಯವಾಗಲಾರದು. ನಮ್ಮ ದೇಶದಲ್ಲಿಯ ಮತ್ತು ನಮ್ಮ ಸಮಾಜದಲ್ಲಿಯ ಪ್ರತಿಯೊಂದು ನಡತೆಯೂ ಒಂದು ಬಗೆಯ ಪಾಠವೇ ಆಗಿರುತ್ತದೆ.

ನಮ್ಮ ಮನೆಯಲ್ಲಿ ಪ್ರತಿದಿನ ಮಧ್ಯಾನ್ನದ ಊಟದ ವೇಳೆಯಲ್ಲಿ

ಒಂದೊಂದು ಶ್ಲೋಕವನ್ನು ಅನ್ನುವ ರೂಢಿಯಿತ್ತು. ಊಟದ ಕಾಲಕ್ಕೆ ಶ್ಲೋಕವನ್ನು ಹೇಳದಿದ್ದರ ಹಿರಿಯರು ಸಿಟ್ಟಿಗೇಳುತ್ತಿದ್ದರು. ಮೋರೋಪಂತ, ವಾಮನ ಪಂಡಿತ ಮೊದಲಾದವರ ಸುಂದರವಾದ ಭಾವಗೀತಗಳನ್ನು ಕಲಿಸುತ್ತಿದ್ದರು. ಅದರಂತೆಯೇ ಬೇರೆ ಬೇರೆ ದೇವರ ಸ್ತೋತ್ರ ಮತ್ತು ಉದಯರಾಗಗಳನ್ನು ಹೇಳಿಕೊಡುತ್ತಿದ್ದರು ತೀರ ನಸುಕಿನಲ್ಲಿಯೇ ತಂದೆ ನಮ್ಮನ್ನು ಎಬ್ಬಿಸುತ್ತಿದ್ದರು. ಹಾಸಿಗೆಯ ಮೇಲೆ ಹೊದ್ದುಕೊಂಡು ಕುಳಿತೇ ನಾವು ಶ್ಲೋಕ ಕಲಿಯುತ್ತಿದ್ದೆವು. ಆಗ ನಮ್ಮಲ್ಲಿ ಶಾಲು, ರಗ್ಗು ಮೊದಲಾದವು ಬಳಿಕೆಯಲ್ಲಿರಲಿಲ್ಲ. ಹಚ್ಚಡ, ಕೌದಿ, ದುಪ್ಪಟಿಗಳನ್ನೇ ಹೊದ್ದುಕೊಳ್ಳುತ್ತಿದ್ದೆವು. ಉದಯರಾಗಗಳು ನನಗಿಂದಿಗೂ ತುಂಬ ಸೇರುತ್ತವೆ. "ಬೆಳಗು ಜಾವದಿ ಬಾರೋ ಹರಿಯೇ" ಈ ಗೀತವು ಇಂದಿಗೂ ನನಗೆ ಮಧುರವಾಗಿ ತೋರುತ್ತದೆ. ವಕ್ರತುಂಡ ಮಹಾಕಾಯ, ಶಾಂತಾಕಾರಂ, ವಸುದೇವಸುತಂದೇವಂ, ಕೃಷ್ಣಾಯ ವಾಸುದೇವಾಯ, ಮೊದಲಾದ ಸಂಸ್ಕೃತ ಶ್ಲೋಕಗಳನ್ನೂ ಬೋಧಪರವಾದ ಮರಾಠೀ ಶ್ಲೋಕಗಳನ್ನೂ ಅರ್ಥಸಹಿತವಾಗಿ ತಿಳಿಸಿಕೊಟ್ಟು ನಮ್ಮಿಂದ ಕಂಠಪಾಠ ಮಾಡಿಸುತ್ತಿದ್ದರು. ನಾವು ಸರಿಯಾಗಿ ಅರ್ಥವನ್ನು ತಿಳಿದುಕೊಂಡೆವೋ ಇಲ್ಲವೋ ಎಂದು ಅವರಿಗೆ ಸಂದೇಹ ಬಂದಾಗ ನಡುವೇ ಅವರು ನಮ್ಮನ್ನು ಪ್ರಶ್ನಿಸುತ್ತಿದ್ದರು, "ಸೌಮಿತ್ರನೆಂದರೆ ಯಾರು ?" ನಮಗೆ ಅರ್ಥವಾಗದೆ ಸುಮ್ಮನಿರುತ್ತಿದ್ದರೆ "ಲಕ್ಷ್ಮಣನ ತಾಯಿಯ ಹೆಸರೇನು?" ಎಂದು ಕೇಳುತ್ತಿದ್ದರು. ನಾವು ಸುಮಿತ್ರಾ ಎಂದು ಹೇಳಿದೊಡನೆ "ಹಾಗಾದರೆ ಸೌಮಿತ್ರ ಎಂದರೆ ಯಾರು ?" ಎಂದು ಪುನಃ ಕೇಳುತ್ತಿದ್ದರು. ನಾವು ಅಂದಾಜಿನಿಂದ ಹೇಳುತ್ತಿದ್ದೆವು "ಲಕ್ಷ್ಮಣ" ಎಂದು. "ಭಲೆ! ಶಹಬ್ಬಾಸ್!" ಎಂದು ನಮ್ಮನ್ನು ಹುರಿದುಂಬಿಸುತ್ತಿದ್ದರು. ಆಮೇಲೆ ಅದೇ ರೀತಿ ರಾಧೇಯನೆಂದರೆ ಯಾರು, ಸೌಭದ್ರನೆಂದರೆ ಯಾರು, ಎಂದು ಮೊದಲಾಗಿ ಕೇಳಿ ನಮ್ಮಿಂದ ಉತ್ತರ ಪಡೆಯುತ್ತಿದ್ದರು. ತಂದೆಯವರ ಈ ಪದ್ಧತಿಯಿಂದ ನಮಗೆ ಎಷ್ಟೋ ಸಂಸ್ಕೃತ ಶಬ್ದಗಳು ತಿಳಿಯತೊಡಗಿದವು.

ನಸುಕಿನಲ್ಲಿ ತಂದೆಯವರಿಂದ ಶಿಕ್ಷಣ ದೊರೆಯುತ್ತಿದ್ದರೆ ಸಾಯಂಕಾಲ ತಾಯಿಯವರಿಂದ ದೊರೆಯುತ್ತಿತ್ತು. ದೀಪದ ಸ್ತುತಿ, ದೇವರ ಸ್ತುತಿ ಮೊದಲಾದ ಮರಾಠೀ ಸ್ತೋತ್ರಗಳನ್ನು ಅವಳು ಕಲಿಸಿಕೊಡುತ್ತಿದ್ದಳು. ತಾಯಿತಂದೆ

ಗಳ ಈ ಶಿಕ್ಷಣದಿಂದ ಶ್ಲೋಕಗಳನ್ನು ಪಾಠ ಮಾಡುವದೊಂದು ಅಭ್ಯಾಸವಾಗಿ ಬಿಟ್ಟಿತ್ತು. ಬೇರೆ ಬೇರೆ ಹೊಸ ಹೊಸ ಶ್ಲೋಕಗಳನ್ನು ನಾವೇ ಪಾಠ ಮಾಡಿ ಊಟದ ಹೊತ್ತಿನಲ್ಲಿ ಹೇಳಿದೆವೆಂದರೆ ತಂದೆ ಸಂತೋಷದಿಂದ ನಮಗೆ "ಭಲೆ" ಎನ್ನುತ್ತಿದ್ದರು. ಅದರಿಂದ ನಾವು ಇನ್ನೂ ಉತ್ಸಾಹಗೊಳ್ಳುತ್ತಿದ್ದೆವು. ಯಾರಲ್ಲಿ ಯಾದರೂ ಲಗ್ನ, ಮುಂಜಿವೆ ಮೊದಲಾದ ಊಟದ ಸಮಾರಂಭಕ್ಕೆ ನಾವು ಹೋಗಿದ್ದೆವೆಂದರೆ ಹೊಸ ಹೊಸ ಶ್ಲೋಕಗಳನ್ನು ಹೇಳುತ್ತಿದ್ದೆವು. ಉತ್ತಮ ಶ್ಲೋಕ ಹೇಳಿದವರನ್ನು ಎಲ್ಲರೂ ಹೊಗಳುತ್ತಿದ್ದರು. ಈ ಬಗೆಯ ಪ್ರೋತ್ಸಾಹ ನದಿಂದ ಹುಡುಗರೆಲ್ಲ ಸುಂದರವಾದ ಕವಿತೆಗಳನ್ನೂ, ಬೋಧಪ್ರದವಾದ ಶ್ಲೋಕಗಳನ್ನೂ ಪಾಠ ಮಾಡಿ ಭೋಜನ ಸಮಾರಂಭಕ್ಕೆ ಕಳೆ ತರುತ್ತಿದ್ದರು. ಅದೊಂದು ಬಗೆಯ ಋಷಿತರ್ಪಣವೇ ಆಗಿರುತ್ತಿತ್ತು !

ಊರಲ್ಲಿ ಎಲ್ಲಿಯೇ ಭೋಜನ ಸಮಾರಂಭವಿದ್ದರೂ ನಮ್ಮ ಮನೆಗೆ ಊತಣ ಬರತಕ್ಕದ್ದೇ. ನಾವೆಲ್ಲ ತಂದೆಯವರ ಜೊತೆಗೆ ಹೋಗಿರುತ್ತಿದ್ದೆವು. ಮೊದಲು ಶ್ಲೋಕ ಹೇಳಲು ತಂದೆಯವರು ಕಣ್ಣುಸನ್ನೆ ಮಾಡುತ್ತಿದ್ದರು. ತಂದೆಯವರು ಆಮೇಲೆ ಕೋಪಿಸಿಕೊಂಡಾರೆಂದು ನಾವು ಅನ್ನಲೇ ಬೇಕಾಗು ತ್ತಿತ್ತು. ನನಗೆ ನೂರಾರು ಶ್ಲೋಕಗಳು ಬರುತ್ತಿದ್ದರೂ, ಕೂಡಿದ ಜನರಲ್ಲಿ ಹೇಳಲಿಕ್ಕೆ ಭಯವಾಗುತ್ತಿತ್ತು. ಸುಮಧುರ ಕಂಠವು ನನ್ನದಲ್ಲ. ಯಾರೇನು ಆಡಿಕೊಳ್ಳುವರೋ ಎಂದು ಸಂಕಟ. ಮೊದಲಿನಿಂದಲೂ ನಾನು ಸಮಾಜದ ಟೀಕೆಗೆ ಅಂಜುತ್ತಿದ್ದೆ. ನಿರ್ದಾಕ್ಷಿಣ್ಯವಾಗಿ ನಾಲ್ಕು ಜನರಲ್ಲಿ ಹೋಗಿ ಸೇರಿಕೊ ಳ್ಳುತ್ತಿದ್ದಿಲ್ಲ. ಜನರ ಗೇಲಿಗೆ ಅಂಜುತ್ತಿದ್ದರೂ ತಂದೆಯವರು ಸಿಟ್ಟುಮಾಡಿಕೊ ಳ್ಳುವರೆಂದು ಹೇಳದೆ ಇರಲಾಗುತ್ತಿರಲಿಲ್ಲ.

ಒಂದು ದಿನ ಗಂಗೂಅಪ್ಪಾನ ಮನೆಯಲ್ಲಿ ಸಮಾರಾಧನೆ ಇತ್ತು. ನಮಗೂ ಅವರಿಗೂ ಬಹಳ ಸ್ನೇಹಸಂಬಂಧ. ನಮಗೆಲ್ಲ ಊಟಕ್ಕೆ ಹೇಳಿದ್ದರು. ತಂದೆಯವರು ಅಂದು ಪರಸ್ಥಳಕ್ಕೆ ಹೋಗಿದ್ದರು. ಊಟಕ್ಕೆ ಹೋಗುವ ಸರತಿ ನನ್ನ ಮೇಲೆಯೇ ಬಂತು. ಹೆರವರ ಮನೆಗೆ ಊಟಕ್ಕೆ ಹೋಗುವದೆಂದರೇ ನನಗೆ ನಾಚಿಕೆ. ಹೋಗದಿದ್ದರೆ ಉದ್ಧಟತನವೆನಿಸುತ್ತಿತ್ತು. ಅವರ ಮನಸ್ಸನ್ನು ನೋಯಿಸಿದಂತಾಗುತ್ತಿತ್ತು.

ಮಧ್ಯಾನ್ಹ ಊಟಕ್ಕೆ ಕರೆ ಬಂದೊಡನೆ ನಾನು ಹೋದೆ. ಬಾಳೆಯ

ಹಚ್ಚ ಹಸುರಾದ ಕುಡಿ ಎಲೆ ಇಟ್ಟಿದ್ದರು. ನಾನೊಂದು ಎಲೆ ಹಿಡಿದು ಕುಳಿತು ಕೊಂಡೆ. ಊದಿನ ಕಡ್ಡಿಗಳು ಸುವಾಸನೆಯನ್ನು ಬೀರುತ್ತಿದ್ದವು. ಬೇಸಿಗೆಯ ಕಾಲವಾಗಿದ್ದರಿಂದ ಕುಡಿಯುವ ನೀರಿನ ಹಂಡೆಗಳಿಗೆಲ್ಲ ಒಪ್ಪೆ ಬಟ್ಟೆ ಸುತ್ತಿದ್ದರು ನೀರಿನಲ್ಲಿ ಬಾಳದ ಬೇರು ತೇಲಾಡುತ್ತಿದ್ದವು. ಮನೆಯೊಡೆಯರು, ಯಾರು ಬಂದರು – ಯಾರು ಬರಲಿಲ್ಲವೆಂಬುದರ ಮೇಲ್ವಿಚಾರಣೆ ನಡೆಸಿದ್ದರು. ಬರದೆ ಉಳಿದವರನ್ನು ಹುಡುಗರು ಹೋಗಿ ಕರೆದುಕೊಂಡು ಬಂದರು. ಎಲ್ಲರೂ ಬಂದ ಬಳಿಕ ತೀರ್ಥ ಕೊಟ್ಟು 'ಹರಹರ ಮಹಾದೇವ' ಎಂದು ಘೋಷಿಸಿ ಜನರೆಲ್ಲ ಊಟಕ್ಕೆ ಆರಂಭಿಸಿದರು.

ನಾನು ಮೌನವಾಗಿ ಊಟ ಮಾಡುತ್ತಿದ್ದೆ. ಶ್ಲೋಕ ಹೇಳುವದು ಆರಂಭವಾಯಿತು. ಹುಡುಗರಲ್ಲಿ ಅದೊಂದು ಮೇಲಾಟವೇ ನಡೆದ ಹಾಗಿತ್ತು. ಕೂಡಿದ ಜನರಿಂದ ಕೆಲವರಿಗೆ ಪ್ರಶಂಸೆಯೂ ದೊರೆಯುತ್ತಿತ್ತು. ಬಡಿಸುವ ಹೆಣ್ಣುಮಕ್ಕಳು ತಮ್ಮ ತಮ್ಮ ಮಕ್ಕಳಿಗೆ 'ಶ್ಲೋಕ ಹೇಳಿದೆಯಾ ? ಇಲ್ಲವಾದರೆ ಈಗ ಹೇಳು ' ಎಂದು ಸ್ವತಃ ನಿಂತು ಹೇಳಿಸುತ್ತಿದ್ದರು. ಹಾಗೆ ಶ್ಲೋಕ ಹೇಳುವದೆಂದರೆ ಅದೊಂದು ಗೌರವವೆಂದು ಭಾವಿಸುತ್ತಿದ್ದರು.

" ಶ್ಯಾಮು, ಶ್ಲೋಕ ಹೇಳೋ, ಎಷ್ಟೊಂದು ಶ್ಲೋಕಗಳು ಬರುತ್ತಿದ್ದರೂ ಸುಮ್ಮನೆ ಕುಳಿತುಬಿಟ್ಟೆಯಲ್ಲ?" ಎಂದು ಹತ್ತಿರ ಕುಳಿತವರು ಒತ್ತಾಯ ಪಡಿಸಿದರು. ಆದರೂ ನಾನು ನಾಚಿಕೆಪಟ್ಟುಕೊಂಡು ಮೌನವಾಗಿಯೇ ಇದ್ದೆ.

" ನೀನು ಬರೀ ಹೆಸ್ರಾಣ್ಯ ನೋಡು " ಗೋವಿಂದಭಟ್ಟ ಹೀಯಾಳಿಸಿದ. ನಾನು ಕೇಳಿಯೂ ಕೇಳದವರಂತೆ ಸುಮ್ಮನೆ ಇದ್ದೆ. ಅಷ್ಟರಲ್ಲಿ ಒಬ್ಬ ಹುಡುಗ ಎಲ್ಲರ ಊಟ ನಡೆದಿರುವಾಗಲೇ ಎದ್ದುಬಿಟ್ಟದ್ದರಿಂದ ಎಲ್ಲರೂ ಅವನನ್ನೇ ನೋಡತೊಡಗಿದರು. ಎಲ್ಲರೂ ಊಟ ನಡೆಸಿರುವಾಗ ಮಧ್ಯದಲ್ಲಿಯೇ ಏಳುವದೆಂದರೆ ಪಂಕ್ತಿಯ ಅವಮಾನವೆಂದು ಜನರ ಭಾವನೆ.

ಊಟವಾಯಿತು. ಎಲ್ಲರೂ ಎದ್ದರು. ಕೆಲವರು ತಾಂಬೂಲ ಸೇವನೆಯಲ್ಲಿ ಮಗ್ನರಾದರು. ನಾನು ಅಡಿಕೆಯನ್ನು ಕೂಡ ತಿನ್ನುತ್ತಿರಲಿಲ್ಲ. ನಮ್ಮ ತಂದೆಯವರು ಕಂಡರೆ ರೇಗಿಕೊಳ್ಳುತ್ತಿದ್ದರು. ನಿಜವಾಗಿ ವಿದ್ಯಾರ್ಥಿಗಳು ಎಲೆ-ಅಡಿಕೆ ತಿನ್ನಕೂಡದು. ನಾನು ಮನೆಗೆ ಬಂದೆ. ಶನಿವಾರವಿದ್ದುದರಿಂದ

ಮಧ್ಯಾಹ್ನ ಶಾಲೆಯೂ ಇರಲಿಲ್ಲ. ತಾಯಿ ಕೇಳಿದಳು, "ಅಡಿಗೆ ಏನೇನು ಮಾಡಿದ್ದರೋ ಶ್ಯಾಮಾ? ಪಕ್ವಾನ್ನವೇನಾಗಿತ್ತು? ಯಾವ ಯಾವ ಪಲ್ಲೆ ಮಾಡಿದ್ದರು?" ನಾನು ಅಡಿಗೆಯ ಪದಾರ್ಥದ ವಿವರಣೆಯನ್ನು ಒಂದೂಬಿಡದಂತೆ ಮಾಡಿದೆ. ತಾಯಿ ಮತ್ತೆ ಕೇಳಿದಳು, "ಶ್ಲೋಕವನ್ನು ಹೇಳಿದೆಯೋ ಇಲ್ಲವೋ?"

ಈಗ ಏನೆಂದು ಹೇಳುವದು. ಸುಳ್ಳು ಹೇಳಬೇಕೆ? ಹೇಳಿದರೆ ಅದನ್ನು ಮುಚ್ಚಿಕೊಳ್ಳಲು ಮತ್ತೊಂದು ಸುಳ್ಳು ಹೇಳಬೇಕಾಗುವದು. ಪಾಪದಿಂದ ಪಾಪ ಬೆಳೆಯುತ್ತಲೇ ಹೋಗುತ್ತದೆ. ಶ್ಲೋಕ ಹೇಳಿದೆನೆಂದು ಕೊನೆಗೂ ನಾನು ಸುಳ್ಳು ಹೇಳಿಬಿಟ್ಟೆ.

"ಯಾವುದನ್ನು ಹೇಳಿದೆ? ಜನರು 'ಭಲೆ' ಎಂದರೇ?"

ನಾನು ಮತ್ತೆ ಸುಳ್ಳು ಹೇಳಿದೆ. ನನ್ನ ತಂದೆಯವರಿಗೆ ಬಹಳ ಮೆಚ್ಚಿಗೆಯಾದ ಶ್ಲೋಕದ ಹೆಸರನ್ನೇ ಹೇಳಿ, ಆ ಶ್ಲೋಕವನ್ನು ತಾಯಿಯ ಮುಂದೆ ರಾಗ ತೆಗೆದು ಹೇಳಿ ತೋರಿಸಿದೆ. ಅಷ್ಟರಲ್ಲಿ ನೆರೆಮನೆಯ ಗೆಳೆಯರ ಬಳಗ ಬಂದು ಬಿಟ್ಟಿತು. ಒಬ್ಬರ ದೂರನ್ನೊಬ್ಬರು ಎತ್ತಿ ಹೇಳುವದು ಚಿಕ್ಕ ಮಕ್ಕಳ ಸ್ವಭಾವ. ಬಂಡ್ಯಾ, ಬನ್ಯಾ, ವಾಸೂ ಎಲ್ಲರೂ ನಮ್ಮ ತಾಯಿಯ ಮುಂದೆ ಹೇಳಿದರು, "ಯಶೋದಮ್ಮ, ನಿಮ್ಮ ಶ್ಯಾಮ ಎಷ್ಟು ಹೇಳಿದರೂ ಈ ದಿವಸ ಶ್ಲೋಕ ಹೇಳಲಿಲ್ಲ."

"ಶ್ಯಾಮನು ಕಲಿಸಿದ ಶ್ಲೋಕವನ್ನೇ ನಾನು ಹೇಳಿದೆ. ಎಲ್ಲರೂ ಬಹಳ ಚೆನ್ನಾಗಿದೆ ಎಂದರು" ವಾಸು ಹೇಳಿದ.

"ನಾನೂ ಒಂದು ಶ್ಲೋಕ ಹೇಳಿದೆ. ನರಸಣ್ಣ 'ಭಲೆ' ಎಂದರು" ಗೋವಿಂದನೆಂದ.

ತಾಯಿಯು ರೇಗಿಕೊಂಡು ನನ್ನನ್ನು ಕೇಳಿದಳು, "ಶ್ಯಾಮಾ, ಶ್ಲೋಕ ಹೇಳಿದ್ದೇನೆಂದು ಸುಳ್ಳಾಡಿ ನನ್ನನ್ನು ವಂಚಿಸಿದೆಯಾ? ಮೋಸಗಾರ!"

"ಶ್ಯಾಮಾ, ಯಾವಾಗಲೋ ನೀನು ಹೇಳಿದ್ದು?" ವಾಸು ಕೇಳಿದ.

"ಅವನು ಮನದಲ್ಲಿಯೇ ಹೇಳಿದ್ದಾನು. ನಿಮಗೆಲ್ಲಿ ಕೇಳಿಸೀತು?" ಬನ್ಯಾ ಹಂಗಿಸಿದ.

"ದೇವರಿಗಾದರೂ ಕೇಳಿಸಿರಬಹುದೇ?" ಬಂಡ್ಯಾ ಚುಚ್ಚು ಮಾತು

ಆಡಿದ.

ಹುಡುಗರೆಲ್ಲರೂ ನನ್ನನ್ನು ಗೇಲಿ ಮಾಡಹತ್ತಿದರು. ಮಕ್ಕಳೆಂದರೆ ಊರಲ್ಲಿಯ ನ್ಯಾಯಾಧೀಶರೇ ! ಯಾವ ಮಾತನ್ನೂ ಬಚ್ಚಿಡುವದಿಲ್ಲ. ಊರಲ್ಲಿಯ ನ್ಯೂನತೆಗಳನ್ನೆಲ್ಲ ಬೈಲಿಗೆಳೆಯುವ ವೃತ್ತಪತ್ರಕಾರರೇ ಸರಿ

ನನಗೆ ತಾಯಿ ಹೇಳಿದಳು, "ಶ್ಯಾಮಾ, ನೀನು ಇಂದು ಶ್ಲೋಕ ಹೇಳದೆ ಇದ್ದದ್ದು ಮೊದಲನೆಯ ತಪ್ಪು, ಸುಳ್ಳು ಹೇಳಿದ್ದಂತೂ ಎರಡನೆಯ ಭಯಂಕರ ತಪ್ಪು. ಹೋಗು, ದೇವರ ಪಾದಕ್ಕೆ ಬಿದ್ದು ಇನ್ನೆಂದೂ ಈ ರೀತಿ ಸುಳ್ಳಾಡುವದಿಲ್ಲೆಂದು ಹೇಳಿಕೋ." ನಾನು ಮೂಕನಂತೆ ನಿಂತಿದ್ದೆ. ತಾಯಿ ಪುನಃ ನುಡಿದಳು, " ಹೋಗು ಶ್ಯಾಮು, ಇದು ಸರಿಯಲ್ಲ ಹೋಗು. ದೇವರಿಗೆ ನಮಸ್ಕಾರ ಮಾಡು. ಅಪರಾಧ ಒಪ್ಪಿಕೋ. ಇಲ್ಲವಾದರೆ ಅವರು ಮನೆಗೆ ಬಂದ ಬಳಿಕ ನಿನ್ನ ಅವಸ್ಥೆ ನೆಟ್ಟಗಾಗಲಿಕ್ಕಿಲ್ಲ ನೋಡು. " ಆದರೂ ನಾನು ನಿಂತ ಸ್ಥಳ ಬಿಟ್ಟು ಕದಲಲಿಲ್ಲ. ತಾಯಿಯು ಹೇಗೋ ಮರೆತುಬಿಡುತ್ತಾಳೆ. ತಂದೆಯ ಮುಂದೇನು ಹೇಳುವಳೇ? ಅವಳ ಇಂದಿನ ಸಿಟ್ಟು ನಾಳೆ ಕಡಿಮೆಯಾಗಿ ಹೋಗುತ್ತದೆ ಎಂದು ಮನದಲ್ಲಿಯೇ ಭಾವಿಸಿಕೊಂಡೆ. ತಾಯಿಯು ಕೊನೆಯದಾಗಿ ಮತ್ತೊಮ್ಮೆ ಎಚ್ಚರಿಸಿದಳು, " ಕೇಳಿಸಲಿಲ್ಲವೇನೋ ಶ್ಯಾಮು ನಾನು ಹೇಳಿದ್ದು. ಇನ್ನು ನಾನು ಹೆಚ್ಚು ಹೇಳುವದಿಲ್ಲ ನೋಡು- " ನಾನು ಮಿಟ್ಟೆ ಮಿಸುಕಲಿಲ್ಲ.

ತಂದೆಯವರು ಅದೇ ರಾತ್ರಿ ಊರಿಂದ ಮರಳಿ ಬಂದರು. ಎಂದಿನಂತೆ ನಸುಕಿನಲ್ಲಿ ಅಮ್ಮನನ್ನು ಎಬ್ಬಿಸಿದರು. ಉದಯರಾಗವನ್ನು ಹೇಳಿಯಾದಬಳಿಕ ತಂದೆ ಕೇಳಿದರು, " ನಿನ್ನೆ ಊಟಕ್ಕೆ ಹೋದಾಗ ಯಾವ ಶ್ಲೋಕ ಹೇಳಿದೆಯೋ ಶ್ಯಾಮು ? "

ತಾಯಿಯು ಮಜ್ಜಿಗೆ ಕಡೆಯುತ್ತಿದ್ದಳು. ಆಕೆಯ ನೆರಳು ಗೋಡೆಯ ಮೇಲೆ ಕುಣಿಯುತ್ತಿತ್ತು. ಉದ್ದವಾದ ಕಡಗೋಲು ಮತ್ತು ದೊಡ್ಡದಾದ ಗಡಿಗೆ ಇದ್ದುದರಿಂದ ನಿಂತುಕೊಂಡೇ ಮಜ್ಜಿಗೆ ಕಡೆಯುತ್ತಿದ್ದಳು. ತಾಯಿ ಒಮ್ಮೆಲೆ ಮಜ್ಜಿಗೆ ಕಡೆಯುವದನ್ನು ನಿಲ್ಲಿಸಿ ಬಂದು ಹೇಳಿದಳು, " ಶ್ಯಾಮನು ಸುಳ್ಳಾಡಲು ಕಲಿತಿದ್ದಾನೆ. ನಿನ್ನೆ ಅವನು ಶ್ಲೋಕವನ್ನು ಹೇಳಿರದಿದ್ದರೂ ನನ್ನ ಹತ್ತರ ಬಂದು ಹೇಳಿದ್ದೇನೆಂದು ಸುಳ್ಳಾಡಿ ಬಿಟ್ಟ. ನೆರೆಮನೆಯ ಹುಡು

ಗರಿಂದ ಅವನ ಬೂಟಾಟಿಕೆ ಗೊತ್ತಾಯಿತು. ನಾನು ಆ ಕೂಡಲೇ ಸಿಟ್ಟು ಮಾಡಿದೆ. ದೇವರಿಗೆ ನಮಸ್ಕರಿಸಿ ಕ್ಷಮೆ ಕೇಳಿಕೋ ಎಂದು ಹೇಳಿದರೆ ಅವನು ನನ್ನ ಮಾತನ್ನು ಕಿವಿಯ ಮೇಲೆಯೇ ಹಾಕಿಕೊಳ್ಳಲಿಲ್ಲ."

ಇದನ್ನು ಕೇಳಿ ನಮ್ಮ ತಂದೆ ತಪ್ತರಾದರು. "ಹೌದೇನೋ? ಏಳು, ಈ ಗೋಡೆಗೆ ಆತು ನಿಂತುಕೋ. ಹೇಳು, ನಿನ್ನೆ ಶ್ಲೋಕವನ್ನು ಹೇಳಿದ್ದೆಯಾ?" ಎಂದು ಗದರಿಸಿದರು.

ಅವರು ರೊಚ್ಚಿಗೆದ್ದದ್ದನ್ನು ಕಂಡು ನಾನು ನಡುಗಿದೆ. 'ಹೇಳಲಿಲ್ಲ' ಎಂದು ಮೆಲ್ಲಗೆ ಉತ್ತರಿಸಿದೆ.

"ಹಾಗಾದರೆ ಸುಳ್ಳು ಏಕೆ ಹೇಳಿದೆ? ಸುಳ್ಳಾಡಕೂಡದೆಂದು ನಿನಗೆ ಸಾವಿರ ಸಲ ಹೇಳಲಿಲ್ಲವೇ?"

ಅವರ ಮಾತುಗಳಿಂದ ಅವರ ಸಿಟ್ಟು ಹೆಚ್ಚುತ್ತಿದ್ದುದು ಗೊತ್ತಾಗಿ ನಾನು ನಡುಗುತ್ತಲೇ ನುಡಿದೆ, "ಇನ್ನು ಎಂದೆಂದಿಗೂ ನಾನು ಸುಳ್ಳಾಡುವದಿಲ್ಲ."

"ನಿನ್ನ ತಾಯಿ ದೇವರಿಗೆ ನಮಸ್ಕಾರ ಮಾಡೆಂದು ಹೇಳಿದರೆ ಯಾಕೆ ಮಾಡಲಿಲ್ಲ? ತಾಯಿತಂದೆಗಳ ಮಾತನ್ನು ಪಾಲಿಸಬೇಕೆಂಬುದೂ ಗೊತ್ತಾಗುವದಿಲ್ಲವೇ? ಸೊಕ್ಕು ಬಂತೇನು ನಿನಗೆ?" ತಂದೆಯುವರು ಎದ್ದು ಬಂದು ಹೊಡೆದುಬಿಡುತ್ತಾರೆಂದು ತೋರಿತು.

ನಾನು ಬಿಕ್ಕಿಬಿಕ್ಕಿ ಅಳುತ್ತ ತಾಯಿಯ ಬಳಿಗೆ ಹೋಗಿ ಅವಳ ಚರಣಗಳ ಮೇಲೆ ನನ್ನ ತಲೆಯನ್ನಿಟ್ಟೆ ನನ್ನ ಬಿಸಿಬಿಸಿ ಕಣ್ಣೀರು ಅವಳ ಪಾದಗಳ ಮೇಲೆ ಬಿದ್ದವು. "ತಾಯೀ, ನನ್ನಿಂದ ತಪ್ಪಾಯಿತು. ನನ್ನನ್ನು ಕ್ಷಮಿಸು." ಎಂದು ಬೇಡಿಕೊಂಡೆ.

ತಾಯಿಯಿಂದ ಮಾತು ಹೊರಡದಾಯಿತು. ಅವಳು ವಾತ್ಸಲ್ಯದ ಮೂರ್ತಿಯಾಗಿದ್ದಳು. ಕರಗಿದ ಹೆಂಟೆಯಂತಾಗಿದ್ದ ನನ್ನ ಅವಸ್ಥೆಯನ್ನು ಕಂಡು ಅವಳಿಗೆ ಕನಿಕರವೆನಿಸಿತು. ಆದರೂ ತನ್ನ ಭಾವನೆಗಳನ್ನು ತೋರಗೊಡದೆ, "ದೇವರಿಗೆ ನಮಸ್ಕಾರ ಹಾಕಿ ಕೇಳಿಕೋ, ಮತ್ತೆ ಸುಳ್ಳಾಡುವ ಬುದ್ಧಿ ಕೊಡಬೇಡವೆಂದು ಬೇಡಿಕೋ." ಎಂದು ಹೇಳಿದಳು.

ನಾನು ದೇವರ ಮುಂದೆ ಹೋಗಿ ನಿಂತುಕೊಂಡೆ. ಬಿಕ್ಕಿ ಬಿಕ್ಕಿ ಅಳುತ್ತ ಸಾಷ್ಟಾಂಗ ನಮಸ್ಕಾರ ಹಾಕಿ ಪ್ರಾರ್ಥನೆ ಮಾಡಿದೆ. ಆಮೇಲೆ ಮತ್ತೆ ತಂದೆ

ಯವರ ಎದುರಿಗೆ ಗೋಡೆಗೆ ಒರಗಿ ನಿಂತುಕೊಂಡೆ.

ತಂದೆಯವರ ಸಿಟ್ಟು ಇಳಿದುಹೋಗಿತ್ತು. "ಬಾ, ಇಲ್ಲಿ." ಎಂದು ಕರೆದರು. ನಾನು ಅವರ ಹತ್ತಿರ ಹೋದೆ. ಅವರು ಮಮತೆಯಿಂದ ನನ್ನ ಬೆನ್ನ ಮೇಲೆ ಕೈಯಾಡಿಸುತ್ತ "ಹೋಗಿನ್ನು. ಶಾಲೆಗೆ ಹೊತ್ತಾದೀತು" ಎಂದರು.

"ಇಂದು ಭಾನುವಾರ. ಶಾಲೆಗೆ ಬಿಡುವಿದೆ" ಎಂದು ನಾನು ಹೇಳಿದೆ.

"ಹಾಗಾದರೆ ಹೋಗಿ ತುಸು ಮಲಗಿಕೋ. ಇಲ್ಲವೇ ನನ್ನ ಜೊತೆಗೆ ಹೊಲಕ್ಕೆ ಬರುವಿಯೇನು? ಪತ್ರಾವಳಿಗಾಗಿ ಎಲೆ ತರಲಿಕ್ಕಾದೀತು?" ಎಂದು ನುಡಿದರು. ನಾನು ಗೋಣುಹಾಕಿ ಒಪ್ಪಿಗೆ ಕೊಟ್ಟೆ.

ನಮ್ಮ ತಂದೆ ಒಳ್ಳೆ ಬುದ್ಧಿವಂತರು. ಅವರು ಒಮ್ಮೆಲೆ ವಾತಾವರಣವನ್ನು ಬದಲಿಸಿದರು. ಸಿಟ್ಟಿನ ಮೋಡವು ಬಯಲಾಗಿ ಪ್ರೇಮದ ಪ್ರಕಾಶವು ಪಸರಿಸಿತು. ನಡೆದುದೆಲ್ಲವನ್ನೂ ಯುಕ್ತಿಯಿಂದ ಮರೆಸಿಬಿಡುತ್ತಿದ್ದರು. ತಂದೆ ಮಕ್ಕಳಿಬ್ಬರೂ ಹೊಲಕ್ಕೆ ಹೋದೆವು. ತನ್ನ ತಾಯಿ ಪ್ರೇಮದ ಪುತ್ಥಳಿಯಾಗಿದ್ದರೂ ಪ್ರಸಂಗ ಬಿದ್ದಾಗ ಅಷ್ಟೇ ಕಠೋರಳಾಗುತ್ತಿದ್ದಳು. ಅವಳ ಕಠೋರತನದಲ್ಲಿಯೇ ನಿಜವಾದ ಪ್ರೇಮವು ಅಡಗಿದ್ದಿತು. ಕೆಲವು ಸಲ ಕಠೋರ ಪ್ರೇಮದಿಂದ, ಕೆಲವು ಸಲ ಮೃದುವಾದ ಮಮತೆಯಿಂದ ನನ್ನನ್ನು ನಡೆಸಿಕೊಳ್ಳುತ್ತಿದ್ದಳು. ಕೆಲವು ಸಲ ಸಿಟ್ಟಿನಿಂದ ಮೈ ಚಪ್ಪರಿಸುತ್ತಿದ್ದಳು, ಕೆಲವು ಸಲ ಅಕ್ಕರೆಯಿಂದ ಮೈದಡವುತ್ತಿದ್ದಳು. ಎರಡು ವಿಧದಿಂದಲೂ ನನಗೆ ಆಕಾರ ಕೊಡುತ್ತಿದ್ದಳು. ಆಲಸಿಯೂ, ಹಟಮಾರಿಯೂ, ಅಜ್ಞಾನಿಯೂ ಆದ ಕಲ್ಲಿನಂತಿದ್ದ ನನ್ನನ್ನು ಕಡೆದು ಒಳ್ಳೆ ರೂಪಗೊಡಲು ಯತ್ನಿಸುತ್ತಿದ್ದಳು. 'ಚಳಿ ಮತ್ತು ಬಿಸಿಲುಗಳೆರಡರಿಂದಲೂ ವಿಕಾಸವಾಗುತ್ತದೆ. ಹಗಲು ಮತ್ತು ರಾತ್ರಿಗಳೆರಡರಿಂದಲೂ ಬೆಳವಣಿಗೆಯಾಗುತ್ತದೆ. ಒಂದೇ ಸಮನೆ ಬೆಳಕಿದ್ದರೂ ಕೇಡು, ಒಂದೇಸಮನೆ ಚಳಿ ಇದ್ದರೂ ಕೇಡು.' ಎಂದು ಒಬ್ಬ ಕವಿಯು ಹೇಳಿದ ಮಾತು ತೀರ ಸತ್ಯವಾಗಿದೆ.

ರಾತ್ರಿ : ೯

## : : ಕಪಿಲೆ ಆಕಳು

" ಬಾರಕೂ ಬರಲಿಲ್ಲವೇ ಇನ್ನೂ ? ಇಂದು ಮಧ್ಯಾಹ್ನ ಅವನನ್ನು ನಾನು ಚೆನ್ನಾಗಿ ಬೈಯ್ದುಬಿಟ್ಟೆದ್ದೆ. ಒಂದು ಆಕಳನ್ನು ಅವನು ಥಳಿಸುತ್ತಿದ್ದ. ಆಕಳು ಬೇರೆಯವರದೇ ಆಗಿದ್ದರೂ ಅದು ದೇವತೆ. ಶಿವೂ ಅವನನ್ನು ಕರೆದು ಕೊಂಡು ಬಾ. "

" ಅವನು ಹೊರಗೇ ಕುಳಿತುಕೊಂಡಿದ್ದಾನೆ. ಒಳಗೆ ಬರಲಿಕ್ಕೆ ನಾಚು ತ್ತಿದ್ದಾನೆ. " ಶಿವನು ಹೇಳಿದ.

ಶ್ಯಾಮನು ಹೊರಗೆ ಬಂದು ಬಾರಕೂನ ಕೈ ಹಿಡಿದು ಎಬ್ಬಿಸಿದನು. ಬಾರಕೂನ ಮುಖ ಬಾಡಿತ್ತು. ಅವನು ಶ್ಯಾಮನ ಕೈಯಿಂದ ಜಾರಿಕೊಳ್ಳಲು ಯತ್ನಿಸಿದನು. ಶ್ಯಾಮನೆಂದನು, " ಬಾರಕೂ, ನನ್ನ ಮೇಲೆ ಇಷ್ಟೊಂದು ಕೋಪವೇ ? ನಿನ್ನನ್ನು ಕಂಡರೆ ನನಗೆ ಪ್ರೀತಿ ಅದಕ್ಕೆಂದೇ ನಿನಗೆ ಬೈಯ್ದು ಬುದ್ಧಿವಾದ ಹೇಳಿದೆ. ನಾನು ನಿನ್ನ ಅಣ್ಣನೆಂದೇ ತಿಳಿ. ನಡೆ, ಇಂದು ನಮ್ಮ ಕಪಿಲೆ ಆಕಳ ಕಥೆಯನ್ನೇ ಹೇಳುತ್ತೇನೆ. "

ಶ್ಯಾಮನ ನಮ್ರವಾದ ನುಡಿಗಳಿಗೆ ಮನ್ನಣೆ ಕೊಟ್ಟು ಬಾರಕೂ ಪ್ರಾರ್ಥನಾ ಮಂದಿರಕ್ಕೆ ಬಂದ. ಶ್ಯಾಮನ ಕಥೆ ಆರಂಭವಾಯಿತು.

" ನಮ್ಮ ಮನೆಯಲ್ಲೊಂದು ಕಪಿಲೆ ಆಕಳು ಇತ್ತು. ಅದು ಇನ್ನೂ ನನ್ನ ಕಣ್ಣ ಮುಂದೆ ಕಟ್ಟಿದಂತೆ ಇದೆ. ಇಂಥ ಆಕಳು ನಮ್ಮ ಊರಿನಲ್ಲಿ ಮತ್ತಾರಲ್ಲಿಯೂ ಇದ್ದಿಲ್ಲವೆಂದು ಜನರೇ ಹೇಳುತ್ತಿದ್ದರು. ನಿಜಕ್ಕೂ ಆ ಆಕಳು ದೃಷ್ಟಿ ತಾಗುವಂತೆ ಇತ್ತು. ಎಷ್ಟು ಎತ್ತರ ! ಎಷ್ಟು ಶಾಂತ ! ಎಷ್ಟು ಗಾಂಭೀರ್ಯ ! ನಮ್ಮ ತಂದೆಯವರಲ್ಲೊಂದು ಐದು ಸೇರಿನ ಪಾತ್ರೆಯಿತ್ತು. ಅದರ ತುಂಬ ಹಾಲನ್ನು ಕಪಿಲೆ ಆಕಳು ಕೊಡುತ್ತಿತ್ತು. ಒಂದು ಸಲಕ್ಕೆ ಇಷ್ಟು ಹಾಲನ್ನು ಹಿಂಡುತ್ತಿತ್ತು. ಅದರ ಕೆಚ್ಚಲೂ ದೊಡ್ಡದು. ನಮ್ಮ ಮನೆ ಯವರು ಒಳ್ಳೆ ಆಸ್ಥೆಯಿಂದ ಅದನ್ನು ನೋಡಿಕೊಳ್ಳುತ್ತಿದ್ದರು.

ನನ್ನ ತಾಯಿ ಬೇಗ್ಗೆ ಎದ್ದವಳೇ ಕೊಟ್ಟಿಗೆಗೆ ಹೋಗುತ್ತಿದ್ದಳು. ಅದಕ್ಕೆ

ಮೇವು ಹಾಕಿ ಅದರ ಹಣೆಗೆ ಕುಂಕುಮ ಹಚ್ಚುತ್ತಿದ್ದಳು. ಅದರ ಬಾಲವನ್ನು ತನ್ನ ಹಣೆಗೆ ಒತ್ತಿಕೊಂಡು ಅದಕ್ಕೆ ನಮಸ್ಕರಿಸುತ್ತಿದ್ದಳು. ಆಕಳೆಂದರೆ ದೇವತೆ. ಆಕಳಿಗೆ ಈ ಮಹತ್ವವನ್ನು ಕೊಟ್ಟವರು ಹೆಂಗಸರೇ. ಆದರೆ ಇಂದು ನಿಜವಾದ ಗೋಪೂಜೆ ನಡೆಯುತ್ತಿಲ್ಲ. ಹೆಸರಿಗೆ ಮಾತ್ರ ಗೋಪೂಜೆಯೆನ್ನುತ್ತಾರೆ. ಗುಡಿಯನ್ನು ಕಂಡ ತಪ್ಪಿಗೆ ನಮಸ್ಕಾರ ಮಾಡುತ್ತಾರೆ. ಹೀಗಿದೆ ಇಂದಿನ ಪೂಜೆ. ಮೊದಲು ಹೆರವರ ಆಕಳು ಒಬ್ಬರಲ್ಲಿ ಬಂದರೆ ಅದನ್ನು ಡೊಣ್ಣೆಯಿಂದ ಹೊಡೆದೋಡಿಸುತ್ತಿದ್ದಿಲ್ಲ. ಅದಕ್ಕೆ ರೊಟ್ಟಿ ಮೊದಲಾದ್ದನ್ನು ತಿನ್ನಿಸುತ್ತಿದ್ದರು. ಹಿಡಿ ಹುಲ್ಲನ್ನು ಹಾಕುತ್ತಿದ್ದರು. ಈಗಿನವರೇ? ಬಡಿಗೆಯಿಂದ ಮೈಮುರಿಯುವಂತೆ ಹೊಡೆದು ಹಾಕುತ್ತಾರೆ. ಹೆರವರ ಆಕಳ ಮಾತಂತಿರಲಿ, ಮನೆಯ ಆಕಳಿಗೂ ಹೊಟ್ಟೆತುಂಬ ಮೇವು ಹಾಕುವದಿಲ್ಲ. ಹೊತ್ತು ಹೊತ್ತಿಗೆ ನೀರು ಕುಡಿಸುವದಿಲ್ಲ. ಎಲ್ಲಿಯಾದರೂ ಬಾಯಿಗೆ ಸಿಕ್ಕದ್ದನ್ನು ಮೇಯ್ದು, ದೊರೆತಂಥ ಹೊಲಸು ನೀರನ್ನು ಕುಡಿದು ಅವು ಮನೆಗೆ ಬರಬೇಕು. ಇಂದು ನಮ್ಮ ಆಕಳಿಗೆ ಬಿಕ್ಕೆ ಬೇಡಲು ಹಚ್ಚಿರುವದರಿಂದಲೇ ನಾವೂ ಬಿಕ್ಕೆ ಬೇಡುವ ಹೊತ್ತು ಬಂದೊದಗಿದೆ. ಸೇವೆಯಂತೆಯೇ ಪ್ರತಿಫಲ! ಆಕಳ ಸೇವೆ ಮಾಡಿದಷ್ಟೂ ಸುಖ ಸೌಭಾಗ್ಯಗಳು ದೊರೆಯುತ್ತವೆ.

ನನ್ನ ತಾಯಿ ಆಗಾಗ್ಗೆ ಕೊಟ್ಟಿಗೆಯ ಕಡೆಗೆ ಹೋಗುತ್ತಿದ್ದಳು. ಅಕ್ಕಿ ತೊಳೆದ ನೀರನ್ನು ಆಕಳಿಗೆ ಕುಡಿಸುವಳು. ಇದಕ್ಕೆ ಅಕ್ಕಚ್ಚು ಎನ್ನುತ್ತಾರೆ. ಇದು ತಂಪು ಹಾಗು ಶಕ್ತಿವರ್ಧಕ. ಮಧ್ಯಾಹ್ನ ಊಟದ ಮೊದಲು ದೇವರಿಗಾಗಿ ಒಂದು, ಹಸುವಿಗಾಗಿ ಒಂದು ಹೀಗೆ ಎರಡು ನೈವೇದ್ಯದೆಲೆಗಳನ್ನು ನಮ್ಮ ತಾಯಿ ಬಡಿಸಿಡುತ್ತಿದ್ದಳು ದೇವರ ನೈವೇದ್ಯವನ್ನು ದೇವಸ್ಥಾನದ ಪೂಜಾರಿಗೆ ಮುಟ್ಟಿಸಿ. ಹಸುವಿಗಾಗಿ ತೆಗೆದಿಟ್ಟ ಎಲೆಯನ್ನು ನಮ್ಮ ಗೋ-ಮಾತೆಗೆ ಒಯ್ದು ತಿನ್ನಿಸುತ್ತಿದ್ದಳು. ಇದಕ್ಕೆ 'ಗೋಗ್ರಾಸ' ಕೊಡುವದು ಎನ್ನುತ್ತಾರೆ. ಅದನ್ನು ನಮ್ಮ ತಾಯಿ ತಪ್ಪದೆ ಕೊಡುತ್ತಿದ್ದಳು. ಕಪಿಲೆ ಮೂಕ ಪ್ರಾಣಿಯಾದರೂ ನಮ್ಮತಾಯಿಯನ್ನು ತುಂಬ ಪ್ರೀತಿಸುತ್ತಿತ್ತು. ಪ್ರೇಮಮಾಡಬೇಕು, ಪ್ರೇಮ ಮಾಡಿಸಿಕೊಳ್ಳಬೇಕು! ಪ್ರೇಮದಿಂದ ಪ್ರೇಮವು ಇಮ್ಮಡಿಯಾಗುತ್ತದೆ. ತಾಯಿಯನ್ನು ಅದು ನೆಕ್ಕುತ್ತಿತ್ತು. ಅದರ ಕುತ್ತಿಗೆಯ ಕೆಳಗಿನ ಗಂಗೆದೊಗಲನ್ನು ತಾಯಿಯು ತುರಿಸಹತ್ತಿದರೆ ಅದು ಸಂತೋಷದಿಂದ

ತನ್ನ ಗೋಣನ್ನು ಮೇಲೆ ಮಾಡುತ್ತಿತ್ತು. ತಾಯಿಯ ಧ್ವನಿಯನ್ನು ಕೇಳು ತ್ತಲೇ ಅದು ಹಂಬರಿಸುತ್ತಿದ್ದಿತು. ಕಪಿಲೆಯ ಹಾಲನ್ನು ನಮ್ಮ ತಾಯಿಯೇ ಕರೆಯಬೇಕು. ಬೇರೆ ಯಾರಿಗೂ ಅದು ಹಿಂಡಲು ಬಿಡುತ್ತಿದ್ದಿಲ್ಲ. ಕೊಡುವ ವನೇ ಪಡೆಯಬೇಕೆಂಬ ನಿಯಮ ಅದಕ್ಕಿದ್ದಿರಬೇಕು! ಬೇರೆ ಯಾರಾದರೂ ಅದರ ಕೆಚ್ಚಲಿಗೆ ಕೈಮುಟ್ಟಿದರೆ ಅದು ಸಿಟ್ಟಿನಿಂದ ನೋಡುತ್ತಿತ್ತು. " ಗಂಧೇನ ಗಾವ ಪಶ್ಯಂತಿ "–ಆಕಳು ವಾಸನೆಯಿಂದಲೇ ಗುರುತಿಸುತ್ತವೆ. ಅದರ ಕೆಚ್ಚಲಿಗೆ ಕೈ ತಾಗುತ್ತಲೇ ಇದು ಯಾರ ಕೈ ಎಂಬುದು ಅದಕ್ಕೆ ಗೊತ್ತಾಗುತ್ತಿತ್ತು. ತಾಯಿಯನ್ನುಳಿದು ಬೇರೆ ಯಾರು ಕೈ ಮುಟ್ಟಿದರೂ ಅದು ಕಾಲು ಜಾಡಿಸು ತ್ತಿತ್ತು. ಅದು ಸತ್ವಶಾಲಿಯೂ, ಸತ್ಯಶಾಲಿಯೂ, ಅಭಿಮಾನಿಯೂ ಆಗಿದ್ದಿತು. ಪ್ರೀತಿಸದೆ ಇದ್ದವರನ್ನು ಅದು ಒದೆಯುತ್ತಿತ್ತು. " ಪಾಪಾತ್ಮನೇ, ನನ್ನ ಕೆಚ್ಚ ಲಿಗೆ ಕೈ ಹಚ್ಚಬೇಡ. ನನ್ನ ಕೆಚ್ಚಲವನ್ನು ಮುಟ್ಟಬೇಕೆಂದಿದ್ದರೆ ನನ್ನ ಮಮ ತೆಯ ಕರುವಾಗಿ ಬಾ. " ಎಂದು ಅದರ ಅಭಿಪ್ರಾಯವಿರಬೇಕು.

ಆ ಕಪಿಲೆ ಆಕಳು ಭಾಗ್ಯಶಾಲಿಯಾದ ಆಕಳೆಂದು ನಾವು ತಿಳಿಯುತ್ತಿ ದ್ದೆವು. ಅದರಿಂದ ನಮ್ಮ ಮನೆಗೊಂದು ಶೋಭೆಯೇ ಬಂದಿತ್ತು. ನಮ್ಮ ಮನೆಯ ದೇವತೆಯದು. ನಮ್ಮ ಮನೆಯೊಳಗಿನ ಪ್ರೇಮ, ಪಾವಿತ್ರ್ಯ, ಸ್ನೇಹ ಮತ್ತು ಸೌಂದರ್ಯದ ಮೂರ್ತಿಯೇ ಅದಾಗಿತ್ತೆಂದರೆ ತಪ್ಪಾಗಲಾರದು. ಆದರೆ ಕಾಲುಬೇನೆಯೆಂಬ ಮಹಾರೋಗವೊಂದು ಬಂದಡರಿತು. ಈ ರೋಗ ಹಬ್ಬಿತೆಂದರೆ ಕೊಂಕಣದಲ್ಲಿಯ ರಾಶಿ ರಾಶಿ ದನಗಳು ಸಾಯುತ್ತವೆ. ಪಟ ಪಟನೆ ಕಾಲು ಅಪ್ಪಳಿಸಿ ಸತ್ತುಹೋಗುತ್ತವೆ. ಕಾಲಿಗೆ ತೂತು ಬಿದ್ದು ಹುಳ ಗಳಾಗುತ್ತವೆ, ಮುಂದೆ ಒಂದೆರಡು ದಿವಸಗಳಲ್ಲಿಯೇ ದನ ಸತ್ತು ಹೋಗು ತ್ತವೆ.

ನಮ್ಮ ಕಪಿಲೆ ಆಕಳಿಗೂ ಕಾಲುಬೇನೆ ಬಂದಿತು. ಎಷ್ಟೊಂದು ಉಪ ಚಾರ ಮಾಡಿದರೂ ಗುಣವಾಗಲಿಲ್ಲ. ಗೋಣು ಕೊಡಹಿ ಬಿದ್ದುಕೊಂಡಿತ್ತು. ಒಂದು ಹುಲ್ಲಿನ ಕಡ್ಡಿಯನ್ನೂ ಮುಟ್ಟುತ್ತಿರಲಿಲ್ಲ. ನಾವು ಮನೆಯಲ್ಲಿ ಜಪ ಮಾಡಿದ್ದೂ ಆಯಿತು. ಆದರೆ ಅದರ ಪುಣ್ಯ ತೀರಿಹೋಗಿತ್ತು. ಅದು ನಮ್ಮ ನ್ನಗಲಿ ಹೋಯಿತು! ಅದು ಪ್ರಾಣ ನೀಗಿದ ದಿವಸ ನಮ್ಮ ತಾಯಿ ಊಟ ಮಾಡಲಿಲ್ಲ. ನಾವೆಲ್ಲ ಉಂಡೆವು. ತಾಯಿಗೆ ಎಷ್ಟು ಕೆಡುಕೆನ್ನಿಸಿದ್ದಿತೆಂಬು

ದನ್ನು ನಾನು ಹೇಗೆ ಹೇಳಲಿ ! ಪ್ರೀತಿಸುವವನಿಗೇ ಪ್ರಿಯವಸ್ತುವನ್ನು ಕಳೆದು ಕೊಂಡಾಗ ಆಗುವ ವ್ಯಥೆ ಗೊತ್ತಾಗುತ್ತದೆ. ಬೇರೆಯವರಿಗೆ ಅದರ ಕಲ್ಪನೆ ಯೇನು ? ಕಪಿಲೆ ಆಕಳು ಸತ್ತುಹೋದ ಸ್ಥಳದಲ್ಲಿ ಅದೆಷ್ಟೋ ದಿವಸಗಳ ವರೆಗೆ ನಮ್ಮ ತಾಯಿ ಅರಿಷಿಣ ಕುಂಕುಮ ಮತ್ತು ಹೂ ಏರಿಸುತ್ತಿದ್ದಳು.

ಮಾತಿಗೆ ಮಾತು ಬಂದಾಗ ತಾಯಿ ಹೇಳುತ್ತಿದ್ದಳು, " ಭಾಗ್ಯಶಾಲಿ ಆಕಳೊಡನೆಯೇ ನಿಮ್ಮ ಮನೆಯ ಭಾಗ್ಯವೂ ಹೊರಟು ಹೋಯಿತು. ಅಂದಿ ನಿಂದ ಮನೆಯಲ್ಲಿ ಜಗಳಾಟಕ್ಕಾರಂಭವಾಗಿದೆ. ಊರಿನಲ್ಲೆಲ್ಲ ಗೋಕುಲದಂತೆ ವಿರಾಜಿಸುತ್ತಿದ್ದ ನಿಮ್ಮ ಮನೆಯಿಂದು ಹಾಳು ಹಾಳು ಸುರಿಯುತ್ತಿದೆ. " ನಿಜ ವಾಗಿಯೂ ನಮ್ಮ ತಾಯಿಯ ಮಾತಿನಲ್ಲಿ ಸತ್ಯ ಹಾಗೂ ವ್ಯಾಪಕ ಅರ್ಥವು ಹುದುಗಿಕೊಂಡಿದೆ. ಭಾರತ ಮಾತೆಯ ಕಾಮಧೇನು ಕೈಬಿಟ್ಟಂದಿನಿಂದ ಭಾರ ತೀಯರು ಆಕಳವನ್ನು ದೂರ ಮಾಡಿದರು. ಮತ್ತು ದುರ್ಲಕ್ಷ್ಯಮಾಡಿದರು. ಅಂದಿನಿಂದ ದುಃಖ, ರೋಗ, ದಾರಿದ್ರ್ಯ, ದೈನ್ಯ ಮತ್ತು ಬರಗಾಲಗಳು ತಲೆ ಯೆತ್ತತೊಡಗಿದವು. ರಾಟಿ ಮತ್ತು ಆಕಳು ಭಾರತೀಯರ ಭಾಗ್ಯದೇವತೆಗಳು ಆಧಾರ ದೇವತೆಗಳು. ಮತ್ತೆ ಇವುಗಳ ಆರಾಧನೆ ನಡೆಯುವವರೆಗೆ ಭಾರತೀ ಯರಿಗೆ ಮುಕ್ತಿಯಿಲ್ಲ. ದಾರಿಯಲ್ಲಿ ಹೋಗುವ ಆಕಳನ್ನು ಕಂಡು ಅದಕ್ಕೆ ಪ್ರದಕ್ಷಿಣೆಯನ್ನೋ ನಮಸ್ಕಾರವನ್ನೋ ಹಾಕಿದ ಮಾತ್ರಕ್ಕೆ ಅದರ ಪೂಜೆ ಆದಂತಾಗಲಿಲ್ಲ. ನಾವು ಡಂಬಾಚಾರಿಗಳಾಗುತ್ತಿದ್ದೇವೆ. ಇತ್ತ ದೇವರಿಗೆ ನಮಸ್ಕಾರ ಮಾಡುತ್ತೇವೆ. ಅತ್ತ ಸಹೋದರರನ್ನು ಪೀಡಿಸುತ್ತೇವೆ ! ಆಕಳಿಗೆ ತಾಯಿ ಎಂದು ಕರೆಯುತ್ತೇವೆ. ಅದನ್ನು ತಂದು ಸಾಕುವದಿಲ್ಲ. ಅದಕ್ಕೆ ತಿನ್ನು ಣ್ಣಲು ಹಾಕುವದಿಲ್ಲ ! ಆದರ ಹಾಲು ಕೂಡ ಈಗ ದೊರೆಯುವದಿಲ್ಲ. ದೊರೆ ತರೂ ನಮಗೆ ರುಚಿಸುವದಿಲ್ಲ ! ಬರೀ ಉಪಚಾರದ ಮಾತನಾಡುವವರಿಗೂ, ತೋರಿಕೆಯ ನಮಸ್ಕಾರ ಮಾಡುವವರಿಗೂ ನರಕಯಾತನೆಯಾಗುವದೆಂದು ಹೇಳಿದ್ದಾರೆ. ಅಖಂಡ ದಾಸ್ಯವು ತಪ್ಪಿದ್ದಲ್ಲವೆಂದೂ ಸಾರಿದ್ದಾರೆ.

ರಾತ್ರಿ : ೧೦

## : : ಪರ್ಣಕುಟಿ

“ ಅಣ್ಣಾ, ನಾನೂ ಕಥೆ ಕೇಳಲಿಕ್ಕೆ ಬರುತ್ತೇನೋ. ದಿನಾಲು ನೀನೊಬ್ಬನೇ ಹೋಗುತ್ತೀ. ಅವ್ವಾ, ಅಣ್ಣನಿಗೆ ನೀನಾನರೂ ಹೇಳೇ. ನನ್ನನ್ನೂ ಕರೆದುಕೊಂಡು ಹೋಗೆಂದು ” ಎಂದು ವತ್ಸಲೆ ಅಣ್ಣನ ಬಳಿ ಹಟ ಹಿಡಿದಳು.

“ ಅಲ್ಲಾ, ನೀನು ಬಂದು ಏನು ಮಾಡುವೆ? ತೂಕಡಿಸಹತ್ತಿದೆಯೆಂದರೆ ಆಯಿತು. ” ಎಂದು ನುಡಿದ ಭಾವೂ.

“ ಹಾಗೇಕೆ ಹೇಳುವಿಯೋ ? ಆವಳನ್ನೂ ಕರೆದುಕೊಂಡು ಹೋಗು. ಕೇಳಲಿ. ಒಳ್ಳೆ ವಿಚಾರಗಳನ್ನು ಎಲ್ಲರೂ ಕೇಳಬೇಕು. ನಾನೂ ಬರುತ್ತಿದ್ದೆ. ಆದರೆ ಈ ಕೆಲಸದ ಜೊಂಜಾಟದಲ್ಲಿ ಹೇಗೆ ಸಾಧ್ಯ ? ” ಭಾವೂನ ತಾಯಿ ಹೇಳಿದಳು.

“ ನೆರೆಮನೆಯ ಭೀಮಾ, ಹಂಸಾ ಎಲ್ಲರೂ ಹೋಗುತ್ತಾರೆ. ಆ ಹರಿಣಿ ಯನ್ನೂ ಅವರಣ್ಣ ಕರೆದೊಯ್ಯುತ್ತಾನೆ. ನೀನೂ ನನ್ನ ಅಣ್ಣನಲ್ಲವೇ ? ” ವತ್ಸಲೆ ಮನಕರಗುವಂತೆ ಮಾತನಾಡಿದಳು.

“ ನಡೆ ಹಾಗಾದರೆ. ಮೊದಲೇ ಹೇಳುತ್ತೇನೆ ನೋಡು, ಅಲ್ಲಿ ಹೋದ ಬಳಿಕ ‘ನಿದ್ದೆ ಬರುತ್ತದೆ– ಮನೆಗೆ ಹೋಗೋಣ’ ಎಂದು ನನ್ನನ್ನು ಪೀಡಿಸ ಕೂಡದು ” ಎಂದು ಎಚ್ಚರಿಕೆ ಕೊಟ್ಟು ವತ್ಸಲೆಯನ್ನು ಅವರಣ್ಣ ಕರೆದು ಕೊಂಡು ಹೋದ.

ಆಶ್ರಮದಲ್ಲಿ ನಡೆಯುವ ಕಥೆ-ಪ್ರವಚನಗಳನ್ನು ಕೇಳಲು ಊರ ಬಾಲ ಬಾಲಕಿಯರೂ, ತರುಣರೂ, ವೃದ್ಧರೂ ಆಗಾಗ್ಗೆ ಬರುತ್ತಿದ್ದರು. ವತ್ಸಲೆ ಅಣ್ಣನೊಂದಿಗೆ ಆಶ್ರಮಕ್ಕೆ ಬರುವಷ್ಟರಲ್ಲಿ ಕಥೆ ಆರಂಭವಾಗಿತ್ತು.

“ ಕೊನೆಗೆ ನನ್ನ ತಂದೆಯವರನ್ನು ಅವರ ಮನೆಯಿಂದ ಹೊರಗೆ ಹಾಕಿ ಬಿಟ್ಟರು. ದಾಯವಾದಿತನ ! ಈ ಭರತಖಂಡದಲ್ಲಿ ದಾಯವಾದಿತನದ ಹಾವಳಿ ಬಹಳ. ಕೌರವ–ಪಾಂಡವರ ಕಾಲದಿಂದ ಈವರೆಗೂ ಹಾಗೇ ಇದೆ. ಎಲ್ಲಿ ಅಣ್ಣ-ತಮ್ಮಂದಿರಲ್ಲಿ ಪ್ರೇಮವಿರುವದಿಲ್ಲವೋ ಅಲ್ಲಿ ಸ್ವಾತಂತ್ರ್ಯವು ಉಳಿ

ಯುವುದಾದರೂ ಹೇಗೆ ? ಸುಖ-ಶಾಂತಿಗಳು ನೆಲೆಸುವದಾದರೂ ಹೇಗೆ ? ಯಾವ ಮನೆಯಲ್ಲಿ ನಮ್ಮ ತಂದೆ ಬೆಳೆದು ದೊಡ್ಡವರಾದರೋ, ಮೂವತ್ತು ವರ್ಷಗಳಕಾಲ ಯಾವ ಮನೆಯಲ್ಲಿ ತಾವು ಕಾದು ಅನ್ನ ಉಂಡಾದರೂ ಮಿಕ್ಕ ವರಿಗೆ ಹಾಲು-ಮೊಸರು ಪೂರೈಸಲು ಪ್ರಯತ್ನಪಡುತ್ತಿದ್ದರೋ, ಯಾವ ಮನೆ ಯಲ್ಲಿ ಇದ್ದು ಸಹೋದರ-ಸಹೋದರಿಯರ ಲಗ್ನಕಾರ್ಯಗಳನ್ನು ಜರುಗಿಸಿ ಅವರ ಅಪೇಕ್ಷೆಗಳನ್ನೆಲ್ಲ ಪೂರೈಸಿದರೋ ಅಂಥ ಮನೆಯಿಂದ ಹೊರಬಿದ್ದು ಹೋಗಬೇಕೆಂದು ಅವರಿಗೆ ಅಪ್ಪಣೆಯಾಯಿತು. ಮನೆಯಲ್ಲಿ ತಾಯಿಗೂ ಅಪ ಮಾನಕಾರಕ ಮಾತುಗಳನ್ನು ಸಹಿಸಬೇಕಾಯಿತು. ನಾವಿನ್ನೂ ಆಗ ಚಿಕ್ಕವ ರಿದ್ದೆವು. ಪಾಲಾಗುವ ಸಮಯದಲ್ಲಿ ನಡೆದ ಸಂಗತಿಗಳನ್ನು ಕಣ್ಣೀರು ಸುರಿ ಸುತ್ತ ತಾಯಿಯು ಆಗಾಗ್ಗೆ ನಮ್ಮ ಮುಂದೆ ಹೇಳುತ್ತಿದ್ದಳು.

ಆ ದಿವಸ ಇನ್ನೂ ನನ್ನ ನೆನಪಿನಲ್ಲಿದೆ. ನಮ್ಮ ಊರಲ್ಲಿ ಮಾಘ-ಚತು ರ್ಥಿಯ ಗಣೇಶೋತ್ಸವವಿತ್ತು. ಇದು ಹರಕೆ ಹೊತ್ತ ಉತ್ಸವವಾಗಿತ್ತು. ಗಣ ಪತಿಯ ಸಾರ್ವಜನಿಕ ಉತ್ಸವವು ಭಾದ್ರಪದ ಮಾಸದಲ್ಲಿಯೇ ಆಗುತ್ತಿತ್ತು. ಮಹಾಡದ ಧಾರಪರು ಈ ಹರಕೆ ಹೊತ್ತಿದ್ದರು. ಆ ಕಾಲಕ್ಕೆ ಅಭ್ಯಂಕರರೆಂಬ ಕೀರ್ತನಕಾರರು ನಮ್ಮ ಊರಿಗೆ ಬಂದಿದ್ದರು. ಉತ್ಸವದ ಅಂಗವಾಗಿ ಅವರ ಕೀರ್ತನೆ ನಡೆಯುತ್ತಿತ್ತು. ಊರ ಜನರೆಲ್ಲ ಕೀರ್ತನ ಕೇಳಲು ದೇವಸ್ಥಾನಕ್ಕೆ ಹೋಗಿದ್ದರು. ಅಂದು ರಾತ್ರಿ ನಮಗೆ ಕಥೆ ಕೇಳಲು ಹೋಗಗೊಟ್ಟಿರಲಿಲ್ಲ. ನಾವು ಮಲಗಿಬಿಟ್ಟಿದ್ದೆವು. ರಾತ್ರಿ ಹತ್ತು ಗಂಟೆಯ ಸುಮಾರಿಗೆ ತಾಯಿ ನಮ್ಮನ್ನು ಎಬ್ಬಿಸಿದಳು. ನನ್ನ ತಂದೆ ತಾಯಿ ಆಗ ಮನೆಬಿಟ್ಟು ಹೊರಡುವ ದರಲ್ಲಿದ್ದರು. ತಾಯಿ ಒಂದೇಸಮನೆ ಕಣ್ಣೀರು ಹರಿಸುತ್ತಿದ್ದಳು. ಯಾವ ಮನೆಯಲ್ಲಿದ್ದು ಕಪಿಲೆ ಆಕಳ ಹಾಲನ್ನು ಆಕೆ ಕರೆಸುತ್ತಿದ್ದಳೋ, ಯಾವ ಮನೆಯಲ್ಲಿ ಆಳುಮಕ್ಕಳಿಗೂ—ಒಕ್ಕಲಗಿತ್ತಿಯರಿಗೂ ಹೊಟ್ಟೆತುಂಬ ಉಣ್ಣಿಸು ತ್ತಿದ್ದಳೋ, ಯಾವ ಮನೆಯಲ್ಲಿ ಬಂಗಾರ ಮುತ್ತುಗಳ ಆಭರಣಗಳನ್ನಿಟ್ಟು ಕೊಂಡು ಮೆರೆಯುತ್ತಿದ್ದಳೋ, ಅಂಥ ಆ ಗೋಕುಲದಂಥ ಮನೆಯನ್ನು ಬಿಟ್ಟು ಹೊರಗೆ ಹೊರಟಿದ್ದಳು. ಹಗಲು ನಾಚಿಕೆಯೆಂದು ರಾತ್ರಿ ಹೊತ್ತಿನಲ್ಲಿ ಹೊರ ಟಿದ್ದರು. ನನ್ನ ತಮ್ಮ—ಯಶವಂತನ ಬೆನ್ನಿಗೆ ಬಿದ್ದವ—ತಾಯಿಯ ಬಗಲಲ್ಲಿ ಇದ್ದ. ತಂದೆ ಮುಂದೆ ನಡೆದಿದ್ದರು. ತಾಯಿ ಮತ್ತು ನಾನು ಸುಮ್ಮನೆ ಅವ

ರನ್ನು ಹಿಂಬಾಲಿಸಿದ್ದೆವು. ಎಲ್ಲಿಗೆ ಹೊರಟಿದ್ದೆವು? ದೂರೇನೂ ಅಲ್ಲ; ಅದೇ ಊರಿನಲ್ಲಿದ್ದ ನಮ್ಮ ತಾಯಿಯ ತವರುಮನೆಗೆ. ನಮ್ಮ ಅಜ್ಜನ ಮನೆಯಲ್ಲಿ ಆಗ ಯಾರೂ ಇರಲಿಲ್ಲ. ಅಜ್ಜ-ಅಜ್ಜಿ, ಪುಣೆಗೆ– ಮಗನ ಕಡೆಗೆ ಹೋಗಿದ್ದರು. ತುಸು ದಿವಸಗಳಲ್ಲಿ ಮರಳಿ ಬರತಕ್ಕವರಿದ್ದರು. ನಾವು ರಾತ್ರಿ ಯಾರ ಕಣ್ಣಿಗೂ ಬೀಳದಂತೆ ಅಜ್ಜನ ಮನೆಗೆ ಬಂದು ಸೇರಿದೆವು. ದೇವಸ್ಥಾನದಲ್ಲಿ ಆನಂದೋತ್ಸವವು ನಡೆದಿತ್ತು. ಆದರೆ ನಾವು ನಿರ್ಗತಿಕರಂತೆ ಅಡವಿಯಲ್ಲಿ ಸಾಗಿದ್ದೆವು. ದೇವರ ಈ ವಿಶಾಲವಾದ ಭೂಮಿಯಲ್ಲಿ ಒಂದೇ ಕಾಲಕ್ಕೆ ವಿವಿಧ ಪ್ರಕಾರದ ಘಟನೆಗಳು ನಡೆದಿರುತ್ತವೆ.

ಹೊಸ ಮನೆಯ ವಾಸವು ರೂಢಿಸಿತು. ಆದರೆ ತಾಯಿಯ ಮೋರೆಯ ಮೇಲಿನ ಖಿನ್ನತೆ ಮಾತ್ರ ಕಡಿಮೆಯಾಗಲಿಲ್ಲ. ಕೆಲವು ದಿನಗಳಲ್ಲಿಯೇ ಅಜ್ಜಿ ತಿರುಗಿ ಬಂದಳು. ನನ್ನ ಅಜ್ಜಿ ದಯಾಳು ಗುಣದವಳಾಗಿದ್ದರೂ ಹಟಮಾರಿಯಾಗಿದ್ದಳು. ತನ್ನ ಪರಿಸ್ಥಿತಿಯ ಅರಿವು ತನಗಿದ್ದುದರಿಂದ ನನ್ನ ತಾಯಿ ಅಜ್ಜಿಗೆ ಅಂಜಿಕೊಂಡೇ ನಡೆಯುತ್ತಿದ್ದಳು.

ತವರುಮನೆಯಲ್ಲಿ ಇರುವದೆಂದರೆ ತಾಯಿಯ ಜೀವದ ಸುತ್ತು ಬಂದ ಹಾಗಾಗಿತ್ತು. ಅಪಮಾನಕಾರಕವೆನಿಸುತ್ತಿತ್ತು. ಅದರಲ್ಲಿಯೂ ಗಂಡ-ಹೆಂಡತಿ ಇಬ್ಬರೂ ತವರುಮನೆಯಲ್ಲುಳಿದುಕೊಳ್ಳುವದೆಂದರೆ ಇನ್ನಷ್ಟು ಪ್ರಾಣಸಂಕಟ! ಅವಳು ಸ್ವಾಭಿಮಾನಿಯಾಗಿದ್ದಳು. ಒಂದು ದಿನ ಅಜ್ಜ–ಅಜ್ಜಿ ದೇವಸ್ಥಾನಕ್ಕೆ ಪುರಾಣ ಕೇಳಲಿಕ್ಕೆ ಹೋಗಿದ್ದರು. ತಂದೆಯವರು ಪಡಸಾಲೆಯಲ್ಲಿ ಲೆಕ್ಕ-ಪತ್ರ ನೋಡುತ್ತ ಕುಳಿತಿದ್ದರು. ಇದೇ ಹೊತ್ತೆಂದು ನಮ್ಮ ತಾಯಿ ತಂದೆಯ ಹತ್ತಿರ ಹೋಗಿ ಹೇಳಿದಳು, "ನನ್ನಿಂದ ಇನ್ನು ಮುಂದೆ ಈ ಮನೆಯಲ್ಲಿ ಇರಲು ಸಾಧ್ಯವಿಲ್ಲ. ನಾನು ಬದುಕಿರಬೇಕೆಂದಿದ್ದರೆ ಸಣ್ಣದಾದರೂ ಚಿಂತೆ ಇಲ್ಲ. ಒಂದು ಸ್ವಂತ ಮನೆ ಕಟ್ಟಿಸಿರಿ. ಈ ಮನೆಯಲ್ಲಿದ್ದು ತಿನ್ನುವದೆಂದರೆ ನನಗೆ ಬೇಸರ."

"ಇಲ್ಲಿ ಇದ್ದ ಮಾತ್ರಕ್ಕೇನಾಯಿತು? ನಮ್ಮ ಅನ್ನವನ್ನೇ ನಾವು ಉಣ್ಣುತ್ತೇವಲ್ಲ. ಒಮ್ಮೆಲೆ ಮನೆ ಕಟ್ಟುವದೇನು ಸುಲಭವಾದ ಕೆಲಸವೇ? ನಿಮಗೆ ಹೆಂಗಸರಿಗೆ ಹೇಳಲಿಕ್ಕೇನು? ಗಂಡಸರಿಗೆ ಇರುವ ತೊಂದರೆ ನಿಮಗೇನು ಗೊತ್ತು?"

ತಾಯಿಯು ತಪ್ತಳಾಗಿ ನುಡಿದಳು, "ನಿಮಗೆ ಗಂಡಸರಿಗೆ ಸ್ವಾಭಿಮಾನ

ವೆಂಬುದೇ ಗೊತ್ತಿಲ್ಲ. "

ನಮ್ಮ ತಂದೆ ವ್ಯಸನಪಟ್ಟುಕೊಂಡಿದ್ದರೂ ಶಾಂತರಾಗಿ ನುಡಿದರು, " ಹೌದು, ನಮಗೆ ಸ್ವಾಭಿಮಾನವಿಲ್ಲ! ನಾವು ಮನುಷ್ಯರಾಗಿದ್ದರಷ್ಟೆ ಸ್ವಾಭಿಮಾನ! ಬಡ ಮನುಷ್ಯನನ್ನು ಜಗತ್ತೇ ಅಪಮಾನಗೊಳಿಸುತ್ತಿರುವಾಗ ಹೆಂಡತಿ ಏಕೆ ಸುಮ್ಮನಿದ್ದಾಳು? ಮಾಡು ನೀನೂ ಅಪಮಾನ ಮಾಡು! ಮನಸ್ಸಿಗೆ ಬಂದಂತೆ ಆಡಿಕೋ. "

ತಂದೆಯ ಮಾತು ಕೇಳಿ ತಾಯಿಯ ಕಂಠ ತುಂಬಿ ಬಂದಿತು. ಗದ್ಗದಿತ ಕಂಠದಿಂದ ನುಡಿದಳು, " ನಿಮಗೆ ಅಪಮಾನ ಮಾಡಬೇಕೆಂದು ನಾನು ಹಾಗೆ ಆಡಲಿಲ್ಲ. ಸುಮ್ಮನೆ ಏನಾದರೂ ಮನಸ್ಸಿಗೆ ಹಚ್ಚಿಕೊಳ್ಳಬೇಡಿ. ನನಗೆ ಮಾತ್ರ ಈ ಮನೆಯಲ್ಲಿ ಇರಬೇಕೆಂದು ಅನಿಸುವದಿಲ್ಲ. "

" ನನಗಾದರೇನು ಇಲ್ಲೇ ಇರಬೇಕೆಂದು ಅನಿಸುವದೇ? ಆದರೆ ನಿನಗೇನು ನಮ್ಮ ಪರಿಸ್ಥಿತಿ ಗೊತ್ತಿಲ್ಲವೇ? ಸಾಲದ ಬಡ್ಡಿ ಕೊಡಲಿಕ್ಕೂ ಆಗುವದಿಲ್ಲ. ಮನೆ ಹೇಗೆ ಕಟ್ಟುವದು? ದನದ ಕೊಟ್ಟಿಗೆಯ ಹಾಗೆ ಹೇಗಾದರೂ ಕಟ್ಟುವದಿದೆಯೇ? ಅಂಥ ಮನೆಯಲ್ಲಿ ಇರುವದೂ ಅಪಮಾನವಲ್ಲವೇ? " ತಾಯಿಯನ್ನು ಸಮಾಧಾನ ಪಡಿಸಲೆಂದು ತಂದೆ ಪ್ರಯತ್ನಿಸಿದರು.

" ದನದ ಕೊಟ್ಟಿಗೆಯಾದರೂ ಸರಿಯೇ. ಸ್ವಂತ ಮನೆಯೆಂದಾದರೆ ಸಾಕು. ಸಾದಾ ಹುಲ್ಲಿನ ಗುಡಿಸಲಿದ್ದರೂ ಅಡ್ಡಿಯಿಲ್ಲ. ಅಲ್ಲಿರಲು ನನಗೆ ಅಪಮಾನವೆನಿಸುವದಿಲ್ಲ. ಆದರೆ ತವರುಮನೆಯಲ್ಲಿರುವದು ಬೇಡ. ನನ್ನ ತಮ್ಮನ ಹೆಂಡತಿ ನಾಳೆ ಬಂದರೆ ಅವಳೂ ಅಪಮಾನ ಮಾಡತಕ್ಕವಳೇ. ಅದಕ್ಕೂ ಮೊದಲೇ ನಾವು ಇಲ್ಲಿಂದ ಹೊರಡಬೇಕು. ದೊಡ್ಡ ಹಂಚಿನ ಮನೆಯಲ್ಲಿರುವದಕ್ಕಿಂತ ಪರ್ಣಕುಟಿಯೇ ಲೇಸು. ಅದನ್ನು ಕಟ್ಟಲು ವೆಚ್ಚವೂ ಹೆಚ್ಚು ಹಿಡಿಯಲಿಕ್ಕಿಲ್ಲ. ನನ್ನ ಕೈಯಲ್ಲಿಯ ಈ ಬಂಗಾರ ಬಳೆಗಳನ್ನು ತೆಗೆದುಕೊಳ್ಳಿರಿ. ಕಡಮೆ ಬಿದ್ದರೆ ನತ್ತನ್ನೂ ಮಾರಿರಿ. ಬಂಗಾರದ ಆಭರಣ ಧರಿಸದಿದ್ದರೇನು ಕೊರತೆಯಾಗುವದು ಅಷ್ಟರಲ್ಲೇ ಇದೆ. ನಾನಾದರೂ ಯಾರಲ್ಲಿ ಹೋಗಬೇಕಾಗಿದೆ? ಸ್ವಾತಂತ್ರ್ಯವೇ ನಮಗೆ ಭೂಷಣ! ಹಣೆಗೆ ಕುಂಕುಮ, ಕೊರಳಿಗೆ ಮಂಗಲಸೂತ್ರ ಇವೆರಡಿದ್ದರೆ ಸಾಕಷ್ಟಾಯಿತು. ಸ್ವಾತಂತ್ರ್ಯವನ್ನು ಕಳೆದುಕೊಂಡು ಈ ನತ್ತು ಈ ಆಭರಣ ಧರಿಸಿಕೊಂಡಾದರೂ ಏನು ಸುಖ! "

ಹೀಗೆಂದು ನಮ್ಮ ತಾಯಿ ತನ್ನ ನತ್ತು ಹಾಗು ಬಂಗಾರ ಬಳೆ ನಮ್ಮ ತಂದೆಯ ಮುಂದೆ ತೆಗೆದಿಟ್ಟಳು.

ತಂದೆಯವರು ಸ್ತಂಭಿತರಾದರು. "ನನಗೆ ಇಷ್ಟೊಂದು ದುಃಖವಾಗುತ್ತಿದೆಯೆಂದು ನಾನು ಎಣಿಸಿರಲಿಲ್ಲ. ಏನೂ ಚಿಂತಿಸಬೇಡ. ನಾನು ಬೇಗನೆ ಚಿಕ್ಕದೊಂದು ಮನೆಯನ್ನು ಕಟ್ಟಿಸುತ್ತೇನೆ." ಎಂದು ಭರವಸೆಯನ್ನು ಕೊಟ್ಟರು.

ನಮ್ಮ ತಾಯಿ ನಮಗೆ ಹೇಳುತ್ತಿದ್ದಳು, "ಸ್ವಾತಂತ್ರ್ಯವನ್ನು ಸಂಪಾದಿಸುವದಕ್ಕಾಗಿ ಚಿನ್ನಾಭರಣಗಳನ್ನು ಎಸೆದು ಬಿಡಿರಿ! ಸ್ವಾತಂತ್ರ್ಯವೆಂಬುವದು ಶೋಭೆಯುಳ್ಳ ಮತ್ತು ಅಮೂಲ್ಯವಾದ ಶೃಂಗಾರವಾಗಿದೆ."

ನಮ್ಮ ಪಾಲಿಗೆ ಬಂದಿದ್ದ ಚಿಕ್ಕ ಸ್ಥಳದಲ್ಲಿ ಗುಡಿಸಲು ಕಟ್ಟುವ ಕೆಲಸ ಆರಂಭವಾಯಿತು. ಕಚ್ಚಾ ಇಟ್ಟಂಗಿಯಿಂದ ಕಟ್ಟಿದ ಮಣ್ಣಿನ ಗೋಡೆಗಳು! ಆ ಇಟ್ಟಂಗಿಗೆ ಕೊಂಕಣದಲ್ಲಿ ಹೆಂಟೆ ಎನ್ನುತ್ತಾರೆ. ಆ ಹೆಂಟೆಗಳು ಇಟ್ಟಂಗಿಗಳಿಗಿಂತ ಆಕಾರದಲ್ಲಿ ದೊಡ್ಡದಾಗಿರುತ್ತವೆ. ಅಂಥ ಹೆಂಟೆಗಳಿಂದ ಗೋಡೆ ಸಿದ್ಧವಾದವು. ಹುಲ್ಲಿನಿಂದ ಮನೆಯನ್ನು ಹೊದಿಸಲಾಯಿತು. ನೆಲ್ಲಕ್ಕಿಯೂ ಪೂರ್ತಿಯಾಯಿತು. ಅಕ್ಷಯ ತೃತಿಯೆಯ ಶುಭಮುಹೂರ್ತದಲ್ಲಿ ಹೊಸ ಮನೆಯನ್ನು ಪ್ರವೇಶಿಸುವದೆಂದು ನಿಶ್ಚಯ ಮಾಡಲಾಗಿತ್ತು. ತಾಯಿಗೆ ಒಂದು ಬಗೆಯಿಂದ ಕೆಡುಕೂ ಒಂದು ಬಗೆಯಿಂದ ಆನಂದವೂ ಎನಿಸುತ್ತಿತ್ತು. ಪಕ್ಕದಲ್ಲಿ ಭಾವಂದಿರ ಬಂಗಲೆಯಂಥ ದೊಡ್ಡ ದೊಡ್ಡ ಮನೆಗಳಿದ್ದವು. ತಮ್ಮದು ಮಾತ್ರ ಹುಲ್ಲಿನ ಗುಡಿಸಿಲು. ಆದರೆ ಮತ್ತೆ ವಿಚಾರ ಮಾಡುವಳು, "ಏನೇ ಆದರೂ ಸ್ವತಂತ್ರವಾದ ಮನೆ, ನಾನು ಇದರ ಒಡತಿ, ಯಾರೂ ಇಲ್ಲಿಂದ ನನ್ನನ್ನು ತಳ್ಳಿ ಹಾಕಲಾರರು!"

ಮನೆಯ ವಾಸ್ತುಶಾಂತಿಯನ್ನು ಮಾಡಿಯಾಯಿತು. ಮೊದಲಿಗೆ ಮನೆಯಲ್ಲಿ ದೇವರನ್ನು ಪ್ರತಿಷ್ಠಾಪಿಸಲಾಯಿತು. ಆಮೇಲೆ ಸಾಮಾನುಗಳನ್ನು ಸಾಗಿಸಿದೆವು. ಹೇಗಾದರೊಮ್ಮೆ ಗೃಹಪ್ರವೇಶವನ್ನು ಮಾಡಬೇಕಾಗಿದ್ದಿತು. ತಾಯಿ ಕೊಬ್ಬರೆಯ ಕಡಬುಗಳನ್ನು ಮಾಡಿದ್ದರು. ದಿವಸವೆಲ್ಲ ಈ ಗಡಿಬಿಡಿಯಲ್ಲಿಯೇ ಕಳೆದುಹೋಯಿತು. ತಂದೆ ಕೂಡಿದ ಜನರ ಮುಂದೆ ಹೇಳುತ್ತಿದ್ದರು, "ಸದ್ಯಕ್ಕೆ ಗಂಜಿನ ಮಟ್ಟಿಗೆ ಇದನ್ನು ಕಟ್ಟಿಕೊಂಡಿದ್ದೇವೆ. ಮುಂದೆ

ದೊಡ್ಡದು ಕಟ್ಟಬೇಕಾಗಿದೆ. ”

ಆದರೆ ತಾಯಿ ನಮಗೆ ಹೇಳುತ್ತಿದ್ದಳು, “ ಇವರಿಂದ ದೊಡ್ಡ ಮನೆಯನ್ನು ಕಟ್ಟಲು ಇನ್ನೆಂದಿಗೆ ಸಾಧ್ಯವೋ ? ದೇವರ ಬಳಿಗೆ ಹೋದಾಗಲೇ ನಾನು ಅದನ್ನು ಕಾಣಬಹುದು. ಆದರೆ ಈ ಪರ್ಣಕುಟಿಯೇ ನನ್ನ ಸ್ವರ್ಗವಾಗಿದೆ. ಇಲ್ಲಿ ನಾನು ಸ್ವತಂತ್ರಳಾಗಿದ್ದೇನೆ. ಯಾರ ಹಂಗೂ ಇಲ್ಲಿ ಇಲ್ಲ. ಇಲ್ಲಿ ತಿನ್ನುವ ರೊಟ್ಟಿ-ಪಲ್ಲೆ ನನಗೆ ಅಮೃತ ! ಹೆರವರ ಹಂಗಿನಲ್ಲಿದ್ದು ತಿನ್ನುವ ಪೂರೀ ಬಾಸುಂದಿ ನನಗೆ ಬೇಡ. ”

ಅಂದು ರಾತ್ರಿ ನಾವು ಅಂಗಳದಲ್ಲಿ ಕುಳಿತುಕೊಂಡಿದ್ದೆವು. ಆಕಾಶದಲ್ಲಿ ತಾರೆಗಳು ಮಿನುಗುತ್ತಿದ್ದವು. ಚಂದ್ರನು ಯಾವಾಗಲೋ ಮುಳುಗಿದ್ದನು. ತಾಯಿ ಧನ್ಯಳಾಗಿದ್ದಳು ಮನೆ ಚಿಕ್ಕದಾಗಿದ್ದರೂ ಮುಂದುಗಡೆ ಅಂಗಳ ಮತ್ತು ಹಿಂದೆ ಹಿತ್ತಲ ಇದ್ದುದರಿಂದ ಲಕ್ಷಣವಾಗಿ ಕಾಣುತ್ತಿತ್ತು. ತಾಯಿ ನನ್ನನ್ನು ಕೇಳಿದಳು, “ ಶ್ಯಾಮಾ, ಈ ಹೊಸ ಮನೆ ನಿನ್ನ ಮನಸ್ಸಿಗೆ ಮೆಚ್ಚಿತೇ ? ”

ನಾನು ಹೇಳಿದೆ, “ ಮೆಚ್ಚದೇನು ? ಸುಂದರವಾಗಿದೆ. ಬಡವರ ಮನೆಗಳೂ ಹೀಗೆಯೇ ಇರುತ್ತವೆ. ನಮ್ಮ ಮಥುರಿಯ ಮನೆ ಹೀಗೆಯೇ ಇದೆ. ಅವಳಿಗೆ ನಮ್ಮ ಮನೆ ಬಹಳ ಸೇರಬಹುದು. ”

ನಮ್ಮ ಹೊಸ ಮನೆಗೆ ಭತ್ತ ಕುಟ್ಟುವ ಬಡ ಮಥುರಿಯ ಮನೆಯ ಉಪಮೆಯನ್ನು ಕೊಟ್ಟದ್ದಕ್ಕಾಗಿ ನಮ್ಮ ತಾಯಿಗೆ ಸಿಟ್ಟು ಬಂದಿತೆಂದು ತಿಳಿದಿರೇನು ? ಇಲ್ಲ, ಅವಳಿಗೆ ಸಿಟ್ಟು ಬರಲಿಲ್ಲ. ಅವಳು ನಮಗೆ ಸಮಾಧಾನದ ಮಾತುಗಳನ್ನೇ ಹೇಳಿದಳು, “ ನಿಜ, ಮಥುರಿ ಬಡವಳಾಗಿದ್ದರೂ, ಮನಸ್ಸಿನಿಂದ ಶ್ರೀಮಂತಳಾಗಿದ್ದಾಳೆ. ನಾವು ಈ ಚಿಕ್ಕ ಮನೆಯಲ್ಲಿದ್ದು ದೊಡ್ಡ ಮನಸ್ಸಿನವರಾಗೋಣ. ಮನಸ್ಸಿನಿಂದ ಶಿರಿವಂತರಾಗೋಣ. ”

“ ಅಹುದು, ನಾವು ಮನಸ್ಸಿನಿಂದ ಶಿರಿವಂತರಾಗೋಣ. ನಿಜಕ್ಕೂ ಆಗೋಣ ” ಎಂದು ನಾನು ನುಡಿದೆ.

ಇಷ್ಟರಲ್ಲಿ ಆಕಾಶದಿಂದ ಒಂದು ತಾರೆ ಕಳಚಿ ಬಿದ್ದಿತು. ತಾಯಿಯು ಗಂಭೀರಳಾದಳು. ಚಿಕ್ಕ ತಮ್ಮನು ಕೌತುಕದಿಂದ ನುಡಿದ, “ ಅಮ್ಮಾ, ಎಷ್ಟೊಂದು ದೊಡ್ಡ ತಾರೆಯದು ? ”

ತಾಯಿ ಗಂಭೀರಳಾಗಿಯೇ ಇದ್ದಳು. ನನಗೆ ಹೇಳಿದಳು, "ಶ್ಯಾಮಾ, ನಿನ್ನ ತಾಯಿಯ ಜೀವನತಾರೆಯು ಬೇಗನೇ ಕಳಚಿ ಬೀಳುವದೆಂದು ಅದು ಹೇಳುತ್ತಿದೆಯಲ್ಲವೇ? ಮೇಲಿನ ವಿಶಾಲವಾದ ಮತ್ತು ಸುಂದರವಾದ ಆಕಾಶವು ನನ್ನನ್ನು ಮೇಲೆ ಕರೆಯುತ್ತಿರಲಿಕ್ಕಿಲ್ಲವಷ್ಟೇ? ನನ್ನನ್ನು ಕರೆದೊಯ್ಯುವದಕ್ಕಾಗಿಯೇ ಆ ತಾರೆ ಕೆಳಗೆ ಬಂದಿರಬಹುದೇನು?"

"ಹಾಗೆ ಹೇಳಬೇಡ ಅಮ್ಮ. ಅದು ನಮ್ಮ ಸ್ವತಂತ್ರವಾದ ಮನೆಯನ್ನು ನೋಡಲಿಕ್ಕೆ ಬಂದಿರಬೇಕು. ಅದಕ್ಕೆ ನಮ್ಮ ಸಾದಾ ಮನೆ, ಈ ಸ್ವತಂತ್ರವಾದ ಮನೆ ಸ್ವರ್ಗಕ್ಕಿಂತ ಹೆಚ್ಚು ಶ್ರೇಷ್ಠವೆಂದು ಕಂಡಿರಬೇಕು. ಯಮುನೆಯ ನೀರಿನಲ್ಲಿ ಗೋಪಾಲಕರು ಕೈ-ಬಾಯಿ ತೊಳೆದುಕೊಂಡಾಗ ಉದುರಿದ ಅಗಳುಗಳನ್ನು ತಿನ್ನಲು ಸ್ವರ್ಗದಲ್ಲಿಯ ದೇವತೆಗಳು ಬರುತ್ತಿದ್ದರೆಂದು ಹರಿವಿಜಯದಲ್ಲಿ ಹೇಳಿಲ್ಲವೇ? ಹಾಗೆ ಈ ಮನೆಯನ್ನು ನೋಡಲಿಕ್ಕೆ ನಕ್ಷತ್ರಗಳೂ ಬರಬಹುದು. ಈ ಮನೆಯಲ್ಲಿ ಪ್ರೇಮವಿದುತ್ತದೆ. ನೀನು ಇರುತ್ತೀ" ನಾನು ಹೇಳಿದೆ.

ನನ್ನ ಬೆನ್ನ ಮೇಲೆ ವಾತ್ಸಲ್ಯದುಂಬಿದ ಕೈಗಳನ್ನು ಆಡಿಸುತ್ತ ತಾಯಿ ನುಡಿದಳು, "ಶ್ಯಾಮಾ, ಇಷ್ಟೊಂದು ಮಾತನಾಡಲು ನಿನಗೆ ಯಾರು ಕಲಿಸಿದರು. ಎಷ್ಟು ಚೆಂದವಾಗಿ, ಮಧುರವಾಗಿ ಮಾತನಾಡುತ್ತೀ. ನಿಜವಾಗಿ ಈ ಪರ್ಣಕುಟಿಯು ತಾರೆಗಳಿಗೂ ಸೇರುತ್ತದೆ, ಎಲ್ಲರಿಗೂ ಸೇರುತ್ತದೆ.

ರಾತ್ರಿ : ೧೧

## : : ಭೂತದಯೆ

"ರಾಮಾ, ಆ ದೀಪವನ್ನು ಬದಿಗೆ ಸರಿಸಿ ಇಡು. ನನ್ನ ಕಣ್ಣುಗಳ ಮೇಲೆ ಬೆಳಕು ಬೇಡ." ಎಂದು ಶ್ಯಾಮನು ಹೇಳಿದ.

ಇಂದು ಹೊರಗೆ ಜಿಟಿಜಿಟಿ ಮಳೆ ಬೀಳುತ್ತಿತ್ತು. ತಂಪಾದ ಗಾಳಿ ಬೀಸುತ್ತಿತ್ತು. ಆದಕ್ಕಾಗಿ ಎಲ್ಲರೂ ಒಳಗೆ ಕುಳಿತಿದ್ದರು. ದಿನಾಲು ಹೊರಗೆ ಬೈಲಲ್ಲಿಯೇ ಪ್ರಾರ್ಥನೆ ನಡೆಯುತ್ತಿತ್ತು ದೀಪದ ತೊಂದರೆಯಿರಲಿಲ್ಲ. ಶ್ಯಾಮ

ನಿಗೆ ದೀಪದಿಂದ ತೊಂದರೆಯಾಗುತ್ತಿತ್ತು. ರಾಮನು ದೀಪವನ್ನು ಬದಿಗೆ ಸರಿಸಹೋದನು. ಆದರೆ ಭಿಕ್ಷನೆಲ್ಲಿ ಕೇಳುತ್ತಾನೆ ? “ ಎದುರಿಗೆ ದೀಪವಿದ್ದಿ ತೆಂದರೆ ನಿಮ್ಮ ಮುಖದ ಮೇಲಿನ ಹಾವಭಾವಗಳೂ ಗೊತ್ತಾಗುತ್ತವೆ. ಕಿವಿ ಯಿಂದ ಕೇಳಿದಾಗ ನಿಮ್ಮ ಮಾತುಗಳ ಪರಿಣಾಮವಾಗುತ್ತದೆ. ಅದೇ ರೀತಿ ನಿಮ್ಮ ಮುಖವನ್ನು ನೋಡುತ್ತಾ ಇದ್ದರೆ ಅದರ ಪರಿಣಾಮವೂ ಆಗಬಹುದು. ಬರೀ ಕೇಳಿದ ಮಾತ್ರಕ್ಕೆ ಕೆಲಸವಾಗುತ್ತಿದ್ದರೆ ನಾಟಕಗಳನ್ನು ಕತ್ತಲಲ್ಲಿ ಕೂಡ ಮಾಡಬಹುದಾಗಿತ್ತಲ್ಲ ? ” ಭಿಕ್ಷನೆಂದನು.

“ ನಾನೇನೂ ನಾಟಕ ಮಾಡುತ್ತಲಿಲ್ಲ. ನನ್ನ ಹೃದಯದಲ್ಲಿನ ಮಾತು ಗಳನ್ನು ನಿಮ್ಮ ಮುಂದೆ ಹೇಳುತ್ತಿದ್ದೇನೆ. ”

“ ನಾವು ನಾಟಕವೆಂದು ಹೇಳುವದಿಲ್ಲ. ಆದರೆ ನಿಮ್ಮ ಮುಖವನ್ನು ನೋಡಿಯೂ ಪರಿಣಾಮವಾಗುವ ಸಂಭವವಿರುತ್ತದೆ. ಸ್ವಾಮಿ ರಾಮ ತೀರ್ಥರು ಜಪಾನದಲ್ಲಿ ಇಂಗ್ಲಿಷ್‌ನಲ್ಲಿ ಮಾತಾಡುತ್ತಿದ್ದಾಗ, ಇಂಗ್ಲಿಷು ಬಾರ ದವರೂ ಆ ವ್ಯಾಖ್ಯಾನಗಳಿಗೆ ಹೋಗುತ್ತಿದ್ದರಂತೆ ಅವರ ಮುಖದ ಮೇಲಿನ ಹಾವಭಾವಗಳಿಂದಲೇ ಅವರ ಭಾಷಣದ ಅರ್ಥವಾಗುತ್ತಿರಬಹುದು. ” ನಾಮ ದೇವನು ಭಿಕ್ಷನ ಮಾತನ್ನು ಎತ್ತಿಹಿಡಿದನು.

“ ಆಗಲಿ ಹಾಗಾದರೆ. ನಿಮ್ಮ ಆನಂದವೇ ನನ್ನ ಆನಂದವಲ್ಲವೇ ? ” ಎಂದು ಹೇಳಿ ಶ್ಯಾಮನು ಕಥೆಯನ್ನಾರಂಭಿಸಿದನು:

ಸಣ್ಣವರಿದ್ದಾಗ ನಾವು ಒಂದು ದಿವಸ ಅಂಗಳದಲ್ಲಿ ಆಟ ಆಡುತ್ತಿದ್ದೆವು. ನಮ್ಮ ತುಳಸೀಕಟ್ಟೆಯಿದ್ದ ಅಂಗಳವು ಚಚ್ಚೌಕಾಗಿ ದೊಡ್ಡದಾಗಿತ್ತು. ಅಂಗಳ ದಲ್ಲಿ ಒಂದು ಅತಿ ಎತ್ತರವಾದ ಪರಂಗಿ ಹುಣಸೇಹಣ್ಣಿನ ಮರವಿತ್ತು. ಒಮ್ಮಿಂ ದೊಮ್ಮೆ ಟಪ್ ಎಂದು ಸದ್ದಾಯಿತು. ನಾನು ನನ್ನ ತಮ್ಮ ಅದು ಎಂಥ ಸದ್ದೆಂದು ಸುತ್ತಲೂ ನೋಡಿದೆವು. ಏನಾದರೂ ಬಿದ್ದಿರಲೇಬೇಕೆಂದು ಶೋಧಿಸ ತೊಡಗಿದೆವು. ಹೀಗೆ ಶೋಧ ನಡೆಸಿದಾಗ ಒಂದು ಹಕ್ಕಿಯ ಮರಿ ಕಣ್ಣಿಗೆ ಬಿತ್ತು. ಅದರ ಎದೆ ದಡಪಡಿಸುತ್ತಿತ್ತು. ಬಹಳ ಎತ್ತರದ ಮೇಲಿಂದ ಅದು ಬಿದ್ದಿತ್ತು. ಮುದ್ದೆಮುದ್ದೆಯಾಗಿ ಒದ್ದಾಡುತ್ತಿತ್ತು. ಇನ್ನೂ ಅದಕ್ಕೆ ರೆಕ್ಕೆಕೂಡ ಒಡೆದಿರಲಿಲ್ಲ. ಅದು ಸರಿಯಾಗಿ ಕಣ್ಣನ್ನೂ ಬಿಡುತ್ತಿರಲಿಲ್ಲ. ಕಮ್ಮಾರನ ತಿದಿ ಯಂತೆ ಅದರ ಶರೀರವು ಮೇಲೆ-ಕೆಳಗೆ ಆಗುತ್ತಲಿತ್ತು. ಅದನ್ನು ತುಸು

ಮುಟ್ಟಿದರೆ ಸಾಕು. ತನ್ನ ಕುತ್ತಿಗೆಯನ್ನು ಹೊರಗೆ ಚಾಚಿ, ಚೀಂ, ಚೀಂ ಎಂದು ಒದರುತ್ತಿತ್ತು. ಅದನ್ನು ನಾನು ಒಳಗೆ ತೆಗೆದುಕೊಂಡು ಹೋಗಬೇಕೆಂದು ನಿರ್ಧರಿಸಿದೆ. ಅದನ್ನೊಂದು ಅರಿವೆ ತುಂಡಿನಲ್ಲಿ ಕಟ್ಟಿಕೊಂಡು ಮನೆಯೊಳಗೆ ಹೋದೆವು. ನಾನು ನನ್ನ ತಮ್ಮ ಇಬ್ಬರೇ ಇದ್ದೆವು. ಅರಳೆಯನ್ನು ತೆಗೆದುಕೊಂಡು ಬಂದು ಅದರ ಮೇಲೆ ಅದನ್ನು ಇಟ್ಟೆವು. ನಾವಾದರೂ ಚಿಕ್ಕವರು. ನಮ್ಮ ಬುದ್ಧಿಗೆ ತಿಳಿದಂತೆ ಉಪಚರಿಸತೊಡಗಿದೆವು. ಆ ಮರಿಗೆ ಕಾಳು ಮತ್ತು ನೀರನ್ನು ಕೊಡಲು ಆರಂಭಿಸಿದೆವು. ಅಕ್ಕಿಯ ಸಣ್ಣ ನುಚ್ಚನ್ನು ಅದರ ಚುಂಚಿನಲ್ಲಿ ಸೇರಿಸತೊಡಗಿದೆವು. ಮೇಲೆ ಗಿಂಡಿಯ ಸೊಂಡಿಲಿನಿಂದ ಹನಿ ಹನಿ ನೀರು ಸುರಿದೆವು. ಆ ಮರಿಗೆ ತಿನ್ನಲು ಬರುವದೋ ಇಲ್ಲವೋ ? ನಾವು ಈ ರೀತಿ ತಿನ್ನಿಸುವುದರಿಂದಲೇ ಅದು ಸಾಯಬಹುದೋ? ಈ ಯಾವ ವಿಚಾರವನ್ನೂ ನಾವು ಮಾಡಲಿಲ್ಲ.

ಈ ಜಗತ್ತಿನಲ್ಲಿ ಕೇವಲ ಪ್ರೇಮ, ದಯೆ ಇದ್ದರಾಗಲಿಲ್ಲ. ಜೀವನವು ಸುಂದರವೂ ಯಶಸ್ವಿಯೂ ಆಗಬೇಕಾದರೆ ಮೂರು ಗುಣಗಳ ಆವಶ್ಯಕತೆ ಇದೆ. ಪ್ರೇಮ, ಜ್ಞಾನ ಮತ್ತು ಬಲ. ಇವು ಮೂರೂ ಉಳ್ಳವನು ಕೃತಾರ್ಥನಾಗುವನು. ಪ್ರೇಮಹೀನ-ಜ್ಞಾನವೂ ವ್ಯರ್ಥ, ಜ್ಞಾನಹೀನ-ಪ್ರೇಮವೂ ವ್ಯರ್ಥ. ಪ್ರೇಮ-ಜ್ಞಾನಹೀನ ಶಕ್ತಿ ಮತ್ತು ಶಕ್ತಿಹೀನ-ಪ್ರೇಮ ಮತ್ತು ಜ್ಞಾನ ಇವು ನಿಷ್ಪ್ರಯೋಜಕವಾದವುಗಳೇ. ನನ್ನಲ್ಲಿ ಶಕ್ತಿ ಇದ್ದು, ಪ್ರೇಮದ ಅಂಶ ಕೂಡ ಇಲ್ಲದೆ ಹೋದರೆ ಅದರ ದುರುಪಯೋಗವಾಗುವದು. ನನ್ನಲ್ಲಿ ಜ್ಞಾನವಿದ್ದು ಇತರರನ್ನು ಪ್ರೀತಿಸುವ ಗುಣವಿಲ್ಲದಿದ್ದರೆ ಅದರ ಲಾಭ ಬೇರೆಯವರಿಗೆ ಆಗುವಂತೆಯೇ ಇಲ್ಲ. ಪ್ರೇಮವಿದ್ದು ಜ್ಞಾನವಿಲ್ಲದಿದ್ದರೆ ಅದೂ ಅಪಾಯಕರವಾದದ್ದು. ಮಗುವನ್ನು ಪ್ರೀತಿಸುವದು ಗೊತ್ತಿದ್ದ ತಾಯಿಗೆ ಅದು ಕಾಹಿಲೆ ಬಿದ್ದರೆ ಅದನ್ನು ಹೇಗೆ ರಕ್ಷಿಸಬೇಕೆಂಬ ಜ್ಞಾನವಿಲ್ಲದಿದ್ದರೆ, ಕುರುಡು ಪ್ರೇಮದಿಂದ ಕಾಹಿಲೆಯಲ್ಲಿಯೂ ಅದಕ್ಕೆ ಸಿಕ್ಕಾಪಟ್ಟೆ ಉಣಿಸಿ ಪ್ರಾಣಕ್ಕೆ ಎರವಾಗುವಂತೆ ಮಾಡಬಹುದು. ಇನ್ನು ತಾಯಿಯಲ್ಲಿ ಪ್ರೇಮ ಮತ್ತು ಜ್ಞಾನ ಎರಡೇ ಇವೆಯೆಂದು ತಿಳಿಯೋಣ. ಅವಳು ದುರ್ಬಲಳೂ, ಕೆಲಸಕ್ಕೆ ಬಾರದವಳೂ ಆಗಿದ್ದರೆ ಆ ಪ್ರೇಮ-ಜ್ಞಾನಗಳಿಂದ ಪ್ರಯೋಜನವಾದರೂ ಏನು ? ಜೀವನ ವಿಕಾಸಕ್ಕೆ ಪ್ರೇಮ, ಜ್ಞಾನ ಮತ್ತು ಬಲ ಈ ಮೂರೂ ವಸ್ತುಗಳ ಅಗತ್ಯವಿದೆ.

ಪ್ರೇಮದಿಂದ ಹೃದಯವಿಕಾಸ, ಜ್ಞಾನದಿಂದ ಬುದ್ಧಿವಿಕಾಸ ಮತ್ತು ಶಕ್ತಿಯಿಂದ ಶರೀರ ವಿಕಾಸವಾಗುತ್ತದೆ. ಶರೀರ, ಮನಸ್ಸು ಮತ್ತು ಬುದ್ಧಿ ಈ ಮೂರರ ಬೆಳವಣಿಗೆಯೂ ಅಗತ್ಯವಾದುದು.

ನಾವು ಹಕ್ಕಿಯ ಮರಿಯನ್ನು ಪ್ರೀತಿಸುತ್ತಿದ್ದೆವು. ಆದರೆ ನಮಗೆ ಜ್ಞಾನವಿರಲಿಲ್ಲ. ಚುಂಚಿನಲ್ಲಿ ಹಿಟ್ಟು, ನುಚ್ಚುಗಳನ್ನು ಸೇರಿಸಿ ನೀರು ಸುರಿದೆವು. ನಮ್ಮ ಹುಂಬತನದ ಪ್ರೇಮವು ಅದನ್ನು ಬಾಧಿಸುತ್ತಿತ್ತು. ಅದು ಕೊನೆಗೆ ಗೋಣು ಕೆಳಗೆ ಚೆಲ್ಲಿತು ನಾವು ಆ ಮರಿಗೆ ಅಭಯದ ಮಾತು ಹೇಳಿದೆವು. " ನಾವು ನಿನ್ನನ್ನು ಪಂಜರದಲ್ಲಿ ಬಂಧಿಸಿಡುವದಿಲ್ಲ. ನೀನು ಗುಣ ಹೊಂದಿ ನಿನ್ನ ತಾಯಿಯ ಕಡೆ ಹಾರಿಹೋಗಬಹುದು. ನಾವು ದುಷ್ಟರೆಂದು ಭಾವಿಸಿ ಬೇಸರ ಪಟ್ಟುಕೊಳ್ಳಬೇಡ. ನಿನ್ನ ತಾಯಿಯ ಸಲುವಾಗಿಯಾದರೂ ಬದುಕಿ ಇರು. "

ನಮ್ಮ ಮಾತಿನತ್ತ ಆ ಮರಿಯ ಗಮನವಿರಲಿಲ್ಲ. ನಾನು ನಮ್ಮ ತಾಯಿಯನ್ನು ಕರೆದು ಹೇಳಿದೆ, " ಅವ್ವಾ, ಈ ಮರಿ ನೋಡು ಹೇಗೆ ಮಾಡುತ್ತಿದೆ. ತಲೆ ಮೇಲೆ ಸಹ ಮಾಡುವದಿಲ್ಲ. ಇನ್ನೇನು ಅದಕ್ಕೆ ತಿನ್ನಿಸಬೇಕು ? "

ತಾಯಿ ಹೊರಗೆಬಂದು ಆ ಮರಿಯನ್ನು ಪ್ರೀತಿಯಿಂದ ಕೈಯಲ್ಲಿ ತೆಗೆದುಕೊಂಡು ನೋಡಿದಳು. " ಶ್ಯಾಮಾ, ಇದರ ಅವಸ್ಥೆ ಮುಗಿದಿದೆಯಪ್ಪಾ. ಇದು ಇನ್ನು ಬದುಕಲಾರದು. ಅದನ್ನು ಹಿಂಸಿಸಬೇಡಿರಿ. ಅದು ಸುಖದಿಂದ ಸಾಯಲಿ. ಎತ್ತರದ ಮೇಲಿಂದ ಬಿದ್ದು ಅದಕ್ಕೆ ಬಹಳ ನೋವಾಗಿದೆ. ಪಾಪ ! ಎಂದು ನುಡಿದು ತಾಯಿ ಅದನ್ನು ಕೆಳಗಿಟ್ಟು ಮನೆಗೆಲಸಕ್ಕೆ ಹೊರಟು ಹೋದಳು. ನಾವು ಆ ಮರಿಯನ್ನು ನೋಡುತ್ತಲೇ ನಿಂತಿದ್ದೆವು. ಅದು ತುಸು ಹೊತ್ತಿನಲ್ಲಿ ಚುಂಚನ್ನು ಕೊಡಹಿ ಪ್ರಾಣ ಬಿಟ್ಟಿತು. ಕೊನೆಗೂ ಅದು ಸತ್ತು ಹೋಯಿತು ! ಸಾಯುವಾಗ ಅದರ ಬಳಿಯಲ್ಲಿ ಅದರ ತಾಯಿ ತಂದೆ, ಅಣ್ಣ-ತಮ್ಮ ಯಾರೂ ಇರಲಿಲ್ಲ. ಪರದೇಶಿಯಾಗಿ ಸತ್ತು ಹೋಯಿತು ! ನಮಗೆ ಬಹಳ ಕೆಡುಕೆನಿಸಿತು. ಅದನ್ನು ವಿಧಿಪೂರ್ವಕವಾಗಿ ಹುಗಿಯಬೇಕೆಂದು ನಾವು ನಿರ್ಧರಿಸಿದೆವು.

ತಾಯಿಯನ್ನು ಹೋಗಿ ವಿಚಾರಿಸಿದೆವು, " ಅವ್ವಾ, ಇದನ್ನೆಲ್ಲಿ ಹುಗಿಯೋಣ ? ಒಳ್ಳೆ ಸ್ಥಳವನ್ನು ತೋರಿಸು. "

" ಆ ಸೇವಂತಿಗೆಯ ಗಿಡದ ಹತ್ತಿರ ಇಲ್ಲವೆ ಮಲ್ಲಿಗೆಯ ಬಳ್ಳಿಯ ಹತ್ತಿರ ಹುಗಿಯಿರಿ. ಸೇವಂತಿಗೆ ಗಿಡ ಒಳ್ಳೆ ಹೂ ಬಿಡಬಹುದು ಮಲ್ಲಿಗೆ ಹೂ ಚೆನ್ನಾಗಿ ಸುರಿಯಬಹುದು. ನೀವು ಆ ಮರಿಯನ್ನು ಹೃದಯದಿಂದ ಪ್ರೀತಿಸಿದಿರಿ. ಅದು ನಿಮ್ಮನ್ನು ಮರೆಯಲಾರದು. ನಿಮಗಾಗಿ ಅದು ಆ ಹೂವಿನಲ್ಲಿ ಬಂದು ಸುವಾಸನೆಯನ್ನು ಕೊಡಬಹುದು. "

ನಾನು ಹೇಳಿದೆ, " ಆ ಬಂಗಾರೆಮ್ಮನ ಕಥೆ ಹೇಳುತ್ತಾರಲ್ಲ ಹಾಗೆಯೇ ಏನು ? ಬಂಗಾರೆಮ್ಮನನ್ನು ಅವರ ತಾಯಿ ಕೊಂದು ಹುಗಿದಿದ್ದಳು. ಅವರ ಮೇಲೆ ದಾಳಿಂಬರದ ಗಿಡವನ್ನು ನೆಡಲಾಗಿತ್ತು. ಆದರೆ ಬಂಗಾರಿ ತನ್ನ ತಂದೆಯನ್ನು ಭೇಟಿ ಮಾಡುವದಕ್ಕಾಗಿ ದಾಳಿಂಬರದ ಮೂಲಕ ಬಂದಳಂತೆ. ಹಾಗೆಯೇ ಈ ಮರಿಯೂ ಬರಬಹುದಲ್ಲವೇ ? ಆಮೇಲೇನು ಶೇವಂತಿಗೆ ಹೂವಿಗೆ ಗಮಗಮ ವಾಸನೆ ಬರುವುದಲ್ಲವೇನಮ್ಮ ? "

" ಹೌದು ! ಬೇಗ ಹೋಗಿ ಅದನ್ನು ಹುಗಿದು ಬಾ. ಸತ್ತದ್ದನ್ನು ಬಹಳ ಹೊತ್ತು ಇಟ್ಟುಕೊಳ್ಳಬಾರದು. "

" ಹಾಗಾದರೆ ನಮಗೊಂದು ಒಳ್ಳೆ ಬಟ್ಟೆಯ ತುಂಡನ್ನು ಕೊಡು. ಸುತ್ತಿಕೊಂಡು ಒಯ್ಯುತ್ತೇವೆ. "

ತಾಯಿಯು ತನ್ನದೊಂದು ಹರಕಲು ಜರದ ಕುಪ್ಪಸದ ತುಂಡನ್ನು ಕೊಟ್ಟಳು. ನಾವು ಆ ರೇಶಿಮೆಯ ಬಟ್ಟೆಯಲ್ಲಿ ಮರಿಯನ್ನು ಸುತ್ತಿಕೊಂಡು ಹೂವಿನ ಗಿಡಗಳಿದ್ದೆಡೆಗೆ ಹೋದೆವು. ಸೇವಂತಿಗೆ ಹಾಗು ಮಲ್ಲಿಗೆಯ ಗಿಡಗಳ ಮಧ್ಯದಲ್ಲಿ ಒಂದು ತಗ್ಗು ತೆಗೆದೆವು. ಅದರಲ್ಲಿ ಹೂಗಳನ್ನು ಹಾಕಿ ಅದರ ಮೇಲೆ ವಸ್ತ್ರದಲ್ಲಿ ಸುತ್ತಿಟ್ಟ ಆ ಮರಿಯನ್ನು ಇಟ್ಟೆವು. ನಮ್ಮ ಕಣ್ಣುಗಳಿಂದ ನೀರು ಚಿಮ್ಮಿಬರುತ್ತಿತ್ತು. ಅದರ ಮೇಲೆ ಮಣ್ಣು ಹಾಕಲು ನಮ್ಮ ಕೈ ಹಿಂಜರಿಯುತ್ತಿದ್ದವು. ಕೋಮಲವಾದ ಅದರ ಶರೀರದ ಮೇಲೆ ಮಣ್ಣನ್ನು ಹಾಕುವುದಾದರೂ ಹೇಗೆ? ಕೊನೆಗೆ ಗಟ್ಟಿ ಮನಸ್ಸು ಮಾಡಿ ಕಣ್ಣು ಮುಚ್ಚಿಕೊಂಡು ಮಣ್ಣನ್ನೆಳೆದೆವು. ಬೆಕ್ಕು ಅದನ್ನು ಕೆದರಿ ತೆಗೆಯಬಾರದೆಂದು ಅದರಮೇಲೊಂದು ಸುಂದರವಾದ ಕಲ್ಲನ್ನು ಹೇರಿಟ್ಟು ಮನೆಗೆ ಬಂದೆವು. ನಡುಮನೆಯ ಒಂದು ಮೂಲೆಯಲ್ಲಿ ಅಳುತ್ತ ಕುಳಿತುಕೊಂಡೆವು.

" ಯಾಕೋ, ಮೂಲೆಯಲ್ಲಿ ಕುಳಿತುಕೊಂಡೆ ? " ತಾಯಿ ಕೇಳಿದಳು.

"ಅವ್ಮಾ, ನಾವು ಹಕ್ಕಿಯ ಸೂತಕ ಪಾಲಿಸಬೇಡವೇ?" ಎಂದೆ ನಾನು.

ತಾಯಿಯು ನಕ್ಕು ನುಡಿದಳು, "ಹುಚ್ಚಪ್ಪ, ಅದರ ಸೂತಕ ಯಾರಾದರೂ ಹಿಡಿಯುತ್ತಾರೆಯೇ?"

"ನಮ್ಮ ಮನೆಯಲ್ಲಿ ಯಾರಾದರೂ ಸತ್ತಾಗ ನಾವು ಸೂತಕ ಆಚರಿಸುವದಿಲ್ಲವೇ?"

"ಮನುಷ್ಯನು ಯಾವುದಾದರೊಂದು ರೋಗದಿಂದ ಸಾಯುತ್ತಾನೆ. ಆ ಸಾಂಸರ್ಗಿಕ ರೋಗದ ಕ್ರಿಮಿಗಳು ಬೇರೆಯವರನ್ನು ಬಾಧಿಸಬಾರದೆಂದು ಅವನ ಹತ್ತರ ಇರುವವರೆಲ್ಲ ಸೂತಕ ಪಾಲಿಸಬೇಕೆಂದು ನಿಯಮ ಹಾಕಿದ್ದಾರೆ. ಆ ಹಕ್ಕಿಗೇನು ರೋಗವಿತ್ತೇ? ಪಾಪ! ಮೇಲಿನಿಂದ ಬಿದ್ದು ಪ್ರಾಣಬಿಟ್ಟಿತು"

ತಾಯಿಯ ಮಾತನ್ನು ಕೇಳಿ ನನಗೆ ಆಶ್ಚರ್ಯವಾಯಿತು. "ಅವ್ಮಾ, ನಿನಗೆ ಇದನ್ನು ಯಾರು ಹೇಳಿದರು?" ಎಂದು ಕೇಳಿದೆ.

"ಹಿಂದೊಮ್ಮೆ ಒಬ್ಬ ಸದ್ಗೃಹಸ್ಥರು ನಮ್ಮ ಮನೆಗೆ ಬಂದಿರಲಿಲ್ಲವೇ? ಅವರು ಪಡಸಾಲೆಯಲ್ಲಿ ಕುಳಿತು ಹೇಳಿದ್ದನ್ನು ನಾನು ಕೇಳಿದ್ದೇನೆ. ಅವರ ಮಾತು ನನಗೆ ಸರಿಯೆನಿಸಿತು. ಇರಲಿ. ಹೋಗು, ಕೈಕಾಲು ತೊಳೆದುಕೊಂಡು ಬಾ ಅಂದರಾಯಿತು. ಮನಸ್ಸಿಗೆ ಹಚ್ಚಿಕೊಳ್ಳಬೇಡ. ನೀವು ಅದನ್ನು ಪ್ರೀತಿಸಿ ಒಳ್ಳೆತನವನ್ನು ತೋರಿಸಿದಿರಿ. ದೇವರೂ ನಿಮ್ಮನ್ನು ಪ್ರೀತಿಸುವನು. ನೀವು ಎಂದಾದರೂ ಕಾಹಿಲೆ ಬಿದ್ದಾಗ ನಾನು ನಿಮ್ಮ ಬಳಿ ಇಲ್ಲದೆ ಹೋದರೂ ಮಿತ್ರರನ್ನಾದರೂ ನಿಮ್ಮ ಶುಶ್ರೂಷೆಗೆ ದೇವರು ಕಳಿಸುತ್ತಾನೆ. ದೇವರ ಮಕ್ಕಳಾದ ಇರುವೆ–ಗೊದ್ದ, ಹುಳ–ಹುಪ್ಪಡಿ, ಪಶು–ಪಕ್ಷಿ, ಮೊದಲಾದವುಗಳಿಗೆ ನೀವು ಕೊಡುವದು ವ್ಯರ್ಥವಾಗುವದಿಲ್ಲ. ಅದರ ನೂರು ಮಡಿ ಫಲ ದೇವರು ನಿಮಗೆ ಕೊಡುವನು. ಬಿತ್ತಿದ ಒಂದು ಕಾಳು ತುಂಬಿದ ಒಂದು ತೆನೆಯನ್ನು ತೆಗೆದುಕೊಂಡು ಬರುತ್ತದೆ. ಶ್ಯಾಮಾ, ನೀವು ಈ ಮರಿಯನ್ನು ಪ್ರೀತಿಸಿದಂತೆ ಅಣ್ಣ ತಮ್ಮಂದಿರು ಒಬ್ಬರನ್ನೊಬ್ಬರು ಪ್ರೀತಿಸುತ್ತ ಇರಬೇಕು. ಇಲ್ಲದಿದ್ದರೆ ಏನೂ ಪ್ರಯೋಜನವಿಲ್ಲ. ಪಶು–ಪಕ್ಷಿಗಳ ಮೇಲೆ ಪ್ರೇಮ, ಸಹೋದರರಲ್ಲಿ ವೈರತ್ವ! ಹೀಗೆ ಮಾತ್ರ ಮಾಡದಿರಿ ಮಕ್ಕಳೇ! ತಂಗಿಯೊಬ್ಬಳೇ ನಿಮಗೆ. ಅವಳನ್ನು ಎಂದೂ ಮರೆಯಬೇಡಿರಿ. ಅಕ್ಕರೆಯಿಂದ ನಡೆದುಕೊಳ್ಳಿರಿ."

ತಾಯಿಯು ಈ ರೀತಿ ಹೇಳುತ್ತಿರುವಾಗ ಅವಳ ಕಂಠ ಬಿಗಿದು ಬಂದಿದ್ದಿತು. ನಮ್ಮ ತಂದೆಯವರೊಡನೆ ಅವರ ಸಹೋದರರು ನಡೆದುಕೊಂಡ ರೀತಿಯನ್ನು ಅವಳು ನೆನಸಿಕೊಂಡಳೋ? ಅವಳು ಒಂದೇಸಮನೆ ಕಾಹಿಲೆಯಿಂದ ಬಳಲುತ್ತಿದ್ದರೂ ಅವಳನ್ನು ಒಂದು ಸಲವೂ ಹವೆ ಬದಲಾವಣೆಗೆಂದು ಕರೆದೊಯ್ಯದೆ ಇರುವುದನ್ನು ಜ್ಞಾಪಿಸಿಕೊಂಡಳೋ? ಅವಳ ಮನಸ್ಸಿನ ಭಾವನೆಗಳು ಏನೇ ಇರಲಿ, ಅವಳಾಡಿದ ಮಾತಿನಲ್ಲಿ ಸತ್ಯವು ತುಂಬಿಕೊಂಡಿದೆ. ಅದೆಷ್ಟೋ ಜನ ಅತ್ತ ಇರುವೆಗೆ ಸಕ್ಕರೆಯನ್ನು ತಿನಿಸುತ್ತಾರೆ. ಇತ್ತ ಮನುಷ್ಯನ ಕುತ್ತಿಗೆಯನ್ನು ಹಿಚುಕುತ್ತಾರೆ. ನಾಯಿ, ಬೆಕ್ಕು, ಗಿಳಿಗಳನ್ನು ತುಂಬ ವೆಚ್ಚ ಮಾಡಿ ಸಾಕುತ್ತಾರೆ. ಆದರೆ ತಮ್ಮ ಸಮೀಪದಲ್ಲಿರುವ ಬಂಧು-ಬಾಂಧವರನ್ನು ಪ್ರೀತಿಸುವದಿಲ್ಲ. ಇಂಥ ಅದೆಷ್ಟೋ ಉದಾಹರಣೆಗಳನ್ನು ನಾವು ನೋಡುತ್ತಿರುವುದಿಲ್ಲವೇ?

ರಾತ್ರಿ : ೧೨

## : : ಶ್ಯಾಮನ ಈಜಾಟ

ಕೊಂಕಣಸೀಮೆಯಲ್ಲಿ ಮಳೆಗಾಲದಲ್ಲಿ ಬಾವಿಗಳು ತುಂಬಿತುಳುಕುತ್ತವೆ. ಕೈಯಿಂದಲೇ ನೀರು ತುಂಬಿಕೊಳ್ಳಬಹುದು. ಹೀಗೆ ಬಾವಿಗಳೆಲ್ಲ ತುಂಬಿರುವಾಗ ಈಜುವವರಿಗೆ ಒಳ್ಳೆ ಉತ್ಸಾಹವೆನಿಸುತ್ತದೆ. ಹೊಸದಾಗಿ ಈಜು ಕಲಿಯುವವರಿಗೂ ಈ ಸಮಯವು ಅನುಕೂಲವಾಗಿರುತ್ತದೆ. ಈಜು ಕಲಿಯುವ ಮಕ್ಕಳು ಹೊಟ್ಟೆಗೆ ಈಜುಗುಂಬಳಕಾಯಿಯನ್ನೋ, ಡಬ್ಬವನ್ನೋ ಕಟ್ಟಿ, ಬಾವಿಯಲ್ಲಿ ನೂಕುತ್ತಾರೆ. ಒಳಗಡೆ ಈಜುಬಲ್ಲವರು ಇದ್ದೇ ಇರುತ್ತಾರೆ. ಆರೇಳು ಆಳು ನೀರು ಇದ್ದರೂ, ಮುಳುಗು ಹಾಕಿ ತಳಕ್ಕೆ ಹೋಗಿ ಮಣ್ಣನ್ನು ತರುವ ಸಾಹಸಿಗರಾದ ಈಜುಗಾರರು ಮನೆಮನೆಗೂ ಇದ್ದಾರೆ. ವಿವಿಧ ರೀತಿಯಾಗಿ ಹಾರಿಕೊಳ್ಳುವದು, ಈಜಈಜುತ್ತ ವಿವಿಧ ಆಸನಗಳನ್ನು ಹಾಕುವದು, ಒಬ್ಬರು ಇನ್ನೊಬ್ಬರ ಕಾಲಿಗೆ ಕಾಲು ಹಚ್ಚಿ ಅಂಗಾತ ಬಿದ್ದು ಗೋಣು ಮೇಲೆ ಮಾಡಿಕೊಂಡು ದೋಣಿಯಂತೆ ತೇಲುವದು, ಈ ರೀತಿ ಹಲವಾರು ಬಗೆಯ

ನೀರಾಟಗಳು ನಡೆದಿರುತ್ತವೆ. ನನ್ನ ತಂದೆಯವರಿಗೂ ಚೆನ್ನಾಗಿ ಈಜು ಗೊತ್ತಿತ್ತು. ನನಗೆ ಮಾತ್ರ ಬರುತ್ತಿರಲಿಲ್ಲ. ಇನ್ನೂ ಕಲಿಯಬೇಕಾಗಿತ್ತು.

ಬೇರೆಯವರು ಈಜುವಾಗ ನಾನು ಆ ಮೋಜನ್ನು ನೋಡಲಿಕ್ಕೆ ಹೋಗುತ್ತಿದ್ದೆನು. ನಾನು ಮಾತ್ರ ಅಂಜಿ ಸಾಯುತ್ತಿದ್ದೆನು. ನೀರಿಗಿಳಿಯುವ ಸಾಹಸವನ್ನೇ ಮಾಡುತ್ತಿರಲಿಲ್ಲ. ನಮ್ಮ ನೆರೆಹೊರೆಯ ಚಿಕ್ಕ ಮಕ್ಕಳೆಲ್ಲ ಟಣ್ಣನೆ ನೀರಿನಲ್ಲಿ ಹಾರಿಕೊಳ್ಳುತ್ತಿದ್ದರು. "ಶ್ಯಾಮನನ್ನೂ ನೀರಿನಲ್ಲಿ ತಳ್ಳಿರೋ" ಎಂದು ಯಾರಾದರೂ ಕೂಗಿದರೆ ಸರಿ, ನಾನು ಅಲ್ಲಿಂದ ಓಡಿ ಬಿಡುತ್ತಿದ್ದೆ.

ನಮ್ಮ ತಾಯಿ ಆಗಾಗ್ಗೆ ಹೇಳುತ್ತಿದ್ದಳು, "ಶ್ಯಾಮಾ, ಈಸಲು ಕಲಿಯ ಬೇಕಪ್ಪ. ನಿನಗಿಂತಲೂ ಸಣ್ಣವರು ಹೆವರವೆ ಈಸು ಕಲಿಯುತ್ತಾರೆ. ನೀನು ಮಾತ್ರ ಅಂಜುಪಿಯಲ್ಲ. ಇಷ್ಟು ಜನ ಇರುತ್ತಾರೆ ನಿನ್ನನ್ನು ಮುಣುಗಲು ಬಿಟ್ಟಾರೇ? ನಾಳೆ ಭಾನುವಾರವಿದೆ. ಈಜಲಿಕ್ಕೆ ಹೋಗು. ಆ ವನವಡೇ ಕರರ ಬಾಳೂ ಕಲಿಸಬಹುದು. ಇಲ್ಲವೇ ಭಾವನವರ ಜೊತೆಗೆ ಹೋಗು ಅವರು ಕಲಿಸುತ್ತಾರೆ. ಎದ್ದರೆ ಕುಳಿತರೆ ಬಾವಿಯ ಮೇಲೆ ನಮ್ಮ ಕೆಲಸ. ಪುಣೆ, ಮುಂಬಯಿಗಳಂತೆ ಇಲ್ಲಿ ನಲ್ಲಿಗಳೇನೂ ಇಲ್ಲ. ಈಸಲು ಎಲ್ಲರೂ ಕಲಿ ತಿರಬೇಕು. ಕುಸಾತಾಯಿಯವರ ವೇಣು ಮತ್ತು ಅಂಬು ಕೂಡ ಕಲಿತಿ ದ್ದಾರೆ. ನೀನು ಬಳೆಗಳನ್ನಾದರೂ ಇಟ್ಟುಕೋ. ಆವರೆ ಬಳೆ ಇಟ್ಟಿರುವ ಹೆಣ್ಣು ಹುಡುಗಿಯರಿಗಿಂತಲೂ ಅಂಜುಬುರುಕನಾಗಿರುವೆಯಲ್ಲ. ನಾಳೆ ಈಜಲು ಹೋಗು. ಆ ಬಾಬುವಿನ ಹತ್ತಿರ ಹುಲಿಬೆಂಡಿನ ಕಟ್ಟಿದೆ. ಅದನ್ನು ಹೊಟ್ಟೆಗೆ ಕಟ್ಟಿಕೊಂಡು ನೀರಿಗೆ ಹಾರು. ಬೇಕಾದರೆ ಟೊಂಕಕ್ಕೆ ಧೋತರ ಕಟ್ಟಿಕೊಂಡು ಮೇಲೆ ಯಾರಿಗಾದರೂ ಹಿಡಿಯ ಹೇಳು. ನಾಳೆ ಮಾತ್ರ ಹೋಗಲೇ ಬೇಕು ನೋಡು."

ನಾನು ಸುಮ್ಮನೆ ಇದ್ದೆ. ಭಾನುವಾರ ಬೆಳಗಾಯಿತು. ನಾನು ಎಲ್ಲಿ ಯಾದರೂ ಅಡಗಿಕೊಳ್ಳಬೇಕೆಂದು ಮಾಡಿದೆ. ಇಂದು ಏನಾದರೂ ತಾಯಿ ಬಿಡಲಾರಳೆಂದು ಮನವರಿಕೆಯಾಗಿತ್ತು. ನಾನು ಅಟ್ಟವನ್ನೇರಿ ಅಡಗಿ ಕೂತೆ. ತಾಯಿಗೆ ಒಮ್ಮೆಲೆ ಇದು ಲಕ್ಷ್ಯಕ್ಕೆ ಬರಲಿಲ್ಲ. ಸುಮಾರು ಎಂಟು ಗಂಟೆಯಾಗಿ ರಬಹುದು. ನೆರೆಮನೆಯ ವಾಸು, ಬನ್ಯಾ, ಬಾಪು, ಭಾಸ್ಕರ ಎಲ್ಲರೂ ಜೊತೆ

ಗೂಡಿ ಬಂದರು.

" ಯಶೋದಕ್ಕಾ, ಶ್ಯಾಮನು ಇಂದು ಈಸಲಿಕ್ಕೆ ಬರುತ್ತಾನೆಂದು ಹೇಳಿದ್ದಿರಿ. ಎಲ್ಲಿದ್ದಾನೆ? ಇಹೋ ಈಸುಗುಂಬಳಕಾಯಿಯನ್ನು ತಂದಿದ್ದೇವೆ." ಎಂದನು ಬನ್ಯಾ.

" ಹೌದು, ಬರುತ್ತಾನೆ. ಆದರೆ ಈಗೆಲ್ಲಿಗೆ ಓಡಿದನಾತ? ನಿಮ್ಮಲ್ಲಿಗೇ ಹೋಗಿರಬಹುದೆಂದು ಮಾಡಿದ್ದೆ. ಶ್ಯಾಮಾ, ಶ್ಯಾಮಾ, ಎಲ್ಲಿರುವಿಯೋ ಶ್ಯಾಮಾ." ಎಂದು ತಾಯಿ ನನ್ನನ್ನು ಕೂಗಿದಳು. ನಾನು ಮೇಲಿನಿಂದಲೇ ಈ ಮಾತು ಕೇಳುತ್ತಿದ್ದೆ.

" ಯಶೋದಕ್ಕಾ. ಅವನು ಇಲ್ಲಿಯೋ ಎಲ್ಲಿಯಾದರೂ ಅಡಗಿ ಕುಳಿತಿರಬಹುದು. ಮೇಲೆ ನೋಡೋಣವೇ ?" ಎಂದು ಆ ಬಾಲಕರು ಕೇಳಿದರು.

" ಅಡಗಿದ್ದರೂ ಅಡಗಿರಬಹುದು. ನೋಡಿರಿ. ಇಲಿ-ಹೆಗ್ಗಣಗಳ ಹಾಗೆ ಸಂದಿ ಮೂಲೆಗಳಲ್ಲಿ ಅವನು ಕುಳಿತುಕೊಳ್ಳಲಿಕ್ಕೆ ಬಹಳ ಜಾಣ. ಆ ದಿನವೂ ಹಾಗೆಯೇ ಅಡಗಿ ಕುಳಿತಿದ್ದ. ಮೆಲ್ಲಗೆ ಮೇಲೆ ಹೋಗಿ ನೋಡಿ ಬನ್ನಿರಿ. ಕದವನ್ನು ಸರಿಸಿಕೊಂಡು ಹುಷಾರಾಗಿ ಹೋಗಿರಿ." ಎಂದು ತಾಯಿ ಹೇಳಿದಳು.

ಹುಡುಗರು ಅಟ್ಟವನ್ನೇರಿ ಬಂದು ಬಿಟ್ಟರು. ನಾನು ಇನ್ನು ಸಿಗುವದೇ ಖಂಡಿತವೆಂದು ತಿಳಿದು ನನ್ನ ಮೈಯನ್ನು ಮುದ್ದೆಮುದ್ದೆಯಾಗಿ ಮಡಚಿಕೊಳ್ಳತೊಡಗಿದೆ. ಕಪ್ಪೆಯು ಹೊಟ್ಟೆಯನ್ನುಬ್ಬಿಸಿಕೊಂಡು ಎತ್ತು ಆಗಲಾರದು. ಅದರಂತೆಯೇ ಎತ್ತು ಸಹ ಮೈ ಸಣ್ಣಗೆ ಮಾಡಿಕೊಂಡು ಕಪ್ಪೆಯಾಗಲಾರದು. ಜ್ಞಾನೇಶ್ವರರು ಒಂದು ಸಣ್ಣ ನೊಣವಾಗಿ ಕೆರೆಯಿಂದ ನೀರು ಕುಡಿದು ಬಂದರೆಂದು ಭಕ್ತಿವಿಜಯದಲ್ಲಿ ಹೇಳಿದ್ದಾರೆ. ಹಾಗೆ ನನಗೂ ಚಿಕ್ಕವನಾಗಲು ಸಾಧ್ಯವಿದ್ದಿದ್ದರೆ ಚೆನ್ನಾಗಿತ್ತು! ನಾನು ಭತ್ತದ ಕಣಜದ ಮರೆಯಲ್ಲಿ ಅವಿತುಕೊಂಡು ಕುಳಿತಿದ್ದೆ.

" ಇಲ್ಲಿ ಇಲ್ಲ ಬಿಡಿರೋ. ಇಂಥ ಅಡಚಣೆ ಜಾಗೆಯಲ್ಲಿ ಅವನೇಕೆ ಇದ್ದಾನು ?" ಒಬ್ಬನು ಹೇಳಿದ.

" ನಾವು ಹೋಗೋಣ ನಡೆಯಿರೋ? ಅವನಿಗಾಗಿ ಕಾಯ್ದರೆ ನಮಗೂ ತಡವಾದೀತು ?" ಇನ್ನೊಬ್ಬನೆಂದ.

ಅಷ್ಟರಲ್ಲಿ ಭಾಸ್ಕರನು, "ಅಗೋ ನೋಡಿ ಸಿಕ್ಕುಬಿದ್ದ. ಆ ಛತ್ರದ ಕಣಜದ ಹಿಂದೆ ಹೇಗೆ ಕುಳಿತಿದ್ದಾನೆ?" ಎಂದು ಹೇಳಿದ. ಎಲ್ಲರೂ ಆ ಕಡೆ ನೋಡತೊಡಗಿದರು.

ಹುಡುಗರು ನನ್ನನ್ನು ಎಳೆಯಹತ್ತಿದರು. ನಾನು ಕೊಸರಿಕೊಳ್ಳುವದರಲ್ಲಿದ್ದೆ. ಅಮ್ಮ ಬಂದು ಎರಡೇಟು ಬಿಗಿದಳು.

"ಅಮ್ಮಾ, ಹೊಡೆಯಬೇಡಾ. ಅಯ್ಯೋ ನಾನು ಸತ್ತೆ." ಎಂದು ಚೀರಾಡತೊಡಗಿದೆ.

"ನಿನಗೇನು ಧಾಡಿ ಸಾಯಲಿಕ್ಕೆ? ಏಳು. ನಡೆ ಇವರ ಜೊತೆಗೆ. ಈ ಹೊತ್ತು ನಿನ್ನನ್ನು ಬಿಡುವದಿಲ್ಲ. ಇವನನ್ನು ನಾಲ್ಕು ಸಲ ಚೆನ್ನಾಗಿ ಮುಳುಗಿಸಿರಿ. ಮೂಗು ಬಾಯಿಗಳಲ್ಲಿ ನೀರು ಹೋಗಲಿ ಅಂದರೆ ಬುದ್ಧಿ ಬರುವದು. ಮೂರ್ಖ, ಅಡಗಿಕೊಂಡು ಕೂಡಲು ನಿನಗೆ ನಾಚಿಕೆಯಾಗುವದಿಲ್ಲವೇ? ನಿನ್ನ ಈ ಹುಚ್ಚಾಟ ನೋಡಲು ಆ ಹುಡುಗಿಯರು ಬಂದರು ನೋಡು." ಎಂದು ಹೇಳುತ್ತ ಮತ್ತೆ ಎರಡು ಏಟು ಕೊಟ್ಟಳು ತಾಯಿ.

"ಹೊಡೆಯಬೇಡಮ್ಮಾ, ಖಂಡಿತ ಹೋಗುತ್ತೇನೆ."

"ಹೋಗು ಹಾಗಾದರೆ. ಎಚ್ಚರಿಕೆ, ಎಲ್ಲಿಯಾದರೂ ತಪ್ಪಿಸಿಕೊಂಡು ಓಡಿದಿಯಾದರೆ ನಿನ್ನನ್ನು ಮನೆಯಲ್ಲಿಯೇ ಇಟ್ಟುಕೊಳ್ಳಲಿಕ್ಕಿಲ್ಲ."

"ಏ ಶ್ಯಾಮೂ, ಈಜುವದಕ್ಕೆ ಹೆದರಿಕೆಯೋ? ಮೊನ್ನೆ ಗೋವಿಂದ ಕಾಕಾ ನನ್ನನ್ನು ತನ್ನ ಹೆಗಲ ಮೇಲೆ ಕರೆದುಕೊಂಡೇ ನೀರಿನಲ್ಲಿ ಜಿಗಿದಿದ್ದರು. ಎಷ್ಟು ಮೋಜೆನಿಸಿತು ಬಲ್ಲೆಯಾ?" ವೇಣು ನುಡಿದಳು.

"ಅವನಾಗಿ ಬರುತ್ತಾನೆ. ಅವನ ಕೈ ಬಿಡಿರಿ. ಶ್ಯಾಮೂ, ಅಂಜುವ ಕಾರಣವೇ ಇಲ್ಲ. ಒಮ್ಮೆ ನೀರಿನಲ್ಲಿ ಹಾರಿಕೊಳ್ಳುವದೇ ತಡ. ಅಂಜಿಕೆ ತಾನಾಗಿ ಬಿಟ್ಟು ಹೋಗುತ್ತದೆ. ಆಮೇಲೆ ನಾವು ಬೇಡವೆಂದರೂ ಕೇಳುವದಿಲ್ಲ ನೀನು ಹಾರತಕ್ಕವನೇ." ಬನ್ಯಾ ಧೈರ್ಯ ಹೇಳಿದನು.

ದೇವಧರರ ಬಾವಿಯ ಮೇಲೆ ವರವಡೇಕರರ ಬಾಳೂ ಮತ್ತು ಬೇರೆ ಕೆಲವರು ಇದ್ದರು. "ಏನು ಶ್ಯಾಮುನಿಗೆ ಇಂದು ಬರಬೇಕೆಂದು ಕಂಡಿತೇನು? ಬಾ, ಶ್ಯಾಮು, ನಾನು ನಿನಗೆ ಈಸುಗಾಯಿ ಕಟ್ಟುತ್ತೇನೆ." ಎಂದು ಬಾಳು ನನ್ನ ಸೊಂಟಕ್ಕೆ ಕಾಯಿ ಕಟ್ಟಿದ. ಬಾವಿಯೊಳಗೆ ಒಂದೆರಡು ಜನ ಚೆನ್ನಾಗಿ

ಈಸಬಲ್ಲವರು ಇಳಿದಿದ್ದರು. ನಾನು ಗಡಗಡ ನಡುಗಲಾರಂಭಿಸಿದೆ. "ಹೂಂ, ನೋಡುವಿಯೇನು, ಚಂಗನೆ ಹಾರಿಬಿಡು." ಬಾಳು ಹೇಳಿದ.

ನಾನೊಮ್ಮೆ ಬಾವಿಯಲ್ಲಿ ಹಣಿಕಿ ಹಾಕುವದು, ಮತ್ತೆ ಹಿಂದೆ ಸರಿಯುವದು, ಮೂಗು ಹಿಡಿದುಕೊಳ್ಳುವದು, ಬಿಟ್ಟುಬಿಡುವದು ಹೀಗೆ ಹಿಂದೆ-ಮುಂದೆ ನೋಡಹತ್ತಿದೆ.

"ಅಂಜುಬುರುಕ ! ವೇಣೂ ಮೊದಲು ನೀನು ಹಾರು. ಅಂದರೆ ಅವನಿಗೆ ಧೈರ್ಯ ಬರಬಹುದು." ಎಂದು ವೇಣುವಿನ ಅಣ್ಣ ಹೇಳಿದ.

ವೇಣು ತನ್ನ ಲಂಗವನ್ನು ಮೇಲಕ್ಕೆ ಕಟ್ಟಿಕೊಂಡು ಬಾವಿಯಲ್ಲಿ ಜಿಗಿದಳು. ಇಷ್ಟರಲ್ಲಿ ನನ್ನನ್ನು ಸಹ ಯಾರೋ ಹಿಂದಿನಿಂದ ನೂಕಿಬಿಟ್ಟರು.

ನಾನು ಕೂಗಿಕೊಂಡೆ, "ಅಯ್ಯಮ್ಮಾ, ನಾನು ಸತ್ತೆ" ಗಾಬರಿಯಾಗಿ ನಾನು ನೀರು ಬಿಟ್ಟು ಮೇಲೆ ಬರಲು ಯತ್ನಿಸಿದೆ. ನೀರಿನಲ್ಲಿದ್ದ ಜನರಿಗೆ ತೆಕ್ಕೆ ಬೀಳಬೇಕೆಂದು ಹವಣಿಸಿದೆ. ಆದರೆ ಜನ ಹಾಗೆ ಮಾಡಗೊಡಲಿಲ್ಲ.

"ಹೀಗೆ ಅಡ್ಡ ತಿರುಗಿಕೋ; ಹೊಟ್ಟೆಯನ್ನು ನೀರಿಗೆ ಹಚ್ಚು; ಉದ್ದವಾಗಿ ಕಾಲು ಚಾಚಿಕೋ; ಕೈಗಳನ್ನು ಅಲುಗಾಡಿಸು" ನನಗೆ ಈಜುವಾತ ಜನ ಹೇಳತೊಡಗಿತು.

ಬಾಳೂ ಕೂಡ ನೀರಿಗಿಳಿದು ನನ್ನ ಬಳಿಗೆ ಬಂದ. ನನ್ನ ಹೊಟ್ಟೆಯ ಕೆಳಗೆ ಕೈಹಾಕಿ ನನಗೆ ಈಸು ಕಲಿಸಹತ್ತಿದ. "ಹೆದರಬಾರದು. ಹೆದರಿಕೊಂಡರೆ ಬೇಗ ದಮ್ಮು ಹತ್ತುತ್ತದೆ. ಒಮ್ಮೆಲೆ ದಂಡೆ ಹಿಡಿದುಕೊಳ್ಳಲು ಆತುರಪಡಬೇಡ. ತೀರ ದಂಡೆಯು ಸಮೀಪಕ್ಕೆ ಬಂದಾಗ ಅದನ್ನು ಆಧರಿಸಬಹುದು." ಎಂದು ಈಜುವ ರಹಸ್ಯವನ್ನು ಕಲಿಸಹತ್ತಿದ.

"ಈಗ ಇನ್ನೊಮ್ಮೆ ಮೇಲೆ ಹೋಗಿ ಹಾರು ನೋಡೋಣ" ಬನ್ಯಾ ಹೇಳಿದ. ನಾನು ಪಾವಟಿಗೆಗಳನ್ನೇರಿ ಮೇಲೆ ಬಂದೆ. ಮೂಗು ಹಿಡಿದುಕೊಂಡೆ. ಆದರೂ ತುಸು ಅಂಜಿದೆ. ಕೊನೆಗೊಮ್ಮೆ ಧೈರ್ಯತಂದುಕೊಂಡು ನೆಗೆದುಬಿಟ್ಟೆ.

"ಭಲೆ, ಶಹಬ್ಬಾಸ್. ಇನ್ನು ಭಯವಿಲ್ಲ. ಈಜಲು ಬಂದು ಬಿಟ್ಟಿತು ನೋಡು." ಎಂದು ಬಾಳೂ ಹೇಳಿದ.

"ಇನ್ನೊಂದು ಸಲ ಮೇಲೆ ಹೋಗಿ ಹಾರಿಕೊಂಡು ಬಿಡು ಸಾಕು.

ಇಂದು ಹೆಚ್ಚಿಗೆ ಬೇಡ.” ಜೊತೆಗಾರರು ಹೇಳಿದರು.

ನಾನು ಮೇಲೆ ಹೋಗಿ ಮತ್ತೆ ಹಾರಿದೆ. ಬಾಳೂನ ಸಹಾಯವಿಲ್ಲದೆ ತುಸು ದೂರ ಹೋದೆ. ನಾನು ಈಜುಗಾಯಿ ಕಟ್ಟಿಕೊಂಡಿದ್ದೆನಾದ್ದರಿಂದ ಮುಳುಗುವ ಭಯವಿರಲಿಲ್ಲ, ನಾನು ಮೈಚಳಿ ಬಿಟ್ಟು ಈಸಲಾರಂಭಿಸಿದೆನು. ಅಂಜಿಕೆಯು ಕ್ರಮೇಣ ಮಾಯವಾಗತೊಡಗಿತು. ಧೈರ್ಯ ಹೆಚ್ಚಾದಂತೆಲ್ಲ ಉತ್ಸಾಹವೂ ಹೆಚ್ಚಾಗತೊಡಗಿತು. ಎಲ್ಲರೂ ಮನೆಯ ಕಡೆಗೆ ನಡೆದೆವು. ಹುಡುಗರೆಲ್ಲ ನನ್ನನ್ನು ಕಳಿಸುವುದಕ್ಕೆಂದು ನಮ್ಮ ಮನೆಯವರೆಗೆ ಬಂದರು.

“ಯಶೋದಕ್ಕಾ, ಶ್ಯಾಮನ ಅಂಜಿಕೆಯೀಗ ತೊಲಗಿಬಿಟ್ಟಿತು ನೋಡಿರಿ. ತಾನೇ ಹುರುಪಿನಿಂದ ನೀರಿನಲ್ಲಿ ಜಿಗಿಯುತ್ತಾನೆ. ಕಾಯಿ ಕಟ್ಟಿಕೊಂಡು ತಾನಾಗಿ ಈಜಾಡಲು ಕಲಿತುಕೊಂಡಿದ್ದಾನೆ. ಶ್ಯಾಮನು ಬೇಗನೆ ಈಜು ಕಲಿತುಕೊಳ್ಳುತ್ತಾನೆಂದು ಬಾಳೂಕಾಕಾ ಹೇಳಿದರು.” ಬನ್ಯಾ ನಮ್ಮ ತಾಯಿಯ ಮುಂದೆ ಹೇಳಿದ.

“ನೀರಿನಲ್ಲಿ ಮುಳುಗು ಹಾಕದ ಹೊರತು, ಮೂಗು-ಬಾಯಿಗಳಲ್ಲಿ ನೀರು ಸೇರದ ಹೊರತು ಈಸು ಬರಲಾರದು. ಹೋಗು ಶ್ಯಾಮಾ, ಚೆನ್ನಾಗಿ ತಲೆ–ಜುಟ್ಟು ಎಲ್ಲ ಒರೆಸಿಕೋ.” ಎಂದು ತಾಯಿ ಹೇಳಿದಳು. ಹುಡುಗರು ತಮ್ಮ ತಮ್ಮ ಮನೆಗಳಿಗೆ ಹೋದರು. ನಾನು ಚೆನ್ನಾಗಿ ಒರೆಸಿಕೊಂಡು ಒಣಗಿದ ಲಂಗೋಟಿ ಹಾಕಿಕೊಂಡೆ. ಅಂದು ಮನೆಯಲ್ಲಿ ತುಸು ಮುನಿದುಕೊಂಡೇ ಇದ್ದೆ. ಊಟ ಮುಗಿಸಿಕೊಂಡು ಪಡಸಾಲೆಯಲ್ಲಿ ಹೋಗಿ ಕುಳಿತುಕೊಂಡೆ. ತಾಯಿ ಊಟಕ್ಕೆ ಕುಳಿತುಕೊಂಡಿದ್ದಳು. ಅಷ್ಟರಲ್ಲಿ “ಶ್ಯಾಮಾ” ಎಂದು ತಾಯಿ ಕೂಗಿದಳು. ನಾನು ಅವಳ ಬಳಿಗೆ ಹೋಗಿ, “ಏನು?” ಎಂದೆ. ತಾಯಿಯೆಂದಳು, “ಆ ಮೊಸರಿನ ಕುಡಿಕೆಯಲ್ಲಿ ತುಸು ಮೊಸರಿದೆ. ನಿನಗೆ ಮೊಸರೆಂದರೆ ಪ್ರೀತಿಯಲ್ಲವೇ? ತೆಗೆದುಕೊಂಡು ತಿಂದುಬಿಡು.”

“ಹೋಗು ಹೋಗು, ನನಗೇನೂ ನಿನ್ನ ಮೊಸರು ಬೇಕಾಗಿಲ್ಲ. ಬೆಳಗ್ಗೆ ಏಟಿನಮೇಲೆ ಏಟು ಹಾಕಿ ಈಗ ಮೊಸರು ಕೊಡುತ್ತಾಳಂತೆ.” ಎಂದು ನಾನು ಅಳುತ್ತಳುತ್ತ ಹೇಳಿದೆ.

ತಾಯಿಯ ಕಣ್ಣಿನಲ್ಲಿ ಪ್ರವಾಹ ಬಂದು ಬಿಟ್ಟಿತು. ಅರ್ಧ ಊಟಕ್ಕೇ ಎದ್ದುಬಿಟ್ಟಳು. ಊಟವೇ ಮೆಚ್ಚದಾಯಿತವಳಿಗೆ. ಕೈ-ಬಾಯಿ ತೊಳೆದು

ಕೊಂಡು ಬಂದಳು. ಅವಳು ಉಪವಾಸ ಎದ್ದು ಬಿಟ್ಟಿಳಲ್ಲ ಎಂದು ನನಗೆ ಬಹಳ ಕೆಡುಕೆನಿಸಿತು. ನನ್ನ ಮಾತುಗಳನ್ನು ತಾಯಿ ಮನಸ್ಸಿಗೆ ಹಚ್ಚಿಕೊಂಡಳೆಂದು ಮಮ್ಮಲ ಮರುಗಿದೆ. ತಾಯಿ ಎಣ್ಣೆಯ ಬಟ್ಟಲನ್ನು ತೆಗೆದುಕೊಂಡು ತಾನು ಹೊಡೆದಲ್ಲೆಲ್ಲ ಹಚ್ಚಿ ನನ್ನ ಮೈ ತಿಕ್ಕತೊಡಗಿದಳು. ನಾನು ಚೆಪ್ಪನಂತೆ ಸುಮ್ಮನೆ ನಿಂತುಕೊಂಡಿದ್ದೆ. ಅವಳು ಉಕ್ಕಿಬಂದ ಕಂಠದಿಂದ ನುಡಿದಳು, " ಶ್ಯಾಮಾ, ನಿನಗೆ ಜಗತ್ತು ಪುಕ್ಕನೆಂದು ಏಕೆ ಕರೆಯಬೇಕು? ನನ್ನ ಶ್ಯಾಮನಿಗೆ ಯಾರೂ ಹೆಸರಿಡಬಾರದು. ಹೆಸರಿಡಿಸಿಕೊಳ್ಳುವಂತೆ ಅವನಾಗಬಾರದೆಂದು ಅವನನ್ನು ಹೊಡೆಯಬೇಕಾಯಿತು. ಶ್ಯಾಮಾ, ಯಾರಾದರೂ ನಿನ್ನ ತಾಯಿಗೆ "ನಿನ್ನ ಮಕ್ಕಳು ಹೇಡಿಗಳು" ಎಂದು ಕರೆದರೆ ಅದು ನಿನಗೆ ಸಹನವಾದೀತೇ? ನಿನಗೆ ಮೆಚ್ಚಿಗೆಯಾದೀತೇ? ನಿನ್ನ ತಾಯಿಯ ಅಪಮಾನವನ್ನು ನೀನು ಸಹಿಸಿಕೊಳ್ಳುವೆಯಾ? ನನ್ನ ಮಕ್ಕಳ ಅಪಮಾನವನ್ನು ಯಾರಾದರೂ ಮಾಡಿದ್ದಾದರೆ ನಾನು ಎಂದಿಗೂ ಸಹಿಸಿಕೊಳ್ಳುವದಿಲ್ಲ. ಅದೇರೀತಿ ನನ್ನ ಅಪಮಾನವನ್ನಾದರೂ ನನ್ನ ಮಕ್ಕಳು ಸಹಿಸಿಕೊಳ್ಳಬಾರದು. ಹೀಗೆ ಇದ್ದರೆ ಮಾತ್ರ ನಾನು ಅವರ ನಿಜವಾದ ತಾಯಿ! ಅವರು ನನ್ನ ನಿಜವಾದ ಮಕ್ಕಳು! ಸಿಟ್ಟಾಗಬೇಡ ಮಗು. ಗಟ್ಟಿಗನಾಗಿ ಬಾಳು! ಹೋಗು, ಆ ಮೊಸರು ತಿಂದು ಹೊರಗೆ ಆಟವಾಡು. ಈಗ ಮಲಗಿಕೊಳ್ಳಬೇಡ, ಈಜಾಡಿ ಬಂದ ಮೇಲೆ ಮಲಗಿಕೊಂಡರೆ ನೆಗಡಿಯಾಗುವದು."

ಗೆಳೆಯರೆ, ನನ್ನ ತಾಯಿಗೆ ಶೂರರೂ ಧೀರರೂ ಆದ ಮಕ್ಕಳು ಬೇಕಾಗಿದ್ದರು, ಅಂಜುಗುಳಿಗಳು ಬೇಕಾಗಿರಲಿಲ್ಲ.

ರಾತ್ರಿ : ೧೩

## : : ಸ್ವಾಭಿಮಾನದ ರಕ್ಷಣೆ

"ಗೃಹಸ್ಥನು ದಕ್ಷಿಣೆ ತೆಗೆದುಕೊಳ್ಳಬಾರದು. ದಕ್ಷಿಣೆ ತೆಗೆದುಕೊಳ್ಳುವ ಅಧಿಕಾರ ವೈದಿಕ ಬ್ರಾಹ್ಮಣರಿಗೆ ಮಾತ್ರ ಇರುತ್ತದೆ. ಅವರಿಗೆ ಬೇರೆ ಉತ್ಪನ್ನವಿರುವದಿಲ್ಲ. ವೈದಿಕವೃತ್ತಿಯಿಂದಲೇ ಅವರ ಉಪಜೀವನ. ಆದುದ

ರಿಂದಲೇ ಬ್ರಾಹ್ಮಣರಿಗೆ ದಕ್ಷಿಣೆ ಕೊಡಬೇಕೆಂದು ಹೇಳಿದೆ ಬೇರೆ ದೇಶಗಳಲ್ಲಿಯೂ, ಧರ್ಮಗಳಲ್ಲಿಯೂ ಉಪಾಧ್ಯಾಯರಿದ್ದಾರೆ. ಕೆಲವು ಕಡೆ ಸರಕಾರದವರಿಂದಲೇ ಅವರಿಗೆ ಸಂಬಳ ದೊರೆಯುತ್ತದೆ. ನಮ್ಮಲ್ಲಿ ಸಮಾಜವೇ ಬ್ರಾಹ್ಮಣರಿಗೆ ಕೊಡುತ್ತದೆ." ಶ್ಯಾಮನು ಕಥೆಯನ್ನಾರಂಭಿಸಿದನು:

ನಮ್ಮ ಊರಲ್ಲಿ ಯಾರದೋ ಮನೆಯಲ್ಲಿ ಒಂದು ಸಲ ಲಗ್ನವಿತ್ತು. ಆ ಮದುವೆಯ ಅಕ್ಕೀಕಾಳಿಗೆ ನಾನೂ ಹೋಗಿದ್ದೆ. ಅಕ್ಕೀಕಾಳು ಬಿದ್ದ ಬಳಿಕ ಲಗ್ನಮಂಟಪದಲ್ಲಿ ದಕ್ಷಿಣೆ ಕೊಡುತ್ತಾರೆ. ವಧೂ-ವರರ ಕಡೆಯ ಪುರೋಹಿತರಿಬ್ಬರೂ ಬೇರೆ ಬೇರೆಯಾಗಿ ದಕ್ಷಿಣೆ ಹಂಚುತ್ತಾರೆ. ವರನ ಕಡೆಯವರು ಕೊಟ್ಟಷ್ಟೇ ವಧುವಿನ ಕಡೆಯವರೂ ಕೊಡಬೇಕು. ವರನ ಕಡೆಯವರು ನಾಲ್ಕಾಣೆ ಕೊಟ್ಟರೆ ವಧುವಿನ ಕಡೆಯವರೂ ನಾಲ್ಕಾಣೆ ಕೊಡಬೇಕು. ಕೈ ಚಾಚಿದವರಿಗೆಲ್ಲ ದಕ್ಷಿಣೆ ಕೊಡುವ ವಾಡಿಕೆ. ಲಗ್ನಕ್ಕೆ ಹಿರಿಯರು ಹೋಗುವಾಗ ಅವರ ಜೊತೆಗೆ ಚಿಕ್ಕವರೂ ಹೋಗಿ ಅವರ ಬಳಿಯಲ್ಲಿಯೇ ಕುಳಿತುಕೊಳ್ಳುವದರಿಂದ ಅವರಿಗೆ ಈ ಶಿಕ್ಷಣ ತಾನಾಗಿ ದೊರೆಯುತ್ತದೆ. ದಕ್ಷಿಣೆಗೆ ಅನಧಿಕಾರಿಗಳಿದ್ದವರು ತಮ್ಮ ಮಕ್ಕಳಿಗೆ " ನಾವು ಕೈ ಒಡ್ಡಬಾರದು " ಎಂದು ತಿಳಿಸಿಕೊಡುತ್ತಾರೆ.

ಆದರೆ ಇತ್ತೀಚೆಗೆ ಸ್ವಾಭಿಮಾನವೆಂಬುದೇ ಉಳಿದಿಲ್ಲ. ದುಡ್ಡೆಂದರೆ ನಾವು ಬಾಯ್ಬಿಡುತ್ತಿದ್ದೇವೆ. ಪುಕ್ಕಟ ದೊರೆಯುವದೆಂದರೆ ಕೈಚಾಚತಕ್ಕವರೇ! ಇಷ್ಟು ಕೆಳಗಿನ ಮಟ್ಟಕ್ಕೆ ಇಳಿದಿದ್ದೇವೆ. ರೈಲಿನಲ್ಲಿ ಜಪಾನೀ ಏಜಂಟರು ಸಿಗರೇಟನ್ನು ಪುಕ್ಕಟೆಯಾಗಿ ಹಂಚುವಾಗ ಶ್ರೀಮಂತರು ಕೂಡ ಪುಕ್ಕಟೆ ಸಿಗರೇಟು ಬೇಡಿಕೊಂಡು ಸೇದಿದುದನ್ನು ನಾನು ನೋಡಿದ್ದೇನೆ. ಶ್ರೀಮಂತರು ಕೂಡ ಧರ್ಮಾರ್ಥ ದವಾಖಾನೆಗಳಲ್ಲಿ ಔಷಧ ತೆಗೆದುಕೊಳ್ಳುತ್ತಾರೆ. ಶ್ರೀಮಂತರ ಮಕ್ಕಳು ಕೂಡ ಶಿಷ್ಯವೇತನಕ್ಕಾಗಿ ಅರ್ಜಿ ಹಾಕಿಕೊಳ್ಳುತ್ತಾರೆ. ಇದು ದಾಸ್ಯದ ಹಾಗು ದಾರಿದ್ರ್ಯದ ಪರಿಣಾಮವಾಗಿದೆ.

ನಾನು ಲಗ್ನಮಂಟಪದಲ್ಲಿ ಹುಡುಗರ ಮಧ್ಯದಲ್ಲಿ ಕುಳಿತುಕೊಂಡಿದ್ದೆ. ಹುಡುಗರ ಮಧ್ಯದಲ್ಲಿಯೇ ಇದ್ದರೆ ತುಂಟತನ, ಕುಂಟಚೇಷ್ಟೆ ಮಾಡಲಿಕ್ಕೆ ಅವಕಾಶವಿರುತ್ತದೆ. ಮೆಲ್ಲಗೆ ಒಬ್ಬನ ಟೋಪಿಯ ಮೇಲೆ ತೆಂಗಿನ ಜುಟ್ಟು ಇಡುವದು, ಒಬ್ಬನ ಜೇಬಿನಲ್ಲಿ ಕಲ್ಲನ್ನು ಹಾಕುವದು, ಹತ್ತಿರ ಇದ್ದವರನ್ನು

ಮೆಲ್ಲನೆ ಚಿವುಟುವದು, ಇವೆಲ್ಲ ನಡೆದಿರುತ್ತವೆ. ದಕ್ಷಿಣೆ ಹಂಚುವದಕ್ಕೆ ಆರಂಭವಾಯಿತು. ಕೆಲವು ಹುಡುಗರು ಕೈಯೊಡ್ಡಿದರು. ನಾನೂ ನನ್ನ ಕೈಚಾಚಿದೆ. ಸಹಜವಾಗಿ ಕಾರ್ಯ ಸಾಧಿಸಿತು. ನಾನು ಮಾಡಿದ್ದು ತಪ್ಪೆಂದು ತೋರಲಿಲ್ಲ. ಚಿಕ್ಕಂದಿನಲ್ಲಿ ಕೈಗೆ ದುಡ್ಡು ಸಿಕ್ಕರೆ ಆನಂದವಾಗುತ್ತದೆ. ನಾನು ಆ ಎರಡಾಣೆ ತೆಗೆದುಕೊಂಡು ಮನೆಗೆ ಬಂದೆ. ನಾನು ಶ್ರಮಪಟ್ಟು ಗಳಿಸಿ ತಂದ ಹಣವೋ ಎಂಬಂತೆ ಸಂತೋಷದಿಂದ ತಾಯಿಯ ಕಡೆಗೆ ಕೊಡಹೋದೆ. ವೈದಿಕರು ಹನ್ನೆರಡು ವರ್ಷ ಸತತವಾಗಿ ಮಂತ್ರ ಕಲಿಯುತ್ತಾರೆ. ಅವರು ದಕ್ಷಿಣೆ ತೆಗೆದುಕೊಂಡರೆ ಒಪ್ಪುತ್ತದೆ. ನನಗೇನು ಅಧಿಕಾರ ತೆಗೆದುಕೊಳ್ಳಲಿಕ್ಕೆ ? ಪ್ರತಿಯೊಬ್ಬರು ದುಡಿಯಬೇಕು. ಪ್ರತಿಫಲ ಪಡೆಯಬೇಕು. ಅಂದರೆ ಮಾತ್ರ ಅದು ಒಪ್ಪುತ್ತದೆ.

ತಾಯಿ ವಿಚಾರಿಸಿದಳು, "ಎಲ್ಲಿಯ ದುಡ್ಡೋ ಇದು ?"

"ಲಗ್ನದ ಮನೆಯಲ್ಲಿ ಕೊಟ್ಟರು."

ತಾಯಿ ಮುಖ ಕೆಳಗೆ ಹಾಕಿದಳು. ಅದು ಕಳೆಗುಂದಿತು. ನಾವು ಬಡವರಾಗಿದ್ದೆವು. ಬಡವರಾಗಿದ್ದೇವೆಂದು ಶ್ಯಾಮನು ದಕ್ಷಿಣೆ ತಂದಿರಬಹುದೇ ? ನಮ್ಮ ಬಡತನವನ್ನು ಕಂಡು ಅಸಹ್ಯಪಟ್ಟುಕೊಂಡು ಪುರೋಹಿತರು ನನ್ನ ಹುಡುಗನ ಕೈಮೇಲೆ ದಕ್ಷಿಣೆ ಇಟ್ಟಿರಬಹುದೇ ? ತಪ್ಪಿ ಎಂದಾದರೊಮ್ಮೆ ಯಾವನೊಬ್ಬ ಗೃಹಸ್ಥನ ಮಗನು ದಕ್ಷಿಣೆಗೆ ಕೈಯೊಡ್ಡಿದರೆ, 'ನೀನು ಆ ರಾಯರ ಮಗನಲ್ಲವೇ ? ನಿನಗೇಕೆ ದಕ್ಷಿಣೆ ?' ಎಂದು ಸಿಟ್ಟು ಮಾಡಿ ಕಳಿಸುತ್ತಾರೆ. ಆದರೆ ನನ್ನ ಮಗನಿಗೇಕೆ ಹಾಗೆ ಕಳಿಸಲಿಲ್ಲ. ನಾವು ಅವರಿಗೆ ತುಚ್ಛರಾಗಿ ಕಂಡಿರಬೇಕು. ಜಗತ್ತಿನಲ್ಲಿ ತಿರಸ್ಕಾರಕ್ಕಿಂತಲೂ ಹೆಚ್ಚಿನ ಕರುಣಾಜನ್ಯ ಸಂಗತಿ ಮತ್ತಾವುದಿದೆ ? ತಾಯಿಯ ಮನಸ್ಸಿನಲ್ಲಿ ಇಂಥ ನೂರಾರು ವಿಚಾರಗಳು ಬಂದು ಹೋದವು. ಕಂಠ ಬಿಗಿದು ಬಂದಿತು. ಶೂನ್ಯ ದೃಷ್ಟಿಯಿಂದ ನನ್ನನ್ನು ನೋಡಿದಳು.

"ಅಮ್ಮಾ, ತೆಗೆದುಕೊಳ್ಳೆ ಈ ದುಡ್ಡು. ನಾನೇನು ಇದನ್ನು ಕದ್ದು ತಂದಿಲ್ಲ." ನಾನು ಕನಿಕರದಿಂದ ನುಡಿದೆ.

ತಾಯಿ ಹೇಳಿದಳು, "ಶ್ಯಾಮಾ, ನಾವು ಬಡವರಾಗಿದ್ದರೂ ಗೃಹಸ್ಥರಾಗಿದ್ದೇವೆ. ವೈದಿಕರಲ್ಲ. ಆ ವೃತ್ತಿ ನಮ್ಮದಲ್ಲ. ದಕ್ಷಿಣೆ ತೆಗೆದುಕೊಳ್ಳುವದು

ನಮ್ಮ ಕರ್ತವ್ಯವಲ್ಲ. ಅನುಕೂಲವಿದ್ದಷ್ಟು ನಾವೇ ಬೇರೆಯವರಿಗೆ ಕೊಡಬೇಕು. ವೈದಿಕ ಬ್ರಾಹ್ಮಣರು ವೇದಾಧ್ಯಯನವನ್ನೂ, ಧಾರ್ಮಿಕ ಕಾರ್ಯಗಳನ್ನೂ ಮಾಡುತ್ತಾರೆ. ಅವರಿಗೆ ಹೊಲಮನೆಗಳು ಇರುವದಿಲ್ಲ. ದಕ್ಷಿಣೆಯಿಂದಲೇ ಅವರ ಉಪಜೀವನ.

"ನಮ್ಮ ಪಾಂಡುಭಟ್ಟರು ಒಳ್ಳೇ ಶ್ರೀಮಂತರಾಗಿದ್ದಾರೆ. ಬಡ್ಡಿ ವ್ಯವಹಾರ ಮಾಡುತ್ತಾರೆ. ಸಾಕಷ್ಟು ಹೊಲಮನೆಗಳಿವೆ. ಹೀಗಿದ್ದು ದಕ್ಷಿಣೆ ಏಕೆ ತೆಗೆದುಕೊಳ್ಳುತ್ತಾರವ್ವಾ ? ಅವರೆಂಥ ವೈದಿಕರು ?"

ತಾಯಿ ಎಂದಳು, "ಅದು ಅವರ ತಪ್ಪು. ಮೊದಲಿನ ಕಾಲದ ವೈದಿಕ ಬ್ರಾಹ್ಮಣರು ದಕ್ಷಿಣೆ ಹೆಚ್ಚು ದೊರೆತರೆ ಅದನ್ನು ಬಡಬಗ್ಗರಿಗೆ ಹಂಚಿ ಬಿಡುತ್ತಿದ್ದರು. ಬಡ ವಿದ್ಯಾರ್ಥಿಗಳನ್ನು ಮನೆಯಲ್ಲಿಟ್ಟುಕೊಂಡು ವೇದಾಧ್ಯಯನ ಮಾಡಿಸುತ್ತಿದ್ದರು. ನಳರಾಜನು ಬ್ರಾಹ್ಮಣರಿಗೆ ರಾಶಿರಾಶಿಯಾಗಿ ಧನವನ್ನು ಹಂಚಿದಾಗ ಆ ಬ್ರಾಹ್ಮಣರು ದಾರಿಯಲ್ಲಿಯೇ ಆ ಧನವನ್ನು ಬೇರೆಯವರಿಗೆ ಹಂಚಿದರಂತೆ. ಪಾಂಡವಪ್ರತಾಪದಲ್ಲಿ ನೀನು ಈ ಕಥೆಯನ್ನು ಓದಿರುವೆಯಲ್ಲವೇ ? ನಾವು ಗೃಹಸ್ಥರು. ದಕ್ಷಿಣೆ ಬೇಡಬಾರದು. ಮತ್ತೊಬ್ಬರ ಕೈಯೊಡ್ಡಬೇಡ. ರೋಹಿದಾಸನು ಅರವತ್ತಿಗೆಯ ನೀರನ್ನೂ ಕುಡಿಯಲಿಲ್ಲ ಗೊತ್ತಿದೆಯೋ? ಗೃಹಸ್ಥರು ಜಗತ್ತಿಗೆ ಕೊಡಬೇಕು. ಜಗತ್ತಿನಿಂದ ಬೇಡಿಕೊಳ್ಳಬಾರದು.

ತಾಯಿಯು ಆ ಎರಡಾಣೆಯ ನಾಣ್ಯವನ್ನು ಹೊರಗೆ ನಿಂತಿದ್ದ ಬಾಳೂ ಎಂಬ ಕೂಲಿಯಾಳಿಗೆ ಕೊಟ್ಟುಬಿಟ್ಟಳು. ಗೆಳೆಯರೇ, ನಾವು ಜಗತ್ತಿನಿಂದ ಹೆಚ್ಚೆಚ್ಚು ಪಡೆದುಕೊಂಡಷ್ಟೂ ನಾವು ಅದರ ದಾಸರಾಗುತ್ತೇವೆ. ನಾವು ಹೀನರೂ, ದೀನರೂ, ಹೆರವರ ಎಂಜಲಿಗೆ ಆಶೆ ಪಡುವವರೂ ಆಗುತ್ತೇವೆ. ಪರಾವಲಂಬಿಗಳಾಗಿ ಬದುಕುವುದೊಂದು ಪಾಪವೇ ಆಗಿದೆ. ಕೊಬ್ಬಿದ ಗೂಳಿಯಂತೆ ಉನ್ಮತ್ತರಾಗಿ ನಡೆಯುವದೂ ಪಾಪ! ದಾಸಾನುದಾಸರಾಗಿ ಬಾಳುವದೂ ಅಯೋಗ್ಯ! ಯುರೋಪಿನಲ್ಲಿ ಈ ಸ್ವಾಭಿಮಾನದ ಶಿಕ್ಷಣವನ್ನು ಬಾಲ್ಯದಿಂದಲೇ ಕೊಡಲಾಗುತ್ತದೆ. ತಾಯಿತಂದೆಗಳ ದುಡ್ಡಿನ ಮೇಲೆ ಜೀವಿಸುವದು ಕೀಳುತನದ್ದೆಂದೂ, ಪರಾವಲಂಬನವೆಂದೂ ಅವರು ಭಾವಿಸುತ್ತಾರೆ. ಅಮೇರಿಕೆಯ ಪ್ರೆಸಿಡೆಂಟ್ ಹೂವರ್‌ನ ಒಂದು ಕಥೆ ಹೇಳುತ್ತಾರೆ. ಅವನು

ತನ್ನ ಹದಿನಾರು ವರ್ಷದ ಮಗನಿಗೆ ಕೂಲಿಯ ಕೆಲಸಕ್ಕೆ ಕಳಿಸಿದನು. ಹೂವರ್‌ನು ಅಮೇರಿಕೆಯಂಥ ಧನಾಢ್ಯದೇಶದ ಅಧ್ಯಕ್ಷನಾಗಿದ್ದರೂ ಮಗನು ಮಾತ್ರ ಒಬ್ಬ ಉಪ್ಪಾರನ ಕೈಯಲ್ಲಿ ಕೆಲಸ ಮಾಡುತ್ತಿದ್ದನು. ಒಂದು ಭವ್ಯವಾದ ಕಟ್ಟಡವನ್ನು ಕಟ್ಟುವ ಕಾಲಕ್ಕೆ, ಕೆಲಸದಲ್ಲಿ ಮಗ್ನನಾಗಿದ್ದ ಈ ಹುಡುಗನು ಎತ್ತರದ ಮೇಲಿಂದ ಬಿದ್ದು ಮೃತಪಟ್ಟನಂತೆ. ಹೂವರ್ ಸಾಹೇಬರಿಗೆ ಅಪಾರ ದುಃಖವಾಯಿತು. ಆದರೂ ಅವರು ಹೇಳಿದರು, "ನನ್ನ ರಾಷ್ಟ್ರಕ್ಕೆ ಸ್ವಾವಲಂಬನ ಮತ್ತು ಶ್ರಮದ ಮಹತ್ವವನ್ನು ತಿಳಿಸಿಕೊಡಲಿಕ್ಕೆ ನನ್ನ ಮಗನ ಬಲಿದಾನವಾಗಿದೆ."

ಸ್ವಾವಲಂಬನವು ಪಾಶ್ಚಿಮಾತ್ಯ ಶಿಕ್ಷಣದ ಅಡಿಗಲ್ಲಾಗಿದೆ. ಸ್ವಾವಲಂಬನದಿಂದ ಗೋಣು ಮೇಲೆ ನಿಂತಿರುತ್ತದೆ. ಪರಾವಲಂಬನದಿಂದ ಅದು ಕೆಳಗಾಗುತ್ತದೆ. ದುಡಿಯದೆ ಯಾವುದನ್ನೂ ಪಡೆಯಬಾರದು. ಮತ್ತು ದುಡಿಯದೆ ಇದ್ದವನಿಗೆ ಯಾರೂ ಏನನ್ನೂ ಕೊಡಬಾರದು. ಸೋಮಾರಿಯೂ, ಸೋಮಾರಿಯನ್ನು ಸಲಹುವವನೂ ಇಬ್ಬರೂ ಮಹಾಪಾಪಿಗಳೆಂದು ಸಂತತುಕಾರಾಮರು ಒಂದೆಡೆಗೆ ಹೇಳಿದ್ದಾರೆ. ಪೈಗಳ್ಳನಿಗೆ ನಾವು ಏನಾದರೂ ಕೊಟ್ಟರೆ ಅವನು ಇನ್ನಷ್ಟು ಪೈಗಳ್ಳನೂ, ಪರಾವಲಂಬಿಯೂ ಆಗಿ ತಿರುಗುತ್ತಾನೆ. ನಾವು ದೊಡ್ಡ ದಾನಶೂರರೆಂಬ ಅಹಂಭಾವದಿಂದ ಎದೆ ಸೆಟೆಸಿಕೊಂಡು ಇರುತ್ತೇವೆ. ಇದು ಸರಿಯಲ್ಲ. ಸೋಮಾರಿಯಿಂದ ಏನಾದರೂ ದುಡಿಸಿಕೊಳ್ಳಬೇಕು. ಕಟ್ಟಿಗೆ ಒಡೆಯುವದನ್ನೋ, ಬಟ್ಟೆ ಒಗೆಯುವದನ್ನೋ, ನೆಲವನ್ನು ಅಗಿಸುವವನ್ನೋ ಒಂದಿಲ್ಲೊಂದು ಕೆಲಸ ಹಚ್ಚಿ ಅವನಿಗೆ ಪ್ರತಿಫಲ ಕೊಡಬೇಕು. ಅದರಲ್ಲಿಯೇ ಆ ಮನುಷ್ಯನ ಉದ್ಧಾರವಿದೆ ಉದ್ಯೋಗಹೀನರನ್ನು ರಕ್ಷಿಸುವದೆಂದರೆ ದೇವರನ್ನು ಅವಮಾನಗೊಳಿಸಿದಂತೆ. ದೇವರು ಕೊಟ್ಟಿರುವ ಕೈ, ಕಾಲು, ಬುದ್ಧಿ ಇವುಗಳ ಅಪಮಾನ ಮಾಡಿದಂತೆ. ಸ್ವಾಭಿಮಾನ ಮತ್ತು ಶ್ರಮಗಳ ಮಹತ್ವವನ್ನು ಇಂದು ರಶಿಯಾದಲ್ಲಿ ಕಲಿಸಲಾಗುತ್ತಿದೆ. ಮೊನ್ನೆ ತಾನೆ ಅಮೇರಿಕೆಯ ಮಾನಸ ಶಾಸ್ತ್ರಜ್ಞನೊಬ್ಬನು ರಶಿಯಾಕ್ಕೆ ಹೋಗಿದ್ದ. ರಶಿಯದ ಪರಿಸ್ಥಿತಿ ಮತ್ತು ಅಲ್ಲಿನ ಅಂತರ್ಬಾಹ್ಯ ಪರಿವರ್ತನೆಯನ್ನು ನೋಡಲಿಕ್ಕೆ ಹೋಗಿದ್ದನು. ಹೋಗುವಾಗ್ಗೆ ಅವನು ಅಲ್ಲಿಯ ಕೂಲಿಕಾರರಿಗೆ ಕೊಡುವದಕ್ಕಾಗಿ ಪೆನ್ನು, ಚಾಕಲೇಟು, ಸುಂದರವಾದ ಚಾಕು ಮೊದಲಾದ ಪದಾರ್ಥಗಳನ್ನು

ತೆಗೆದುಕೊಂಡು ಹೋಗಿದ್ದನು. ಕೂಲಿಕಾರರ ವಸತಿಯ ಬಳಿಗೆ ಹೋಗಿ ತಾನು ತಂದ ಕಾಣಿಕೆ ವಸ್ತುಗಳನ್ನು ಹಂಚಹೋದನು. ಆದರೆ ಒಬ್ಬನೂ ಕೈ ಮುಂದೆ ನೀಡಲಿಲ್ಲ. ಒಂದು ಪದಾರ್ಥವನ್ನೂ ಮುಟ್ಟಲಿಲ್ಲ. ಇದನ್ನು ಕಂಡು ಅವನು ಹೇಳಿದ, " ಸಹೋದರರೇ, ಇದನ್ನು ನಾನು ಪ್ರೇಮದಿಂದ ಕೊಡುತ್ತಿದ್ದೇನೆ. " ಅದಕ್ಕೆ ಕೂಲಿಕಾರರು ಉತ್ತರ ಕೊಟ್ಟರು, " ಸ್ವಂತ ದುಡಿದು ಸಂಪಾದಿಸಬೇಕು. ಬೇರೆಯವರು ಕೊಡುವ ಕಾಣಿಕೆಯನ್ನು ಸ್ವೀಕರಿಸಿದರೆ ಮನಸ್ಸಿನಲ್ಲಿ ಆಲಸ್ಯ, ದಾಸ್ಯವೃತ್ತಿ ಮತ್ತು ಪರಾವಲಂಬನ ಬಂದು ಬಿಡಬಹುದು. ಈ ದುರ್ಗುಣಗಳು ತಿಲಮಾತ್ರ ನಮ್ಮಲ್ಲಿ ಬರಬಾರದೆಂದು ನಾವು ನಿರ್ಧರಿಸಿದ್ದೇವೆ. "

ಆ ಅಮೆರಿಕನ್ ಮಾನಸ ಶಾಸ್ತ್ರಜ್ಞನು ಬೆರಗಾಗಿ ಬಿಟ್ಟನು ಎಂಥ ವಿಚಾರಕ್ರಾಂತಿ ಇದು ! ಒಂದಾನೊಂದು ಕಾಲದಲ್ಲಿ ಬೇಡಿಕೆಗಳಿಗೆ ಕೈಯೊಡ್ಡುತ್ತಿದ್ದ ರಶಿಯದ ಲಕ್ಷಾವಧಿ ಕೂಲಿಕಾರರಲ್ಲಿ ಇಂದು ಒಬ್ಬರಾದರೂ ಕೈಯೊಡ್ಡುತ್ತಿಲ್ಲ. ಎಷ್ಟು ಸ್ವಾವಲಂಬನ, ಎಷ್ಟು ಪ್ರಭಾವ, ಎಂಥ ಶ್ರಮಪೂಜೆ !

ದುಡಿಮೆಯಲ್ಲಿಯೇ ಆತ್ಮೋದ್ಧಾರವಿದೆ. ಪುಕ್ಕಟೆ ತೆಗೆದುಕೊಳ್ಳುವದರಲ್ಲಿಯೂ ಪುಕ್ಕಟೆ ಕೊಡುವದರಲ್ಲಿಯೂ ಹೀನತನವಿದೆ. ನಮ್ಮ ಹಿಂದೂ ದೇಶದ ಮಕ್ಕಳಿಗೆ, ನಮ್ಮ ಹಿಂದೂ ದೇಶದ ಜನತೆಗೆ ಇದು ತಿಳಿದು ಬಂದ ದಿನವೇ ಸುದಿನವಾಗಿದೆ. ಮನೆ ಮನೆಗಳಲ್ಲಿಯೂ, ಶಾಲೆ ಕಾಲೇಜುಗಳಲ್ಲಿಯೂ ಈ ಶಿಕ್ಷಣವು ದೊರೆಯಬೇಕು. ಎಂಜಲವನ್ನು ಯಾರಿಗೂ ಹಾಕಕೂಡದೆಂಬ ಧಾರ್ಮಿಕ ನಿಯಮವೇ ಆಗಬೇಕಾಗಿದೆ. ದುಡಿಮೆಯನ್ನು ಪ್ರೋತ್ಸಾಹಿಸುವದೇ ನಿಜವಾದ ಧರ್ಮ. ಸೋಮಾರಿಯಾಗಿ ಬಿಕ್ಕೆಬೇಡುವವನೂ ಶ್ರೀಮಂತನೆಂದು ಗಾದಿಯ ಮೇಲೆ ಹೊರಳಾಡುತ್ತ ತಿಂದುಕೊಂಡು ಬಿದ್ದಿರುವವನೂ, ಇಬ್ಬರೂ ಕೀಟಕಗಳೇ ! ಶ್ರೀಮಂತನೂ ಬೇರೆಯವರ ದುಡಿಮೆಯ ಮೇಲೆ ಜೀವಿಸುತ್ತಾನೆ, ಅದರಂತೆ ಸೋಮಾರಿ–ಬಿಕ್ಕೆ ಬೇಡುವವನೂ ಬೇರೆಯವರ ಅನ್ನದಿಂದಲೇ ಜೀವಿಸುತ್ತಾನೆ. ಇವರಿಬ್ಬರೂ ಸಮಾಜವೆಂಬ ವೃಕ್ಷದ ಮೇಲಿರುವ ರಣಹದ್ದುಗಳು ! ಚಳಿ-ಮಳೆ-ಬಿಸಿಲುಗಳಲ್ಲಿ ದುಡಿಯುವ ಕೂಲಿಕಾರರು, ಬೀದಿಯನ್ನು ಗುಡಿಸುವ ಹೊಲೆಯರು, ಮಲ-ಮೂತ್ರವನ್ನು ಎತ್ತುವ ಭಂಗಿಗಳು, ಸತ್ತ ದನಗಳನ್ನು ಸುಲಿಯುವ ಢೋರರು, ಜೋಡುಗಳನ್ನು ತಯಾರಿಸುವ

ಮಾದಿಗರು, ಇವರೆಲ್ಲ ಶ್ರಮವಿಲ್ಲದೆ ಕುಳಿತುಣ್ಣುವವರಿಗಿಂತಲೂ ಶ್ರೇಷ್ಠರೂ ಪವಿತ್ರರೂ ಆಗಿದ್ದಾರೆ. ಯಾವುದನ್ನೇ ಆಗಲಿ ನಿರ್ಮಾಣ ಮಾಡಿರಿ. ಒಳ್ಳೇ ವಿಚಾರಗಳನ್ನು ನಿರ್ಮಾಣ ಮಾಡಿರಿ, ಧಾನ್ಯವನ್ನು ಬೆಳೆಯಿರಿ, ಸ್ವಚ್ಛತೆಯನ್ನು ನಿರ್ಮಾಣ ಮಾಡಿರಿ. ಯಾವದೇ ಒಂದು ಮಂಗಲಕರವಾದ, ಸುಂದರವಾದ, ಹಿತಕರವಾದ ಕಾರ್ಯವನ್ನು ಮಾಡಿರಿ. ಅಂದರೆ ಮಾತ್ರ ಈ ಜಗತ್ತಿನಲ್ಲಿ ಬಾಳಲು ನಿಮಗೆ ಅಧಿಕಾರವಿರುತ್ತದೆ. ಯಾವ ರಾಷ್ಟ್ರದಲ್ಲಿ ಸಮಾಜಸಂವರ್ಧಕ ಸಮಾಜರಂಕ್ಷಕ ಮತ್ತು ಸಮಾಜಪೋಷಕವಾದ ಉದ್ಯಮಗಳಿಗೆ ಮನ್ನಣೆಯಿ ದೆಯೋ ಆ ರಾಷ್ಟ್ರವು ವೈಭವದ ಶಿಖರವನ್ನು ಏರುತ್ತದೆ. ಮಿಕ್ಕವುಗಳು ಭಿಕ್ಷಾ ಟನೆಗೆ ಹೋಗತಕ್ಕವೇ !

ನನ್ನ ತಾಯಿಯು ನನಗೆ ಸ್ವಾಭಿಮಾನವನ್ನು ಕಲಿಸಿದಳು. ಪರಾವಲಂಬಿ ಯಾಗಿರುವದೆಂದರೆ ಮರಣಸದೃಶವಾದುದೆಂದು ಕಲಿಸಿದಳು. ' ಬೇರೆಯವರ ದನ್ನು ತೆಗೆದುಕೊಳ್ಳಬೇಡ; ಬೇರೆಯವರಿಗೆ ಕೊಡು ! ' ಎಂಬ ಮಹಾಮಂತ್ರ ವನ್ನು ಕಲಿಸಿಗಳು.

ರಾತ್ರಿ : ೧೪

## : :ಶ್ರೀಖಂಡದ ವಡೆಗಳು

ನಮ್ಮ ತಾಯಿ ಶ್ರೀಖಂಡದ ವಡೆಗಳನ್ನು ಬಹಳ ಚೆನ್ನಾಗಿ ಮಾಡು ತ್ತಿದ್ದಳು. ಅದರ ಪಾಕ ಮಾಡುವ ಹದ ಅವಳಿಗೆ ಚೆನ್ನಾಗಿ ಸಾಧಿಸಿತ್ತು. ಎಂದೂ ಕೆಡುತ್ತಿರಲಿಲ್ಲ. ವಡೆಗಳು ಮಿದುವಾಗಿ, ಹಗುರಾಗಿ, ಸುಂದರವಾಗಿ ಆಗುತ್ತಿದ್ದವು. ಅವರ ವಡೆಗಳನ್ನು ಮಾಡಿಸಿಕೊಳ್ಳುವದಕ್ಕಾಗಿ ನೆರೆಹೊರೆಯ ವರು ಕೂಡ ಅವಳನ್ನು ಕರೆಯುತ್ತಿದ್ದರು. ತಾಯಿಯು ಯಾರು ಕರೆದರೂ ಸಂತೋಷದಿಂದ ಹೋಗುತ್ತಿದ್ದಳು. ಬೇರವರಿಗೆ ನೆರವಾಗುವದೆಂದರೆ ಅವಳಿಗೆ ಎಲ್ಲಿಲ್ಲದ ಸಂತೋಷ.

ಪಾರ್ವತೀಬಾಯಿಯ ಮಗಳು ವೇಣು ತವರುಮನೆಗೆ ಬಂದಿದ್ದಳು. ಪಾರ್ವತೀಬಾಯಿ ಮತ್ತು ನಮ್ಮ ತಾಯಿ ಜೀವದ ಗೆಳತಿಯರು. ವೇಣು

ನಮ್ಮ ಮನೆಗೆ ಆಗಾಗ್ಗೆ ಬರುತ್ತಿದ್ದಳು. ಅವಳು ಬಂದಾಗಲೆಲ್ಲ ನಮ್ಮ ತಾಯಿ ಅವಳಿಂದ ಹಾಡು ಹೇಳಿಸುತ್ತಿದ್ದಳು. ಒಂದು ದಿನ ತಾಯಿಯು ನನಗೆ ಸಿಟ್ಟು ಮಾಡಿದಾಗ ನಾನು ಅಳುತ್ತ ಕುಳಿತಿದ್ದೆ. ವೇಣು ನನ್ನ ಕಣ್ಣು ಒರೆಸಿದ್ದಳು. ಅವಳು ನನ್ನ ಅಕ್ಕನ ಹಾಗೆ ಇದ್ದಳು.

ಆ ದಿವಸ ಪಾರ್ವತೀಬಾಯಿ ತಾಯಿಗೆ ಹೇಳಿದಳು,“ಶ್ಯಾಮನ ತಾಯೀ, ನಮ್ಮ ವೇಣು ನಾಡದ್ದು ಅತ್ತೆಯ ಮನೆಗೆ ಹೋಗತಕ್ಕವಳು. ಅವಳ ಜೊತೆಗೆ ಕಳಿಸಿಕೊಡಲು ಶ್ರೀಖಂಡದ ವಡೆ ಮಾಡಬೇಕೆಂಬ ವಿಚಾರವಿದೆ. ನಾಳೆ ನಮ್ಮ ಮನೆಗೆ ಬಂದು ಮಾಡಿಕೊಡುತ್ತೀಯಾ ? ನೀನೆಷ್ಟು ಉತ್ತಮ ವಡೆಗಳನ್ನು ಮಾಡುತ್ತೀ ! ಅವಳ ಅತ್ತೆಯ ಮನೆಗೆ ಕಳಿಸುವದೆಂದಮೇಲೆ ವಡೆಗಳು ಚೆನ್ನಾಗಿದ್ದರೆ ಒಳಿತು. ”

“ ಆಗಲವ್ವಾ, ಅಗತ್ಯ ಬರುತ್ತೇನೆ. ಅದೇನು ಮಹಾ ಕೆಲಸ. ನಿಮ್ಮ ವೇಣೂ ನಾಡದ್ದೇ ಹೋಗುವಳೇನು ? ಸಂಕ್ರಾಂತಿಯವರೆಗೆ ಇರಬಹುದೆಂದು ಮಾಡಿದ್ದೆ. ನನಗೂ ಸುಖವಾಗಿ ಹೊತ್ತು ಹೋಗುತ್ತಿತ್ತು. ಬಂದು ಕುಳಿತು ಕೊಂಡು ನಾಲ್ಕು ಪದಗಳನ್ನು ಹೇಳುತ್ತಿದ್ದಳು. ”

“ ಅವಳ ಅತ್ತೆಯ ಮನೆಯವರು ಕಳಿಸಿ ಕೊಡಿರೆಂದು ಪತ್ರ ಬರೆದಿದ್ದಾರೆ. ಹುಡುಗಿಯೊಮ್ಮೆ ಅತ್ತೆಯ ಮನೆಗೆ ಹೋದಳೆಂದರೆ ನಮ್ಮ ಕೈತಪ್ಪಿದ ಹಾಗೆಯೇ. ನಾಲ್ಕು ದಿವಸ ಬಂದದ್ದೇ ಹೆಚ್ಚು. ಆ ಕೃಷ್ಣಿಯ ಅತ್ತೆಯಮನೆಯವರು ಎರಡು ವರುಷಗಳಾದರೂ ತವರುಮನೆಗೆ ಕಳಿಸಿಕೊಟ್ಟಿಲ್ಲ. ಅವಳ ತಾಯಿ ಅತ್ತುಬಿಟ್ಟಳು. ಅದಕ್ಕಿಂತ ವೇಣುವಿನದೇ ಬೇಕು. ಸರಿ. ನಾನು ಹೊರಡುತ್ತೇನೆ. ನಾಳೆ ಬರಬೇಕು ಮತ್ತೆ. ನಿನ್ನನ್ನು ಕರೆಯಲಿಕ್ಕೆ ವೇಣುವನ್ನೇ ಕಳಿಸುತ್ತೇನೆ. ” ಎಂದು ಪಾರ್ವತಿಬಾಯಿಯು ಹೇಳಿದಳು.

ತಾಯಿಯು ಅವರಿಗೆ ಕುಂಕುಮವನ್ನು ಹಚ್ಚಿದಳು. ಅವರು ಹೊರಟು ಹೋದರು. ಮರುದಿವಸ ಮಧ್ಯಾಹ್ನದ ಊಟವಾಯಿತು. ತಾಯಿಗೆ ಸೌಖ್ಯವಿರಲಿಲ್ಲ. ಹೇಗಾದರೂ ಎಂಜಲು ಗೋಮ ಮುಗಿಸಿ ಹಾಸಿಗೆ ಉರುಳಿಸಿ ಮಲಗಿಕೊಂಡಳು. “ಅವ್ವಾ, ಎಷ್ಟು ಬೇಗ ಮಲಗಿದೆಯಲ್ಲ ?” ನಾನು ಕೇಳಿದೆ.

“ ಶ್ಯಾಮಾ, ಮೈ-ಕೈ ನೋಯುತ್ತವೆ. ತುಸು ಹಿಸುಕುತ್ತೀಯಾ ? ” ಎಂದು ತಾಯಿ ಕೇಳಿದಳು. ನಾನು ಅವಳ ಕೈ-ಕಾಲು ಹಿಸುಕತೊಡಗಿದೆ.

ಆಕೆಯ ಮೈ ಬಿಸಿಯಾಗಿತ್ತು. ಅವಳ ತಲೆ ವಿಪರೀತ ನೋಯುತ್ತಿತ್ತು.

ನಾನು ಆಮೇಲೆ ಆಟವಾಡಲು ಹೋದೆ. ಇತ್ತ ತಾಯಿಯನ್ನು ಕರೆಯಲು ವೇಣು ಬಂದಳು. ತಾಯಿ ಮಲಗಿದ್ದಳು. "ಬೇಗ ಬರುವಿರಲ್ಲವೇ ಯಶೋದಕ್ಕ? ಅಮ್ಮ ನಿಮ್ಮ ದಾರಿಯನ್ನೇ ಕಾಯುತ್ತಿದ್ದಾಳೆ." ವೇಣು ಕರೆದಳು.

ತಾಯಿ ಎದ್ದಳು. "ಏನೋ ತುಸು ಅಡ್ಡಾಗಿದ್ದೆ. ನಿದ್ದೆ ಬಂದು ಹೋಯಿತು. ಇನ್ನು ಮೇಲೆ ಬರತಕ್ಕವಳೇ ಇದ್ದೆ. ನಡೆ ಹೋಗೋಣ." ಎಂದಳು.

ವೇಣೂನ ಮನೆಗೆ ಹೋಗಿ ತಾಯಿ ವಡೆಗಳನ್ನು ಮಾಡಲು ತೊಡಗಿದಳು. ಆ ಮಾತು ಈ ಮಾತು ಆಡುತ್ತ ಕೆಲಸ ಸಾಗಿಸಿದ್ದರು. ನಾನು ಆಟ ಮುಗಿಸಿ ಮನೆಗೆ ಹೋದಾಗ ತಾಯಿ ಇರಲಿಲ್ಲ. ಅವಳನ್ನು ಹುಡುಕಿಕೊಂಡು ವೇಣಕ್ಕನ ಮನೆಗೆ ಹೋದೆ. ನನ್ನನ್ನು ಅಂಗಳದಲ್ಲಿ ಕಂಡು ವೇಣಕ್ಕ ನುಡಿದಳು, "ಏನೋ ಶ್ಯಾಮಾ, ಅಮ್ಮನೆಲ್ಲಿ ಹೋದಳೋ ಎಂದು ನೋಡಲು ಬಂದೆಯೇನು? ಅವಳು ನನಗಾಗಿ ವಡೆಗಳನ್ನು ಮಾಡುತ್ತಿದ್ದಾಳೆ. ನಾಳೆ ನಾನು ಅತ್ತೆಯ ಮನೆಗೆ ಹೋಗತಕ್ಕವಳು."

"ನಾಳೆ ಹೋಗತಕ್ಕವಳೇ ನೀನು? ಹಾಗಾದರೆ ನನ್ನ ಕಣ್ಣು ಒರೆಸುವವರು ಯಾರು? ತಾಯಿ ಸಿಟ್ಟು ಮಾಡಿದಾಗ ನನ್ನ ಪಕ್ಷ ಕಟ್ಟುವವರು ಯಾರು?" ಎಂದು ನಾನು ಕೇಳಿದೆ. ವೇಣೂ ಹೋಗುವದನ್ನು ಕೇಳಿ ನನಗೆ ಅಸಮಾಧಾನವಾಯಿತು.

"ಬಾ ಶ್ಯಾಮಾ, ನಾನು ಕೇಶರವನ್ನು ಪುಡಿ ಮಾಡುತ್ತೇನೆ. ನೀನು ಯಾಲಕ್ಕಿ ಕಾಳು ಬಿಡಿಸಿ ಪುಡಿ ಮಾಡಿಕೊಡು." ವೇಣುವಿನ ಕೆಲಸದಲ್ಲಿ ನಾನೂ ಸಹಾಯ ಮಾಡಲು ಕುಳಿತುಕೊಂಡೆ.

"ಶ್ಯಾಮಾ, ನೀನೇಕೆ ಬಂದೆಯೋ?" ಎಂದು ತಾಯಿ ಕೇಳಿದಳು.

ತಾಯಿಯ ಮಾತಿನ ಒಲವನ್ನರಿತು ನಾನೆಂದೆ, "ನಾನೇನು ವಡೆಗಳಿಗಾಗಿ ಆಸೆಪಟ್ಟು ಬಂದಿಲ್ಲ. ವೇಣಕ್ಕ, ನಾನು ಆಶೆಬುರುಕನೇನೇ? ಆ ದಿವಸ ನಾನೇನು ಬೇಡಿದ್ದೆನೇ? ನೀನಾಗಿ ಕರೆದುಕೊಟ್ಟಾಗ ನಾನು ತಿಂಡಿಯನ್ನು ತಿಂದೆನಲ್ಲವೇ?"

ವೇಣು ಹೇಳಿದಳು, " ಶ್ಯಾಮಾ, ನೀನು ಒಳ್ಳೇ ಹುಡುಗ. ಯಶೋದಕ್ಕ, ನೀವು ಶ್ಯಾಮನಿಗೆ ಸಿಟ್ಟುಮಾಡಬೇಡಿ. "

" ವೇಣೂ, ಅಲ್ಲವೇ, ನನಗೇನು ಮಾಯೆ–ಮಮತೆಗಳಿಲ್ಲವೆಂದು ತಿಳಿದೆಯಾ ? ಒಂದೊಂದು ಸಲ ಸಿಟ್ಟಿಗೇಳಬೇಕಾಗುತ್ತದೆ. ಶ್ಯಾಮನಿಗೆ ಜನರು ಹೆಸರಿಡಬಾರದೆಂದು ಒಮ್ಮೊಮ್ಮೆ ಅವನ ಮೇಲೆ ರೇಗಿಕೊಳ್ಳುತ್ತೇನೆ. ಅದು ಅವನ ಹಿತಕ್ಕಾಗಿಯೇ. ಅವನು ಒಳ್ಳೆಯವನೆಂಬುದನ್ನು ಬಲ್ಲೆ. ಆದರೆ ಇನ್ನೂ ಒಳ್ಳೆಯವನಾಗಬೇಕೆಂದು ನನಗನಿಸುತ್ತದೆ. ಪಾರ್ವತೀಬಾಯಿ, ಪಾಕ ಹದಕ್ಕೆ ಬಂತು ನೋಡು. ಮಂದವಾಗಿದೆ. " ಎಂದು ತಾಯಿ ನುಡಿದಳು.

ತಾಟಿನಲ್ಲಿ ಪಾಕವನ್ನು ಸುರುವಿ ತಟ್ಟಲಾಯಿತು. ಬಾಳೆ ಎಲೆಯಿಂದ ನಮ್ಮ ತಾಯಿ ಸಲೀಸಾಗಿ ತಟ್ಟಿದಳು. ಐದು ನಿಮಿಷ ತಡೆದು ಚಾಕುವಿನಿಂದ ಕೊರೆದಿಟ್ಟಳು. " ಪಾರ್ವತೀಬಾಯಿ, ತುಸು ತಡೆದು ವಡೆಗಳನ್ನು ತೆಗೆದು ಬಿಟ್ಟರಾಯಿತು. ನಾನಿನ್ನು ಹೋಗುತ್ತೇನೆ. " ಎಂದು ತಾಯಿ ಹೇಳಿದಳು.

" ತುಸು ತಡೆಯಿರಿ ಯಶೋದಕ್ಕ, ಎಲ್ಲವೂ ನಿಮ್ಮ ಕೈಯಿಂದಲೇ ಆದರೆ ಒಳ್ಳೇದು. " ವೇಣು ಆಗ್ರಹಪಡಿಸಿದಳು. ತಾಯಿಗೆ ಒಲ್ಲೆನೆಂದು ಹೇಳಲಿಕ್ಕೆ ಆಗಲಿಲ್ಲ. ತುಸು ಹೊತ್ತು ತಡೆದು ಮುಗುಚುವ ಕಟ್ಟಿಗೆಯಿಂದ ಎಲ್ಲ ವಡೆಗಳನ್ನೂ ಬಾಳೆಯ ಎಲೆಯ ಮೇಲೆ ರಾಶಿ ರಾಶಿಯಾಗಿ ಹಾಕಿದಳು. ಅದೆಷ್ಟು ಸುಂದರವಾದ ವಡೆಗಳವು ! ಪಾರ್ವತೀಬಾಯಿ ಅವನ್ನು ಡಬ್ಬಿಯಲ್ಲಿ ತುಂಬಿಟ್ಟರು. ವೇಣಕ್ಕ ಒಂದು ವಡೆಯನ್ನು ದೇವರ ಮುಂದಿಟ್ಟು ಒಂದು ವಡೆಯನ್ನು ನನಗೆ ಕೊಟ್ಟಳು. ವೇಣೂನ ತಾಯಿ ಹೇಳಿದರು, " ಶ್ಯಾಮಾ, ಆ ತಾಟನ್ನು ಕೆದರು. ಅದಕ್ಕೆ ಹತ್ತಿದ್ದನ್ನು ತೆಗೆದು ತಿಂದುಬಿಡು. " ನಾನು ವೀರನಂತೆ ಮುಂದೆ ಸರಿದು ಅದನ್ನೆಲ್ಲ ತೆಗೆದು ತಿಂದೆ. ಪಾರ್ವತೀಬಾಯಿ ನಮ್ಮ ತಾಯಿಗೆ ಕುಂಕುಮ ಹಚ್ಚಿ ಕೈಯಲ್ಲಿ ನಾಲ್ಕು ವಡೆ ಕೊಟ್ಟು ಕಳಿಸಿಕೊಟ್ಟರು.

ನಾನು ವೇಣುವಿನ ಬಳಿಯಲ್ಲಿಯೇ ಕುಳಿತುಕೊಂಡಿದ್ದೆ. " ಶ್ಯಾಮಾ, ನಿನ್ನ ಅಂಗಿಯ ಗುಂಡಿ ಹರಿದು ಹೋಗಿದೆಯೆಂದು ಕಾಣುತ್ತದೆ. ಅಂಗೀ ತೆಗೆದು ತಾ ಇಲ್ಲಿ. ಹಚ್ಚಿ ಕೊಡುತ್ತೇನೆ. " ವೇಣು ಹೇಳಿದಳು. ನಾನು ಅಂಗೀ ಬಿಚ್ಚಿಕೊಟ್ಟೆ. ಆಕೆ ತನ್ನ ಹೊಲಿಗೆಯ ಚೀಲದಿಂದ ಸೂಜಿ ದಾರ ತೆಗೆದು ಗುಂಡಿಯನ್ನು ಹಚ್ಚಿ ಕೊಟ್ಟದ್ದಲ್ಲದೆ, ಬೇರೊಂದು ಬದಿಗೆ ಹರಿದದ್ದನ್ನೂ

ಹೊಲಿದು ಸರಿಪಡಿಸಿ ಕೊಟ್ಟಳು. ನಾನು ಅಂಗಿಯನ್ನು ಹಾಕಿಕೊಂಡೆ.

"ಶ್ಯಾಮಾ, ನಡೆ ಗುಲಬಾಕ್ಷಿ ಹೂಗಳನ್ನಷ್ಟು ಹರಿಯೋಣ. ಆಮೇಲೆ ನಿಮ್ಮ ಮನೆಗೂ ಸ್ವಲ್ಪ ತೆಗೆದುಕೊಂಡು ಹೋಗೋಣ."

ವೇಣುವಿನ ಜೊತೆಗೆ ಹೋಗಿ ಹೂ ತೆಗೆದುಕೊಂಡು ನಾವಿಬ್ಬರೂ ನಮ್ಮ ಮನೆಗೆ ಹೋದೆವು. "ಯಶೋದಕ್ಕಾ" ಎಂದು ವೇಣು ಕರೆದಳು. ಆದರೆ ತಾಯಿಯೆಲ್ಲಿದ್ದಾಳೆ? ಅವಳು ಬಾವಿಯ ಕಡೆಗೋ, ಕೊಟ್ಟಿಗೆಯ ಕಡೆಗೋ ಹೋಗಿರಬೇಕೆಂದು ಭಾವಿಸಿದ್ದೆವು. ಅವಳು ಹಾಸಿಗೆ ಹಿಡಿದು ಮಲಗಿದ್ದಳು. ನಾವು ಕೂಡಲೆ ತಾಯಿಯ ಹತ್ತಿರ ಹೋದೆವು.

"ಯಶೋದಕ್ಕಾ, ಮಲಗಿ ಬಿಟ್ಟಿರಲ್ಲ? ಮೈಯಲ್ಲಿ ಚೆನ್ನಾಗಿಲ್ಲವೇ? ಒಲೆಯ ಹತ್ತಿರ ಕುಳಿತು ತಾಪವಾಗಿರಬೇಕು." ವೇಣು ನಮ್ಮ ತಾಯಿಯ ಹಣೆ ಮುಟ್ಟಿ ನೋಡಿದಳು. ಕಾದು ಬೆಂಕಿಯಾಗಿತ್ತು. "ಯಶೋದಕ್ಕ, ನಿಮಗೆ ಜ್ವರ ತುಂಬ ಬಂದಿದೆಯಲ್ಲ?" ವೇಣು ಕನಿಕರದಿಂದ ನುಡಿದಳು.

ನಾನು ಹೇಳಿದೆ, "ವೇಣಕ್ಕಾ, ತಾಯಿಗೆ ಮಧ್ಯಾಹ್ನವೇ ಜ್ವರ ಬಂದಿರಬೇಕು. ಮೈ-ಕೈ ನೋಯುತ್ತದೆಂದು ಹೇಳಿದ್ದಳು. ನಾನು ಹಿಸುಕಿದ್ದೆ."

"ನಾನು ಕರೆಯಲಿಕ್ಕೆ ಬಂದಾಗ ನೆಟ್ಟಗಿಲ್ಲವೆಂದೇ ಮಲಗಿದ್ದಿರೆಂದು ತೋರುತ್ತದೆ. ಯಶೋದಕ್ಕಾ, ನೀವು ಹೇಳಬೇಕಾಗಿತ್ತು. ನನಗೇನು ಗೊತ್ತು? ಕರೆದುಕೊಂಡು ಹೋದೆ. ಮೈಯಲ್ಲಿ ಜ್ವರವಿದ್ದೂ ಬಂದು ಒಲೆಯ ಹತ್ತಿರ ಕುಳಿತು ಕೆಲಸ ಮಾಡಿದಿರಲ್ಲ?" ವೇಣುವು ಖಿನ್ನಮನಸ್ಕಳಾಗಿ ನುಡಿದಳು.

"ವೇಣೂ, ಆಗ ಅಷ್ಟೇನೂ ಜ್ವರವಿರಲಿಲ್ಲ. ಮೈ-ಕೈ ತುಸು ನೋಯುತ್ತಿತ್ತು. ಶ್ಯಾಮಾ, ಹೋಗು ಮಗು, ದೀಪ ಹಚ್ಚು. ಸಂಜೆಯಾಯಿತು."

ನಾನು ದೀಪ ಹಚ್ಚಿದೆ. ದೇವರಿಗೂ ತುಳಸಿಗೂ ಬೆಳಕು ತೋರಿಸಿ ತಾಯಿಯ ಹತ್ತಿರ ಬಂದು ಕುಳಿತೆ. ವೇಣುವಿಗೆ ಕೆಡುಕೆನಿಸಿತ್ತು. ದುಃಖ ಒತ್ತರಿಸಿ ಬಂದಿತ್ತು. ಬಿಗಿದ ಕಂಠದಿಂದ ಮಾತನಾಡಿದಳು, "ಯಶೋದಕ್ಕಾ, ಮೈಯಲ್ಲಿ ಜ್ವರವಿದ್ದೂ ಬಂದು ವಡೆ ಮಾಡಿದ್ದರಿಂದ ಈಗ ಇನ್ನಷ್ಟು ಜ್ವರ ಏರಿದವು. ವಡೆ ಇಲ್ಲದಿದ್ದರೇನು ಕೆಡುತ್ತಿತ್ತೇ? ತನಗೆ ಬಂದಂತೆ ಹೇಗೂ ಮಾಡುತ್ತಿದ್ದಳು ನಮ್ಮ ತಾಯಿ. ಪ್ರಾಣಕ್ಕಿಂತಲೂ ಈ ವಡೆಗಳೇನು ಹೆಚ್ಚಿನವೇ?"

ನನ್ನ ತಾಯಿ ವಾತ್ಸಲ್ಯದಿಂದ ವೇಣುವಿಗೆ ಹೇಳಿದಳು, "ಅಲ್ಲೇ, ಇಷ್ಟು ಜ್ವರ ಬಂದ ಮಾತ್ರಕ್ಕೆ ಏನಾಗುತ್ತದೆ. ವೇಣೂ, ಹೆಂಗಸರಾದ ನಮಗೆ ಅದೇನು ದೊಡ್ಡದೆಂದು ಕಾಣುವದಿಲ್ಲ. ಮೈಯಲ್ಲಿ ಕಟ್ಟಿನ ಜ್ವರವಿದ್ದರೂ, ತಲೆ ಸಿಡಿದು ಬೀಳುತ್ತಿದ್ದರೂ, ಬಟ್ಟೆಯ ಮೂಟೆ ಹೊತ್ತುಕೊಂಡು ಹೋಗಿ ಒಗೆದು ಕೊಂಡು ತರುತ್ತೇವೆ. ಹತ್ತು ಜನರ ಅಡಿಗೆ ಮಾಡುತ್ತೇವೆ. ನೀನು ಸುಮ್ಮನೆ ಮನಸ್ಸಿಗೆ ಹಚ್ಚಿಕೊಳ್ಳಬೇಡ. ತುಸು ಹೊತ್ತಿನಲ್ಲಿ ಬೆವರು ಬಂದು ಹಗುರಾಗುತ್ತದೆ. ನೀನಿನ್ನು ಮನೆಗೆ ಹೋಗು. ನಿಮ್ಮ ತಾಯಿ ದಾರಿ ಕಾಯಬಹುದು."

ವೇಣು ತಾಯಿಯ ಹತ್ತಿರ ಕುಳಿತವಳು ಏಳಲಿಲ್ಲ. ನಾನು ಹೇಳಿದೆ, "ವೇಣಕ್ಕಾ, ಈ ಗುಲಬಾಕ್ಷೀ ಮಾಲೆಯನ್ನು ನೀನೇ ಮಾಡುವಿಯಾ? ಅಮ್ಮ ಮಾಡಲಾರಳು."

ವೇಣು ಮಾಲೆ ಮಾಡಿದಳು. ಆಮೇಲೆ ಮತ್ತೆ ತಾಯಿಗೆ ಹೇಳಿದಳು, "ಯಶೋದಕ್ಕಾ, ನನ್ನ ಸಲುವಾಗಿ ನಿಮಗೆ ಇಷ್ಟೆಲ್ಲ ತ್ರಾಸು. ಈ ಜ್ವರ!"

"ವೇಣೂ, ನೀನೇನು ನನಗೆ ಹೊರಗಿನವಳೇ? ಹುಚ್ಚಳಂತೆ ಏನಾದರೂ ಮಾತನಾಡಬೇಡ. ಹೇಗೆ ನನ್ನ ಚಂದ್ರಿಯೋ ಹಾಗೆಯೇ ನೀನೂ. ವಡೆ ಚೆನ್ನಾಗಿ ಆಗಿರದಿದ್ದರೆ, ನಿನ್ನ ಅತ್ತೆಯ ಮನೆಯವರು ಏನಾದರೂ ಹೆಸರಿಟ್ಟಿದ್ದರೆ ಆಗ ನಿನಗೆಷ್ಟು ಕೆಡುಕೆನಿಸುತ್ತಿರಲಿಲ್ಲ? ತವರುಮನೆಯ ಜನಕ್ಕೆ ಹೆಸರಿಡುವದನ್ನು ಕೇಳಿ ನೀನು ಕಣ್ಣೀರು ಹರಿಸುತ್ತಿದ್ದೆ. ವೇಣುವಿನ ಅತ್ತೆಯವರು ಅವಳ ತವರುಮನೆಯವರಿಗೆ ಹೆಸರಿಡಬಾರದೆಂದು ತಿಳಿದು ನಾನು ಬಂದೆ. ಪಾರ್ವತೀಬಾಯಿ ನಾನು ಇಬ್ಬರೂ ಗೆಳತಿಯರು. ಗೆಳತಿಯ ಮಗಳ ಬಗ್ಗೆ ತುಸು ವೇದನೆಯನ್ನು ಸಹಿಸಿಕೊಂಡರೇನು ತಪ್ಪಲ್ಲ. ನಿನಗೆ ಶ್ಯಾಮನು ಹೇಗೆ ಪರಕೀಯನೆಂದು ತೋರುವದಿಲ್ಲವೋ ಹಾಗೆಯೇ ನೀನು ನನಗೆ ಬೇರೆಯವಳೆಂದು ತೋರುವದಿಲ್ಲ. ನನಗೆ ಕಷ್ಟವಾಗಿದೆಯೆಂದು ಭಾವಿಸಿದೆಯಾ? ಮನಸ್ಸಿಗೆ ಅದೆಷ್ಟು ಸಮಾಧಾನವಾಗಿದೆಯೆಂಬುದನ್ನು ನೀನೇನು ಬಲ್ಲೆ? ವಡೆಯನ್ನು ಮಾಡಲಿಕ್ಕೆ ನಾನು ಬಂದಿರದಿದ್ದರೆ ಮಾತ್ರ ನೊಂದುಕೊಳ್ಳುತ್ತಿದ್ದೆ. ಮನೆಗೆ ಹೋಗಿನ್ನು. ನಾನು ಬೆಳಿಗ್ಗೆ ಬರುತ್ತೇನೆ. ರಾತ್ರಿ ಬೆವರುಬಿಟ್ಟು ಜ್ವರ ಆರಬಹುದು. ಬೆಳಿಗ್ಗೆ ಹುಷಾರಾಗುತ್ತೇನೆ."

ವೇಣು ನನ್ನನ್ನು ಹತ್ತಿರ ಕರೆದು ಹೇಳಿದಳು, " ಶ್ಯಾಮಾ, ನೀನು ನನ್ನ ಸಂಗಡ ಬಾ. ನಮ್ಮ ತಾಯಿ ಚವಳೀಕಾಯಿ ಪಲ್ಲೆ ಮಾಡಿದ್ದಾಳೆ ಕೊಡುತ್ತೇನೆ. ನಿಮ್ಮ ತಾಯಿ ಅದನ್ನೆಲ್ಲ ಈಗ ಮಾಡುತ್ತ ಕೂಡುವದು ಬೇಡ. ಅನ್ನವೊಂದೇ ಈಗ ಮಾಡಿದರೆ ಸಾಕು. ಇಲ್ಲವಾದರೆ ನಾನೇ ಅನ್ನಕ್ಕಿಟ್ಟು ಹೋಗುವೆ. "

" ವೇಣೂ, ಶ್ಯಾಮನು ಅನ್ನಕ್ಕೆ ಇಡುತ್ತಾನೆ. ನೀನು ಬರೀ ಪದಾರ್ಥ ಕಳಿಸಿದರೆ ಸಾಕು. " ತಾಯಿಯೆಷ್ಟು ಹೇಳಿದರೂ ವೇಣೂ ಕೇಳಲಿಲ್ಲ. ಅಕ್ಕಿ ಹಸನ ಮಾಡಿ ತೊಳೆದು ಅನ್ನಕ್ಕೆ ಇಟ್ಟುಬಿಟ್ಟಳು. ಬಳಿಕ ನಾನೂ ಅವಳ ಜೊತೆಗೆ ಅವರ ಮನೆಗೆ ಹೋದೆ. ಪಲ್ಲೆಯನ್ನು ತೆಗೆದುಕೊಂಡು ಬಂದು ತಾಯಿಯನ್ನು ಎಬ್ಬಿಸಿದೆ. ನನ್ನ ಕಂಠ ಬಿಗಿದುಬಂದಿತ್ತು. ಕಣ್ಣುಗಳಿಗೆ ಮಹಾಪೂರ ಬಂದಿತ್ತು. ತಾಯಿ ಕೇಳಿದಳು, " ಶ್ಯಾಮಾ, ಏನಾಯಿತೋ ? "

ವೇಣಕ್ಕ ಹೇಳಿದಳು, " ನಿನ್ನ ತಾಯಿ ದೊಡ್ಡವಳು ! ನೀನು ಅವಳ ಮಾತಿನಂತೆ ನಡೆಯಬೇಕು. ನಿನ್ನ ಭಾಗ್ಯ ದೊಡ್ಡದೆಂದೇ ಇಂಥ ತಾಯಿ ನಿನಗೆ ದೊರೆತಿದ್ದಾಳೆ. ' ಎಂದು ನುಡಿದು ಅವಳು ನನ್ನ ಬೆನ್ನು ಸವರಿದಳು. ನನಗೆ ಒಮ್ಮೆಲೆ ದುಃಖ ಪಟ್ಟರಿಸಿ ಬಂತು. ಅದು ಇನ್ನೂ ನಿಂತಿಲ್ಲ. "

" ಹೋಗು ಮಗು, ಅನ್ನವಾಗಿದ್ದೀತು ನೋಡಿ ಕೆಳಗೆ ಇಳಿಸು. " ಎಂದು ತಾಯಿ ಕುಗ್ಗಿದ ದನಿಯಲ್ಲಿ ನುಡಿದಳು. ಮಾರನೆಯ ದಿನ ವೇಣು ಅತ್ತೆಯ ಮನೆಗೆ ಹೋದಳು. ನಮಗೆಲ್ಲ ಕೆಡುಕೆನಿಸಿತು. ಆ ಶ್ರೀಖಂಡದ ವಡೆಗಳು ಇನ್ನೂ ನನ್ನ ಜ್ಞಾಪಕಕ್ಕೆ ಬರುತ್ತವೆ. ವೇಣುವಿನ ತಾಯಿ ಮತ್ತು ನನ್ನ ತಾಯಿ ಇಬ್ಬರೂ ಹೊರಟು ಹೋದರು. ವೇಣು ಕೂಡ ಬದುಕಿ ಉಳಿಯಲಿಲ್ಲ. ಆದರೆ ಆ ಪ್ರೇಮವು ಅಚ್ಚಳಿಯದೆ ಹಾಗೇ ಇದೆ. ಅದು ಅಮರವಾಗಿದೆ. ಮನುಷ್ಯರು ಸತ್ತು ಹೋದರೂ ಅವರ ಸದ್ಗುಣಗಳು ಯಾವಾಗಲೂ ಬೆಳಗುತ್ತಿರುತ್ತವೆ.

## : : ರಘುಪತಿರಾಘವ ರಾಜಾರಾಮ

ಚಿಕ್ಕಂದಿನಲ್ಲಿ ದೇವರಮೇಲೆ ನನಗೆ ಅಪಾರವಾದ ಭಕ್ತಿಯಿದ್ದಿತು. ಬೇರೆ ಬೇರೆ ಗ್ರಂಥಗಳನ್ನು ಓದಿ ಹೃದಯದಲ್ಲಿ ಭಕ್ತಿಯ ಬೀಜಾರೋಪಣವನ್ನು ಮಾಡಿದ್ದೆ. ಅದು ದಿವಸ ದಿವಸಕ್ಕೂ ಹೆಚ್ಚುತ್ತಿತ್ತು. ಶಾಲೆಯ ಮಕ್ಕಳು ನಮ್ಮ ಮನೆಗೆ ಬರುತ್ತಿದ್ದರು. ನಾನು ಅವರಿಗೆ ದೇವ-ದೇವತೆಗಳ, ಸಾಧು ಸಂತರ, ಸತ್ಕಥೆಗಳನ್ನು ಹೇಳುತ್ತಿದ್ದೆ. ನಾನು ಮನೆಯಲ್ಲಿ ಆಟದ ಒಂದು ದೇವರಮನೆಯನ್ನು ಕಟ್ಟಿದ್ದೆ. ಅದಕ್ಕೊಂದು ಚಿಕ್ಕ ಮಂಟಪವನ್ನೂ ಕಟ್ಟಿದ್ದೆ. ಅದನ್ನು ಬಣ್ಣದ ಕಾಗದ ಮತ್ತು ಬೇಗಡಿಗಳಿಂದ ಅಲಂಕರಿಸಿದ್ದೆ. ಈ ನನ್ನ ದೇವಸ್ಥಾನದಲ್ಲಿ ಸುಂದರವಾದ ಸಾಲಿಗ್ರಾಮವನ್ನು ಇಟ್ಟಿದ್ದೆ. ಅದು ಒಳ್ಳೇ ತೇಜಸ್ವಿಯಾಗಿದ್ದಿತು. ಚಂದ್ರಹಾಸನಂತೆ ನಾನೂ ಅದನ್ನು ಯಾವಾಗಲೂ ಬಾಯಿಯಲ್ಲಿರಿಸಿಕೊಳ್ಳಬೇಕೆಂದೆನ್ನಿಸುತ್ತಿತ್ತು.

ಭಾನುವಾರದ ರಜೆಯಲ್ಲಿ ನಾವೂ ನಮ್ಮ ಮಿತ್ರರೂ ಮನದುಂಬಿ ಭಜನೆ ಮಾಡುತ್ತಿದ್ದೆವು. ಕೆಲವು ಸಲ ಕಥೆ-ಕೀರ್ತನೆಗಳನ್ನೂ ನಡೆಸುತ್ತಿದ್ದೆವು. ನಮ್ಮ ಬಳಿಯಲ್ಲಿದ್ದ ವಾದ್ಯ ಮೃದಂಗಗಳಾವುವು ಬಲ್ಲಿರಾ ? ಮನೆಯಲ್ಲಿಯ ತೆರವಾದ ಡಬ್ಬಗಳು! ಅವನ್ನೇ ನಾವು ಅಬ್ಬರದಿಂದ ಬಾರಿಸುತ್ತಿದ್ದೆವು. ಭಜನೆ ಮಾಡುತ್ತ ಕುಣಿಯುತ್ತಿದ್ದೆವು. ನಮ್ಮ ಭಜನೆಯಿಂದ ಓಣಿಯೆಲ್ಲ ತತ್ತರಿಸಿ ಹೋಗುತ್ತಿತ್ತು.

ತುಕಾರಾಮ, ನಾಮದೇವ ಮೊದಲಾದ ಸಂತರ ಭಜನೆಗಳನ್ನೂ ಭಕ್ತಿವಿಜಯದಲ್ಲಿಯ ಬೇರೆ ಬೇರೆ ಸುಂದರ ಪದ್ಯಗಳನ್ನೂ ಕೈಮುಗಿದು ತಾಲಬದ್ಧವಾಗಿ ಹಾಡುತ್ತಿದ್ದೆವು. ಈಗಲೂ ಆ ಭಜನೆಯ ಗೀತಗಳು ನನ್ನ ನೆನಪಿಗೆ ಬಂದು ಹೃದಯ ಉಕ್ಕಿ ಬರುತ್ತದೆ.

ನಾವು ಆಗ ತೀರ ಚಿಕ್ಕವರು. ನಾನು ಮರಾಠೀ ಐದನೆಯ ಇಯತ್ತೆಯಲ್ಲಿದ್ದೆ. ಹತ್ತು-ಹನ್ನೊಂದು ವರ್ಷದವನಿರಬಹುದು. ಆದರೆ ಭಕ್ತಿ-ಭಾವಗಳಿಂದ ನಾನು ಇಂದಿಗಿಂತಲೂ ಅಂದು ದೊಡ್ಡವನಾಗಿದ್ದೆ. ಆಗ ನನಗೆ ಇಲ್ಲದ

ಸಂದೇಹ-ಸಂಶಯಗಳು ಬರುತ್ತಿರಲಿಲ್ಲ. ಮುಗ್ಧವಾದ, ಶ್ರದ್ಧೆಪೂರಿತವಾದ ಮತ್ತು ಭಾವಮಯವಾದ ಭಕ್ತಿ! ನೀರು ಸಹ ತೆಗೆದುಕೊಳ್ಳದ ಏಕಾದಶಿಯನ್ನು ಮಾಡುತ್ತಿದ್ದೆ. ಪರಮೇಶ್ವರನ ಜಪವನ್ನೂ, ಕಾರ್ತಿಕ-ಮಾಘಸ್ನಾನಾದಿಗಳನ್ನೂ ಮಾಡುತ್ತಿದ್ದೆ. ಕಥಾಸಾರಾಮೃತವೆಂಬ ಹೊತ್ತಿಗೆಯಲ್ಲಿ ಸ್ನಾನದ ಮಹತ್ವವನ್ನು ಹೇಳಿದ್ದಾರೆ. ಸ್ನಾನವನ್ನು ಮಾಡಿ ಚಂಡಿಕೆಯನ್ನು ಬಲಗಡೆಯಿಂದ ಹಿಂಡಿದರೆ ಅಮೃತವಾಗುತ್ತದೆಂದು ಆ ಪುಸ್ತಕದಲ್ಲಿ ಬರೆದಿದ್ದಾರೆ. ರಾಜಪುತ್ರನೊಬ್ಬನ ಬಾಯಲ್ಲಿ ಒಬ್ಬ ಬ್ರಾಹ್ಮಣನು ಚಂಡಿಕೆಯನ್ನು ಆ ಪ್ರಕಾರ ಹಿಂಡಿ ಎಬ್ಬಿಸಿದನಂತೆ ಆ ಕಥೆ ಹೇಳುತ್ತದೆ. ನಾನು ಅದನ್ನು ನಂಬಿದ್ದೆ. ನಮ್ಮ ಊರಲ್ಲಿ ಯಾರೋ ಒಬ್ಬರು ಸತ್ತಿದ್ದರು. ನಾನು ತಾಯಿಯನ್ನು ಕೇಳಿದೆ, "ನಾನು ನಸುಕಿನಲ್ಲಿ ಸ್ನಾನಮಾಡಿ ಬಂದು ಅವನ ಬಾಯಿಯಲ್ಲಿ ನನ್ನ ಚಂಡಿಕೆಯನ್ನು ಬಲಗಡೆಯಿಂದ ಹಿಂಡಿದರೆ ಅವನು ಎದ್ದು ಬಿಡಬಹುದಲ್ಲವೇ?"

ತಾಯಿ ನಕ್ಕು ನುಡಿದಳು, "ಹುಚ್ಚಪ್ಪಾ!"

ಅಂದಿನ ಆ ಮೂಢ ಶ್ರದ್ಧೆ ಒಳಿತಾದದ್ದೋ ಇಂದಿನ ಸಂಶಯ ವೃತ್ತಿ ಸರಿಯಾದದ್ದೋ ಹೇಳಲಾರೆ. ಆ ಮಾತಿರಲಿ. ನಾನು ಇಂದು ಹೇಳುವ ಕಥೆಯೇ ಬೇರೆ.

ಚಾತುರ್ಮಾಸದಲ್ಲಿ ನಮ್ಮೂರ ಗಣಪತಿ ದೇವಸ್ಥಾನದಲ್ಲಿ ನಿತ್ಯವೂ ಪುರಾಣ ನಡೆಯುತ್ತದೆ. ಯಾವನೊಬ್ಬ ಶಾಸ್ತ್ರಿ ಬಂದು ನಮ್ಮೂರಲ್ಲಿ ನಾಲ್ಕು ತಿಂಗಳು ಬೀಡು ಬಿಡುತ್ತಿದ್ದ. ಸಾಯಂಕಾಲ ನಾಲ್ಕು ಗಂಟೆಗೆ ಪುರಾಣ ಆರಂಭವಾಗುವದು. ನಮ್ಮ ಮನೆಯಿಂದ ಗಣಪತಿ ದೇವಸ್ಥಾನ ಸಮೀಪದಲ್ಲಿಯೇ ಇತ್ತು. ಆಗ ನಾವು ಅಜ್ಜನ ಮನೆಯಲ್ಲಿದ್ದೆವು. ದೇವಸ್ಥಾನದಲ್ಲಿ ಗಟ್ಟಿಯಾಗಿ ಪುರಾಣ ಹೇಳುತ್ತಿದ್ದರೆ ಅದು ನಮ್ಮ ಮನೆಯಲ್ಲಿಯೇ ಕೇಳಿಸುತ್ತಿತ್ತು. ಪುರಾಣ ಕೇಳಲು ಹತ್ತಿಪ್ಪತ್ತು ಜನ ಗಂಡಸರು, ಹತ್ತಿಪ್ಪತ್ತು ಜನ ಹೆಂಗಸರು ಕುಳಿತಿರುತ್ತಿದ್ದರು.

ಅದೊಂದು ಭಾನುವಾರವಾಗಿತ್ತು. ದೇವಸ್ಥಾನದಲ್ಲಿ ಪುರಾಣ ಆರಂಭವಾಗಿತ್ತು. ತಾಯಿ ಪುರಾಣ ಕೇಳಲು ಹೋಗಿದ್ದಳು. ಅವಳು ಅಲ್ಲಿ ಬಹಳ ಹೊತ್ತು ಕೂಡುತ್ತಿದ್ದಿಲ್ಲ. ತುಸು ಹೊತ್ತು ಕುಳಿತು ದೇವರ ದರ್ಶನ ಮಾಡಿಕೊಂಡು ಹಿಂತಿರುಗುತ್ತಿದ್ದಳು. ಮನೆಯಲ್ಲಿ ಯಾರೂ ಇದ್ದಿಲ್ಲ. ನಾವು ಹುಡು

ಗರು ಕಲಿತಿದ್ದೆವು. ಭಜನೆ ಮಾಡುವದನ್ನು ಗೊತ್ತುಮಾಡಿ, ಡಬ್ಬಗಳನ್ನೂ, ತಾಲಗಳನ್ನೂ ತೆಗೆದುಕೊಂಡು ಅವುಗಳನ್ನು ಬಾರಿಸುತ್ತ ಭಜನೆಯನ್ನಾರಂಭಿಸಿದೆವು. ನಾವು ಕುಣಿಯತೊಡಗಿದೆವು, ಹಾಡತೊಡಗಿದೆವು; ಆ ಡಬ್ಬದ ಶಬ್ದ ನಮಗೆ ಮಧುರವೆನಿಸಿತ್ತು. ಚಿಕ್ಕವರಿಗೆ ಎಲ್ಲ ಶಬ್ದಗಳೂ ಸಂಗೀತಮಯವಾಗಿಯೇ ಕಾಣುತ್ತವೆ. ಹುಡುಗರಿಗೆ ಡಬ್ಬ ಬಾರಿಸುವದರಲ್ಲಿ ಆನಂದವಾಗುತ್ತಿದ್ದರೆ ದೊಡ್ಡವರಿಗೆ ಅದು ಗಲಾಟೆಯೆಂದು ಅನಿಸುತ್ತದೆ.

'ಶ್ರೀರಾಮ ಜಯರಾಮ ಜಯಜಯ ರಾಮ್'

ಎಂಬ ಘೋಷವು ಎಲ್ಲೆಡೆಯಲ್ಲಿಯೂ ನಿನಾದಿಸುತ್ತಿದ್ದಿತು. ನಾವು ತನ್ಮಯರಾಗಿ ಕುಣಿಯುತ್ತಿದ್ದೆವು.

"ಹರಿಗುಣ ಗಾವತ ನಾಚೂಂಗೀ ಮೈತೋ ।
ಪ್ರಭುಗುಣ ಗಾವತ ನಾಚೂಂಗೀ ॥"

ನಮ್ಮ ಕೋಲಾಹಲದಿಂದ ದೇವಸ್ಥಾನದಲ್ಲಿಯ ಪುರಾಣಕ್ಕೆ ತೊಂದರೆಯುಂಟಾಯಿತು. ಶಾಸ್ತ್ರಿಗಳ ಪುರಾಣ ಯಾರಿಗೂ ಕೇಳಿಸದಂತಾಯಿತು. ಕೂಡಿದ ಜನ ಮನಬಂದಂತೆ ಆಡಿಕೊಳ್ಳತೊಡಗಿದರು. "ಎಂಥ ಉಡಾಳ ಪೋಕರಿಗಳು? ಇದೆಲ್ಲ ಶ್ಯಾಮನ ಮಂಗಾಟಿಕೆ. ಗುಡಿಯಲ್ಲಿ ಪುರಾಣ ನಡೆದದ್ದು ಕೂಡ ಗೊತ್ತಾಗಬಾರದೇ?" "ಮನೆಯ ಜನರಿಗಾದರೂ ಬುದ್ಧಿ ಇರಬೇಡವೇ?" "ಅವರು ಹುಡುಗರನ್ನು ಗದರಿಸಬಾರದೇ?" "ಈಗೀಗ ಹುಡುಗರನ್ನು ಅಟ್ಟಕ್ಕೇರಿಸಿಬಿಡುತ್ತಿದ್ದಾರೆ" ಹೀಗೆ ಒಬ್ಬೊಬ್ಬರೂ ಒಂದೊಂದು ರೀತಿಯಾಗಿ ಆಡಿಕೊಳ್ಳತೊಡಗಿದ್ದರು. ಸುತ್ತುಮುತ್ತಲಿನ ಪ್ರಪಂಚದ ಪರವೆಯೇ ನಮಗಿರಲಿಲ್ಲ. ಭಜನೆಯಲ್ಲಿ ಲೀನರಾಗಿ ಹೋಗಿದ್ದೆವು.

ಕೂಡಿದ ಜನರಲ್ಲೊಬ್ಬ ದೇವಸ್ಥಾನದ ಪೂಜಾರಿಯನ್ನು ಕರೆದು ಹೇಳಿದನು, "ಆ ಶ್ಯಾಮನ ಮನೆಗೆ ಹೋಗಿ ಗಲಾಟೆ ನಿಲ್ಲಿಸಲು ಹೇಳು. ಪುರಾಣಕ್ಕೆ ಅಡ್ಡಿಯಾಗುತ್ತಿದೆಯೆಂದು ಹೇಳು." ಆ ಪೂಜಾರಿ ಬರುವ ಮೊದಲೇ ನಮ್ಮ ತಾಯಿ ಇದನ್ನೆಲ್ಲ ಕೇಳಿ ಅವಸರದಿಂದ ಮನೆಗೆ ಬಂದಿದ್ದಳು. ಆ ಚುಚ್ಚು ಮಾತುಗಳು ಅವಳಿಗೆ ನೋವನ್ನುಂಟು ಮಾಡಿದ್ದವು.

ತಾಯಿ ನಮ್ಮ ಹತ್ತಿರ ಬಂದು ನಿಂತುಕೊಂಡದ್ದರ ಪ್ರಜ್ಞೆಕೂಡ ನಮಗೆ ಇರಲಿಲ್ಲ. ಅವಳೆದುರಿನಲ್ಲಿಯೇ ನಾವು ಕುಣಿಯುತ್ತಿದ್ದೆವು. ಕೊನೆಗೆ ತಾಯಿ

ಸಿಟ್ಟಿನಿಂದ ನುಡಿದಳು, "ಶ್ಯಾಮಾ," ಅವಳ ಆ ಸ್ವರದಲ್ಲಿ ಕ್ರೋಧ ತುಂಬಿದ್ದಿತು. ನಾನು ಬೆಚ್ಚಿಬಿದ್ದೆ. ಭಜನೆ ನಿಂತು ಹೋಯಿತು. ತಾಳ ಮತ್ತು ಡಬ್ಬದ ಮೃದಂಗಗಳು ಮೌನವಾದವು. ತಾಯಿ ಕೆಂಗಣ್ಣಿನಿಂದ ನೋಡುತ್ತಿದ್ದಳು.

"ಏನಾಯಿತಮ್ಮ?" ನಾನು ಕೇಳಿದೆ.

"ಇಷ್ಟೊಂದು ಗೊಂದಲ ಹಾಕಲಿಕ್ಕೆ ನಾಚಿಕೆ ಬರುವದಿಲ್ಲವೇ?"

"ಅಮ್ಮಾ, ಇದೇನು ಗೊಂದಲವೇ? ನಾವು ನಮ್ಮ ದೇವರ ಮುಂದೆ ಭಜನೆ ಮಾಡುತ್ತಿದ್ದೇವೆ ನೀನೇ ಈ ಸಾಲಿಗ್ರಾಮವನ್ನು ಕೊಟ್ಟಿರಲಿಲ್ಲವೇ? ನೋಡು ಎಷ್ಟು ಅಂದವಾಗಿ ಕಾಣುತ್ತದೆ! ಹೂವಿನ ಗೊಂಡೆಯನ್ನು ಮಾಡಿ ಅದಕ್ಕೆ ಮುಕುಟವನ್ನು ಹಾಕಿದ್ದೇವೆ. ನಿನಗೆ ಕೋಪ ಬಂದಿತೇ?" ನಾನು ನಮ್ರನಾಗಿ ಕೇಳಿದೆ. ಅಷ್ಟರಲ್ಲಿ ಭಿಕ್ಕೂ ಪೂಜಾರಿಯೂ ಬಂದು ಹೇಳಿದ, "ಶ್ಯಾಮಾ, ಏನು ಗಲಾಟೆ ನಡೆಸಿದ್ದೀರೋ? ದೇವಸ್ಥಾನದಲ್ಲಿ ಯಾರಿಗೂ ಪುರಾಣ ಸಹ ಕೇಳಿಸುವದಿಲ್ಲ. ನಿಲ್ಲಿಸಿರಿ ನಿಮ್ಮ ಭಜನೆ."

"ನಾವು ನಿಲ್ಲಿಸುವದಿಲ್ಲ ಹೋಗು. ಅಲ್ಲಿ ಪುರಾಣ ನಡೆದಿದ್ದರೆ ಇಲ್ಲಿ ಭಜನೆ ನಡೆದಿದೆ." ನನ್ನ ಗೆಳೆಯನೊಬ್ಬ ಹೇಳಿದ.

"ಶ್ಯಾಮಾ, ತುಸು ಮೆಲ್ಲಗೆ ಭಜನೆ ಮಾಡಿರಿ. ಈ ಡಬ್ಬೆ ತಾಳಗಳ ಸದ್ದೇಕೆ? ಗಟ್ಟಿಯಾಗಿ ಕೂಗಿದರೇನು ದೇವರು ಕಾಣಿಸಿಕೊಳ್ಳುತ್ತಾನೆಯೇ? ಹೀಗೆ ಗದ್ದಲ ಮಾಡಬಾರದು. ಪರರಿಗೆ ತೊಂದರೆ ಕೊಟ್ಟರೆ ಅದೆಂಥ ಭಜನೆ?" ಶಾಂತ ರೀತಿಯಿಂದ ತಾಯಿ ನುಡಿದಳು.

"ಸಾಧು-ಸಂತರು ಕೂಡ ತಾಳ-ತಂಬೂರಿ ಬಾರಿಸುತ್ತ ಭಜನೆಮಾಡುವುದಿಲ್ಲವೇ?" ನಾನು ಕೇಳಿದೆ.

"ಬೇಕೆಂತಲೇ ಬೇರೆಯವರಿಗೆ ತೊಂದರೆ ಕೊಡಬೇಕೆಂದು ಅವರು ಬಾರಿಸುವದಿಲ್ಲ. ಹೆರವರಿಗೆ ತೊಂದರೆಯಾಗುವದೆಂದು ಕಂಡಿದ್ದರೆ ಅವರು ಭಜನೆ ನಿಲ್ಲಿಸಬಹುದಾಗಿತ್ತು. ಶ್ಯಾಮಾ, ನಿನಗೆ ದೇವರ ನಾಮಸ್ಮರಣೆ ಮೆಚ್ಚುಗೆಯೋ ಏನು ಬಾರಿಸುವದು ಮೆಚ್ಚುಗೆಯೋ?"

ಬಾರಿಸುವದರಿಂದ ಭಜನೆಗೆ ಕಳೆ ಏರುತ್ತದೆ. ಬರೀ ನಾಮಸ್ಮರಣೆಯಿಂದ ಬೇಸರ ಬರಬಹುದು."

" ಮೆಲ್ಲಮೆಲ್ಲನೆ ತಾಳ ಬಾರಿಸಿದರಾಯಿತು. ಅದರಿಂದಾಗಿ ತಡೆದು ನಿಲ್ಲ ಬಾರದು. ಬಾರಿಸುವದೇ ಮಹತ್ವದ ಮಾತಲ್ಲ. ದೇವರ ನಾಮಸ್ಮರಣೆಗಿಂತ ಈ ಗಲಾಟೆಯೇ ನಿಮಗೆ ಹೆಚ್ಚಿನದೇನು ? ಶ್ಯಾಮಾ, ಯಾವ ಪೂಜೆಯಿಂದ ಪರರಿಗೆ ಪೀಡೆಯಾಗುವದೋ ಅದೆಂಥ ಪೂಜೆ ? ನಾವು ಮಾಡುವ ಪೂಜೆ ಯಿಂದ ಬೇರೆಯವರಿಗೆ ತಡೆಯುಂಟಾಗಬಾರದು. ನಮ್ಮ ಪ್ರಾರ್ಥನೆಯಿಂದ ಬೇರೆಯವರ ಪ್ರಾರ್ಥನೆಗೆ ವಿಘ್ನವುಂಟಾಗಬಾರದು. ನೀವು ನಿಧಾನವಾಗಿ ಭಜನೆ ಮಾಡಿದರೆ ಇತ್ತ ನಿಮ್ಮ ಕೆಲಸವೂ ಸಾಗುವದು. ಅತ್ತ ಪುರಾಣವೂ ಸಾಗುವದು. ಭಿಕ್ಕೂ, ನೀನು ಹೋಗಿನ್ನು. ಇವರೇನೂ ಗಲಾಟೆ ಮಾಡಲಾ ರರು. " ತಾಯಿ ಪೂಜಾರಿಯನ್ನು ಕಳಿಸಿಕೊಟ್ಟಳು.

ನಮ್ಮ ಗೆಳೆಯರಲ್ಲಿ ಚರ್ಚೆ—ವಿಚರ್ಚೆಗಳಿಗೆ ಆರಂಭವಾಯಿತು. " ದೊಡ್ಡ ಮನುಷ್ಯರ ಹಾಗೆ ಒಳ್ಳೇ ಬುದ್ಧಿವಾದ ಹೇಳಲಿಕ್ಕೆ ಬಂದಿದ್ದಾನೆ. ಅವರ ಪುರಾಣಕ್ಕಿಂತ ನಮ್ಮ ಭಜನೆಯೇ ದೇವರಿಗೆ ಮೆಚ್ಚುವದು. ಪುರಾಣ ಕೇಳುವದು, ಪುರಾಣ ಬಿಟ್ಟ ಕೂಡಲೆ ಊರ ಉಸಾಬರಿ ಮಾಡುತ್ತ ಕೂಡು ವದು ! " ಇತ್ಯಾದಿಯಾಗಿ ನಾವು ಆಡತೊಡಗಿದೆವು. ಆದರೆ ಮುಂದೇನು ಮಾಡುವದೆಂಬುದೇ ತೋಚದಾಯಿತು. ಕೊನೆಗೆ ನಾನೆಂದೆ, " ನಮ್ಮದು ತಪ್ಪಾಗಿದೆ. ಮೆಲ್ಲಗೆ ಭಜನೆ ಮಾಡೋಣ. ತಾಳಗಳನ್ನು ಮಾತ್ರ ನಿಧಾನ ವಾಗಿ ಬಾರಿಸೋಣ. ಗಡಚಿಕ್ಕುವಂತೆ ಬಾರಿಸುವದರಲ್ಲೇನು ಹುರುಳಿದೆ ? "

" ಶ್ಯಾಮಾ, ನೀನು ಅಂಜುಗುಳಿಯಾಗಿದ್ದೀ. ನಮಗಿದು ಸರಿಬರುವ ದಿಲ್ಲ. " ಬಾಪೂ ಹೇಳಿದ.

" ಅಂಜುವ ಮಾತೇನಿದೆ ಇದರಲ್ಲಿ ? ವಿಚಾರಪೂರ್ವಕವಾಗಿ ನಡೆಯುವ ದರಲ್ಲಿ ಜಾಣತನವಿದೆ. ಅವಿಚಾರತನದಲ್ಲಿ ಪರಾಕ್ರಮವಿದೆಯೇನು ? "

ನನ್ನ ಮಾತಿನಿಂದ ಸಿಟ್ಟಿಗೆದ್ದು ಗೆಳೆಯರೆಲ್ಲ ಹೊರಟುಹೋದರು. ಅವ ರಿಗೆ ರಾಮ ನಾಮಕ್ಕಿಂತಲೂ ಡಬ್ಬ ಬಾರಿಸುವದೇ ರುಚಿಸಿತ್ತು. ನಾನೊಬ್ಬನೇ ಉಳಿದೆ. ನಾನು ಅಂಜುಗುಳಿಯಾಗಿದ್ದೆನೇ ? ನನಗೊಂದೂ ಅರ್ಥವಾಗಲಿಲ್ಲ. ಅಳುತ್ತ ದೇವರ ಮುಂದೆ " ರಘುಪತಿ ರಾಘವ ರಾಜಾರಾಮ " ಎನ್ನುತ್ತ ಕುಳಿತುಕೊಂಡೆ.

ಚಿಕ್ಕಂದಿನಲ್ಲಿ ನನ್ನನ್ನು ಗೆಳೆಯರು ಬಿಟ್ಟುಹೋದಂತೆಯೇ ಈಗ ದೊಡ್ಡವ

ನಾದ ಮೇಲೂ ನನ್ನ ಗೆಳೆಯರು ನನ್ನಿಂದ ದೂರಾಗಬಹುದು. ನಾನು ಏಕಾಕಿಯಾಗಬಹುದು. ಅಂದಿನಂತೆ ಈಗಲೂ ಅಳುತ್ತ ರಾಮ ರಾಮ ಎನ್ನುತ್ತ ಕೂಡಬಹುದು. ರವೀಂದ್ರನಾಥ ಟಾಗೋರ್‌ರು ಹೇಳಿದ್ದಾರೆ:

"ನೀನು ಒಬ್ಬಂಟಿಗನಾಗಿ ಹೋಗಬೇಕಾದೀತು ಹೋಗು, ಕಂದೀಲು ಹಿಡಿದುಕೊಂಡು ನಿನ್ನಷ್ಟಕ್ಕೆ ಹೋಗು. ಜನರ ಟೀಕೆಯೆಂಬ ಸುಂಟರಗಾಳಿ ಬೀಸಿ ನಿನ್ನ ಕೈಯೊಳಗಿನ ದೀಪ ನಂದಬಹುದು. ಮತ್ತೆ ಅದನ್ನು ಹಚ್ಚಿಕೊಂಡು ಮುಂದೆ ಹೆಜ್ಜೆ ಹಾಕು. ನೀನೊಬ್ಬನೇ ಹೋಗಬೇಕಾದೀತು."

**ರಾತ್ರಿ : ೧೬**

## : : ತೀರ್ಥಯಾತ್ರೆಗಾಗಿ ಪಲಾಯನ

ಸಿಂಹಸ್ಥದಲ್ಲಿ ನಾಶಿಕದಲ್ಲಿಯೂ ಕನ್ಯಾಗತದಲ್ಲಿ ವಾಯಿಯಲ್ಲಿಯೂ ಪರ್ವಕಾಲ ಬರುವದುಂಟು. ಆ ಕಾಲದಲ್ಲಿ ಉತ್ತರ ಕಡೆಯ ಗಂಗೆಯು, ದಕ್ಷಿಣದ ಕಡೆಯ ಗೋದಾವರಿ ಮತ್ತು ಕೃಷ್ಣೆಯರನ್ನು ಭೆಟ್ಟಿಯಾಗಲಿಕ್ಕೆ ಬರುತ್ತಾಳೆಂಬ ಪವಿತ್ರ ಭಾವನೆಯಿದೆ. ನಮ್ಮ ಹಿಂದುಸ್ತಾನದಲ್ಲಿ ನಿಸರ್ಗಕ್ಕೆ ಕೂಡ ಪವಿತ್ರ ಭಾವನೆಯನ್ನು ಕೊಡಲಾಗಿದೆ. ನಿಸರ್ಗಕ್ಕೂ ಮಾನವೀ ಕುಟುಂಬದಲ್ಲಿ ಸ್ಥಾನ ಕೊಡಲಾಗಿದೆ. ದೂರದೂರದ ನದಿಗಳು ತಮ್ಮ ಏಕತ್ವವನ್ನು ಅರಿತು ಒಂದಕ್ಕೊಂದು ಭೆಟ್ಟಿಯಾಗಲಿಕ್ಕೆ ಬರುತ್ತವೆ. ಆದರೆ ಮನುಷ್ಯರೇಕೆ ತಮ್ಮೊಳಗಿನ ಭೇದಭಾವಗಳನ್ನು ಮರೆಯಬಾರದು ? ಇವನು ಮರಾಟಿಗನು, ಇವನು ಕನ್ನಡಿಗನು, ಅವನು ಗುಜರಾತಿ, ಅವನು ಪಂಜಾಬಿ ಎಂದು ಮೊದಲಾಗಿ ನಮ್ಮ ಸಾಮಾನ್ಯ ವ್ಯವಹಾರದಲ್ಲಿಯೂ ಇಷ್ಟೇಕೆ ಪ್ರಾಂತೀಯತೆ? ನಮ್ಮ ಘನವಂತರಾದ ಪೂರ್ವಜರು ಭಾರತದ ಐಕ್ಯಸಾಧನೆಗಾಗಿ ವಿವಿಧ ರೀತಿಯಿಂದ ಪ್ರಯತ್ನಪಟ್ಟಿದ್ದಾರೆ. ಸ್ವಂತದ ಅಸ್ತಿತ್ವವನ್ನು ಕಾಪಾಡಿಕೊಂಡೂ ಮಧುರ ಮಿಲನವನ್ನು ಸಾಧಿಸಲು ಸಾಧ್ಯವಿದೆ. ಗಂಗೆಯು ಸಮುದ್ರಕ್ಕೆ ಕೂಡಿಕೊಂಡಿದ್ದರೂ ತನ್ನ ಅಸ್ತಿತ್ವವನ್ನು ಕಾಪಾಡಿಕೊಂಡಿದ್ದಾಳೆ. ಭೇದಗಳಲ್ಲಿಯೂ ಐಕ್ಯತೆಯನ್ನು ಕಾಣುವ ಉದಾರದೃಷ್ಟಿ ನಮ್ಮ ಪೂರ್ವಜರದಾಗಿತ್ತು.

ಆ ವರುಷ ಕನ್ಯಾಗತವಿದ್ದುದರಿಂದ ವಾಯೀ ಕ್ಷೇತ್ರಕ್ಕೆ ಸಾವಿರಾರು ಸ್ತ್ರೀ ಪುರುಷರು ಹೋಗುತ್ತಿದ್ದರು. ನಮ್ಮ ಪಾಲಗಡ ಊರಿನಿಂದ ವಾಯಿ ಬಹಳ ದೂರವಿದ್ದರೂ ಎತ್ತಿನಬಂಡಿಗಳನ್ನು ಹೂಡಿಕೊಂಡು ಎಷ್ಟೋ ಜನರು ಹೋಗುತ್ತಿದ್ದರು. ನಮ್ಮ ಕಕ್ಕನ ಮನೆಯವರು, ಮಾವ, ಅವನ ಹೆಂಡತಿ, ಮತ್ತು ಊರ ಕೆಲವು ಜನರು ಸೇರಿ ಹೊರಡಬೇಕೆಂದು ಸಿದ್ಧತೆ ನಡೆಸಿದ್ದರು. ಒಮ್ಮೆಲೆ ಹತ್ತುಹನ್ನೆರಡು ಗಾಡಿಹೊರಟಿದ್ದವು. ಪಾಗಡಲದಿಂದ ಖೇಡಕ್ಕೂ, ಖೇಡದಿಂದ ಚಿಪಳೂಣಕ್ಕೂ ಈ ರೀತಿ ಅಲ್ಲಲ್ಲಿ ಬೀಡು ಬಿಡುತ್ತ ಆ ಗಾಡಿ ಹೋಗತಕ್ಕವಿದ್ದವು ಅಲ್ಲಲ್ಲಿ ಅಡವಿಯಲ್ಲಿ ಇಳಿದುಕೊಂಡು, ಹೊಳೆಯ ದಂಡೆಯ ಮೇಲೆ ಅನ್ನ-ಬೇಳೆ ಕುಚ್ಚಿಕೊಂಡು ಉಣ್ಣುವದು, ಮತ್ತೆ ಮುಂದೆ ಸಾಗುವದು, ಹೀಗೆ ಹೋಗಬೇಕಾಗುತ್ತಿತ್ತು. ಇಂಥ ಪ್ರವಾಸದಲ್ಲಿ ಬಹಳ ಆನಂದವಿರುತ್ತದೆ. ಭುರ್ರೆಂದು ಮೋಟಾರಿನಿಂದ ಹೋಗುವದರಿಂದ ನಿಸರ್ಗದೊಡನೆ ನಾವು ಏಕರೂಪರಾಗುವದಿಲ್ಲ. ನಿಮಿಷಾವಲೋಕನದಿಂದ ಸಂತೋಷವೆಲ್ಲಿ ಬರಬೇಕು? ತಾಯಿಯ ತೊಡೆಯ ಮೇಲೆ ಹೊರಳಾಡುವದರಲ್ಲಿ ಮತ್ತು ಕುಳಿತುಕೊಂಡು ಆಟವಾಡುವದರಲ್ಲಿ ಇರುವ ಸೌಖ್ಯದ ವರ್ಣನೆಯನ್ನು ಮಾಡುವದು ಸಾಧ್ಯವಿದೆಯೇ? ನಿಸರ್ಗವೂ ನಮ್ಮ ತಾಯಿ! ಆ ಮಾತೆಯನ್ನು ಬರಿ ನಿಟ್ಟಿಸಿ ಹೋದಲ್ಲಿ ಪ್ರಯೋಜನವೇನು? ಅವಳ ಹತ್ತಿರ ತಾಸುಗಟ್ಟಲೆ ಇರಬೇಕು. ಈ ಎತ್ತಿನ ಬಂಡಿಯ ಪ್ರವಾಸದಲ್ಲಿ ತುಂಬ ಸ್ವಾರಸ್ಯವಿರುತ್ತದೆ. ರಾತ್ರಿಯ ಹೊತ್ತಿನಲ್ಲಿ ಇನ್ನೂ ಹೆಚ್ಚಿನ ಆನಂದ. ಪ್ರಶಾಂತ ಕಾಲ. ಗಿಡಗಳ ಮಧ್ಯದಿಂದ ಮೇಲಿನ ಚಂದ್ರ-ತಾರೆಯರು ಆಗಾಗ್ಗೆ ಇಣಿಕಿ ನೋಡುತ್ತಾರೆ. ರಾತ್ರಿ ಸಮಯದಲ್ಲಿ ಎತ್ತಿನ ಕೊರಳೊಳಗಿನ ಗಂಟೆಯ ಸಪ್ಪಳವಾದರೂ ಎಷ್ಟು ಮಧುರ! ದಾರಿಯ ಮಧ್ಯದಲ್ಲಿಯೇ ಹುಲಿ ಬರುತ್ತಿರಬೇಕು, ಆಗ ಅದರ ನಿಗಿನಿಗಿ ಕೆಂಡದಂತಹ ಕಣ್ಣುಗಳು ಹೊಳೆಯುತ್ತವೆ. ಕೇಕೆಹೊಡೆದು ಅದನ್ನು ಓಡಿಸಿ ಗಾಡಿಗಳು ಮತ್ತೆ ಸಾಗಬೇಕು. ಇವೆಲ್ಲ ಸುಖಾನುಭವಗಳು ಗಾಡಿಯ ಪ್ರವಾಸದಿಂದ ಲಭಿಸುತ್ತವೆ.

ಸಣ್ಣವನಿದ್ದಾಗ ನನ್ನಲ್ಲಿ ಭಕ್ತಿಯು ಬಹಳ ಇದ್ದುದರಿಂದ ಎಲ್ಲರ ಜೊತೆಗೆ ನನಗೂ ವಾಯಿಗೆ ಹೋಗಬೇಕೆನ್ನಿಸಿತು. ನಾನು ತಾಯಿಗೆ ದುಂಬಾಲ ಬಿದ್ದೆ. ಆದರೆ ಯಾರೂ ನನ್ನ ಮಾತನ್ನು ಗಮನಿಸಲಿಲ್ಲ. ನಾನು ಬಹಳ ನೊಂದು

ಕೊಂಡೆ. ತಾಯಿಗೆ ಅಂಗಲಾಚಿ ಕೇಳಿಕೊಂಡೆ, "ಅಮ್ಮಾ, ನನಗೆ ಹೋಗಲ ಪ್ಪಣೆ ಕೊಡು. ನಾನು ದಾರಿಯಲ್ಲಿ ಹಟ ಮಾಡುವದಿಲ್ಲ. ಆಳವಾದ ನೀರಿನಲ್ಲಿ ಹೋಗುವದಿಲ್ಲ. ಅಜ್ಜ ಹೇಳಿದಂತೆ ಕೇಳಿಕೊಂಡು ಇರುತ್ತೇನೆ. ನೀನು ಭಾವೂ ಅಣ್ಣನಿಗೆ ತಿಳಿಸಿ ಹೇಳು, ಅವರು ಬೇಡವೆನ್ನಲಿಕ್ಕಿಲ್ಲ. ಅಮ್ಮಾ, ಆ ಹೊತ್ತಿಗೆ ಯಲ್ಲಿ............ ಸ್ನಾನದ ಮಹತ್ವವನ್ನು ಹೇಳಿದ್ದಾರೆ. ಅದರಂತೆ ನಾನು ಮಾಘಸ್ನಾನ, ಕಾರ್ತಿಕ ಸ್ನಾನ, ಮತ್ತು ವೈಶಾಖಸ್ನಾನ ಎಲ್ಲವನ್ನೂ ಮಾಡಿದ್ದೇನೆ. ಗಂಗಾಸ್ನಾನಕ್ಕೊಂದು ಅವಕಾಶ ಕಲ್ಪಿಸಿ ಕೊಡು. ನಿನ್ನ ಮಗನು ಪುಣ್ಯಶಾಲಿಯಾಗಬೇಡವೇ ?"

ತಾಯಿ ಹೇಳಿದಳು, "ಶ್ಯಾಮಾ, ಇಂದಿಗೇ ಮುಗಿಯಿತೇನು ? ನೀನು ಬೇಗ ದೊಡ್ಡವನಾಗು. ಆಮೇಲೆ ಹೋಗುವಿಯಂತೆ ಗಂಗೆ-ಗೋದೆಯರ ಭೆಟ್ಟಿಗೆ. ಇಂದು ನಾವು ಬಡವರಾಗಿದ್ದೇವೆ. ಏನೂ ವೆಚ್ಚವಿಲ್ಲೆಂದರೂ ಐದಾರು ರೂಪಾಯಿಗಳನ್ನಾದರೂ ನಿನಗಾಗಿ ಕೊಡಬೇಕಾಗುವದು. ಹಣವನ್ನೆಲ್ಲಿಂದ ತರುವುದು ಮಗನೇ! ತಾಯಿ ತಂದೆಗಳ ಅಪ್ಪಣೆಯೇ ನಿನ್ನ ಕೃಷ್ಣೆ–ನಿನ್ನ ಗಂಗೆ! ಎದುರಿನಲ್ಲಿ ದೇವರು ಬಂದರೂ ಪುಂಡಲೀಕನು ತಾಯಿತಂದೆಗಳ ಪಾದಗಳನ್ನು ಬಿಟ್ಟು ಕದಲಲಿಲ್ಲ. ಅವನು ಅವರ ಕಾಲು ಒತ್ತುತ್ತಲೇ ಕುಳಿತು ಕೊಂಡದ್ದು ನಿಜವಲ್ಲವೇ ?"

"ಅಮ್ಮಾ, ಅದೂ ಸರಿ ! ಆದರೆ ಧೃವನು ತಾಯಿತಂದೆಗಳನ್ನು ಬಿಟ್ಟೇ ನಡೆದನು. ಪುರಾಣದಲ್ಲಿ ಎರಡೂ ಹೇಳಿದ್ದಾರೆ. ತಾಯೀ, ಮುಂದಿನ ಮಾತ ನ್ನಾರು ಬಲ್ಲರು ? ಒಳ್ಳೆಯದನ್ನು ಮಾಡುವ ವಿಚಾರ ಮನಸ್ಸಿನಲ್ಲಿ ಬಂದೊಡನೆ ಮಾಡಿ ಬಿಡಬೇಕು. ಅದಕ್ಕೆ ಹೊತ್ತು-ವೇಳೆ ನೋಡುತ್ತ ಕುಳಿತುಕೊಳ್ಳ ಬಾರದು, ಎಂಬುದಾಗಿ ಸತ್ಯನಾರಾಯಣನ ಕಥೆಯಲ್ಲಿ ಹೇಳಿಲ್ಲವೇ ? ಹೋಗು ತ್ತೇನಮ್ಮಾ. ಕಕ್ಕನಿಗೆ ಹೇಳಿದರೆ ಅವರು ಪುಕ್ಕಟೆಯಾಗಿ ಕರೆದೊಯ್ಯಬಹುದು. ಅವರೇನು ಹಣ ಬೇಡುವರೇ ?"

"ಎಲೋ, ಅವರು ಹಣ ಬೇಡದಿದ್ದರೆ ಅದು ಔದಾರ್ಯ. ಆದರೆ ನೀನು ಹೀಗೆ ಕಂಗಾಲನಂತೆ ಏಕೆ ಹೋಗಬೇಕು ? ಹೆರವರ ಮೇಲೆ ಭಾರವ ನ್ನೇಕೆ ಹೇರಬೇಕು ? ಬೇರೆಯವರ ಆಶ್ರಯದಿಂದ ದೇವರಪೂಜೆ ಮಾಡಿದರೇ ನಂತೆ ! ಬೇರೆಯವರು ಶ್ರಮಪಟ್ಟು ಹಚ್ಚಿ ಬೆಳೆಸಿದ ಗಿಡದಿಂದ ನಾವು ಹೂ

ತಂದು ದೇವರಿಗೆ ಮುಡಿಸಿದರೆ ಏನು ಸಾರ್ಥಕ ? ಸ್ವತಃ ದುಡಿಯಬೇಕು, ಆ ಮೇಲೆ ದೇವರಿಗೆ ಅರ್ಪಿಸಬೇಕು. ಹೋಗುವದಿದ್ದರೆ ನಡೆದುಕೊಂಡು ಹೋಗು. ಇದೆಯೋ ನಿನ್ನಲ್ಲಿ ಆ ಸಾಮರ್ಥ್ಯ ? "

" ಅವ್ವಾ, ನಾನು ದಣಿದು ಬಿಡಬಹುದು. ಆರು ಹರದಾರಿ ಹೇಗೋ ನಡೆಯಬಹುದು. ಆದರೆ ಮುಂದೆ? ಗಾಡಿಗಳು ಹೋಗಿಬಿಡಬಹುದು. ಆ ಮೇಲೆ ನನ್ನ ಜೊತೆಗೆ ಯಾರು ? ನಾನು ಗಾಡಿಯ ಜೊತೆಗೆ ಹೋಗುವದೂ ಕಷ್ಟವೇ ? ತಮ್ಮ ಮನಸ್ಸನ್ನು ಪರೀಕ್ಷಿಸುವದಕ್ಕಾಗಿ ಹೀಗೆ ಹೊರಟಿದ್ದೇನೆಂದು ತಿಳಿದು ಗಾಡಿಯವರು ಕರೆದು ನನ್ನನ್ನು ಗಾಡಿಯಲ್ಲಿ ಕುಳ್ಳಿರಿಸಿಕೊಳ್ಳಬಹುದು. ನಾನು ಗಾಡಿಯ ಜೊತೆಗೆ ಹೊರಟದ್ದು ಗಾಡಿಯವರಿಗೆ ಗೊತ್ತಾಗಬಾರದು. ನನಗಾದರೋ ಒಬ್ಬನೇ ಹೋಗಲಿಕ್ಕೆ ಭಯ. ಮೇಲಾಗಿ ನಲವತ್ತು–ಐವತ್ತು ಹರದಾರಿ ನಡೆದು ಹೋಗುವುದಾದರೂ ಹೇಗೆ ಸಾಧ್ಯ ? "

" ಶ್ಯಾಮಾ, ಬರೀ ಮಾತು ಕೇಳಬೇಕು ! ಧ್ರುವನ ಮಾತೆತ್ತಿ ಬಡಾಯಿ ಕೊಚ್ಚಿದೆ. ಆ ಧ್ರುವನು ಅಂಜುತ್ತಿದ್ದನೇ ? ದೇವರ ಬಳಿ ಹೊರಟವನಿಗೆ ಭಯವೇ ? ಹಾವು, ಹುಲಿ, ಸಿಂಹಗಳೇ ಅವನಿಗೆ ದಾರಿ ತೋರಿಸಬಹುದು. ಅವನನ್ನು ಹರಿದು ತಿನ್ನಲಾರವು. ಅವನಿಗೆ ದಾರಿಯಲ್ಲಿಯೇ ನಿದ್ದೆ ಬಂದು ಮಲಗಿಕೊಂಡರೆ ಅವನ ಮುಖಕ್ಕೆ ಬಿಸಿಲು ತಾಗಬಾರದೆಂದು ನಾಗರಹಾವು ಹೆಡೆ ಎತ್ತಿ ನಿಂತುಕೊಳ್ಳಬಹುದು. ಅವನಿಗೆ ನೀರಡಿಕೆಯಾದರೆ ಪಕ್ಷಿಗಳು ತಮ್ಮ ಕೊಕ್ಕೆಯಲ್ಲಿ ನೀರು ತಂದು ಹಾಕಬಹುದು. ಅವನಿಗೆ ಹಸಿವೆಯಾದರೆ ಆಕಳು ಅವನ ಬಾಯಲ್ಲಿ ಹಾಲು ಕರೆಸಿ ಹೋಗಬಹುದು. ದೇವರ ಬಳಿ ಹೊರಟವನಿಗೆ ಎಲ್ಲರೂ ಗೆಳೆಯರೆ. ಎಲ್ಲರೂ ಸಹಾಯಕರೇ. ಧ್ರುವನಷ್ಟು ಶ್ರದ್ಧೆ ನಿನ್ನಲ್ಲಿದೆಯೇ ? ಅವನ ಭಕ್ತಿ–ಭಾವಗಳೇನು ! ಹುಚ್ಚು ಹುಡುಗ, ಅಳಲಿಕ್ಕೇನಾಯಿತು ? ನಾವು ಸಾಮಾನ್ಯ ಮನುಷ್ಯರು. ನೀನಿನ್ನೂ ಚಿಕ್ಕವ. ಮೇಲಾಗಿ ನಾವು ಬಡವರು. ಹುಚ್ಚುಹಟ ತೊಡಬೇಡ. "

ಏನು ಹೇಳಿದರೂ ನನ್ನ ಮನಸ್ಸಿಗೇನೂ ಸಮಾಧಾನವಾಗಲಿಲ್ಲ. ಇನ್ನೂ ರಾತ್ರಿ ಇರುವಾಗಲೇ ಆ ಜನರೆಲ್ಲ ಯಾತ್ರೆಗೆ ಹೊರಡುವವರಿದ್ದರು. ಗಾಡಿಗಳ ಹಿಂದೆ ತುಸು ದೂರ ದೂರ ಉಳಿದು ಬೆನ್ನುಹತ್ತಬೇಕೆಂದು ಮನಸ್ಸಿನಲ್ಲಿ ಬಂದಿತ್ತು. ನನಗೆ ದಣಿವಾಗಬಹುದು, ಆಯಾಸವಾಗಬಹುದು, ಹಸಿವೆಯಾಗ

ಬಹುದು, ತಿನ್ನಲಿಕ್ಕೇನು ?............ ಹಲವಾರು ಸಂದೇಹಗಳು ಸುಳಿಯುತ್ತಿದ್ದವು. ನೀರು ಕುಡಿಯಬೇಕು, ಗಿಡದ ತೊಪ್ಪಲನ್ನು ಹರಿದು ತಿನ್ನಬೇಕು, ಕುರಿಗಳು ಎಲೆಗಳನ್ನು ತಿಂದು ಜೀವಿಸುವಂತೆ ತಾನೂ ಜೀವಿಸಬೇಕು. ಹುಣಸೆ ಮತ್ತು ಕವಳಿ ಕಂಟಿಯ ಚಿಗುರೆಲೆಗಳನ್ನು ತರೆದುಕೊಂಡು ತಿನ್ನಬೇಕು ಎಂದು ಮನದಲ್ಲಿ ಯೋಚನೆ ನಡೆಸಿದ್ದೆ. ಈ ಯೋಚನೆಗಳ ತಾಕಲಾಟಗಲ್ಲಿ ರಾತ್ರಿ ಯಾವಾಗ ನಿದ್ದೆ ಹತ್ತಿತೋ ತಿಳಿಯದು. ನಾನು ಎದ್ದಾಗ ಎಲ್ಲ ಗಾಡಿಗಳೂ ಹೊರಟು ಹೋಗಿದ್ದವು. ಅಂದು ಶನಿವಾರವಾಗಿದ್ದರಿಂದ ಶಾಲೆಯಿತ್ತು. ನಾನು ಲಗುಬಗೆಯಿಂದ ಎದ್ದು ಶೌಚ, ಮುಖ-ಮಾರ್ಜನಾದಿಗಳನ್ನು ತೀರಿಸಿಕೊಂಡೆ. ಆಮೇಲೆ ಎಂದಿನಂತೆ ಸ್ನಾನ, ಸಂಧ್ಯಾವಂದನೆ ಮತ್ತು ಸೂರ್ಯ ನಮಸ್ಕಾರಗಳನ್ನು ಪೂರೈಸಿಕೊಂಡು ತುಳಸಿಗೆ ನೀರು ಹಾಕಿದೆ. ಪಾಟಿಯ ಗಂಟನ್ನು ತೆಗೆದುಕೊಂಡು ಶಾಲೆಗೆ ಹೊರಟೆ.

ತಾಯಿ ಕೇಳಿದಳು, " ಇಷ್ಟು ಅವಸರವೇಕೆ ? ನಾನು ಒಂದು ದೋಸೆ ಹೊಯ್ದುಕೊಡುತ್ತೇನೆ, ಅದನ್ನು ತಿಂದು ಶಾಲೆಗೆ ಹೋಗು. ಬನ್ಯಾ, ಬಾಪೂ ಇನ್ನೂ ಎಲ್ಲಿ ಹೋಗಿದ್ದಾರೆ ? ತುಸು ತಾಳು. "

ನಾನು ಸಿಟ್ಟಿನಿಂದ ಹೇಳಿದೆ, " ನಿನ್ನ ದೋಸೆ–ಗೀಸೆ ನನಗೆ ಬೇಕಾಗಿಲ್ಲ. ತಿನ್ನಲಿಕ್ಕೆ ಕೊಡುತ್ತೀದಿ ಆದರೆ ಬಾಯಿಗೆ ಹೋಗಗೊಡುವದಿಲ್ಲ. ನನಗೆ ಬಾಯಿಯು ಹಸಿವಿದೆ. ದೋಸೆಯ ಹಸಿವಿಲ್ಲ. ನಾನು ಹಾಗೇ ಶಾಲೆಗೆ ಹೋಗಿ ಕುಳಿತುಕೊಳ್ಳುವೆ. "

ತಾಯಿಯು ಕೋಪದಿಂದಲೇ ನುಡಿದಳು, " ಆಮೇಲೆ ಬಂದರೆ ಕೊಡಲಿಕ್ಕಿಲ್ಲ ನೋಡು. ಎಲ್ಲ ನಿನ್ನ ಮನಸ್ಸಿನಂತೇ ಆಗಬೇಕು ! ದೊಡ್ಡ ರಾಜನೇ ಆಗಿದ್ದೀ ! ರಾಜನ ಹೊಟ್ಟೆಯಲ್ಲಾದರೂ ಹುಟ್ಟಿ ಬರಬೇಕಾಗಿತ್ತು. ಭಿಕ್ಷುಕರ ಮನೆಯಲ್ಲಿ ಹುಟ್ಟಿ ರಾಜನ ಠೀವಿ ಬಯಸಿದರೆ ಹೇಗೆ ಸಾಧ್ಯ ? ಒಳ್ಳೇ ದೋಸೆ ಕೊಡುತ್ತೇನೆಂದರೆ ಬೇಡವಂತೆ. ಮಧ್ಯಾಹ್ನದಲ್ಲಿಯೂ ಊಟ ಮಾಡಬೇಡ. ತಿನ್ನುವ ಹಸಿವೆಯಿಲ್ಲವಂತೆ. ಎಷ್ಟು ದಿವಸ ಉಳಿಯುವಿಯೋ ಅದನ್ನಾದರೂ ನೋಡುತ್ತೇನೆ. ಶ್ಯಾಮಾ, ಹೋಗಬೇಡ ಬಾ ಇಲ್ಲಿ. ತಾಯಿಯ ಮಾತನ್ನು ಮೀರಬಾರದಪ್ಪಾ. "

ನಾನು ಅದಾವುದನ್ನೂ ಕಿವಿಯ ಮೇಲೆ ಹಾಕಿಕೊಳ್ಳದೆ ಸರ್ರನೆ ನಡೆದು

ಬಿಟ್ಟೆ. ಶಾಲೆಯ ಕಡೆಗೆ ಹುಡುಗರ ಸುಳಿದಾಟವಿನ್ನೂ ಇರಲಿಲ್ಲ. ದಾರಿಯಲ್ಲಿರು ಗಣಪತಿಯ ದೇವಸ್ಥಾನವನ್ನು ಹೊಕ್ಕು ನಾನು ದೇವರಿಗೆ ನಮಸ್ಕಾರ ಮಾಡಿ ಬೇಡಿಕೊಂಡೆ, "ದೇವರೇ, ನನ್ನ ನಿಶ್ಚಯವು ಯಶಸ್ವಿಯಾಗಲಿ. ನೀನು ನನ್ನ ಸಹಾಯಕನಾಗಿ ನಿಲ್ಲು." ನಾನು ಶಾಲೆಗೆ ಹೋದಾಗ ಶಾಲೆಯ ಬಾಗಿಲು ಕೂಡ ತೆರೆದಿರಲಿಲ್ಲ. ನಾನು ನನ್ನ ಪಾಟೀ ಗಂಟನ್ನು ಶಾಲೆಯ ಹೊರಗಡೆಯ ವರಾಂಡದ ಒಂದು ಮೂಲೆಯಲ್ಲಿ ಇಟ್ಟು ಹೊರಟೆದ್ದೆ. ಹುಡುಗರು ನನ್ನನ್ನು ನೋಡಬಾರದೆಂದು ಅತ್ತಿತ್ತ ನೋಡದೆ ವೇಗವಾಗಿ ಹೊರಟಿದ್ದೆ. ಊರ ಮುಂದಿನ ಹೊಳೆ ದಾಟಿ ಮೂರು ದಾರಿ ಕೂಡುವಲ್ಲಿ ಹೋಗಿ ನಿಂತೆ. ಒಂದು ರಸ್ತೆ ದಾಪೋಲಿಯ ಕಡೆಗೆ ಮತ್ತೊಂದು ರಸ್ತೆ ಖೇಡದ ಕಡೆಗೆ ಹೋಗಿದ್ದವು. ನಾನು ಖೇಡದ ದಾರಿ ಹಿಡಿದು ಸಾಗಿದೆ. ತೀರ ನಸುಕಿನಲ್ಲಿ ಹೋದ ಗಾಡಿಗಳು ನನಗೆಲ್ಲಿ ಸಿಗಬೇಕು ? ಎಷ್ಟು ದೂರ ಹೋಗಿದ್ದವೋ ನಾನಿನ್ನೂ ಹತ್ತು-ಹನ್ನೊಂದು ವರುಷದ ಹುಡುಗ. ನನಗೊಂದೂ ತೋಚದಂತಾಗಿತ್ತು. ಬಿಸಿಲು ತನ್ನ ಪ್ರಖರತೆಯನ್ನು ಹೆಚ್ಚಿಸುತ್ತಿದ್ದಿತು. ನಾನು ದಣಿದುಕೊಂಡೆ. ನನಗೆ ಅಳು ಬಂದುಬಿಟ್ಟಿತು. ಮನೆಗೆ ಮರಳಿ ಹೋಗಲು ನಾಚಿಕೆ ಎನಿಸಹತ್ತಿತು. ಆದರೆ ಹೋಗುವುದಾದರೂ ಎಲ್ಲಿಗೆ ? ಕಾಡಿನಲ್ಲಿಯೇ ಎಷ್ಟು ಹೊತ್ತು ತಾನೆ ಇರಬಹುದು ?

ನಾನು ವಾಪಸು ಹೊರಟೆ. ಊರ ದಾರಿ ತುಳಿಯತೊಡಗಿದೆ. ಕಣ್ಣೀರು ಪಟಪಟ ಉದುರುತ್ತಿದ್ದವು. ಸೂರ್ಯನ ಪ್ರಖರದಿಂದಾಗಿ ಒಣಗಿಕೊಳ್ಳುತ್ತಿದ್ದವು. ಸೂರ್ಯ ಕಿರಣಗಳೇ ನನ್ನ ಕಣ್ಣೊರಿಸಲು ಬಂದಿದ್ದವೋ ಎಂದೆನಿಸುತ್ತಿತ್ತು. ಮಟಮಟ ಮಧ್ಯಾಹ್ನ. ಸೂರ್ಯನು ನಡುನೆತ್ತಿಯ ಮೇಲೆ ಬಂದಿದ್ದ. ನಾನು ಬೆವೆತು ಹೋಗಿದ್ದೆ. ಬೆಳಗಿನಿಂದ ಹೊಟ್ಟೆಯಲ್ಲಿ ಏನೂ ಹಾಕಿರಲಿಲ್ಲ. ನಾನು ಪಾಲಗಡದ ಸಮೀಪಕ್ಕೆ ಬಂದಿದ್ದರೂ ಊರಲ್ಲಿ ಕಾಲಿಡಲು ನಾಚಿಕೆ. "ಬೇಡ, ಊರಲ್ಲಿ ಹೋಗಬೇಡ, ಮನೆಗೆ ಕಾಲಿಡಬೇಡ." ಎಂದು ಸ್ವಾಭಿಮಾನವು ಹೇಳುತ್ತಿತ್ತು. "ಹೋಗು, ಮನೆಗೆ ಹೋಗು" ಎಂದು ಹೊಟ್ಟೆ ಕೂಗಿಕೊಳ್ಳುತ್ತಿತ್ತು. ಮನೆಗೆ ಹೋಗದೆ ಇರುವದರಲ್ಲೆಂಥ ಸ್ವಾಭಿಮಾನ ? ತಾಯಿತಂದೆಗಳ ಜೊತೆಗೂ ಸ್ವಾಭಿಮಾನದ ವರ್ತನೆಯೇ? ಪ್ರೀತಿಸುವವರ ಎದುರಿನಲ್ಲಿ ಸ್ವಾಭಿಮಾನವನ್ನು ತೋರಿಸುವದೆಂದರೆ ಪ್ರೇಮದ

ಅಪಮಾನ ಮಾಡಿದಂತೆ.

ಊರಲ್ಲಿ ಹೋಗಲು ನನಗೆ ಧೈರ್ಯ ಸಾಲಲಿಲ್ಲ. ಊರ ಹೊರಗೆ ನದಿಯ ದಂಡೆಯ ಮೇಲಿರುವ ದೇವಿಯ ಗುಡಿಗೆ ಹೋದೆ. ಅದು ನಮ್ಮ ಗ್ರಾಮದೇವತೆ. ಬಾಣಂತಿಯರು ಎದ್ದು ಒಳಗೆ ಬರುವ ಮೊದಲು ಕೂಸಿನೊಂದಿಗೆ ಈ ಗ್ರಾಮದೇವತೆಗೆ ಭೆಟ್ಟಿಕೊಟ್ಟು ಹೋಗುತ್ತಾರೆ. ಅವಳಿಗೆ ಹಣ್ಣು ಕಾಯಿ ಮಾಡಿಸಿ, ಖಣವನ್ನು ಉಡಿತುಂಬಿ ಮನೆಗೆ ಬರುತ್ತಾರೆ. ಅತ್ತೆಯ ಮನೆಯಿಂದ ತವರಿಗೆ ಬಂದವರೂ ಗ್ರಾಮದೇವತೆಯ ದರುಶನ ಮಾಡಿಕೊಳ್ಳುತ್ತಾರೆ. ನಾನು ಆ ಗ್ರಾಮದೇವಿಯ ಮಂದಿರವನ್ನು ಪ್ರವೇಶಿಸಿದೆ. ಆ ದೇವಿಯ ಹಿಂಬದಿಯಲ್ಲಿ ಗಾಢವಾದ ಕತ್ತಲೆಯಿದೆ. ಆ ಕತ್ತಲೆಯ ಮರೆಯಲ್ಲಿ ಅಡಗಿ ಕುಳಿತುಕೊಂಡೆ.

ಹೀಗೆ ಎಷ್ಟು ವೇಳೆ ತಾನೆ ಕುಳಿತುಕೊಳ್ಳಲು ಸಾಧ್ಯ? ಹೊಟ್ಟೆಯಲ್ಲಿ ಡೊಂಬರಾಟ ನಡೆದಿತ್ತು. ಕೊನೆಗೆ ನಾಚಿಕೆಯನ್ನು ತೂರಿದು, ಸ್ವಾಭಿಮಾನವನ್ನು ತಳ್ಳಿ ಹಾಕಿ ನಿಧಾನವಾಗಿ ಊರ ದಾರಿ ಹಿಡಿದೆ. ಊರಲ್ಲಿಯ ಮನೆಗಳು ಕಾಣಿಸತೊಡಗಿದವು. ಗೋಣು ಕೆಳಗೆ ಹಾಕಿಕೊಂಡು ನಡೆದಿದ್ದೆ. ಕಾಲು ಚುರುಚುರು ಸುಡುತ್ತಿದ್ದವು. ಕಣ್ಣೀರು ಬಳಬಳ ಉದುರುತ್ತಿದ್ದವು. ಕಣ್ಣು ತುಂಬಿ ಬಂದದ್ದರಿಂದ ಮುಂದೆ ಏನೂ ಸರಿಯಾಗಿ ಕಾಣುತ್ತಿದ್ದಿಲ್ಲ. ಇಷ್ಟರಲ್ಲಿ ಯಾರೋ ನನ್ನ ರಟ್ಟೆಯನ್ನು ಗಟ್ಟಿಯಾಗಿ ಹಿಡಿದರು. "ಎಲೋ, ಎಲ್ಲಿ ಮಾಯವಾಗಿದ್ದೆ? ಎಷ್ಟು ಹುಡುಕಬೇಕೋ ನಿನ್ನನ್ನು? ಕುತ್ತಿಗೆಗೆ ಉರ್ಲು ಹಾಕತಕ್ಕವನೇ ನೀನು." ಎಂಬ ಶಬ್ದ ನನ್ನ ಕಿವಿಗೆ ಬಿದ್ದವು. ಅವರು ನಮ್ಮ ಚಿಕ್ಕಪ್ಪ. ಊರಲ್ಲಿ ಮೂಲೆ ಮೂಲೆಯಲ್ಲಿಯೂ ನನ್ನ ಶೋಧ ನಡೆದಿತ್ತು. ಮನೆಯ ಜನರೂ, ನೆರೆಹೊರೆಯವರೂ ನನ್ನನ್ನು ಹುಡುಕುತ್ತಲಿದ್ದರು. ಶಾಲೆಯ ಹುಡುಗರು ನಮ್ಮ ಮನೆಗೆ ನನ್ನ ಪಾಟಿ ಗಂಟನ್ನು ತಂದುಕೊಟ್ಟಾಗ ನಾನು ಕಾಣೆಯಾದದ್ದು ಗೊತ್ತಾಗಿತ್ತು.

ಮೊದಲನೆಯ ದಿವಸ ನಮ್ಮ ಹೆಡ್ಮಾಸ್ತರು ನಾನು ಕಾಪೀ ಪುಸ್ತಕ ಚೆನ್ನಾಗಿ ತೀಡಿರಲಿಲ್ಲವೆಂದೂ, ನನ್ನ ಹಸ್ತಾಕ್ಷರಗಳು ಬಹಳ ಅಂಕುಡೊಂಕಾಗಿದ್ದವೆಂದೂ ನನಗೆ ಒಂದೆರಡೇಟು ಹಾಕಿದ್ದರು. ತಮ್ಮ ಹೊಡೆತಕ್ಕಂಜಿಯೇ ನಾನು ಓಡಿಹೋಗಿರಬಹುದೆಂದು ಅವರಿಗೆ ಅನುಮಾನ ಬಂದಿತ್ತು. ಅವರು

ಹುಡುಗರನ್ನು ಹೊಡೆಯುವದರಲ್ಲಿ ಹೆಸರಾಂತರಾಗಿದ್ದರು. ಬಹಳ ಕಠೋರರು! ಯಾವಾಗಲೂ ಅವರ ಕೈಯಲ್ಲಿ ಬೆತ್ತದ ಛಡಿ ಇರತಕ್ಕದ್ದೇ! ಚತ್ತರಿಗೆಯ ಕಡ್ಡಿಯಿಂದಲೂ ಹುಡುಗರ ಡಬ್ಬುಗೈ ಮೇಲೆ, ಬೆರಳುಗಳ ಮೇಲೆ ಏಟುಹಾಕುತ್ತಿದ್ದರು. ಅವರು ಗಾಂಜಾಭಕ್ತರು! ಗುಡುಗುಡಿಯಿಂದ ಅಮಲು ಏರಿಸಿಯೇ ಶಾಲೆಗೆ ಬರುತ್ತಿದ್ದರು. ಬೇಗನೆ ಅವರಿಗೆ ವರ್ಗವಾಗಲೆಂದು ನಾವೆಲ್ಲರೂ ಹಾರೈಸುತ್ತಿದ್ದೆವು. ನಾನು ಓಡಿಹೋದೆನೆಂದು ಅವರಿಗೆ ವಿಷಾದವಾಯಿತು. ತಮ್ಮ ಹೊಡೆತದ ಪರಿಣಾಮವಿದೆಂದು ತುಸು ಗಾಬರಿಯಾದರು. ಹುಡುಗ ಬಾವಿ-ಗೀವಿ ಹಾರಿಕೊಂಡಿರಲಿಕ್ಕಿಲ್ಲವಷ್ಟೇ ಎಂಬ ಯೋಚನೆ ಕೂಡ ಅವರಿಗೆ ಬಾರದೆ ಇರಲಿಲ್ಲ. ಶಾಲೆ ಬಿಟ್ಟಮೇಲೆ ತಂದೆ ಬಂದು ವಿಚಾರಣೆ ನಡೆಸಿದಾಗ ಮೊದಲನೆ ದಿವಸ ಗುರುಗಳು ಕಾಪೀ ಬರಹಕ್ಕಾಗಿ ನನ್ನನ್ನು ಥಳಿಸಿದ ಸಂಗತಿಯನ್ನು ಹುಡುಗರು ತಿಳಿಸಿಬಿಟ್ಟರು. ಹೊಡೆತಕ್ಕಂಜಿ ಶ್ಯಾಮು ಓಡಿದನೆಂದು ತಂದೆ ಭಾವಿಸಿದರು. ತಂದೆಯವರು ನನ್ನ ಅಕ್ಷರಗಳನ್ನು ಸುಧಾರಿಸುವದಕ್ಕಾಗಿ ದಿನಾಲು ಮುಂಜಾನೆ ನನ್ನಿಂದ ಕಾಪೀ ಬರೆಸುತ್ತಿದ್ದರು. ನಿತ್ಯವೂ ನಾನು ಅಕ್ಷರಗಳನ್ನು ತೀಡುತ್ತಿದ್ದೆ. " ಮಾಸ್ತರರು ಶ್ಯಾಮುನನ್ನು ಸುಮ್ಮನೆ ಇಷ್ಟೊಂದು ಹೊಡೆದರು. ಯಾರಾದರೂ ಈಪರಿ ಹೊಡೆಯುತ್ತಾರೆಯೋ? ಹುಡುಗ ಹೋಗಿ ಕೆರೆ-ಬಾವಿ ಬಿದ್ದರೆ? ಸುಸೂತ್ರವಾಗಿ ಹುಡುಗ ಬಂದರೆ ಸಾಕು. " ಎಂದು ನೆರೆಹೊರೆಯ ಜನರು ಸಹಾನುಭೂತಿಯನ್ನು ಪ್ರದರ್ಶಿಸುತ್ತಿದ್ದರು. ತಂದೆಯವರು ಹೆಡ್ಮಾಸ್ತರ ಕಡೆಗೆ ಹೋಗಿ ಅವರಿಗೆ ಚೆನ್ನಾಗಿ ಗದರಿಸಿದರು. ಎಚ್ಚರಿಕೆ ಕೊಟ್ಟರು.

ಹೆಡ್ಮಾಸ್ತರು ಹೇಳಿದರು, " ಇಂದಿನಿಂದ ನಿಮ್ಮ ಹುಡುಗನ ಮೈಗೆ ಕೈ ಹಚ್ಚಿದರೆ ಹೇಳಿರಿ. ನಿಮ್ಮ ಹುಡುಗರು ಬುದ್ಧಿವಂತರಾಗಲೆಂದು ಹೊಡೆಯುವದು. ಅದರಿಂದ ನನಗೇನಾಗಬೇಕಾಗಿದೆ? ನಿಮ್ಮ ಹುಡುಗನಿಗೆ ಒಂದು ಏಟನ್ನೂ ಹಾಕುವದಿಲ್ಲ ಭಾವೂರಾಯರೇ! "

" ಅದೆಲ್ಲ ಮುಂದಿನ ಮಾತು. ಈಗ ಅವನು ಸಿಕ್ಕರೆ ಸಾಕಾಗಿದೆ! " ಎಂದು ತಂದೆ ನುಡಿದರು.

ಮನೆಯಲ್ಲಿ ಯಾರೂ ಊಟ ಮಾಡಿರಲಿಲ್ಲ. ನಾನು ವಾಯಿಗೆ ಹೋಗಿರಬಹುದೇ ಎಂದು ತಾಯಿಗೆ ಮಾತ್ರ ಅನುಮಾನ ಬಂದಿತ್ತು. ಆದರೆ ಯಾರ

ಮುಂದೆಯೂ ಅವಳು ಆಡಿರಲಿಲ್ಲ. ಅವಳಿಗೆ ಅದು ಅಸಾಧ್ಯವಾದ ಸಂಗತಿ ಯೆಂದೆ ಕಂಡಿದ್ದಿತು. ನನ್ನ ತೋಳು ಹಿಡಿದುಕೊಂಡು ನಮ್ಮ ಕಕ್ಕ ನನ್ನನ್ನು ಕರೆತರುವಾಗ ದಾರಿಯಲ್ಲಿ ಹುಡುಗರು ಗುಂಪಾಗಿ ನಿಂತು ನೋಡುತ್ತಿದ್ದರು. ಕಳ್ಳನನ್ನು ನೋಡುವಾಗ ಹೇಗೆ ಗುಂಪುಗಟ್ಟಿ ನಿಂತು ನೋಡುತ್ತಾರೋ ಹಾಗೆ ನೋಡುತ್ತಿದ್ದರು. ದಾರಿಯಲ್ಲಿ ತಂದೆಯವರೂ ಭೆಟ್ಟಿಯಾದರು. "ಇಲ್ಲೇನು ತಮಾಷೆಯಿದೆಯೇನಿರೋ ನೋಡಲಿಕ್ಕೆ. ಹೋಗಿರಿ ನಿಮ್ಮ ನಿಮ್ಮ ಮನೆಗೆ" ಎಂದು ಆ ಹುಡುಗರನ್ನು ಗದರಿಸಿದರು. ಹುಡುಗರು ಹೊರಟುಹೋದರು.

ತಂದೆಯವರೇನೂ ನನ್ನ ಮೇಲೆ ರೇಗಿಕೊಳ್ಳಲಿಲ್ಲ. ಅದು ರೇಗಿಕೊಳ್ಳುವ ಸಮಯವೂ ಆಗಿರಲಿಲ್ಲ. ನಾನು ದಣಿದುಕೊಂಡಿದ್ದೆ. ಮನೆಗೆ ಬಂದು ಹಾಸಿಗೆಯ ಮೇಲೆ ಮಲಗಿಕೊಂಡೆ.

ತುಸು ಹೊತ್ತಿನ ಮೇಲೆ ತಂದೆ ಬಂದು ಹೇಳಿದರು, "ಶ್ಯಾಮಾ, ಏಳು ಕಂದಾ, ಇನ್ನು ಮತ್ತೆ ಮಾಸ್ತರರು ಹೊಡೆಯಲಾರರು. ಎಲೋ ಅವರ ಹೊಡೆತಕ್ಕಂಜಿ ಓಡಿಹೋಗುವರೇನು ? ನಮ್ಮ ಕಾಲದಲ್ಲಿ ಒಂಟಿಗಾಲಿನಿಂದ ನಿಲ್ಲಿಸುತ್ತಿದ್ದರು, ಕಾಲು ಮೇಲೆ ಮಾಡಿ ತೂಗ ಹಾಕುತ್ತಿದ್ದರು, ಮತ್ತು ಮೆಣಸಿನ ಕಾಯಿ ಹೊಗೆ ಹಾಕುತ್ತಿದ್ದರು. ಹೊಡೆತಕ್ಕಂಜಿದರೆ ಆಗುವದೇ ? ಮಾಸ್ತರರಿಂದ ಮೇಲೆ ಹೊಡೆಯತಕ್ಕವರೇ. ಹೊಡೆಯದೆ ಇದ್ದರೆ ಅವರೆಂಥ ಮಾಸ್ತರರು ? ಏಳು, ಕೈಕಾಲು ತೊಳೆದುಕೋ. ಮೋರೆ ನೋಡು, ಹೇಗೆ ಕೆಂಜಿಗನ ಹಾಗೆ ಕೆಂಪಗಾಗಿದೆ. ಆತನಿಗೆ ಊಟಕ್ಕೆ ನೀಡೇ, ಮೊದಲು ಅವನ ಎಲೆಗೆ ಬಡಿಸು."

ನಾನು ಎದ್ದು ಕೈಕಾಲು ತೊಳೆದುಕೊಂಡೆ. ನನ್ನ ಪಲಾಯನದ ನಿಮಿತ್ತವು ಮಾಸ್ತರರ ಮೇಲೆ ಪರ್ಯಾಯದಿಂದ ಹೋಗಿಬಿಟ್ಟದ್ದರಿಂದ ತುಸು ಹಾಯಾಗಿತ್ತು ಮನಸ್ಸಿಗೆ. ಮಾಸ್ತರರ ಹೊಡೆತವಿನ್ನು ಕಡಮೆಯಾಗುವದೆಂದು ಸಮಾಧಾನವೂ ಆಗಿದ್ದಿತು. ನನ್ನ ಕಾರಣದಿಂದಾಗಿ ಇನ್ನು ಅವರು ವರ್ಗದಲ್ಲಿ ಹುಷಾರಾಗಿಯೇ ನಡೆದುಕೊಳ್ಳುವರೆಂದೂ ಹುಡುಗರನ್ನು ಕಠೋರ ರೀತಿಯಿಂದ ನೋಡಿಕೊಳ್ಳುವದಿಲ್ಲವೆಂದೂ ನಾನು ಭಾವಿಸಿಕೊಂಡೆನು. ಬೇರೆ ಹುಡುಗರ ಮೇಲೆಯೂ ನಾನೆಷ್ಟು ಉಪಕಾರ ಮಾಡಿದೆನಲ್ಲ ಎಂಬ ಸಂತೋಷ! ಅವರೆಲ್ಲ ತನ್ನ ಆಭಾರ ಮನ್ನಿಸುವರಲ್ಲ ಎಂಬ ಸಮಾಧಾನ ! ಬಾಜೀರಾಯನ

ಪಲಾಯನದಿಂದ ಮರಾಠರ ಸ್ವಾತಂತ್ರ್ಯವು ಕಳೆದು ಹೋಗಿದ್ದರೂ ಶ್ಯಾಮನ ಪಲಾಯನದಿಂದ ವರ್ಗಕ್ಕೆ ಪೂರ್ಣಸ್ವರಾಜ್ಯವಲ್ಲದಿದ್ದರೂ ವಸಾಹತು ಸ್ವರಾಜ್ಯ ವಾದರೂ ದೊರೆತಿತ್ತು! ಇದು ಶ್ಯಾಮನ ಕನಸು ಮನಸ್ಸಿನಲ್ಲಿ ಕೂಡ ಬಾರದೆ ತಾನಾಗಿ ಸಂಭವಿಸಿದ್ದಿತು!

ನಾನು ಯಾವ ಕಾರಣಕ್ಕಾಗಿ ಓಡಿಹೋಗಿದ್ದೆನೆಂಬುದು ಮೂರು ಜನ ರಿಗೆ ಗೊತ್ತಿತ್ತು. ನನಗೆ, ತಾಯಿಗೆ ಮತ್ತು ದೇವರಿಗೆ. ಶನಿವಾರವಿದ್ದುದರಿಂದ ಮಧ್ಯಾಹ್ನ ಶಾಲೆ ಇರಲಿಲ್ಲ. ಉಂಡವನೇ ನಾನು ಮತ್ತೆ ಮಲಗಿಕೊಂಡೆ. ಬಹಳ ಆಯಾಸವಾಗಿತ್ತು. ಹೊರಗೆ ಉರಿಬಿಸಿಲು ಬೇರೆ. ಮೂರೂಸಂಜೆ ಯಾಗಿ ದೀಪ ಹಚ್ಚುವ ವೇಳೆಯಾದರೂ ನಾನು ಮಲಗಿಕೊಂಡೇ ಇದ್ದೆ. ತಾಯಿ ಹಾಸಿಗೆಯ ಹತ್ತಿರ ಬಂದು ನನ್ನ ಬಳಿ ಕುಳಿತುಕೊಂಡಳು. ಅವಳು ನನ್ನ ಹಣೆ ಮುಟ್ಟಿ ನೋಡಿ ವಿಚಾರಿಸಿದಳು, "ಶ್ಯಾಮಾ," ನಾನು ಕಣ್ಣು ತೆರೆದು ನೋಡಿದೆ. ತಾಯಿ ವಾತ್ಸಲ್ಯದಿಂದ ಮೈಮೇಲೆ ಕೈಯಾಡಿಸುತ್ತಿದ್ದಳು. "ಶ್ಯಾಮಾ, ಮೈಯಲ್ಲಿ ಚೆನ್ನಾಗಿಲ್ಲವೇ? ತಲೆ ನೋಯುತ್ತಿದೆಯೇ? ಕೈ-ಕಾಲು ನೋಯುತ್ತಿವೆಯೇ? ನಾನು ಹೇಳಿದರೂ ಕೇಳಲಿಲ್ಲ!" ಎಂದು ಹೇಳಿ ತಾಯಿ ನನ್ನ ತಲೆ ಒತ್ತತೊಡಗಿದಳು. ನಾನು ಕೂಡಲೆ ತಾಯಿಯ ತೊಡೆಯಮೇಲೆ ತಲೆಯನ್ನಿಟ್ಟು ಅಳತೊಡಗಿದೆ. ತಾಯಿಗೆ ಹೇಳಿದೆ, "ಅಮ್ಮಾ, ನಿನ್ನ ಮಾತು ಕೇಳದೆ ಹೀಗೆ ಓಡಿಹೋದೆನೆಂದು ಸಿಟ್ಟಾದೆಯಾ? ಮಾಸ್ತರರು ಹೊಡೆದರೆಂದು ನಾನು ಓಡಿಹೋಗಲಿಲ್ಲಮ್ಮಾ. ಎಂದಾದರೂ ನೀನು ಸಿಟ್ಟಿನಲ್ಲಿ ಹೊಡೆಯುವದಿಲ್ಲವೇ? ಆಗ ನಾನು ಓಡಿಹೋಗಿದ್ದೆನೇನು? ನಾನು ಮಾಸ್ತ ರರ ಭಯದಿಂದ ಓಡಿಹೋದೆನೆಂದು ಭಾವೂ ತಿಳಿದುಕೊಂಡಿದ್ದಾರೆ. ನೀನು ನಿನ್ನೆ ಹೇಳಿದ್ದೆಯಲ್ಲವೇ? 'ಹೋಗುವ ಸಾಮರ್ಥ್ಯವಿದ್ದರೆ ನಡೆದುಕೊಂಡು ಹೋಗು!' ಅಮ್ಮಾ, ನಾನು ನಡೆದುಕೊಂಡು ಹೋಗಬೇಕೆಂದು ಹೊರ ಟಿದ್ದೆ. ನನ್ನ ಶಕ್ತಿಗೆ ಮೀರಿದ ಕೆಲಸಕ್ಕೆ ಕೈಹಾಕಿದ್ದೆ. ಧ್ರುವ ಬಾಲಕನ ಸಾಮರ್ಥ್ಯವೆಲ್ಲಿ? ಈ ಸಿಂಬಳಬುರುಕ ಶ್ಯಾಮನ ಸಾಮರ್ಥ್ಯವೆಲ್ಲಿ? ತಾಯಿ, ನಿನ್ನ ಶ್ಯಾಮನ ಮೇಲೆ ಸಿಟ್ಟಾಗಬೇಡ. ನಿನ್ನ ಶ್ಯಾಮನು ಹುಚ್ಚು-ಹಟಮಾರಿ ಯಾಗಿದ್ದಾನೆ. ಮನಸ್ಸಿನಲ್ಲಿ ಬಂದದ್ದನ್ನೆಲ್ಲ ಮಾಡಿಬಿಡಬೇಕೆನ್ನುತ್ತಾನೆ. ಕೊನೆಗೆ ಕೈಸಾಗದೆ ಅಳುತ್ತ ಕೂಡ್ರುತ್ತಾನೆ. ನಿನಗೆ ಹೇಳದ ಕೇಳದೆ ಓಡಿ ಹೋಗಿದ್ದೆ

ನೆಂದು ನೀನು ಕೋಪಿಸಿಕೊಂಡಿಲ್ಲವಷ್ಟೇ? ಇಲ್ಲ, ಇಲ್ಲವೆಂದು ಹೇಳು ಅವ್ವಾ! ”

ನನ್ನ ಕೆನ್ನೆಗಳನ್ನು ಸವರುತ್ತ ಮತ್ತು ಕಣ್ಣೀರನ್ನು ಒರೆಸುತ್ತ ತಾಯಿ ನುಡಿದಳು, “ ಶ್ಯಾಮಾ, ನಾನೇಕೆ ಕೋಪಿಸಲಿ? ನಾನು ಕೋಪಿಸಲೂ ಇಲ್ಲ ನೀನು ಓಡಿಹೋದೆಯೆಂದು ನೊಂದುಕೊಳ್ಳಲೂ ಇಲ್ಲ. ನಿನ್ನ ಚಿಂತೆಯಿಂದ ಕೆಡುಕೆನಿಸಿತು. ನೀನು ಚಿಕ್ಕವ, ನಿನ್ನ ಪಾಡೇನಾದೀತು ಎಂಬ ವಿಚಾರದಿಂದ ದುಃಖ ಉಕ್ಕಿ ಬರುತ್ತಿತ್ತು. ನಾನು ನಿನ್ನೆ ಹಾಗೆ ಆಡಿದೆ. ನನ್ನ ಶಬ್ದಗಳೇ ಕಾರಣವಾದವಲ್ಲ ಎಂದುಕೊಂಡೆ. ನೀನು ಓಡಿಹೋಗಿ ಅಪರಾಧ ಮಾಡಿದೆ ಯೆಂದು ಮನಸ್ಸಿನಲ್ಲಿಯೂ ತರಲಿಲ್ಲ. ನೀನೇನು ಕೆಟ್ಟ ಕೆಲಸಕ್ಕಾಗಿ ಓಡಿ ಹೋಗಿರಲಿಲ್ಲವೆಂಬುದನ್ನು ಬಲ್ಲೆ. ಮೊನ್ನೆ ಅದಾರದೋ ಹುಡುಗ ನಾಟಕ ಕಂಪನಿಯಲ್ಲಿ ಸೇರಿಕೊಳ್ಳುವದಕ್ಕಾಗಿ ಓಡಿಹೋದನಂತಲ್ಲ ಹಾಗೇನು ನೀನು ಓಡಿಹೋಗಿರಲಿಲ್ಲ. ನೀನು ದೇವರಿಗಾಗಿ ಓಡಿಹೋಗುತ್ತಿದ್ದೆ. ಗಂಗಾಸ್ನಾನ ಕ್ಕಾಗಿ ಓಡಿಹೋಗುತ್ತಿದ್ದೆ. ನಿನ್ನ ಮೇಲೆ ಏನೆಂದು ರೇಗಿಕೊಳ್ಳಲಿ? ಮಗೂ, ನನಗೆ ಅಭಿಮಾನವೇ ಅನಿಸುತ್ತಿತ್ತು. ನನ್ನ ಶ್ಯಾಮನು ಓಡಿಹೋಗಿದ್ದನೇ ಆದರೆ ದೇವರಿಗಾಗಿ ಹೋಗಿದ್ದಾನೆಂದು ಅನ್ನುತ್ತಿದ್ದೆ. ಶ್ಯಾಮಾ, ಜ್ಞಾಪಕದಲ್ಲಿಡು. ನಿನ್ನ ತಾಯಿಯ ಒಂದು ನುಡಿಯನ್ನು ನೆನಪಿನಲ್ಲಿಟ್ಟುಕೋ. ಕಳ್ಳತನ ಸುಳ್ಳು ತನ ಮಾಡಿ ಓಡಿಹೋಗಬೇಡ. ಕೆಟ್ಟ ಸಹವಾಸಕ್ಕಾಗಿ ಓಡಿಹೋಗಬೇಡ. ಹೆದರಿಕೊಂಡು ಓಡಬೇಡ. ದೇವರಿಗಾಗಿ ಓಡಿಹೋಗಬಹುದು – ಎಲ್ಲ ಸಾಧು ಸಂತರು ಅದನ್ನೇ ಮಾಡಿದ್ದಾರೆ. ದೇವರಿಗಾಗಿ ನನ್ನ ಮಗನು ಓಡಿಹೋಗ ಲೆಂದು ನಾನು ಪ್ರಾರ್ಥನೆಯನ್ನು ಮಾಡುತ್ತೇನೆ. ”

**ರಾತ್ರಿ : ೧೭**

## : : ಸ್ವಾವಲಂಬನದ ಶಿಕ್ಷಣ

ನಾನು ಸಣ್ಣವನಿದ್ದಾಗ ಧಾರ್ಮಿಕ ಪುಸ್ತಕಗಳನ್ನು ಬಹಳ ಓದಿದ್ದೆ. ಆದರೆ ಸಂಸ್ಕೃತ ಶ್ಲೋಕಗಳು ಮಾತ್ರ ಹೆಚ್ಚಾಗಿ ಬರುತ್ತಿರಲಿಲ್ಲ.

ಪ್ರಣಮ್ಯ ಶಿರಸಾದೇವಂ........ಅನಂತಂ ವಾಸುಕಿಂ ಶೇಷಂ....... ಅಚ್ಯುತಂ ಕೇಶವಂ ವಿಷ್ಣುಂ........ಇಂಥ ನಾಲ್ಕಾರು ಸಣ್ಣ ಸಣ್ಣ ಶ್ಲೋಕಗಳು ಮಾತ್ರ ಬರುತ್ತಿದ್ದವು. 'ಅನಂತಂ ವಾಸುಕಿಂ' ಇದು ಒಂದು ನಾಗದೇವರ ಸ್ತೋತ್ರ ವಾಗಿದೆ. ಒಂದು ನಾಗಪಂಚಮಿಯ ದಿವಸ ಇದನ್ನು ನಮ್ಮ ಅಜ್ಜ ಕಲಿಸಿದ್ದರು. ಆದರೆ ಘನವಾದ ರಾಮರಕ್ಷಾ ಸ್ತೋತ್ರವು ನನಗೆ ಬರುತ್ತಿರಲಿಲ್ಲ. ವಿಷ್ಣು ಸಹಸ್ರನಾಮುಗಳನ್ನು ನಾನು ತಂದೆಯವರ ಪುಸ್ತಕ ನೋಡಿ ಹೇಳುತ್ತಿದ್ದೆ. ಆದ್ದರಿಂದ ನನಗವು ಕಂಠಪಾಠವಾಗಿದ್ದವು. ತಂದೆಯವರಿಗೆ ರಾಮರಕ್ಷಾ ಸ್ತೋತ್ರವು ಬರುತ್ತಿದ್ದರೂ ಅವರು ನನಗೆ ಕಲಿಸಿಕೊಟ್ಟಿರಲಿಲ್ಲ. ಆದರ ಪುಸ್ತಕವೂ ನಮ್ಮಲ್ಲಿರಲಿಲ್ಲ ನಾನು ಬಾಲ್ಯದಲ್ಲಿ ರಾಮಭಕ್ತನಾಗಿದ್ದರಿಂದ ರಾಮರಕ್ಷಾ ಸ್ತೋತ್ರ ಬಾರದೆ ಇದ್ದುದಕ್ಕಾಗಿ ವಿಷಾದವಾಗುತ್ತಿತ್ತು.

ನಮ್ಮ ಪಕ್ಕದ ಮನೆಯಲ್ಲಿ ಪರಾಂಜಪೆ ಗೋವಿಂದಭಟ್ಟರು ಇರುತ್ತಿದ್ದರು. ಅವರ ಮಗ ಭಾಸ್ಕರನ ಬಳಿಯಲ್ಲಿ ರಾಮರಕ್ಷಾ ಪುಸ್ತಕವಿತ್ತು. ಅವನು ದಿನಾಲು ಒಂದೆರಡು ಶ್ಲೋಕ ಉರು ಹಾಕುತ್ತಿದ್ದ. ಪ್ರತಿದಿನ ಸಾಯಂಕಾಲ ಅವನು ನಮ್ಮ ಮನೆಕಡೆ ಬಂದಾಗ ಆ ಶ್ಲೋಕಗಳನ್ನು ಹೇಳುತ್ತಿದ್ದ. ಆಗ ನನಗೆ ನಾಚಿಕೆ. ಭಾಸ್ಕರನನ್ನು ಕಂಡರೆ ಸಿಟ್ಟು ಬರುತ್ತಿತ್ತು. ತಮ್ಮ ಅಹಂ ಕಾರವನ್ನು ಕೆಣಕಿದಾಗ ಕೆಲವರಿಗೆ ಒಮ್ಮೆಲೆ ಕೋಪ ಬರುವದುಂಟು. ನಾವು ಯಾವಾಗಲೂ ನಮ್ಮ ಸುತ್ತುಮುತ್ತಲಿನ ಜನರ ಜೊತೆಗೆ ನಮ್ಮನ್ನು ತುಲನೆ ಮಾಡಿ ನೋಡುತ್ತಿರುತ್ತೇವೆ. ಆ ತುಲನೆಯಲ್ಲಿ ನಾವು ಕಡಮೆಯವರಾಗಿ ಕಂಡರೆ ನಮಗೆ ಸಿಟ್ಟು ಬರುತ್ತದೆ. ಎತ್ತರವುಳ್ಳ, ಬಲಶಾಲಿಯಾದ ಮನುಷ್ಯ ನನ್ನು ಕಂಡರೆ ಅಶಕ್ತನೂ ಕುಳ್ಳನೂ ಆದ ಮನುಷ್ಯನಿಗೆ ತಿರಸ್ಕಾರವೆನಿಸುತ್ತದೆ. ತಮಗಿಂತ ಜಾಣರಿದ್ದವರನ್ನು ಕಂಡರೆ ಕೆಡುಕೆನಿಸುತ್ತದೆ. ಭಾಸ್ಕರನಿಗೆ ರಾಮ ರಕ್ಷಾ ಬರುತ್ತಿದ್ದುದು ನನಗೆ ಅಸಹ್ಯವಾಗುತ್ತಿತ್ತು. ಅವನು ಬೇಕೆಂತಲೇ ಸಂಜೆಯ ಸ್ತೋತ್ರ ಪಾಠದ ಸಮಯದಲ್ಲಿ ನಮ್ಮಲ್ಲಿಗೆ ಬಂದು ಆಢ್ಯತೆಯಿಂದ ಆ ಶ್ಲೋಕಗಳನ್ನು ಹೇಳುತ್ತಿದ್ದುದರಿಂದ ನನಗೆ ಇನ್ನೂ ಹೆಚ್ಚಿನ ಸಂತಾಪ ವಾಗಿತ್ತು. ಇವನು ಬೇಕೆಂದೇ ನನ್ನನ್ನು ಹೀಯಾಳಿಸಲು ಬರುತ್ತಿದ್ದಾನೆಂದು ಅವನ ಮೇಲೆ ಹಲ್ಲು ತಿನ್ನುತ್ತಿದ್ದೆ.

ಒಂದು ದಿನ ಭಾಸ್ಕರನು ಹೇಳಿದ, "ಶ್ಯಾಮೂ, ಇನ್ನು ಹತ್ತು ಶ್ಲೋಕ

ಗಳು ಮಾತ್ರ ಉಳಿದಿವೆ. ಅದನ್ನಷ್ಟು ಉರು ಹೊಡೆದರೆ ಆಯಿತು. ಪೂರ್ಣ ರಾಮರಕ್ಷಾ ಕಂಠಪಾಠವಾದಂತಾಯಿತು. ನಿನಗೆಲ್ಲಿ ಬರುತ್ತದೆ ? "

ನಾನು ಒಮ್ಮೆಲೆ ಸಿಟ್ಟಿಗೆದ್ದು ಅವನ ಮೈಮೇಲೆ ಏರಿಹೋದೆ, "ಭಾಸ್ಕ್ಯಾ, ನನ್ನನ್ನು ಅಣಕಿಸಲು ಇನ್ನೊಮ್ಮೆ ಬಂದೆಯಾದರೆ ನೋಡು. ನಿನಗೆ ಬರುವದೆಲ್ಲ ನನಗೆ ಗೊತ್ತಿದೆ. ಅಷ್ಟೇನೂ ನನ್ನ ಮುಂದೆ ಜಂಬ ಹೇಳಬೇಕಾಗಿಲ್ಲ. ನಿಮ್ಮಲ್ಲಿ ಪುಸ್ತಕವಿದೆಯೆಂದು ತಿಳಿದು ಪಾಠ ಮಾಡಿದೆ. ನಮ್ಮಲ್ಲಿ ಪುಸ್ತಕ ಇದ್ದಿದ್ದರೆ ಎಂದೋ ಮುಗಿಸಿ ಬಿಡುತ್ತಿದ್ದೆ. ಬಂದಿದಾನೆ, ಭಾರೀ ಜಂಬ ಕೊಚ್ಚಲಿಕ್ಕೆ ! ಹೋಗು, ಇನ್ನೊಮ್ಮೆ ನಮ್ಮ ಮನೆಗೆ ಬಂದೆಯಾದರೆ ಹೊಡೆದುಬಿಟ್ಟೇನು ? "

ನಮ್ಮ ಜಗಳಾಟ ಮತ್ತು ವಾದವನ್ನು ಕೇಳಿ ತಾಯಿ ಹೊರಗೆ ಬಂದಳು. ಅವಳು ಭಾಸ್ಕರನನ್ನು ವಿಚಾರಿಸಿದಳು, " ಏನಾಯಿತು ಭಾಸ್ಕರ ? ಶ್ಯಾಮನು ನಿನಗೆ ಹೊಡೆದನೇ ? "

ಭಾಸ್ಕರನೆಂದ, " ಇನ್ನು ನಾಲ್ಕಾರು ದಿವಸದಲ್ಲಿ ರಾಮರಕ್ಷಾ ಪಾಠ ಮಾಡುವದು ಮುಗಿಯುತ್ತದೆಂದು ಮಾತ್ರ ನಾನು ಹೇಳಿದೆ. ಅವನು ಒಮ್ಮೆಲೆ ಸಿಟ್ಟಿಗೆದ್ದು ಹೊಡೆಯ ಬಂದ. ನಮ್ಮ ಮನೆಗೆ ಬರಬೇಡ ಹೋಗು. ಬಂದರೆ ಏಟು ಹಾಕುತ್ತೇನೆಂದು ಹೇಳಿದ. "

ತಾಯಿ ನನ್ನ ಕಡೆಗೆ ತಿರುಗಿ ಹೇಳಿದಳು, " ಹೌದೇನೋ ಶ್ಯಾಮಾ ? ಹೀಗೆ ನೀನು ನಮ್ಮ ನೆರೆಮನೆಯವರಿಗೆ ಹೇಳಬೇಕೇ ? ನೀನೇ ಹೊತ್ತು ಬಿದ್ದಾಗ ಅವರಲ್ಲಿ ಹೋಗಬೇಕಾದೀತು. "

ನಾನು ಸಿಟ್ಟಿನಲ್ಲಿಯೇ ನುಡಿದೆ, " ಅವನು ಬೇಕೆಂತಲೇ ನನ್ನನ್ನು ಹೀಯಾಳಿಸಬೇಕೇನು ? ' ನಿನಗೆ ರಾಮರಕ್ಷಾ ಎಲ್ಲಿ ಬರುವದು ' ಎಂದು ಹಂಗಿಸಬೇಕೇ ? ಹೀಗೆ ಆಡಿದನೋ ಇಲ್ಲವೋ ಅವನನ್ನೇ ಕೇಳು. ಸಂಭಾವಿತನಂತೆ ಹೇಗೆ ಸಾಧಿಸುತ್ತಿದ್ದಾನೆ ನೋಡು. "

" ನನಗೆ ರಾಮರಕ್ಷಾ ಬರುತ್ತದೆ, ನಿನಗೆ ಬರುವದಿಲ್ಲ ಎಂದು ಹೇಳಿದ ಮಾತ್ರಕ್ಕೆ ಅವನು ಹೀಯಾಳಿಸಿದಂತಾಯಿತೇನು ? ಅವನು ನಿಜವನ್ನೇ ನುಡಿದಿದ್ದಾನೆ. ನಿನ್ನ ಕಡಮೆತನ ತೋರಿಸಿಕೊಟ್ಟದ್ದಕ್ಕಾಗಿ ಸಿಟ್ಟು ಬಂದಿತೇ ? ನೀನು ಅದನ್ನು ದೂರ ಮಾಡಬೇಕು. ನೀನು ಕೂಡ ರಾಮರಕ್ಷಾ ಕಲಿಯ

ಬೇಕೆಂದು ಭಾಸ್ಕರನಿಗೆ ತೋರಿದ್ದರಿಂದ ನಿನಗೆ ಆತ ರೇಗಿಸುತ್ತಾನೆ. ರಾಮ ವಿಜಯ, ಹರಿವಿಜಯ ಮತ್ತೆ ಮತ್ತೆ ಓದುವಿ. ಅದರಂತೆ ರಾಮರಕ್ಷಾ ಕೂಡ ಪಾಠ ಮಾಡಿದರಾಯಿತು."

"ಭಾವೂ ಕಲಿಸುವುದಿಲ್ಲ. ನನ್ನ ಬಳಿ ಪುಸ್ತಕವೂ ಇಲ್ಲ."

"ಭಾಸ್ಕರನ ಪುಸ್ತಕವಿದೆಯಲ್ಲವೇ? ಅವನು ಓದದೆ ಇರುವಾಗ ತೆಗೆದುಕೊಂಡು ಬಂದು ಓದು. ಇಲ್ಲವೇ ಒಂದು ಪುಸ್ತಕ ಕಟ್ಟಿಕೊಂಡು ಅದ ರಲ್ಲಿ ಅದನ್ನು ಬರೆದುಕೊಂಡು ಪಾಠ ಮಾಡು." ಎಂದು ತಾಯಿ ಬುದ್ಧಿವಾದ ಹೇಳಿದಳು.

ಭಾಸ್ಕರನು ತಮ್ಮ ಮನೆಗೆ ಹೊರಟು ಹೋದ. ನಾನು ಮನದಲ್ಲಿಯೇ ಏನೇನೋ ನಿರ್ಧರಿಸುತ್ತಲಿದ್ದೆ. ಬರುವ ಭಾನುವಾರ ರಾಮರಕ್ಷಾ ಬರೆದು ಕೊಳ್ಳುವದೆಂದು ಸಂಕಲ್ಪ ಮಾಡಿಕೊಂಡೆ. ಬಿಳೀ ಹಾಳೆ ತೆಗೆದುಕೊಂಡು ಪುಸ್ತಕ ಕಟ್ಟಿ, ಲೆಕ್ಕಣಿಕೆಯನ್ನು ಸಿದ್ಧಪಡಿಸಿಟ್ಟು ರವಿವಾರದ ದಾರಿಯನ್ನೇ ಕಾಯುತ್ತಿದ್ದೆ. ರವಿವಾರ ಬೆಳಗಾಗುತ್ತಲೆ ನಾನು ಭಾಸ್ಕರನ ಮನೆಗೆ ಹೋದೆ. ಭಾಸ್ಕರನು ಪುಸ್ತಕ ಕೊಡುವನೋ ಇಲ್ಲವೋ ಎಂದು ನೇರವಾಗಿ ನಾನು ಅವರ ತಾಯಿಯ ಬಳಿಗೆ ಹೋಗಿ ವಿನಯದಿಂದ ಕೇಳಿದೆ, "ಭೀಮಕ್ಕಾ, ಒಂದು ದಿನದ ಮಟ್ಟಿಗೆ ರಾಮರಕ್ಷಾ ಪುಸ್ತಕ ಬೇಕಾಗಿದೆ. ಭಾಸ್ಕರನಿಗೆ ಹೇಳಿ ಕೊಡಿಸುವಿರಾ? ನಾನು ಅದನ್ನು ಬರೆದುಕೊಂಡು ಕೊಡುತ್ತೇನೆ. ನನಗೆ ಅದನ್ನು ಉರು ಹಾಕಬೇಕಾಗಿದೆ. ಇಂದು ಹೇಗೂ ರಜೆ ಇದೆ. ದಿನವಿಡೀ ಕುಳಿತು ಬರೆದು ಬಿಡುತ್ತೇನೆ."

ಭೀಮಕ್ಕ ಭಾಸ್ಕರನನ್ನು ಕೂಗಿ ಹೇಳಿದರು, "ಭಾಸ್ಕರ, ಶ್ಯಾಮನಿಷ್ಟು ಕೇಳುತ್ತಿದ್ದಾನೆ, ನಿನ್ನ ರಾಮರಕ್ಷಾ ಪುಸ್ತಕ ಕೊಡು ಆತನಿಗೆ. ಅವನೇನೂ ಅದನ್ನು ಹರಿಯುವದಿಲ್ಲ. ಅದರ ಮೇಲೆ ಮಸಿ ಚೆಲ್ಲಿಗಿಲ್ಲೀ ಶ್ಯಾಮ? ಸರಿ ಯಾಗಿ ಉಪಯೋಗಿಸಿಕೊಂಡು ತಂದು ಕೊಡು. ಭಾಸ್ಕರ, ಅವನಿಗೆ ಅದನ್ನು ತಂದು ಕೊಡು." ಭಾಸ್ಕರನು ಅದನ್ನು ಕೊಡಲಿಕ್ಕೆ ಸಿದ್ಧನಿರಲಿಲ್ಲ. "ಇಂದು ರಜೆ ಇದೆ. ಉಳಿದ ಶ್ಲೋಕ ನಾನು ಪಾಠ ಮಾಡಬೇಕಾಗಿದೆ. ಅವನಿಗೆ ಅದನ್ನು ಕೊಟ್ಟರೆ ನನ್ನ ಪಾಠ ಉಳಿದು ಹೋಗುತ್ತದೆ" ಎಂದು ಕಾರಣ ಮುಂದೆ ಮಾಡಿದ.

ಭೀಮಕ್ಕ ಭಾಸ್ಕರನ ಮೇಲೆ ರೇಗಿಕೊಂಡು ನುಡಿದಳು, "ನಿನ್ನದು ಈ ದಿವಸವೇ ಪಾಠ ಕಾಯ್ದು ನಿಂತಿದೆಯೇನೋ! ನಾಳೆ, ನಾಡದ್ದು, ಬೇಕಾದಾಗ ಮಾಡಿಕೊ. ಅವನು ನಮ್ಮ ನೆರೆಮನೆಯವನಲ್ಲವೇ? ಅವನ ಜೊತೆಗಿಂಥ ಅಸೂಯೆಯೇ? ಸುಮ್ಮನೆ ಕೊಡು ಅವನಿಗೆ, ಇಲ್ಲವಾದರೆ ನೋಡು." ಭೀಮಕ್ಕನ ಸಿಟ್ಟೆಂಥದೆಂಬುದನ್ನು ಭಾಸ್ಕರನು ಅರಿತಿದ್ದನಾದ್ದರಿಂದ ಸುಮ್ಮನೆ ಆ ಪುಸ್ತಕ ನನಗೆ ತಂದುಕೊಟ್ಟ.

ನಾನು ಅದನ್ನು ತೆಗೆದುಕೊಂಡು ಮನೆಗೆ ಬಂದೆ. ಬರೆಯಲಿಕ್ಕೆ ಏಕಾಂತವಿರಬೇಕೆಂದು ದನದ ಕೊಟ್ಟಿಗೆಯಲ್ಲಿ ಹೋಗಿ ಕುಳಿತುಕೊಂಡೆ. ದನಗಳು ಮೇಯಲು ಹೋಗಿದ್ದವು. ದೌತಿ, ಲೆಕ್ಕಣಿಕೆ ಮತ್ತು ಪುಸ್ತಕ ಎಲ್ಲವೂ ಅಣಿಯಾಗಿದ್ದವು. ರಾಮರಕ್ಷಾ ಬರೆಯಲಿಕ್ಕೆ ಪ್ರಾರಂಭಿಸಿದೆ. ಮಧ್ಯಾನ್ಹದ ಊಟದ ಹೊತ್ತಿಗಾಗಲೆ ಅದು ಮುಗಿಯುತ್ತ ಬಂದಿತ್ತು. ಮಧ್ಯಾನ್ಹದ ಊಟವಾದ ಮೇಲೆ ಮತ್ತೆ ಬರೆಯಲು ಕುಳಿತು ಅದನ್ನು ಪೂರ್ತಿಗೊಳಿಸಿದೆ. ಅದು ಮುಗಿದಾಗ ನನಗಾದ ಆನಂದ ಅಷ್ಟಿಷ್ಟಲ್ಲ. ಕೃತಾರ್ಥನಾದೆನೆಂದು ಅನಿಸುತ್ತಿತ್ತು. ನನ್ನ ಕೈಯಿಂದ ಬರೆದ ರಾಮರಕ್ಷಾ! ನನ್ನ ತಾಯಿಯ ತವರು ಮನೆಯಲ್ಲಿ ಕೈಬರೆಹದ ಹಿಂದಿನ ಕಾಲದ ವೇದಾದಿ ಗ್ರಂಥಗಳನ್ನು ಕಂಡಿದ್ದೆ. ಸುಂದರವಾದ ಗುಂಡುಗುಂಡಾದ ಅಕ್ಷರಗಳು. ಎಲ್ಲಿಯೂ ಕಲೆಯಿಲ್ಲ. ಇಂಥ ಹೊತ್ತಿಗೆಗಳನ್ನು ನಾನು ಕಂಡಿದ್ದೆ. ಹಿಂದಿನ ಕಾಲದಲ್ಲಿ ಹಿಂದುಸ್ಥಾನದಲ್ಲಿ ಎಲ್ಲೆಲ್ಲಿಯೂ ಕೈಯಿಂದಲೇ ವೇದಾದಿ ಗ್ರಂಥಗಳನ್ನು ಬರೆದುಕೊಳ್ಳುತ್ತಿದ್ದರು. ಜಗತ್ತಿನಲ್ಲೆಲ್ಲ ಇದೇ ಪರಿಪಾಠವಿದ್ದಿತು. ಸುಂದರ ಹಸ್ತಾಕ್ಷರ ಉಳ್ಳವರಿಗೆ ಆ ಕಾಲದಲ್ಲಿ ತುಂಬ ಗೌರವವಿತ್ತು. ಕಾಶಿಯಲ್ಲಿಯ ಎಷ್ಟೋ ಹಸ್ತಲಿಖಿತ ಗ್ರಂಥಗಳನ್ನು ಮೋರೋಪಂತರು ತಮಗಾಗಿ ಸ್ವತಃ ನಕಲು ಮಾಡಿಕೊಂಡಿದ್ದರೆಂದು ಅವರ ಚರಿತ್ರೆಯಲ್ಲಿ ಬರೆದಿದ್ದಾರೆ. ಆಗಿನ ಜನರಿಗೆ ಆಲಸ್ಯವೆಂಬುದೇ ಗೊತ್ತಿರಲಿಲ್ಲ. ಮುದ್ರಣಾಲಯಗಳೂ ಇರಲಿಲ್ಲವಾದ್ದರಿಂದ ಪುಸ್ತಕಗಳ ಅಭಾವವಿದ್ದಿತು. ಮೋರೋಪಂತರು ಕಾಶಿಯಿಂದ ಬಾರಾಮತಿಗೆ ಪುಸ್ತಕ ತರಿಸಿಕೊಂಡು ಅದರ ಪ್ರತಿ ತಯಾರಿಸಿಕೊಂಡು ಪುನಃ ವಾಪಸು ಕಳಿಸುತ್ತಿದ್ದರಂತೆ. ಸಮರ್ಥರ ಮಠಗಳಲ್ಲಿರುವ ಗ್ರಂಥಾಲಯಗಳಲ್ಲಿ ಸಾವಿರಗಟ್ಟಲೆ ಹಸ್ತಲಿಖಿತ ಪುಸ್ತಕಗಳಿರುತ್ತಿದ್ದವು. ಇಂದು ಮುದ್ರಣಾಲಯಗಳು ಬೀದಿ ಬೀದಿಗೂ

ಇವೆ. ಪುಸ್ತಕಗಳಿಗೂ ಕೊರತೆಯಿಲ್ಲ. ಆದರೆ ಜ್ಞಾನವು ಮಾತ್ರ ಅಷ್ಟಕ್ಕಷ್ಟೇ. ಮನುಷ್ಯನ ತಲೆಗಳು ಇನ್ನೂ ಟೊಳ್ಳಾಗಿಯೇ ಇವೆ. ಜೀವನವು ಸುಧಾರಿಸಿದ್ದಾಗಲೀ, ಸುಸಂಸ್ಕೃತವಾದದ್ದಾಗಲೀ, ಮನುಷ್ಯತ್ವದ ವಿಕಾಸವಾಗಲೀ, ಹೆಚ್ಚಿನ ಪ್ರಾಮಾಣಿಕತನವಾಗಲೀ, ಕರ್ತವ್ಯದಕ್ಷತೆಯಾಗಲೀ, ತ್ಯಾಗ ಮತ್ತು ಪ್ರೇಮದ ಬೆಳವಣಿಗೆಯಾಗಲೀ ಕಂಡುಬರುವದಿಲ್ಲ.

ಅಂದು ನನಗೆ ನಿಜವಾಗಿಯೂ ಅಪಾರವಾದ ಆನಂದವಾಗಿದ್ದಿತು. ಭಾಸ್ಕರನ ಪುಸ್ತಕವನ್ನು ನಾನು ಮರಳಿ ಕೊಟ್ಟು ಬಂದೆ.

“ಏನಪ್ಪಾ ಶ್ಯಾಮಾ, ಇಷ್ಟು ಬೇಗನೆ ಬರೆದು ಮುಗಿಸಿದೆಯಾ ?” ಎಂದು ಭೀಮಕ್ಕ ಕೇಳಿದರು.

“ಅಹುದು. ಬರೆದು ಮುಗಿಸಿದ್ದಾಯಿತು. ಇದು ನೋಡಿರಿ ನನ್ನ ಪುಸ್ತಕ. ಭಾಸ್ಕರನಿಗೆ ಉರುಹಾಕಲು ಬೇಗನೆ ಪುಸ್ತಕ ತಂದುಕೊಡಬೇಕೆಂದು ಮಧ್ಯಾಹ್ನದವರೆಗೆ ಬರೆಯುತ್ತಲೇ ಇದ್ದೆ.”

“ಭಲೆ, ಚೆನ್ನಾಗಿ ಬರೆದಿರುವೆ. ಇನ್ನು ಬೇಗ ಬೇಗ ಕಂಠಪಾಠಮಾಡಿ ಬಿಡು ಅಂದರೆ ಭಾಸ್ಕರನು ಹೀಯಾಳಿಸಲಾರನು.” ಎಂದು ಭೀಮಕ್ಕ ಹೇಳಿದರು.

ನಾನು ಮನೆಗೆ ಬಂದೆ. ಆಮೇಲೆ ಒಂದೇ ಸಮನೆ ರಾಮರಕ್ಷಾ ಉರು ಹಾಕತೊಡಗಿದೆ. ಒಂದು ವಾರದಲ್ಲಿ ಪೂರ್ತಿ ಪಾಠ ಮಾಡಿ ಬಿಡುವೆನೆಂದು ನಾನು ನಿರ್ಧರಿಸಿದೆ. ಮುಂದಿನ ಭಾನುವಾರ ತಂದೆಯವರಿಗೆ ಒಮ್ಮೆಲೆ ಬೆರಗನ್ನುಂಟು ಮಾಡಬೇಕೆಂದು ಮನದಲ್ಲಿ ಯೋಚಿಸಿದೆ. ನಿತ್ಯವೂ ನಾನೆಷ್ಟು ಸಲ ರಾಮರಕ್ಷಾ ಪಾರಾಯಣ ಮಾಡುತ್ತಿದ್ದೆನೆಂಬುದನ್ನು ದೇವರೇ ಬಲ್ಲ. ಬಿಡುವು ದೊರೆತಾಗಲೆಲ್ಲ ಚೋಪಡಿಯನ್ನು ಕೈಯಲ್ಲಿ ತೆಗೆದುಕೊಂಡು ಕೂಡುತ್ತಲಿದ್ದೆ. ನನಗೆ ಸಂಸ್ಕೃತ ವ್ಯಾಕರಣವು ಬರುತ್ತಿರಲಿಲ್ಲವಾದರೂ ಎಷ್ಟೋ ಅರ್ಥವಾಗುತ್ತಿತ್ತು. ಉರು ಹಾಕುವಾಗ್ಗೆ ತುಂಬ ಆನಂದವಾಗುತ್ತಿತ್ತು. ಕೊನೆಗೆ ಎರಡನೆ ಭಾನುವಾರ ಬಂದು ಬಿಟ್ಟಿತು. ನನಗೆ ರಾಮರಕ್ಷಾ ಪೂರ್ತಿ ಹೇಳಲು ಬರುತ್ತಿತ್ತು. ಸಾಯಂಕಾಲ ಹೊರಗಿನಿಂದ ಯಾವಾಗ ನಮ್ಮ ತಂದೆ ತಿರುಗಿ ಬರುವರೋ, ಯಾವಾಗ ಅವರೆದುರಿನಲ್ಲಿ ರಾಮರಕ್ಷಾ ಅಂದು ತೋರಿಸಿ ಅವರನ್ನು ಬೆರಗುಗೊಳಿಸುವೆನೋ ಎಂದು ನಾನು ಹಂಬಲಿಸುತ್ತಿದ್ದೆ. ಆ ಸಾಯಂ

ಕಾಲವೊಮ್ಮೆ ಬಂದಿತು. ಮನೆಯಲ್ಲಿ ದೀಪಗಳೂ ಆಕಾಶದಲ್ಲಿ ತಾರೆಗಳೂ ಬೆಳಗಿದವು. ನಾನು ಅಂಗಳದಲ್ಲಿ ಶತಪಥ ಹಾಕುತ್ತ ಮನಸ್ಸಿನಲ್ಲಿಯೇ ರಾಮ ರಕ್ಷಾದ ರಂಗತಾಲೀಮು ನಡೆಸಿದ್ದೆ. ತಂದೆಯವರು ಬಂದರು. ಕೈಕಾಲು ತೊಳೆ ದುಕೊಂಡು ಮನೆಯೊಳಗೆ ಹೋದರು.

ಅವರು ವಿಚಾರಿಸಿದರು, "ಶ್ಯಾಮಾ, ಬಾಯಿಪಾಠ, ಸ್ತೋತ್ರ ಹೇಳು ವುದು ಎಲ್ಲಾ ಮುಗಿಯಿತೇ ?"

"ಹೋ, ಎಲ್ಲ ಮುಗಿಯಿತು. ನೀವು ನನ್ನಿಂದ ರಾಮರಕ್ಷಾ ಪಾಠ ತೆಗೆ ದುಕೊಳ್ಳುವಿರಾ ?"

"ನೀನೆಂದು ಕಲಿತೆ ? ಯಾರು ಕಲಿಸಿದರು ?" ತಂದೆ ಆಶ್ಚರ್ಯದಿಂದ ಕೇಳಿದರು.

ನಾನು ಹೇಳಿದೆ, "ಭಾಸ್ಕರನ ಪುಸ್ತಕ ತಂದು ನಾನು ನಕಲು ಮಾಡಿ ಕೊಂಡು ಪಾಠ ಮಾಡಿದೆನು."

"ನೋಡೋಣ ನಿನ್ನ ರಾಮರಕ್ಷಾ ಬರೆದ ಪುಸ್ತಕ" ಅವರು ಕುತೂ ಹಲದಿಂದ ಕೇಳಿದರು.

ನಾನು ನನ್ನ ಪುಸ್ತಕ ಅವರೆದುರಿನಲ್ಲಿ ಇಟ್ಟೆ. ಪುಸ್ತಕದ ಪಾನುಗಳು ಚೆನ್ನಾಗಿ ಗೆರೆ ಹೊಡೆಯಲ್ಪಟ್ಟಿದ್ದವು. ಎಲ್ಲಿಯೂ ಕಲೆ ಬಿದ್ದಿರಲಿಲ್ಲ. ಆದರೆ ಅಕ್ಷರಗಳು ಮಾತ್ರ ಗಿಡ್ಡಗಿಡ್ಡವಾಗಿದ್ದವು.

ತಂದೆ ಹೇಳಿದರು, "ಶಹಬ್ಬಾಸ್, ಅಕ್ಷರಗಳೆಲ್ಲ ಸುಂದರವಾಗಿವೆ. ಆದರೆ ತುಸು ಉದ್ದುದ್ದ ಬರೆಯಬೇಕು. ಹೀಗೆ ಗಿಡ್ಡ ಹಾಗೂ ಅಗಲವಾಗಿ ಬರೆಯ ಬಾರದು. ಹೇಳು ನೋಡೋಣ ಹೇಗೆ ಅನ್ನುವಿ ?"

ನಾನು ರಾಮರಕ್ಷಾ ಅಡೆತಡೆಯಿಲ್ಲದೆ ಉತ್ಸಾಹದಿಂದ ಹೇಳಿದೆ. ತಂದೆ ಯವರು ವಾತ್ಸಲ್ಯದಿಂದ ನನ್ನ ಬೆನ್ನ ಮೇಲೆ ಕೈ ತಟ್ಟಿದರು. ಆಗ ನನಗಾದ ಆನಂದವನ್ನು ಬಣ್ಣಿಸಿ ನಾನು ಹೇಗೆ ಹೇಳಲಿ ? ಊಟವಾದ ಬಳಿಕ ತಂದೆ ಯವರು ಹೊರಗೆ ಹೋದರು. ನಾನು ತಾಯಿಯ ಬಳಿಗೆ ಹೋದೆ. "ಅಮ್ಮಾ, ನೋಡು ಹೇಗಿದೆ ನನ್ನ ಪುಸ್ತಕ ? ನಾನು ನಿನ್ನ ಮೇಲೆ ಸಿಟ್ಟಾಗಿದ್ದರಿಂದ ನಿನಗೆ ತೋರಿಸಿರಲೇ ಇಲ್ಲ" ಎಂದು ಉಕ್ಕಿ ಬಂದ ಪ್ರೇಮದಿಂದ ಹೇಳಿದೆ.

ತಾಯಿಯೆಂದಳು, "ನೀನು ನಕಲು ಮಾಡಿಕೊಂಡದ್ದು ನನಗೆ ಗೊತ್ತಿದ್ದಿತು. ನಿನ್ನ ಅಕ್ಷರಗಳನ್ನು ನೋಡಬೇಕೆಂದು ಎಷ್ಟೋ ಸಲ ಮನಸ್ಸು ಹಾತೊರೆಯುತ್ತಿತ್ತು. ಆದರೆ ನೀನಾಗಿ ತೋರಿಸುವೆಯೆಂದು ಆಶಿಸಿದ್ದೆ. ನೀನು ಆ ರವಿವಾರವೇ ಅದನ್ನು ನನಗೆ ತೋರಿಸಬೇಕಾಗಿತ್ತು. ತಾವು ಮಾಡಿದ ಒಳ್ಳೆ ಕೆಲಸಗಳನ್ನು ತಾಯಿಗೆ ತೋರಿಸದೆ ಇನ್ನಾರಿಗೆ ತೋರಿಸುವದು? ಕೆಟ್ಟ ಕೆಲಸಗಳಿಗಾಗಿ ತಾಯಿ ನೊಂದುಕೊಳ್ಳಬಹುದು. ಆದರೆ ಒಳ್ಳೆ ಕೆಲಸಗಳಿಗೆ ತಾಯಿಗಿಂತ ಹೆಚ್ಚು ಕೌತುಕ ಬೇರೆಯವರು ಮಾಡುವದು ಸಾಧ್ಯವಿದೆಯೇ? ತನ್ನ ಹುಡುಗ ಗುಣವಂತನಾಗುತ್ತಿದ್ದರೆ, ತಾಯಿಗೆ ಅದರಿಂದಾಗುವ ಆನಂದ ಅಷ್ಟಿಷ್ಟಲ್ಲ. ಆ ನನ್ನ ಆನಂದವನ್ನು ನೀನು ನನ್ನಿಂದ ಎಂಟು ದಿವಸಗಳ ವರೆಗೆ ಬಚ್ಚಿಟ್ಟೆಯಲ್ಲವೇ? ಶ್ಯಾಮನು ಇಂದು ತನ್ನ ಪುಸ್ತಕ ತಂದು ತೋರಿಸಬಹುದು, ನಾನು ಅವನನ್ನು ಎದೆಗೆ ಅವಚಿಕೊಳ್ಳಬಹುದು ಎಂದು ದಿನಾಲು ಹಂಬಲಿಸುತ್ತಿದ್ದೆ. ಆದರೆ ನೀನು ತಾಯಿಯ ಮೇಲೆ ಸಿಟ್ಟಾಗಿರುವೆಯಲ್ಲವೇ? ಹೋಗಲಿ, ತಾಯಿಗೆ ಪುಸ್ತಕ ತೋರಿಸದಿದ್ದರೆ ಇಲ್ಲ. ಈಗ ರಾಮರಕ್ಷಾ ಪಾಠವಾಯಿತಲ್ಲವೇ? ಪುಸ್ತಕವಿಲ್ಲವೆಂದು ಅಳುತ್ತ ಕುಳಿತಿದ್ದರೆ ಪಾಠವಾಗುವದು ಸಾಧ್ಯವಿದ್ದಿತೇ? ಎಲೋ, ನಮಗೆ ಕೈಕಾಲು, ಕಣ್ಣು ಎಲ್ಲವೂ ಇವೆ. ಸ್ವಂತ ಕಾಲಮೇಲೆ ನಿಲ್ಲಲು ಕಲಿಯಬೇಕು. ಬುದ್ಧಿಯಿದ್ದವನಿಗೆ, ಮನದಲ್ಲಿ ನಿರ್ಧಾರವಿದ್ದವನಿಗೆ ಏನೆಲ್ಲವೂ ಸಾಧ್ಯವಿದೆ. ಹೀಗೆಯೇ ಪರಿಶ್ರಮಬಟ್ಟು ದೊಡ್ಡವನಾಗು ಎಂದಿಗೂ ಪರಾವಲಂಬಿಯಾಗಿ ಇರಬೇಡ. ಆದರೆ ಒಂದು ಮಾತನ್ನು ಜ್ಞಾಪಕದಲ್ಲಿಟ್ಟುಕೋ. ಬೇರೆಯವರಿಗಿಂತ ತನಗೆ ಹೆಚ್ಚು ಬರುತ್ತದೆಂಬ ಗರ್ವದಿಂದ ಯಾರನ್ನೂ ಹೀಯಾಳಿಸಬೇಡ ಯಾರನ್ನೂ ತಿರಸ್ಕರಿಸಬೇಡ. ಬೇರೆಯವರಿಗೂ ತನ್ನ ಹತ್ತಿರ ಇದ್ದದ್ದನ್ನು ಕೊಡಬೇಕು. ಅವರನ್ನೂ ತಮ್ಮಂತೆಯೇ ಮಾಡಬೇಕು" ಎಂದು ಹೇಳುತ್ತ ತಾಯಿ ಆ ಪುಸ್ತಕವನ್ನು ಕೈಗೆ ತೆಗೆದುಕೊಂಡಳು. ಆವಳಿಗೆ ಆನಂದವಾಯಿತು. ಸಾರ್ಥಕವೆನಿಸಿತು. "ಈ ಮೊದಲನೆ ಪುಟದ ಮೇಲ್ಗಡೆ ರಾಮನ ಚಿತ್ರವಿದ್ದರೆ ಆಯಿತು. ರಾಮರಕ್ಷಾ ಪುಸ್ತಕ ಪರಿಪೂರ್ಣವಾದಂತಾಯಿತು. ಆ ಮೋಹನ ಮಾರವಾಡಿ ನಿನಗೆ ಅಂಥ ಚಿತ್ರ ಒದಗಿಸಬಹುದು. ಅವನ ಅಂಗಡಿಯಲ್ಲಿ ಅರಿವೆಯ ಮೇಲೆ ರಾಮನ ಚಿತ್ರ ಇರುತ್ತವೆ. ಅವನಿಂದ

ಕೇಳಿ ತೆಗೆದುಕೊಂಡು ಅಂಟಿಸಿ ಬಿಡು. ಶ್ಯಾಮಾ, ನಿನ್ನನ್ನು ಕಂಡರೆ ಇಂದು ದೇವರಿಗೆ ಬಹಳ ಮೆಚ್ಚಿಗೆಯಾಗುವದು. ಯಾಕೆಂದರೆ ನೀನು ಸ್ವಂತ ಪರಿಶ್ರಮದಿಂದ ಇದನ್ನು ಬರೆದು ತೆಗೆದು, ಕಂಠಪಾಠ ಮಾಡಿ ಅವನ ಸ್ತೋತ್ರಗಳನ್ನು ಕಲಿತುಕೊಂಡಿರುವೆ. "

ರಾತ್ರಿ : ೧೪

## : : ಉಪ್ಪಿಲ್ಲದ ಪಲ್ಲೆ

ರಾಜ ಮತ್ತು ರಾಮುು ನದಿಯ ಕಡೆಗೆ ಹೋಗಿದ್ದರು. ಒಂದು ಬಂಡೆಗಲ್ಲಿನ ಮೇಲೆ ಇಬ್ಬರೂ ಕುಳಿತುಕೊಂಡಿದ್ದರು. ರಾಜನೆಂದ, "ರಾಮೂ, ಈ ಸ್ಥಳಬಿಟ್ಟು ನನಗೆ ಹೋಗಬೇಕೆಂದು ಅನ್ನಿಸುವದಿಲ್ಲ. ಮುಂದಿರುವ ಈ ಹೊಳೆ, ಈ ವನಶ್ರೀ, ಈ ನವಿಲುಗಳು, ಇವೆಲ್ಲ ಎಷ್ಟು ಆನಂದವನ್ನುಂಟು ಮಾಡುತ್ತವೆ ! ಎಲ್ಲಕ್ಕೂ ಹೆಚ್ಚಿನ ಆನಂದವೆಂದರೆ ನಿಮ್ಮೆಲ್ಲರ ಸಹವಾಸದಲ್ಲಿರುವದು. ದಿನಂಪ್ರತಿ ಶ್ಯಾಮನ ಕಥೆಗಳೂ ಕೇಳಲಿಕ್ಕೆ ದೊರೆಯುತ್ತವೆ. ಅವು ನನಗೆ ಬಹಳ ರುಚಿಸುತ್ತವೆ. "

" ಅವಕ್ಕೆ ಕಥೆಗಳೆಂದು ಕರೆಯಬೇಕೋ ? ಪ್ರವಚನಗಳೆಂದು ಹೇಳಬೇಕೋ ? ವ್ಯಾಖ್ಯಾನಗಳೋ ? ಸ್ಮೃತಿಚಿತ್ರಗಳೋ ? ನನಗಂತೂ ತಿಳಿಯಲೊಲ್ಲದು. ಕೇಳುವದರಿಂದ ಆನಂದವಾಗುತ್ತದೆ. ಸ್ಫೂರ್ತಿಯುಂಟಾಗುತ್ತದೆ."

" ನಿರ್ಮಲ ಹೃದಯವನ್ನೇ ಸುರಿವಿದಂತಿರುತ್ತವೆ ಶ್ಯಾಮನ ಮಾತುಗಳಲ್ಲಿ ! ಆದ್ದರಿಂದ ಅವನ ಹೇಳಿಕೆಯಲ್ಲಿ ವಿಶೇಷವಾದ ಮಾಧುರ್ಯವು ತುಂಬಿಕೊಂಡಿರುತ್ತದೆ. ನಾಮುಮಾತ್ರಕ್ಕೂ ಕೃತ್ರಿಮತೆ ಇರುವದಿಲ್ಲ. "

" ಆದೆಲ್ಲ ಸರಿ. ಆದರೆ ಕೃತ್ರಿಮತೆಯಿಲ್ಲದ ಹೊರತು ಜನಕ್ಕೆ ಮೆಚ್ಚುವದಿಲ್ಲ. ಇಂದಿನ ಜನ ಕೃತ್ರಿಮತೆಗೆ ಮನಸೋತವರಿರುತ್ತಾರೆ. ರೂಪಾಯಿಯ ನಾಣ್ಯದಲ್ಲಿ ಶುದ್ಧ ಬೆಳ್ಳಿಯೇ ಇದ್ದರೆ ಅದು ನಡೆಯುವದಿಲ್ಲ. ಅದರಲ್ಲಿ ತುಸು ಅಶುದ್ಧ ಧಾತುವನ್ನು ಬೆರೆಸಿದಾಗಲೇ ಅದು ಝುಣ್ಣೆಂದು ಸದ್ದಾಗಿ ವ್ಯವಹಾರದಲ್ಲಿ ಚಲಾವಣೆಯಾಗುತ್ತದೆ " ಎಂದು ರಾಮನು ವಾದ ಹಾಕಿದ.

" ನನ್ನ ಮನಸ್ಸಿನಲ್ಲೊಂದು ವಿಚಾರ ಬಂದಿದೆ. ನೀನು ಕೇಳಿ ನಗಲಾರೆ ಯಷ್ಟೆ ? " ರಾಜೂ ಕೇಳಿದ.

" ನಾನೆಂದಿಗೂ ನಗಲಾರೆ ಹೇಳು. ಬೇರೆಯವರ ಭಾವನೆಗಳಿಗೆ ನಗ ಬಾರದೆಂಬುದೇ ನನ್ನ ಅಭಿಪ್ರಾಯವಾಗಿದೆ. "

" ಶ್ಯಾಮನ ಸ್ಮೃತಿಚಿತ್ರಗಳನ್ನು ಪ್ರಸಿದ್ಧಪಡಿಸಿದರೆ ಒಳಿತಾಗಲಿಕ್ಕಿಲ್ಲವೆ ? ಬಾಲಕರಿಗೆ ಮತ್ತು ಹೆಣ್ಣುಮಕ್ಕಳಿಗೆ ಓದಲು ಅವು ರುಚಿಸಬಹುದು. ತಾಯಿ-ತಂದೆಗಳಿಗೂ ಉಪಯುಕ್ತವಾಗಬಹುದು. ಶ್ಯಾಮನ ಕಥೆಗಳಲ್ಲಿ ಕೊಂಕಣ ಪಲ್ಲಿಯ ಸಂಸ್ಕೃತಿಯು ತುಂಬಿಕೊಂಡಿದೆ. ಈ ಸ್ಮೃತಿ ಚಿತ್ರಗಳೆಂದರೆ ಒಂದು ಸುಂದರ ಸಂಸ್ಕೃತಿಯ ವರ್ಣನೆಯ ಸಂಕಲನವಾಗಬಹುದಾಗಿದೆ. "

" ಆದರೆ ಅದು ಶ್ಯಾಮನ ಮನಸ್ಸಿಗೆ ಬರಲಿಕ್ಕಿಲ್ಲ. ತನ್ನ ಕಥೆಗಳನ್ನು ಜನರು ಓದುವರೆಂಬ ಆತ್ಮವಿಶ್ವಾಸ ಅವನಿಗಿಲ್ಲ. ಜನರಿಗೆ ಮನರಂಜಿಸುವ ಹಾಗೂ ಆಕರ್ಷಕವಾದ ಕಥೆಗಳು ಬೇಕು, ಲೈಲಾಮಜನೂ ಕಥೆಗಳು ಬೇಕು ಎಂದು ಅವನು ಹೇಳುತ್ತಿದ್ದ. "

ರಾಮು ಮತ್ತು ರಾಜೂ ಮಾತುಕಥೆ ನಡೆದಿರುವಾಗಲೇ ಪ್ರಾರ್ಥನೆಯ ಗಂಟೆ ಬಾರಿಸಿತು. ಅವರಿಬ್ಬರೂ ಆಶ್ರಮದ ಕಡೆ ನಡೆದರು. ಶ್ಯಾಮನು ರಾಜನ ದಾರಿಯನ್ನೇ ಕಾಯುತ್ತಲಿದ್ದ. ಅವರಿಬ್ಬರೂ ಬಂದುದನ್ನು ಕಂಡು ರಾಜನಿಗೆ ಶ್ಯಾಮು ಕೇಳಿದ, " ಇಂದು ನನ್ನನ್ನೇಕೆ ಕರೆಯಲಿಲ್ಲ ? ಇಬ್ಬರೇ ಹೋಗಿಬಿಟ್ಟಿರಿ ? "

" ನೀನು ಓದುತ್ತಾ ಕುಳಿತಿದ್ದೆ. ಹಗಲಿಡೀ ಕೆಲಸ ಮಾಡಿ ತುಸು ಓದುತ್ತ ಕುಳಿತವನನ್ನೇಕೆ ಎಬ್ಬಿಸುವದೆಂದು ಇಬ್ಬರೇ ಹೋಗಿದ್ದೆವು. ನಿನ್ನ ಓದಿಗೆ ತಡೆಯನ್ನುಂಟು ಮಾಡಲು ಮನಸ್ಸು ಒಪ್ಪಲಿಲ್ಲ. " ಎಂದು ರಾಜ ಉತ್ತರಿಸಿದ.

" ನಾನಾದರೂ ಎಲ್ಲಿ ಹೆಚ್ಚಿಗೆ ಓದಬೇಕೆನ್ನುತ್ತೇನೆ ? ಜನತ್ತಿನ ವಿಶಾಲ ವಾದ ಗ್ರಂಥವನ್ನು ಓದಬೇಕು, ಮನುಷ್ಯನ ಜೀವನವನ್ನೂ ಹೃದಯವನ್ನೂ ಓದಬೇಕು, ಅವುಗಳಲ್ಲಿರುವ ಸುಖದುಃಖಗಳನ್ನರಿತುಕೊಳ್ಳಬೇಕು, ಇದೇ ನಿಜವಾದ ವಾಚನ ! ಅಲ್ಲವೇ ರಾಜು ? " ಎಂದು ಶ್ಯಾಮು ನುಡಿದ.

" ಶ್ಯಾಮಾ, ನೀನು ಬಹಳ ಓದಿಕೊಂಡಿರುವೆಯೆಂದು ಹೀಗೆಲ್ಲ

ಹೇಳುತ್ತೇ ಪ್ರಪಂಚದ ಗ್ರಂಥವನ್ನು ಓದಲಿಕ್ಕೆ ಕಲಿಯಬೇಕಾಗುತ್ತದೆ. ಒಕ್ಕಲಿಗರ ಆನಂದವನ್ನು ಕವಿಗಳು ಬಣ್ಣಿಸುತ್ತಾರೆ. ಆದರೆ ಅದನ್ನು ಉಪಭೋಗಿಸಲು ಒಕ್ಕಲಿಗನಿಗೆ ಸಾಧ್ಯವಿಲ್ಲ. ಯಾಕಂದರೆ ಆ ದೃಷ್ಟಿ ಅವನಿಗಿರುವದಿಲ್ಲ. ”

ಅಷ್ಟರಲ್ಲಿ ಪ್ರಾರ್ಥನೆಯ ಎರಡನೆಯ ಗಂಟೆ ಬಾರಿಸಿದ್ದರಿಂದ ಎಲ್ಲರೂ ಪ್ರಾರ್ಥನೆಗೆ ಕುಳಿತುಕೊಂಡರು. ಪ್ರಾರ್ಥನೆ ಮುಗಿಸಿ ಶ್ಯಾಮನು ತನ್ನ ಜೀವನ ಸ್ಮೃತಿಯನ್ನು ಹೇಳತೊಡಗಿದನು:

ಗೆಳೆಯರೆ, ಮೊದಲಿಗೆ ಒಳ್ಳೇ ಆದರ್ಶಮಯ ಉದಾಹರಣೆಯಿಂದ ದೊರೆಯುವಷ್ಟು ಶಿಕ್ಷಣವು ನೂರಾರು ವ್ಯಾಖ್ಯಾನಗಳನ್ನು ಕೇಳಿ ಅಥವಾ ಅನೇಕ ಗ್ರಂಥಗಳನ್ನು ಓದಿಯೂ ದೊರೆಯುವದಿಲ್ಲ. ಕೃತಿಯು ಮೂಕವಾಗಿ ಮಾತನಾಡುತ್ತದೆ. ಶಬ್ದಕ್ಕಿಂತಲೂ ಈ ಮೂಕ ಮಾತು ಪರಿಣಾಮಕಾರಿಯಾದದ್ದು.

ಊಟವನ್ನು ಮಾಡುವ ರೀತಿಯಲ್ಲಿಯೂ ಒಂದು ಸಂಸ್ಕೃತಿ ಇದೆ. ನಮ್ಮ ತಂದೆ ಆಗಾಗ್ಗೆ ಹೇಳುತ್ತಿದ್ದರು, “ ತಮ್ಮ ಎಲೆಯ ಕಡೆಗೆ ನೋಡಿ ಊಟ ಮಾಡಬೇಕು, ಎಲೆಯ ಮೇಲೆ ಪದಾರ್ಥವಿದ್ದಲ್ಲಿ ಅದನ್ನು ಬೇಡಬಾರದು. ಬೇಕಾದ ಪದಾರ್ಥವನ್ನು ಬಡಿಸಬಂದಾಗ ಬೇಡಬೇಕು. ಪಂಕ್ತಿಯಲ್ಲಿ ಎಲ್ಲರಿಗೂ ನೀಡುವಾಗ ತಮಗೂ ನೀಡಿಯೇ ನೀಡುತ್ತಾರೆ. ಕಂಗಾಲನಂತೆ ಮಾಡಬಾರದು. ಎಲೆಯ ಸುತ್ತಲೂ ಅನ್ನ ಚೆಲ್ಲಬಾರದು. ಎಲೆಯಲ್ಲಿ ಏನನ್ನೂ ಬಿಸಾಡಿ ಏಳಬಾರದು. ಎಲೆಯಲ್ಲಿ ಬಡಿಸಿದ ಪದಾರ್ಥಗಳನ್ನು ಟೀಕಿಸಬಾರದು. ಎಲೆಯಲ್ಲಿ ಕೂದಲವೋ ಮತ್ತೇನಾದರೂ ಬಂದಿದ್ದರೆ ಸುಮ್ಮನೆ ಬದಿಗೆ ತೆಗೆದು ಇಡಬೇಕು ಬೇರೆಯವರಿಗೆ ಅಸಹ್ಯವಾಗುವಂತೆ ಎಲ್ಲರೆದುರು ತೆಗೆದು ತೋರಿಸಬಾರದು. ವಿಷ ಪದಾರ್ಥಗಳೇನಾದರೂ ಕಂಡರೆ ಮಾತ್ರ ಹೇಳಬೇಕು. ”

ಇದು ಅವರು ಹೇಳುವ ಪರೋಪದೇಶ ಮಾತ್ರ ಆಗಿರಲಿಲ್ಲ. ಅವರು ಅದರಂತೆ ನಡೆದುಕೊಳ್ಳುತಿದ್ದುದನ್ನು ನಾನು ಅನೇಕ ಬಾರಿ ನೋಡಿದ್ದೇನೆ. ನಮ್ಮ ತಂದೆಯವರು ಉಂಡು ಎದ್ದಾಗ ಅವರ ಎಲೆ – ಇದರ ಮೇಲೆ ಯಾರಾದರೂ ಉಂಡಿರುವರೋ ಇಲ್ಲವೋ ಎನ್ನುವಷ್ಟು ಸ್ವಚ್ಛವಾಗಿರುತ್ತಿದ್ದಿತು. ನನ್ನ

ಎಲೆಯ ಮೇಲೆ ಅನ್ನದ ಅಗಳುಗಳು ಕಾಣಿಸಿಕೊಂಡರೆ ಅವರು ಹೇಳುತ್ತಿದ್ದರು, "ಮಧುರಿಯ ಒಂದು ಕೋಳಿಯ ಹೊಟ್ಟೆ ತುಂಬುವಷ್ಟು ಅನ್ನ ಚೆಲ್ಲುವಿಯಲ್ಲ; ಎಲ್ಲ ಸರಿಯಾಗಿ ಬಳಿದುಕೊಂಡು ಉಣ್ಣು." ಎಂದು ಸಿಟ್ಟು ಮಾಡುತ್ತಿದ್ದರು. 'ಈ ಪದಾರ್ಥ ಕೆಟ್ಟಿದೆ, ಈ ಪದಾರ್ಥ ರುಚಿಯಾಗಿಲ್ಲ' ಇತ್ಯಾದಿಯಾಗಿ ಅವರು ಎಂದೂ ಹೇಳುತ್ತಿರಲಿಲ್ಲ. ಅಕಸ್ಮಾತ್ತಾಗಿ ಯಾರಾದರೂ ಎಂದಾದರೊಮ್ಮೆ 'ಈ ಪದಾರ್ಥ ಹೇಗಾಗಿದೆ, ಈ ಪಕ್ವಾನ್ನ ಹೇಗಾಗಿದೆ?' ಎಂದು ಕೇಳಿದರೆ "ರಾಜಮಾನ್ಯ!" ಎಂದು ಹೇಳಿ ಬಿಡುತ್ತಿದ್ದರು. ಇದು ಅವರ ವಾಡಿಕೆಯ ಮಾತಾಗಿ ಹೋಗಿತ್ತು.

ಒಂದು ದಿವಸ ನಡೆದ ಪ್ರಸಂಗ ನನಗೆ ಚೆನ್ನಾಗಿ ನೆನಪಿನಲ್ಲಿದೆ. ದಿನಾಲು ತಂದೆಯವರು ಮನೆಯದೇವರ ಪೂಜೆ ಮುಗಿಸಿ ದೇವಸ್ಥಾನಕ್ಕೆ ಹೋಗುತ್ತಿದ್ದರು. ಅವರು ಬರುವಷ್ಟರಲ್ಲಿ ನಾವು ಎಲೆ - ಮಣೆ ಎಲ್ಲ ವ್ಯವಸ್ಥೆ ಮಾಡಿ ಅನ್ನವನ್ನುಳಿದು ಮಿಕ್ಕೆಲ್ಲ ಪದಾರ್ಥಗಳನ್ನು ಬಡಿಸಿ ಇಡುತ್ತಿದ್ದೆವು. ಆ ಮೇಲೆ ಬಾಗಿಲದ ಹತ್ತರ ತಂದೆಯವರು ಬರುವದು ಕಂಡೊಡನೆ ತಾಯಿಗೆ ಅನ್ನ ಬಡಿಸಲು ಸೂಚನೆ ಕೊಡುತ್ತಿದ್ದೆವು. "ಭಾವೂ ಬಂದರು ಅನ್ನ ಬಡಿಸು." ತಂದೆಯವರು ದೇವಸ್ಥಾನದಿಂದ ತೆಗೆದುಕೊಂಡು ಬಂದ ಗಣಪತಿ ತೀರ್ಥವನ್ನು ನಮ್ಮೆಲ್ಲರಿಗೆ ಕೊಡುತ್ತಿದ್ದರು. ಆಮೇಲೆ ಊಟಕ್ಕೆ ಆರಂಭಿಸುವದು

ಅಂದು ನಾವು ಊಟಕ್ಕೆ ಕುಳಿತುಕೊಂಡಿದ್ದೆವು. ಗೆಣಸಿನ ಸೊಪ್ಪಿನ ಪಲ್ಲೆ ಮಾಡಿದ್ದಳು. ಯಾವ ಸೊಪ್ಪಿದ್ದರೂ ನಮ್ಮ ತಾಯಿ ಪಲ್ಲೆ ಮಾಡುತ್ತಿದ್ದಳು. ಕುಂಬಳ ಎಲೆ, ಬೆಂಡಿಯ ಚಿಗುರು ಎಲೆ ಇವುಗಳ ಪಲ್ಲೆಯನ್ನು ಕೂಡ ಚೆನ್ನಾಗಿ ಮಾಡುತ್ತಿದ್ದಳು. 'ಉಪ್ಪು, ಕಾರ ಮತ್ತು ಎಣ್ಣೆಯ ಒಗ್ಗರಣೆ ಇಷ್ಟಾದರೆ ಸರಿ ಯಾವ ಪಲ್ಲೆಯಾದರೂ ರುಚಿಯಾಗುತ್ತದೆ.' ಎಂದು ಅವಳು ಹೇಳುತ್ತಿದ್ದಳು. ನಿಜವಾಗಿಯೂ ರುಚಿಯಾಗುತ್ತಿತ್ತು. ಪಾಕ ದೇವತೆಯೇ ಅವಳ ಕೈಯಲ್ಲಿದ್ದಳೋ ಏನೋ! ಮಾಡಿದ ಪದಾರ್ಥಗಳಲ್ಲಿ ಅವಳು ತನ್ನ ಹೃದಯದಲ್ಲಿಯ ಎಲ್ಲ ಸವಿಯನ್ನು ಸುರಿಯುತ್ತಿದ್ದಳೋ ಎಂಬಂತೆ ಅವಳು ಮಾಡಿದ್ದೆಲ್ಲ ರುಚಿಕರವಾಗಿಯೇ ಹತ್ತುತ್ತಿತ್ತು. ಮಾಧುರ್ಯದ ಸಾಗರವು ಎಲ್ಲರ ಹೃದಯದಲ್ಲಿಯೂ ಇರುತ್ತದೆ.

ಆದರೆ ಆ ದಿವಸ ಒಂದು ಮೋಜು ನಡೆಯಿತು. ಪಲ್ಲೆ ತೀರ ಸಪ್ಪಗಾ

ಗಿತ್ತು. ತಾಯಿ ಪಲ್ಲೆಗೆ ಉಪ್ಪನ್ನು ಹಾಕಲು ಮರೆತು ಬಿಟ್ಟಿದ್ದಳು. ಕೆಲಸದ ಗಡಿಬಿಡಿಯಲ್ಲಿ ಅವಳಿಗೆ ಅದು ನೆನಪೇ ಆಗಿರಲಿಲ್ಲ. ಆದರೆ ತಂದೆಯವರು ಸಿಟ್ಟಿಂದು ಮಾತನಾಡದೆ ಇದ್ದುದರಿಂದ ನಾವೂ ಸುಮ್ಮನಿರಬೇಕಾಯಿತು. ತಂದೆಯವರ ಸಂಯಮ ಬಹಳ ದೊಡ್ಡದು ಅಸ್ವಾದ ವ್ರತವನ್ನು ಸ್ವೀಕರಿಸಿರುವರೋ ಎಂದೆನಿಸುತ್ತಿತ್ತು. ತಾಯಿಯವರು ಪಲ್ಲೆ ಬಡಿಸಲು ಬಂದಾಗ ಹೇಳುತ್ತಿದ್ದರು, "ಏನು ಉತ್ಕೃಷ್ಟವಾಗಿದೆ ಪಲ್ಲೆ !" ಎಲೆಯಲ್ಲಿಯ ಉಪ್ಪನ್ನು ಕೂಡ ಅದಕ್ಕೆ ಸೇರಿಸಿಕೊಳ್ಳಲಿಲ್ಲ. ಹೆಚ್ಚಿಗೆ ಉಪ್ಪನ್ನೂ ಹಾಕಿಸಿಕೊಳ್ಳಲಿಲ್ಲ. ಅಂದ ಬಳಿಕ ತಾಯಿಗೆ ಹೇಗೆ ಸಂದೇಹ ಬರಬೇಕು ? ತಂದೆಯವರು ಪಲ್ಲೆ ತಿನ್ನುತ್ತಿದ್ದರೆಂದು ನಾವೂ ತುಸು ತುಸು ತಿನ್ನುತ್ತಿದ್ದೆವು. ನಾವೂ ಉಪ್ಪನ್ನು ಬೇಡಲಿಲ್ಲ.

"ದಿನದಂತೆ ನೀನೇಕೆ ಪಲ್ಲೆ ತಿನ್ನಲಿಲ್ಲ ? ನಿನಗೆ ಸೇರಲಿಲ್ಲವೇನು ?" ಎಂದು ನನ್ನನ್ನು ತಾಯಿ ವಿಚಾರಿಸಿದಳು.

ನಾನು ಉತ್ತರ ಕೊಡುವ ಮೊದಲೇ ತಂದೆ ಹೇಳಿದರು, "ಈಗ ಅವನು ಇಂಗ್ಲೀಷು ಕಲಿಯುತ್ತಿದ್ದಾನೆ. ಅವನಿಗೆ ತೊಪ್ಪಲ ಪಲ್ಲೆ ಹೇಗೆ ರುಚಿಸೀತು ?"

ನಾನು ಹೇಳಿದೆ, "ಹಾಗೇನೂ ಇಲ್ಲ. ನಾನು ಇಂಗ್ಲೀಷು ಕಲಿತು ಕೆಟ್ಟು ಹೋಗುತ್ತೇನೆಂದು ಅನಿಸಿದ್ದರೆ ನನಗೇಕೆ ಇಂಗ್ಲೀಷು ಶಾಲೆಗೆ ಹಾಕಿದಿರಿ ?"

ತಂದೆ ನುಡಿದರು, "ನಿನ್ನನ್ನು ಸಿಟ್ಟಿಗೆಬ್ಬಿಸಬೇಕೆಂದು ತಮಾಷೆಗೆ ಹೇಳಿದೆ. ನೀನು ಸಿಟ್ಟಿಗೆ ಬಂದರೆ ಮೋಜೆನಿಸುತ್ತದೆ. ಇವನಿಗೆ ಹಲಸಿನ ಕಾಯಿಪಲ್ಲೆ ಸೇರುವದಿಲ್ಲವೇನೇ ? ನಾಳೆ ಪಾಟೀಲವಾಡಿಯಿಂದ ತರುವೆನು. ಬಲಿತದ್ದು ದೊರೆತರೆ ತೊಳೆಗಳನ್ನು ಬೇಯಿಸಿ ಮಜ್ಜಿಗೆ ಹುಳಿಯನ್ನು ಮಾಡಿ ಬಿಡು."

ತಾಯಿಯೆಂದಳು, "ತೆಗೆದುಕೊಂಡು ಬರ್ರಿ. ಬಹಳ ದಿವಸ ಆಯಿತು ಅದನ್ನು ಮಾಡದೆ." ಈ ರೀತಿ ಮಾತು ಸಾಗಿರುವಾಗಲೇ ನಮ್ಮ ಊಟ ಮುಗಿಯಿತು. ತಂದೆಯವರು ಪಡಸಾಲೆಯಲ್ಲಿ ವಿಷ್ಣು ಸಹಸ್ರನಾಮ ಹೇಳುತ್ತ ಶತಪಥ ಹಾಕಹತ್ತಿದರು. ಆಮೇಲೆ ಜನಿವಾರಕ್ಕಾಗಿ ನೂಲು ತೆಗೆಯಲು

ಕುಳಿತುಕೊಂಡರು. ಅದು ಹಂಚಿನ ತುಂಡಿನ ತಕಲಿಯಾಗಿತ್ತು. ಅದರ ಮೇಲೆ ಎಲ್ಲರೂ ನೂಲು ತೆಗೆಯಬೇಕೆಂಬ ನಿಯಮವಿತ್ತು.

ಹರಡಿಕೊಂಡಿದ್ದ ಪಾತ್ರೆ ಪಳಿಗೆಗಳೆಲ್ಲವನ್ನೂ ಎತ್ತಿಟ್ಟು ನಮ್ಮ ತಾಯಿ ಊಟಕ್ಕೆ ಕುಳಿತಳು. ತುತ್ತು ತೆಗೆದುಕೊಂಡು ಪಲ್ಲೆ ಬಾಯಿಗೆ ಹಾಕಿಕೊಂಡಾಗ ಅದು ಸಪ್ಪಗಿದ್ದದ್ದು ಗೊತ್ತಾಯಿತು. ಉಪ್ಪು ಏನೂ ಹಾಕಿರಲಿಲ್ಲ. ನಾನು ಅಲ್ಲಿಯೇ ನಿಂತಿದ್ದೆ.

ತಾಯಿಯೆಂದಳು, "ಏನೋ ಶ್ಯಾಮಾ, ಪಲ್ಲೆಗೆ ಉಪ್ಪನ್ನೇ ಹಾಕಿಲ್ಲ. ನೀವು ಒಬ್ಬರಾದರೂ ಹೇಳಬಾರದಾಗಿತ್ತೇ? ಸಪ್ಪಗಿನ ಪಲ್ಲೆಯನ್ನೇ ಹೇಗೆ ತಿಂದಿರೋ?"

"ಭಾವೂ ಮಾತನಾಡಲಿಲ್ಲ ಅದಕ್ಕೆ ನಾವೂ ಮಾತನಾಡಲಿಲ್ಲ."

ತಾಯಿಗೆ ಬಹಳ ಕೆಡುಕೆನಿಸಿತು. "ಉಪ್ಪಿಲ್ಲದೆ ಎಲ್ಲರೂ ತಿಂದು ಬಿಟ್ಟಿರಾ?" ಎಂದಳು. ಅವಳಿಗೆ ಬೇಸರವೆನಿಸಿತು. ಮತ್ತೆ ನನಗೆಂದಳು, "ಆದಕ್ಕೆಂದೇ ನೀನು ಪಲ್ಲೆ ತಿನ್ನಲಿಲ್ಲ. ಇಲ್ಲದಿದ್ದರೆ ಮುದ್ದಿ ಮುದ್ದಿ ಪಲ್ಲೆ ತಿನ್ನುವವ ನೀನು. ಮಾಡಿದ್ದರಲ್ಲಿ ಅರ್ಧ ಪಲ್ಲೆ ನೀನೇ ಮುಗಿಸುತ್ತಿದ್ದೆ. ಆಗಲೇ ನನ್ನ ಲಕ್ಷ್ಯಕ್ಕೆ ಬರಬೇಕಾಗಿತ್ತು. ಆಯಿತು. ಈಗ ಮಾತನಾಡಿ ಪ್ರಯೋಜನವೇನು?"

ತನ್ನಿಂದ ದೊಡ್ಡ ಅಪರಾಧವಾಯಿತೆಂದು ತಾಯಿ ಭಾವಿಸಿದಳು. ಬೇರೆಯವರಿಗೆ ಮಾಡಿಕೊಡುವ ಪದಾರ್ಥ ಚೆನ್ನಾಗಿ ಮಾಡಿಕೊಡಬೇಕು. ಅದು ಪಲ್ಲೆ ಇರಲಿ ಏನೇ ಇರಲಿ. ತಾನು ಉಪ್ಪು ಹಾಕದೆ ಪಲ್ಲೆ ಮಾಡಿದೆ, ನನ್ನಿಂದ ಅಲಕ್ಷ್ಯವಾಯಿತು, ಸಾಕಷ್ಟು ದಕ್ಷತೆ ವಹಿಸಲಿಲ್ಲ ಎಂದು ಮೊದಲಾಗಿ ತಾಯಿ ಹಳಹಳಿಸಿದಳು.

ತಾಯಿಗೆ ಕೆಡುಕೆನ್ನಿಸಬಾರದೆಂದು ತಂದೆ ಏನೂ ಮಾತನಾಡಲಿಲ್ಲ. ಇಷ್ಟೊಂದು ಪ್ರಯಾಸದಿಂದ ಒಲೆಯ ಮುಂದೆ – ಹೊಗೆಯ ಮುಂದೆ ಕುಳಿತು ಮಾಡಿದ ಪದಾರ್ಥವನ್ನು ಸವಿ ಮಾಡಿಕೊಂಡು ತಿನ್ನಬೇಕು, ಅದರಲ್ಲಿ ದೋಷಗಳನ್ನೆಣಿಸಬಾರದು, ಅಡಿಗೆ ಮಾಡುವವರ ಮನಸ್ಸನ್ನು ನೋಯಿಸಬಾರದು ಎಂಬ ಉದಾತ್ತ ದೃಷ್ಟಿಯುಳ್ಳವರಾಗಿದ್ದರು ನಮ್ಮ ತಂದೆ.

ಗೆಳೆಯರೆ, ಬೇರೆಯವರ ಮನಸ್ಸು ನೋಯಿಸಬಾರದೆಂದು ನಾಲಿಗೆ

ಯನ್ನು ಅಂಕಿತದಲ್ಲಿಟ್ಟುಕೊಂಡು ಉಪ್ಪಿಲ್ಲದ ಪಲ್ಲೆಯನ್ನೇ ನಾಲಿಗೆ ಚಪ್ಪರಿಸುತ್ತ ತಿನ್ನುವ ನಮ್ಮ ತಂದೆಯವರು ಶ್ರೇಷ್ಠರೋ? ಅಥವಾ ಕೈತಪ್ಪಿ ಉಪ್ಪಿಲ್ಲದ ಪಲ್ಲೆ ಮಾಡಿ ಬಡಿಸಿದೆನಲ್ಲ, ಎಷ್ಟು ದುರ್ಲಕ್ಷ್ಯವಾಯಿತಲ್ಲ, ಒಳ್ಳೇ ಪದಾರ್ಥ ತನ್ನ ಕೈಯಿಂದ ಮಾಡುವುದಾಗಲಿಲ್ಲವಲ್ಲ ಎಂದು ನೊಂದುಕೊಳ್ಳುವ ತಾಯಿ ಶ್ರೇಷ್ಠಳೋ? ಇಬ್ಬರೂ ಶ್ರೇಷ್ಠರು ಇಬ್ಬರೂ ದೊಡ್ಡ ಮನಸ್ಸಿನವರು. ಹಿಂದೂ ಸಂಸ್ಕೃತಿಯು ಸಂಯಮ ಮತ್ತು ಸಮಾಧಾನದ ಮೇಲೆ ನಿಂತುಕೊಂಡಿದೆ. ಅದೇ ರೀತಿ ಕರ್ಮಕುಶಲತೆಯ ಮೇಲೆಯೂ ನಿಂತಿದೆ. ಎಂಬ ಎರಡು ಪಾಠಗಳನ್ನು ನನ್ನ ತಾಯಿತಂದೆ ಕಲಿಸಿಕೊಡುತ್ತಿದ್ದರು.

ರಾತ್ರಿ : ೧೯

## : : ಪುನರ್ಜನ್ಮ

ಆಗ ನಾನು ಹನ್ನೊಂದು ವರುಷದವನಿದ್ದೆ. ನನ್ನನ್ನು ಮೊದಲು ಇಂಗ್ಲೀಷು ಕಲಿಯುವದಕ್ಕಾಗಿ ಪುಣೆಯಲ್ಲಿರುವ ಸೋದರಮಾವನ ಮನೆಯಲ್ಲಿ ಇಡಲಾಗಿತ್ತು. ನನ್ನ ಅಣ್ಣನೂ ಅಲ್ಲಿಯೇ ಕಲಿಯಲಿಕ್ಕಿದ್ದ. ನಾನು ಮಾವನ ಮನೆಯಲ್ಲಿ ಸರಿಯಾಗಿ ನಡೆದುಕೊಳ್ಳಲಿಲ್ಲ. ಅಲ್ಲಿಂದ ಎರಡು ಮೂರು ಸಲ ಓಡಿಹೋಗಿದ್ದೆ. ಅವರ ಬಗ್ಗೆ ಅಲ್ಲದ ಸಲ್ಲದ ದೂರುಗಳನ್ನು ಹೇಳುತ್ತಿದ್ದೆ. ಇಂಥ ಹುಡುಗನನ್ನು ಮನೆಯಲ್ಲಿಟ್ಟುಕೊಳ್ಳುವದು ತಮಗೇ ಕಂಟಕಪ್ರಾಯವೆಂದು ತಿಳಿದು ಅವರು ನನ್ನನ್ನು ತಿರುಗಿ ಕಳುಹಿಸಿಬಿಟ್ಟರು.

ಆಗ ನಮ್ಮ ಮನೆಯ ಪರಿಸ್ಥಿತಿ ಬಲು ವಿಚಿತ್ರವಾಗಿತ್ತು, ನಮ್ಮ ತಂದೆಯವರು ಸ್ವದೇಶೀ ಆಂದೋಲನದಲ್ಲಾದ ಸೆರೆಮನೆಯ ಶಿಕ್ಷೆಯನ್ನನುಭವಿಸಿ ಆಗ ತಾನೆ ಬಿಡುಗಡೆಯಾಗಿ ಬಂದಿದ್ದರು. ಅವರ ಆರೋಗ್ಯ ಸರಿಯಾಗಿರಲಿಲ್ಲ. ಸಮುದ್ರತೀರದ ಆಪ್ತರೊಬ್ಬರಲ್ಲಿ ಹವೆ ಬದಲಾಯಿಸಲು ಹೋಗಿದ್ದರು. ನನ್ನ ಹಿರಿಯ ಅಕ್ಕ ತವರುಮನೆಗೆ ಬಂದಿದ್ದಳು. ಸುಖದಿಂದ ನಾಲ್ಕು ದಿನ ತವರುಮನೆಯಲ್ಲಿ ಇರಲಿಕ್ಕೆ ಬಂದವಳು ಕಾಹಿಲೆ ಬಿದ್ದುಬಿಟ್ಟಳು. ಕೆಲಸದ ಹೊರೆಯೆಲ್ಲ ತಾಯಿಯ ಮೇಲೆ ಬಿತ್ತು. ಮನೆಯಲ್ಲಿ ಬೇರೆ ಹೆಂಗುಸರು

ಯಾರೂ ಇದ್ದಿಲ್ಲ. ಅಕ್ಕನ ಕಾಹಿಲೆ ಹೆಚ್ಚಾಗಿಯೇ ಇತ್ತು. ಇಂಥ ಹೊತ್ತಿನಲ್ಲಿ ನಾನು ಪುಣೆಯಿಂದ ಬಂದಿದ್ದೆ. ನನ್ನನ್ನೊಬ್ಬರೂ ಕೇಳದಂತಾದರು. ಎಲ್ಲರಿಗೂ ನಾನು ಬೇಡವಾಗಿದ್ದೆನು. ಎಲ್ಲರ ಪ್ರೇಮ ಸೌಹಾರ್ದತೆಗಳು ಅಕ್ಕನ ಮೇಲೆಯೇ ಇದ್ದವು. ಅವಳದೊಂದು ಎಳೆಗೂಸಿತ್ತು. ಆ ಕೂಸಿನ ಕಷ್ಟ ಹೇಳತೀರದು. ತಾಯಿಯ ಹಾಲು ಅದಕ್ಕೆ ದೊರೆಯುತ್ತಿರಲಿಲ್ಲ. ಅಕ್ಕನಿಗೆ ವಿಷಮಜ್ವರ ಬಂದಿತ್ತು. ಆದ್ದರಿಂದ ಆ ಕೂಸಿಗೆ ಮೊಲೆಯುಣ್ಣಿಸುವದು ಅಪಾಯಕರವಾಗಿತ್ತು. ಈ ಕಾರಣದಿಂದಾಗಿ ಪುಟ್ಟ ರಂಗೂವಿಗೆ ಬಹಳ ಕಷ್ಟವಾಗುತ್ತಿತ್ತು.

ಒಂದು ದಿವಸ ಅಕ್ಕನಿಗೆ ವಾಯುವಿಕಾರವಾಯಿತು. ಅತ್ತೆಯ ಮನೆಯಲ್ಲಾದ ಕಷ್ಟವನ್ನು ಎಂದೂ ಅವಳು ತವರುಮನೆಯಲ್ಲಿ ಉಸುರಿರಲಿಲ್ಲ. ಆದರೆ ಮನಸ್ಸಿನಲ್ಲಿ ಸಂಗ್ರಹವಾಗಿದ್ದ ಆ ಎಲ್ಲ ದುಃಖಗಳು ವಾಯು ವಿಕಾರದಲ್ಲಿ ಉಮ್ಮಳಿಸಿ ಹೊರಗೆ ಬಂದಿದ್ದವು. ಅವಳ ಮೈಮೇಲೆ ಪ್ರಜ್ಞೆ ಇರಲಿಲ್ಲ. ಪ್ರಜ್ಞಾವಸ್ಥೆಯಲ್ಲಿ ಅವಳ ಹೃದಯದಿಂದ ಉಕ್ಕಿ ಬಂದ ಮಾತುಗಳನ್ನೆಲ್ಲ ಕೇಳಿ ನಮ್ಮ ತಾಯಿ ಬಹಳ ಕನಿಕರಪಟ್ಟಳು. ಇಷ್ಟೊಂದು ವೆಚ್ಚ ಮಾಡಿ ಮದುವೆ ಮಾಡಿದರೂ ಅತ್ತೆಯ ಮನೆಯ ಕಾಟ ತಪ್ಪಲಿಲ್ಲವಲ್ಲ ಎಂದು ಅವಳು ಮರುಗಿದಳು.

ದಾಯಾದಿತನದಂತೆಯೇ ಅತ್ತೆಮನೆ ವಾಸವೂ ನಮ್ಮಲ್ಲೊಂದು ಕಂಟಕವಿದ್ದಂತೆ ಇದೆ! ಬೇರೆ ಮನೆಯಿಂದ ಬಂದ ಹುಡುಗಿಗೆ ತಾವು ತಾಯಿತಂದೆಗಳಾಗಿ ಇರಬೇಕಾದುದು ಅತ್ತೆ ಮಾವಂದಿರ ಕರ್ತವ್ಯವಾಗಿರಬೇಕು. ಆದರೆ ಅವರು ತಮ್ಮ ಅಧಿಕೃತ ತೊತ್ತೆಂದು ಭಾವಿಸುತ್ತಾರೆ. ಈ ಅತ್ತೆಮನೆಗಳು ತಾಯಿಯ ಮನೆಗಳಾದಾಗಲೇ ಹೆಣ್ಣುಮಕ್ಕಳ ಭಾಗ್ಯ ತೆರೆಯಿತೆನ್ನಬಹುದು. 'ಅತ್ತೆಮನೆ' ಯ ಇತಿಹಾಸವೇ ಅಷ್ಟು ಕಠೋರದ್ದಾಗಿದೆ. ಈ ಕಠೋರತೆಯನ್ನು ಕುರಿತು ಹೆಣ್ಣುಮಕ್ಕಳೇ ರಚಿಸಿದ ಅನೇಕ ಪದ್ಯಗಳೂ ಇವೆ.

ಮನುಷ್ಯತ್ವದ ಸಾಮಾನ್ಯವಾದ ಪಾಠವನ್ನು ಕೂಡ ನಮ್ಮ ಜನರು ಇನ್ನೂ ಕಲಿಯಬೇಕಾಗಿದೆ. ಅತ್ತೆ ಸೊಸೆಯನ್ನು ಕಾಡುತ್ತಾಳೆ. ನಾಳೆ ಆ ಸೊಸೆ ಅತ್ತೆಯಾದ ಮೇಲೆ ಅವಳೂ ಅದನ್ನೇ ಮಾಡುತ್ತಾಳೆ. ಪೂರ್ವಜರ ಈ ಪರಂಪರೆಯನ್ನು ಕಾಪಾಡಿಕೊಂಡು ಬರಬೇಕೆಂದು ಇವರೆಲ್ಲರೂ ಪ್ರಯತ್ನಿ

ಸುತ್ತಿರುವರೋ ಏನೋ ! ಅತ್ತೆಗೊಂದು ಕಾಲ, ಸೊಸೆಗೊಂದು ಕಾಲ ಎಂಬ ನಾಣ್ಣುಡಿಯೇ ಬಳಕೆಯಲ್ಲಿ ಬಂದು ಬಿಟ್ಟಿದೆ. ಗುರುಗಳು ವಿದ್ಯಾರ್ಥಿ ಯನ್ನು ಹೊಡೆಯುತ್ತಾರೆ, ನಾಳೆ ವಿದ್ಯಾರ್ಥಿ ಗುರುವಾದೊಡನೆ ಅದನ್ನೇ ಅವನೂ ಮಾಡುತ್ತಾನೆ. ನಮ್ಮನ್ನೂ ಗುರುಗಳು ಇದೇ ರೀತಿ ಹೊಡೆಯುತ್ತಿ ದ್ದರು ಎಂದು ಆ ಗುರುಗಳು ಹೇಳುತ್ತಿರುತ್ತಾರೆ. ಅತ್ತೆ-ಸೊಸೆಯರ ಮಾತೂ ಇದೇ ರೀತಿಯಾಗಿರುತ್ತದೆ. ಹುಡುಗ—ಹುಡುಗಿಯರು ಆಟವಾಡುವಾಗ್ಗೆ ಚೆನ್ನಾಗಿ ನಿರೀಕ್ಷಿಸಬೇಕು. ಹುಡುಗಿಯರು ಅತ್ತೆ-ಸೊಸೆಯಾಟ ಆಡುತ್ತಿದ್ದರೆ ಅತ್ತೆಯಾದವಳು ಸೊಸೆಯಾದ ಹುಡುಗಿಯ ಮಂಡೆ ಹಿಡಿದು ಜಗ್ಗುತ್ತಾಳೆ, ಅವಳ ಮೈ—ಕೈಗೆ ಬರೆ ಕೊಡುತ್ತಾಳೆ, ಅವಳಿಗೆ ತಂಗುಳ ಅನ್ನ ಉಣ್ಣಬಡಿಸು ತ್ತಾಳೆ. ಹುಡುಗರ 'ಶಾಲೆಯ ಆಟ' ವೂ ನೋಡುವಂತಿರುತ್ತದೆ. ಒಂದು ಕಂಬವನ್ನು ವಿದ್ಯಾರ್ಥಿಯನ್ನಾಗಿ ಮಾಡಿ ಅದಕ್ಕೆ ಕೋಲಿನಿಂದ ಚೆನ್ನಾಗಿ ಥಳಿ ಸುತ್ತಾರೆ. " ಗಲಾಟೆ ಮಾಡಿದೆಯೆಂದರೆ ಇನ್ನೊಂದು ಬಿಗಿದೇನು ? " ಎಂದು ಗದರಿಸುತ್ತಾರೆ. ನನ್ನ ಅಕ್ಕನ ಐದಾರು ವರುಷದ ಮಗನೊಬ್ಬನಿದ್ದಾನೆ. ಅವನು ನನಗೆ ಹೇಳುತ್ತಿದ್ದ, " ಅಣ್ಣಾ, ನಾನು ಮಾಸ್ತರನಾಗಲೀ, ಶಿಪಾಯಿ ಯಾಗಲೀ ಆಗಬೇಕೆಂದಿದ್ದೇನೆ. " " ಈ ಎರಡು ಉದ್ಯೋಗಗಳೇ ಏಕೆ ನಿನಗೆ ಸೇರುತ್ತವೆ ? " ಎಂದು ನಾನು ಕೇಳಿದರೆ, " ಎಲ್ಲರನ್ನೂ ಬೆದರಿಸ ಲಿಕ್ಕೂ ಹೊಡೆಯಲಿಕ್ಕೂ ಇವು ಯೋಗ್ಯವಾಗಿವೆ " ಎಂದು ಹೇಳುತ್ತಿದ್ದ. ಗುರುವಿನ ಕಲ್ಪನೆ ಇಲ್ಲಿಗೆ ಬಂದು ಮುಟ್ಟಿದೆ ! ಶಾಲೆಗಳೂ ಅತ್ತೆಯ ಮನೆಗ ಳಾಗಿವೆ ! ಇವೆರಡೂ ತವರುಮನೆಗಳಾಗದ ವಿನಃ ಸುಖವಿಲ್ಲ. ಹೇಳ ಹೇಳುತ್ತ ಅಡ್ಡದಾರಿ ಹಿಡಿದೆನೆಂದು ನೀವೆನ್ನಬಹುದು. ಆದರೆ ಈ ಮಾತು ಗಳಿಂದ ನನ್ನ ಪಿತ್ತ ನೆತ್ತಿಗೇರುತ್ತದೆ. ಸಾಮಾನ್ಯವಾದ ಮನುಷ್ಯತ್ವವೂ ನಮ್ಮಲ್ಲಿ ಇರಬಾರದೇ ? ಪಶು ಪಕ್ಷಿ, ಹುಳಹುಪ್ಪಡಿ, ಗಿಡಗಂಟೆ ಎಲ್ಲವನ್ನೂ ಪ್ರೀತಿಸಬೇಕೆಂದು ಹೇಳಿರುವ ದೊಡ್ಡ ಸಂಸ್ಕೃತಿಯ ವಾರಸದಾರರಾದ ನಾವು ಇಂದು ಎಷ್ಟು ಮೂಢರಾಗಿದ್ದೇವೆ ? ಮನುಷ್ಯತ್ವವನ್ನೇ ಮರೆತು ಬಿಟ್ಟಿ ದ್ದೇವೆ. ಇದನ್ನು ಕಂಡು ನನ್ನ ಹೃದಯವು ದಹಿಸುತ್ತಿದೆ. ಹಿಂಡಿಹಿಪ್ಪಿಯಾಗು ತ್ತಿದೆ. ಅದು ಹಾಗಿರಲಿ.

ಮಧ್ಯಾನ್ಹ ಹಾಗೂ ಹೀಗೂ ಊಟದ ಶಾಸ್ತ್ರ ಮುಗಿಸಿಕೊಂಡು ನಾವು

ಎಲ್ಲರೂ ಅಕ್ಕನ ಬಳಿ ಕುಳಿತಿದ್ದೆವು. ತಾಬಂಡಿಯಲ್ಲಿ ತಣ್ಣೀರನ್ನು ಹಾಕಿ ಅಕ್ಕನ ಹಣೆಯ ಮೇಲೆ ಹಿಡಿಯಲಾಗಿತ್ತು. ಹಳ್ಳಿಯ ಊರಲ್ಲಿ ಬರ್ಫದ ಚೀಲ, ಕೋಲನ್‌ವಾಟರ್ ಎಲ್ಲಿ ಬರಬೇಕು ? ತಾಯಿ ತಾಬಂಡಿ ಹಿಡಿದು ಕೊಂಡು ಕುಳಿತಿದ್ದಳು. ಎಲ್ಲರ ಮುಖ ಸಣ್ಣಗಾಗಿದ್ದವು. ನನ್ನ ತಾಯಿಯ ಮನಸ್ಸಿನಲ್ಲಿ ಒಮ್ಮೆಲೆ ಏನು ಬಂದಿತೋ ಏನೋ ? ನನಗೆ ತಾಬಂಡಿ ಹಿಡಿ ಯಲು ಹೇಳಿ ತಾನು ದೇವರ ಕೋಣೆಗೆ ಹೋದಳು. ದೇವರ ಬಳಿಗೆ ಹೋಗಿ ಅವಳು ಬೇಡಿಕೊಂಡಳು, "ದೇವಾ, ಶಂಕರಾ, ಮೂರು ದಿವಸ ನಿನ್ನ ಬುತ್ತೀ ಪೂಜೆ ನಡೆಸುತ್ತೇನೆ. ಮಗಳಿಗೆ ಗುಣವಾಗಲಿ. ಜ್ವರ ಆರಲಿ. ಮಗಳು ಸುಖರೂಪವಾಗಿ ಹಾಸಿಗೆ ಬಿಟ್ಟೇಳಲಿ." ಔಷಧೋಪಚಾರಗಳ ಪ್ರಯತ್ನ ಗಳೂ ನಡೆದಿದ್ದವು. ಅದರ ಜೊತೆಗೆ ಪ್ರಾರ್ಥನೆಯೂ ಸಾಗಿತ್ತು. ದೇವರ ಮೇಲೆ ತಾಯಿಗೆ ತುಂಬ ವಿಶ್ವಾಸ. ಹಗಲಿರುಳು ಮಗಳ ಆರೈಕೆಯ ಜೊತೆಗೆ ದೇವರ ಧ್ಯಾನವನ್ನೂ ನಡೆಸಿದ್ದಳು. ನಮ್ಮ ಪ್ರಯತ್ನಗಳಲ್ಲಿ ದೇವರ ಸಹಕಾರ ವನ್ನೂ ಪಡೆಯಲು ಅಂತಃಕರಣಪೂರ್ವಕ ಯತ್ನಿಸಬೇಕು.

"ರಂಗೂ ಎದ್ದಳು. ತೊಟ್ಟಿಲಲ್ಲಿ ಅಳುತ್ತಿದ್ದಾಳೆ ಇಲ್ಲಿ ಅಳಿಸಬೇಡ ಅವಳನ್ನು ಹೊರಗೆ ಕರೆದುಕೊಂಡು ಹೋಗು" ಎಂದು ನನಗೆ ತಾಯಿ ಹೇಳಿ ದಳು. ನಾನು ಅಕ್ಕನ ಮಗಳನ್ನು ಹೆಗಲಮೇಲೆ ಕರೆದುಕೊಂಡು ಅತ್ತಿತ್ತ ಅಡ್ಡಾಡಿ ಬೇಸರ ಬಂದೊಡನೆ ಮನೆಗೆ ಬಂದೆ ಆಗ ಮೂರೂಸಂಜೆಯಾಗು ತ್ತಿತ್ತು. ಹೊರಗೆ ಭತ್ತ ಕುಟ್ಟುವವರಿಂದ ಅಕ್ಕಿ, ನುಚ್ಚು ಅಳೆದುಕೊಳ್ಳಬೇಕಾ ಗಿತ್ತು. ದನ ಬರುವ ವೇಳೆಯೂ ಆಗಿತ್ತು. "ನಿಮ್ಮ ದನಾ ಬಂದವರೀ" ಎಂದು ಕೂಗಿ ಹೇಳಿ ದನಗಾಹಿಗಳು ಮುಂದೆ ಸಾಗುತ್ತಿದ್ದರು. ಆ ದನಗಳನ್ನು ಕಟ್ಟಬೇಕಾಗಿತ್ತು. ಇಂಥ ಈ ಕೆಲಸಗಳು ಒಟ್ಟಿರುವಾಗ ನಾನು ಅಂಥದರ ಲ್ಲಿಯೇ ರಂಗುವನ್ನು ಅಲ್ಲಿಯೇ ಬಿಟ್ಟು ಹೊರಗೆ ಹೋದೆ. ಆ ಪುಟ್ಟ ರಂಗೂ ಅಳಲಾರಂಭಿಸಿದಳು. ಅವಳು ತಾಯಿಗಾಗಿ ಅಳುತ್ತಿರಬಹುದೇ ? ತನ್ನ ತಾಯಿಯ ವಾತ್ಸಲ್ಯಯುಕ್ತ ಕರಗಳ ಸ್ಪರ್ಶವಾಗಲೆಂದು ಅಳುತ್ತಿರಬಹುದೇ ? ತಾಯಿಯು ಪ್ರೀತಿಯಿಂದ ನೋಡಬೇಕೆಂದು ಅವಳು ಆಶಿಸಿದ್ದಳೇ ? ಮೂಕ ಮಗು ! ನಿರ್ಬಲವಾದ ಸಣ್ಣ ಜೀವ ! ಅವಳ ತಾಯಿ ಹಾಸಿಗೆಯಲ್ಲಿ ನರಳುತ್ತ ಬಿದ್ದಿದ್ದಳು. ವಾಯುವಿನಿಂದಾಗಿ ನಡುನಡುವೆ ಏನಾದರೂ ಮಾತನಾಡು

ವಳು. ರಂಗೂಗೆ ಎರಡೆರಡು ದಿವಸ ತಾಯಿಯ ದರುಶನವಿರುತ್ತಿರಲಿಲ್ಲ. ಅದ ಕ್ಕಾಗಿಯೇ ಅವಳಾತ್ಮವಿಷ್ಟು ಆಕ್ರೋಶ ಮಾಡುತ್ತಿದ್ದಿತೇ ? " ನನ್ನ ತಾಯಿಯ ಬಳಿ ನನ್ನನ್ನು ಬಿಡಿರಿ, ಕ್ಷಣಹೊತ್ತು ಅವಳ ಮಗ್ಗುಲಲ್ಲಿ ಮಲಗಗೊಡಿರಿ, ನನಗೆ ಹಾಲು ಬೇಡ – ಏನೂ ಬೇಡ, ನಾನು ಅದಕ್ಕಾಗಿ ಬಾಯಿ ಬಿಡುತ್ತಿಲ್ಲ. ತಾಯಿಯ ಆ ಬಡಕಲಾದ ಕೈಗಳು ನನಗೆ ತಾಗಲಿ, ಅದರಿಂದಲೇ ನನ್ನ ಪೋಷಣೆಯಾಗುವದು " ಎಂದು ಅವಳು ಹೇಳುತ್ತಿರಲಿಕ್ಕಿಲ್ಲವಷ್ಟೇ ? ಅವಳ ಅಳುವ ಭಾಷೆ ಯಾರಿಗೆ ಗೊತ್ತಾಗಬೇಕು ? ಅಬಲ ಹೃದಯದ, ಆ ಆತ್ಮದ ಪರಿಚಯ ಯಾರಿಗೆ ಆಗಲು ಸಾಧ್ಯ ? ರಂಗೂ ಒಂದೇಸವನೆ ಕಿರ್ರೆಂದು ಕೀಸರ ಎಬ್ಬಿಸಿಬಿಟ್ಟಿದ್ದಳು.

ನನ್ನ ತಾಯಿಯೊಬ್ಬಳೇ ಮಾಡಬೇಕೇನು ? ಅಕ್ಕಿ ಆಳೆದುಕೊಳ್ಳ ಬೇಕೋ, ದೀಪ ಹಚ್ಚಬೇಕೋ, ದನ ಕಟ್ಟಬೇಕೋ, ಹಾಲು ಕರೆಸಬೇಕೋ, ಕಷಾಯ ಮಾಡಬೇಕೋ, ಅಡಿಗೆ ಮಾಡಬೇಕೋ, ರಂಗೂನನ್ನು ಆಡಿಸ ಬೇಕೋ, ಅಥವಾ ಅಕ್ಕನ ಬಳಿಯಲ್ಲಿ ಕುಳಿತುಕೊಳ್ಳಬೇಕೋ ? ಅವಳಿಗೇನು ಸಹಸ್ರ ಕೈಗಳಿದ್ದವೇ ? ತಾಯಿ ! ನೀನು ಧನ್ಯಳವ್ವಾ ! ಸ್ತ್ರೀಯರಷ್ಟು ಕಷ್ಟ ಜೀವಿಗಳು ಬೇರೊಬ್ಬರಿಲ್ಲ. ಅವರೇ ನೂರಾರು ಕಷ್ಟಗಳನ್ನು ಸಹಿಸಬೇಕು. ಭಾರತೀಯ ಸ್ತ್ರೀಯರ ಶ್ರಮಜೀವನ ಹಾಗು ಕ್ಷಮಾವೃತ್ತಿಗೆ ಭೂಮಿತಾಯಿಯ ಉಪಮೆಯನ್ನು ಮಾತ್ರ ಕೊಡಬಹುದಾಗಿದೆ. ಇಂಥ ಘನವಂತರಾದ ಸ್ತ್ರೀಯ ರಿದ್ದ ಮನೆಗಳು ನನಗೆ ದೇವರ ಗುಡಿಗಳಂತೆ ಕಾಣುತ್ತವೆ. ಅಂಥ ಸ್ತ್ರೀಯ ರನ್ನು ನಾನು ದೇವತೆಗಳೆಂದು ಮನ್ನಿಸುತ್ತೇನೆ. ಅವರ ಚರಣಗಳ ಮೇಲೆ ನನ್ನ ಮಸ್ತಕವನ್ನಿಡುತ್ತೇನೆ. ಬೇರೆ ದೇವಸ್ಥಾನಗಳು ನನಗೆ ಗೊತ್ತಿಲ್ಲ.

ನನ್ನ ತಾಯಿ ಸಂತಾಪಗೊಂಡಳು. ಸಿಟ್ಟು ಬೆಂಕಿಯಾದಳು. ಅವಳ ತಾಳ್ಮೆಗೂ ಕ್ಷಮೆಗೂ ಒಂದು ಮೇರೆಯಿರುತ್ತದೆ. " ಎಲ್ಲಿಗೆ ಹೋದ ಈ ನೀಚ ? ಬರೀ ಕೂಳಿಗೆ ದಂಡವಾಗಿದ್ದಾನೆ. ಒಂದಾದರೂ ಕೆಲಸ ಮಾಡ ಲಿಕ್ಕೆ ಬೇಡ. ಅಲ್ಲಿ ಬೆಳಕು ಕೆಡವಿ ಬಂದಿದ್ದಾನೆ. ಈಗ ಇಲ್ಲಿ ತಾಯಿಯ ಮುಸು ಡಿಗೆ ಬೆಂಕೀ ಹಚ್ಚಲು ಬಂದಿದ್ದಾನೆ. ತಿಂಬುವದು ತಿರುಗುವದು ಎರಡು ಕೆಲಸ ಕಲಿತಿದ್ದಾನೆ. ತುಸು ಕೂಸಿನ್ನ ಕರೆದುಕೋ ಎಂದರೆ ಬಿಟ್ಟು ನಡೆದಾ ಮೋರೆ ತಿರುವಿಕೊಂಡು. ಎಲೋ ಶ್ಯಾಮ್ಯಾ, ಆ ಕೂಸು ಅತ್ತು ಅತ್ತು ಶ್ವಾಸ ಹಿಡಿಯ

ಹತ್ತಿದೆ ಬೇಗ ಎತ್ತಿಕೊಂಡು ಹೋಗು ನೀನೇಕೆ ಸಾಯುಲೊಲ್ಲೆ ? ನನ್ನನ್ನು ಕಾಡಬೇಕಾಗಿದೆಯಲ್ಲವೇ ನಿನಗೆ ? ಅದಕ್ಕಾಗಿಯೇ ಉಳಿದಿರುವಿ " ತಾಯಿ ದುಃಖ ಸಂತಾಪಗಳ ಆವೇಗದಲ್ಲಿ ಹುಚ್ಚಳಂತಾಗಿ ಮಾತಾಡುತ್ತಿದ್ದಳು.

ತಾಯಿಯ ಮಾತು ನನಗೆ ಕೇಳಿಸುತ್ತಿದ್ದವು. ಕೊನೆಯ ಶಬ್ದವು ನನ್ನ ಹೃದಯವನ್ನು ಕೊರೆಯಿತು. ಅಳು ಬಂದುಬಿಟ್ಟಿತು ಅಳುತ್ತ ಅಳುತ್ತ ನಾನು ಆ ಅಳುವ ಪುಟ್ಟ ರಂಗೂನನ್ನು ಎತ್ತಿಕೊಂಡು, ಎದೆಗೆ ಅವಚಿಕೊಂಡು ಅಂಗಳಕ್ಕೆ ಹೋದೆ. ರಾಮರಕ್ಷಾ ಮಂತ್ರವನ್ನೂ ಬೇರೆ ಕೆಲವು ಶ್ಲೋಕಗಳನ್ನೂ ಹೇಳುತ್ತ ಅಂಗಳದಲ್ಲಿ ಎಡೆಯಾಡುತ್ತಿದ್ದೆ. ರಂಗೂ ನನ್ನ ಹೆಗಲ ಮೇಲೆ ಆರಾಮಾಗಿ ಮಲಗಿಕೊಂಡಳು.

ತಾಯಿಯ ಮಾತುಗಳಿಂದ ನಾನು ಜಾಗೃತನಾದೆನು. ಯಾವುದಕ್ಕಾಗಿ ಬಾಳಬೇಕೆಂಬುದು ನನಗೆ ಗೊತ್ತಾಯಿತು. ಚಕಮುಕಿಯನ್ನು ಕಟಿಯದ ಹೊರತು ಕಿಡಿ ಬೀಳುವದಿಲ್ಲ. ನನ್ನ ಜೀವನದಲ್ಲಿ ಕಿಡಿ ಬಿದ್ದಿತ್ತು, ತೇಜ ಬಂದಿತ್ತು, ಬೆಳಕು ಬಿದ್ದಿತ್ತು. ಗುಣವಂತನು ಜಗತ್ತಿಗೆ ಬೇಕುಬೇಕೆನಿಸುತ್ತಾನೆ. ಗುಣಹೀನನ ತುಚ್ಛ ಜೀವನದಿಂದೇನು ಪ್ರಯೋಜನ ? ತಿಲ ಮಾತ್ರವೂ ನನ್ನ ಉಪಯೋಗವಿಲ್ಲ. ನನ್ನ ಜೀವನವು ಎಲ್ಲರಿಗೂ ಭಾರ. ಎಲ್ಲರಿಗೂ ಅದರಿಂದ ತೊಂದರೆ ಎಂದು ಆ ದಿವಸ ನನಗೆ ಅನಿಸಿತು. ನನ್ನ ಜೀವನಕ್ಕೆ ಆ ದಿವಸದಿಂದ ಒಂದು ಹೊಸ ಚೈತನ್ಯ ಬಂದಂತಾಯಿತು. ಹೊಸ ದಿಕ್ಕು ಕಂಡಿತು. ಯಾವದೇ ಮಾತಿಗೆ ಹೊತ್ತು ಕೂಡಿಬರಬೇಕಾಗುತ್ತದೆನ್ನುತ್ತಾರೆ ಅದು ಸುಳ್ಳಲ್ಲ. ನಾನೂ ಆ ದಿವಸ ದೇವರಲ್ಲಿ ಬೇಡಿಕೊಂಡೆ. ಮೇಲೆ ಆಕಾಶದಲ್ಲಿ ಹೊಳೆಯುವ ತಾರೆಗಳ ಕಡೆಗೆ ನೋಡುತ್ತ ಪ್ರಾರ್ಥನೆ ಮಾಡಿದೆ. " ದೇವರೆ, ಇಂದಿನಿಂದ ನಾನು ಒಳ್ಳೆಯವನಾಗಲು ಯತ್ನಿಸುತ್ತೇನೆ. ನನ್ನ ಈ ನಿಶ್ಚಯದಿಂದ ಪ್ರಸನ್ನನಾಗು. ನನ್ನನ್ನು ಒಳ್ಳೆಯವನನ್ನಾಗಿ ಮಾಡು. ಮತ್ತು ನಮ್ಮ ಅಕ್ಕನಿಗೆ ಗುಣವಾಗುವಂತೆ ಮಾಡು. "

ಅಂದಿನಿಂದ ನಮ್ಮ ಅಕ್ಕನಿಗೆ ಗುಣವಾಗತೊಡಗಿದ್ದೇನೂ ಸುಳ್ಳಲ್ಲ. ನನ್ನ ಅಕ್ಕ ತುಸು ದಿವಸಗಳಲ್ಲಿಯೇ ಗುಣಹೊಂದಿ ಎದ್ದು ಓಡಾಡತೊಡಗಿದ್ದಳು. ಅವಳು ಶರೀರದಿಂದ ಗುಣಹೊಂದಿದರೆ ನಾನು ಮನಸ್ಸಿನಿಂದ ಒಳ್ಳೆಯವನಾಗ

ತೊಡಗಿದೆ. ಇಬ್ಬರ ಪುನರ್ಜನ್ಮವಾಯಿತು. ಅಕ್ಕನಿಗೆ ಹೊಸ ಶರೀರ ದೊರೆಯಿತು. ನನಗೆ ಹೊಸ ಹೃದಯ ದೊರೆಯಿತು!

ರಾತ್ರಿ : ೨೦

## : : ಪ್ರೇಮದ ಹಸಿವು

"ಗೋವಿಂದಾ, ಇನ್ನು ಆರಂಭಿಸಬಹುದೇ?" ಶ್ಯಾಮನು ಕೇಳಿದ.

"ತುಸು ತಡೆಯಿರಿ, ಆ ಮುದುಕನು ಬರುವವನಿದ್ದಾನೆ. ನಿಮ್ಮ ಒಂದು ಶಬ್ದವನ್ನು ಕಳೆದುಕೊಂಡರೂ ಅವನಿಗೆ ಕೆಡುಕೆನಿಸುತ್ತದೆ." ಗೋವಿಂದ ಹೇಳಿದ.

"ಅಷ್ಟೊಂದು ಮಹತ್ವದ ಮಾತೇನಿವೆ ನನ್ನಲ್ಲಿ? ಸಾಮಾನ್ಯ ಸಂಗತಿಗಳನ್ನು ಹೇಳುತ್ತೇನೆ ಜನರು ಮೂಢರಿದ್ದಾರೆ ಆಯಿತು." ಎಂದು ಶ್ಯಾಮ ನುಡಿದ.

"ನೀವು ಹೇಳುವುದು ನಿಮ್ಮ ಮನಸ್ಸಿಗೆ ಸಮಾಧಾನವನ್ನುಂಟುಮಾಡುವದಿಲ್ಲವೇ? ನಿಮಗೆ ಬೇಸರವಾಗುವುದಿಲ್ಲವಷ್ಟೇ? ನಿಮಗೆ ಬೇಡವೆನಿಸುವ ಸಂಗತಿ ಹೇಳುತ್ತಿದ್ದರೆ ಅದು ಪಾಪವೆನಿಸಬಹುದು. ಮೋಸವೆನಿಸಬಹುದು. ತಮಗೆ ತ್ಯಾಜ್ಯವೆಂದು ಕಂಡ ಹಾಗು ಅಯೋಗ್ಯವೆನಿಸಿದ ಪದಾರ್ಥಗಳನ್ನು ಬೇರೆಯುವರಿಗೆ ಕೊಡಬಹುದೇ?" ಭಿಕ್ಕನು ವಿಚಾರಿಸಿದ.

"ಜನರಿಗೆ ನಿಮ್ಮ ಮಾತಿನಲ್ಲಿ ಶ್ರದ್ಧೆಯಿದೆಯೆಂದಬಳಿಕ ಅವರ ಮನಸ್ಸನ್ನು ನೋಯಿಸಬಹುದೇ? ನಿಮ್ಮ ಮಾತಿನಿಂದ ಅವರಿಗೆ ಸಂತೋಷವಾಗುತ್ತಿರಬೇಕೆಂದೇ ಅವರು ಉತ್ಸುಕರಾಗಿ ಬರುತ್ತಾರೆ." ಎಂದು ನುಡಿದ ಗೋವಿಂದ.

"ಅಗೋ, ಆ ಅಜ್ಜ ಬಂದೇಬಿಟ್ಟರು. ಈ ಕಡೆ ಬನ್ನಿ" ರಾಮು ಕರೆದ.

"ಇಲ್ಲಿಯೇ ಚೆನ್ನಾಗಿದೆ. ಕುಳಿತುಕೊಳ್ಳುತ್ತೇನೆ." ಮುದುಕ ಹೇಳಿದ.

"ಶ್ಯಾಮಾ, ಇನ್ನು ಆರಂಭಿಸಬಹುದು." ರಾಜ ಹೇಳಿದ.

ಎಲ್ಲ ಜನ ಉತ್ಸಾಹದಿಂದ ಕುಳಿತಿದ್ದರು. ಶ್ಯಾಮನು ಕಥೆಯನ್ನಾರಂಭಿಸಿದನು. ಅವನ ಹೃದಯಂಗಮ ಮುರಲಿಯು ನುಡಿಯತೊಡಗಿತು:

ನಮ್ಮ ತಂದೆಯವರು ನನ್ನನ್ನು ನಮ್ಮ ಊರಿನಿಂದ ಆರು ಹರದಾರಿ ದೂರದಲ್ಲಿರುವ ದಾಪೋಲಿಯೆಂಬಲ್ಲಿ ಇಂಗ್ಲಿಷು ಕಲಿಯಲು ಇಟ್ಟಿದ್ದರು. ಮಾವನ ಮನೆಯಲ್ಲಿ ಮೊದಲೇ ಬೆಳಕು ಕೆಡವಿ ಬಂದಿದ್ದೆ. ಆಮೇಲೆ ತುಸು ದಿವಸ ಮನೆಯಲ್ಲಿಯೇ ಇದ್ದು ವೇದಾಧ್ಯಯನ ನಡೆಸಿದ್ದೆ. ಆದರೆ ತಂದೆಯವರು ಇಂಗ್ಲೀಷು ಶಿಕ್ಷಣ ಕೊಡಿಸಲು ನಿರ್ಧರಿಸಿದರು. ಒಂದೆರಡು ಇಯತ್ತೆಯ ವರೆಗೆ ಅಭ್ಯಾಸವೂ ಆಗಿತ್ತು.

ದಾಪೋಲಿ ಒಂದು ಸುಂದರವಾದ ಊರು. ಅಲ್ಲಿಯ ಹವೆ ಆರೋಗ್ಯದಾಯಕವೆಂದು ಹೆಸರಾಗಿತ್ತು. ಅಲ್ಲಿಂದ ಸಮುದ್ರ ತೀರ ನಾಲ್ಕು ಹರದಾರಿಯ ಮೇಲಿದೆ. ದಾಪೋಲಿಯಲ್ಲಿ ದೊಡ್ಡ ದೊಡ್ಡ ಬೈಲುಗಳಿವೆ. ಅದು ಒಂದು ಕಾಲದಲ್ಲಿ ಇಂಗ್ಲಿಷರ ದಂಡಿನ ಸ್ಥಳವಾಗಿದ್ದರಿಂದ ಅದಕ್ಕೆ 'ಕ್ಯಾಂಪ್ ದಾಪೋಲಿ' ಎಂದು ಹೆಸರು ಬಿದ್ದಿತ್ತು. ಮುಂದೆ 'ಕ್ಯಾಂಪ್' ಶಬ್ದದ ಅಪಭ್ರಂಶವಾಗಿ ಅದಕ್ಕೆ ಕಾಪ್ ದಾಪೋಲಿ ಎಂಬ ಹೆಸರು ರೂಢವಾಗಿದೆ. ಹಾಗೆ ನೋಡಿದರೆ ನಮ್ಮ ತಾಲ್ಲೂಕು ಮಹಾರಾಷ್ಟ್ರದ ಬೇರೆ ಭಾಗಗಳಿಗಿಂತ ಮೊದಲು ಇಂಗ್ಲಿಷರ ವಶವಾಗಿತ್ತು. ನಾನಾಸಾಹೇಬ ಪೇಶ್ವೆಯವರು ಆಂಗ್ರೆಯವರ ಹಡಗುಪಡೆಯನ್ನು ಇಂಗ್ಲಿಷರ ಸಹಾಯದಿಂದ ನಷ್ಟಪಡಿಸಿದ್ದರು. ಇದು ಅವರ ಮಹಾಪರಾಧವಾಗಿತ್ತು. ಆಂಗ್ರೆಯವರ ಹಡಗುಪಡೆ ಇಂಗ್ಲಿಷರಿಗೆ ಅಡ್ಡಗಾಲು ಆಗಿದ್ದಿತು. ಇಂಗ್ಲಿಷರ ಮತ್ತು ಬೇರೆಯವರ ಹಡಗುಪಡೆಯನ್ನು ಆಂಗ್ರೆಯವರು ಅರಬೀ ಸಮುದ್ರದಲ್ಲಿ ಅನೇಕ ಬಾರಿ ಪರಾಭವಗೊಳಿಸಿದ್ದರು. ಶಿವಾಜಿ ಮಹಾರಾಜರು ಪರಿಶ್ರಮ ಪೂರ್ವಕವಾಗಿ ಈ ಹಡಗುಪಡೆ ನಿಲ್ಲಿಸಿದ್ದರು. ಮೊದಲು ಮರಾಟರ ಒಂದು ದೋಣಿ ಕೂಡ ಅರಬೀಸಮುದ್ರದಲ್ಲಿ ಸಂಚರಿಸುತ್ತಿದ್ದಿಲ್ಲ. ಆದರೆ ಈ ಮಹಾಪುರುಷನು ಹಡಗುಪಡೆಯ ಮಹತ್ವವನ್ನು ಅರಿತುಕೊಂಡಿದ್ದನು. 'ಸಮುದ್ರದ ಮೇಲೆ ಪ್ರಭುತ್ವವುಳ್ಳವನೇ ವೈಭವಶಾಲಿ' ಯೆಂದು ರಾಜನೀತಿಯಲ್ಲಿ ಹೇಳಿದೆ. ಆದರೆ ನಾನಾಸಾಹೇಬನು ಇಂಗ್ಲಿಷರ ಕಾಲ್ತೊಡಕನ್ನು ತಾನಾಗಿ ಬಿಡಿಸಿದ್ದನು. ಆಂಗ್ರೆಯವರ ಹಡಗುಪಡೆ ನಷ್ಟಗೊಳಿಸಲು ನೆರವಾದ ಬಗ್ಗೆ ಪ್ರತಿಫಲವೆಂದು ಇಂಗ್ಲಿಷರಿಗೆ ದಾಪೋಲಿ ತಾಲೂ

ಕಿನ ಬಂದರದ ಮೇಲಿರುವ ಬಾಣಕೋಟ ಮೊದಲಾದ ಕೆಲವು ಹಳ್ಳಿಗಳು ದೊರೆತಿದ್ದವು. ವೇಳಾಸಗಾಂವದ ಮನಸಬ್ದಾರಿಕೆ ಚಲಾಯಿಸುತ್ತಿದ್ದ ನಾನಾ ಫಡಣೀಸರು ಇದೇ ತಾಲೂಕಿನವರು. ಸ್ವಾತಂತ್ರ್ಯಕ್ಕಾಗಿ ಆಮರಣ ಹೋರಾಡಿದವರೂ, ' ಸ್ವರಾಜ್ಯವು ನನ್ನ ಜನ್ಮಸಿದ್ಧ ಹಕ್ಕು ' ಎಂದು ಜನಮನದಲ್ಲಿ ಮೊಟ್ಟಮೊದಲು ಬೀಜಾರೋಪಣ ಮಾಡಿದವರೂ, ಗೀತಾರಹಸ್ಯವನ್ನು ಬರೆದವರೂ, ಮತ್ತು ಕೇಸರಿ ಸಂಪಾದಕರೂ ಆದ ಲೋಕಮಾನ್ಯ ಟಿಳಕರು ಇದೇ ತಾಲೂಕಿನವರು. ಸಾಮಾಜಿಕ ಗುಲಾಮಗಿರಿಯ ವಿರುದ್ಧ ಬಂಡನ್ನು ಎಬ್ಬಿಸಿದವರೂ, ಹಿಂಗಣೆಯಲ್ಲಿ ನಾಲ್ಕು ವಿದ್ಯಾರ್ಥಿನಿಯರನ್ನು ತಂದು ಆಶ್ರಮಸ್ಥಾಪಿಸಿದವರೂ, ಮಹಿಳಾ ವಿದ್ಯಾಪೀಠದ ಸಂಸ್ಥಾಪಕರೂ ಆದ ಕರ್ಮವೀರ ಕರ್ವೆಯವರು ಇದೇ ತಾಲೂಕಿನವರು. ಸ್ವಾಭಿಮಾನಿ ವಿಶ್ವನಾಥ ನಾರಾಯಣ ಪುಂಡಲೀಕ ಮತ್ತು ಗಣಿತವಿಶಾರದ ರಘುನಾಥ ಪುರುಷೋತ್ತಮ ಪರಾಂಜಪೆ ಇದೇ ತಾಲೂಕಿನವರು.

ದಾಪೋಲಿಯ ಎಡಬಲಕ್ಕೆ ದಟ್ಟವಾದ ಅಡವಿ ಇದೆ. ಗಾಳೀಮರಗಳೂ ವಿಪುಲವಾಗಿವೆ. ಗಾಳಿ ಬೀಸುತ್ತಿರುವಾಗ ಸಮುದ್ರದ ಗರ್ಜನೆಗಿಂತಲೂ ಭಯಂಕರವಾದ ಸಪ್ಪಳ ಕೇಳಿ ಬರುತ್ತದೆ. ಅಲ್ಲಲ್ಲಿ ಗೋಡಂಬೆಯ ಗಿಡಗಳೂ ರಾಶಿರಾಶಿಯಾಗಿವೆ. ಬೇಸಿಗೆ ಕಾಲದಲ್ಲಿ ಕೆಂಪು, ಹಳದಿ ಮತ್ತು ಕೇಸರಿ ಬಣ್ಣಗಳ ಗೋಡಂಬೆಹಣ್ಣುಗಳ ಗೊಂಚಲಗಳು ಗಿಡಗಳಲ್ಲಿ ಉಯ್ಯಾಲೆಯಾಡುತ್ತಿರುತ್ತವೆ. ದಾಪೋಲಿಯ ಸುತ್ತುಮುತ್ತಲಿನ ಊರುಗಳು ಸೃಷ್ಟಿಸೌಂದರ್ಯದ ತವರುಮನೆಯಂತಿದ್ದವು.

ದಾಪೋಲಿಯಲ್ಲಿಯ ಇಂಗ್ಲೀಷು ಶಾಲೆ ಮಿಶನರಿ ಜನರದಾಗಿತ್ತು. ಒಂದು ಕಾಲಕ್ಕೆ ಆ ಛಾತ್ರಾಲಯವು ಮುಂಬಯಿ ಪ್ರಾಂತದಲ್ಲೇ ವಿಖ್ಯಾತವಾಗಿತ್ತು. ಆ ನಮ್ಮ ಶಾಲೆ ಒಂದು ಗುಡ್ಡದ ಮೇಲಿತ್ತು. ಸುತ್ತಲೂ ಕಸಿಮಾವಿನ ಮರಗಳಿದ್ದವು. ಇದರಿಂದಾಗಿ ಶಾಲೆ ಒಳ್ಳೆ ರಮ್ಯವಾಗಿ ಕಾಣುತ್ತಿತ್ತು. ಅಲ್ಲಿ ನನ್ನ ಅಭ್ಯಾಸಕ್ಕೆ ಆರಂಭವಾಯಿತು.

ದಾಪೋಲಿಗೂ ನಮ್ಮ ಊರಿಗೂ ನಡುವೆ ಆರು ಹರದಾರಿ ಅಂತರವಿತ್ತು. ನಮ್ಮೂರವರೆಗೆ ನಡೆದುಕೊಂಡು ಹೋದೇನೆಂಬ ಆತ್ಮವಿಶ್ವಾಸ ನನಗಿರಲಿಲ್ಲ. ಆದರೆ ಒಂದು ಸಲ ನಡೆದುಕೊಂಡು ಹೋದ ಮೇಲೆ ವಿಶ್ವಾಸ

ಹುಟ್ಟಿತು. ಅಂದಿನಿಂದ ಪ್ರತಿ ಶನಿವಾರ ನಮ್ಮೂರಿಗೆ ಹೋಗುತ್ತಿದ್ದೆ. ಶನಿವಾರ ಮಧ್ಯಾಹ್ನ ಎರಡು ಗಂಟೆಗೆ ಶಾಲೆ ಬಿಟ್ಟಮೇಲೆ ಹೊರಟವನು ದೀಪ ಹಚ್ಚುವ ಹೊತ್ತಿಗೆ ಊರು ತಲಪುತ್ತಿದ್ದೆ. ರವಿವಾರವಿಡಿ ಮನೆಯಲ್ಲಿ ತಾಯಿಯ ಸಾನ್ನಿಧ್ಯದಲ್ಲಿದ್ದುಕೊಂಡು ಸೋಮವಾರ ನಸುಕಿನಲ್ಲಿ ಮತ್ತೆ ದಾಪೋಲಿಗೆ ಹೊರಡುತ್ತಿದ್ದೆ. ಶಾಲೆಯ ಹೊತ್ತಿಗೆ ಸರಿಯಾಗಿ ಹೋಗಿ ತಲಪುತ್ತಿದ್ದೆ.

ಇದೇ ರೀತಿ ಒಂದು ಶನಿವಾರ ನಮ್ಮೂರಿಗಾಗಿ ಹೊರಟಿದ್ದೆ. ಅಂದು ನಾನು ಬಹಳ ಖಿನ್ನನೂ, ದುಃಖಿಯೂ ಆಗಿದ್ದೆ. ಜಗತ್ತಿನಲ್ಲಿ ನನಗಾರೂ ಇಲ್ಲವೇನೋ ಎಂದು ಆ ದಿವಸ ನನಗೆ ಅನಿಸಹತ್ತಿತು. ಚಿಕ್ಕಂದಿನಿಂದಲೂ ನನ್ನ ಸ್ವಭಾವ ಈ ರೀತಿಯದಾಗಿತ್ತು. ನಿಜವಾಗಿಯೂ ಈ ಜಗತ್ತಿನಲ್ಲಿ ನನಗೆ ಯಾರು ಇದ್ದಾರೆ ಎಂದು ಒಮ್ಮೊಮ್ಮೆ ಮನಸ್ಸಿನಲ್ಲಿ ಬರುತ್ತದೆ. ಈ ವಿಚಾರ ನನ್ನ ಮನಸ್ಸಿನಲ್ಲಿ ಬಂದು ನಾನು ಅನೇಕ ಸಲ ಕಣ್ಣೀರು ಸುರಿಸಿದ್ದೇನೆ. ಏನೂ ಕಾರಣವಿಲ್ಲದೆ ಕಣ್ಣುಗಳು ತುಂಬಿ ಬರುವದು, ಹೃದಯವು ಗದ್ಗದಿತವಾಗುವದು, ಇವುಗಳನ್ನು ನಾನು ಅನುಭವಿಸಿದ್ದೇನೆ. ನಾನೆಂದರೆ ಒಂದು ಬಿಂದು ಮಾತ್ರ! ಯಾವ ಗಿಡದ ತೊಪ್ಪಲ! ಕ್ಷಣಮಾತ್ರದಲ್ಲಿ ಬಾಡಿ ಬಿದ್ದು ಹೋಗತಕ್ಕವ, ಬಿದ್ದು ಹೋಗತಕ್ಕವ! ಹೀಗೆ ಅಸ್ಥಿರನೆಂಬ ವಿಚಾರವು ನನ್ನ ಮನದಲ್ಲಿ ಬಾಲ್ಯದಿಂದಲೂ ಬರುತ್ತಿತ್ತು. ಸಹಾನುಭೂತಿ ಮತ್ತು ಪ್ರೇಮದ ಹಸಿವು ಕೂಡ ನನಗೆ ಬಹಳ ಇತ್ತು. ನೂರು ಜನ್ಮಗಳಿಂದಲೂ ಈ ಎರಡು ವಸ್ತುಗಳು ನನಗೆ ಲಭಿಸಿಲ್ಲವೆಂದೂ, ಇವುಗಳಿಂದಾಗಿ ನಾನು ಕಂಗಾಲಾಗಿದ್ದೇನೆಂದೂ ಭಾಸವಾಗುತ್ತಿತ್ತು. ಮನುಷ್ಯನು ಅನ್ನವಿಲ್ಲದೆ ಬದುಕಬಹುದು, ಆದರೆ ಪ್ರೇಮವಿಲ್ಲದೆ ಬದುಕಬಹುದೇ? ಪ್ರೇಮವು ಜೀವನದ ಪ್ರಾಣ. ಪ್ರೇಮವು ಸ್ಥಿರವೂ, ಸಮೃದ್ಧವೂ ಆಗಿದ್ದು ಅದು ಜೀವನವೃಕ್ಷವನ್ನು ಪೋಷಿಸುತ್ತದೆ. ಗಿಡಗಳ ಎಲೆ–ಎಲೆಗಳಲ್ಲಿ, ಟೊಂಗೆ–ಟೊಂಗೆಗಳಲ್ಲಿ ಜೀವನ ರಸವು ತುಂಬಿಕೊಂಡಿರುವಂತೆ, ಮನುಷ್ಯನಲ್ಲಿ ಪ್ರೇಮವು ತುಂಬಿಕೊಂಡಿರಬೇಕು. ಸೋಡಾವಾಟರ್ ಬಾಟಲಿಯನ್ನು ಒಡೆದ ಕೂಡಲೆ ಫಸ್–ಫಸ್ ಎಂದು ನೀರು ಹೊರಗೆ ಬರುತ್ತದೆ. ಈರೀತಿ ಕ್ಷಣಕಾಲ ಉಕ್ಕಿಬಂದು ಮರುಕ್ಷಣದಲ್ಲಿ ಮಾಯವಾಗುವ ಪ್ರೇಮವು ಜೀವನಕ್ಕೆ ತೇಜವನ್ನು, ಸೌಂದರ್ಯವನ್ನು, ಮತ್ತು ಉತ್ಸಾಹವನ್ನು ಕೊಡಲಾರದು.

ಆ ದಿವಸ ನನಗೆ ಪ್ರೇಮದ ಹಸಿವೆಯಾಗಿತ್ತು. ನಾನು ಮನೆಯ ಪ್ರೇಮದ ಹವೆಯನ್ನು ಸೇವಿಸಲು ಹೊರಟಿದ್ದೆ. ಲೋಕಮಾನ್ಯ ಟಿಳಕರು ಹೇಳುತ್ತಿದ್ದರು, "ನಾನು ಸಿಂಹಗಡಕ್ಕೆ ಹೋಗಿ ಎರಡು ತಿಂಗಳು ಇರುತ್ತೇನೆ. ಎರಡು ತಿಂಗಳು ಅಲ್ಲಿಯ ಶುದ್ಧ ಮತ್ತು ಸ್ವಚ್ಛವಾದ ಹವೆಯನ್ನು-ಸ್ವಾತಂತ್ರ್ಯದ ಹವೆಯನ್ನು ಸೇವಿಸಿ ಕೆಳಗೆ ಬರುತ್ತೇನೆ. ಆ ಹವೆ ನನಗೆ ವರ್ಷವೆಲ್ಲ ಸಾಕಾಗುತ್ತದೆ." ನನ್ನದೂ ಇದೇ ಸ್ಥಿತಿಯಾಗಿತ್ತೇನೋ? ವಾರವಾರಕ್ಕೊ ಮನೆಗೆ ಹೋಗಿ ಪ್ರೇಮದ ಗಾಳಿಯನ್ನು ಸೇವಿಸಿ ಬರುತ್ತಿದ್ದೆ. ಮತ್ತೆ ಒಂದು ವಾರದ ವರೆಗೆ ಪ್ರೇಮಹೀನ ಜಗತ್ತಿನಲ್ಲಿದ್ದು ಪುನಃ ಮನೆಗೆ ಬರುತ್ತಿದ್ದೆ. ಆ ವಯಸ್ಸಿನಲ್ಲಿ ನಾನು ಪ್ರೀತಿಯನ್ನು ಸ್ವೀಕರಿಸುವದಕ್ಕಾಗಿ ಆತುರನಾಗುತ್ತಿದ್ದೆ. ಆದರೆ ಇಂದು ನಾನು ಪ್ರೇಮವನ್ನು ಸ್ವೀಕರಿಸುವದಕ್ಕಿಂತ ಕೊಡುವದರಲ್ಲಿಯೆ ಶ್ರೇಷ್ಠವಾದ ಆನಂದವಿದೆಯೆಂದು ತಿಳಿಯುತ್ತೇನೆ. ಆದರೆ ಮೊಳಕೆ ಚಿಕ್ಕದಿರುವಾಗ ಒಣಗಗೊಡದೆ, ಅದಕ್ಕೆ ನೀರೆರೆದು ಚೆನ್ನಾಗಿ ಬೆಳೆಯುವಂತೆ ಲಕ್ಷ್ಯ ಪೂರೈಸಿದರೆ ಆ ಅಂಕುರವೇ ಮುಂದೆ ಮರವಾಗಿ ನೆರಳನ್ನು ಕೊಡಬಹುದು. ದೊಡ್ಡದಾಗಿ ಸಾವಿರಾರು ಜನರಿಗೆ ಆನಂದವನ್ನು ಕೊಡಬಹುದು. ಚಿಕ್ಕವರಿದ್ದಾಗ ಪ್ರೇಮವನ್ನು ಪಡೆಯದಿದ್ದವರು ದೊಡ್ಡವರಾದಾಗ ಕಠೋರರಾಗಬಹುದು. ಜಗತ್ತನ್ನು ಅವರು ಪ್ರೀತಿಸಲಾರರು. ಮನುಷ್ಯನು ಪಡೆಯುವದನ್ನೇ ಮರಳಿ ಕೊಡುತ್ತಾನೆ.

ನಾನು ದಾರಿಗುಂಟ ಸಾಗಿದ್ದೆ. ಆಗಾಗ್ಗೆ ಕಣ್ಣೀರು ಬರುತ್ತಿತ್ತು. ಈ ಆರು ಹರದಾರಿ ಮಾರ್ಗದಲ್ಲಿ ಎಷ್ಟೋ ಹಳ್ಳಿಗಳು ಸಿಗುತ್ತವೆ. ಒಂದೆಡೆ ಅಡವಿಯೂ ಇದೆ. ಕರಂಜಣಿ ಊರಿನ ಹತ್ತರ ದಾರಿಯಲ್ಲಿ ಒಂದು ಬಾವಿ ಇದೆ. ಹಿಂದೊಂದು ಸಲ ಆ ಬಾವಿಯ ಮಾರ್ಗವಾಗಿ ಹೊರಟಿದ್ದ ದಿಬ್ಬಣದ ಬಂಡಿಯೊಂದು ಮಾಯವಾಗಿ ದಿಬ್ಬಣಕ್ಕೆ ದಿಬ್ಬಣವೇ ಅದೃಶ್ಯವಾಗಿದ್ದಿತೆಂದು ಹೇಳುತ್ತಾರೆ. ಆ ಬಾವಿಯ ಹತ್ತಿರದಿಂದ ಹೋಗುವಾಗ್ಗೆ ನನಗೆ ಹೆದರಿಕೆಯಾಗುತ್ತಿತ್ತು. ನಾನು 'ರಾಮ-ರಾಮ' ಎನ್ನುತ್ತ ಓಟ ಬಿಡುತ್ತಿದ್ದೆ. ಅಡವಿಯ ಬಳಿ ಬಂದಾಗ್ಗೆ ಹುಲಿ ಬಂದು ತಿನ್ನಲಿಕ್ಕಿಲ್ಲವಷ್ಟೇ? ಎಂದು ಗಾಬರಿಯಾಗುತ್ತಿದ್ದೆ. ಆಗ ನಾನು ಬಹಳ ದೊಡ್ಡವನಾಗಿರಲಿಲ್ಲ. ಹನ್ನೆರಡು-ಹದಿಮೂರು ವರ್ಷದವನಾಗಿದ್ದೆ. ದಾರಿಯಲ್ಲಿ ನೀರಡಿಕೆಯಾಗಿದ್ದರಿಂದ ನಾನು ಒಂದು

ಇಳಿಯುವ ಬಾವಿಯಲ್ಲಿ ಇಳಿದು ನೀರು ಕುಡಿದೆ. ಆ ಬಾವಿಯ ಸುತ್ತಲೂ ಇಳಿಯಲು ಸಾವಟಿಗೆಗಳು ಇದ್ದವು. ನೀರು ಕುಡಿದು ಮತ್ತೆ ದಾರಿ ಹಿಡಿದೆ. ರಾತ್ರಿಯಾದೀತೆಂದು ನಡಿಗೆಯ ವೇಗ ಹೆಚ್ಚಿಸಿದೆ.

ಕೊನೆಗೊಮ್ಮೆ ಮನೆಗೆ ಬಂದು ತಲುಪಿದೆ. ದೀಪ ಹಚ್ಚಿ ಆಗಿತ್ತು. ಚಿಕ್ಕ ತಮ್ಮ ಶ್ಲೋಕಗಳನ್ನು ಹೇಳುತ್ತಿದ್ದ. ತಾಯಿ ಒಲೆ ಹೊತ್ತಿಸುತ್ತಿದ್ದಳು. ಅಜ್ಜಿ ಯಾರಿಗೋ ಅಂಗಾರ ಮಂತ್ರಿಸಿ ಕೊಡುತ್ತಿದ್ದಳು. ಯಾರಿಗಾದರೂ ದೃಷ್ಟಿಯಾದರೆ ನಮ್ಮ ಅಜ್ಜಿ ಒಂದು ಮಾವಿನ ಎಲೆಯ ಮೇಲೆ ತುಸು ಬೂದಿಯನ್ನು ತಂದು, ಮಂತ್ರವನ್ನು ಹೇಳುತ್ತ ಅದನ್ನು ತಿಕ್ಕುತ್ತಿದ್ದಳು. ಆ ಬೂದಿಯನ್ನು ದೃಷ್ಟಿಯಾದವರಿಗೆ ಅಂಗಾರವೆಂದು ಒಯ್ದು ಹಚ್ಚುತ್ತಿದ್ದರು.

ನಾನು ಅಂಗಳದಲ್ಲಿ ದೃಷ್ಟಿಗೆ ಬೀಳುತ್ತಲೇ "ಅಣ್ಣ ಬಂದ, ಅಣ್ಣ ಬಂದ" ಎಂದು ನನ್ನ ಚಿಕ್ಕ ತಮ್ಮ ಜಯಜಯಕಾರ ಮಾಡುತ್ತ ಓಡಿ ಬಂದು ನನ್ನ ಮೈ ಮೈ ಅಡರಿದ. ನಾನು ಮನೆಯೊಳಗೆ ನಡೆದೆ.

" ತಡವಾಡಿ ಹೊರಟಿದ್ದೆಯೇನೋ ? ತುಸು ಬೇಗ ಹೊರಡಬೇಕಾಗಿತ್ತು. ಕತ್ತಲಾಯಿತಲ್ಲ " ಎಂದು ತಾಯಿ ಕೇಳಿದಳು.

ನಾನು ಹೇಳಿದೆ. " ನನ್ನಿಂದ ನಡೆಯಲಾಗುತ್ತಿರಲಿಲ್ಲ. ತೀರ ಸೋತು ಹೋಗಿದ್ದೆ. "

"ಹಾಗಾದರೆ ಈಗೇಕೆ ಬಂದೆ ? ಮುಂದೆ ಸಂಕ್ರಾಂತಿಗೆ ಬಂದಿದ್ದರೆ ಆಗುತ್ತಿತ್ತು."

"ಅವ್ವಾ, ನಾನು ನಿನ್ನನ್ನು ನೋಡಲಿಕ್ಕೆ ಬಂದೆ. ನೀನು ನನ್ನನ್ನು ಪ್ರೀತಿಯಿಂದ ನೋಡಿದರೆ ಸಾಕು; ನನಗೆ ಎಲ್ಲಿಲ್ಲದ ಬಲ ಬರುತ್ತದೆ. ಈ ಶಕ್ತಿಯನ್ನು ಪಡೆದುಕೊಂಡು ನಾನು ಹೋಗುತ್ತೇನೆ. " ಎಂದು ಹೇಳಿ ನಾನು ತಾಯಿಯ ಹತ್ತಿರ ಕುಳಿತು ಅಳತೊಡಗಿದೆ. ತಾಯಿಗೂ ಅಳು ಬಂದಿತು. ತನ್ನ ಕಣ್ಣು ಒರೆಸಿಕೊಂಡು ಸೆರಗಿನಿಂದ ನನ್ನ ಕಣ್ಣನ್ನೂ ಒರೆಸಿದಳು.

"ಈ ಬಿಸಿನೀರನ್ನು ತೆಗೆದುಕೊಂಡು ಕಾಲು ತೊಳೆದುಕೊ. ನಿಲ್ಲು. ತುಸು ಎಣ್ಣೆ ಹಚ್ಚಿ ಕಾಲು ತಿಕ್ಕುತ್ತೇನೆ. " ಎಂದು ನುಡಿದು ತಾಯಿ ನನ್ನ ಕಾಲು ತಿಕ್ಕುತ್ತಿದ್ದಳು, ನಾನು ಅವಳ ಮುಖವನ್ನು ನೋಡುತ್ತಿದ್ದೆ. ಆಗ ನನಗೆ ಆಗುತ್ತಿದ್ದ ಆನಂದವು ಅಪಾರವಾದದ್ದು ! ಆನಂದವೆನ್ನುವದಕ್ಕಿಂತ ಅದೊಂದು

ಬಗೆಯ ಸ್ವರ್ಗಸುಖವೇ ಆಗಿದ್ದಿತು. ನಾನು ಕಾಲು ತೊಳೆದುಕೊಂಡಾದ ಬಳಿಕ ತಾಯಿಯ ಬಳಿ ಒಲೆಯ ಹತ್ತಿರ ಕುಳಿತುಕೊಂಡಿದ್ದೆ. "ಅಣ್ಣಾ, ಕಥೆಯನ್ನಾದರೂ ಹೇಳು, ಶ್ಲೋಕಗಳನ್ನಾದರೂ ಕಲಿಸು" ಎಂದು ತಮ್ಮಂದಿರು ನನಗೆ ಗಂಟುಬಿದ್ದಿದ್ದರು. ಅಷ್ಟರಲ್ಲಿ ನಮ್ಮ ತಂದೆ ಹೊರಗಿನಿಂದ ಬಂದರು. ಅವರು ಏನೋ ತೊಂದರೆಪಟ್ಟುಕೊಂಡು ಬಂದಿದ್ದರು. ನನ್ನನ್ನು ಕಂಡು ಎಂದಿನಂತೆ ಅವರಿಗೆ ಆನಂದವಾಗಲಿಲ್ಲ. ಅವರು ಏನೂ ಮಾತನಾಡದೆ ಕಾಲು ತೊಳೆದು ಬಂದರು. ಸಂಧ್ಯಾವಂದನೆಗೆ ಕುಳಿತುಕೊಂಡರು.

"ಏನೋ, ಸಂಧ್ಯಾವಂದನೆ ಮುಗಿಸಿದೆ ಏನು ?" ಎಂದು ಅವರು ನನ್ನನ್ನು ವಿಚಾರಿಸಿದರು. ಆಗ ನಾನು ಸಂಧ್ಯಾವಂದನೆ ಮಾಡುವದನ್ನು ಬಿಟ್ಟಿರಲಿಲ್ಲ. ಅದರ ಅರ್ಥ ಗೊತ್ತಿರದಿದ್ದರೂ ಬಾಯಿಂದ ಮಂತ್ರಗಳನ್ನು ಗುಣುಗುಣಿಸುತ್ತಿದ್ದೆ. "ಇನ್ನೂ ಮಾಡಿಲ್ಲ, ಈಗ ಮಾಡುತ್ತೇನೆ." ಎಂದು ನಾನು ಹೇಳಿದೆ.

"ಏಳು, ಹೆಂಗಸರ ಹಾಗೆ ಒಲೆಯ ಮುಂದೇನು ಕೂಡುತ್ತೀ ? ಸಂಧ್ಯಾವಂದನೆ ಮಾಡು." ಅವರು ಸಿಟ್ಟಿನಿಂದ ನುಡಿದರು.

ತಾಯಿ ನಡುವೇ ಬಾಯಿಹಾಕಿ ಮಾತಾಡಿದಳು, "ಇದೀಗ ಅವನು ಬಂದಿದ್ದಾನೆ, ಬಹಳ ದಣಿದಿದ್ದಾನೆ. ಕೈಕಾಲು ಸೋತು ಹೋಗಿವೆಯೆಂದು ಕುಳಿತಿದ್ದಾನೆ. ಶ್ಯಾಮಾ, ಹೋಗಪ್ಪ. ಸಂಧ್ಯಾವಂದನೆ ಮಾಡು."

ನಾನು ಎದ್ದು ಮಣೆಯ ಮೇಲೆ ಕುಳಿತುಕೊಂಡೆ. ಭಸ್ಮದ ಪಟ್ಟೆಯನ್ನು ಎಳೆದುಕೊಂಡು ಆಚಮನ ಮಾಡಿದೆ. ನನ್ನ ಕಣ್ಣೀರು ದೇವರಿಗೆ ಶತ ಅರ್ಘ್ಯಗಳನ್ನು ಕೊಡುತ್ತಿದ್ದವು.

ತಂದೆ ಮತ್ತೆ ನುಡಿದರು, "ಅಲ್ಲಿ ಸ್ನಾನ-ಸಂಧ್ಯಾವಂದನೆ ತಪ್ಪದೆ ಮಾಡುತ್ತಿಯೋ ಇಲ್ಲವೋ ? ತಲೆಯನ್ನೆಷ್ಟು ಬೆಳೆಸಿಕೊಂಡಿದ್ದೀ ? ನಾವಲಿಗ ಸಿಗುವದಿಲ್ಲವೇನು ? ಶುದ್ಧ ಪೋಕರಿಯಾಗಿದ್ದಾನೆ. ಕೂದಲು ಬಿಡಬೇಡವೆಂದು ನಾನು ಅಲ್ಲಿ ಬಂದಾಗ ಹೇಳಿಲ್ಲಿಲ್ಲವೇ ? ಬರಬರುತ್ತ ನಿನಗೆ ಕೋಡು ಮೂಡುತ್ತಿವೆಯೇನು ? ನಾಳೆ ಬೆಳಿಗ್ಗೆ ಆ ನಾವಲಿಗ ಗೋವಿಂದನನ್ನಾಗಲೀ, ಆ ಲಕ್ಷ್ಮಣನನ್ನಾಗಲೀ ಕರೆದುಕೊಂಡು ತಲೆ ಕೆತ್ತಿಸಿಕೋ. ಇಲ್ಲದೆ ಹೋದರೆ ನೀನು ಇಲ್ಲಿ ಇರುವದೇ ಬೇಕಾಗಿಲ್ಲ. ಹೋಗಿಬಿಡು."

ಪ್ರೇಮದ ಹಸಿವೆಯಿಂದ ಬಂದ ನನಗೆ ಬೈಗಳು ದೊರೆತವು. ನನಗೆ ರೊಟ್ಟಿಯ ಬದಲು ಕಲ್ಲು ದೊರೆಯಿತು! ದುಃಖ ಉಕ್ಕೇರಿ ಸ್ಫೋಟವಾಯಿತು. ನಾನು ಬಿಕ್ಕಿಬಿಕ್ಕಿ ಅಳತೊಡಗಿದೆ. "ಅಳಲಿಕ್ಕೇನು ಬೇನೆಯೋ? ಯಾರೇನು ಹೊಡೆದಿರುವರೇ? ಸೋಗು ಹಾಕಲಿಕ್ಕೆ ಎಲ್ಲರಿಗೂ ಬರುತ್ತದೆ" ತಂದೆ ಹೇಳಿದರು.

"ನಾಳೆ ತಲೆ ಮಾಡಿಸಿಕೊಂಡಾನು? ಅಲ್ಲಿ ಹಣದ ಕೊರತೆಯಾಗಿದ್ದೀತು. ಮಾಡಿಸಿಕೊಂಡಿರಲಿಕ್ಕಿಲ್ಲ. ಹತ್ತು ಗಂಟೆಗೆ ಸರಿಯಾಗ ಶಾಲೆಗೆ ಬೇರೆ ಹೋಗುವದಿರುತ್ತದೆ. ಹೋಗಲಿ ಬಿಡಪ್ಪ ಶ್ಯಾಮು. ಸುಮ್ಮನಾಗಿನ್ನು. ಸಂಧ್ಯಾ ಆಯಿತೇನು? ಆರತೀ ಬೆಳಗು. ನಾನು ಎಲೆ ಬಡಿಸುತ್ತೇನೆ. ಹಸಿವೆಯಾಗಿರಬಹುದು." ತಾಯಿ ಅಮೃತಮಯ ವಾಣಿಯಿಂದ ಮಾತನಾಡುತ್ತಿದ್ದಳು. ನನಗೆ ಜೀವನ ಮತ್ತು ಮೃತ್ಯು, ಅಮೃತ ಮತ್ತು ವಿಷ ಇವುಗಳ ಅನುಭವವಾಗುತ್ತಿತ್ತು. ಬೇಸಿಗೆ ಕಾಲ ಮತ್ತು ಮಳೆಗಾಲ, ಶರದ್ ಮತ್ತು ಶಿಶಿರ ಋತು ಇವುಗಳ ಕಲ್ಪನೆಯಾಗುತ್ತಿತ್ತು.

ಆರತಿಯಾದ ಮೇಲೆ ನಾವು ಊಟಕ್ಕೆ ಕುಳಿತೆವು. ತಾಯಿ ನನಗೆ–ನನಗೊಬ್ಬನಿಗೇ–ಮೊಸರು ಹಾಕಿದಳು. ನನ್ನ ಹತ್ತಿರ ಕುಳಿತ ಪುಟ್ಟ ತಮ್ಮನಿಗೆ ಬಡಿಸಿರಲಿಲ್ಲ. ನನ್ನ ಕಡೆ ಯಾರ ಲಕ್ಷ್ಯವೂ ಇದ್ದಿಲ್ಲ. ನಾನು ಮೆಲ್ಲಗೆ ತುಸು ಮೊಸರನ್ನು ತಮ್ಮನ ಅನ್ನದಲ್ಲಿ ಹಾಕಿ ಕಲಸಿಕೊಟ್ಟೆ. ಆ ಮೊಸರನ್ನು ಕೊಡುವಾಗ ನನಗೆ ಧನ್ಯತೆಯೆನಿಸುತ್ತಿತ್ತು. ಅಂದು ನಾನು ಹೂವಿನಷ್ಟು ಹಗುರು ಮನಸ್ಸಿನವನಾಗಿದ್ದೆ. ಯಾರಾದರೂ ತುಸು ಕೈ ಎತ್ತಿದರೆ ಸಾಕು ಕಣ್ಣು ತುಂಬ ನೀರು ಬಂದು ಬಡುತ್ತಿದ್ದವು. ಕಣ್ಣೀರೇ ಕಣ್ಣೀರು! ಕಣ್ಣೀರಿನ ಮೂರ್ತಿಯೇ ಆಗಿದ್ದೆ. ನಾನು ದೊಡ್ಡವನಾದ ಮೇಲೆ ನನ್ನ ತಮ್ಮನಿಗೆ ದುಡ್ಡಿನ ಸಹಾಯ ಮಾಡಿರಬಹುದು. ಆದರೆ ಆ ಮೊಸರನ್ನು ಕೊಡುವದರಲ್ಲಿ ಇರುವ ಸಹೃದಯತೆ ದುಡ್ಡಿನಲ್ಲಿರುವದಿಲ್ಲ.

ನಾವು—ಸಹೋದರರೆಲ್ಲ—ಮಾತುಕತೆಯಾಡುತ್ತ ಮಲಗಿಕೊಂಡೆವು. ಅವರಿಗೆಲ್ಲ ನಿದ್ದೆ ಹತ್ತಿದರೂ ನಾನು ಮಲಗಿರಲಿಲ್ಲ. ನಾನು ಮುಸುಗುಡುತ್ತ ಇದ್ದೆ. ಮುಂದೆ ಯಾವಾಗಲೋ ನಿದ್ದೆ ಹತ್ತಿತು. ತೀರ ನಸುಕಿನಲ್ಲೆದ್ದು ತಂದೆಯವರು ಹೊಲದ ಕಡೆ ಹೋದರು. ನಾನು ಎಚ್ಚತ್ತಿದ್ದೆ. ತಾಯಿ ಉಡು

ಸಾರಣೆ ಕೆಲಸದಲ್ಲಿ ತೊಡಗಿದ್ದಳು. ಕೃಷ್ಣನ ಪದಗಳನ್ನು ಹೇಳುತ್ತಿದ್ದಳು. ನಾನು ಪದಗಳನ್ನು ಕೇಳುತ್ತಿದ್ದೆ. ನನ್ನ ತಾಯಿಯ ಹೆಸರು ಯಶೋದೆ. ನನ್ನ ಹೆಸರು ಶ್ಯಾಮ. ತಾಯಿ ನನಗೆ ಪ್ರೇಮಾಮೃತವನ್ನುಣಿಸುತ್ತಿದ್ದಳು. ನಾನು ಎದ್ದು ತಾಯಿಗೆ ಅಪ್ಪು ಹಾಕಿದೆ. "ಅಮ್ಮಾ, ನೀನು ನನ್ನನ್ನು ಮಗ್ಗುಲಲ್ಲಿ ಕರೆದುಕೊಂಡು ಮಲಗಿಕೋ. ನಿನ್ನ ದುಪ್ಪಟಿಯನ್ನು ಹೊದ್ದಿಸು. ತುಸು ಚುಕ್ಕು ಬಡಿದು ಮಲಗಿಸು. ನಿನ್ನ ಉಡಸಾರಣೆ ಇರಲಿ" ಎಂದು ನಾನು ಸಲಿಗೆಯಿಂದ ನುಡಿದೆ. ಹುಡುಗನ ಮಾತಿನ ಮುಂದೆ ತಾಯಿಯದೇನು ನಡೆಯಬೇಕು. ನಾನು ಸಣ್ಣ ಕೂಸಿನಂತೆ ಹಟ ಬೇರೆ ಹಿಡಿದಿದ್ದೆನಲ್ಲವೇ? ತಾಯಿಯ ಬಳಿ ಮಲಗಿಕೊಂಡೆ. ಅವಳು ನನಗೆ ಲಾಲಿಪದ ಹೇಳುತ್ತ ಚುಕ್ಕು ಬಡೆಯುತ್ತಿದ್ದಳು.

ನಾನು ಆ ಪದಗಳನ್ನು ಕೇಳುತ್ತಿದ್ದಾಗ ತಾಯಿಗೆ ಕೇಳಿದೆ, "ಅಮ್ಮಾ, ನಾನು ಇನ್ನು ಇರಲಾರೆ. ಹೊರಟು ಹೋಗುತ್ತೇನೆ. ನಾನು ಬಂದದ್ದಕ್ಕೆ ಭಾವೂ ಎಷ್ಟೊಂದು ಸಿಟ್ಟಿಗೆದ್ದರು? ಅವರು ಮನೆಗೆ ಬರುವ ಮೊದಲೇ ನಾನು ಹೊರಟು ಹೋಗುತ್ತೇನೆ."

ತಾಯಿಯೆಂದಳು, "ಹೀಗೆಲ್ಲ ಮಾಡಬಾರದಪ್ಪಾ, ಶ್ಯಾಮಾ. ಇದೇನು ಸರಿಯಾದದ್ದೇ? ಅವರು ಆಡಿದ ಮಾತ್ರಕ್ಕೆ ಅದೇನು ಅವರು ಮನಸ್ಸಿನಲ್ಲಿ ಇಟ್ಟುಕೊಳ್ಳುವರೋ? ಯಾರಾದರೂ ಹೊರಗೆ ಅವರ ಅಪಮಾನ ಮಾಡಿರಬಹುದು, ಅವರು ಸಿಟ್ಟಿಗೆ ಬಂದಿರಬಹುದು, ಆಗಕ್ಕಾಗಿ ಮಾತಾಡಿದರು. ಇತ್ತೀಚೆಗೆ ನಮ್ಮ ಪರಿಸ್ಥಿತಿ ಬಹಳ ಕೆಟ್ಟಿದೆ. ಅವರ ಮನಸ್ಸು ಯಾವಾಗಲೂ ನಿರಾಶೆಯಿಂದ ಕೂಡಿರುತ್ತದೆ. ಅವರ ಮಾತುಗಳನ್ನು ನೀನು ಮನಸ್ಸಿಗೆ ಹಚ್ಚಿಕೊಳ್ಳಬೇಡ. ಇಂದಿನವರೆಗೆ ಅವರು ನಿಮ್ಮನ್ನು ಬೆಳಸಿದ್ದಾರೆ. ನಿಮಗೆ ಎರಡು ಮಾತು ಆಡಲಿಕ್ಕೂ ಅವರಿಗೆ ಅಧಿಕಾರವಿಲ್ಲವೇ? ಇಷ್ಟು ವರ್ಷ ನಿಮಗಾಗಿ ಅವರು ಅಪಮಾನ ಸಹಿಸಿದರು. ಕಷ್ಟ ಭೋಗಿಸಿದರು. ನಿಮ್ಮನ್ನು ಸಾಕಿ ಸಲಹಿ ದೊಡ್ಡವರನ್ನಾಗಿ ಮಾಡಿದರು. ನಿಮ್ಮ ಶಿಕ್ಷಣಕ್ಕಾಗಿ ಸಾಲ ಮಾಡಿ ಅವರು ಹರಕು ಧೋತರ ಉಟ್ಟುಕೊಂಡು ತಿರುಗುತ್ತಿದ್ದಾರೆ. ಅವರಾಡಿದ ಎರಡು ಮಾತಿಗಾಗಿ ಇದನ್ನೆಲ್ಲ ನೀನು ಮರೆತು ಬಿಡುವಿಯಾ? ನೀವು ಇನ್ನೂ ಚಿಕ್ಕವರೆಂದು ಅವರು ಆಡಿದರು. ದೊಡ್ಡವರಾದ ಮೇಲೆ ಆಡುವದು ಅಷ್ಟರಲ್ಲೇ

ಇದೆ. ಅವರು ಆಡಿದರೆ ಕೇಳುವವರಾದರೂ ಯಾರು? ತಾಯಿ ತಂದೆಗಳಿಗೆ ಸಮಾಧಾನವಾಗಲೆಂದು ಕೂದಲು ತೆಗೆದುಕೊಳ್ಳಲಿಕ್ಕೂ ನೀನು ಸಿದ್ಧನಿಲ್ಲವೇ? ತಾಯಿತಂದೆಗಳ ಧರ್ಮ ಭಾವನೆಯನ್ನು ನೋಯಿಸಬಾರದೆಂದು ನೀನಿಷ್ಟೂ ಮಾಡಬಾರದೇ?" ತಾಯಿ ತಿಳಿಸಿ ಹೇಳುತ್ತಿದ್ದಳು. ನಡುವೆ ನಾನು ಕೇಳಿದೆ:

"ಕೂದಲಕ್ಕೂ ಧರ್ಮಕ್ಕೂ ಏನು ಸಂಬಂಧ?"

"ಧರ್ಮವು ಪ್ರತಿಯೊಂದು ಮಾತಿನಲ್ಲಿಯೂ ಇದೆ. ಏನು ತಿನ್ನಬೇಕು, ಏನು ಕುಡಿಯಬೇಕು ಇದರಲ್ಲಿಯೂ ಧರ್ಮವಿದೆ. ನೀನು ಕೂದಲು ಏಕೆ ಇಟ್ಟುಕೊಳ್ಳುತ್ತೀ? ಅದು ಮೋಹವೇ ಅಲ್ಲವೇ? ಮೋಹವನ್ನು ತ್ಯಜಿಸುವದೇ ಧರ್ಮ" ಎಂದು ತಾಯಿ ಹೇಳಿದಳು.

ಗೆಳೆಯರೆ, ನನ್ನ ತಾಯಿಗೆ ಸರಿಯಾಗಿ ತಿಳಿಸಿ ಹೇಳಲಿಕ್ಕೆ ಸಾಧ್ಯವಾಗಿರಲಿಕ್ಕಿಲ್ಲ. ಆದರೆ ಇಂದು ಅದೆಲ್ಲ ನನಗೆ ತಿಳಿಯುತ್ತಿದೆ. ಪ್ರತಿಯೊಂದು ಕೆಲಸವನ್ನೂ ವಿಚಾರಪೂರ್ವಕವಾಗಿ ಮಾಡುವದು, ಸತ್ಯ, ಹಿತ ಮತ್ತು ಕಲ್ಯಾಣಕ್ಕಾಗಿ ಮಾಡುವದೆಂದರೇ ಧರ್ಮ. ಮಾಡುವದು, ನಡೆಯುವದು, ಕೂಡುವದು, ಏಳುವದು, ಕೇಳುವದು, ನೋಡುವದು, ತಿನ್ನುವದು, ಮಲಗುವದು, ಜಳಕ ಮಾಡುವದು, ಒಗೆಯುವದು ಮೊದಲಾದ ಎಲ್ಲದರಲ್ಲೂ ಧರ್ಮವಿದೆ. ಧರ್ಮವೆಂದರೆ ಗಾಳಿ. ಧರ್ಮವೆಂದರೆ ಬೆಳಕು. ನಮ್ಮ ಜೀವಕ್ಕೆ ಧರ್ಮದ ಹವೆ ಎಲ್ಲಿ ಹೋದರೂ ಬೇಕೇಬೇಕು. ನಾನು ಚೆಂದ ಕಾಣುವದಕ್ಕಾಗಿ ಕೂದಲು ಬಿಡುತ್ತಿದ್ದೆ. ನಿಜವಾದ ಸೌಂದರ್ಯ ಸದ್ಗುಣಗಳಲ್ಲಿ ಮತ್ತು ಸ್ವಚ್ಛತೆಯಲ್ಲಿದೆಯೆಂಬುದು ಈಗ ನನಗೆ ತಿಳಿಯುತ್ತದೆ.

ಅಂದು ನಾನು ತಂದೆಯವರ ಮೇಲೆ ಸಿಟ್ಟಾಗಿ ಹೊರಟು ಹೋಗತಕ್ಕವನಿದ್ದೆ. ಆದರೆ ತಾಯಿಯು ಹೋಗಗೊಡಲಿಲ್ಲ. ಅವಳು ನನ್ನನ್ನು ಪ್ರೀತಿಸುತ್ತಿದ್ದಳು. ಸನ್ಮಾರ್ಗವನ್ನು ತೋರಿಸುತ್ತಿದ್ದಳು. ಅವಳ ಪ್ರೇಮವು ಹುಚ್ಚುಪ್ರೇಮ ಅಥವಾ ಕುರುಡು ಪ್ರೇಮವಾಗಿರಲಿಲ್ಲ.

ತಾಯಿ ಕೆಲಸ ಬೊಗಸೆಗಳಲ್ಲಿ ತೊಡಗಿಕೊಂಡಳು. ನಾನು ಮತ್ತು ತಮ್ಮ ತುಸು ಹೊತ್ತು ಮಲಗಿದೆವು. ಆಮೇಲೆ ನಾನು ಎದ್ದು ನಾವಲಿಗನನ್ನು ಕರೆದುಕೊಂಡು ಬಂದೆನು. ನಮ್ಮ ನಾವಲಿಗ ಆಯಪವನಾಗಿದ್ದ. ಆಯದವ

ಎಂದರೆ ವರುಷಕ್ಕೊಮ್ಮೆ ನಿಶ್ಚಿತವಾದ ಧಾನ್ಯ – ದವಸ ಕೊಡುವ ಕರಾರು ಮಾಡಿಕೊಂಡವ. ವರುಷವೆಲ್ಲವೂ ಅವನು ನಮ್ಮ ಕ್ಷೌರ ಮಾಡುವದು, ಸುಗ್ಗಿಯಲ್ಲಿ ನಾವು ಅವನಿಗೆ ಕಾಳು ಕೊಡುವದು ಹೀಗೆ ನಡೆದುಕೊಂಡು ಬಂದಿತ್ತು. ಇತ್ತೀಚೆಗೆ ಹಳ್ಳಿಯಲ್ಲಿಯ ಈ ವಹಿವಾಟೂ ಮಾಯವಾಗ ತೊಡಗಿದೆ.

ಗೋವಿಂದ ನಾವಲಿಗನು ಮನೆಯವನಂತೆ ಆಗಿದ್ದನು. "ಏನು ಶ್ಯಾಮಾ, ಬಹಳ ಕೂದಲು ಬಿಟ್ಟಿರುವೆಯಲ್ಲ ?" ಎಂದು ಕೇಳಿದ.

"ಗೋವಿಂದಾ, ನೀನು ನೋವು ಆಗದಂತೆ ಕೂದಲು ಕತ್ತರಿಸುತ್ತೀ. ದಾಪೋಲಿಯ ನಾವಲಿಗ ಏನೂ ಪ್ರಯೋಜನವಿಲ್ಲ" ಎಂದು ನಾನು ನುಡಿಯಲು ಗೋವಿಂದನಿಗೆ ಆನಂದವಾಯಿತು.

ನಾವು ಸ್ನಾನ ಮಾಡಿದೆವು. ತಂದೆಯವರು ಹೊರಗಿನಿಂದ ಬಂದರು. ಬರುವಾಗ್ಗೆ ಅವರು ಮೊಘೆಕಾಯಿ ತೆಗೆದುಕೊಂಡು ಬಂದರು. ಮೊಘೆಕಾಯಿ ಅಂದರೆ ಬಲಿತ ಸವತೆಕಾಯಿ. ಕೊಂಕಣದಲ್ಲಿ ಇಂಥ ಸವತೆಕಾಯಿಗಳನ್ನು ಕುಂಬಳಕಾಯಿಯಂತೆ ನೆಲವಿನ ಮೇಲೆ ವರುಷಗಟ್ಟಲೆ ತೂಗಹಾಕಿರುತ್ತಾರೆ. ಹೋಳೀಹುಣ್ಣಿಮೆಯ ಹಲಗೆ ಬಾರಿಸಿತೆಂದರೆ ಅದು ಇನ್ನು ತಾಳಲಾರದೆಂದು ಅಲ್ಲಿಯ ಜನರ ತಿಳಿವಳಿಕೆ.

ತಂದೆಯವರು ತಾಯಿಗೆ ಹೇಳಿದರು, "ಈ ಮೊಘೆಕಾಯಿ ತಂದಿದ್ದೇನೆ. ಎಲೆಗಡಬು ಮಾಡು. ಶ್ಯಾಮನಿಗೆ ಬಹಳ ಸೇರುತ್ತವೆ. ಅದಕ್ಕಾಗಿ ಈ ಅರಿಷಿನ ಎಲೆಗಳನ್ನೂ ತಂದಿದ್ದೇನೆ. ನಿಮ್ಮೆಲ್ಲರ ಸ್ನಾನವಾಯಿತೆಂದು ಕಾಣುತ್ತದೆ. ಶ್ಯಾಮಾ, ಸ್ವಲ್ಪ ಕಟ್ಟಿಗೆ ಚಾಚಿ ಉರಿಮಾಡು. ನಾನೂ ಸ್ನಾನಮಾಡುತ್ತೇನೆ. ಗುಡಿಗೆ ಹೋಗಿ ಅಭಿಷೇಕ ಮಾಡುವದಿದೆ. ನಿನಗಾಗಿ ನಾನು ಪ್ರತಿಹದಿನೈದು ದಿವಸಕ್ಕೊಮ್ಮೆ ಗಣಪತಿಗೆ ರುದ್ರಾಭಿಷೇಕ ಮಾಡುತ್ತೇನೆ."

ತಂದೆಯವರ ಸವಿಮಾತನ್ನು ಕೇಳಿ ನನಗೆ ನಾಚಿಕೆಯಾಯಿತು. ಅವರು ಮೊದಲನೆ ದಿವಸ ಸಿಟ್ಟುಮಾಡಿದ್ದರು. ಆದರೆ ಅವರದೆಷ್ಟು ಪ್ರೇಮ! ನನ್ನ ಕಲ್ಯಾಣವಾಗಬೇಕು, ನನಗೆ ಒಳ್ಳೆತಾಗಬೇಕು, ಮತ್ತು ನನ್ನ ಅಭ್ಯಾಸ ಸರಿಯಾಗಿ ನಡೆಯಬೇಕು ಎಂದು ಅವರು ದೇವರಿಗೆ ನಡೆದುಕೊಳ್ಳುತ್ತಿದ್ದರು. ನನಗೆ ಎಲೆಗಡಬು ಸೇರುತ್ತದೆಂದು ತಿರುಗಾಡಲಿಕ್ಕೆ ಹೋಗಿ ಮೊಘೆಕಾಯಿ

ತಂದರು. ನಾನು ಮಾತ್ರ ಅವರ ಮೇಲೆ ಕೋಪಿಸಿಕೊಂಡು ಹೊರಟುನಿಂತಿದ್ದೆ. ನಾನು ಸಿಟ್ಟಾಗಿ ದಾಪೋಲಿಗೆ ಹೊರಟು ಹೋದೆನೆಂದು ಅವರಿಗೆ ಗೊತ್ತಾಗಿದ್ದರೆ ಅವರೆಷ್ಟು ನಿರಾಶೆಗೊಳ್ಳುತ್ತಿದ್ದರಲ್ಲ! ಆ ಪ್ರೇಮಮಯ ಮತ್ತು ಉದಾರ ಪಿತೃಹೃದಯಕ್ಕೆ ಎಷ್ಟು ವ್ಯಥೆಯಾಗುತ್ತಿತ್ತು! ಇದೆಯೋ ನನ್ನ ಮಗನ ಪಿತೃಭಕ್ತಿ, ಇದೆಯೋ ಕೃತಜ್ಞತೆ! ಇದುವೇ ಪ್ರೇಮವೇನು? ಎರಡು ಮಾತುಗಳು ಕೂಡ ಆ ಪ್ರೇಮಕ್ಕೂ ಭಕ್ತಿಗೂ ಸಹನವಾಗಬಾರದೇ? ಎರಡುಮಾತು ಆಡಿದಮಾತ್ರಕ್ಕೆ ಅವು ಅಳಿದು ಹೋದವೇ? ಎಂದು ಮೊದಲಾಗಿ ನಮ್ಮ ತಂದೆಯವರು ಭಾವಿಸಿಕೊಳ್ಳಬಹುದಾಗಿತ್ತು.

ನಾನು ಕೃತಜ್ಞತೆಯಿಂದ ತಂದೆಯವರನ್ನು ನೋಡಿದೆನು. ಹೊರಗಿನ ಒಲೆಗೆ ಕಟ್ಟಿಗೆ ಹಚ್ಚಿ ಉರಿಮಾಡಿ ನೀರು ಕಾಯಿಸಿದೆನು. ಆಮೇಲೆ ಒಳಗೆ ಹೋಗಿ ತಂದೆಯವರು ತಂದ ಹೂಗಳ ತಟ್ಟಿ ತೆಗೆದುಕೊಂಡು ತಾಟಿನಲ್ಲಿ ಬೇರೆ ಬೇರೆ ಮಾಡಿ ತೆಗೆದಿಟ್ಟೆನು. ವಿವಿಧ ಬಣ್ಣಗಳ ಹಲವಾರು ಬಗೆಯ ಹೂಗಳಿದ್ದವು ತುಳಸಿ, ಕರಿಕೆ ಮತ್ತು ಬಿಲ್ವಪತ್ರ ಎಲ್ಲವನ್ನೂ ತಟ್ಟೆಯಲ್ಲಿಟ್ಟೆ. ಮುಷ್ಟಿ ಅಕ್ಕಿಯನ್ನೂ ಉಳಿದ ಪೂಜೆಯ ಸಾಮಾನುಗಳನ್ನೂ ಸಿದ್ಧಪಡಿಸಿ ಇಟ್ಟೆ. ಗುಲಾಬಿ ಬಣ್ಣದ ಗೋಂಟಿಗೆ ಹೂಗಳು ಬಹಳ ನಾಜೂಕಾಗಿದ್ದವು. ಚಿಕ್ಕ ಬಟ್ಟಲವಲ್ಲಿ ನೈವೇದ್ಯಕ್ಕೆ ಹಾಲು ಹಾಕಿ, ಭಸ್ಮದ ಕರಡಿಗೆಯನ್ನು ತಾಟಿನಲ್ಲಿ ಅಣಿ ಮಾಡಿ ಇಟ್ಟೆನು.

ತಂದೆಯವರ ಪೂಜೆಯ ಸಿದ್ಧತೆಗಳನ್ನೆಲ್ಲ ಮಾಡಿಟ್ಟು ನಾನು ತಾಯಿಯ ನೆರವಿಗೆ ಹೋದೆ. ಅವಳು ಹೆಚ್ಚಿಟ್ಟ ಮೊಘೆಕಾಯಿ ಹೆರೆದುಕೊಟ್ಟೆ. ಅರಿಷಿಣ ಎಲೆಗಳನ್ನು ತೊಳೆದು ಒರಸಿ ಇಟ್ಟೆ. ಎಲೆಗೆ ಕಡಬನ್ನು ಹಚ್ಚಿಕೊಡಲು ಕುಳಿತುಕೊಂಡೆ. ನಾನು ಒಳ್ಳೆ ತೆಳುವಾಗಿ ಕಡಬು ತಟ್ಟಿಕೊಡುವದನ್ನು ಕಲಿತಿದ್ದೆ. ಅಕ್ಕಿಯ ಹಿಟ್ಟನ್ನು ಮೊಘೆಕಾಯಿಯ ಹೆರಕಲದಲ್ಲಿ ಬೆರಸುತ್ತಾರೆ, ಅದರಲ್ಲಿ ಬೆಲ್ಲ ಹಾಕಿ ಕಲಸುತ್ತಾರೆ. ಆಮೇಲೆ ಅದನ್ನು ಅರಿಷಿಣ ಎಲೆಗಳಿಗೆ ತಟ್ಟಬೇಕು. ಅರ್ಧ ಎಲೆಯ ಮೇಲೆ ಅದನ್ನು ತೆಳುವಾಗಿ ತಟ್ಟಿ ಉಳಿದರ್ಧ ಎಲೆಯನ್ನು ಹೊದಿಕೆ ಹಾಕುತ್ತಾರೆ ಉಗಿಯ ಮೇಲೆ ಬೇಯಿಸಿತೆಂದರೆ ಆಯಿತು. ಆಮೇಲೆ ಮೆಲ್ಲಗೆ ಎಲೆಯಿಂದ ಆ ಕಡಬನ್ನು ಬಿಡಿಸಿ ತೆಗೆಯಲು ಬರುತ್ತದೆ.

ತಂದೆಯವರ ಮನೆಯ ಪೂಜೆ ಮುಗಿಯುತ್ತ ಬಂದಿತ್ತು. ಆಮೇಲೆ

ನಾನು ಬೆಂಕಿಯನ್ನು ಊಬಿಸಿ ಒಂದು ಕಾಗದದ ತುಂಡಿನಿಂದ ನೀಲಾಂಜನ ವನ್ನು ಹೊತ್ತಿಸಿ ಕೊಟ್ಟೆ. ಸುಮ್ಮನೆ ಅವರು ಬೆಂಕಿಕಡ್ಡಿಯನ್ನು ಕೊರೆದು ಹಾಳು ಮಾಡುತ್ತಿರಲಿಲ್ಲ. ಪೂಜೆ ಮುಗಿಸಿ ತಂದೆಯವರು ದೇವಸ್ಥಾನಕ್ಕೆ ಹೋದರು. ನಾನು ಒಂದು ತೆಂಗಿನಕಾಯಿ ಒಡೆದು ಈಳಿಗೆಯಿಂದ ಹೆರೆದು ಕೊಂಡು ಒರಳಿನಲ್ಲಿ ಹಾಕಿ ತಿರುವಿದೆ. ಕಡಬಿಗೆ ಹಚ್ಚಿಕೊಳ್ಳಲು ಸಾಧನೆ ಬೇಕಲ್ಲವೇ ? ನಮ್ಮ ಕೊಂಕಣ ಸೀಮೆಯಲ್ಲಿ ತುಪ್ಪದ ಅಭಾವವಿದೆ. ಬಡ ಜನರು ಅನ್ನಶುದ್ಧಿಯನ್ನು ಕೂಡ ಮಜ್ಜಿಗೆಯ ಹನಿಯಿಂದ ಮಾಡುತ್ತಾರೆ. ಹಾಲು-ತುಪ್ಪದ ಕೆಲಸವನ್ನು ತೆಂಗಿನಕಾಯಿಯಿಂದ ಸಾಗಿಸುತ್ತಾರೆ. ತೆಂಗಿನ ಕಾಯಿಯನ್ನು ಚೆನ್ನಾಗಿ ರುಬ್ಬಿ ಅದರಲ್ಲಿ ಬೆಲ್ಲ ನೀರು ಬೆರಸುತ್ತಾರೆ. ರುಚಿ ಬರಲು ತುಸು ಉಪ್ಪು ಹಾಕುತ್ತಾರೆ. ಅವನ್ನು ತುಸು ಬಿಸಿಮಾಡಿ ಹಿಂಡಿ ರಸ ತೆಗೆಯುತ್ತಾರೆ. ಅದರ ಚರಟವನ್ನು ಬೇರೆ ತೆಗೆದುಬಿಡುತ್ತಾರೆ. ಈ ರೀತಿ ತೆಗೆದ ಹಾಲು ಕಂಪಾಗಿರುತ್ತದೆ. ಹೋಳಿಗೆ-ಕಡಬು ತಿನ್ನುವಾಗ್ಗೆ ಅದು ಒಳ್ಳೆ ಸಾಧನೆಯಾಗುತ್ತದೆ. ನಾನು ಒಳ್ಳೇ ಹಾಲು ಸಿದ್ಧಪಡಿಸಿದೆ. ಆನಂದ ದಿಂದ ಎಲ್ಲರೂ ಉಂಡೆವು. ಅಂದು ನನಗೆ ವಿಶೇಷ ರೀತಿಯ ಸಂತೋಷ ವಾಗಿದ್ದಿತು.

"ಶ್ಯಾಮನಿಗೆ ಇನ್ನೊಂದು ಕಡಬು ಹಾಕೇ; ನನ್ನ ಪಾಲಿನದೊಂದು ಅವನಿಗೆ ಹಾಕು." ತಂದೆ ಕಕ್ಕುಲತೆಯಿಂದ ತಾಯಿಗೆ ಹೇಳಿದರು. ನನ್ನ ತಾಯಿಯಂತೆ ಅವರೂ ವಾತ್ಸಲ್ಯದ ಮೂರ್ತಿಯಾಗಿದ್ದರು. ಅವರು ಹೊಡೆ ಯುವ ಬಡಿಯುವ ಶಿಕ್ಷೆಯನ್ನು ನಮಗೆ ಎಂದೂ ವಿಧಿಸಿರಲಿಲ್ಲ. ಹತ್ತು ಬೈಠಕ್ಕು ತೆಗೆಸುವದು, ಅಂಗಳದಲ್ಲಿಯ ಕಸ ತೆಗೆಯಲು ಹಚ್ಚುವದು, ಗಿಡಕ್ಕೆ ನಾಲ್ಕಾರು ಕೊಡ ನೀರು ತಂದು ಹಾಕಲು ಹಚ್ಚುವದು, ದೇವರ ಮುಂದೆ ೧೦-೧೫ ನಮ ಸ್ಕಾರ ಹಾಕ ಹಚ್ಚುವದು ಇವೇ ಮೊದಲಾದ ಶಿಕ್ಷೆಗಳನ್ನು ಅವರು ವಿಧಿಸು ತ್ತಿದ್ದರು. ಒಮ್ಮೊಮ್ಮೆ ಸಿಟ್ಟಿನಿಂದ ಬೈಯ್ಯುತ್ತಿದ್ದರಾದರೂ ಹೊಡೆಯುವ ಪದ್ಧತಿಯಿರಲಿಲ್ಲ.

ನಮ್ಮ ಊಟವಾದ ಬಳಿಕ ತಾಯಿ ಊಟಕ್ಕೆ ಕುಳಿತಳು. ನಾನು ಅವಳ ಹತ್ತರ ಹೋಗಿ ಮಾತನಾಡುತ್ತ ಕುಳಿತುಕೊಂಡೆ. ಅಷ್ಟರಲ್ಲಿ ೫-೬ ವರ್ಷದ ನಮ್ಮ ಚಿಕ್ಕ ತಮ್ಮನು ತಾಯಿಯಬಳಿಗೆ ಬಂದು ಕೇಳಿದನು, "ಅವ್ವಾ,

ನಾನು ಹೋಗಲಾ ? "

" ಎಲ್ಲಿಗೋ ಬಾಬುಲಾ ? " ನಾನು ವಿಚಾರಿಸಿದೆ.

" ಅಮ್ಮನಿಗೆ ಗೊತ್ತಿದೆ. ಹೋಗಲೇನಮ್ಮ ? " ಅವನು ತಾಯಿಗೆ ಕೇಳಿದ.

ತಾಯಿ ಹೇಳಿದಳು, " ಹೋಗು, ಆದರೆ ಅಲ್ಲಿ ಶ್ಲೋಕ ಹೇಳುತ್ತ ಕೂಡಬೇಡ." ಸದಾನಂದನು ನಗುತ್ತ ಹೊರಟುಹೋದ. ಚಿಕ್ಕ ತಮ್ಮನ ಹೆಸರು ಸದಾನಂದ. ಹಿರಿಯರು ಅದೇ ಹೆಸರಿನಿಂದ ಕರೆಯುತ್ತಿದ್ದರು ನಾವು ಮಾತ್ರ 'ಬಾಬೂಲಾ' ಎಂದು ಕರೆಯುತ್ತಿದ್ದೆವು.

ನಾನು ಕೇಳಿದೆ, " ಅಮ್ಮಾ, ಅವನು ಕರಂದಿಕರರ ಮನೆಗೆ ತೂಗ-ಮಂಚ ಆಡಲು ಹೋದನೇನು ? "

" ಇಲ್ಲವಪ್ಪಾ, ಅವನು ಹೊರಕಡೆಗೆ ಹೋದನು. ಘಾಟೀ ಇದ್ದಾನೆ ಅವನು. ಹೊರಕಡೆಗೆ ಹೋಗುವ ಮುಂದೆ ಒಳ್ಳೆ ಆಜ್ಞಾಧಾರಕನಂತೆ ಅಪ್ಪಣೆ ಕೇಳುತ್ತಾನೆ. ಮತ್ತೆಲ್ಲಿಗಾದರೂ ತಿರುಗಾಡಲಿಕ್ಕೆ ಹೋಗುವಾಗ್ಗೆ ಹೇಳದೆ ಹೋಗುತ್ತಾನೆ. ಅಲ್ಲಿ ಗುಡ್ಡೆಯ ಮೇಲೆ ಹೋಗಿ ಕುಳಿತುಕೊಂಡು ರಾಗ ತೆಗೆದು ಶ್ಲೋಕ ಬೇರೆ ಹೇಳುತ್ತಾನೆ ಪಂಡಿತ ! " ತಾಯಿಯ ಮಾತನ್ನು ಕೇಳಿ ನಾನು ನಕ್ಕುಬಿಟ್ಟೆ.

ಮಾತು ಆಡ ಆಡುತ್ತ ತಾಯಿಯೆಂದಳು, " ಶ್ಯಾಮಾ, ಇಂದು ನೀನು ಹೋಗಿದ್ದರೆ ಅವರಿಗೆಷ್ಟು ವ್ಯಥೆಯಾಗುತ್ತಿತ್ತು; ಊಟ ಕೂಡ ಸವಿ ಹತ್ತುತ್ತಿರಲಿಲ್ಲ; ತುತ್ತು ಕುತ್ತಿಗೆಯಲ್ಲಿ ಇಳಿಯುತ್ತಿರಲಿಲ್ಲ. ಒಮ್ಮೊಮ್ಮೆ ಬಿಕ್ಕು ಬಂದಾಗ ಇಲ್ಲವೆ ಕೈಯಲ್ಲಿಯ ತುತ್ತು ಜಾರಿ ಎಲೆಯಲ್ಲಿ ಬಿದ್ದಾಗ ಅವರು ಹೇಳುತ್ತಾರೆ, " ಯಾರು ನೆನೆಸಿದ್ದಾರು ನನ್ನನ್ನು ? ಶ್ಯಾಮನೋ, ಗಜಾನನನೋ ? " ಶ್ಯಾಮಾ, ಅವರದು ನಿನ್ನ ಮೇಲೆ ಎಷ್ಟು ಪ್ರೇಮವಿದೆಯೆಂದು ಹೇಳಲಿ ! ಮಗೂ, ನಾನು ನೋಡಿದರೆ ಈಗ ಕಾಹಿಲೆಯವಳು. ಇನ್ನೇನು ಬಹಳಕಾಲ ನಾನು ಬದುಕಿ ಇರುವವಳಲ್ಲ. ಅವರೊಬ್ಬರನ್ನೇ ಬಿಟ್ಟು ನಾನು ಹೋಗಬೇಕಾಗುತ್ತದೆ. ಅಣ್ಣ–ತಮ್ಮ, ಅಕ್ಕ–ತಂಗಿ, ಯಾರೂ ಅವರನ್ನು ನೋಡಿಕೊಳ್ಳುವದಿಲ್ಲ. ಬಡವರನ್ನು ಯಾರು ಕೇಳುವರು ? ನೀವು ಹುಡುಗರು–ನಿಮ್ಮನ್ನು ನೋಡಿ ಅವರು ಬದುಕಿಕೊಳ್ಳಬೇಕಾಗಿದೆ. ನಿಮ್ಮ ಸುಖವೇ ಅವರ ಸುಖ

ವಾಗಿದೆ!" ಎಂದು ಹೇಳಹೇಳುತ್ತ ತಾಯಿಯ ಕಂಠ ತುಂಬಿ ಬಂದಿತು. ಅವಳು ಮತ್ತೆ ನುಡಿದಳು, "ಗುಣವಂತ ಮಕ್ಕಳಿದ್ದರೆ ಅದು ಬಾಳು, ಇಲ್ಲದಿದ್ದರೆ ಗೋಳು" ಎಂದು ಅವರು ಯಾವಾಗಲೂ ಹೇಳುತ್ತಾರೆ. ನೀವು ಅವರಿಗೆ ಗೋಳಾಟ ಮಾತ್ರ ಮಾಡಬೇಡಿರಿ. ಅವರ ಗೋಳಾಟವನ್ನು ತಪ್ಪಿಸಲು ಸಾಹಸ ಮಾಡಿರಿ. ಅವರು ಸುಖವಾಗಿ ಇರುವಂತೆ ನೋಡಿಕೊಳ್ಳಿರಿ."

ತಾಯಿಯ ಊಟ ಮುಗಿಯಿತು. ನಾನು ಅವಳಿಗೆ ನೆರವಾದೆ. ನೀರು ಹಚ್ಚಿ ಮಣೆಗಳನ್ನು ಗೋಡೆಗೆ ನಿಲ್ಲಿಸಿದೆ. ಮಣೆಗಳಿಗೆ ಎಂಜಲು ಹತ್ತಿದ್ದರಿಂದ ನೀರು ಹಚ್ಚಬೇಕಾಗುತ್ತದೆ ಪೂಜೆಯ ತಂಬಿಗೆ ಥಾಲಿ ಮೊದಲಾದ ಎಲ್ಲ ಉಪಕರಣೆಗಳನ್ನು ತಿಕ್ಕುವದಕ್ಕಾಗಿ ಹೊರಗೆ ಒಯ್ದಿಟ್ಟೆ. ತಾಯಿ ಅವನ್ನು ತೊಳೆದಳು. ನಾನು ಗಲಬರಿಸಿದೆ. ಆಮೇಲೆ ತಾಯಿಯು ಮಜ್ಜಿಗೆಯ ಮತ್ತು ಮೊಸರಿನ ಪಾತ್ರೆಗಳನ್ನು ಬಿಸಿನೀರಿನಿಂದ ತೊಳೆದಳು. ಸದಾನಂದನ ಚಿಕ್ಕ ಮೊಸರಿನ ಗಿಂಡಿಯನ್ನೂ ತೊಳೆದಳು. ಅದರಲ್ಲಿ ಅವನಿಗಾಗಿ ಬೇರೆಯಾಗಿ ಹಾಲು ಹೆಪ್ಪು ಹಾಕಿಡುತ್ತಿದ್ದಳು. ಹೆಪ್ಪು ಹಾಕುವ ಪಾತ್ರೆಗಳನ್ನೆಲ್ಲ ಒಲೆಯ ಹಿಂದೆ ಬಿಸಿ ಮಾಡಲು ಇಟ್ಟಳು. ಹಾಲು-ಹೆಪ್ಪು ಮೊದಲಾದ ಕೆಲಸದಲ್ಲಿ ಅವಳು ತೊಡಗಿದಳು. ನಾವು ಪಡಸಾಲೆಯಲ್ಲಿ ತಂದೆಯವರ ಜೊತೆಗೆ ಹುಲಿ-ಹರಳಿನ ಆಟ ಆಡತೊಡಗಿದೆವು. 'ಯಾರು ಸೋಲುತ್ತಾರೋ ನೋಡೋಣ' ಎಂದು ಅವರು ಹೇಳುತ್ತಿದ್ದರು. ನಾವು ಸಂತೋಷದಲ್ಲಿ ಕಾಲ ಕಳೆದೆವು.

ನನ್ನ ಹರಿದ ಧೋತರವನ್ನು ತಾಯಿ ಹೊಲಿದು ಕೊಟ್ಟಳು. ರಾತ್ರಿ ತಂದೆಯವರು ಒಂದು ಸರಸವಾದ ಕಥೆಯನ್ನು ಹೇಳಿದರು. ಯಾರಿಗೂ ಹಸಿವೆಯಿರಲಿಲ್ಲ. ತಾಯಿ ಒಗ್ಗರಣೆ ಮಜ್ಜಿಗೆ ಮಾಡಿದ್ದಳು. ಎಲ್ಲರೂ ಅದನ್ನು ಕುಡಿದೆವು.

ನಸುಕಿನಲ್ಲೆದ್ದು ನಾನು ಸ್ನಾನ ಮಾಡಿದೆನು. ತಾಯಿ ಅನ್ನ ಮಾಡಿದ್ದಳು. ಮೆಂಥೆಹಿಟ್ಟು, ಉದ್ದಿನ ಹಪ್ಪಳ ನಂಜಿಕೊಳ್ಳಲು ಸಿದ್ಧವಾಗಿದ್ದವು. ಅನ್ನ ಬೇಯಿಸುವಾಗ ಎರಡು ತೊಂಡೇಕಾಯಿಗಳನ್ನೂ ಅದರಲ್ಲಿ ಹಾಕಿದ್ದಳು. ತೊಂಡೆಕಾಯಿಯೆಂದರೆ ನನಗೆ ಜೀವ. ಅದಕ್ಕಾಗಿ ನೆರೆಮನೆಯ ಜಾನಕೀ

ಬಾಯಿ ತಂದುಕೊಟ್ಟಿದ್ದರು. ನಾನು ಊಟ ಮುಗಿಸಿ ಹೊರಡಲು ಸಿದ್ಧನಾದೆ. ತಾಯಿಯ ಕಾಲಿಗೆ ಬಿದ್ದೆ. "ಇನ್ನು ಸಂಕ್ರಾಂತಿಗೆ ಬಾಪ್ಪ! ಕಾಲು ಬಹಳ ನೋಯುತ್ತಿದ್ದರೆ ಆ ಕಡೆಯಿಂದ ಬರುವ ತುಂಬಿದ ಗಾಡಿಯಲ್ಲಿ ಬಾ. ಅವರಿಗೆ ಎರಡಾಣೆ ಕೊಟ್ಟರೆ ಕುಳ್ಳಿರಿಸಿಕೊಂಡು ಬರುತ್ತಾರೆ. ಸಂಬಾಳಿಸಿಕೊಂಡು ಇರು" ಎಂದು ಹೇಳಿದಳು. ತಂದೆಯವರಿಗೆ ನಮಸ್ಕಾರ ಮಾಡಿದೆ. 'ಶ್ಯಾಮಾ, ನಾನು ಮಾತಾಡಿದೆನೆಂದು ಮನಸ್ಸಿಗೆ ಹಚ್ಚಿಕೊಳ್ಳಬೇಡಪ್ಪಾ. ಸರಿಯಾಗಿ ನಡೆದುಕೋ. ಚೆನ್ನಾಗಿ ಅಭ್ಯಾಸ ಮಾಡು." ಎಂದು ಅವರು ಹೇಳಿದರು. ಆ ಮೇಲೆ ನಾನು ನನ್ನ ತಮ್ಮಂದಿರನ್ನು ವಾತ್ಸಲ್ಯದಿಂದ ಮೈದಡವಿ ಹೊರಟೆ. ಹರಿಜನ ಕೇರಿ ದಾಟಿ ಆಲದಕಟ್ಟೆಯವರೆಗೂ ತಂದೆಯವರು ನನ್ನನ್ನು ಕಳಿಸಿ ಕೊಡುವದಕ್ಕಾಗಿ ಬಂದರು. ಆ ಆಲದಕಟ್ಟೆಗೆ ನಮ್ಮೂರ ಗಡಿ ಮುಗಿಯು ತ್ತದೆ. ಅವರು ಹಿಂತಿರುಗಿ ಹೋದರು. ನಾನೊಬ್ಬನೇ ದಾರಿ ಹಿಡಿದೆ.

ತಾಯಿತಂದೆಗಳ ಪ್ರೇಮವು ಮನಸ್ಸಿನಲ್ಲಿ ಉಮ್ಮಳಿಸಿ ಬಂದು ನಾನು ಅಳುತ್ತ ಸಾಗಿದ್ದೆ. ನಾನು ದಾಪೋಲಿಯಿಂದ ಮನೆಗೆ ಹೋಗುವಾಗ ಪ್ರೇಮ ವನ್ನು ಪಡೆಯುವದಕ್ಕಾಗಿ ಅಳುತ್ತಿದ್ದೆ. ಈಗ ಹಿಂತಿರುಗಿ ಹೊರಟಾಗ ಪ್ರೇಮವು ಸಮೃದ್ಧಿಯಾಗಿ ದೊರೆತು ಹೃದಯದಿಂದ ಹೊರಸೂಸಹತ್ತಿದ್ದರಿಂದ ಅಳುತ್ತಲಿದ್ದೆ. ಸುಖದ ಅಶ್ರು ಮತ್ತು ದುಃಖದ ಅಶ್ರು!

ದಾರಿಯಲ್ಲಿ ಒಬ್ಬ ದಾರಿಕಾರನು ಕೇಳಿದನು, "ಏನು ತಮ್ಮಾ, ಅಳುವಿ ಯೇಕೆ? ನಿನಗೆ ಯಾರೂ ಇಲ್ಲವೇ?"

ನಾನು ಅವನಿಗೆ ಹೇಳಿದೆ, "ನನಗೆ ತಾಯಿ ತಂದೆ ಇದ್ದಾರೆ."

"ಅವರು ನಿನ್ನನ್ನು ಪ್ರೀತಿಸುವದಿಲ್ಲವೇ? ಮನೆಬಿಟ್ಟು ಹೊರಗೆ ಹಾಕಿ ರುವರೇನು?"

"ಇಲ್ಲ, ಅವರು ನನ್ನನ್ನು ತುಂಬ ಪ್ರೀತಿಸುತ್ತಾರೆ. ಅದಕ್ಕಾಗಿ ನಾನು ಅಳುತ್ತಿದ್ದೇನೆ. ಆ ಉದಾತ್ತವಾದ-ಅಪಾರವಾದ-ಪ್ರೇಮಕ್ಕೆ ನಾನು ಪಾತ್ರ ನಲ್ಲವೆಂದು ವಿಷಾದಪಡುತ್ತಿದ್ದೇನೆ. ಅವರ ಪ್ರೇಮಕ್ಕೆ ಅರ್ಹನಾಗಲು ನಾನೇನು ಮಾಡಲಿ, ಎಂಬ ವಿಚಾರದಿಂದ ನನಗೆ ಅಳು ಬರುತ್ತಿದೆ!"

ಆ ದಾರಿಕಾರನು ನನ್ನನ್ನು ಕನಿಕರದಿಂದ ನೋಡಿ ಹೊರಟುಹೋದನು. ನಾನೂ ವೇಗವಾಗಿ ನಡೆಯತೊಡಗಿದೆನು.

# : : ದೂರ್ವೆಯ ಅಜ್ಜಿ

ನಮ್ಮ ಮನೆಯಲ್ಲಿ ದೂರದ ಸಂಬಂಧದ ಅಜ್ಜಿಯೊಬ್ಬಳಿದ್ದಳು. ಅವಳ ಹೆಸರು ದ್ವಾರಕಾಬಾಯಿ. ನಮ್ಮ ತಂದೆಯವರು ಬೇರೆ ಆದಾಗ ಅವಳು ನಮ್ಮ ತಂದೆಯವರ ಬಳಿಯಲ್ಲಿ ಇರಲಿಕ್ಕೆ ಬಂದಳು. ಅವಳ ಹೆಸರಿನಲ್ಲಿ ತುಸು ಹೊಲವೂ ಇತ್ತು. ಅದರ ಮೇಲ್ವಿಚಾರಣೆಯನ್ನು ನಮ್ಮ ತಂದೆಯವರೇ ನೋಡುತ್ತಿದ್ದರು. ತಂದೆಯವರ ಮೇಲೆ ಅವಳಿಗೆ ಮಮತೆ ಇತ್ತು. ಅದಕ್ಕೆಂದೇ ಅವಳು ಅವರ ಹತ್ತರ ಇದ್ದಳು. ಈ ಅಜ್ಜಿಗೆ ನಾವು ' ದೂರ್ವೆಯ ಅಜ್ಜಿ ' ಎಂದು ಹೆಸರಿಟ್ಟಿದ್ದೆವು. ಚಾತುರ್ಮಾಸದಲ್ಲಿ ಹೆಣ್ಣುಮಕ್ಕಳು ದೇವರಿಗೆ ಲಕ್ಷ ದೂರ್ವೆಯನ್ನು ಏರಿಸುತ್ತಾರೆ. ಕೆಲವರು ಲಕ್ಷ ಪಾರಿಜಾತ ಹೂ, ಲಕ್ಷ ಮಲ್ಲಿಗೆ ಹೂ ಇತ್ಯಾದಿ ಏರಿಸುತ್ತಾರೆ. ದೂರ್ವೆಯನ್ನು ಏರಿಸಬೇಕೆಂದು ನಿರ್ಧರಿಸುವವರು ಬೇರೆ ಹೆಂಗಸರನ್ನು ದೂರ್ವೆ ಕೊಯ್ಯುವದಕ್ಕಾಗಿ ಸಹಾಯಕ್ಕೆ ಕರೆಯುತ್ತಾರೆ. ನಮ್ಮ ಅಜ್ಜಿ ಇಂಥ ಕೆಲಸಕ್ಕೆ ಯಾವಾಗಲೂ ಸಿದ್ಧಳು. ಒಳ್ಳೆ ಕೆಲಸಕ್ಕಾಗಿ ಯಾವಾಗಲೂ ಸಹಾಯ ಮಾಡಬೇಕೆಂದು ತುಕಾರಾಮರವರು ಹೇಳಿದ್ದಾರೆ. ಒಳ್ಳೆ ಕೆಲಸಕ್ಕೆ ಕೈಹಾಕುವವನನ್ನು ಹೆದರಿಸಿದರೆ ನರಕಯಾತನೆ ಭೋಗಿಸಬೇಕಾಗುತ್ತದೆ. ಸತ್ಕರ್ಮಗಳನ್ನು ಜರುಗಿಸುವದಕ್ಕಾಗಿ ಎಲ್ಲರೂ ಪ್ರಯತ್ನ ಮಾಡಬೇಕು. ನಮ್ಮ ಅಜ್ಜಿಯು ಯಾರಿಗೆ ದೂರ್ವೆ ಬೇಕಾಗಿದ್ದರೂ ಹರಿದು ಕೊಡಲಿಕ್ಕೆ ಸಹಾಯ ಮಾಡುತ್ತಿದ್ದಳು. " ಅಜ್ಜಿ ಎಲ್ಲಿದ್ದಾಳೆ " ಎಂದು ಯಾರಾದರೂ ನಮ್ಮನ್ನು ವಿಚಾರಿಸಿದರೆ ' ದೂರ್ವೆ ಕೊಯ್ಯಲು ' ಹೋಗಿದ್ದಾಳೆಂದು ಸಹಜವಾಗಿ ಹೇಳುತ್ತಿದ್ದೆವು. ಹೀಗೆ ಹೇಳಹೇಳುತ್ತ ಅವಳಿಗೆ ದೂರ್ವೆಯ ಅಜ್ಜಿಯೆಂದು ಹೆಸರು ಬಿದ್ದು ಹೋಗಿತ್ತು. ನಾವು ದೊಡ್ಡವರಾದ ಮೇಲೆಯೂ ಅವಳನ್ನು ಅದೇ ಹೆಸರಿನಿಂದ ಕರೆಯುತ್ತಿದ್ದೆವು.

ದೂರ್ವೆ ಅಜ್ಜಿಯಲ್ಲಿ ಅನೇಕ ಗುಣಗಳಿದ್ದವು. ಬಿಸಿಲುಗಾಲದಲ್ಲಿ ನೀರು ಬತ್ತಿ ಹೋದಾಗ ಬಾವಿಯಲ್ಲಿ ಇಳಿದು ಲೋಟ-ಲೋಟದಿಂದ ಕೊಡವನ್ನು ತುಂಬಿಕೊಡುತ್ತಿದ್ದಳು. ಅದನ್ನು ನಮ್ಮ ತಾಯಿ ಮೇಲೆ ಎಳೆದುಕೆ

ದ್ದಳು. ಒಬ್ಬಳೇ ರಾತ್ರಿಯಲ್ಲಿ ಹೊಲವನ್ನು ಕಾಯುತ್ತಿದ್ದಳು. ಒಮ್ಮೆ ಅವಳು ಕಳ್ಳರನ್ನು ಹಿಡಿದುಕೊಟ್ಟಿದ್ದಳು. ಅವಳಿಗೆ ಭಯವೆಂಬುದೇ ಗೊತ್ತಿರಲಿಲ್ಲ. ಅವಳು ಅಂಗಾರವನ್ನು ಮಂತ್ರಿಸಿ ಕೊಡುವದರಲ್ಲಿ ಪ್ರವೀಣಳಾಗಿದ್ದಳು. ಮಕ್ಕಳು ಕಾಹಿಲೆ ಬಿದ್ದರೆ, ದನಗಳು ಹಾಲು ಕೊಡದಂತಾದರೆ ಅಜ್ಜಿಯ ಬಳಿಗೆ ಅಂಗಾರ ಮಂತ್ರಿಸಿಕೊಳ್ಳಲು ಜನರು ಬರುತ್ತಿದ್ದರು. ಅಂಗಾರ ಮಂತ್ರಿಸುವಾಗ ಆಕಳಿಕೆ ಬಂದರೆ ' ದೃಷ್ಟಿ ಬಹಳ ಆಗಿದೆ ' ಎನ್ನುತ್ತಿದ್ದಳು. ದನಕ್ಕೆ ಅಂಗಾರ ಒಯ್ಯುವವರು ಮೇವಿನ ಪೆಂಡಿಯನ್ನು ತರುತ್ತಿದ್ದರು. ಅಜ್ಜಿ ಅದನ್ನು ಮಂತ್ರಿಸಿ ಕೊಡುತ್ತಿದ್ದಳು. ಆ ಮೇವನ್ನು ಒಯ್ದು ದನಕ್ಕೆ ತಿನ್ನಲು ಹಾಕುತ್ತಿದ್ದರು. ಆ ಅಜ್ಜಿಗೆ ನೋವಿನ ಭಾಗಕ್ಕೆ ಎಣ್ಣೆಮಜ್ಜನ ಮಾಡುವದೂ ಚೆನ್ನಾಗಿ ಗೊತ್ತಿತ್ತು. ಕಾಲಿನ ನರ ತೊಡಕಿದ್ದರೆ, ಹೊಟ್ಟೆ ನೋವಿದ್ದರೆ, ಬೆನ್ನುಶೂಲೆ ಇದ್ದರೆ, ಎಣ್ಣೆ ಹಚ್ಚಿ ತಿಕ್ಕಿಸಿಕೊಳ್ಳಲು ಜನರು ಅಜ್ಜಿಯನ್ನು ಕರೆಯುತ್ತಿದ್ದರು. ಅವಳು ತಿಕ್ಕಿದರೆ ಖಂಡಿತ ಗುಣ ಬರುತ್ತಿತ್ತು. ಧನ್ವಂತರಿಯ ವರದ ಹಸ್ತ ಆಕೆಗೆ ಇತ್ತೇನೋ. ಹಿಂದೊಮ್ಮೆ ನನ್ನ ಕಣ್ಣು ಕೆಟ್ಟಾಗ ಅಜ್ಜಿ ನನ್ನ ಅಂಗಾಲುಗಳಿಗೆ ಆಕಳ ಹಾಲು ಹಚ್ಚಿ ತಿಕ್ಕುತ್ತಿದ್ದಳು. ತಿಕ್ಕಿತಿಕ್ಕಿ ಹಾಲನ್ನು ಇಂಗಿಸಿದ್ದಳು.

ದೂರ್ವೆ ಅಜ್ಜಿಯ ಬಳಿಯಲ್ಲಿ ಎಲ್ಲ ಬಗೆಯ ಬೀಜಗಳು ಇರುತ್ತಿದ್ದವು. ಅವಳ ಹತ್ತರ ಒಂದು ಉದ್ದ ಕೋಳವೆ ಇತ್ತು. ಅದರಲ್ಲಿ ಬೆಂಡೆ, ಪಡುವಲ, ಹೀರಿ, ಸವತೆ ಮೊದಲಾದ ಎಲ್ಲ ಕಾಯಿಪಲ್ಲೆಗಳ ಬೀಜಗಳು ಇರುತ್ತಿದ್ದವು. ಅವಳು ಪಗಡೆಯಾಟದಲ್ಲಿ ಪ್ರವೀಣಳಿದ್ದಳು. ಖಡುವಿನಿಂದ ನೆಲದ ಮೇಲೆ ಸುಂದರವಾಗಿ ಪಗಡೆಮನೆ ಬರೆಯುತ್ತಿದ್ದಳು. ಮಂಗಳಗೌರೀ ಪೂಜೆ ಇದ್ದಲ್ಲಿ ಅಜ್ಜಿ ಇರತಕ್ಕವಳೇ ! ಹುಡುಗ ಹುಡುಗಿಯರಿಗೆ ವಿವಿಧ ಆಟ–ಪಾಟಗಳನ್ನು ಆಡಲು ಅವಳು ಕಲಿಸಿಕೊಡುತ್ತಿದ್ದಳು. ಹಚ್ಚಡದಲ್ಲಿ ಅಡಗಿಕೊಳ್ಳುವ ಆಟವು ಅವಳ ಮೆಚ್ಚಿನ ಆಟವಾಗಿತ್ತು. ಈ ಆಟದಲ್ಲಿ ಒಂದು ಪಕ್ಷದವರು ಹುಡುಗರನ್ನು ಮುಸುಕಿನಲ್ಲಿ ಅಡಗಿಸುತ್ತಾರೆ. ಮತ್ತೊಂದು ಪಕ್ಷದವರು ಬಂದು ಯಾರು ಯಾರು ಎಲ್ಲಿ ಅಡಗಿದ್ದಾರೆ ಅವರ ಹೆಸರು ಹೇಳಬೇಕು. ಅಜ್ಜಿ ನಮ್ಮನ್ನು ಅಡಗಿಸುತ್ತಿದ್ದಳು. ಅಡಗಿಕೊಳ್ಳುವ ಹುಡುಗ ಅಥವಾ ಹುಡುಗಿ ಮೈಯಿಂದ ದಪ್ಪವಾಗಿದ್ದರೆ ' ತುಸು ಸಣ್ಣಾಗು, ಮೈ ಮುದುರಿಕೋ ' ಎಂದು ಅಜ್ಜಿ ಹೇಳುವಳು. ಬಡಕಲಾಗಿದ್ದವರು ಇದ್ದರೆ ' ತುಸು ದೊಡ್ಡವನಾಗು '

ಎಂದು ಹೇಳುವಳು. ಆಕೃತಿ–ಆಕಾರಗಳ ಮೇಲಿಂದ ಗುರುತಿಸುವವರಿಗೆ ಸುಲಭ ಸಾಧ್ಯವಾಗಬಾರದೆಂದು ಅಜ್ಜಿಯ ಈ ಯುಕ್ತಿಯಾಗಿರುತ್ತಿತ್ತು. ದೂರ್ವೆ ಅಜ್ಜಿಗೆ ದೇವರ ಎಷ್ಟೋ ಭಾವಗೀತೆಗಳು ಬರುತ್ತಿದ್ದವು. ದಶಾವತಾರ, ಉಷಾಹರಣ, ಪಾರಿಜಾತಕ ಇವೇ ಮೊದಲಾದ ಎಷ್ಟೋ ಪದಗಳು ಅವಳಿಗೆ ಬರುತ್ತಿದ್ದವು.

ದೂರ್ವೆ ಅಜ್ಜಿ ಮನೆಯಲ್ಲಿ ಮಾಡುತ್ತಿದ್ದ ಮುಖ್ಯ ಕೆಲಸವೆಂದರೆ ಕಾಯಿಪಲ್ಲೆ ಹೆಚ್ಚಿಕೊಡುವದು, ಮತ್ತು ಸಣ್ಣ ಹುಡುಗರು ಮನೆಯಲ್ಲಿದ್ದರೆ ಅವರನ್ನು ಆಡಿಸುವದು. ಆ ದಿವಸ ನಮ್ಮ ಮನೆಯಲ್ಲಿ ಮೆಂಥೆಹಿಟ್ಟು ಮಾಡುವದಿತ್ತು. ಮೆಂಥೆಹಿಟ್ಟು ಮಾಡುವದು ತುಸು ತೊಂದರೆಯ ಕೆಲಸ. ಅಜ್ಜಿ ನೆರವಾಗುತ್ತೇನೆಂದು ಹೇಳಿದ್ದರಿಂದ ಆ ಭರವಸೆಯ ಮೇಲೆ ತಾಯಿ ಇಂದು ಆ ಕೆಲಸ ಹೂಡಿದ್ದಳು. ಆದರೆ ನಮ್ಮಜ್ಜಿ ತುಸು ಮನಸುಕರಾಯಳು. 'ನಾಳೆ ಮೆಂಥೆ ಹಿಟ್ಟು ಬೀಸೋಣ' ಎಂದು ಮೊದಲನೆಯ ದಿವಸ ತಾನೇ ಹೇಳಿದ್ದಳು. ಆದರೆ ಬೆಳಗಾಗುತ್ತಲೆ ಅಜ್ಜಿಗೆ ಖರೆಯವರ ಮನೆಯ ಕರೆ ಬಂದಿತು. ಖರೆಯವರಿಗೂ ನಮ್ಮಜ್ಜಿಗೂ ದೂರದ ಸಂಬಂಧವೇನೋ ಇತ್ತು. ಆಗಾಗ್ಗೆ ಅವರಲ್ಲಿಗೆ ಆಕೆ ಹೋಗುತ್ತಿದ್ದಳು. ಇದಲ್ಲದೆ ಅಜ್ಜಿ ಊರಿನ ಅಜ್ಜಿಯೇ ಆಗಿದ್ದಳು. ಎಲ್ಲರೂ ಅವಳನ್ನು ಕರೆಯುವವರೇ. ಖರೆಯವರ ಮನೆಯಲ್ಲಿ ಹಪ್ಪಳ ಮಾಡುವದಿತ್ತು. ಹಪ್ಪಳದ ಕೆಲಸಕ್ಕೂ ಊಟಕ್ಕೂ ಆಕಡೆಗೇ ಬರಬೇಕೆಂದು ಕರೆಯಲಿಕ್ಕೆ ಅವರ ಆಳು ಬಂದಿದ್ದ. 'ಬರುತ್ತೇನೆ, ನೀನು ನಡೆ', ಎಂದು ಹೇಳಿ ಅಜ್ಜಿ ಆ ಆಳನ್ನು ಕಳಿಸಿಕೊಟ್ಟಳು.

ತಾಯಿಗೆ ಸಿಟ್ಟು ಬಂತು. ಇನ್ನು ಮೆಂಥೆಹಿಟ್ಟು ಆಗುವದು ಹೇಗೆ? ಅವಳೊಬ್ಬಳೇ ಬೀಸುವುದಾದರೂ ಹೇಗೆ?

ತಾಯಿ ಅಜ್ಜಿಗೆ ಹೇಳಿದಳು, "ನೀವು ಹೊರಟುಬಿಟ್ಟರೆ ಇಲ್ಲಿ ಮೆಂಥೆ ಹಿಟ್ಟು ಮಾಡುವವರಾರು?"

"ನಾನೇನು ನಿನ್ನ ಕೆಲಸ ಗುತ್ತಿಗೆ ಹಿಡಿದಿದ್ದೇನೇನು? ಭಲೆ, ಮೆಂಥೆ ಹಿಟ್ಟಂತೆ? ನನ್ನಿಂದ ಕಲ್ಲು ಎಳೆಯುವದು ಸಾಧ್ಯವಿಲ್ಲ." ಅಜ್ಜಿ ಸಿಟ್ಟಿಯಾಗಿ ಮಾತನಾಡಿದಳು.

ತಾಯಿಗೂ ಆವೇಶ ಬಂದಿತು. ತಪ್ತಳಾಗಿ ನುಡಿದಳು, "ಕಲ್ಲು ಎಳೆ

ಯುವದಿಲ್ಲವಂತೆ? ಬೇರೆಯವರ ಮನೆಯಲ್ಲಿ ಕೆಲಸ ಮಾಡಲು ಮಾತ್ರ ಶಕ್ತಿ ಬರುತ್ತದೇನೋ? ಮನೆಯ ಕೆಲಸವೆಂದರೆ ಕೈ ಮುರಿಯುತ್ತವೆ. ಊರೆಲ್ಲ 'ಭಲೆ' ಎನ್ನಬೇಕಲ್ಲವೇ ನಿಮಗೆ? ಇಲ್ಲಿ ಕೆಲಸ ಮಾಡಿದರೆ ಮೈ ಸವೆದು ಹೋದೀತು? ಇಲ್ಲಿ ತುಸು ಕೈ ಹಿಡಿದರೆ ಕೈ ನೋಯುತ್ತವೆ. 'ಅಮ್ಮಮ್ಮಾ, ಹಯ್ಯಪ್ಪಾ' ಎಂದು ಒದರಿಕೊಳ್ಳುತ್ತೀರಿ. ಬೇರೆಯವರಲ್ಲಿ ಅವಲಕ್ಕಿ ಕುಟ್ಟಲಿಕ್ಕೆ ಬರುತ್ತದೆ. ಸೊಂಟದ ಮೇಲೆ ದೊಡ್ಡ ದೊಡ್ಡ ಕೊಡ ಪಾನ ತೆಗೆದುಕೊಂಡು ನೀರುತುಂಬಲಿಕ್ಕೆ ಬರುತ್ತದೆ. ಅಲ್ಲವೇ? ವೇಷಹಾಕಲು ಚೆನ್ನಾಗಿ ಕಲಿತಿದ್ದೀರಿ."

"ಹೌದು, ಬೇರೆಯವರಲ್ಲಿ ಬೇಕಾದ ಕೆಲಸ ಮಾಡುತ್ತೇನೆ. ಅದರ ಉಸಾಬರಿ ಮಾಡಲು ನೀನಾರು? ನಿನ್ನ ಮನೆ ಅನ್ನ ತಿನ್ನುವದು ನಾನು ಅಷ್ಟರಲ್ಲೇ ಇದೆ. ನನ್ನ ಹೊಲ ಇದೆ! ನೀನು ನನಗೆ ಈರೀತಿ ಆಡತಕ್ಕದ್ದಲ್ಲ. ಬೇರೆಯವರ ಕೆಲಸವಂತೆ! ನಿಮಗೆ ಎಲ್ಲರೂ ಬೇರೆಯವರೆಂದು ಕಾಣಬಹುದು. ನಿಮ್ಮಂತೆ ಎಲ್ಲರೂ ನನ್ನವರೇ ಇದ್ದಾರೆ. ಹಾಗೇ ಖರೇ ಮನೆಯವರೂ. ವೇಷ ವಂತೆ ವೇಷ? ಯಾರಿಗೆ ನೀನು ಈ ಮಾತು ಹೇಳುವಿ? ಯಾರಿಂದಲೂ ನಾನು ಇಂಥ ಮಾತನ್ನು ಆಡಿಸಿಕೊಂಡವಳಲ್ಲ. ನೀನೇ ತುಸು ಏರಿಕೊಂಡ ಹಾಗಿದೆ." ಎಂದು ಅಜ್ಜಿ ಜಗಳಾಡತೊಡಗಿದಳು.

"ನಾಳೆ ಮೆಂಥೆಹಿಟ್ಟು ಮಾಡೋಣ ಎಂದು ನಿನ್ನೆ ಏಕೆ ಹೇಳಿದಿರಿ? ನಾನು ಎಲ್ಲ ಸೌರಣೆ ಮಾಡಿ, ಬೀಸುವ ಕಲ್ಲು ತೊಳೆದು ಕೂಡ ಇಟ್ಟೆ. ಇಂದು ಸರಿಯಾದ ಹೊತ್ತಿಗೆ ನೀವು ಮತ್ತೊಂದು ಕಡೆಗೆ ಹೋಟು ನಿಂತಿರಿ. ಬೇರೆ ಯವರನ್ನು ಗೋಳು ಹೊಯ್ಯಿಸುವುದು ನಿಮಗೆ ಚೆನ್ನಾಗಿ ಗೊತ್ತಿದ್ದ ಹಾಗಿದೆ. ನಾನು ಸತ್ತು ಸತ್ತು ಸುಣ್ಣವಾಗಿ ಎಲ್ಲ ಮಾಡಬೇಕು, ನೀವು ತುಸು ಕೈಕೂಡ ಹಚ್ಚಬಾರದೇ?" ತಾಯಿ ನುಡಿದಳು.

"ನಾನೇನು ಕೈ ಹಿಡಿಯುವದಿಲ್ಲವೆಂದು ಹೇಳಿದೆನೇ? ಸಾಕು ಮಹಾ ರಾಯಳೆ, ನಿನ್ನ ಮಾತನ್ನು ಕೇಳಲಾರೆ. ಖರೇಯವರ ಮನೆಗೆ ಹೋಗದಿದ್ದ ರಾಯಿತಲ್ಲವೇ? ನಿನ್ನ ಕಣ್ಣಲ್ಲಿ ಒತ್ತುತ್ತಿದ್ದರೆ ನಾನೇಕೆ ಹೋಗಲಿ? ಜನರಿಂದ ಒಳ್ಳೆಯವಳೆನಿಸಿಕೊಳ್ಳಬೇಕೆಂದು ನಾನು ಆತುರಪಡುತ್ತಿರುವೆನೆ? ಆಗಲವ್ವಾ, ನೀನು ಒಳ್ಳೆಯವಳೆಂದು ಹೇಳು."

ಗೆಳೆಯರೇ, ಅನೇಕ ಜನರು ಈ ಸ್ವಭಾವದವರಿರುತ್ತಾರೆ. ಮನೆಯಲ್ಲಿ ಈ ಕಡೆಯ ಕಡ್ಡಿ ಎತ್ತಿ ಆ ಕಡೆಗೆ ಇಡುವದಿಲ್ಲ. ಹೊರಗೆ ಮಾತ್ರ ಕತ್ತೆ ದುಡಿದಂತೆ ದುಡಿಯುತ್ತಾರೆ. ಬೇಕುಬೇಕಾದ ಕೆಲಸ ಮಾಡುತ್ತಾರೆ. ಬೇರೆಯವರ ಸ್ತುತಿಗೆ, ಬಾಹ್ಯ ಜಗತ್ತಿನ ಪ್ರಶಂಸೆಗೆ ಮನುಷ್ಯನು ಬಾಯಿ ಬಿಡುತ್ತಿರುತ್ತಾನೆ. ಮನೆಯವರನ್ನು ಗೋಳಾಡಿಸುವದು, ಹೊರಗಿನವರನ್ನು ಸಮಾಧಾನಪಡಿಸುವದು. ಇದರ ಬುಡದಲ್ಲಿರುವದು ಪ್ರೀತಿಯಲ್ಲ ಬರೀ ಸ್ವಾರ್ಥ! ಬರೀ ಪ್ರಶಂಸೆಗೆ ಮೆಚ್ಚಿಕೊಳ್ಳುವದು ಯೋಗ್ಯವೆನಿಸಲಾರದು. ನನ್ನ ತಾಯಿ ಆಡಿದ ಮಾತಿನಲ್ಲಿ ತುಂಬ ಅತಿಶಯೋಕ್ತಿ ಇದ್ದರೂ ಅದರಲ್ಲಿ ತುಸು ಅರ್ಥವೂ ಇದೆ. ಸತ್ಯವೂ ಇದೆ.

ಅಜ್ಜಿ ಮತ್ತು ನಮ್ಮ ತಾಯಿಯ ನಡುವಿನ ಜಗಳವು ಹೊಸದೇನೂ ಆಗಿರಲಿಲ್ಲ. ನಿತ್ಯವೂ ನಡೆದದ್ದೇ. ಆದರೆ ಅದು ಬಹಳ ಹೊತ್ತು ಇರುತ್ತಿರಲಿಲ್ಲ. ನಡುವೇ ಬಂದ ಬಿರುಗಾಳಿಯಂತೆ ಇರುತ್ತಿತ್ತು. ಇಬ್ಬರೂ ತಮ್ಮ ಮನಸ್ಸಿನಲ್ಲಿ ಕೂಡಿಬಿದ್ದ ವಿಷವನ್ನು ಕಾರಿಕೊಳ್ಳುತ್ತಿದ್ದರು. ಹೊಲಸು ಹೊರಬಿದ್ದು ಹೋಗಿ ಮತ್ತೆ ನಿರ್ಮಲರಾಗುತ್ತಿದ್ದರು. ಬಿರುಗಾಳಿ ಬರುವದು ಶಾಂತವಾಗುವದಕ್ಕಾಗಿಯೇ. ರೋಗಗಳು ಬರುವದು ಶರೀರದಲ್ಲಿಯ ಹೊಲಸನ್ನು ಸುಟ್ಟು ಹಾಕುವದಕ್ಕಾಗಿ. ಮತ್ತು ಮರಣ ಬರುವದು ಪುನಃ ಜೀವನರಸವನ್ನು ಕೊಡುವದಕ್ಕಾಗಿ.

ನನ್ನ ತಾಯಿ ಶಾಂತಳಾದಳು. ಮೌನ ತಾಳಿದಳು ಅಜ್ಜಿಯ ಬಾಯಿ ಮಾತ್ರ ನಡುನಡುವೆ ಪುಟುಪುಟಿಸುತ್ತಲೇ ಇತ್ತು. "ಬೇರೆಯವರಲ್ಲಿ ಕೆಲಸ ಮಾಡುತ್ತೇನಂತೆ! ನನ್ನ ಕೈಗಳಿವೆ, ನಾನು ಬೇಕಾದಲ್ಲಿ ಕೆಲಸ ಮಾಡತಕ್ಕವಳೇ! ನೀನಾರು ನನಗೆ ಅಡ್ಡಿ ಮಾಡುವವಳು? ನಿನಗೆ ನನ್ನ ಉಸಾಬರಿ? ಜನರು ನನ್ನನ್ನು ಕರೆದರೆ ನಿನಗೇಕೆ ಹೊಟ್ಟೆಯುರಿ?"

ತಾಯಿ ಮಾತು ನಿಲ್ಲಿಸಿದ್ದರಿಂದ ಅಜ್ಜಿಯೂ ಸುಮ್ಮನಾದಳು. ತುಸು ಹೊತ್ತಿನ ಮೇಲೆ ತಾಯಿ ಅಜ್ಜಿಯ ಬಳಿಗೆ ಹೋಗಿ ನುಡಿದಳು, "ನಾನು ತಪ್ಪಿದೆ, ಆಡಬಾರದ್ದನ್ನು ಆಡಿದೆ. ನಾನು ನಿಮಗೆ ಎದುರು ಆಡಲು ಎಷ್ಟರವಳು? ಎಷ್ಟೆಂದರೂ ನೀವು ದೊಡ್ಡವರು, ಆದರೆ ಇತ್ತೀಚೆಗೆ ಈ ಕೆಲಸದ ಭಾರ, ಚಿಂತೆ ಮತ್ತು ಕಾಹಿಲೆಯಿಂದ ಬಹಳ ಸಿಡುಕಿನವಳಾಗಿದ್ದೇನೆ. ವೈ

ಮೇಲೆ ಎಚ್ಚರವಿಲ್ಲವೆ ಸಿಕ್ಕಾಪಟ್ಟೆ ಆಡಿಬಿಡುತ್ತೇನೆ. ಯಾರೊಡನೆ ನಾನು ಮಾತಾಡುತ್ತೇನೆಂಬುದರ ಪರವೆಯೂ ಇರುವದಿಲ್ಲ. ಈರೀತಿ ನಾನು ಬದುಕಿ ಇರುವದಕ್ಕಿಂತ ಸತ್ತು ಹೋಗುವದೇ ಮೇಲು. ತಪ್ಪಾಯಿತು, ಕ್ಷಮಿಸಿ. "

" ಸತ್ತು ಹೋಗುವಳಂತೆ, ಇಂಥ ಅಮಂಗಲ ಮಾತು ಆಡಬೇಡ. ಇನ್ನೂ ಸಣ್ಣ ಸಣ್ಣ ಮಕ್ಕಳಿದ್ದಾರೆ. ನೀನು ಹೋದರೆ ಅವರನ್ನಾರು ನೋಡಿ ಕೊಳ್ಳುವರು ? ಬಹಳ ದಿವಸ ಬಾಳು. ಮಕ್ಕಳ ಲಗ್ನವಾಗಲಿ ! ಸೊಸೆ ಯಂದಿರು ಮನೆಗೆ ಬರಲಿ ! ಹುಚ್ಚಿಯಂತೆ ಏನಾದರೂ ಮನಸ್ಸಿನಲ್ಲಿ ತಂದು ಕೊಳ್ಳಬೇಡ. ನೀನು ಏನಾದರೂ ಆಡಿದೆಯೆಂದರೆ ನನಗೂ ಆವೇಶ ಬಂದು ಬಿಡುತ್ತದೆ. ಆಮೇಲೆ ಕೆಡುಕೆನಿಸುತ್ತದೆ. " ಅಜ್ಜಿಯೆಂದಳು.

" ನೀವು ಖರೇ ಮನೆಗೆ ಹೋಗಿರಿ. ಬರುತ್ತೇನೆಂದು ತಿಳಿಸಿದ್ದೀರಿ. ಮೆಂಥೆಹಿಟ್ಟು ನಾಳೆ ಮಾಡಬಹುದು. ಹೇಗೂ ಬೀಸುವ ಕಲ್ಲು ತೊಳೆದು ಇಟ್ಟಾಗಿದೆ. ಇಂದು ಅದರ ಮೇಲೆ ಬೇರೆ ಏನೂ ಬೀಸದಿದ್ದರೆ ಆಯಿತು. ನಿಮಗೆ ಇಂದು ಚಾ ಮಾಡಿಕೊಡುತ್ತೇನೆ. ಅಂದರೆ ಉಬ್ಬಸ ಹತ್ತಲಿಕ್ಕಿಲ್ಲ. ಹೊರಗೆ ಇಂದು ತುಂಬಾ ಚಳಿ ಇದೆ. " ತಾಯಿ ಸವಿ ಮಾತಾಡಿದಳು.

ಇತ್ತೀಚೆಗೆ ಮನೆಯಲ್ಲಿ ಚಾ ಸೊಪ್ಪು ಇರುತ್ತಿತ್ತು. ಯಾರಾದರೂ ಕಾಹಿಲೆ ಬಿದ್ದಾಗ, ಅಜ್ಜಿಗೆ ದಮ್ಮಿನಿಂದ ಉಬ್ಬಸ ಹತ್ತಿದಾಗ ತಾಯಿ ಚಾ ಮಾಡಿಕೊಡುತ್ತಿದ್ದಳು. ತಾಯಿ ದೂರ್ವೆ ಅಜ್ಜಿಗೆ ಒಂದು ಲೋಟ ತುಂಬ ಚಾ ಕುಡಿಯಲಿಕ್ಕೆ ಕೊಟ್ಟಳು. ಅಜ್ಜಿಯ ಸಿಟ್ಟು ಇಳಿಯಿತು. ಅಜ್ಜಿ ಖರೆಯ ವರ ಮನೆಗೆ ಹೊರಡುತ್ತ ಹೇಳಿದಳು, " ಯಶವದಾ, ಹೋಗುತ್ತೇನೆ. ಸಿಟ್ಟು ಹಿಡಿಯಬೇಡ. ಮನಸ್ಸಿಗೆ ಹಚ್ಚಿಕೊಳ್ಳಬೇಡಮ್ಮಾ. "

" ನೀವೇ ಮನಸ್ಸಿನಲ್ಲಿ ಹಿಡಿಯಬೇಡಿರಿ, ಅಂದರೆ ಆಯಿತು. ಎಷ್ಟಾದರೂ ವಯಸ್ಸಿನಿಂದ ನೀವು ಹಿರಿಯರು. ನಾನು ನಿಮ್ಮ ಸೊಸೆಯಂತೆ–ಮಗಳಂತೆ ! ನನ್ನ ಮಾತುಗಳನ್ನು ಹೊಟ್ಟೆಯಲ್ಲಿ ಹಾಕಿಕೊಂಡು ಬಿಡಿರಿ. " ಎಂದು ತಾಯಿ ನುಡಿದಳು.

ಅಜ್ಜಿ ಹೊರಟು ಹೋದ ಮೇಲೆ ತಾಯಿ ಮನೆಗೆಲಸಕ್ಕೆ ತೊಡಗಿದಳು. ನನ್ನ ತಾಯಿಯೂ ನಿರ್ದೋಷಳಾಗಿರಲಿಲ್ಲ. ದೋಷ ಯಾರಲ್ಲಿ ಇಲ್ಲ ? ತಪ್ಪು ಯಾರು ಮಾಡುವದಿಲ್ಲ ? ತಪ್ಪು ಮಾಡದವನೆಂದರೆ ದೇವರೊಬ್ಬನೇ. ಮಿಕ್ಕವ

ರೆಲ್ಲರೂ ತಪ್ಪು ತಡೆಗಳ ಒಡವೆಗಳನ್ನೇ ಧರಿಸಿಕೊಂಡು ಆ ದಯಾಘನನ ಬಳಿಗೆ ಹೋಗಬೇಕಾಗಿದೆ. ತಪ್ಪು ಮಾನವರಿಗೆ ಭೂಷಣ, ಕ್ಷಮೆಯು ದೇವರಿಗೆ ಭೂಷಣ ! ನನ್ನ ತಾಯಿ ತಪ್ಪು ಮಾಡುತ್ತಿದ್ದರೂ ತಕ್ಷಣ ಸುಧಾರಿಸಿಕೊಳ್ಳುತ್ತಿದ್ದಳು. ತಪ್ಪು ಮಾಡುವದೇ ದೊಡ್ಡಸ್ತನವೆಂದು ಅವಳು ತಿಳಿದಿರಲಿಲ್ಲ.

ರಾತ್ರಿ : ೨೨

## : : ಸಂತೋಷದ ದೀಪಾವಳಿ

ದೀಪಾವಳಿಯ ದಿವಸಗಳು ಸಮೀಪಿಸಿದ್ದವು. ಶಾಲೆಗಳಿಗೆ ರಜೆಯಾಗಿದ್ದಿತು. ನಾನು ಸಮೀಪದ ದಾಪ್ತೋಲಿಯಲ್ಲಿಯೇ ಕಲಿಯುತ್ತಿದ್ದೆನಾದ್ದರಿಂದ ರಜೆಯಾದೊಡನೆ ಮನೆಗೆ ಹೋದೆ. ನನಗೂ ನನ್ನ ತಮ್ಮಂದಿರಿಗೂ ಒಂದೊಂದು ಹೊಸ ಅಂಗಿಯನ್ನು ನನ್ನ ತಂದೆ ಹೊಲಿಸಿದ್ದರು. ಆದರೆ ಅವರು ಉಡುವ ಧೋತರಗಳು ಮಾತ್ರ ತೀರ ಹರಿದು ಹೋಗಿದ್ದವು. ತಾಯಿ ಹತ್ತು ಹದಿನೈದು ಸಲ ಹೊಲಿದು ಕೊಟ್ಟಿದ್ದಳು. ಹಲವಾರು ಕಡೆ ಪತಿ ಹಚ್ಚಲಾಗಿತ್ತು. ಈಗ ಅವು ಹೊಲಿಯಲು ಬಾರದಷ್ಟು ಜೀರ್ಣವಾಗಿದ್ದವು. ತಂದೆಯವರು ನಮಗೆಲ್ಲ ಹೊಸ ಅಂಗಿ ಹೊಲಿಸಿದ್ದರೂ ತಾವು ಮಾತ್ರ ಧೋತರ ಕೊಂಡಿರಲಿಲ್ಲ.

ತಾಯಿಗೆ ಕೆಡುಕೆನಿಸಿತ್ತು. ಆದರೆ ಅವಳೇನು ಮಾಡುವಳು ? ಅವಳಲ್ಲಿ ಹಣವೆಲ್ಲಿ ಬರಬೇಕು ? ಎಷ್ಟೋ ದಿವಸಗಳಿಂದ ಅವಳಿಗೂ ಹೊಸ ಸೀರೆ ದೊರೆತಿರಲಿಲ್ಲ. ಆದರೂ ಅವಳಿಗೆ ಅಷ್ಟು ಕೆಡುಕೆನಿಸಿರಲಿಲ್ಲ. ತಂದೆಯವರ ದೈನ್ಯಾವಸ್ಥೆಯನ್ನು ಕಂಡು ಮಾತ್ರ ನೊಂದುಕೊಳ್ಳುತ್ತಿದ್ದಳು. ನಿತ್ಯವೂ ಹರಿದ ಭಾಗವನ್ನು ನೀರಿಗೆಯಲ್ಲಿ ಅಡಗಿಸಿ ಒಳ್ಳೆಯ ಯುಕ್ತಿಯಿಂದ ಧೋತರ ಉಡುತ್ತಿದ್ದರು.

ಮುಂಬಯಿ, ಪುಣೆಯ ಕಡೆಯ ಜನರು ದೀಪಾವಳಿಗೆ ಮನೆಗೆ ಬರುತ್ತಾರೆ. ದೀಪಾವಳಿಯ ಸಮಯಕ್ಕೆ ಹಡಗಗಳು ಓಡಾಡುತ್ತವೆ. ಸಮುದ್ರವು

ಶಾಂತವಾಗಿರುತ್ತದೆ. ಮುಂಬಯಿ ಕಡೆಯುವರು ಮನೆಗೆ ಬರುವಾಗ್ಗೆ ಹಬ್ಬಕ್ಕಾಗಿ ಹುಡುಗರ ಸಲುವಾಗಿ ಪಠಾಕ್ಷಿ, ಆಟಿಗೆ ಸಾಮಾನು ತರುತ್ತಾರೆ. ನನ್ನ ಅಣ್ಣಾ ಪುಣೆಯಲ್ಲಿ ಮಾವನ ಕಡೆಗೆ ಕಲಿಯಲಿಕ್ಕೆ ಇದ್ದ. ಅವನೇನೂ ಈಸಲ ಬರತಕ್ಕವನಿದ್ದಿಲ್ಲ. ಆದರೆ ಪುಣೆಯಿಂದ ಯಾರೋ ನಮ್ಮೂರಿಗೆ ಬಂದಿದ್ದರು. ಅವರ ಜೊತೆಗೆ ನಮ್ಮ ಪುಣೆಯ ಮಾವ ನಮ್ಮ ತಾಯಿಗೆ ಭಾವಬಿದಿಗೆಯ ಉಡುಗೊರೆಯೆಂದು ನೂರು ರೂಪಾಯಿ ಕಳಿಸಿದ್ದರು. ನಮಗಾಗಿ ಮಿಠಾಯಿ ಕಳಿಸಿದ್ದರು.

ಆ ನೂರು ರೂಪಾಯಿಗಳನ್ನು ಕಂಡು ತಾಯಿಗೆ ಆನಂದವಾಯಿತು. ಎಲ್ಲರ ಕ್ಷೇಮಸಮಾಚಾರ ಕೇಳಿಕೊಂಡಳು. ರೂಪಾಯಿ ಕೊಟ್ಟು ಆ ಗೃಹಸ್ಥನು ಹೊರಟುಹೋದನು. ನಾವು ನಮ್ಮ ತಾಯಿಯನ್ನು ಮುತ್ತಿದೆವು. 'ಮಾವ ಮಿಠಾಯಿ ಕಳಿಸಿದ್ದು ನಮಗೆ ಕೊಡು' ನಾವು ಅವಳಿಗೆ ಗಂಟು ಬಿದ್ದೆವು. ಡಬ್ಬಿಯಲ್ಲಿ ಜರದಾಳು ಮತ್ತು ಪೆಪ್ಪರಮಿಂಟಿನ ವಡೆಗಳಿದ್ದವು. ತಾಯಿ ಒಂದೊಂದು ಜರದಾಳು, ಎರಡೆರಡು ವಡೆ ನಮ್ಮ ಕೈಯಲ್ಲಿಟ್ಟಳು. ನಮ್ಮ ಚಿಕ್ಕ ತಮ್ಮ 'ಎರಡು ಜರದಾಳು ಬೇಕು' ಎಂದು ಹಟ ಹಿಡಿದನು. ತಾಯಿ ಹೇಳಿದಳು, 'ಅವು ನಿಮಗಾಗಿಯೇ ಇವೆ. ಈಗಲೇ ತಿಂದು ತೀರಿಸುವಿರೇನು? ತೆಗೆದಿಟ್ಟು ತುಸು ತುಸು ತಿಂದರೆ ನಿಮಗೇ ನಾಲ್ಕು ದಿನ ತಿನ್ನಲಿಕ್ಕಾಗುತ್ತದೆ.' ಅದಕ್ಕೆ ಅವನೆಂದನು, 'ಹಾಗಾದರೆ ಇನ್ನೊಂದು ವಡಿ ಕೊಡು. ಈ ವಡಿ ಬದಲಾಯಿಸಿ ಗುಲಾಬೀ ಬಣ್ಣದ ವಡಿ ಕೊಡು.' ತಾಯಿ ಅವನಿಗೆ ಅದನ್ನು ಬದಲಾಯಿಸಿ ಕೊಟ್ಟಳು. ಮತ್ತು ಬೇರೊಂದು ವಡಿಯನ್ನೂ ಕೊಟ್ಟಳು. ನಾವು ಅಂಗಳದಲ್ಲಿ ಆಡತೊಡಗಿದೆವು. ಹರಕಲು ಬಟ್ಟೆ ತುಂಡಿನಿಂದ ತಯಾರಿಸಿದ ಒಂದು ದೇಶೀ ಚಂಡು ಇತ್ತು. ಅದನ್ನು ತೆಗೆದುಕೊಂಡು ಪುಟಚೆಂಡಿನಾಟವಾಡತೊಡಗಿದೆವು.

ತಾಯಿಯು ಇರುವೆ ಬರದಂತೆ ಬಾಗಿಲು ಮಾಡದಲ್ಲಿ ಮಿಠಾಯಿಯನ್ನು ವ್ಯವಸ್ಥಿತವಾಗಿ ತೆಗೆದಿಟ್ಟಳು. ತುಸು ಹೊತ್ತಿನ ಮೇಲೆ ಅವಳು ನನ್ನನ್ನು ಕರೆದು ಹೇಳಿದಳು, "ಶ್ಯಾಮಾ, ಅಮೃತಶೆಟ್ಟಿಯ ಕಡೆಗೆ ಹೋಗಿ ಹೊಸ ಧೋತರ ಜೋಡಿಯ ಬೆಲೆ ಕೇಳಿ ಬಾ. ಅವರಿಗೆ ಬೇಕಾಗಿದೆಯೆಂದು ಹೇಳು. ದರವನ್ನು ವಿಚಾರಿಸಿಕೊಂಡು ಬರಲು ತಿಳಿಸಿದ್ದಾರೆಂದು ಹೇಳು. ಹೋಗು."

" ನಾನು ಅಮೃತಶೆಟ್ಟರ ಅಂಗಡಿಗೆ ಹೋದೆ. ಅವರ ಮಕ್ಕಳು ಮೋಹನ್ಯಾ ಮತ್ತು ಬಬ್ರಿ ಅಲ್ಲಿದ್ದರು. ಮೋಹನ್ಯಾ ಅಂದ, " ಏನೋ ಶ್ಯಾಮಾ, ಏನು ಬೇಕು ? ಚಿತ್ರಗಳಿಗಾಗಿ ಬಂದೆಯೇನು ? "

ನಾನು ಅವನಿಗೆ ಹೇಳಿದೆ, " ಚಿತ್ರಗಳನ್ನು ಕೊಡುವದಿಲ್ಲ ನೀನು, ನಾನೇಕೆ ಬೇಡಲಿ ? ನಾನು ಎಂದೂ ನಿನ್ನಲ್ಲಿ ಕೇಳುವದಿಲ್ಲ. ಧೋತರದ ದರ ಕೇಳಲು ನಾನು ಬಂದಿದ್ದೇನೆ "

" ಯಾರಿಗೆ ಧೋತರ ? ನಿನಗೇನು ? "

" ಅಲ್ಲ. ಭಾವೂ ಅವರ ಸಲುವಾಗಿ. ಉದ್ದ–ಅಗಲ ಚೆನ್ನಾಗಿ ಇದ್ದ, ಒಳ್ಳೆ ನೆಯ್ಗೆಯುಳ್ಳ ಧೋತರ ಬೇಕು. ದರವನ್ನು ತಿಳಿಸು; ಮತ್ತು ಎರಡು ಮೂರು ಮಾದರಿಯ ಜೊತೆ ತೆಗೆದು ಕೊಡು. ಮನೆಯಲ್ಲಿ ತೋರಿಸಿಕೊಂಡು ಬರುತ್ತೇನೆ. " ಎಂದು ನಾನು ಹೇಳಿದೆ.

ಮೋಹನ್ಯಾ ಮಾರವಾಡಿ ಎರಡು ಮೂರು ಮಾದರಿಯ ಧೋತರ ಕೊಟ್ಟನು. ಅಮೃತಶೆಟ್ಟಿ ಹೇಳಿದರು, " ತೋರಿಸಿಕೊಂಡು ಬೇಗ ಬರಬೇಕು ತಿಳಿಯಿತೇ ? "

" ಹಾಗೇ ಆಗಲಿ. ನಾವೇನು ಮನೆಯಲ್ಲಿ ಇಟ್ಟುಕೊಂಡು ಬಿಡುವದಿಲ್ಲ. ಇಟ್ಟುಕೊಂಡರೆ ದುಡ್ಡು ಕೊಡುತ್ತೇವೆ " ಹೆಮ್ಮೆಯಿಂದ ನಾನು ನುಡಿದೆ.

" ನಿನ್ನಲ್ಲಿ ಬಹಳ ದುಡ್ಡು ಇರಬಹುದು ? ಅಪ್ಪನ ಹತ್ತಿರ ನೋಡಿದರೆ ಒಂದು ಕಾಸಿಲ್ಲ. " ಎಂದು ಅಮೃತಶೆಟ್ಟಿ ನುಡಿದರು.

ಆ ಶಬ್ದವನ್ನು ಕೇಳಿ ನನಗೆ ಬಹಳ ದುಃಖವಾಯಿತು. ಅಮೃತಶೆಟ್ಟರ ಬಳಿ ನಮ್ಮ ಸಾಲವಿತ್ತೆಂದು ಅವರು ಹಾಗೆ ನುಡಿದಿದ್ದರು. ಸ್ವಾಭಿಮಾನದಿಂದ ಬಾಳಬೇಕೆನ್ನುವವನು ಸಾಯಬೇಕೇ ವಿನಃ ಎಂದೂ ಸಾಲವನ್ನು ಮಾಡ ಬಾರದು.

ನಾನು ಮಾದರಿಗೆಂದು ತಂದ ಧೋತರ ಜೋಡಿಗಳನ್ನು ತಾಯಿಗೆ ತಂದು ತೋರಿಸಿದೆನು. ಅದರಲ್ಲಿ ಒಂದು ಜೊತೆಯನ್ನು ತಾಯಿ ಆರಿಸಿದಳು. ಬೆಲೆಯೂ ಎಟಕುವಂತೆಯೇ ಇತ್ತು. ಮೂರು ಮೂರುವರೆ ರೂಪಾಯಿ ಬೆಲೆ ಇತ್ತು. ತಾಯಿ ನನ್ನ ಕೈಯಲ್ಲಿ ಹಣ ಕೊಟ್ಟು " ಈ ಜೊತೆ ಇರಲಿ. ಬೇರೆ ಎರಡು ಜೊತೆಗಳನ್ನು ಮರಳಿ ಒಯ್ದು ಕೊಟ್ಟು ಬಿಡು. " ಎಂದು ಹೇಳಿದಳು.

ಆಮೇಲೆಗೆ ನಾನು ಒಂದು ಜೊತೆಯ ಬೆಲೆ ಕೊಟ್ಟು ಮಿಕ್ಕ ಧೋತರಗಳನ್ನು ವಾಪಸು ಮಾಡಿ ಮನೆಗೆ ಬಂದೆನು. ತಾಯಿಯು ಧೋತರದ ಜೊತೆಯನ್ನು ಮಧ್ಯದಲ್ಲಿ ಕತ್ತರಿಸಿ ಎರಡೂ ಧೋತರ ಬೇರೆಬೇರೆ ಮಾಡಿ ಮಡಿಕೆ ಹಾಕಿದಳು. ಎರಡಕ್ಕೂ ಕುಂಕುಮದ ಬೊಟ್ಟನ್ನಿಟ್ಟಳು.

ತಂದೆಯವರು ಊರಿನಿಂದ ತಿರುಗಿ ಬಂದರು. ಆದರೂ ಈ ಸುದ್ದಿಯು ಅವರಿಗೆ ತಿಳಿದಿರಲಿಲ್ಲ. ದೀಪಾವಳಿಯ ದಿವಸ ನಸುಕಿನಲ್ಲಿ ಮಂಗಲಸ್ನಾನವಾದ ಬಳಿಕ ತಾಯಿಯು ಆ ಧೋತರಗಳನ್ನು ತಂದೆಯವರಿಗೆ ಉಡಲಿಕ್ಕೆ ಕೊಡಬೇಕೆಂದು ಮಾಡಿದ್ದಳು. ನಾವು ಚಿಕ್ಕಮಕ್ಕಳಾಗಿದ್ದರೂ ಈ ರಹಸ್ಯವನ್ನು ಭೇದಿಸಿರಲಿಲ್ಲ. ತಾಯಿಯ ಒಳಸಂಚಿನಲ್ಲಿ ನಾವು ಹುಡುಗರೂ ಭಾಗಿಗಳಾಗಿದ್ದೆವು.

ನಾಳೆಯೇ ದೀಪಾವಳಿ. ನಸುಕಿನಲ್ಲಿ ಎರಕೊಳ್ಳುವದಿತ್ತು. ನೆಲ್ಲೀಚೆಟ್ಟು, ಸೀಗೇಪುಡಿಯನ್ನು ತಾಯಿ ಅಣಿಮಾಡಿ ಇಟ್ಟಳು. ನರಕಾಸುರನನ್ನು ತುಳಿದು ಹಾಕುವದಕ್ಕಾಗಿ ಕಾಡುಮೆಕ್ಕೆಕಾಯಿಗಳನ್ನು ರಾಶಿಮಾಡಿ ಇಟ್ಟೆವು. ಅಂಗಳವನ್ನು ಹಸನಾಗಿ ಗೂಡಿಸಿದೆವು. ಹೊಲಸನ್ನು ತೆಗೆಯುವದೆಂದರೇ ನರಕಾಸುರನ ವಧೆ. ನರಕವೆಂಬುದೇ ಅಸುರ. ನರಕವೆಂದರೆ ಹೊಲಸು. ಈ ಹೊಲಸಿನಂಥ ಬೇರೆ ರಾಕ್ಷಸ ಯಾರಿದ್ದಾರೆ? ರಾಕ್ಷಸ ನೂರು ಜನರನ್ನು ತಿನ್ನಬಹುದು. ಆದರೆ ಹೊಲಸಿನಲ್ಲಿ ಉತ್ಪನ್ನವಾಗುವ ರೋಗವೆಂಬ ರಾಕ್ಷಸನು ಜನರನ್ನು ನುಂಗಿದರೂ ತೃಪ್ತನಾಗುವದಿಲ್ಲ. ಹೊಲಸಿನಂಥ ಶತ್ರು ಬೇರೆ ಇಲ್ಲ. ಮಳೆಗಾಲದಲ್ಲಿ ಎಲ್ಲೆಲ್ಲಿಯೂ ಕೊಳೆಯಾಗುತ್ತದೆ. ಶಗಣಿ, ಕಸಕಡ್ಡಿ ಸುತ್ತಲೂ ಬಿದ್ದುಕೊಂಡಿರುತ್ತವೆ. ಈ ಹೊಲಸನ್ನು ತೆಗೆದುಹಾಕುವದೆಂದರೇ ನರಕಾಸುರನನ್ನು ಕೊಲ್ಲುವದು. ಮತ್ತೂ ಒಂದು ಮೋಜಿನ ಸಂಗತಿ ಇದೆ. ಸತ್ಯಭಾಮೆಯು ನರಕಾಸುರನನ್ನು ಸಂಹರಿಸಿದಳು. ಅವಳು ಕೃಷ್ಣನಿಗೆಂದಳು, “ ನಿಮ್ಮಿಂದ ಇವನು ಸಾಯಲಾರ. ಕೊನೆಗೆ ನಾನೇ ಕೊಲ್ಲತಕ್ಕವಳು.” ಹೊಲಸನ್ನು ತೆಗೆದುಹಾಕಿ ಸ್ವಚ್ಛತೆಯನ್ನು ಮಾಡುವ ಕೆಲಸವು ಸ್ತ್ರೀಯರಿಗೇ ಸಾಧಿಸಿದೆ. ಪುರುಷರು ಮನೆಯಲ್ಲಿ ಹೊಲಸನ್ನು ಮಾಡುತ್ತಾರೆ. ಆದರೆ ಸ್ತ್ರೀಯರು ಮನೆಯನ್ನು ಸ್ವಚ್ಛವಾಗಿಡುತ್ತಾರೆ. ಹೆಂಗಸರ ಮುಟ್ಟಿನ ಕಾಲದಲ್ಲಿ ಗಂಡಸರ ಕೈಯಲ್ಲಿ ಮನೆಯಿರುತ್ತದೆ, ಆಗ ಅವರು ಚೆನ್ನಾಗಿ ಕಸವನ್ನೂ ಬಳಿಯಲಾರರು

ಒಲೆಯನ್ನೂ ಸಾರಿಸಲಾರರು, ಉಡಸಾರಣೆ ಉಪಕಾರಣೆಯಂತೂ ದೂರವೇ ಉಳಿಯಿತು. ದೀಪಗಳನ್ನು ಒರಸಲಾರರು. ನಾಲ್ಕು ದಿವಸದಲ್ಲಿ ಮನೆಯನ್ನು ತಿಪ್ಪಿಯಂತೆ ಮಾಡಿಬಿಡುತ್ತಾರೆ. ಆದರೆ ಹೆಂಗಸರು ಎರಕೊಂಡು ಒಳಗೆ ಬಂದ ಬಳಿಕ ಮತ್ತೆ ಮನೆಯನ್ನು ಕನ್ನಡಿಯಂತೆ ಜಳಜಳ ಮಾಡುತ್ತಾರೆ. ನರಕಾಸುರನನ್ನು ಸತ್ಯಭಾಮೆಯೇ ಕೊಲ್ಲಬಲ್ಲಳು! ಹೊಲಸನ್ನು ಸ್ತ್ರೀಯರೇ ದೂರ ಮಾಡಬಲ್ಲರು. ಆದರೆ ಇತ್ತೀಚಿಗಿನ ಸ್ತ್ರೀಯರು ಮನೆಯಲ್ಲಿಯ ಹೊಲಸನ್ನು ದಾರಿಯಲ್ಲಿಯೇ ಚೆಲ್ಲುತ್ತಾರೆ. ರಾಕ್ಷಸನನ್ನು ದಾರಿಯ ಮೇಲೆ ಒಗೆದರೂ ಅದು ಅಪಾಯವೇ! ದಾರಿಯಲ್ಲಾಗಲೀ, ಚರಂಡಿಗಳಲ್ಲಾಗಲೀ ಕಸವನ್ನು ಚೆಲ್ಲದೆ ನಗರಸಭೆಯವರು ಅಲ್ಲಲ್ಲಿ ಇಟ್ಟಂಥ ಕಸದ ಪೆಟ್ಟಿಗೆಗಳಲ್ಲಿಯೇ ಹೋಗಿ ಚೆಲ್ಲಬೇಕು.

ನಾವೆಲ್ಲ ಸ್ವಚ್ಛತೆಯ ಕೆಲಸದಲ್ಲಿ ತೊಡಗಿದ್ದೆವು. ತಾಯಿಯು ಹೊಸತಾಗಿ ತುಳಸೀಕಟ್ಟೆಯನ್ನು ಹಾಕಿದಳು. ಆಮೇಲೆ ಹಣತೆಗಳನ್ನು ಸ್ವಚ್ಛ ಮಾಡಿ, ಬತ್ತಿಯನ್ನು ಹೊಸೆದು ಹಾಕಿ ಇಟ್ಟಳು. ಸಾಯಂಕಾಲ ನಾವು ಅವನ್ನು ಅಲ್ಲಲ್ಲಿ ಇಟ್ಟೆವು. ಮತ್ತೆ ನಸುಕಿನಲ್ಲಿಯೇ ಏಳಬೇಕಾದ್ದರಿಂದ ನಾವು ಹುಡುಗರು ಬೇಗ ಮಲಗಿದೆವು. ತಾಯಿ ಮಾತ್ರ ಬಹಳ ಹೊತ್ತಿನ ವರೆಗೆ ಕೆಲಸ ಮಾಡುತ್ತಲೇ ಇದ್ದಳು. ಮೈಗೆ ಹಚ್ಚಲಿಕ್ಕೆ ವಾಸನೆ ಪುಡಿ, ಮತ್ತು ಎಣ್ಣೆ ತಯಾರಿಸುತ್ತಿದ್ದಳು.

ತುಸು ರಾತ್ರಿ ಇರುವಾಗಲೇ ಎದ್ದು ತಾಯಿ ನೀರೊಲೆಗೆ ಬೆಂಕಿ ಹಾಕಿದಳು. ಅವಳು ಮೊದಲು ತಾನು ಎರಕೊಂಡು ಆಮೇಲೆ ನಮ್ಮನ್ನು ಒಬ್ಬೊಬ್ಬರನ್ನೇ ಎಬ್ಬಿಸತೊಡಗಿದಳು. ಮೈಗೆ ವಾಸನೆ ಹುಡಿ, ಎಣ್ಣೆ ಎಲ್ಲವನ್ನೂ ತಿಕ್ಕಿದಳು. ಮೊದಲು ಎಣ್ಣೆಯ ಐದು ಬೆರಳುಗಳನ್ನು ನೆಲಕ್ಕೆ ಹಚ್ಚಿ ಆಮೇಲೆ ನಮ್ಮ ಮೈಗೆ ಹಚ್ಚುತ್ತಿದ್ದಳು. ಧಾರಾಳವಾಗಿ ನೀರನ್ನು ಅವಳು ನಮಗೆ ಹಣಿಸುತ್ತಿದ್ದಳು. ತಂದೆಯವರೂ ಆಗಲೇ ಎದ್ದು ದೇವರಪೂಜೆಗಾಗಿ ಹೂವನ್ನು ತಂದಿಟ್ಟರು. ನಮ್ಮೆಲ್ಲರ ಸ್ನಾನ ಮುಗಿದಮೇಲೆ ಅವರು ಸ್ನಾನಕ್ಕೆ ಹೋದರು.

ನಾವು ಮನೆಯಲ್ಲಿಯ ದೇವರಿಗೆ ನಮಸ್ಕಾರ ಮಾಡಿ ದೇವಸ್ಥಾನಕ್ಕೆ ಹೋಗಿ ಬಂದೆವು. ತಾಯಿಯು ತಂದೆಯವರಿಗೆ ಸ್ನಾನಕ್ಕೆ ನೀರು ಕೊಟ್ಟಳು. ಅವರು ಸ್ನಾನಮುಗಿಸಿ ಹಳೇ ಮಡಿಯನ್ನು ಉಟ್ಟು ದೇವರಪೂಜೆ ಮಾಡಿದರು.

ದೇವರಿಗೆ ತುಸು ವಾಸನೆ ಎಣ್ಣೆ ಹಚ್ಚಿದರು. ಇಂದು ದೇವರಿಗೆ ಕೂಡ ಬಿಸಿ ನೀರಿನ ಸ್ನಾನ! ಪಾಪ, ದಿನಾಲು ತಣ್ಣೀರಿನ ಅಭಿಷೇಕದಿಂದ ನಡುಗುತ್ತಿರ ಬಹುದು! ತಂದೆಯವರು ದೇವರಪೂಜೆ ಮಾಡಿದರು. ಕರಚೀಕಾಯಿ, ಅನಾರಸದ ನೈವೇದ್ಯವಾಯಿತು. ಗೊಂದಲಿಗರು (ಅಂಬಾಬಾಯಿಯ ಒಕ್ಕಲು) ಭಿಕ್ಷಕ್ಕಾಗಿ ಬರುತ್ತಿದ್ದರು. ಅಂಬಾಬಾಯಿಯ ಪದಗಳನ್ನು ಹೇಳು ತ್ತಿದ್ದರು. ಕಾಸು, ಮೂರು ಕಾಸು, ಅವಲಕ್ಕಿ ಕರಚೀಕಾಯಿ ಬೇಡುತ್ತಿದ್ದರು. ನಾವು ನೀಡುತ್ತಿದ್ದೆವು. ತಂದೆಯವರು ನಮ್ಮನ್ನು ಕರೆದು ದೇವರ ನೈವೇದ್ಯ ವನ್ನು ನಮಗೆ ಕೊಟ್ಟರು. ನಿತ್ಯದಂತೆ ಸೂರ್ಯನಮಸ್ಕಾರಗಳನ್ನು ಹಾಕಿ ಅವರು ದೇವಸ್ಥಾನಕ್ಕೆ ಹೋದರು. ತುಸು ಹೊತ್ತಾದಬಳಿಕ ಮನೆಗೆ ಬಂದರು.

"ನನ್ನ ಧೋತರ ಎಲ್ಲಿ ಕಾಣುವದಿಲ್ಲವಲ್ಲ? ಎಲ್ಲಿಟ್ಟಿರುವೆ?" ಎಂದು ಕೇಳಿದರು.

"ಅವುಗಳನ್ನು ಹರಿದು ಎರಡು ತುಂಡು ಮಾಡಿ ಒರಸಲಿಕ್ಕೆ ಅರಿವೆ ಮಾಡಿದ್ದೇನೆ. ಅವು ತೀರ ಜೀರ್ಣವಾಗಿದ್ದವು." ಎಂದು ತಾಯಿ ಹೇಳಿದಳು.

"ಹಾಗಾದರೆ ಏನು ಉಡಬೇಕು? ಇನ್ನೂ ಒಂದು ತಿಂಗಳು ಹೇಗೂ ಕಳೆಯುತ್ತಿದ್ದೆ."

"ಅವುಗಳನ್ನು ಉಪಯೋಗಿಸುವದಾದರೂ ಎಷ್ಟು? ಆ ಧೋತರ ಒಗೆಯುವ ಮುಂದೆ ನನಗೆ ನಾಚಿಕೆ ಎನಿಸುತ್ತಿತ್ತು; ಮತ್ತು ಕೆಡುಕೂ ಅನಿಸುತ್ತಿತ್ತು."

"ನನಗೆ ಉಡಲಿಕ್ಕೂ ನಾಚಿಕೆಯಾಗುತ್ತಿತ್ತು. ಆದರೆ ಮಾಡುವದೇನು? ನಾಚಿಕೆಯಾದ ಮಾತ್ರಕ್ಕೆ ಮೇಲಿನಿಂದ ಹಣ ಬಂದು ಬೀಳುವದೇ?"

"ಈ ಧೋತರ ಇಂದು ಉಟ್ಟುಕೊಳ್ಳಿರಿ" ತಾಯಿ ಧೋತರ ತಂದು ಕೊಟ್ಟಳು.

"ಇದೆಲ್ಲಿಯದು? ಯಾರು ಕೊಟ್ಟರು?"

"ಅಮೃತಶೆಟ್ಟಿಯ ಅಂಗಡಿಯಿಂದ ನಾನು ತರಿಸಿದೆ."

"ಅವನು ಸಾಲವಾಗಿ ಕೊಡುತ್ತಿರಲಿಲ್ಲ. ನಾನು ಕೇಳಿದ್ದೆ, ಅವನು ಒಪ್ಪಿರಲಿಲ್ಲ. 'ನನ್ನ ಮೊದಲಿನ ಬಾಕಿ ಹೇಗೆ ವಸೂಲಾಗುವದೋ ಎಂಬ ಚಿಂತೆಯಾಗಿದೆ. ನಿಮಗೆ ಕೊಟ್ಟು ಮೋಸ ಬಿದ್ದಿದ್ದೇನೆ' ಎಂದು ಅವನು

ಹೇಳಿದ್ದ. ನೀನು ತೆಗೆದುಕೊಂಡು ಬಂದೆಯೆಂದು ಕಾಣುತ್ತದೆ. ಏನು ಮೋಹನ್ಯಾನನ್ನು ಕರೆದು ಅವನಿಗೆ ಪೀಡಿಸಿ ತಂದೆಯೇನು ?" ತಂದೆ ವಿಚಾರಿಸಿದರು.

"ನಾನು ಹೇಳಿದ್ದೆ. ಶ್ಯಾಮನು ಹೋಗಿ ದುಡ್ಡು ಕೊಟ್ಟು ತಂದಿದ್ದಾನೆ."

"ಶ್ಯಾಮನ ಬಳಿ ಹಣವೆಲ್ಲಿಂದ ಬಂತು ?"

"ನಾನು ಕೊಟ್ಟೆ."

"ನಿನ್ನ ಬಳಿ ಹಣವೆಲ್ಲಿತ್ತು ?"

"ಪುಣೆಯಿಂದ ಅಪ್ಪಣ್ಣನು ಭಾವಬಿಗಿಗೆಯ ಸಲುವಾಗಿ ಆ ಕರೀಕೃಷ್ಣನ ಸಂಗಡ ಕಳಿಸಿದ್ದ." ಎಂದು ತಾಯಿ ಹೇಳಿದಳು.

"ಎಂದು ಬಂದಿದ್ದ ಆ ಕರೀಕೃಷ್ಣ ?"

"ಬಂದು ಎರಡು ದಿವಸ ಆಯಿತು."

"ನಿನ್ನ ಸೀರೆ ಹರಿದಿದ್ದವು. ಅವನ್ನು ತರಲಿಕ್ಕೆ ಇಟ್ಟಿದ್ದರಾಗುತ್ತಿತ್ತು. ನಿನ್ನ ಅಣ್ಣನ ಉಡುಗೊರೆಯ ಮೇಲೆ ನಿನ್ನ ಹಕ್ಕು ಇರಬೇಕಾದದ್ದು. ಅದನ್ನು ಪಡೆಯಲು ನನಗೆ ಹಕ್ಕು ಇರುವದಿಲ್ಲ." ಭಾವೂ ಹೇಳಿದರು.

"ನೀವೂ–ನಾನೂ ಬೇರೆಬೇರೆ ಏನು ? ಇಷ್ಟು ದಿವಸ ಕೂಡಿ ಸಂಸಾರ ಮಾಡಿದೆವು. ಸುಖ-ದುಃಖಗಳನ್ನು ಭೋಗಿಸಿದೆವು. ವಿವಿಧ ರೀತಿಯ ಒಳಿತು-ಕೆಡಕುಗಳನ್ನು ಅನುಭವಿಸಿದೆವು. ಇನ್ನೂ ನಾವು ಬೇರೆ ಬೇರೆಯಾಗಿದ್ದೇವೆಯೇ ? ನನ್ನದೆಲ್ಲವೂ ನಿಮ್ಮದಾಗಿದೆ, ನಿಮ್ಮದೆಲ್ಲವೂ ನನ್ನದಾಗಿದೆ ನಮ್ಮಲ್ಲಿ ಇರುವದಾದರೂ ಏನು ? ನೀವು ಹೊಸ ಧೋತರವನ್ನುಟ್ಟರೆ ನಾನು ಹೊಸ ಸೀರೆಯನ್ನುಟ್ಟಂತೆಯೇ ಅದರಲ್ಲಿಯೇ ನನಗೆ ಆನಂದವಿದೆ. ಉಟ್ಟುಕೊಳ್ಳಿರಿ. ನಾನು ಅದಕ್ಕೆ ಕುಂಕುಮದ ಬೊಟ್ಟನ್ನು ಹಚ್ಚಿದ್ದೇನೆ." ಎಂದು ತಾಯಿ ಬಿನ್ನವಿಸಿಕೊಂಡಳು.

"ನಾನು ಹೊಸ ಧೋತರ ಉಡಬೇಕು, ನಿನಗೆ ಮಾತ್ರ ಹಳೇ ಸೀರೆ – ಇದರಿಂದ ನನಗೆ ವ್ಯಥೆಯಾಗುವದಿಲ್ಲವೇ ? ನಿನಗೆ ಆನಂದವಾಗುತ್ತಿದ್ದರೂ ನನಗೆ ಮಾತ್ರ ದುಃಖವಾಗುತ್ತಿದೆ. ನೀನು ಆನಂದವನ್ನು ದೊರಕಿಸಿದೆಯಾದರೂ ನನಗೆ ಮಾತ್ರ ಲಭಿಸಲಿಲ್ಲ." ಮುಂದೆ ಹೆಚ್ಚು ಮಾತೂ ಹೊರಡದಾಯಿತು.

ತಾಯಿ ಮತ್ತೆ ಸಮಾಧಾನದ ನುಡಿ ಹೇಳಿದಳು, "ನನ್ನ ಆನಂದವೇ ನಿಮ್ಮ ಆನಂದ. ನಿಮಗೆ ಹೊರಗೆ ನಾಲ್ಕು ಜನರಲ್ಲಿ ಹೋಗುವದಿರುತ್ತದೆ. ಗಂಗೂಅಪ್ಪ ಅವರಲ್ಲಿ ಪಗಡೆ ಆಟಕ್ಕೆ ನಿಮಗೆ ಕರೆ ಬರಬಹುದು. ನೀವು ಹೋಗಬೇಕಾಗುವದು. ನಾನೆಲ್ಲಿ ಇಂದು ಹೊರಗೆ ಹೋಗಬೇಕಾಗಿದೆ? ಮುಂದೆ ಅನುಕೂಲವಾದಾಗ ಒಂದು ಸೀರೆ ತಂದರಾಯಿತು. ಹೀಗೆ ಸುಮ್ಮನೆ ಮನಸ್ಸಿಗೆ ಹಚ್ಚಿಕೊಳ್ಳಬೇಡಿರಿ. ಇಂದು ದೀಪಾವಳಿ. ಇಂದೆಲ್ಲರೂ ಸಂತೋಷ ದಿಂದ ನಕ್ಕು-ನಲಿದುಕೊಂಡು ಇರಬೇಕು. ನಮ್ಮೆಲ್ಲರ ಸಂತೋಷಕ್ಕೆಂದಾದರೂ ನೀವೂ ಸಂತೋಷದಿಂದ ಇರಬೇಕು."

"ನಿನ್ನಂಥ ಜೀವನ ಸಂಗಾತಿ ಮತ್ತು ಇಂಥ ಸದ್ಗುಣಸಂಪನ್ನರಾದ ಮಕ್ಕಳಿದ್ದ ಮೇಲೆ ನನಗೆ ಸಂತೋಷವಾಗದೆ ಇದ್ದೀತೇ? ನಾನು ದರಿದ್ರನಾ ಗಿರದೆ ಶ್ರೀಮಂತರಿಗಿಂತಲೂ ಹೆಚ್ಚು ಶ್ರೀಮಂತನು! ಅಂದಬಳಿಕ ನಾನು ನಕ್ಕು-ನಲಿದಾಡಲಾರೆನೇ?" ಎಂದು ಹೇಳಿ ಅವರು ತಾಯಿಯ ಕೈಯಲ್ಲಿಯ ಧೋತರವನ್ನು ತೆಗೆದುಕೊಂಡು ಉಟ್ಟುಕೊಂಡರು. ಹರ್ಷಚಿತ್ತದಿಂದ ದೇವ ರಿಗೆ ನಮಸ್ಕಾರ ಮಾಡಿದರು.

ತಂದೆ ಧೋತರ ಉಟ್ಟಿದ್ದನ್ನು ಕಂಡು ನಮಗೂ ಹರ್ಷವಾಯಿತು. ಆದರೆ ನಿಜವಾದ ಆನಂದ ಉಕ್ಕಿ ಬಂದದ್ದು ನಮ್ಮ ತಾಯಿಗೆ. ಅಂಥ ಅನುಭವ ಹೇಳಿದರೆ ತಿಳಿಯದು. ಸ್ವತಃ ಅನುಭವಿಸಿ ತಿಳಿಯಬೇಕಾದ್ದು ಅದು. ಪ್ರೇಮ ಪೂರ್ವಕ ತ್ಯಾಗದಲ್ಲಿರುವ ಆನಂದವು – ಅದರ ರುಚಿ ನೋಡುತ್ತ ಹೋದರೆ ಗೊತ್ತಾಗುತ್ತದೆ. ಆದರೆ ಒಮ್ಮೆ ಅದರ ಅಭ್ಯಾಸ ಬೀಳಬೇಕಾಗುವದು.

ರಾತ್ರಿ : ೨೩

## : : ಅರ್ಧನಾರೀ ನಟೇಶ್ವರ

ಮೇ ತಿಂಗಳ ಬಿಡುವಿನಲ್ಲಿ ನಾನು ಊರಿಗೆ ಹೋಗಿದ್ದೆ. ಆಗ ನಾನು ಓದುತ್ತಿದ್ದುದು ಇಂಗ್ಲೀಷು ನಾಲ್ಕನೆ ಕ್ಲಾಸಿನಲ್ಲಿ. ನಾನು ಊರಿಗೆ ಹೋದೆನೆಂದರೆ ತಾಯಿಗೊಂದು ಊರುಗೋಲು ದೊರೆತಹಾಗಾಗುತ್ತಿತ್ತು.

ಆವಳು ಒಂಬಲ್ಲೊಂದು ಕಾಹಿಲೆಯಿಂದ ಯಾವಾಗಲೂ ಬಳಲುತ್ತಿದ್ದಳು. ಒಂದು ದಿವಸ ಜ್ವರ ಬಂದರೆ ಹಾಸಿಗೆ ಹಿಡಿಯುವಳು. ಜ್ವರ ಬಿಟ್ಟ ಕೂಡಲೆ ಮರುದಿವಸವೇ ಕೆಲಸಕ್ಕೆ ತೊಡಗುವಳು. ಹೀಗಾಗಿ ಅವಳು ತೀರ ಸೋತು ಹೋಗಿದ್ದಳು. ನಾನು ಬಂದೆನೆಂದರೆ ಅವಳಿಗೆ ಸಮಾಧಾನವೆನಿಸುತ್ತಿತ್ತು. ನಾನು ಅವಳಿಗೆ ನೀರು ತುಂಬುವದಕ್ಕೆ, ಬಟ್ಟೆ ಒಗೆಯುವದಕ್ಕೆ ನೆರವಾಗುತ್ತಿದ್ದೆ. ಅಂಗಳದ ಕಸಗೂಡಿಸುತ್ತಿದ್ದೆ. ರಾತ್ರಿ ಒಂದೊಂದು ಸಲ ಬೀಸಲಿಕ್ಕೆ ಕೂಡ ಕೈ ಹಚ್ಚುತ್ತಿದ್ದೆ. ತಾಯಿಯ ಕಾಲು ಹಿಚುಕುವದು ರಜೆಯಲ್ಲಿಯ ನನ್ನ ನಿಯಮಿತ ಕೆಲಸವೇ ಆಗಿತ್ತು.

ಒಂದು ದಿನ ಹೊರಗೆ ಶುಭ್ರವಾದ ಬೆಳದಿಂಗಳು ಬಿದ್ದಿತ್ತು. ಊಟವಾಟ ಮುಗಿಸಿದ್ದೆವು. ತಂದೆಯವರು ಉಂಡು ಹೊರಗೆ ಹೋಗಿದ್ದರು. ಚಿಕ್ಕ ತಮ್ಮ ಮಲಗಿಕೊಂಡಿದ್ದ. ತಾಯಿಯ ಎಂಜಲ ಗೋಮಯ ಕೆಲಸವು ಮುಗಿದಿತ್ತು. ಆ ಬಳಿಕ ತಾಯಿ ನನಗೆ ಕೇಳಿದಳು, "ಶಾಮಾ, ತುಸು ಬೀಸೋಣವೇ ? ನಿನ್ನ ಕೈ ನೋಯುವದಿಲ್ಲವಷ್ಟೇ ? ಸಂಜೆ ಆಗಿಯುವ ಕೆಲಸ ಬೇರೆ ಮಾಡಿದ್ದೀ. ಗಿಡಗಳಿಗೆ ಕಟ್ಟೆ ಕಟ್ಟಿದೆಯಲ್ಲವೇ ? ಕೈ ನೋಯುತ್ತಿದ್ದರೆ ಬೇಡ. "

ನಾನು ಹೇಳಿದೆ, " ಕೈ ಎಳ್ಳಷ್ಟೂ ನೋಯುವದಿಲ್ಲ. ನಿನ್ನೊಡನೆ ಬೀಸಲಿಕ್ಕೆ ಹಿಡಿದರೆ ನನಗೆ ಇನ್ನಷ್ಟು ಬಲವೇ ಬರುತ್ತದೆ. ನಾನು ಅಂಗಳದಲ್ಲಿ ತರಟು ಹಾಸಿ ಬೀಸೂಕಲ್ಲು ಹಾಕುವೆ ನಡೆಯಮ್ಮಾ. " ತಾಯಿ ಒಪ್ಪಿಗೆ ಕೊಟ್ಟಳು.

ನಾನು ಅಂಗಳದಲ್ಲಿ ಕಲ್ಲು ಹಾಕಿದೆ. ತಾಯಿ ಮರದಲ್ಲಿ ಕಾಳು ತೆಗೆದುಕೊಂಡು ಬಂದಳು. ಮರುದಿವಸ ದೋಸೆ ಮಾಡುವದಿತ್ತು. ದೋಸೆಯೆಂದರೆ ನನಗೆ ಅಷ್ಟು ಪ್ರೀತಿ. ತಾಯಿಮಕ್ಕಳು ಅಂಗಳದಲ್ಲಿ ಬೀಸುತ್ತಿದ್ದೆವು. ಚಂದ್ರನು ಮೇಲಿನಿಂದ ಅಮೃತದ ಮಳೆ ಸುರಿಸುತ್ತಿದ್ದನು. ನಿಧಾನವಾಗಿ ತಂಗಾಳಿ ಬೀಸುತ್ತಿದ್ದಿತು. ತಾಯಿ ಕೃಷ್ಣನ ಪದಗಳನ್ನು ಹೇಳುತ್ತಿದ್ದಳು. ನಡುನಡುವೆ ಬರುತ್ತಿದ್ದ " ಶ್ಯಾಮಾ, ಘನಶ್ಯಾಮಾ " ಎಂಬ ಶಬ್ದಗಳನ್ನು ಕೇಳಿ ನನಗೆ ಒಂದು ಬಗೆಯ ಆನಂದವಾಗುತ್ತಿದ್ದಿತು.

ಬೀಸುವ ಕೆಲಸ ನನಗೆ ಚಿಕ್ಕಂದಿನಿಂದಲೂ ಸೇರುತ್ತಿತ್ತು. ಅದರಿಂದ ತಾಯಿಯ ಸೇವೆಯೂ ಲಭಿಸುತ್ತಿತ್ತು. ತಾಯಿಯ ಜೊತೆಗೆ ಬೀಸುವಾಗ

ಕಲ್ಲಿನಲ್ಲಿ ಮುಕ್ಕನ್ನು ಹಾಕಲು ಕಲಿತುಕೊಂಡಿದ್ದೆ.

ನಾವು ಬೀಸುತ್ತಿದ್ದೆವು. ಬೀಸುವ ಸಪ್ಪಳ ಕೇಳಿ ನೆರೆಮನೆಯ ಜಾನಕೀ ಬಾಯಿ ಬಂದರು.

" ಯಶೋದಕ್ಕಾ, ಇದೇನು ಶ್ಯಾಮ ಬೀಸುತ್ತಿದ್ದಾನೆ ? ನಾನೆಂದೆ: ಇಂದು ರಾತ್ರಿ ಒಬ್ಬರೇ ಬೀಸುತ್ತ ಕುಳಿತಿರೇನೋ ? ವಿಚಾರಿಸಿಕೊಂಡು ಹೋಗಬೇಕೆಂದು ಬಂದೆ. ಶ್ಯಾಮಾ, ಇದೇನೋ ? ನೀನು ಇಂಗ್ಲೀಷು ಕಲಿಯುವ ಹುಡುಗನಲ್ಲವೇ ? " ಜಾನಕೀಬಾಯಿ ಕೇಳಿದಳು.

ನಾನು ತಾಯಿಯನ್ನು ಪ್ರಶ್ನಿಸಿದೆ, " ಅಮ್ಮಾ, ಬೀಸಲಿಕ್ಕೆ ಹಿಡಿದರೇನಾಯಿತು ? "

ತಾಯಿ ಹೇಳಿದಳು, " ಶ್ಯಾಮಾ, ಜಾನಕೀಬಾಯಿ ನಿನ್ನ ತಮಾಷೆ ಮಾಡುತ್ತಿದ್ದಾರೆ. ನಿನ್ನನ್ನು ಕಂಡರೆ ಅವರಿಗೆ ಬಹಳ ಪ್ರೀತಿ. ನಿನ್ನನ್ನು ನೋಡುವದಕ್ಕೆಂದೇ ಬಂದಿದ್ದಾರೆ. ಅಲ್ಲವೋ, ಕೆಲಸ ಮಾಡುವವರಿಗೆ ಯಾರಾದರೂ ಹೆಸರಿಡುವರೇ ? ಮತ್ತು ತಾಯಿಯ ಸೇವೆ ಮಾಡುವವರಿಗೆ ಯಾರು ಹೆಸರಿಡುವರು ? ತಾಯಿಗೆ ಸಹಾಯ ಮಾಡುವದಕ್ಕೆ ನಾಚಿಕೆಯೇನು ? ತಾಯಿಯ ಸೇವೆ ಮಾಡುವವನನ್ನು ಕಂಡು ನಗುವವರು ಕಾಡುಮನುಷ್ಯರೇ ಸರಿ. ಸಂತ ಜನಾಬಾಯಿಯ ಜೊತೆಗೆ ಪ್ರತ್ಯಕ್ಷ ಪಾಂಡುರಂಗನೇ ಬಂದು ಬೀಸಲಿಕ್ಕೆ ಹಿಡಿಯುತ್ತಿದ್ದುದನ್ನು ನೀನು ಭಕ್ತಿವಿಜಯದಲ್ಲಿ ಓದಿಲ್ಲವೇ ? "

" ಓದಿದ್ದೇನೆ. ಆದರೆ ಅಮ್ಮಾ, ಇದು ನಿಜವಿರಬಹುದೇನೇ ? ದೇವರು ಕಬೀರನಿಗೆ ನೇಯುವ ಕೆಲಸದಲ್ಲಿ, ಬಟ್ಟೆ ಒಗೆಯುವ ಕೆಲಸದಲ್ಲಿ, ಜನಾಬಾಯಿಗೆ ಬೀಸುವ ಕೆಲಸದಲ್ಲಿ ನೆರವಾಗುತ್ತಿದ್ದನಂತೆ. ನಾಮದೇವನ ಕೀರ್ತನೆಯಲ್ಲಿ ಅವನ ಹಿಂದೆ ನಿಂತು ತಾಳ ಬಾರಿಸುತ್ತಿದ್ದನಂತೆ, ಕುಣಿಯುತ್ತಿದ್ದನಂತೆ. ಇದೆಲ್ಲವೂ ನಿಜವೇನೇ ? " ಎಂದು ನಾನು ಕೇಳಿದೆ.

" ಕುಳಿತುಕೊಳ್ಳಿರಿ ಜಾನಕೀಬಾಯಿ. ಹೀಗೇ ನಿಂತುಕೊಂಡು ಬಿಟ್ಟಿರಲ್ಲ" ಎಂದು ಜಾನಕೀಬಾಯಿಗೆ ಬಿನ್ನವಿಸಿಕೊಂಡು ತಾಯಿ ನನಗೆ ಹೇಳಿದಳು, " ಶ್ಯಾಮಾ, ಅದು ನಿಜವಿರಬಹುದು. ದೇವರ ಮೇಲೆ ವಿಶ್ವಾಸವಿಟ್ಟು, ಯಾವಾಗಲೂ ಅವನನ್ನು ಸ್ಮರಿಸುತ್ತ ಕೆಲಸ ಮಾಡುವವರಿಗೆ ದೇವರು ನೆರವಾಗುತ್ತಾನೆ. ನೀನು ನನಗೆ ನೆರವಾಗುತ್ತಿರುವೆ. ದೇವರೇ ನಿನ್ನನ್ನು ಕಳಿಸಿದ್ದಾ

ನೆನ್ನಬಹುದು. ಮೇ ತಿಂಗಳು ಬರುತ್ತಲೇ ದೇವರು ನಿನ್ನ ರೂಪ ತಾಳಿ ನನ್ನ ಸಹಾಯಕ್ಕೆ ನಿಲ್ಲುತ್ತಾನೆ. ಒಮ್ಮೆ ಶ್ಯಾಮನ ರೂಪದಿಂದ ಬಂದರೆ ಒಮ್ಮೆ ಜಾನಕೀಬಾಯಿ ರೂಪದಿಂದ ಬರುತ್ತಾನೆ."

"ಅಮ್ಮಾ, ನನಗೆ ದೇವರು ಭೆಟ್ಟಿಯಾಗಬಹುದೇನೇ?" ಒಮ್ಮೆಲೆ ನಾನು ಕೇಳಿದೆ.

"ಪುಣ್ಯವಂತರಿಗೆ ಭೆಟ್ಟಿಯಾಗುತ್ತಾನೆ. ಬಹಳ ಪುಣ್ಯ ಮಾಡಬೇಕು, ಎಲ್ಲರಿಗೂ ಉಪಯುಕ್ತನಾಗಬೇಕು ಅಂದರೆ ದೇವರು ಭೆಟ್ಟಿಯಾಗುತ್ತಾನೆ."

ನಡುವೇ ಜಾನಕೀಬಾಯಿ ನನಗೆ ಹೇಳಿದರು, "ಶ್ಯಾಮನೇನು ಸ್ವಾಮಿಯಾಗಬೇಕೆಂದು ಮಾಡಿದ್ದಾನೇನು? ಹಾಗಾದರೆ ಕಲಿಯುವ ಅವಶ್ಯಕತೆಯೇನಿದೆ? ಇಂಗ್ಲೀಷು ಕಲಿತು ಒಳ್ಳೇ ನೌಕರಿ ಸಂಪಾದಿಸು. ತಾಯಿಯನ್ನು ಕರೆದುಕೊಂಡು ಹೋಗು."

ನಾನು ನುಡಿದೆ, "ನನಗೆ 'ಸಾಧು' ಆಗಬೇಕಾಗಿದೆ. ಭಕ್ತನಾಗಬೇಕೆಂದು ಅನಿಸುತ್ತದೆ. ಅಮ್ಮಾ, 'ಓಂ ನಮೋ ಭಗವತೇ ವಾಸುದೇವಾಯ' ಎಂಬ ಮಂತ್ರವನ್ನು ಜಪಿಸುತ್ತ ಧ್ರುವ ಬಾಲಕನು ಕುಳಿತುಕೊಂಡಿದ್ದ. ಹಾಗೆ ನಾನೂ ಕುಳಿತುಕೊಂಡರೆ ದೇವರು ಭೆಟ್ಟಿಯಾಗಬಹುದೇ?"

ತಾಯಿ ಹೇಳಿದಳು, "ಧ್ರುವನ ಪೂರ್ವ ಪುಣ್ಯ ದೊಡ್ಡದು! ಕಠೋರವಾದ ನಿರ್ಧಾರ ಆತನದು! ತಂದೆ ರಾಜ್ಯ ಕೊಡುತ್ತೇನೆಂದರೂ ಅವನು ಹಿಂತಿರುಗಲಿಲ್ಲ. ಇಂಥ ದೃಢ ವೈರಾಗ್ಯ ಎಲ್ಲರಿಂದ ಸಾಧ್ಯವಿಲ್ಲ. ಈ ಜನುಮದಲ್ಲಿ ಒಳ್ಳೆಯವನಾಗಲು ಯತ್ನಿಸು. ಮುಂದೆ ಎಂದಾದರೂ ದೇವರು ಭೆಟ್ಟಿಯಾದಾನು!"

ಜಾನಕೀಬಾಯಿ ಹೇಳಿದರು, "ಶ್ಯಾಮಾ, ಇನ್ನು ನೀನು ಏಳು, ನಾನು ತುಸು ಬೀಸಲಿಕ್ಕೆ ಹಿಡಿಯುತ್ತೇನೆ. ಪಾಪ, ದಣಿವು ಆಗಿರಬಹುದು."

ನಾನು ತಾಯಿಗೆ ಹೇಳಿದೆ, "ಅಮ್ಮಾ, ನೀನೇ ತುಸು ವಿಶ್ರಾಂತಿ ತೆಗೆದುಕೋ. ನಾನೂ ಜಾನಕೀಬಾಯಿ ಬೀಸುತ್ತೇವೆ. ಜಾನಕೀಕಕ್ಕೀ, ನನಗೆ ಮುಕ್ಕು ಹಾಕಲಿಕ್ಕೆ ಬರುತ್ತದೆ. ಕಣ್ಣು ಮುಚ್ಚಿಕೊಂಡು ಸಹ ಹಾಕಬಲ್ಲೆ. ನಾನೀಗ ನಿಷ್ಣಾತನಾಗಿದ್ದೇನೆ. ಅಮ್ಮಾ, ನೀನು ಏಳೇ ನಾವು ಬೀಸುತ್ತೇವೆ."

ನಾನೂ ಜಾನಕೀಬಾಯಿಯೂ ಬೀಸತೊಡಗಿದೆವು. ನಾನು ಕಲ್ಲಿಗೆ

ಮುಕ್ಕು ಹಾಕುತ್ತಿದ್ದೆ. "ಜಾನಕೀಕಕ್ಕೀ, ನೋಡಿರಿ ಎಷ್ಟು ಸುಣ್ಣಗೆ ಹಿಟ್ಟು ಬೀಳುತ್ತಿದೆ. ಕಣ್ಣಲ್ಲಿ ಸೇರಿದರೂ ಕಣ್ಣು ಚುಚ್ಚಲಾರದು. ನೋಡಿದಿರಾ ?" ಎಂದು ನಾನು ಹೇಳಿದೆ.

ಜಾನಕೀಬಾಯಿ ತಾಯಿಗೆ ಹೇಳಿದರು, "ಯಶೋದಾಬಾಯೀ, ಶ್ಯಾಮನನ್ನು ನೀವು ತೀರ ಹೆಣ್ಣುಹುಡುಗಿಯನ್ನೇ ಮಾಡಿ ಬಿಟ್ಟಿದ್ದೀರಿ."

ತಾಯಿ ನುಡಿದಳು. "ನಮ್ಮ ಮನೆಯಲ್ಲಿ ಬೇರೆ ಯಾರಿದ್ದಾರೆ ಕೆಲಸಕ್ಕೆ? ಇನ್ನೂ ಸೊಸೆಯೇನೂ ಬಂದಿಲ್ಲ. ಶ್ಯಾಮನು ನೆಂವಾಗದೆ ಮತ್ತಾರು ನೆರವಾಗಬೇಕು ? ಕೆಲವು ಸಲ ಗಂಡಸರು ಹೆಂಗಸರ ಕೆಲಸ, ಹೆಂಗಸರು ಗಂಡಸರ ಕೆಲಸ ಮಾಡಬೇಕಾಗುತ್ತದೆ. ಅದರಲ್ಲೇನು ಮರ್ಯಾದೆ ಹೋಗುತ್ತದೆಯೆ ? ಶ್ಯಾಮನು ನನಗೆ ಅಕ್ಕಿ, ಬೇಳೆ ಹಸನ ಮಾಡಲು ಸಹಾಯ ಮಾಡುತ್ತಾನೆ, ಬಟ್ಟೆ ಒಗೆಯಲಿಕ್ಕೆ, ಪಾತ್ರೆ ತೊಳೆಯಲಿಕ್ಕೆ, ಎಲ್ಲ ಕೆಲಸಗಳಲ್ಲಿಯೂ ನೆರವು ಆಗುತ್ತಾನೆ. ಆ ದಿವಸ ಅವನು ನನ್ನ ಸೀರೆ ಸಹ ಒಗೆದುಕೊಟ್ಟನು. ನಾನೆಂದೆ, 'ಶ್ಯಾಮಾ, ನೋಡಿದವರು ನಕ್ಕಾರು ?' ಆದರೆ ಅವನೇನೆನ್ನುತ್ತಾನೆ ಗೊತ್ತೇ? 'ಅಮ್ಮಾ, ನಿನ್ನ ಸೀರೆ ಒಗೆಯಲು ನನಗೆ ಆನಂದವಾಗುತ್ತದೆ. ನಿನ್ನ ಸೀರೆಯ ದುಪ್ಪಟಿಯನ್ನು ಹೊದಿಯುವದಿಲ್ಲವೇ ನಾನು ? ಅಂದಬಳಿಕ ಒಗೆಯಲಿಕ್ಕೆ ಏಕೆ ನಾಚಬೇಕು ?' ಜಾನಕೀಬಾಯೀ, ನಮ್ಮ ಶ್ಯಾಮನಿಗೇನೂ ಅನಿಸುವದಿಲ್ಲ. ನಾನು ಅವನನ್ನು ಹುಡುಗಿಯನ್ನೇ ಮಾಡಿದರೂ ಅದು ಅವನಿಗೆ ಸೇರುತ್ತದೆ."

ಗೆಳೆಯರೆ, ತಾಯಿಯ ಆ ಸ್ಫೂರ್ತಿದಾಯಕ ಮಾತು ಇನ್ನೂ ನೆನಪಿಗೆ ಬರುತ್ತವೆ. ಪುರುಷರ ಹೃದಯದಲ್ಲಿ ಕೋಮಲತೆ, ಪ್ರೇಮ, ಸೇವಾವೃತ್ತಿ, ಕಷ್ಟ ಸಹಿಸಿಕೊಳ್ಳುವ ಸಿದ್ಧತೆ, ಸಹನಶೀಲತೆ, ಬಾಯಿ ಮುಚ್ಚಿಕೊಂಡು ಕೆಲಸ ಮಾಡುವದು ಈ ಸಂಗತಿಗಳು ಉತ್ಪನ್ನವಾಗದ ಹೊರತು ಅವರ ಪರಿಪೂರ್ಣ ವಿಕಾಸವು ಆಗಿದೆಯೆಂದು ಹೇಳಲಿಕ್ಕೆ ಬರಲಾರದು. ಅದೇ ಮೇರೆಗೆ ಸ್ತ್ರೀಯರ ಹೃದಯದಲ್ಲಿ ಧೈರ್ಯ, ಹೊತ್ತು ಬಂದಾಗ ಕಠೋರರಾಗುವದು, ಮನೆಯಲ್ಲಿ ಗಂಡಸರು ಇಲ್ಲದಿದ್ದರೆ ದಿಟ್ಟತನದಿಂದ ಮನೆಯ ವ್ಯವಸ್ಥೆಯನ್ನು ನೋಡುವದು ಈ ಗುಣಗಳು ಬಂದಾಗಲೇ ಅವರ ಪರಿಪೂರ್ಣ ವಿಕಾಸವಾಗಿದೆಯೆಂದು ಹೇಳಬಹುದು. ಇದಕ್ಕೇ ನಾನು ಮದುವೆಯೆನ್ನುತ್ತೇನೆ. ಮದುವೆಯಿಂದ ಇದನ್ನೇ

ಸಾಧಿಸುವದು. ಮದುವೆಯನ್ನು ಮಾಡಿಕೊಂಡು ಪುರುಷನು ಕೋಮಲತೆಯನ್ನು ಕಲಿಯುತ್ತಾನೆ. ಹೃದಯದ ಗುಣವನ್ನು ರೂಢಿಸಿಕೊಳ್ಳುತ್ತಾನೆ. ಸ್ತ್ರೀಯು ಬುದ್ಧಿಯ ಗುಣವನ್ನು ಕಲಿಯುತ್ತಾಳೆ. ವಿವಾಹವೆಂದರೆ ಹೃದಯ ಮತ್ತು ಬುದ್ಧಿ, ಭಾವನೆ – ಮತ್ತು ವಿಚಾರಗಳ ಮಧುರ ಮಿಶ್ರಣ – ಮಧುರ ಸಹಕಾರ್ಯ. ಪುರುಷರ ಹೃದಯದಲ್ಲಿ ಸ್ತ್ರೀಗುಣವು, ಸ್ತ್ರೀಯರ ಹೃದಯದಲ್ಲಿ ಪುರುಷಗುಣವು ಬರುವದೆಂದರೇ ವಿವಾಹ! ಅರ್ಧನಾರೀ ನಟೇಶ್ವರ, ಇದು ಮಾನವನ ಧ್ಯೇಯವಾಗಿದೆ. ನಿಜವಾದ ಪುರುಷನು ಅಪೂರ್ಣನಿದ್ದಾನೆ. ಸ್ವತಃ ಸ್ತ್ರೀಯೂ ಅಪೂರ್ಣಳೇ. ಆದರೆ ಇಬ್ಬರೂ ಒಂದೆಡೆ ಬಂದು ಎರಡು ಪೂರ್ಣ ವ್ಯಕ್ತಿಗಳಾಗುತ್ತಾರೆ. ಎರಡು ಅಪೂರ್ಣಗಳ ಮದುವೆಯಾಗಿ ಎರಡು ಪೂರ್ಣ ಜೀವಿಗಳು ತಯಾರಾಗುತ್ತಾರೆ. ತಾಯಿ ನನಗೆ ಬೇರೆ ಲಗ್ನಮಾಡುವ ಅವಶ್ಯಕತೆಯನ್ನೇ ಇಟ್ಟಿರಲಿಲ್ಲ. ಪ್ರೇಮ, ದಯೆ, ಕಷ್ಟ, ಸೇವೆ ಈ ಸ್ತ್ರೀಗುಣಗಳ ಜೊತೆಗೆ ನನ್ನ ಮದುವೆ ಹೂಡಿಬಿಟ್ಟಿದ್ದಳು.

ರಾತ್ರಿ : ೨೪

## : : ಸೋಮವತೀ ಅಮಾವಾಸ್ಯೆ

ಸೋಮವಾರ ದಿವಸ ಬರುವ ಅಮಾವಾಸ್ಯೆಗೆ ಸೋಮವತೀ ಅಮಾವಾಸ್ಯೆಯೆನ್ನುತ್ತಾರೆ. ಸೋಮವತೀ ವ್ರತವನ್ನು ಹಿಡಿದ ಬ್ರಾಹ್ಮಣ ಮುತ್ತೈದೆಯರು ಅರಳೀಗಿಡದ ಪೂಜೆಯನ್ನು ಮಾಡುತ್ತಾರೆ. ಸೋಮವಾರ ಬಂದ ಅಮಾವಾಸ್ಯೆಯ ದಿವಸ ದೇವರಿಗೆ ಯಾವುದಾದರೂ ಪದಾರ್ಥ ೧೦೮ ಸಂಖ್ಯೆಯಲ್ಲಿ ಅರ್ಪಿಸುವದಿರುತ್ತದೆ. ಮಾವಿನ ಹಣ್ಣು, ಬಾಳೇಹಣ್ಣು, ಪೇಢೆ, ಉಂಡಿ, ರೂಪಾಯಿ, ಅರ್ಧ ರೂಪಾಯಿ, ಸೀರೆ, ಖಣ, ತೆಂಗಿನಕಾಯಿ ಯಾವುದೊಂದು ವಸ್ತು ೧೦೮ ಇರಬೇಕೆಂಬ ನಿಯಮವಿದೆ. ಅವರವರ ಭಕ್ತಿ, ಅವರವರ ಅನುಕೂಲತೆಯಂತೆ ತಮಗೆ ಬೇಕಾದ ವಸ್ತುವನ್ನು ದೇವರಿಗೆ ದಾನ ಮಾಡುತ್ತಾರೆ. ಈ ದಾನವು ಅವರವರ ಪುರೋಹಿತರಿಗೆ ಸಲ್ಲುತ್ತದೆ. ಆ

ಪುರೋಹಿತರು ಕೂಡ ಅದನ್ನೆಲ್ಲ ತಾವೇ ಇಟ್ಟುಕೊಳ್ಳುವದಿಲ್ಲ. ಗಿಡದ ಹತ್ತಿರ ಪೂಜೆ ಮಾಡಿಸಲು ಬಂದ ಪುರೋಹಿತರಿಗೆಲ್ಲ ಹಂಚಿಕೊಡುತ್ತಾರೆ. ಇದು ಒಳ್ಳೇ ಅನುಕರಣೀಯವಾದ ಪದ್ಧತಿಯಾಗಿದೆ. ಇದರಿಂದ ಪುರೋಹಿತರಲ್ಲಿ ದ್ವೇಷ, ಅಸೂಯೆಗಳು ಬೆಳೆಯುವದಿಲ್ಲ ಅದಕ್ಕೆ ಆಸ್ಪದವೇ ಉಳಿಯುವದಿಲ್ಲ.

ಐಶ್ವರ್ಯದಿಂದ ತುಂಬಿದ ಮನೆತನದಲ್ಲಿ ಎಲ್ಲರೂ ಒಟ್ಟಾಗಿ ಇದ್ದ ವೇಳೆಯಲ್ಲಿಯೇ ನಮ್ಮ ತಾಯಿ ಸೋಮವತಿ ವ್ರತ ಹಿಡಿದಿದ್ದರು. ಆಗ ಪಾವಲಿ, ಎಲೆಪಟ್ಟಿ, ಪೇಢೆ ಇಂಥ ಬೆಲೆಯುಳ್ಳ ಪದಾರ್ಥಗಳ ದಾನ ಪೂರೈಸಿದ್ದಳು. ಆದರೆ ಈಗ ಬಡತನ ಬಂದಿದ್ದಿತು. ತನಗೇ ಉಡಲಿಕ್ಕೆ ಸೀರೆ ಇದ್ದಿಲ್ಲ. ೧೦೮ ಸೀರೆಯ ದಾನವನ್ನೇನು ಮಾಡುತ್ತಾಳೆ. ಅವಳಿಗೇ ತಿನ್ನಲಿಕ್ಕೆ ಇಲ್ಲದ ಬಳಿಕ ಅವಳೇನು ಕೊಡುತ್ತಾಳೆ? ಸೋಮವತೀ ವ್ರತವನ್ನು ಒಮ್ಮೆಲೆ ಬಿಡಲಿಕ್ಕೆ ಬರುವದಿಲ್ಲ. ಆದರೆ ಮನೆಯಲ್ಲಿ ಯಾವ ಬಾಯಿಯಿಂದ ಪತಿಯನ್ನು ಕೇಳುವಳು? ಪತಿಯ ಬಳಿಯಲ್ಲಾದರೂ ಏನಿತ್ತು?

ಚಳಿಗಾಲದ ರಜೆಯ ನಿಮಿತ್ತ ನಾನು ಮನೆಯಲ್ಲಿಯೇ ಇದ್ದೆನು. ಆಗ ಸೋಮವತಿ ಬಂದಿತ್ತು. ನಾನು ತಾಯಿಗೆ ಕೇಳಿದೆ, " ಈ ಸೋಮವತಿಗೆ ಯಾವ ದಾನವನ್ನು ಮಾಡುವೆ? ಜಾನಕೀಕಕ್ಕಿ ೧೦೮ ಅಡಿಕೆ ಬೆಟ್ಟುಗಳನ್ನು ಕೊಡುತ್ತಾರಂತೆ."

ತಾಯಿ ಹೇಳಿದಳು, " ನಾನು ಹಸಿ ಅಡಿಕೆ ಬೆಟ್ಟು ಕೊಟ್ಟಾಗಿದೆ. ಹಿಂದೆ ಸೀತಾ ಅತ್ತೆ ಕಳಿಸಿಕೊಟ್ಟಿದ್ದರು."

" ಹಾಗಾದರೇನು ನಿರ್ಧರಿಸಿದೆ? ಸೋಮವತಿಗೆ ಎರಡು ಮೂರು ದಿನಗಳು ಮಾತ್ರ ಉಳಿದಿವೆ. ಯಾವುದೊಂದು ಪದಾರ್ಥ ನಿಶ್ಚಯಿಸಬೇಡವೇ? ಅಮ್ಮಾ, ೧೦೮ ಬೆಲ್ಲ ಅಂದರೆ ಬೆಲ್ಲದ ಪೆಂಟಿಗಳನ್ನು ಕೊಡುವದೇನು? ಎಣ್ಣೆ ಅಂದರೆ ಅಷ್ಟು ಎಣ್ಣೆ ಡಬ್ಬಗಳನ್ನು ಕೊಡುವುದೇನು?"

" ಹಾಗೇನೂ ಅಲ್ಲ ಮಗು, ಅಷ್ಟೊಂದು ಸಾಮರ್ಥ್ಯವಿದ್ದವರು ಡಬ್ಬಿಗಳನ್ನೂ ಪೆಂಟಿಗಳನ್ನೂ ಕೊಟ್ಟರೇನೂ ತಪ್ಪಲ್ಲ. ಆದರೆ ಬಡವರು ನೂರಾ ಎಂಟು ಅರ್ಧ ಸೇರನ್ನೋ, ಕಾಲು ಸೇರನ್ನೋ ಕೊಡುತ್ತಾರೆ. ಇಲ್ಲವೆ ಒಮ್ಮೆಲೆ ಒಂದೂಕಾಲು ಮಣ ಬೆಲ್ಲವನ್ನೋ, ಒಂದೂಕಾಲು ಮಣ ಎಣ್ಣೆಯನ್ನೋ ಕೊಟ್ಟು ಬಿಡುತ್ತಾರೆ. ಆದರಲ್ಲಿ ತಮಗೆ ಬೇಕಾದ ಹಾಗೆ ೧೦೮ ಭಾಗ

ಮಾಡಬಹುದು. ”

“ ಹಾಗಾದರೆ ಅಮ್ಮಾ, ನೀನು ೧೦೨ ಅರ್ಧ ಸೇರು ಬೆಲ್ಲವನ್ನು ದಾನ ಮಾಡಬಹುದಲ್ಲ ? ”

“ ವಿಷ ತೆಗೆದುಕೊಳ್ಳಬೇಕೆಂದರೆ ಮನೆಯಲ್ಲಿ ಒಂದು ಕಾಸು ಇಲ್ಲ. ಉರುಲು ಹಾಕಿಕೊಳ್ಳಬೇಕೆಂದರೆ ಹಗ್ಗದ ಅಭಾವ! ಹಣವೆಲ್ಲಿ ಬರಬೇಕು ? ನಮ್ಮಲ್ಲೇನು ದುಡ್ಡಿನ ಗಿಡವಿದೆಯೇ ಬೇಕೆನಿಸಿದಾಗ ಕಿತ್ತುಕೊಳ್ಳಲಿಕ್ಕೆ ? ನಾವು ಬಡವರಲ್ಲವೇ ಶ್ಯಾಮಾ ? ” ಎಂದಳು ತಾಯಿ.

ನಾನು ಮತ್ತೆ ಸೂಚಿಸಿದೆ, “ ಅಮ್ಮಾ, ನೆಲ್ಲೀಕಾಯಿಯೇಕೆ ಕೊಡಬಾರದು ? ”

“ ನೆಲ್ಲೀಕಾಯಿ ಎರಡು ವರ್ಷಗಳ ಮೊದಲೇ ಕೊಟ್ಟಿದ್ದೇನೆ. ಸೋವಲಿಯಿಂದ ಅವರು ತಂದು ಕೊಟ್ಟಿದ್ದರು. ಸೋವಲಿಯ ತುಕಾರಾಮನು ಕೊಟ್ಟಿದ್ದನಂತೆ. ”

“ ಹುಣಸೇಬೀಜ ಏರಿಸಿದರಾಗುವದಿಲ್ಲವೇ ? ” ನಾನು ನಗುನಗುತ್ತ ಕೇಳಿದೆ.

ತಾಯಿಯೆಂದಳು, “ ಆಗವೇನು ? ಆದರೆ........ ”

“ ಆದರೆ ಏನು, ಜನರು ನಗಬಹುದು ಇಷ್ಟೇ ಅಲ್ಲವೇ? ನಕ್ಕವರ ಹಲ್ಲು ಕಂಡಾವು ? ನಗುವವರ ಗಂಟೇನು ಖರ್ಚಾಗುತ್ತದೆ ! ಯಾರೇನು ಕೊಡಲಿಕ್ಕೆ ಬರಬೇಕಾಗಿಲ್ಲ. ನಗಲಿಕ್ಕೆ ಮಾತ್ರ ಎಲ್ಲರೂ ಸಿದ್ಧ! ನೆರವಾಗಲಿಕ್ಕೆ ಒಬ್ಬರೂ ಬರುವದಿಲ್ಲ. ದೇವರಿಗೆ ಸಿಟ್ಟು ಬರಲಿಕ್ಕಿಲ್ಲವಷ್ಟೇ ? ” ನಾನು ವಿಚಾರಿಸಿದೆ.

ತಾಯಿಯೆಂದಳು, “ ಶ್ಯಾಮಾ, ದೇವರು ಸಿಟ್ಟಾಗುವದಿಲ್ಲ. ಅವನಿಗೆ ವಿದುರನ ಮನೆಯ ನುಚ್ಚು ಕೂಡ ಮೆಚ್ಚಿತು. ಲಟಕೆ ಹೊಡೆಯುತ್ತ ತಿಂದನು. ಒಂದೇಸಮನೆ ತಾಟನ್ನು ನೆಕ್ಕುತ್ತಿದ್ದರೂ ಅವನಿಗೆ ತೃಪ್ತಿಯಿರಲಿಲ್ಲ. ಉಪವಾಸವಿದ್ದವರೂ ಆಶೆಬುರುಕರೂ ತಿನ್ನುವ ಹಾಗೆ ಸುದಾಮನು ಕೊಟ್ಟ ಅವಲಕ್ಕಿಯನ್ನು ಪಕಪಕನೆ ಮುಕ್ಕಿದನು. ರುಕ್ಮಿಣಿಗೆ ಒಂದು ಮುಕ್ಕು ಕೊಡಲಿಕ್ಕೆ ಕೂಡ ಅವನು ಸಿದ್ಧನಿರಲಿಲ್ಲ. ದೇವರು ಉಪವಾಸವೇ ಇರುತ್ತಾನೆ. ಪಾಪ! ಪ್ರೇಮದಿಂದ ಅವನಿಗೆ ನೀಡುವವರಾರು? ಲಕ್ಷಕ್ಕೊಬ್ಬರು ಕೊಡುವ

ಪ್ರೀತಿಯ ನೈವೇದ್ಯದ ಮೇಲೆಯೇ ಅವನು ತೃಪ್ತನಾಗಿ ಇರುತ್ತಾನೆ. ಹಸಿದ ದೇವರಿಗೆ ದ್ರೌಪದಿಯ ಎಲೆಯನ್ನು ತಿಂದು ತೇಗು ಬಂದಿತು. ಪ್ರೀತಿಯಿಂದ ಕೊಡುವ ಯಾವುದೇ ವಸ್ತುವನ್ನು ದೇವರು ಹಾಲಿನ ಸಮುದ್ರಕ್ಕಿಂತಲೂ ಶ್ರೇಷ್ಠವಾದದ್ದೆಂದು ತಿಳಿಯುತ್ತಾನೆ. ಶಬರಿಯು ಕೊಟ್ಟ ಎಂಜಲ ಬೋರೆ ಹಣ್ಣುಗಳನ್ನು ಶ್ರೀರಾಮನು ಸಂತೋಷದಿಂದ ತಿಂದುಬಿಟ್ಟನು. ಇದನ್ನೆಲ್ಲ ನೀನು ಓದಿರುವೆಯಲ್ಲವೇ ? ದೇವರಿಗೆ ಎಲ್ಲವೂ ನಡೆಯುತ್ತದೆ. ಅದರಲ್ಲಿ ಭಾವಭಕ್ತಿಯೆಂಬ ತುಪ್ಪವನ್ನು ಸುರಿವಿರಬೇಕು. ಕಳಕಳಿಯಿಂದ ಹೃದಯ ತುಂಬಿರಬೇಕು. ಹೀಗಿದ್ದ ಪಕ್ಷದಲ್ಲಿ ಹುಣಸೇಬೀಜ ಬಿಟ್ಟು ೧೦೮ ಕಲ್ಲುಹರಳು ಗಳನ್ನು ಅರ್ಪಿಸಿದರೂ ಅವನಿಗೆ ಅವು ಕಲ್ಲುಸಕ್ಕರೆಗಿಂತಲೂ ರುಚಿಯಾಗಿ ಹತ್ತುವವು. ಪ್ರೀತಿಯಿಂದ ಕೊಟ್ಟ ಆ ಹರಳುಗಳನ್ನು ಅವನು ಚೀಪುತ್ತ ಕೂಡಬಹುದು. ನೂರು ಜನ್ಮಗಳ ವರೆಗೂ ಚೀಪುತ್ತಲಿದ್ದು ಹೇಳಬಹುದು, " ಭಕ್ತನು ಬಹಳ ಅಪ್ರತಿಮವಾದ ಮಿಠಾಯಿ ಕೊಟ್ಟಿದ್ದಾನೆ. ಕೂಡಲೆ ಒಡೆ ಯುವದಿಲ್ಲ; ಕರಗಿ ಹೋಗುವದಿಲ್ಲ. ಒಂದು ಹರಳನ್ನು ಬಾಯಲ್ಲಿ ಹಿಡಿದಿ ಟ್ಟರೆ ಒಂದು ವರ್ಷಕ್ಕೆ ಸಾಕಾಗಬಹುದು. " ಶ್ಯಾಮಾ, ದೇವರಿಗೇನು ? ಬೇಕಾದುದನ್ನು ಕೊಡಬಹುದು. ಆದರೆ ನಾವು ಯಾವುದೊಂದನ್ನು ಕೊಡು ವಾಗ್ಗೆ ಅದರಲ್ಲಿ ಹೃದಯದುಂಬಿ ಕೊಡಬೇಕಾಗುವದು. ಶ್ಯಾಮಾ, ದ್ರೌಪದಿ, ಶಬರಿಯರಷ್ಟು ಭಕ್ತಿ ನನ್ನಲ್ಲಿ ಎಲ್ಲಿಂದ ಬರಬೇಕು ? ಅಷ್ಟೊಂದು ಅಪಾರವಾದ ಭಕ್ತಿಯಿಂದ ಹುಣಸೇಬೀಜವನ್ನು ಅರ್ಪಿಸಲು ಹೇಗೆ ಸಾಧ್ಯವಾದೀತು ? ಅಷ್ಟು ಯೋಗ್ಯತೆ ನನ್ನಲ್ಲಿಲ್ಲವಪ್ಪ ! "

"ಹಾಗಾದರೆ ನೀನೇನು ಕೊಡುವದನ್ನು ನಿರ್ಧರಿಸಿರುವೆ ಹೇಳು ತಾಯಿ" ಎಂದು ನಾನು ಕೇಳಿದೆ.

" ನಾನು ೧೦೮ ಹೂಗಳನ್ನು ಏರಿಸತಕ್ಕವಳು. ಹೂವಿನಂಥ ನಿರ್ಮಲ ವಾದ ಮತ್ತು ಶುದ್ಧವಾದ ವಸ್ತು ಬೇರೊಂದಿಲ್ಲ. ಆದ್ದರಿಂದ ನಾನು ಹೂ ಏರಿಸುವೆನು. "

" ಅಮ್ಮಾ, ಎಲ್ಲ ಭಟ್ಟರೂ ನಕ್ಕಾರು ? ಅಶ್ವತ್ಥದ ಕಟ್ಟೆಯ ಮೇಲೆ ನೇರಿದ ಹೆಣ್ಣುಮಕ್ಕಳು ನಿನಗೆ ಗೇಲಿ ಮಾಡಿಯಾರು ? ಪುರೋಹಿತರು ಹೂ ತೆಗೆದುಕೊಳ್ಳಲಿಕ್ಕಿಲ್ಲ " ಎಂದು ನಾನು ನುಡಿದೆ.

" ಶ್ಯಾಮಾ, ನಾವು ಅರ್ಪಿಸಬೇಕಾದುದು ದೇವರಿಗೆ ! ಅದು ಭಟ್ಟರಿಗಲ್ಲ. ದೇವರ ಚರಣಗಳ ಮೇಲೆ ಎಲ್ಲವನ್ನೂ ಏರಿಸುವದು. ದೇವರ ಪಾದಗಳ ಮೇಲಿನ ಹೂಗಳನ್ನು ಭಟ್ಟರು ಮನಸ್ಸಿದ್ದರೆ ತೆಗೆದುಕೊಳ್ಳಬಹುದು. ಅವು ಮಹಾಪ್ರಸಾದವೆನಿಸಿದರೆ ತೆಗೆದುಕೊಳ್ಳಲಿ, ಇಲ್ಲವಾದರೆ ಅವು ದೇವರ ಚರಣಗಳ ಮೇಲೆಯೇ ಉಳಿಯುತ್ತವೆ. ಬೇರೆ ಏನನ್ನೂ ಕೊಡಲು ನಮಗೆ ಆಗದಿರುವಾಗ ಮಾಡುವದೇನಿದೆ ? ಅನುಕೂಲವಿದ್ದಷ್ಟನ್ನೇ ದೇವರಿಗೆ ಕೊಡುವದು " ಎಂದು ತಾಯಿ ಹೇಳಿದಳು.

" ಹಾಗಾದರೆ ಯಾವ ಹೂಗಳನ್ನು ಏರಿಸುವೆ ? ಅಂಥ ಒಳ್ಳೆ ಹೂಗಳಾದರೂ ಎಲ್ಲಿವೆ ನಮ್ಮಲ್ಲಿ ? ನೀನು ಸುಮ್ಮನೇ ಪತ್ರಿಗಳನ್ನೇ ಏಕೆ ಏರಿಸಬಾರದು ? ಬಿಲ್ವಪತ್ರಿ, ತುಳಸೀಪತ್ರಿ ಏರಿಸಬಹುದು. ಅಥವಾ ಕರ್ಕಿಯನ್ನು ಏರಿಸಬಹುದು. ಇವುಗಳ ಹೊರ್ತು ಪೂಜೆಯು ಪೂರ್ತಿಯಾಗಲಾರದು. ವಿಷ್ಣುವಿಗೆ ತುಳಸೀಪತ್ರಿ, ಶಂಕರನಿಗೆ ಬಿಲ್ವಪತ್ರಿ, ಗಣಪತಿಗೆ ದುರ್ವೆ, ಇವು ಹೂವಿಗಿಂತಲೂ ಹೆಚ್ಚಾಗಿ ಸೇರುತ್ತವಂತೆ. ಹೌದೇನೇ ತಾಯೀ ? " ಎಂದು ನಾನು ಕೇಳಿದೆ.

ತಾಯಿ ಹೇಳಿದಳು, " ತುಳಸೀಪತ್ರಿ, ದುರ್ವೆ ಮೊದಲಾದವನ್ನು ದೊರಕಿಸಲು ತೊಂದರೆಯಾಗುವದಿಲ್ಲ. ಅವು ಬೇಕಾದಲ್ಲಿ ಬೆಳೆಯುತ್ತವೆ. ತುಸು ನೀರು ಹಾಕಿದರೆ ಆಯಿತು. ಹೂವುಗಳಾದರೆ ನಿರ್ದಿಷ್ಟ ಕಾಲದಲ್ಲೇ ಆಗುತ್ತವೆ. ಎಲೆಗಳು ಯಾವಾಗಲೂ ಇರುತ್ತವೆ. ಗಿಡವು ಬದುಕಿರುವವರೆಗೆ ಎಲೆಗಳು ಇದ್ದೇ ಇರುತ್ತವೆ. ಎಲೆಗಳಿಗೆ ಅಷ್ಟೊಂದು ಬರಗಾಲವಿಲ್ಲ. ಅಂತೆಯೇ ಋಷಿಗಳೂ, ಸಾಧುಗಳೂ ದೇವರಿಗೆ ಎಲೆಗಳ ಮೇಲೆ ಪ್ರೀತಿಯು ಹೆಚ್ಚೆಂದು ಹೇಳಿದ್ದಾರೆ. ಭಕ್ತಿಯಿಂದ ದೇವರಿಗೆ ಅರ್ಪಿಸಲು ಅಡಚಣೆಯಾಗಬಾರದೆಂದು ಅವರು ಹಾಗೆ ಹೇಳಿದ್ದಾರೆ. ನನ್ನಂಥ ಬಡವಳಿಗೆ ಸಾದಾ ಪತ್ರಿಗಳನ್ನು ಏರಿಸಲು ನಾಚಿಕೆಯೆನಿಸಬಾರದೆಂದೂ, ಬೇರೆಯವರು ದೇವರಿಗೆ ಅರ್ಪಿಸಿದ ರೂಪಾಯಿ, ಕಾಯಿ, ಖಣ ಮೊದಲಾದವನ್ನು ಕಂಡು ಅಸೂಯೆಯುಂಟಾಗಬಾರದೆಂದೂ ದೇವರಿಗೆ ಪತ್ರಿಯು ಪ್ರೀತಿಯ ವಸ್ತುವಾಗಿದೆಯೆಂದು ಸಂತರು ಹೇಳಿದ್ದಾರೆ. ಧನಿಕನಿಗೆ ತನ್ನ ಸಂಪತ್ತಿನ ಬಗ್ಗೆ ಹೆಮ್ಮೆಯುಂಟಾಗಬಾರದೆಂಬುದೂ ಈ ಪತ್ರಪೂಜೆಯ ರಹಸ್ಯವಾಗಿದೆ. ಶ್ರೀಮಂತರು ಎಷ್ಟು

ದೊಡ್ಡ ದಕ್ಷಿಣೆಯನ್ನು ಕೊಡುವುದಾದರೂ ಮೇಲೆ ತುಳಸೀಪತ್ರವನ್ನು ಇಟ್ಟು ಕೊಡಬೇಕೆಂಬ ನಿಯಮವಿದೆ. ಶ್ರೀಮಂತನಿಗೆ ತಾನು ಬಹಳ ಕೊಟ್ಟೆನೆಂಬ ಭಾವನೆಯಾಗಬಾರದು, ಒಂದು ಪತ್ರಿಯನ್ನು ಮಾತ್ರ ಕೊಟ್ಟ ಹಾಗೆ ಭಾವನೆ ಬರಬೇಕು ಎಂಬ ಉದಾತ್ತ ವಿಚಾರದಿಂದ ಈ ನಿಯಮವನ್ನು ಮಾಡಿದ್ದಾರೆ. ಗಣಪತಿಯ ಪೂಜೆಗೆ, ಮಂಗಳಗೌರೀ ಪೂಜೆಗೆ, ಬಸವಣ್ಣನ ಪೂಜೆಗೆ ಈ ಸಾದಾ ಮತ್ತು ಸುಂದರವಾದ ದುರ್ವೆಗಳು ಅವಶ್ಯವಾಗಿ ಬೇಕು. ತುಳಸೀಪತ್ರಗಳನ್ನು ನಾನು ಮುಂದಿನ ಸಲ ಏರಿಸಬೇಕೆಂದಿದ್ದೇನೆ. "

" ಹಾಗಾದರೆ ಈಗ ಯಾವ ಹೂವನ್ನು ಏರಿಸುವೆ ? ಹೇಳುವದೇ ಇಲ್ಲವಲ್ಲ ? " ನಾನು ಆಶ್ಚರ್ಯನಾಗಿ ಕೇಳಿದೆ.

ತಾಯಿ ನುಡಿದಳು, " ನಾನು ಮೊನ್ನೆ ರಾತ್ರಿ ಅವರ ಮುಂದೆ ಹೇಳಿದ್ದೇನೆ. ಸೋಮವತಿಗೆ ಒಳ್ಳೆ ಹೂಗಳು ಬೇಕೆಂದು ತಿಳಿಸಿದ್ದೇನೆ. ಚೆಂಡು ಹೂ, ಬಿಳೀ ಸಂಪಿಗೆ ಹೂ ಇದ್ದೇ ಇವೆ. ಸುವಾಸನೆಯುಳ್ಳ ಹೂ ದೊರೆತರೆ ತೆಗೆದುಕೊಂಡು ಬರಲು ಬಿನ್ನವಿಸಿದ್ದೇನೆ. "

ನಾನು ಒಮ್ಮೆಲೆ ನುಡಿದೆ, " ಹೀಗೋ ? ಅದಕ್ಕೆಂದೇ ತಂದೆಯವರು ಊರಿಗೆ ಹೋಗಿರುವರೇನೋ ? "

" ಅಹುದು. ಅವರು ಜಾಲಗಾಂವಕ್ಕೆ ಹೋಗಿದ್ದಾರೆ. ಅಲ್ಲಿ ಬರ್ವೆಯವರ ದೊಡ್ಡ ತೋಟವಿದೆ. ಆ ತೋಟದಲ್ಲಿ ನಾಗಸಂಪಿಗೆಯ ಗಿಡಗಳಿವೆ. ಅವುಗಳ ೧೦೮ ಹೂ ದೊರೆತರೆ ತರಬೇಕೆಂದು ಅವರು ಹೋಗಿದ್ದಾರೆ. ' ನಮ್ಮಲ್ಲಿ ಹಣವಿಲ್ಲ ನಡೆದು ಶ್ರಮಪಡಲು ಕಾಲುಗಳಿವೆ ' ಎಂದು ಅವರು ಹೇಳುತ್ತಿದ್ದರು. " ಎಂದು ತಾಯಿ ಹೇಳಿದಳು.

ಗೆಳೆಯರೆ, ಸಂಪಿಗೆಯಲ್ಲಿ ಅನೇಕ ಮಾದರಿಗಳಿವೆ. ಬಿಳೀ ಸಂಪಿಗೆ, ಹಸಿರು ಸಂಪಿಗೆ, ಸುವರ್ಣ ಸಂಪಿಗೆ, ನಾಗಸಂಪಿಗೆ ಇತ್ಯಾದಿ. ಬಿಳೀ ಸಂಪಿಗೆಯನ್ನುಳಿದು ಮಿಕ್ಕೆಲ್ಲ ಸಂಪಿಗೆಗಳು ಸುಗಂಧಯುಕ್ತವಾಗಿರುತ್ತವೆ. ಸುವರ್ಣ ಸಂಪಿಗೆಯ ವಾಸನೆ ಬಹಳ ಉಗ್ರ. ನಾಗಸಂಪಿಗೆಯ ವಾಸನೆ ಮಧುರ, ನಾಲ್ಕು ಬದಿಗೆ ನಾಲ್ಕು ಶುಭ್ರವಾದ–ನಿರ್ಮಲವಾದ–ಅಗಲವಾದ ಪಕಳೆಗಳಿರುತ್ತವೆ. ಮಧ್ಯದಲ್ಲೊಂದು ಹಳದೀ ವರ್ಣದ ಪರಾಗ ಪುಂಜವಿರುತ್ತದೆ. ಈ ಬಗೆಯಿಂದ ಹೂ ಬಹಳ ಸುಂದರವಾಗಿರುತ್ತದೆ.

ನನ್ನ ತಾಯಿ, ಬಡತನವಿದ್ದರೂ ಒಂದು ಧ್ಯೇಯವಿಟ್ಟುಕೊಂಡು ಅದನ್ನು ಸಾಧಿಸುತ್ತ ಸಿದ್ಧಿಯನ್ನು ಪಡೆಯಬಹುದೆಂಬುದಕ್ಕೆ ನಿದರ್ಶನವಾಗಿದ್ದಳು. ಗಂಡನಿಗೆ ಕೊಡಲಿಕ್ಕೆ ಅಸಾಧ್ಯವಾದದ್ದನ್ನು ಬೇಡಿ, ಕಾಡಿ ಅವನನ್ನು ಅಳಿಸುತ್ತಿರಲಿಲ್ಲ ಮನಸ್ತಾಪ ಮಾಡುತ್ತಿರಲಿಲ್ಲ. ಅವನಿಗೆ ಅಸಹ್ಯವಾಗುವಂಥ, ನಾಚಿಕೆ ಬರುವಂಥ, ಗೋಣು ಕೆಳಗೆ ಹಾಕುವಂಥ ಪರಿಸ್ಥಿತಿಯನ್ನು ಅವಳು ತರುತ್ತಿರಲಿಲ್ಲ. ಅವನ ಬಳಿಯಲ್ಲಿ ಸಾದಾ ಹೂಗಳನ್ನೇ ಬೇಡುವಳು. ದೂರ ಹೋಗಿ ಕಷ್ಟಪಟ್ಟು ಒಳ್ಳೆ ಹೂಗಳನ್ನು ಆಯ್ದು ತರುವ ಧ್ಯೇಯವಾದವನ್ನು ಪತಿಗೆ ಕಲಿಸಿ ಕೊಡುತ್ತಿದ್ದಳು. ದೇವರಿಗಾಗಿ ದೇಹ ಸವೆಸಲು ಹಚ್ಚುವಂಥ ಸಾಧ್ವಿಯಾಗಿದ್ದಳು.

**ರಾತ್ರಿ : ೨೫**

## : : ಎಲ್ಲರೂ ದೇವರ ಮಕ್ಕಳು

ಸಾಯಂಕಾಲ ಸುಮಾರು ನಾಲ್ಕು ಐದು ಗಂಟೆಯಾಗಿರಬಹುದು. ಶಾಲೆಗೆ ರಜೆ ಇದ್ದುದರಿಂದ ನಾನು ಊರಲ್ಲಿಯೇ ಇದ್ದೆ. ತಾಯಿ ದೇವಸ್ಥಾನಕ್ಕೆ ದೇವರ ದರುಶನಕ್ಕೆಂದು ಹೋಗಿದ್ದಳು. ನಾನು ಮನೆಯಲ್ಲಿದ್ದೆ. ಅವಳು ಮನೆಗೆ ಬಂದ ಬಳಿಕ ನಾನು ಕೇಳಿದೆ, "ಅವ್ವಾ, ನಾನು ಹೊರಗೆ ಹೋಗಿ ಬರಲಾ ? ದೇವಧರನ ಮನೆಗೆ ಇಲ್ಲವೆ ಬನ್ಯಾ ವರವಡೇಕರನ ಮನೆಗೆ ಹೋಗುತ್ತೇನೆ. ಗೊಂಧಳೇಕರರ ಬಾಪ್ಯೂ ಇಲ್ಲಿ ಬಂದರೆ, ಬಹಳಮಾಡಿ ನಾನು ಬನ್ಯಾ ಅವರಲ್ಲಿ ಸಿಕ್ಕಬಹುದೆಂದು ಆತನಿಗೆ ಹೇಳು. ಹೋಗಲೇ ? "

ತಾಯಿ ಹೇಳಿದಳು, "ಶ್ಯಾಮಾ, ನೀನು ಹೋಗುವೆಯಂತೆ. ಆದರೆ ಮೊದಲು ನಾನೊಂದು ಕೆಲಸ ಹೇಳುತ್ತೇನೆ ಮಾಡಿ ಹೋಗು. ಬಾಳದಾದಾ ಅವರ ಕಟ್ಟೆಯ ಮುಂದೆ ಒಬ್ಬ ಹೊಲೆಯರ ಮುದುಕಿ ಕುಳಿತಿದ್ದಾಳೆ. ಅವಳು ತೀರ ಮುದುಕಿಯಾಗಿದ್ದಾಳೆ. ಅವಳ ತಲೆಯ ಮೇಲಿನ ಕಟ್ಟಿಗೆ ಹೊರೆ ಕೆಳಗೆ ಬಿದ್ದಿದೆ. ಅದನ್ನು ಅವಳಿಗೆ ಹೊರಿಸಬೇಕಾಗಿದೆ. ಆ ಹೊಲತಿ ಕಾಹಿಲೆಯವಳೂ, ಅಶಕ್ತಳೂ ಇದ್ದಂತೆ ತೋರುತ್ತದೆ. ಅವಳ ತಲೆಯ ಮೇಲೆ ಆ

ಒಜ್ಜೆಯನ್ನು ಎತ್ತಿ ಇಟ್ಟು ಮನೆಗೆ ಬಾ. ನಾನು ಸ್ನಾನಕ್ಕೆ ಹಾಕುತ್ತೇನೆ. ”

“ ಅಮ್ಮಾ, ಜನರು ನೋಡಿದರೆ ನಕ್ಕಾರು? ನನ್ನನ್ನು ಹೊಡೆದಾರು ? ಹರಿದುಕೊಂಡು ತಿನ್ನಲಿಕ್ಕೆ ಬಂದಾರು ? ನಿಜವಾಗಿಯೂ ಹೋಗಬೇಕೇನು?” ಎಂದು ನಾನು ವಿಚಾರಿಸಿದೆ.

“ ಜನರಿಗೆ ಹೇಳು, ‘ ನಾನು ಮನೆಗೆ ಹೋಗಿ ನೀರು ಹಾಕಿಸಿಕೊಳ್ಳುತ್ತೇನೆ. ಆ ಮುದುಕೆ ಬೇರೆ ಹೊಲೆಯರ ದಾರಿ ಕಾಯುತ್ತ ಎಷ್ಟೊತ್ತು ಕುಳಿತುಕೊಳ್ಳಬೇಕು ? ಕಟ್ಟಿಗೆ ಮಾರಿ ಪುನಃ ಅವಳು ತಮ್ಮ ಹೊಲೆಯರ ಕೇರಿಗೆ ಹೋಗಬೇಕು ’ ಎಂದು ಜನರಿಗೆ ಸಮಾಧಾನ ಹೇಳಿ ಮನೆಗೆ ಬಾ. ”

ತಾಯಿಯ ಅಪ್ಪಣೆ ಪಾಲಿಸುವದೊಂದು ನನಗೆ ಗೊತ್ತು. ನಾನು ಹೋದೆ. ನಾನು ಸುಮ್ಮನೆ ದಾರಿಹಿಡಿದು ಹೊರಟವರಂತೆ ಮುದುಕಿಗೆ ತೋರಿಸಿಕೊಂಡೆ. ನಾನು ಅವಳಿಗಾಗಿಯೇ ಬಂದಿದ್ದೇನೆಂದು ಅವಳಿಗೆ ತಿಳಿಯಬಾರದೆಂದು ಎಚ್ಚರಿಕೆ ವಹಿಸಿದ್ದೆ. ನಾನು ಅವಳನ್ನು ವಿಚಾರಿಸಿದೆ, “ ಏನಮ್ಮಾ, ಇದನ್ನು ತಲೆಯ ಮೇಲೆ ಹೊರಿಸಬೇಕೇನು ? ಇಗೋ ನಾನು ಹಿಡಿಯುತ್ತೇನೆ ” ಎಂದೆನ್ನುತ್ತ ನಾನು ಆ ಹೊರೆಯನ್ನು ಎತ್ತಲು ಕೈಹಚ್ಚಿದೆ.

“ ಬೇಡ ಅಣ್ಣಾ, ನೀವು ಬ್ರಾಹ್ಮಣರು. ಯಾರಾದರೂ ನೋಡಿದರೆ ನನ್ನನ್ನು ಹೊಡೆದಾರು ? ಅಪ್ಪಾ, ನೀನು ಹೋಗು. ಈಗ ಯಾರಾದರೂ ಹೊಲೆಯರು, ಮಾದರು ಬಂದಾರು ? ಅವರು ಅದನ್ನು ಎತ್ತಿ ತಲೆಯಮೇಲೆ ಇಟ್ಟಾರು ” ಎಂದು ಅವಳು ಗಾಬರಿಯಿಂದ ನನ್ನನ್ನು ಬಿನ್ನವಿಸಿಕೊಂಡಳು.

“ ಸುಮ್ಮನೆ ತೆಗೆದುಕೊಳ್ಳಮ್ಮ. ನಾನು ಮನೆಗೆ ಹೋಗಿ ಸ್ನಾನ ಮಾಡುತ್ತೇನೆ. ” ಎಂದು ಹೇಳಿ ಕೊನೆಗೆ ಆ ಹೊರೆಯನ್ನು ಅವಳ ತಲೆಯ ಮೇಲೆ ಎತ್ತಿ ಇಟ್ಟೆ.

“ ಎಲೋ ಶ್ಯಾಮಾ, ಅವಳು ಹೊಲೆಯಳಲ್ಲವೇನೋ ? ಅವಳನ್ನು ಮುಟ್ಟಿದೆಯಾ ? ಇಷ್ಟರಲ್ಲಿ ಇಂಗ್ಲೀಷು ಕಲಿತು ಸಾಹೇಬನಾದೆಯೆಂದು ಕಾಣುತ್ತದೆ. ಭಾವೂರಾಯರಿಗೆ ತಿಳಿಸಬೇಕಾಯಿತು. ” ಎಲ್ಲಿಂದಲೋ ಹಠಾತ್ತಾಗಿ ಅಲ್ಲಿಗೆ ಬಂದ ಶ್ರೀಧರಭಟ್ಟರು ಆರ್ಭಟಿಸಿದರು. ಇಷ್ಟರಲ್ಲಿ ಅವರ ಮಾತನ್ನು ಕೇಳಿ ನೆರೆಮನೆಯ ಪಟಾಂಗಣದಲ್ಲಿದ್ದ ಬೇರೊಬ್ಬ ಗೃಹಸ್ಥರು ಹೊರಗೆ ಬಂದು ನುಡಿದರು, “ ಶ್ಯಾಮಾ, ನೀನು ಬಹಳ ಅಸಡ್ಡೆಯಾಗಿ ಬಿಟ್ಟೆ

ರುವೆ. ರೀತಿ ನೀತಿಗಳಿಗೆ ತಿಲಾಂಜಲಿ ಕೊಟ್ಟಂತೆ ಕಾಣುತ್ತದೆ. ”

ನಾನು ಅವರಿಗೆ ಹೇಳಿದೆ, “ ಮನೆಗೆ ಹೋಗಿ ನಾನು ಸ್ನಾನಮಾಡತಕ್ಕ ವನಿದ್ದೇನೆ. ಹಾಗೇ ಎಲ್ಲ ಕಡೆ ಮುಟ್ಟಿಕೊಂಡು ಮೈಲಿಗೆ ಕಳೆಸುವದಿಲ್ಲ. ಪಾಪ, ಆ ಮುದುಕಿ ಎಷ್ಟೊತ್ತು ನಿಲ್ಲಬೇಕು? ಹೊಳೆ ದಾಟಿ ಹೋಗುವ ದಿದೆ ಆಕೆಗೆ. ಕತ್ತಲಾಗುವದೆಂದು ನಾನು ಸಹಾಯ ಮಾಡಿದೆ. ಖಂಡಿತ ಸ್ನಾನ ಮಾಡುತ್ತೇನೆ. ‘ ಸ್ನಾನಾತ್ ಶುದ್ಧಿಃ ’ ಎಂಬುದನ್ನು ನಾನೂ ಬಲ್ಲೆ. ” ಎಂದು ಹೇಳಿ ನಾನು ಅಲ್ಲಿಂದ ಮನೆಗೆ ಬಂದೆ.

ತಾಯಿ ಹೇಳಿದಳು, “ ಶ್ಯಾಮಾ, ಆ ಮುದುಕಿಯನ್ನು ಇಲ್ಲಿಯೇ ಕರೆದು ಬಿಡು. ಪಾಪ, ದೂರ ಹೋಗುವದಾದರೂ ಏಕೆ? ಮತ್ತೆ ಹೊತ್ತುಕೊಂಡು ಬಿದ್ದಾಳು? ನಮ್ಮಲ್ಲಿಯ ಕಟ್ಟಿಗೆಗಳೂ ತೀರಿವೆ ಹೋಗು ಕರೆ ಆಕೆಯನ್ನು ”

“ ಏಯ್ ಕಟ್ಟಿಗೆಯುವಳೇ, ಇಲ್ಲಿ ತೆಗೆದುಕೊಂಡು ಬಾರಮ್ಮ. ” ನಾನು ಕೂಗಿದೆ. ನಮ್ಮ ಬೇಲಿಯ ಬದಿಯಿಂದ ಅವಳು ಒಳಗೆ ಬಂದಳು. ಎಷ್ಟೋ ಭತ್ತ ಹಾಕುವ ಕರಾರು ಮಾಡಿ ತಾಯಿ ಆ ಹೊರೆ ಹಾಕಿಸಿಕೊಂಡಳು. ನಾನು ಭತ್ತ ತಂದು ಅವಳ ಸೆರಗಿನಲ್ಲಿ ಹಾಕಿದೆ. ತಾಯಿ ಅವಳನ್ನು ವಿಚಾರಿಸಿದಳು, “ ಮುದುಕೀ ನಿನಗೆ ಕಸಾರಿಕೆಯೇನು ? ”

“ ಹೌದು ತಾಯಿ, ಜ್ವರ ಬರುತ್ತವೆ. ಹೊಟ್ಟೆಯೊಂದು ಕೇಳಬೇಕಲ್ಲ– ದುಡಿಯಬೇಕಾಗಿದೆ.” ಎಂದು ಕಳವಳದಿಂದ ಅವಳು ಹೇಳಿದಳು.

“ ಮಧ್ಯಾನ್ಹದ ಅನ್ನ ಉಳಿದಿದೆ. ಉಣ್ಣುವೆಯೇನು ? ” ತಾಯಿ ಕೇಳಿ ದಳು.

“ ಆಗಬಹುದಮ್ಮ. ದೇವರು ನಿಮ್ಮ ಕಲ್ಯಾಣ ಮಾಡಲಿ. ಬಡವರ ತಾಯಿ ಜಗತ್ತಿನಲ್ಲಿ ಯಾರೂ ಇಲ್ಲ ನೋಡಿ. ” ದೈನ್ಯದಿಂದ ಆ ಮುದುಕಿ ನುಡಿ ದಳು.

ತಾಯಿ ಅನ್ನ ತಂದು ಒಂದು ಬಾಳೆ ಎಲೆಯ ಮೇಲೆ ಬಡಿಸಿದಳು. ಅಂಗ ಳದ ತುದಿಯಲ್ಲಿ ಕುಳಿತು ಅವಳು ಅದನ್ನು ತಿಂದಳು.

“ ಅಣ್ಣಾ, ಒಂದಿಷ್ಟು ನೀರು ಹನಿಸುವೆಯಾ ? ” ಅವಳು ನನ್ನನ್ನು ಕೇಳಿದಳು.

ನಾನು ನೀರು ತಂದು ಅವಳ ಬೊಗಸೆಯಲ್ಲಿ ಹಾಕಿದೆನು. ಅವಳು

ಸಾಕಾಗುವಷ್ಟು ಕುಡಿದು ಕೃತಜ್ಞತೆಯನ್ನು ಅರ್ಪಿಸಿ ಹೊರಟುಹೋದಳು.

"ನಡೆ ಕಂದಾ, ಸ್ನಾನ ಮುಗಿಸಿಕೋ." ತಾಯಿ ಹೇಳಿದಳು. ಬಾಳೆ ಗಿಡದ ಹತ್ತರ ಕುಳ್ಳಿರಿಸಿ ನನಗೆ ಮೇಲಿನಿಂದ ನೀರು ಹಾಕಿದಳು. ಮೈಯೆಲ್ಲ ಪೂರ್ಣ ಒದ್ದೆಯಾದ ಬಳಿಕ ನಾನು ಬೇರೊಂದು ಕಲ್ಲ ಮೇಲೆ ಕುಳಿತು ಉಳಿದ ನೀರನ್ನು ಮೈಮೇಲೆ ಹೊಯ್ದುಕೊಂಡೆ. ಸ್ನಾನ ಮಾಡಿ ನಾನು ಮನೆಯೊಳಗೆ ಹೋದೆ.

ನಾನು ತಾಯಿಗೆ ಹೇಳಿದೆ, "ಅಮ್ಮಾ, ಹಿಂದೊಮ್ಮೆ ಖೇರರ ಮನೆಯಲ್ಲಿ ಭೋಜನ ಸಮಾರಂಭವಾಯಿತಲ್ಲ, ಆ ದಿವಸ ಹೀಗಾಯಿತು ನೋಡು, ಬಡ ಹೊಲತಿಯೊಬ್ಬಳು ಮಂಟಪದ ಬಾಗಿಲಲ್ಲಿ ಭಿಕ್ಷೆ ಬೇಡುತ್ತ ನಿಂತಿದ್ದಳು. ನಾವು ಮಂಟಪದಲ್ಲಿ ಊಟ ಮಾಡುತ್ತಿದ್ದೆವು. ಹೋಳಿಗೆಯನ್ನು ತಿನ್ನುತ್ತಿದ್ದೆವು. ಆಗ್ರಹವು ನಡೆದಿತ್ತು. ಭಾಸ್ಕರ ಭಟ್ಟರಿಗಂತೂ ಒತ್ತಾಯ ಮಾಡಿ ಮಾಡಿ ನೀಡುತ್ತಿದ್ದರು. ಅವರು ಸಿಟ್ಟಿಗೆದ್ದು ಎದ್ದು ಬಿಡತಕ್ಕವರಿದ್ದರು. ಆದರೆ ಆಪಟಿಯವರು ಅವರನ್ನು ಕುಳ್ಳಿರಿಸಿದರು. ಹೊರಗೆ ಕೂಗಿಕೊಳ್ಳುತ್ತಿದ್ದ ಆ ಹೊಲೆಯರವಳಿಗೆ ಮಾತ್ರ ಯಾರೂ ಏನನ್ನೂ ನೀಡಲಿಲ್ಲ. ಅವಳು ಬಿಸಿಲಲ್ಲಿ ಬಳಲುತ್ತ ನಿಂತುಕೊಂಡಿದ್ದಳು. ಪಂಕ್ತಿಯಲ್ಲಿ ಸೆಕೆಯಾಗಬಾರದೆಂದು ಬೀಸಣಿಕೆಯನ್ನು ನೀರಲ್ಲಿ ಅದ್ದಿ ಗಾಳಿ ಹಾಕುತ್ತಿದ್ದರು. ಬಾಳದ ಬೇರು ಕೂಡಿಸಿದಂಥ ತಣ್ಣನ್ನ ನೀರನ್ನು ಲೋಟಗಳಲ್ಲಿ ಸುರಿಯುತ್ತಿದ್ದರು. ಆ ಮುದುಕಿ ಮಾತ್ರ ತುತ್ತು ಅನ್ನಾ ನೀಡ್ರಿ ರಾಯ್ರೇ' ಎಂದು ಕಿರಿಚಿಕೊಳ್ಳುತ್ತಿದ್ದಳು. ಅಮ್ಮಾ, ಅವಳಿಗೆ ಒಂದು ತುತ್ತು ಅನ್ನ, ಗುಟುಕು ನೀರು ಯಾರೂ ಕೊಡಲಿಲ್ಲ. ಇಷ್ಟೇ ಅಲ್ಲದೆ ಒಬ್ಬ ಪುಣ್ಯಾತ್ಮರು–ನನಗೆ ಅವರ ಹೆಸರು ಗೊತ್ತಿಲ್ಲ–ಅವರು ಮುಂಬಯಿಯಲ್ಲಿ ನೌಕರಿ ಮಾಡುತ್ತಾರಂತೆ. ಅವರು ಪೀತಾಂಬರ ಉಟ್ಟುಕೊಂಡಿದ್ದರು. ಅವರು ಬಡಿಸುತ್ತಿದ್ದರು—ಅವರು ಒಮ್ಮೆಲೆ ಮಂಟಪದ ಹೊರಗಡೆ ಹೋಗಿ ಆ ಮುದುಕಿಯನ್ನು ಸಿಕ್ಕಾಪಟ್ಟೆ ಗದ್ದರಿಸುತ್ತ ನುಡಿದರು, "ಇಂಥ ಹೊತ್ತಿನಲ್ಲಿ ಭಿಕ್ಷೆ ಬೇಡಲು ನಾಚಿಕೆಯಾಗುವದಿಲ್ಲವೇ? ಇನ್ನೂ ಊಟ ಕೂಡ ಆಗಿಲ್ಲ. ಊಟವಾದ ಮೇಲೆ ಬಾ, ಎಂಜಲೆಲೆ ಬೇಡಲಿಕ್ಕೆ. ಒಳಗೆ ಬ್ರಾಹ್ಮಣರು ಊಟ ಮಾಡುತ್ತಿರುವಾಗ ಕಿರುಚಿಕೊಳ್ಳುತ್ತಿದ್ದಾಳೆ ಹೊಲೆಮುಂಡೆ. ಇತ್ತೀಚಿಗೆ ನೀವು ಬಹಳ ಸೊಕ್ಕಿಗೆ ಬಂದಿದ್ದೀರಿ. ಹೊರಡು ಇಲ್ಲಿಂದ. ಇಲ್ಲವಾದರೆ ಈ

ಮೆಟ್ಟನ್ನು ತೂರಿಬಿಟ್ಟೇನು ನಿನ್ನ ಮೈಮೇಲೆ. ” ಎಂದು ನುಡಿದು ಆ ಪೀತಾಂಬರಧಾರಿ ಮನುಷ್ಯನು ಮೆಟ್ಟನ್ನು ಕೈಯಲ್ಲಿ ಎತ್ತಿಕೊಂಡೇ ಬಿಟ್ಟನು ನೋಡಮ್ಮಾ. ‘ ಹೊಡೀಬೇಡ್ರಿ ರಾಯ್ರೀ, ಹೊಡೀಬೇಡ್ರಿ. ನಾನು ಹೋಗುತ್ತೇನೆ ’ ಎನ್ನುತ್ತ ಹೊಲೆಯರವಳು ಹೊರಟು ಹೋದಳು. ತಾಯೀ, ಮುಂಬಯಿಯಲ್ಲಿ ಇವರು ಇರಾಣೀ ಹೋಟಲುಗಳಲ್ಲಿ ಬೇಕಾದ್ದನ್ನು ತಿನ್ನುತ್ತಾರೆ. ಬೇರೆಯವರ ಮೆಟ್ಟನ್ನು ಒರಸುತ್ತಾರೆ. ಈ ಊರಲ್ಲಿ ಮಾತ್ರ ದೊಡ್ಡ ಮನುಷ್ಯರಂತೆ ಠೀವಿ ತೋರಿಸುತ್ತಾರೆ. ಇದೇ ಈಗ ಆ ಮುದುಕಿ ಹೇಳಿದಳಲ್ಲಮ್ಮಾ, ‘ ಬಡವರಿಗೆ ಯಾರೂ ಇಲ್ಲ ’ ವೆಂದು. ಆ ಮಾತು ತೀರ ಸತ್ಯವಾಗಿದೆ ನೋಡು. ಅಮ್ಮಾ, ನಾಳೆ ಒಬ್ಬ ಹೊಲೆಯರ ಹುಡುಗನು ಮಾಮಲೇದಾರನಾಗಿ ಬಂದರೆ, ಅವನಿಗೆ ಈ ಮಡಿವಂತರು ತಮ್ಮ ಮನೆಯಲ್ಲಿ ಪಕ್ವಾನ್ನದೂಟ ಹಾಕಬಹುದು. ತಾಂಬೂಲ ಸಮಾರಂಭ ಮಾಡಿ ಪನ್ನೀರು ಚಿಮುಕಿಸಬಹುದು. ಕೊರಳಲ್ಲಿ ಹೂಮಾಲೆ ಹಾಕಬಹುದು. ಅಮ್ಮಾ, ದುಡ್ಡು ಮತ್ತು ಅಧಿಕಾರ ಇವುಗಳಿಗೆ ನಮಸ್ಕಾರ ಹಾಕುವದೆಂದರೇ ಧರ್ಮವೇನು ? ಇದೇ ಅವರ ದೇವರೇನು ? ಕೈಯಲ್ಲಿ ಮೆಟ್ಟನ್ನು ಹಿಡಿದರೆ ಅವನ ಪೀತಾಂಬರಕ್ಕೆ ಮೈಲಿಗೆಯಿಲ್ಲ. ಕಾಲಲ್ಲಿ ಜೋಡನ್ನು ಮೆಟ್ಟಿಕೊಂಡು ಕಂಕುಳಲ್ಲಿ ಮಡಿಯನ್ನೋ, ಪೀತಾಂಬರವನ್ನೋ ತೆಗೆದುಕೊಂಡು ಹೋಗಲಿಕ್ಕೆ ಬರುವದಂತೆ. ಆದರೆ ಯಾರು ಈ ಮೆಟ್ಟನ್ನು ಮೆಟ್ಟಲಿಕ್ಕೆಂದು ತಯಾರಿಸಿ ಕೊಟ್ಟರೋ ಆ ಜನರು ಮಾತ್ರ ಹೊಲಸಂತೆ. ಅವನ ನೆರಳು ಕೂಡ ಅಸಹನೀಯ ! ತಾಯಿ, ಇದಕ್ಕೇನೆನ್ನಬೇಕು ? ಇದಕ್ಕೆ ಮಡಿ ಎನ್ನುವರೇ ? ಇದು ಧರ್ಮವೇ ? ಇದು ದೇವರಿಗೆ ಮೆಚ್ಚುವದೇ ? ದುಡ್ಡು ಇವರ ದೇವರಲ್ಲವೇ ? ”

ತಾಯಿ ಹೇಳಿದಳು, “ ಮಗೂ, ಜಗತ್ತಿನಲ್ಲಿ ಎಲ್ಲರೂ ಹಣ ಮತ್ತು ಅಧಿಕಾರಕ್ಕೇ ಮರ್ಯಾದೆ ಕೊಡುತ್ತಿದ್ದಾರೆ. ಆ ಪಂಢರಿನಾಥರ ಕಥೆ ಗೊತ್ತಿದೆಯೇನು ? ಅವರು ಬಡವರಾಗಿದ್ದರು. ಆಗ ಎಲ್ಲರೂ ಅವರಿಗೆ ಪಂಡ್ಯಾ ಪಂಡ್ಯಾ ಎಂದು ಕರೆಯುತ್ತಿದ್ದರು. ಮುಂದೆ ಅವರು ಪಟ್ಟಣಕ್ಕೆ ಹೋಗಿ ಕಲಿತು ವಕೀಲರಾದರು. ಅವರು ವರ್‍ಹಾಡ ಮತ್ತು ಖಾನದೇಶದಲ್ಲಿ ಲಕ್ಷಾವಧಿ ಹಣ ಗಳಿಸಿದರು. ಆ ಮೇಲೆ ತಮ್ಮೂರಿಗೆ ಒಂದು ಸಲ ಬಂದಿದ್ದರು. ಸೋಮೇಶ್ವರದ ಉತ್ಸವವನ್ನು ಒಳ್ಳೇ ವೈಭವದಿಂದ ಜರುಗಿಸಿದರು. ಅಂದಿನಿಂದ ಜನರು

ಅವರಿಗೆ ' ಪಂಢರಿನಾಥರಾಯರು ' ಎಂದೆನ್ನಹತ್ತಿದರು. ಒಮ್ಮೆ ಅವರು ಯಾರದೋ ಮನೆಗೆ ಹೋದಾಗ ಕುಳಿತುಕೊಳ್ಳಲಿಕ್ಕೆ ಮಣೆ ಹಾಕಿದ್ದರಂತೆ. ಆ ಮಣೆಯನ್ನು ಅವರು ದೂರ ಸರಿಸಿ ಹೇಳಿದರು, " ರಾಯರೇ, ಈ ಮಣೆಯನ್ನು ನೀವು ನನಗೆ ಹಾಕಿಲ್ಲ; ನನ್ನ ದುಡ್ಡನ್ನು ನೋಡಿ ಹಾಕಿದ್ದೀರಿ. ನನ್ನ ಕೈಯಲ್ಲಿಯ ಬಂಗಾರ ಕಡೆಯನ್ನು ಇದರ ಮೇಲಿಟ್ಟು ನಾನು ಕೆಳಗೆ ಕುಳಿತುಕೊಳ್ಳುತ್ತೇನೆ. ನೀವು ದುಡ್ಡಿಗೆ ಮಾನ ಕೊಡುತ್ತೀರಿ, ಮನುಷ್ಯನಿಗಲ್ಲ ! ಮನುಷ್ಯನ ಹೃದಯದಲ್ಲಿರುವ ದೇವರಿಗೆ ಅಥವಾ ಘನತೆಗೆ ನೀವು ಮಾನ ಕೊಡುವದಿಲ್ಲ. ನಿಮಗೆ ಈ ಬಿಳೀ, ಹಳದೀ ನಾಣ್ಯಗಳು ಮತ್ತು ಕಾಗದದ ನೋಟುಗಳು ಇವೇ ಪೂಜ್ಯವಾಗಿವೆ. " ಶ್ಯಾಮಾ, ಹೀಗೆ ಅವರು ಸ್ಪಷ್ಟವಾಗಿ ಹೇಳಿದರಂತೆ. ಹೊಲೆಯರ ಹತ್ತಿರ ದುಡ್ಡಿಲ್ಲವೆಂದು ಅವರನ್ನು ನಾವು ದೂರ ಇರಿಸುತ್ತೇವೆ. ಅವರೇ ನಾಳೆ ಶ್ರೀಮಂತರಾದರೆ ಅವರೆದುರಿನಲ್ಲಿ ನಾವೇ ಹೊಲೆಯರಂತಾಗುತ್ತೇವೆ. ಶ್ಯಾಮಾ, ಹೊಲೆಯರೇ ಇರಲಿ, ಮಾದಿಗರೇ ಇರಲಿ ಎಲ್ಲರಿಗೂ ಸಹಾಯ ಮಾಡಬೇಕು. ಮನೆಗೆ ಬಂದು ಜಳಕ ಮಾಡಬೇಕು. ಯಾಕಂದರೆ ನಾವು ಸಮಾಜದಲ್ಲಿ ಹೊಂದಿಕೊಂಡು ಇರಬೇಕಾಗಿದೆ. ಅವರು ಪಾಪಿಗಳಿದ್ದಾರೆಂದು ಮೈಲಿಗೆಯಾಗುವದೆಂದು ನಾನು ಹೇಳುವದಿಲ್ಲ. ಸಮಾಜದ ನಿಂದೆಯನ್ನು ಎದುರಿಸುವಷ್ಟು ಸಾಮರ್ಥ್ಯ ನಮ್ಮಲ್ಲಿಲ್ಲವೆಂದು ಮೈಲಿಗೆಯೆಂದು ಆಚರಿಸಬೇಕಾಗಿದೆ. ಹಾಗೆ ನೋಡಿದರೆ ನಾವೆಲ್ಲರೂ ಪಾಪಿಗಳೇ ಆಗಿದ್ದೇವೆ. "

" ನಿಜವಾಗಿ ಪಾಪದಿಂದ ಮುಕ್ತರಾದವರು ಯಾರಿದ್ದಾರೆ ? ನಾನು ಪಾಪ ರಹಿತನೆಂದು ಯಾವನು ತಾನೆ ಎದೆತಟ್ಟಿ ಹೇಳಬಲ್ಲ ? ತಮ್ಮ ಬೆವರನ್ನು ಸುರಿಸಿ ಶ್ರಮಪಟ್ಟು ಪ್ರಾಮಾಣಿಕತನದಿಂದ ರೊಟ್ಟಿಯನ್ನು ಸಂಪಾದಿಸುವ ಹೊಲೆ–ಮಾದಿಗರೇ ಇನ್ನೂ ಪುಣ್ಯವಂತರಾಗಿದ್ದಾರೆನ್ನಬಹುದು. ಅಲ್ಲವೇ ನಮ್ಮಾ ? " ನಾನು ಕೇಳಿದೆ.

" ಶ್ಯಾಮಾ, ನಿಮ್ಮ ಆ ಕಕ್ಕನ ಹೊಲವಿದೆಯಲ್ಲ ಅದು ಮೊದಲು ಹೊಲೆಯನೊಬ್ಬನ ಹೊಲವೇ ಆಗಿತ್ತು. ನನಗೆ ಗೊತ್ತಿದೆ. ಅವನಿಗೇನೋ ತುಸು ಸಾಲ ಕೊಡಲಾಗಿತ್ತು. ಒಂದಕ್ಕೆ ನಾಲ್ಕು ಬರೆಸಿಕೊಂಡು ಆ ಹೊಲವನ್ನು ದಕ್ಕಿಸಿಕೊಂಡದ್ದಾಗಿದೆ. ಮಗೂ, ದೇವರ ಎದುರಿಗೆ ನಾವು ಪಾಪಿಗಳಾಗಿ ನಿಲ್ಲಬೇಕಾಗಿದೆ. ಮುಖ ಕೆಳಗೆ ಮಾಡಿಕೊಂಡು ನಿಲ್ಲಬೇಕಾಗಿದೆ. "

ತಾಯಿ ಖಿನ್ನ ಮನಸ್ಕಳಾಗಿ ನುಡಿದಳು.

"ಅಮ್ಮಾ, ದಾಮಾಜಿಯ ಸಲುವಾಗಿ ದೇವರು ವಿಠ್ಠಲನೆಂಬ ಹೊಲೆಯ ನಾಗಿರಲಿಲ್ಲವೇ ? ಹೊಲೆಯರೆಂದರೆ ಹೇಸಿಗಳು, ಪಾಪಿಗಳು ಎಂದು ಅನಿಸಿದ್ದರೆ ಅವನು ಈ ವೇಷ ಧರಿಸುತ್ತಿದ್ದನೇ ?" ನಾನು ಕೇಳಿದೆ.

ತಾಯಿ ಹೇಳಿದಳು, "ದೇವರಿಗೆ ಎಲ್ಲ ವೇಷಗಳೂ ಪವಿತ್ರವಾಗಿಯೇ ಇರುತ್ತವೆ. ಮೀನ, ಮೊಸಳೆ, ಹಂದಿ, ಸಿಂಹ ಮೊದಲಾದ ಎಲ್ಲ ಅವತಾರಗಳನ್ನೂ ತಾಳಿದ್ದಾನೆ. ಎಲ್ಲ ಅವತಾರಗಳೂ ಪವಿತ್ರವಾದವುಗಳೆಂದೇ ಇದರ ಅರ್ಥ. ದೇವರು ಬ್ರಾಹ್ಮಣರ ಶರೀರದಲ್ಲಿಯೂ ಇದ್ದಾನೆ, ಮೀನಿನ ಶರೀರದಲ್ಲಿಯೂ ಇದ್ದಾನೆ, ಹೊಲೆಯನ ಶರೀರದಲ್ಲಿಯೂ ಇದ್ದಾನೆ. ದೇವರು ಗಜೇಂದ್ರನಿಗಾಗಿ ಧಾವಿಸಿ ಕುದುರೆಗಳನ್ನು ತಿಕ್ಕುತ್ತಾನೆ. ಆಕಳನ್ನು ಮೇಯಿಸುತ್ತಾನೆ. ಅವನಿಗೆ ಶಬರಿಯೂ ಬೇಕು, ಕುಬ್ಜಳೂ ಬೇಕು. ಜಟಾಯು ಪಕ್ಷಿಯನ್ನೂ ಪ್ರೀತಿಸುತ್ತಾನೆ, ಹನುಮಂತನನ್ನೂ ಪ್ರೀತಿಸುತ್ತಾನೆ. ಶ್ಯಾಮಾ, ದೇವರಿಗೆ ಎಲ್ಲರೂ ಪ್ರೀತಿಯುವರೇ. ಯಾಕೆಂದರೆ ಎಲ್ಲರೂ ದೇವರ ಮಕ್ಕಳೇ ! ನೀನು ನನ್ನವನೆಂದು ನನಗೆ ಪ್ರೀತಿ. ಹಾಗೆಯೇ ಎಲ್ಲರೂ ದೇವರ ಮಕ್ಕಳೆಂದು ಅವನಿಗೆ ಎಲ್ಲರ ಮೇಲೆ ಪ್ರೀತಿ. ನನಗೆ ಮೆಚ್ಚಿಗೆಯಾಗುವಂಥ ಕೆಲಸವನ್ನು ನೀನು ಮಾಡುತ್ತೀ. ಅದೇ ರೀತಿ ದೇವರಿಗೆ ಮೆಚ್ಚಿಗೆಯಾಗುವಂಥ ಕೆಲಸವನ್ನು ಎಲ್ಲರೂ ಮಾಡಲೆತ್ನಿಸಬೇಕು. ಆದರೆ ಶ್ಯಾಮಾ, ತನ್ನ ತಾಯಿ ತಂದೆ, ಅಕ್ಕ ತಂಗಿ, ಅಣ್ಣ ತಮ್ಮ ಇವರನ್ನು ಕೂಡ ಪ್ರೀತಿ ಮಾಡದ ಜನರು ಹೊಲೆ-ಮಾದರನ್ನು ಪ್ರೀತಿಸಲು ಸಾಧ್ಯವೇ ? ಮೊದಲು ಮನೆಜನರನ್ನು ಪ್ರೀತಿಸಿರಿ ಅಂದರೆ ಆಮೇಲೆ ಏಕನಾಥನಂತೆ ಹೊಲೆಯರ ಹುಡುಗಿಯನ್ನು ಕೂಡ ಪ್ರೀತಿಯಿಂದ ಕಾಣುವ ಸಾಮರ್ಥ್ಯ ಬರಬಹುದು. ಪ್ರೇಮವು ಹೃದಯದಲ್ಲಿ ಹಿಡಿಸಲಾರದಷ್ಟು ಆಯಿತೆಂದರೆ ತಾನಾಗಿ ಅದು ಬೇರೆಯವರ ಕಡೆಗೆ ಧಾವಿಸುತ್ತದೆ. ಶ್ಯಾಮಾ, ನಾನು ನಿನಗೇನು ಹೇಳುವವಳು ? ದೇವರು ಎಲ್ಲೆಡೆಯಲ್ಲಿಯೂ ಇರುವನೆಂದು ಪುರಾಣಗಳು ಸಾರುತ್ತಿವೆ. ಅಜ್ಞಳಾದ ನನಗೇನು ತಿಳಿಯ ಬಲ್ಲದು ? ದೊಡ್ಡವನಾದ ಮೇಲೆ ನಿನಗೆಲ್ಲವೂ ತಿಳಿಯುತ್ತದೆ."

ತಾಯಿ ನನ್ನ ಜೊತೆಗೆ ಮಾತನಾಡುತ್ತಿದ್ದಂತೆ ಕತ್ತಲಾಯಿತು. ದೀಪ ಹಚ್ಚಲಿಕ್ಕೆ ತಾಯಿ ಒಳಗೆ ಹೋದಳು. "ಶ್ಯಾಮಾ, ಶ್ಯಾಮಾ" ಎಂದು

ಹೊರಗಡೆ ಯಾರೋ ಕೂಗಿದರು. ನಾನು ಹೊರಟುಹೋದೆ.

ಗೆಳೆಯರೆ, ನಾವು ಹುರುಳಿಲ್ಲದ ಈ ಶ್ರೇಷ್ಠ–ಕನಿಷ್ಟವೆಂಬ, ಉಚ್ಚ-ನೀಚವೆಂಬ ವಾದವನ್ನು ಮೆಟ್ಟಿಬಿಡೋಣ. ಸಮಾಜ ಸೇವೆ ಮಾಡುವ ಪ್ರತಿಯೊಬ್ಬನೂ ಪವಿತ್ರನಾಗಿದ್ದಾನೆಂದು ಭಾವಿಸೋಣ. ಎಲ್ಲರೂ ದೇವರ ಮಕ್ಕಳೆಂಬುದನ್ನು ಯಾವಾಗಲೂ ಸ್ಮರಿಸೋಣ!

ರಾತ್ರಿ : ೨೬

## : : ಬಂಧುಪ್ರೇಮದ ಪಾಠ

ಮೇ ತಿಂಗಳ ರಜೆಯಾಗಿತ್ತು. ನಾವು ಅಣ್ಣತಮ್ಮಂದಿರೆಲ್ಲ ಮನೆಯಲ್ಲಿ ಕಲೆತಿದ್ದೆವು. ಪುಣೆಯ ಮಾವನ ಕಡೆಗೆ ಕಲಿಯಲಿಕ್ಕಿದ್ದ ನನ್ನ ಅಣ್ಣನೂ ಬಂದಿದ್ದನು. ಅವನು ಮೈಲಿಬೇನೆಯಿಂದ ಹಾಸಿಗೆ ಹಿಡಿದಿದ್ದನು. ಮೈತುಂಬ ಮೈಲಿ ಎದ್ದಿದ್ದವು. ಒಂದು ಎಳ್ಳುಕಾಳಷ್ಟು ಸ್ಥಳ ಕೂಡ ಖಾಲಿ ಬಿದ್ದಿರಲಿಲ್ಲ. ಬಹಳ ಪ್ರಯಾಸದಿಂದಲೇ ಅವನು ಬದುಕಿದ್ದ. ನಾನು ಸಮೀಪದ ದಾಪೋಲಿಯಲ್ಲಿಯೇ ಕಲಿಯುತ್ತಿದ್ದೆನಾದ್ದರಿಂದ ಮೇಲಿಂದ ಮೇಲೆ ಮನೆಗೆ ಬಂದು ಹೋಗುತ್ತಿದ್ದೆ. ಆದರೆ ನಮ್ಮಣ್ಣನು ಎರಡು ವರುಷಕ್ಕೊಮ್ಮೆ ಮನೆಗೆ ಬರುತ್ತಿದ್ದ. ಆಗ ಎರಡು ವರ್ಷಗಳ ನಂತರ ಮನೆಗೆ ಬಂದಿದ್ದ. ಆಗ ತಾನೆ ಬೇನೆಯಿಂದ ಎದ್ದು ಅಶಕ್ತನಾಗಿ ಮನೆಗೆ ಬಂದಿದ್ದ.

ಮೈಲಿ ಬೇನೆಯಿಂದ ಎದ್ದ ಮನುಷ್ಯನ ಮೈಯಲ್ಲಿ ಉಷ್ಣತೆ ಹೆಚ್ಚಾಗಿ ಇರುತ್ತದೆ. ಮೈಯೆಲ್ಲ ಉರಿಯುತ್ತದೆ. ಯಾವುದೊಂದು ತಂಪು ಪದಾರ್ಥ ಸೇವಿಸುವದು ಅಗತ್ಯವಿರುತ್ತದೆ. ಗುಲಕಂದವು ಇದಕ್ಕೆ ಶ್ರೇಷ್ಠವಾದದ್ದು. ಆದರೆ ಬಡವರಾದ ನಮ್ಮಲ್ಲಿ ಗುಲಕಂದ ಕೊಳ್ಳಲು ದುಡ್ಡೆಲ್ಲಿ ಬರಬೇಕು? ಬಡವರಿಗೆ ಅನುಕೂಲವಾದ ಒಂದು ಉಪಾಯವನ್ನೇ ನಮ್ಮ ತಾಯಿ ಹುಡುಕಿ ತೆಗೆದಳು.

ಉಳ್ಳೀಗಡ್ಡಿ ಬಹಳ ತಂಪು. ಅದು ಬಹಳ ಅಗ್ಗ. ಪೌಷ್ಟಿಕವಾಗಿರುತ್ತದೆ. ಉಳ್ಳೀಗಡ್ಡಿಯಲ್ಲಿ ಫಾಸ್ಫರಸ್ ಇದೆಯೆಂದು ಡಾಕ್ಟರು ಹೇಳುತ್ತಾರೆ. ನೆರೆಮನೆ

ಯಲ್ಲಿದ್ದಾಗ ಉಳ್ಳೇಗಡ್ಡಿಯನ್ನು ನಾವು ರಾಷ್ಟ್ರೀಯ ಆಹಾರವೆಂದು ಹೇಳುತ್ತಿದ್ದೆವು. ಯಾವಾಗಲೂ ಅಲ್ಲಿ ಅದು ದೊರೆಯುತ್ತಿತ್ತು ರೊಟ್ಟಿ-ಉಳ್ಳೇಗಡ್ಡಿಗಳನ್ನು ತಿನ್ನುತ್ತಿದ್ದ ಮಾವಳೆ ಜನರ ಪರಾಕ್ರಮವೇನು ಸಾಮಾನ್ಯವೇ? ಹಗಲಿರುಳು ಶಾರೀರಿಕ ಶ್ರಮವನ್ನು ಮಾಡುವವರಿಗೆ ಉಳ್ಳೇಗಡ್ಡಿಯು ಅಪಾಯ ಮಾಡಲಾರದು. ಕೇವಲ ಬೌದ್ಧಿಕ ಶ್ರಮವನ್ನು ಮಾಡುವವರಿಗೆ ಮಾತ್ರ ಅದು ಒಳಿತಾದದ್ದಲ್ಲ.

ಉಳ್ಳೇಗಡ್ಡಿಯ ಗುಣಧರ್ಮವೇನೇ ಇರಲಿ. ನನ್ನ ತಾಯಿ ಉಳ್ಳೇಗಡ್ಡಿಗಳನ್ನು ಉಗಿಯ ಮೇಲೆ ಅರ್ಧಮರ್ಧ ಬೇಯಿಸಿ ಮೇಲಿನ ಸಿಪ್ಪೆಯನ್ನು ತೆಗೆದು ಬೆಲ್ಲದ ಪಾಕದಲ್ಲಿ ಹಾಕಿದಳು. ಈ ಪಾಕವು ತಂಪಾಗಿರುತ್ತದೆಂದು ಹೇಳುತ್ತಾರೆ. ತಾಯಿಯು ನನ್ನ ಅಣ್ಣನಿಗೆ ದಿನಾಲು ಪಾಕದಿಂದ ತೆಗೆದು ಎರಡು ಮೂರು ಉಳ್ಳೇಗಡ್ಡಿಯನ್ನು ತಿನ್ನಲಿಕ್ಕೆ ಕೊಡುತ್ತಿದ್ದಳು.

ನಾನು ಒಂದು ದಿನ ತಾಯಿಗೆ ಹೇಳಿದೆ, "ಅವ್ವಾ, ನನಗೆ ಮಾತ್ರ ಪಾಕದ ಉಳ್ಳೇಗಡ್ಡಿ ಕೊಡುವದಿಲ್ಲ ನಾನು ನಿನ್ನ ಪ್ರೀತಿಯವನಲ್ಲವೇ? ಅಣ್ಣನಿಗೆ ಮಾತ್ರ ಉಳ್ಳೇಗಡ್ಡಿ ಪಾಕ, ಅನ್ನದ ಮೇಲೆ ತುಪ್ಪ, ಮೊಸರು. ನಮಗೆ ಏನೂ ಇಲ್ಲ ನಾವು ಸಮೀಪದವರಲ್ಲವೇ? ಮತ್ತೆ ಮತ್ತೆ ಮನೆಗೆ ಬರುತ್ತೇವೆ. ನಮ್ಮನ್ಯಾರು ಕೇಳಬೇಕು? ಹತ್ತಿರವಿದ್ದವರನ್ನು ಹತ್ತಿಕ್ಕಿ ಬಿಡುವದು. ದೂರದ ಗುಡ್ಡ ಕಣ್ಣಿಗೆ ಚಂದ. ಭಾರೀ ಆಯ್ತಪ್ಪಾ ಅಣ್ಣನ ಸರಬರಾಯಿ! ಅಣ್ಣನ ಪುಣ್ಯವೇ ದೊಡ್ಡದು. ನನಗಾದರೂ ಮೈಲಿ ಬೇನೆ ಬರಬಾರದಿತ್ತೇ? ಆಕಳ ತುಪ್ಪ, ಹಾಲು, ಮೊಸರು, ಉಳ್ಳೇಗಡ್ಡಿ ಎಲ್ಲವೂ ದೊರೆಯುತ್ತಿತ್ತು."

ನನ್ನ ಮಾತು ಕೇಳಿ ಅಣ್ಣನಿಗೆ ಕಳವಳವಾಯಿತು. ಅವನು ದೊಡ್ಡ ಮನಸ್ಸಿನವನಾಗಿದ್ದ. ಕಲಿಯುವದಕ್ಕಾಗಿ ಬಹಳ ಕಷ್ಟಪಡಬೇಕಾಗಿತ್ತು ಅವನಿಗೆ. ಎಲ್ಲವನ್ನೂ ಶಾಂತರೀತಿಯಿಂದ ಸಹಿಸಿಕೊಳ್ಳುತ್ತಿದ್ದ. ನನ್ನಂತೆ ಹಟಮಾರಿಯೂ ದುಷ್ಟನೂ ಆಗಿರಲಿಲ್ಲ. ಶಾಂತನೂ, ಗಂಭೀರನೂ ಆಗಿದ್ದನು. ವಡವಾನಲದಿಂದ ಸಮುದ್ರವು ಒಳಗೊಳಗೇ ದಹಿಸುವಂತೆ ಅವನು ದುಃಖ ಹಾಗೂ ಅಪಮಾನಗಳಿಂದ ನವೆಯುತ್ತಿದ್ದನು. ಆದರೆ ಮನದಲ್ಲಿಯ ದುಃಖವನ್ನು ಯಾರ ಎದುರಿನಲ್ಲಿಯೂ ಬಾಯಿಬಿಟ್ಟು ಹೇಳುತ್ತಿರಲಿಲ್ಲ. ತನ್ನ ದುಃಖ

ಮತ್ತು ಕರುಣ ಕಥೆಯನ್ನು ಬೇರೆಯವರಿಗೆ ಹೇಳಿ ಅವರನ್ನೇಕೆ ಮರುಗಿಸ ಬೇಕು ಎಂದೆನ್ನುತ್ತಿದ್ದನು. ಅಣ್ಣನು ತಾಯಿಗೆ ಹೇಳಿದ, "ಎಲ್ಲರನ್ನೂ ಬಿಟ್ಟು ನನಗೊಬ್ಬನಿಗೇ ತಿನ್ನಲಿಕ್ಕೆ ನಾಚಿಕೆ ಬರುತ್ತದೆ. ನಾಳೆಯಿಂದ ನನಗೊಬ್ಬನಿಗೆ ಬೇರೆ ಏನೂ ಕೊಡಬೇಡ. ಎಲ್ಲರಿಗೂ ಕೊಡುವಂತಿದ್ದರೆ ನನಗೂ ಕೊಡು. ನನ್ನ ಮೈಲಿ ಈಗ ವಾಸಿಯಾಗಿವೆ. ಇನ್ನೇಕೆ ಯೋಚನೆ? ಭರಣಿಯಲ್ಲಿ ಮಿಕ್ಕಿದ್ದನ್ನು ನಾಲ್ಕು ದಿವಸ ಎಲ್ಲರೂ ಕೂಡಿ ತಿನ್ನುತ್ತೇವೆ."

ತಾಯಿ ನುಡಿದಳು, "ಎಲೋ, ನೀವೇನು ನನ್ನ ಮಲಮಕ್ಕಳೇ? ಶ್ಯಾಮಾ, ಹೀಗೇನು ಚುಚ್ಚು ಮಾತುಗಳನ್ನಾಡುವೆ? ಅವನ ಅಂಗಾಲು, ಕಣ್ಣು ಒಂದೇಸಮನೆ ಉರಿಯುತ್ತವೆ. ರಾತ್ರಿ ಒದ್ದಾಡುತ್ತಾನೆ. ಅವನಿಗೆ ನಿದ್ದೆ ಕೂಡ ಬರುವದಿಲ್ಲವೆಂಬುದು ನಿನಗೆ ಗೊತ್ತಿದೆಯೇ? ಅವನಿಗೆ ತಂಪು ಹುಟ್ಟಲೆಂದು ಈ ಔಷಧಿ ಇದೆ. ತಿನ್ನುವದಕ್ಕಾಗಿಯೇ ಹುಟ್ಟಿರುವೆಯೋ ಏನು? ಮೈಲಿ ಬೇನೆ ಬಂದಿದ್ದರೆ ಚೆನ್ನಾಗಿತ್ತಂತೆ! ಶ್ಯಾಮಾ, ಹೀಗೆ ನುಡಿಯ ಬೇಕೆ? ದೇವರೇನು ತಿಳಿದುಕೊಂಡಾನು? ಗಟ್ಟಿಮುಟ್ಟಿಯಾದ ಶರೀರವನ್ನು ಕೊಟ್ಟಿದ್ದಾನೆಂದು ಇಲ್ಲದ ಅನಿಷ್ಟವನ್ನು ಬಯಸುವಿಯೇನು? ಹೀಗೆಲ್ಲ ಮಾಡ ಬಾರದು ಶ್ಯಾಮಾ. ನೀನೇನು ಸಣ್ಣವನೇ? ಸುಮ್ಮನೆ ಪುರಾಣ ಪುಣ್ಯಕಥೆ ಗಳನ್ನೇಕೆ ಓದುತ್ತೀ ತಲೆ ಕೆಡಿಸಿಕೊಳ್ಳಲಿಕ್ಕೆ? ಲಕ್ಷ್ಮಣ ಹಾಗು ಭರತರು ರಾಮನನ್ನು ಎಷ್ಟೊಂದು ಪ್ರೀತಿಸುತ್ತಿದ್ದರು? ಸುಮ್ಮನೆ ಓದುವದೇನು ಇವ ನ್ನೆಲ್ಲ? ಅದರಿಂದ ಸ್ವಲ್ಪಾದರೂ ಕಲಿತುಕೊಳ್ಳಬೇಡವೇ? ಇವನು ನಿನ್ನ ಅಣ್ಣನೇ ಅಲ್ಲವೇನು? ಪರಕೀಯನಲ್ಲ ತಾನೆ? ಪರಕೀಯರಿದ್ದರೂ ಹಾಗೆ ಆಡಬಾರದು. ಬೇರೆಯವರು ಕಾಹಿಲೆ ಇದ್ದರೂ ಅವರಿಗೆ ಕೊಡಬೇಕಾದದ್ದು ನಿನ್ನ ಧರ್ಮ. ನೀನು ಮನೆಗೆ ಬಂದೆಯೆಂದರೆ ನಿನ್ನ ಕಾಲಿಗೆ ಎಣ್ಣೆಹಚ್ಚಿ ನಾನು ತಿಕ್ಕುವದಿಲ್ಲವೇ? ಬಿಸಿನೀರು ಕೊಡುವದಿಲ್ಲವೇ? ಕೊಬ್ಬರೆ ವಡೆಗಳನ್ನೋ ಅಥವಾ ಮತ್ತೇನನ್ನಾದರೋ ಸಿಹಿ ಪದಾರ್ಥ ಮಾಡಿ ಕೊಡುವದಿಲ್ಲವೇ ನಿನಗೆ? ಅಣ್ಣನ ಬಗ್ಗೆ ಇಷ್ಟು ಅಸೂಯೆಯೇ? ಮುಂದೆ ನೀವು ಒಬ್ಬರಿ ಗೊಬ್ಬರು ಮೋರೆ ಕೂಡ ನೋಡುವವರಲ್ಲ! ಹೀಗೆ ಮಾಡಕೂಡದಪ್ಪಾ ಶ್ಯಾಮಾ"

ಅಣ್ಣನು ತಾಯಿಗೆ ಹೇಳಿದ, "ಅಮ್ಮಾ, ನೀನು ಸುಮ್ಮಗೆ ಮನಸ್ಸಿಗೆ

ಹಚ್ಚಿಕೊಳ್ಳಬೇಡ. ಶ್ಯಾಮನೇನು ಮನಸ್ಸಿನಲ್ಲಿ ಅದನ್ನೇ ಹಿಡಿದುಕೊಂಡು ಕೂಡುವವನಲ್ಲ. ಹೋಗು ನೀನು. ನಮಗೆ ಇಂದು ಎಲೆಗಡಬು ಮಾಡಿ ಕೊಡುವಿಯಲ್ಲವೇ ? ನಾನು ಹೋಗಿ ಬಾಳೆ ಎಲೆ ತುಂಡು ಕೊಯ್ದು ತರುವೆ."

ತಾಯಿ ಹೇಳಿದಳು, "ಹೋಗು ಶ್ಯಾಮಾ. ನೀನೇ ಹೋಗಿ ಬಾಳೆಎಲೆ ಕೊಯ್ದುಕೊಂಡು ಬಾ. ಸುಳಿ ಬಂದ ಎಲೆಯನ್ನು ಮಾತ್ರ ಕೊಯ್ಯಬೇಡ. ಮೇಲಿನ ಎಲೆಗಳನ್ನೇ ಕೊಯ್ದುಕೊಂಡು ಬಾ."

ನಾನು ಕುಡುಗೋಲನ್ನು ತೆಗೆದುಕೊಂಡು ಹೋಗಿ ಎತ್ತರವಾಗಿ ಬೆಳೆದಿದ್ದ ಬಾಳೆ ಎಲೆಗಳನ್ನು ಕೊಯ್ದು, ಸೀಳು ಮಾಡಿ, ಸಣ್ಣ ಸಣ್ಣ ಎಲೆಗಳನ್ನು ಮಾಡಿ ಜೋಡಿಸಿ ತೆಗೆದುಕೊಂಡು ಬಂದೆ. "ಅಣ್ಣಾ, ಬಾಳೆ ಎಲೆ ಬುಡದಲ್ಲಿರುವ ದಂಟನ್ನು ಕೊಡೋ ನಾನು ಚಾಟಿ ಮಾಡಿಕೊಂಡು ಆಡುತ್ತೇನೆ" ಎಂದು ನನ್ನ ತಮ್ಮ ಕೇಳಿದ.

ತಾಯಿ ಎಲೆಗೆ ಹಿಟ್ಟು ತಟ್ಟಿ ಬಿಸಿಬಿಸಿ ಕಡಬು ಮಾಡಿ ಕೊಡುತ್ತಿದ್ದಳು. ನಾವು ತಿನ್ನುತ್ತಿದ್ದೆವು. ಮೇಲೆ ಬೆಣ್ಣೆ ಸವರಿದ್ದರಿಂದ ಅವು ರುಚಿಯಾಗಿ ಹತ್ತುತ್ತಿದ್ದವು. "ಬೆಳಗ್ಗೆ ತುಳಸಿಗೆ ನೈವೇದ್ಯ ತೋರಿಸಿದ ಬೆಣ್ಣೆ ಸಕ್ಕರೆ ಆ ಬಟ್ಟಲಲ್ಲಿತ್ತು. ಅದನ್ನು ತೆಗೆದುಕೊಳ್ಳಿರಿ" ಎಂದು ತಾಯಿ ಹೇಳಿದಳು. ದಿನಾಲು ನಸುಕಿನಲ್ಲಿ ತುಳಸಿಗೆ ಬೆಣ್ಣೆಸಕ್ಕರೆಯ ನೈವೇದ್ಯವನ್ನು ತಾಯಿ ತೋರಿಸುತ್ತಿದ್ದಳು. ಅಣ್ಣನು ಉಳ್ಳೇಗಡ್ಡಿಯ ಪಾಕವನ್ನು ತೆಗೆದುಕೊಂಡು ಎಲ್ಲರಿಗೂ ಕಡುಬಿನ ಜೊತೆಗೆ ತಿನ್ನಲಿಕ್ಕೆ ಕೊಟ್ಟನು. "ಶ್ಯಾಮಾ, ನಾಳೆ ಮಾತ್ರ ಮತ್ತೆ ಕೇಳಬೇಡಿರಿ. ನಿಮ್ಮ ಅಣ್ಣನ ಮೇಲೆ ನಿಮ್ಮ ದೃಷ್ಟಿ ಬೀಳದಿರಲಿ. ತಿಳಿಯಿತೇ ಶ್ಯಾಮಾ ? ಇನ್ನಾದರೂ ಜಾಣನಾಗು."

ನಾನು ಅಂದು ಮುನಿಸಿದುಕೊಂಡೇ ಇದ್ದೆ. ಬೆಳಗಿನಿಂದಲೂ ಯಾರ ಜೊತೆಗೆ ಹೆಚ್ಚು ಮಾತನಾಡಿದ್ದಿಲ್ಲ. ಅಣ್ಣನು ಚಿಣಿಫಣಿ ಆಟಕ್ಕೆ ಕರೆದಿದ್ದರೂ ಹೋಗಿರಲಿಲ್ಲ. ಆಮೇಲೆ ಅಣ್ಣನು ಚಿಕ್ಕ ತಮ್ಮನೊಡನೆ ಬಿಲ್ಲು ಬಾಣಗಳ ಆಟ ಆಡಿದನು. ಕೊಡೆಯ ಕಡ್ಡಿಯನ್ನು ಹದನ ಮಾಡಿ ತಮ್ಮನು ಬಾಣ ಮಾಡಿದ್ದನು. ಅಣ್ಣನು ಗುರಿ ಇಟ್ಟು ಹೊಡೆಯುತ್ತಿದ್ದನು. ನಾನು ಸಿಟ್ಟಿನಲ್ಲಿ ಹೋಗಿ ನುಡಿದೆ, "ಅಣ್ಣಾ, ಆ ಗಿಡಗಳನ್ನು ಏಕೆ ನೋಯಿಸುವೆ ? ಅವುಗಳ ಮೈಯಿಂದ ರಕ್ತವನ್ನೇಕೆ ತೆಗೆಯುವೆ ?"

ಅಣ್ಣನೆಂದನು, "ಹಾಗಾದರೆ ಚಿಣೀಫಣಿ ಆಡಲಿಕ್ಕೆ ಬಾ."

"ನನ್ನಿಂದ ನಿನಗೇನಾಗಬೇಕಾಗಿದೆ ? ಬರುವದಿಲ್ಲ ಹೋಗು."

ಘೂತ್ಕರಿಸುತ್ತ ನಾನು ಹೊರಟು ಹೋದೆ. ಅಣ್ಣನ ಮೇಲೆ ನನ್ನ ಪ್ರೀತಿ ಇರಲಿಲ್ಲ; ಆದರೆ ಗಿಡಗಳ ಮೇಲೆ ಪ್ರೇಮ ತೋರಿಸುತ್ತಿದ್ದೆ! ಅದು ವಂಚನೆಯಾಗಿತ್ತು. ಅಣ್ಣನನ್ನು ಪ್ರೀತಿಸದವನು ಗಿಡಗಳನ್ನು ಪ್ರೀತಿಸುವದು ಸಾಧ್ಯವೇ ?

ಮಧ್ಯಾಹ್ನದ ಊಟವಾಯಿತು. ಅಣ್ಣನು ಬಿದ್ದುಕೊಂಡಿದ್ದ. ಅವನು ತನ್ನ ಅಂಗಾಲನ್ನು ಕೈಯಿಂದ ತಿಕ್ಕಿಕೊಳ್ಳುತ್ತಿದ್ದ. ಅವನ ಅಂಗಾಲು ಒಂದೇ ಸವನೆ ಉರಿಯುತ್ತಿದ್ದವು. ಇಂದಿಗೆ ಎಷ್ಟೋ ವರ್ಷಗಳಾಗಿ ಹೋಗಿದ್ದರೂ ಇನ್ನೂ ಕೂಡ ಅಂಗಾಲು ಉರಿಯುತ್ತವೆ. ಆಗಂತೂ ಅದೇ ತಾನೆ ಬೇನೆಯಿಂದ ಎದ್ದಿದ್ದ. ನಾನು ಅಣ್ಣನ ಕಾಲು ನಿತ್ಯವೂ ತುಳಿಯುತ್ತಿದ್ದೆ. ಅವನಿಗೆ ಅದರಿಂದ ತುಸು ಹಿತವಾಗುತ್ತಿತ್ತು. ಆದರೆ ಆ ದಿವಸ ನಾನು ಸಿಟ್ಟಿನಲ್ಲಿಯೇ ಇದ್ದೆ. ಅಣ್ಣನು ನನ್ನ ಕಡೆಗೆ ನೋಡುತ್ತಿದ್ದನು. ಮೂಕನಾಗಿಯೇ ಕರೆಯುತ್ತಿದ್ದನು. ಆದರೆ ಅಂದು ನಾನು ಕಾಲು ಒತ್ತಬಾರದೆಂದು ನಿರ್ಧರಿಸಿದ್ದೆ. ನಾನು ದುಷ್ಟನಾಗಿದ್ದೆ. ನನ್ನಲ್ಲಿಯ ಪ್ರೀತಿಯೆಲ್ಲವೂ ಆ ದಿವಸ ಪ್ರೇತವಾಗಿ ಬಿಟ್ಟಿತ್ತು. ಅಂದು ನಾನು ಕಲ್ಲಿನಂತಾಗಿದ್ದೆ. ಕೊನೆಗೆ ಅಣ್ಣನು ನನ್ನನ್ನು ಕೂಗಿ ಹೇಳಿದನು, "ಶ್ಯಾಮಾ, ತುಸು ಕಾಲ ಮೇಲೆ ಕಾಲನ್ನು ಇಡುವೆಯಾ ? ನಿನಗೆ ಹೇಳಲಿಕ್ಕೆ ನಾಚಿಕೆಯಾಗುತ್ತದೆ. ದಿನಾಲು ಎಷ್ಟೆಂದು ನಿನಗೆ ಹೇಳುವದು ? ಆದರೆ ಶ್ಯಾಮಾ, ನಾನು ಪುಣೆಗೆ ಹೋದ ಮೇಲೇನು ನಿನಗೆ ಹೇಳಲಿಕ್ಕೆ ಬರುವದು ಅಷ್ಟರಲ್ಲಿಯೇ ಇದೆ. ಇಲ್ಲಿ ನೀನಿರುವೆಯೆಂದು ಹೇಳುತ್ತಿದ್ದೇನೆ. ತುಸು ತುಳಿಯಬಾರದೇ ?"

ಅಣ್ಣನ ಮಾತುಗಳಿಂದ ನಾನು ಒಳಗೆ ಕರಗಿ ಹೋಗಿದ್ದೆನಾದರೂ ಅಹಂಕಾರವೊಂದಿತ್ತು! ಅದು ಮಾತ್ರ ಕರಗಲಿಲ್ಲ. ಬರ್ಫದ ರಾಶಿಯು ಸೂರ್ಯನ ಕಿರಣಗಳಿಂದ ಕರಗುವಂತೆ ಅಹಂಕಾರದ ರಾಶಿಯು ಪ್ರೇಮದ ಸ್ಪರ್ಶದಿಂದ ಕರಗುತ್ತವೆ. ಆದರೆ ಅಂದು ನಾನು ನನ್ನ ನಿರ್ಧಾರವನ್ನು ಬಿಡಲಿಲ್ಲ. ಅಣ್ಣನ ಮಾತನ್ನು ಕಿವಿಯ ಮೇಲೆ ಹಾಕಿಕೊಳ್ಳಲಿಲ್ಲ. ಏನು ಮಾಡಿದರೂ ನಾನು ಏಳಲಿಲ್ಲ.

ಒಳಗೆ ಊಟ ಮಾಡುತ್ತಿದ್ದ ತಾಯಿಗೆ ಅಣ್ಣನ ಮಾತುಗಳು ಕೇಳಿಸಿದವು. ಅವಳು ಕೈ ತೊಳೆದುಕೊಂಡು ಬಂದಳು. ನಾನು ಸ್ಥಳಬಿಟ್ಟು ಕದಲಿರಲಿಲ್ಲವೆಂಬುದನ್ನು ಅವಳು ಕಂಡಳು. ಅವಳು ಅಣ್ಣನ ಹತ್ತಿರ ಹೋಗಿ ಹೇಳಿದಳು, "ಗಜೂ, ನಾನು ನಿನ್ನ ಕಾಲನ್ನು ಮೆಲ್ಲಗೆ ತುಳಿಯುತ್ತೇನೆ. ಅವನಿಗೇಕೆ ಹೇಳುವೆ? ಅವನಿಗೇಕೆ ತೊಂದರೆ ಕೊಡುವೆ? ಅವನಾರು ನಿನಗೆ? ಹೇಳಿಕೇಳಿ ದಾಯವಾದಿ!" ಹೀಗೆ ನುಡಿದು ಅವಳು ನಿಜವಾಗಿಯೂ ಅಣ್ಣನ ಅಂಗಾಲನ್ನು ತನ್ನ ಕಾಲಿನಿಂದ ಮೆಲ್ಲಗೆ ತುಳಿಯತೊಡಗಿದಳು. ಒಳಗೆ ಎಂಜಲ ಬಳಿಯುವ ಕೆಲಸ ಹಾಗೇ ಬಿದ್ದಿತ್ತು. ಗುಡ್ಡೆಯಷ್ಟು ಪಾತ್ರೆಗಳ ರಾಶಿ ದಾರಿ ಕಾಯುತ್ತಿತ್ತು. ಆದರೆ ಎಲ್ಲವನ್ನೂ ಹಾಗೇ ಬಿಟ್ಟು ಬಂದಿದ್ದಳು. ನಾಯಿ ಒಳಗೆ ಹೋಗಬಾರದೆಂದು ಅಡಿಗೆಮನೆ ಬಾಗಿಲನ್ನು ಮುಂದೆ ಮಾಡಿಕೊಂಡು ಅಂದು ಅಣ್ಣನ ಸೇವೆಗೆ ತೊಡಗಿದ್ದಳು. ನನ್ನ ಪ್ರೇಮಮೂರ್ತಿ, ತ್ಯಾಗಮೂರ್ತಿ, ಕಷ್ಟಮೂರ್ತಿಯಾದ ತಾಯಿ! ದೊಡ್ಡ ಮನಸ್ಸಿನ ತಾಯಿ! ಒಂದು ಮಾತನ್ನು ಕೂಡ ನನಗೆ ಹೇಳಲಿಲ್ಲ. ನನ್ನ ಮೇಲೆ ಕೋಪವನ್ನೂ ತಾಳಲಿಲ್ಲ. ಕೊನೆಗೆ ನನಗೇ ನಾಚಿಕೆ ಬಂದಿತು. ನನ್ನ ಅಹಂಕಾರವು ಪೂರ್ತಿಯಾಗಿ ಕರಗಿ ಹೋಯಿತು. ನಾನು ತಾಯಿಯ ಬಳಿಗೆ ಹೋಗಿ ಹೇಳಿದೆ, "ಅಮ್ಮಾ, ನೀನು ಹೋಗು. ನಾನು ಅಣ್ಣನ ಕಾಲು ತುಳಿಯುತ್ತೇನೆ."

ತಾಯಿಯೆಂದಳು, "ಹಾಗಾದರೆ ನಿಧಾನವಾಗಿ ಸರಿಯಾಗಿ ತುಳಿಯಬೇಕು. ಸುಮ್ಮನೆ ಹೇಗಾದರೂ ತುಳಿಯಬೇಡ. ಅವನಿಗೆ ನಿದ್ದೆ ಬರುವತನಕ ತುಳಿದು ಆಮೇಲೆ ಆಟವಾಡಲಿಕ್ಕೆ ಹೋಗು. ಶ್ಯಾಮಾ, ಅವನು ನಿನ್ನ ಅಣ್ಣನೇ ಅಲ್ಲವೇ?" ತಾಯಿ ಮುಸುರೆ ಎಂಜಲ ಕೆಲಸ ಮುಗಿಸಲಿಕ್ಕೆ ಒಳಗೆ ಹೋದಳು. ನಾನು ಅಣ್ಣನ ಅಂಗಾಲನ್ನು ನನ್ನ ಕಾಲು ಬೆರಳುಗಳಿಂದ ಮೆಲ್ಲಗೆ ಒತ್ತುತ್ತಿದ್ದೆ. ತುಸು ಹೊತ್ತಿನಲ್ಲಿ ನಿರಹಂಕಾರಿಯಾದ ನನ್ನ ಅಣ್ಣನಿಗೆ ನಿದ್ದೆ ಹತ್ತಿತು.

ನನ್ನ ಸಿಟ್ಟು ಇಳಿದಿತ್ತು. ಸೂರ್ಯನು ಅಸ್ತಂಗತನಾಗುತ್ತಿದ್ದಂತೆ ನನ್ನ ಸಿಟ್ಟೂ ಅಸ್ತಮಿಸುತ್ತಿದ್ದಿತು. ರಾತ್ರಿಯ ಊಟವಾಯಿತು. ತಾಯಿಯ ಎಂಜಲ ಗೋಮದ ಕೆಲಸವೂ ಮುಗಿಯಿತು ನಾವೆಲ್ಲ ಅಂಗಳದಲ್ಲಿ ಕುಳಿತುಕೊಂಡಿದ್ದೆವು. ತುಳಸಿಯ ಮೇಲೆ ಮಡಿಕೆಯಿಂದ ತಟಕು ಹನಿ ಇನ್ನೂ ಬೀಳುತ್ತಲೇ

ಇತ್ತು. ಬಿಸಿಲುಗಾಲದಲ್ಲಿ ತುಳಸಿ ಸುಟ್ಟು ಹೋಗಬಾರದೆಂದು ಅದರ ಮೇಲೊಂದು ಮಡಿಕೆಯನ್ನು ಕಟ್ಟಿ ಅದಕ್ಕೆ ಸಣ್ಣ ತೂತು ಮಾಡಿರುತ್ತಾರೆ. ಅದರಿಂದ ಸದಾಕಾಲ ಹನಿಹನಿ ನೀರು ತುಳಸಿಯ ಮೇಲೆ ಬಿದ್ದು ತುಳಸಿಗೆ ತಂಪನ್ನು ಹುಟ್ಟಿಸುತ್ತದೆ. ಆ ಮಡಿಕೆಯಲ್ಲಿ ಮೇಲಿಂದ ಮೇಲೆ ನೀರು ಸುರುವುತ್ತಾರೆ. ತುಳಸಿಯ ಮುಂದೆ ಪ್ರಣತಿ ಹಚ್ಚಲಾಗಿತ್ತು. ಅಂಗಳದಲ್ಲಿ ದೀಪದ ಅವಶ್ಯಕತೆ ಇರಲಿಲ್ಲ. ಸುಂದರವಾದ ಬೆಳುದಿಂಗಳು ಆದಾಗಿತ್ತು. ಅಣ್ಣ, ನಾನು, ಪುರುಷೋತ್ತಮ ಮತ್ತು ಬಾಬು ಅಂಗಳದಲ್ಲಿ ಕುಳಿತಿದ್ದೆವು. ನಮ್ಮ ತಾಯಿ ಮತ್ತು ದುರ್ಗೆಯ ಅಜ್ಜಿ ನಮ್ಮ ಬಳಿಯಲ್ಲಿಯೇ ಇದ್ದರು. ಪಕ್ಕದ ಮನೆಯ ಜಾನಕೀಕಕ್ಕಿ ಕೂಡ ಬಂದಿದ್ದರು. ಸೊನೆಹಾಕಿದ ಅವರೇಕಾಳುಗಳನ್ನು ಬಿಡಿಸಬೇಕಾಗಿದ್ದಿತು. ಮಣೆಯ ಮೇಲೆ ಕಾಳುಗಳನ್ನು ಹಾಕಿಕೊಂಡು ನಾವು ಬೇಗ ಬೇಗನೆ ಕಾಳು ಬೇರೆ, ಸಿಪ್ಪೆ ಬೇರೆ ಮಾಡಿ ಹಾಕುತ್ತಿದ್ದೆವು. ನಾನು ತಾಯಿಗೆ ಹೇಳಿದೆ, "ಅಮ್ಮಾ, ನೀನು ಆ ಅಭಿಮನ್ಯುವಿನ ಹಾಡು ಹೇಳು. ನನಗೆ ಅದು ಬಹಳ ಸೇರುತ್ತದೆ. ಅಭಿಮನ್ಯು ಸಮರಾಂಗಣದಲ್ಲಿ ಎಲ್ಲಿ ಬಿದ್ದಿರುವನೋ ನೋಡಬೇಕೆಂದು ಕೃಷ್ಣಾರ್ಜುನರು ರಾತ್ರಿಯಲ್ಲಿ ಹೊರಡುತ್ತಾರೆ. ಅಭಿಮನ್ಯು 'ಕೃಷ್ಣ ಕೃಷ್ಣ' ವೆಂಬ ಮಂಜುಳವಾದ ಜಪವನ್ನು ಮಾಡುತ್ತ ಇರುತ್ತಾನೆ. ಆ ಮಂಜುಳ ಸ್ವರದಿಂದ ಇಲ್ಲಿಯೇ ಅಭಿಮನ್ಯು ಇರಬೇಕೆಂದು ಅವರಿಗೆ ಗೊತ್ತಾಗುತ್ತದೆ. ಎಷ್ಟು ಸುಂದರವಾಗಿದೆ ಆ ಹಾಡು! ಅಮ್ಮಾ, ಆ ಹಾಡನ್ನು ಹೇಳೇ ?"

ತಾಯಿ ಹೇಳಿದಳು, "ಇಂದು ಅಜ್ಜಿಯೇ ಉತ್ತಮ ಪದವನ್ನು ಹೇಳುತ್ತಾಳೆ. ಅದನ್ನು ಕೇಳು. "ನೀವು ಆ ಬಟ್ಟೆತುಂಡಿನ ಪದವನ್ನು ಹೇಳಿರಿ. ನಾನು ಬಹಳ ದಿವಸದಲ್ಲಿ ಅದನ್ನು ಕೇಳಿಲ್ಲ." ತಾಯಿಯು ಅಜ್ಜಿಗೆ ಬಿನ್ನವಿಸಿದಳು.

ದುರ್ಗೆಯ ಅಜ್ಜಿಗೆ ತುಂಬ ಪದ ಬರುತ್ತವೆಂದು ಈ ಮೊದಲೇ ತಿಳಿಸಿದ್ದೇನೆ. 'ತುಂಡು ಬಟ್ಟೆ' ಪದ ನಾನು ಕೇಳಿರಲಿಲ್ಲ. ಏನಾದರೂ ಹರಕು ಮುರುಕು ಪದವಿರಬಹುದೆಂದು ತಿಳಿದಿದ್ದೆ. ನಾನು ಆತುರದಿಂದ ಅಜ್ಜಿಗೆ ಹೇಳಿದೆ, "ಬಟ್ಟೆ ತುಂಡಿನ ದರಿದ್ರ ಪದಕ್ಕಿಂತ ಪೀತಾಂಬರದ ಪದವನ್ನಾದರೂ ಹೇಳಜ್ಜೀ."

ಅಜ್ಜಿ ನುಡಿದಳು, "ಕೇಳು ಹಾಗಾದರೆ ಶ್ಯಾಮಾ, ಆ ಬಟ್ಟಿತುಂಡಿನ ಪದದಲ್ಲಿ ಪೀತಾಂಬರ–ಜರದ ಮುಡಿಯ ವಿಷಯವೇ ಇದೆ."

ಅಜ್ಜಿ ಹಾಡು ಹೇಳತೊಡಗಿದಳು. ಅವಳ ಸ್ವರವು ಮಧುರವಾಗಿತ್ತು. ಅವಳು ಅವಶ್ಯವಿದ್ದಲ್ಲಿ ಸ್ವರವೇರಿಸಿ ಕೈಯನ್ನು ಅಲುಗಾಡಿಸುತ್ತ ಹಾವಭಾವಯುಕ್ತವಾಗಿ ಪದ ಹೇಳುತ್ತಿದ್ದಳು. ಭಾವನಾಪರವಶಳಾಗಿ, ತಲ್ಲೀನಳಾಗಿ ಹಾಡು ಹೇಳುತ್ತಿದ್ದಳು. ಅದರ ಪಲ್ಲವಿ 'ದ್ರೌಪದಿಗೆ ಅನುಜನೊಪ್ಪುವನು ನಾರಾಯಣನು' ಎಂದು ಇತ್ತು.

ಈ ಬಟ್ಟಿ ತುಂಡಿನ ಪದ್ಯವನ್ನು ರಚಿಸಿದ ಕವಿಯು ಬಹಳ ದೊಡ್ಡವನಿರಬೇಕು. ಹೃದಯ ವೈಶಾಲ್ಯತೆ ಮತ್ತು ರಮ್ಯ ಕಲ್ಪನೆ ಈ ಹಾಡಿನಲ್ಲಿದೆ. ದ್ರೌಪದಿಯ ಮೇಲೆ ಕೃಷ್ಣನ ಹಾಗು ಕೃಷ್ಣನ ಮೇಲೆ ದ್ರೌಪದಿಯ ಗಾಢವಾದ ಪ್ರೇಮವಿತ್ತು. ಅರ್ಜುನ ಹಾಗು ಕೃಷ್ಣರಲ್ಲಿರುವ ಏಕರೂಪತೆಗಾಗಿ ಅರ್ಜುನನಿಗೆ ಕೂಡ ಕೃಷ್ಣನೆಂಬ ಹೆಸರು ಇದೆ. ಅದೇ ರೀತಿಯಿಂದ ದ್ರೌಪದಿ ಹಾಗು ಕೃಷ್ಣನಲ್ಲಿರುವ ಅಭಿನ್ನತೆ ಹಾಗು ಅದ್ವೈತವನ್ನು ತೋರಿಸುವದಕ್ಕಾಗಿ ದ್ರೌಪದಿಗೆ ಕೂಡ 'ಕೃಷ್ಣಾ' ಎಂಬ ಹೆಸರು ಕೊಟ್ಟಿದ್ದಾರೆ. ಈ ಪದ್ಯದಲ್ಲಿ ಒಳ್ಳೇ ಸುಂದರ ಸನ್ನಿವೇಶವನ್ನು ಕವಿಯು ಕಲ್ಪಿಸಿದ್ದಾನೆ. ಒಡಹುಟ್ಟಿದ ಸಹೋದರಿ ಸುಭದ್ರೆಯ ಮೇಲೆ ಕೃಷ್ಣನ ಪ್ರೀತಿ ಕಡಿಮೆ, ಆದರೆ ಸಹೋದರಿಯಂತೆ ಭಾವಿಸಿದ ದ್ರೌಪದಿಯ ಮೇಲೆ ಮಾತ್ರ ಬಹಳ ಪ್ರೀತಿ. ಇದರ ರಹಸ್ಯವೇನು ? ಈ ಬಗ್ಗೆ ಬಂದ ಸಂದೇಹವನ್ನು ಕವಿಯು ತನ್ನ ಪದ್ಯದಿಂದ ನಿವಾರಣೆ ಮಾಡಿದ್ದಾನೆ.

ಸಂದರ್ಭ ಹೀಗಿದೆ: ತ್ರಿಲೋಕ ಸಂಚಾರಿಯಾದ ನಾರದರು ಒಂದು ದಿವಸ ಬ್ರಹ್ಮವೀಣೆಯನ್ನು ಹೆಗಲ ಮೇಲೆ ಹೊತ್ತುಕೊಂಡು ಭಕ್ತಿಗೀತಗಳನ್ನು ಹೇಳುತ್ತ ಕೃಷ್ಣನ ಬಳಿಗೆ ಬಂದರು. ನಾರದರು ಸುರ, ನರ ಮತ್ತು ಅಸುರ ಈ ಮೂರು ಲೋಕದಲ್ಲಿಯೂ – ಸಾತ್ವಿಕ, ತಾಮಸ ಮತ್ತು ರಾಜಸ; ಶ್ರೇಷ್ಠ ಮಧ್ಯಮ ಮತ್ತು ಕನಿಷ್ಠ ಈ ಮೂರು ಬಗೆಯ ಜನರಲ್ಲಿಯೂ ತಿರುಗಾಡುತ್ತಾರೆ. ಅದರಿಂದ ಅವರಿಗೆ ವಿವಿಧ ಅನುಭವಗಳು ಬರುತ್ತವೆ. ಅನೇಕ ದೃಶ್ಯಗಳು ಕಣ್ಣಿಗೆ ಬೀಳುತ್ತವೆ. ಯಾರ ಮಹಿಮೆಯನ್ನು ಹೆಚ್ಚಿಸುವದು, ಯಾರ ಗರ್ವವನ್ನು ಹರಣ ಮಾಡುವದು, ಯಾವದೊಂದು ಮೂಲೆಯಲ್ಲಿ

ಅರಳಿದ ಪುಷ್ಪದ ಸೌಗಂಧವನ್ನು ಎಲ್ಲೆಡೆಗೆ ಪಸರಿಸುವದು, ಇವೇ ಮೊದಲಾದ ಕೆಲಸಗಳನ್ನು ಅವರು ಮಾಡುತ್ತಾರೆ. ಅವರು ನಿಸ್ಪೃಹಿಗಳೂ, ಎಲ್ಲರ ಕಲ್ಯಾಣ ವನ್ನು ಬಯಸುವವರೂ ಆಗಿದ್ದರಿಂದ ಎಲ್ಲರೂ ಅವರನ್ನು ಆದರದಿಂದ ಬರ ಮಾಡಿಕೊಳ್ಳುತ್ತಾರೆ.

ಈ ಸಂದರ್ಭದಲ್ಲಿ ಕೃಷ್ಣನು ಪಾಂಡವರ ಕಡೆಗೆ ಅತಿಥಿಯಾಗಿ ಬಂದಿ ದ್ದನು. ನಾರದರನ್ನು ಕಂಡೊಡನೆ ಕೃಷ್ಣನು ಅವರನ್ನು ವಾತ್ಸಲ್ಯದಿಂದ ಆಲಿಂ ಗಿಸಿ ಅವರ ಕುಶಲ ವಾರ್ತೆಯನ್ನು ವಿಚಾರಿಸಿದನು. ನಾರದರೆಂದರು, "ಕೃಷ್ಣಾ, ನಿನ್ನ ವಿಷಯದಲ್ಲಿ ಒಂದು ದೂರುಕೊಡುವದಕ್ಕಾಗಿ ಬಂದಿದ್ದೇನೆ. ಕೃಷ್ಣನೆಂದರೆ ಸಮದೃಷ್ಟಿಯುಳ್ಳವನೂ, ನಿಷ್ಪಕ್ಷಪಾತಿಯೂ ಎಂದು ನಾನು ಎಲ್ಲರೆದುರು ಹೇಳುತ್ತ ಬಂದಿದ್ದೇನೆ. ಆದರೆ ಒಂದೆಡೆಯಲ್ಲಿ ನನ್ನನ್ನು ಪ್ರಶ್ನಿಸಿದರು, "ನಾರದಾ, ಸಾಕು ನಿನ್ನ ಕೃಷ್ಣಸ್ತುತಿ. ಒಡಹುಟ್ಟಿದ ತನ್ನ ತಂಗಿಗಿಂತ ಆ ದ್ರೌಪದಿಯ ಮೇಲೆ ಕೃಷ್ಣನ ಪ್ರೀತಿ ಹೆಚ್ಚು. ಇದೆಂಥ ಸಮದೃಷ್ಟಿಯೋ ?" ಇವಕ್ಕೆ ನಾನು ನಿರುತ್ತರನಾಗಿ ಸಂಶಯ ನಿವಾರಣೆ ಮಾಡಿಕೊಳ್ಳುವದಕ್ಕಾಗಿ ನಿನ್ನ ಬಳಿ ಬಂದಿದ್ದೇನೆ. ಈಗ ಹೇಳು ಅದರ ಕಾರಣ. ಒಡಹುಟ್ಟಿದ ನಿನ್ನ ತಂಗಿ ಸುಭದ್ರೆಯ ಮೇಲೆ ಏಕೆ ಅಷ್ಟು ನಿರ್ಲಕ್ಷ್ಯ ? ಹೇಳು."

ಕೃಷ್ಣನೆಂದನು, "ನಾರದಾ, ನಾನು ನಿಷ್ಕ್ರಿಯನು. ಎಳೆತವಿದ್ದಲ್ಲಿ ನಾನು ಹೋಗತಕ್ಕವನು. ಗಾಳಿ ಎಲ್ಲ ಕಡೆಗೂ ಹೋಗುತ್ತದೆ. ಆದರೆ ಕಿಡಿಕೆ ಬಾಗಿಲುಗಳನ್ನು ಯಾವಾಗಲೂ ಭದ್ರವಾಗಿ ಮುಚ್ಚಿಡುವವನು 'ಎಲ್ಲರ ಮನೆ ಯಲ್ಲಿಯೂ ಗಾಳಿ ಇರುತ್ತದೆ. ನಮ್ಮಲ್ಲಿ ಮಾತ್ರ ಗಾಳಿ ಬರುವದಿಲ್ಲ' ವೆಂದು ಹೇಳಿದರೆ ಆ ಮಾತು ಯೋಗ್ಯವಾದೀತೆ ? ಬಾಗಿಲುಗಳನ್ನು ಪೂರ್ಣವಾಗಿ ತೆರೆದಿಟ್ಟವನಲ್ಲಿ ಗಾಳಿ ಬೆಳಕು ಧಾರಾಳವಾಗಿ ಬರಬಹುದು. ಮುಚ್ಚಿಟ್ಟವನಲ್ಲಿ ಅದು ಹೇಗೆ ಸಾಧ್ಯ? ನನ್ನ ವಿಚಾರವೂ ಹಾಗೆಯೇ. ದ್ರೌಪದಿಯ ಎಳೆ (ಸೂತ್ರ) ಗಟ್ಟಿ ಇರಬಹುದು. ಅವಳು ಅದನ್ನು ಎಳೆದುಕೊಳ್ಳುತ್ತಾಳೆ. ಸುಭದ್ರೆಯ ಎಳೆ ಪಿಸುಕು ಇರಬಹುದು. ಅದಕ್ಕೆ ನಾನೇನು ಮಾಡುವದು ? ನಾನಂತೂ ನಿಷ್ಕ್ರಿಯನಾಗಿದ್ದೇನೆ. ನಾರದಾ, ನೀನು ಇದರ ಪರೀಕ್ಷೆ ಮಾಡಿ ನೋಡುವುದಿದ್ದರೆ ನಾನು ಹೇಳಿದಂತೆ ಮಾಡು. ಸುಭದ್ರೆಯ ಬಳಿಗೆ ಧಾವಿ ಸುತ್ತ ಹೋಗಿ ಹೇಳು, 'ಕೃಷ್ಣನ ಬೆರಳು ಕೊಯ್ದಿದೆ, ಒಂದು ಚೂರು ಹರಕು

ಬಟ್ಟೆ ಕೊಡು ಕಟ್ಟಲಿಕ್ಕೆ.' ಅವಳು ಕೊಟ್ಟರೆ ತೆಗೆದುಕೊಂಡು ಬಾ. ಕೊಡದಿದ್ದರೆ ಇದೇ ಮಾತನ್ನು ಹೇಳಿ ದ್ರೌಪದಿಯ ಕಡೆಗೆ ಬೇಡು."

ನಾರದರು ಹೊರಟರು. ಮೊದಲು ಸುಭದ್ರೆಯ ಕಡೆಗೆ ಬಂದರು. ಸುಭದ್ರೆ ಹೇಳಿದಳು, "ಬಾರಯ್ಯ, ನಾರದ. ಎಲ್ಲವೂ ಕುಶಲವೇ? ಕೈಲಾಸ, ಬ್ರಹ್ಮಲೋಕ ಮತ್ತು ಭೂಲೋಕಗಳ ಸಮಾಚಾರವೇನಾದರೂ ಇದ್ದರೆ ಹೇಳು. ನಾರದಾ ನಿನ್ನದೇ ಆರಾಮು ನೋಡು. ಎಲ್ಲ ಕಡೆಗೂ ಸಂಚರಿಸುವಿ. ನಿನಗೆ ಬೇಸರವಿಲ್ಲವೇನೋ? ದಿನಕ್ಕೊಂದು ಲೋಕ, ದಿನಕ್ಕೊಂದು ದೇಶ. ಇಂದು ನಂದನವನವಾದರೆ ನಾಳೆ ಮಧುವನ. ಕುಳಿತುಕೋ ನಾರದಾ. ಏಕೆ ಇಷ್ಟು ಅವಸರ?"

ನಾರದರೆಂದರು, "ಸುಭದ್ರಕ್ಕ, ಕೂಡಲಿಕ್ಕೆ ಹೊತ್ತಿಲ್ಲ. ಕೃಷ್ಣನ ಬೆರಳು ಕೊಯ್ದು ರಕ್ತವು ಬಳಬಳ ಸುರಿಯುತ್ತದೆ. ಬೆರಳನ್ನು ಕಟ್ಟಲು ಒಂದು ಹರಕು ಬಟ್ಟೆ ಚೂರಿದ್ದರೆ ಕೊಡು."

"ನಾರದಾ, ಈಗ ಹರಕು ಬಟ್ಟೆಯನ್ನೆಲ್ಲಿ ಹುಡುಕಲಿ? ಈ ಪೀತಾಂಬರವನ್ನವರು ಉತ್ತರನ ದಿಗ್ವಿಜಯದ ಕಾಲಕ್ಕೆ ತಂದಿದ್ದಾರೆ. ಈ ಶಾಲನ್ನು ಕುಂತೀಭೋಜರಾಜನು ಕಾಣಿಕೆಯೆಂದು ಕಳಿಸಿದ್ದಾನೆ. ಮನೆಯಲ್ಲಿ ಒಂದು ಹರಕು ಚೂರಾದರೂ ಇದ್ದರೆ ದೇವರಾಣೆ! ಬರೀ ಬೆಲೆಯುಳ್ಳ ಜರದ ಮಡಿ ಪೀತಾಂಬರಗಳೇ ಇವೆ. ತುಂಡುಬಟ್ಟೆ ಇಲ್ಲವಲ್ಲ?" ಎಂದಳು ಸುಭದ್ರೆ.

"ಆಗಲಿ, ದ್ರೌಪದಿಯ ಕಡೆಗಾದರೂ ಇದ್ದರೆ ವಿಚಾರಿಸುತ್ತೇನೆ." ಎಂದು ನುಡಿದು ನಾರದರು ದ್ರೌಪದಿಯ ಕಡೆಗೆ ಹೊರಟರು.

ದ್ರೌಪದಿಯು 'ಕೃಷ್ಣ ಕೃಷ್ಣ' ಎನ್ನುತ್ತ ಹೂವಿನ ಮಾಲೆಯನ್ನು ಕಟ್ಟುತ್ತಿದ್ದಳು. ನಾರದರನ್ನು ಕಂಡೊಡನೆ ಎದ್ದಳು. "ಬಾ, ನಾರದಾ, ಈ ಮಾಲೆಯನ್ನು ನಿನ್ನ ಕೊರಳಲ್ಲಿಯೇ ಹಾಕುತ್ತೇನೆ. ಈ ಆಸನದಮೇಲೆ ಕುಳಿತುಕೋ. ಸದ್ಯ ಕೃಷ್ಣನು ಇಲ್ಲಿರುತ್ತಾನೆಂದು ಬಂದೆಯಲ್ಲವೇ? ಅವನ ಸುತ್ತಲೂ ಜೇನ್ನೊಣಗಳಂತೆ ನೀವೆಲ್ಲರೂ ಮುತ್ತುವವರೇ. ಆದರೆ ನನ್ನ ಕೃಷ್ಣನ ಸುಲಿಗೆ ಪೂರ್ತಿಯಾಗಿ ಮಾಡಿಬಿಡಬೇಡಿರಿ. ನನಗೆ ತುಸು ಇರಲಿ."

"ದ್ರೌಪದಿ, ಇದು ತಮಾಷೆ ಮಾಡುವ ಹೊತ್ತಲ್ಲ. ಮಾತನಾಡಲಿಕ್ಕೆ ಸಮಯವಿಲ್ಲ. ಕೃಷ್ಣನ ಬೆರಳು ಕೊಯ್ದಿದೆ. ಬೇಗನೆ ಒಂದು ಹರಕುಬಟ್ಟೆಯ

ತುಂಡಿದ್ದರೆ ಕೊಡು." ನಾರದರು ಗಾಬರಿಗೊಂಡವರಂತೆ ನುಡಿದರು.

"ನಿಜವೇ ನಾರದಾ? ಬಹಳ ಗಾಯವಾಗಿದೆಯೇ? ನನ್ನ ಕೃಷ್ಣನ ಬೆರಳು ಕೊಯ್ದಿದೆಯೇ? ಅಯ್ಯೋ ಪಾಪ!" ಎಂದೆನ್ನುತ್ತ ತಾನುಟ್ಟ ಪೀತಾಂಬರವನ್ನೇ ಚರ‍್ರನೆ ಹರಿದು ಒಂದು ತುಂಡು ಕೊಟ್ಟು ಕಳಿಸಿದಳು.

ಹರಿದು ಕೊಟ್ಟಳು ಉಟ್ಟ ದಿವ್ಯ ಪೀತಾಂಬರವನು ।
ದ್ರೌಪದಿಗೆ ಅನುಜನೊಪ್ಪುವನು ನಾರಾಯಣನು ॥

ನನ್ನ ಅಜ್ಜಿ ಹೇಳುತ್ತಿದ್ದ ಈ ಭಾವಪೂರ್ಣವಾದ ಪದ್ಯವನ್ನು ಕೇಳುತ್ತಿದ್ದ ಹಾಗೆ ನಾನು ಮೈಮರೆತು ಹೋಗಿದ್ದೆ. ಬೇಳೆ ಕಾಳು ಬಿಡಿಸುತ್ತಿದ್ದುದನ್ನು ಕೂಡ ಮರೆತು ಬಿಟ್ಟಿದ್ದೆ.

ಹಾಡುವದು ಮುಗಿದ ಬಳಿಕ ನನ್ನ ತಾಯಿ ಕೇಳಿದಳು, "ಶ್ಯಾಮಾ, ಹಾಡು ಚೆನ್ನಾಗಿದೆಯಲ್ಲವೇ? ನಿನ್ನ ಮನಸ್ಸಿಗೆ ಬಂದಿತೇ? ಸರಿಯಾಗಿ ಕೇಳಿದೆಯಾ?"

ತಾಯಿಯ ಉದ್ದೇಶವನ್ನು ನಾನು ಅರಿತುಕೊಂಡೆ. "ಅಮ್ಮಾ, ಅಜ್ಜಿಗೆ ಇದೇ ಹಾಡನ್ನು ಹೇಳಲು ನೀನು ಏಕೆ ಹೇಳಿದೆ ಗೊತ್ತಾಯಿತು. ನಾನು ಹೇಳಲಾ?" ಎಂದು ಕೇಳಿದೆ.

"ಹೇಳು ನೋಡೋಣ. ನೀನೇನು ಮನದ ಇಂಗಿತ ತಿಳಿದುಕೊಳ್ಳುವವನೇ?"

ನಾನು ಹೇಳಿದೆ, "ಇಂದು ಮಧ್ಯಾಹ್ನ ಅಣ್ಣನ ಕಾಲು ಒತ್ತಲಿಕ್ಕೆ ಹಿಂದು ಮುಂದೆ ನೋಡುತ್ತಿದ್ದೆ. ಬೆಳಿಗ್ಗೆ ಉಳ್ಳೇಗಡ್ಡಿ ಪಾಕ ತಿನ್ನಲು ಅವನನ್ನು ಪೀಡಿಸುತ್ತಿದ್ದೆ. ಸುಭದ್ರೆಯು ಒಡಹುಟ್ಟಿದ ತಂಗಿಯಾಗಿದ್ದು ಕೃಷ್ಣನಿಗೆ ತುಂಡುಬಟ್ಟೆಯನ್ನು ಕೊಡಲಿಲ್ಲ. ಹಾಗೆಯೇ ನಾನೂ ಒಡಹುಟ್ಟಿದ ತಮ್ಮನಾಗಿದ್ದೂ ಅಣ್ಣನನ್ನು ಪ್ರೀತಿಸಲಿಲ್ಲ. ಇದನ್ನು ನನಗೆ ತಿಳಿಸಿಕೊಡುವದಕ್ಕಾಗಿ ಅಲ್ಲವೇ ಇದನ್ನು ಕೇಳಿಸಿದ್ದು. ನನ್ನನ್ನು ನಾಚಿಸಬೇಕೆಂದು ಅಜ್ಜಿಯಿಂದ ಈ ಪದ ಹೇಳಿಸಿದೆಯಲ್ಲವೇ? ಇದು ನಿಜವಷ್ಟೆ?"

ತಾಯಿ ಹೇಳಿದಳು, "ನಿನಗೆ ಬರೀ ನಾಚಿಕೆಯಾಗಬೇಕೆಂದಲ್ಲ. ನಿನಗೆ ಪ್ರೀತಿಯ ಪಾಠವನ್ನು ಕಲಿಸುವದಕ್ಕಾಗಿ."

ನಾನು ಒಮ್ಮೆಲೆ ಎದ್ದು ಅಣ್ಣನ ಬಳಿಗೆ ಹೋದೆ. ಅಣ್ಣನ ಕೈಯನ್ನು

ಕೈಯಲ್ಲಿ ತೆಗೆದುಕೊಂಡು ಗದ್ಗದಿತ ಕಂಠದಿಂದ ನುಡಿವೆ, "ಅಣ್ಣಾ, ಇಂದಿನಿಂದ ನಾನು ನಿನ್ನ ಮಾತನ್ನು ಮೀರುವದಿಲ್ಲ. ನಾನು ನಿನ್ನನ್ನು ಪ್ರೀತಿಸುತ್ತೇನೆ. ಭಕ್ತಿಯಿಂದ ನಡೆದುಕೊಳ್ಳುತ್ತೇನೆ. ಮಧ್ಯಾಹ್ನದ ನನ್ನ ನಡತೆಯ ಬಗ್ಗೆ ನನ್ನನ್ನು ಕ್ಷಮಿಸು."

"ಶ್ಯಾಮಾ, ಇದೇನು ನಡೆಸಿರುವೆ? ಕ್ಷಮೆಯನ್ನು ಕೇಳುವ ಅಗತ್ಯವೇನಿದೆ? ನಾನು ಮಧ್ಯಾಹ್ನದ ಸಂಗತಿಯನ್ನು ಮರೆತುಬಿಟ್ಟಿದ್ದೇನೆ. ನಿನ್ನ ಸಿಟ್ಟು ಆಕಾಶದಲ್ಲಿನ ಮೋಡಗಳಂತೆ ಕ್ಷಣಕಾಲದ್ದು. ನಿನ್ನ ಚಂಚಲಚಿತ್ತವನ್ನು ನಾನು ಬಲ್ಲೆ. ನಿನ್ನ ಮನಸ್ಸು ಸ್ಫಟಿಕದಂತೆ ನಿರ್ಮಲವಾಗಿದೆಯೆಂಬುದು ನನಗೆ ಗೊತ್ತಿದೆ. ಅಮ್ಮಾ, ನಾವು ಎಂದೂ ಒಬ್ಬರನ್ನೊಬ್ಬರು ಅಗಲಿ ಇರುವದಿಲ್ಲ. ಕ್ಷಣಹೊತ್ತು ಜಗಳಾಡಿದರೂ ಮತ್ತೆ ಒಬ್ಬರನ್ನೊಬ್ಬರು ಅಪ್ಪಿಕೊಳ್ಳುತ್ತೇವೆ."

ತಾಯಿಯೆಂದಳು, "ನೀವು ಒಬ್ಬರನ್ನೊಬ್ಬರು ಪ್ರೀತಿಸುತ್ತಿರಬೇಕು. ಅದು ನಮಗೂ ಆನಂದ. ದೇವರಿಗೂ ಆನಂದ!"

ರಾತ್ರಿ : ೨೭

## : : ತಂದೆಯವರ ಉದಾರ ಹೃದಯ

ಆಗ ನಮ್ಮ ಮನೆಯಲ್ಲಿ ಆಕಳು ಕರು ಹಾಕಿತ್ತು. ಮನೆಯಲ್ಲಿ ಆಕಳ ಹಾಲಿನ ಗಿಣ್ಣವನ್ನು ಮಾಡಿದ್ದರು, ತಾಯಿಗೆ ನನ್ನ ನೆನಪು ಬಂದಿತು. ನನಗೆ ಗಿಣ್ಣ ಬಹಳ ಸೇರುತ್ತಿತ್ತು. ನಾನು ಚಿಕ್ಕವನಿದ್ದಾಗ ಗೌಳಿಗರ ರಾಧಾ ನನ್ನನ್ನು ಕರೆದುಕೊಂಡು ಹೋಗಿ ಗಿಣ್ಣ ತಿನ್ನಿಸುತ್ತಿದ್ದಳು. ಅವಳು ಮುಂದೆ ಕೆಲವು ದಿವಸಗಳಲ್ಲಿಯೇ ಸತ್ತುಹೋದಳು.

"ಯಾರಾದರೂ ಹೋಗುವವರು ಸಿಕ್ಕರೆ ಶ್ಯಾಮನಿಗೆ ಗಿಣ್ಣವನ್ನು ಕಳಿಸಬಹುದಿತ್ತು." ತಾಯಿ ತಂದೆಯವರ ಮುಂದೆ ಹೇಳಿದಳು.

"ಬೇರೆಯವರ ಹಾದಿಯನ್ನೇಕೆ ನೋಡುವದು? ಮನೆ ಆಕಳಿನ ಗಟ್ಟಿಯಾದ ಗಿಣ್ಣ. ಅದನ್ನು ಕಂಡರೆ ಶ್ಯಾಮನಿಗೆ ಆನಂದವಾಗುತ್ತದೆ. ನಾಳೆ

ನಸುಕಿನಲ್ಲಿದ್ದು ನಾನೇ ಕೊಟ್ಟು ಬರುತ್ತೇನೆ. ಆದರೆ ಅದನ್ನು ಯಾತರಲ್ಲಿ ಕೊಡುವೆ?" ಎಂದು ತಂದೆ ಕೇಳಿದರು.

"ಆ ಸೇರಿನ ಪಾತ್ರೆಯಲ್ಲಿ. ಗಟ್ಟಿಯಾದ ಗಿಣ್ಣ ತುಂಬಿದ ಆ ಪಾತ್ರೆಯನ್ನೇ ತೆಗೆದುಕೊಂಡು ಹೋಗಿರಿ" ಎಂದಳು.

ತಾಯಿಯು ಸವಿಯಾದ ಗಿಣ್ಣವನ್ನು ಮಾಡಿದಳು. ಗಿಣ್ಣದ ಡಬರಿಯನ್ನು ತೆಗೆದುಕೊಂಡು ನಮ್ಮ ತಂದೆ ದಾಪೋಲಿಗೆ ಪಾದಯಾತ್ರೆ ಬೆಳೆಸಿದರು.

ಶಾಲೆಯ ವಿಶ್ರಾಂತಿ ಗಂಟೆಯಾಗಿತ್ತು. ಬಂಧನದಲ್ಲಿದ್ದ ಹಕ್ಕಿಗಳು ಹಾರಿ ಹೊರಗೆ ಬಂದಿದ್ದವು. ಕೊಟ್ಟಿಗೆಯಿಂದ ಕರಗಳು ಹೊರಗೆ ಬಂದು ತಿರುಗಾಡುತ್ತಿದ್ದವು. ಶಾಲೆಯ ಸುತ್ತಲೂ ಗುಂಪುಗುಂಪಾಗಿ ಗಿಡಗಳಿದ್ದವು. ಕಸಿ-ಮಾವಿನ ಮರಗಳೂ ಇದ್ದವು. ಕಸಿಮಾವಿನ ಮರಕ್ಕೆ ತೀರ ಬುಡದಿಂದಲೇ ಟೊಂಗೆಗಳು ಒಡೆಯುತ್ತವೆ. ಆ ಗಿಡಗಳ ಹರಿಗಳು ಭೂಮಿತಾಯಿಯನ್ನು ಮುತ್ತಿಡುವವೋ ಎಂಬಂತೆ ನೆಲದವರೆಗೂ ಬಂದಿರುತ್ತವೆ. ಶಾಲೆಯ ವಿಶ್ರಾಂತಿ ಕಾಲದಲ್ಲಿ ಹುಡುಗರು ಅಲ್ಲಿ ಗಿಡಮಂಗನಾಟವನ್ನು ಆಡುತ್ತಾರೆ. ನಿಜವಾದ ಮಂಗಗಳಂತೆ ಹುಡುಗರು ಚೆಂಗನೆ ಜಿಗಿದಾಡುತ್ತಾರೆ.

ಕೆಲವು ಹುಡುಗರು ಅತ್ತಿತ್ತ ತಿರುಗಾಡುತ್ತಿದ್ದರು. ಕೆಲವರು ಕಟ್ಟಿಕೊಂಡು ಬಂದ ಫಲಾಹಾರವನ್ನು ತಿನ್ನುತ್ತಿದ್ದರು. ಕೆಲವರು ಗಿಡಗಳ ಮೇಲೆ ಕುಳಿತು ಹಾಡುತ್ತಿದ್ದರೆ ಕೆಲವರು ಗಿಡಗಳ ಟೊಂಗೆಗುಂಟ ತೂಗಾಡುತ್ತಿದ್ದರು. ಕೆಲವರು ಗಿಡದಡಿಯಲ್ಲಿ ಒರಗಿದ್ದರು. ಕೆಲವರು ಓದುತ್ತಿದ್ದರು. ನಾನು ಮತ್ತು ನನ್ನ ಗೆಳೆಯನೊಬ್ಬನು ಹಾಡಿನ ಮೇಲಾಟ ನಡೆಸಿದ್ದೆವು. ನನಗೆ ಬಹಳ ಕವಿತೆ ಬರುತ್ತಿದ್ದವು. ಸಾಧಾರಣವಾಗಿ ಇಡೀ ನವನೀತವೇ ಕಂಠಪಾಠವಾಗಿತ್ತು. ಸಂಸ್ಕೃತ ಶ್ಲೋಕಗಳು, ಗಂಗಾಲಹರಿ, ಮಹಿಮ್ನ ಸ್ತೋತ್ರ ಮೊದಲಾದವೆಲ್ಲ ಬರುತ್ತಿದ್ದವು. ಇದಲ್ಲದೆ ಕವಿತೆ ಮಾಡುವ ಹುಚ್ಚು ನನ್ನಲ್ಲಿತ್ತು. ಕಂದ, ಷಟ್ಪದಿ, ಸಾಂಗತ್ಯ ಮೊದಲಾದವನ್ನೆಲ್ಲ ಸುಲಭವಾಗಿ ರಚಿಸುತ್ತಿದ್ದೆ. ಸ್ಪರ್ಧೆಯಲ್ಲಿ ನಾನೊಬ್ಬನೇ ಒಂದು ಕಡೆಗೆ ಆಗುತ್ತಿದ್ದರೆ ಮಿಕ್ಕವರೆಲ್ಲ ಒಂದುಕಡೆಗೆ ಆಗುತ್ತಿದ್ದರೂ ನಾನು ಸೋಲುತ್ತಿರಲಿಲ್ಲ. ನನಗೆ ಹುಡುಗರು 'ಬಾಲಕವಿ' ಯೆಂದು ತಮಾಷೆ ಕೂಡ ಮಾಡುತ್ತಿದ್ದರು.

ನಾವು ಕವಿತೆಗಳ ಮೇಲಾಟದ ಅಬ್ಬರದಲ್ಲಿದ್ದೆವು. ಅಷ್ಟರಲ್ಲಿ ಕೆಲವು

ಹುಡುಗರು 'ಶ್ಯಾಮಾ' ಎಂದು ಕೂಗುತ್ತ ಬಂದರು. 'ಶ್ಯಾಮಾ, ಯಾರೋ ನಿನ್ನನ್ನು ಕೇಳಿಕೊಂಡು ಬರುತ್ತಿದ್ದಾರೆ. ನಮ್ಮ ಶ್ಯಾಮನೆಲ್ಲಿದ್ದಾನೆಂದು ಕೇಳುತ್ತಿದ್ದಾರೆ.' ಎಂದೊಬ್ಬ ಹುಡುಗ ಹೇಳಿದ. ಅಷ್ಟರಲ್ಲಿ ನಮ್ಮ ತಂದೆ ಹುಡುಕುತ್ತ ನಾವಿದ್ದಲ್ಲಿಗೇ ಬಂದರು.

"ಭಾವೂ, ನೀವು ಇಲ್ಲಿಗೇಕೆ ಬಂದಿರಿ? ಈಗ ಶಾಲೆಯ ಗಂಟೆಯಾಗುವ ಹೊತ್ತಾಯಿತು. ನಾನು ಮನೆಯಲ್ಲಿ ಭೆಟ್ಟಿಯಾಗುತ್ತಿದ್ದೆನಲ್ಲ?" ತಂದೆಯವರ ಆ ಅಸಹ್ಯವಾದ ಹಳ್ಳಿಯ ಉಡಿಗೆಯಿಂದಾಗಿ ನನಗೆ ನಾಚಿಕೆಯೆನಿಸಿತ್ತು. ಇಂಗ್ಲಿಷು ಕಲಿತ ಹುಡುಗರಲ್ಲಿ ನಾನು ಓಡಾಡುತ್ತಿದ್ದೆ. ಯಾವುದರ ಮಹತ್ವವು ನನಗೆ ತಿಳಿಯದಿದ್ದರೂ ಠೀವಿಯ ಉಡಿಗೆಯ ಬಗ್ಗೆ ತಿಳಿವಳಿಕೆ ಬಂದಿತ್ತು. ಆರು ಹರದಾರಿ ನಡೆದು ಬಂದಿದ್ದ ತಂದೆಯ ಪ್ರೇಮದ ಅರಿವು ನನಗಾಗಲಿಲ್ಲ. ನಾನು ಕುರುಡನಾಗಿದ್ದೆ. ಶಿಕ್ಷಣದಿಂದ ಹೃದಯದ ವಿಕಾಸವಾಗುವದರ ಬದಲು ಸಂಕೋಚವೇ ಆಗುತ್ತಿದ್ದಿತು. ಶಿಕ್ಷಣದಿಂದ ಅಂತರದೃಷ್ಟಿ ಬರುವದರ ಬದಲು ನನಗೆ ಬಹಿರ್ದೃಷ್ಟಿಯೇ ಬರುತ್ತಿದ್ದಿತು. ಶಿಕ್ಷಣದಿಂದ ವಸ್ತುವಿನ ಅಂತರಂಗವನ್ನು ಪರಿಶೀಲಿಸುವ ಸಾಮರ್ಥ್ಯ ಬರಬೇಕಾಗಿತ್ತು. ಆದರೆ ವಸ್ತುವಿನ ಬಹಿರಂಗ ಸ್ವರೂಪವನ್ನೇ ಮೆಚ್ಚತೊಡಗಿದ್ದೆ. ಮನುಷ್ಯನಿಗೆ ಬೇರೆಯವರ ಹೃದಯದಲ್ಲಿನ ಸತ್ಯ ಸಂಗತಿಗಳನ್ನು ಕಂಡುಹಿಡಿಯಲು ಕಲಿಸದಂಥ ಶಿಕ್ಷಣಕ್ಕೆ ಶಿಕ್ಷಣವೆನ್ನಬಹುದೆ? ಶಿಕ್ಷಣದಿಂದ ನನಗೆ ಪ್ರತಿಯೊಂದು ವಸ್ತು, ಪ್ರತಿಯೊಂದು ವ್ಯಕ್ತಿ ಜ್ಞಾನಮಂದಿರದಂತೆ ಗೋಚರವಾಗಬೇಕು. ಈ ಎಲ್ಲ ಬಾಹ್ಯ ಸ್ವರೂಪದ ಒಳಗೆ ಹುದುಗಿಕೊಂಡಿರುವ ದಿವ್ಯ ಮತ್ತು ಭವ್ಯಪ್ರಪಂಚದ ದರ್ಶನವು ನಮಗಾಗಲಿಕ್ಕೆ ಬೇಕು. ಅದು ಆಗದಿದ್ದರೆ ನಾವು ಪಡೆದ ಶಿಕ್ಷಣವು ವ್ಯರ್ಥವೆಂದೇ ತಿಳಿಯಬೇಕು. ಹೃದಯ ವಿಕಾಸವು ಜೀವನಕ್ಕೆ ಸೌಂದರ್ಯವನ್ನೂ, ಮೃದುತ್ವವನ್ನೂ ತರುವ ಮಹತ್ವದ ಸಂಗತಿಯಾಗಿದೆ.

ತಂದೆ ಆರು ಹರದಾರಿ ನಡೆದು ಬಂದರು. ಏಕೆ ಬಂದರು? ಆ ಗಿಣ್ಣ-ಆ ಗಿಣ್ಣದ ಒಂದು ವಡೆಯನ್ನು ಮಗನಿಗೆ ಕೊಡುವದಕ್ಕಾಗಿ. ಎಷ್ಟು ಪ್ರೇಮ! ಆ ಪ್ರೇಮಕ್ಕೆ ಕಷ್ಟವೂ ಆನಂದವಾಗಿಯೇ ಕಾಣುತ್ತಿತ್ತು. ಅದುವೇ ನಿಜವಾದ ಪ್ರೇಮ! ಆ ಪ್ರೇಮ ಕಷ್ಟ ನಷ್ಟಗಳನ್ನೂ ಅನುವು ಆಪತ್ತುಗಳನ್ನೂ ಲೆಕ್ಕಿಸುವದಿಲ್ಲ. ಇಂಥ ದಿವ್ಯಪ್ರೇಮ ಚಿಕ್ಕಂದಿನಲ್ಲಿ ನನಗೆ ಲಭಿಸಿತ್ತು. ಇಂದು ನಾನು

ತಾಯಿ ತಂದೆಗಳ ಈ ಪ್ರೇಮದಲ್ಲಿಯೂ ದೋಷವನ್ನು ಕಾಣಬಹುದು. ಅವರು ತಮ್ಮೂರಲ್ಲಿಯ ಒಬ್ಬ ಬಡ ಹುಡುಗನಿಗೆ ಗಿಣ್ಣವನ್ನು ಕೊಟ್ಟಿದ್ದರೆ? ಒಬ್ಬ ಹರಿಜನ ಬಾಲಕನಿಗೆ ಅದನ್ನು ಕೊಟ್ಟಿದ್ದರೆ? ನೆರೆಹೊರೆಯ ಮಕ್ಕಳಲ್ಲಿಯೇ ಶ್ಯಾಮನ ರೂಪವನ್ನು ಅವರೇಕೆ ಕಾಣಲಿಲ್ಲ? ಇಂಥ ಆಕಾರದ, ಇಂಥ ಬಣ್ಣದ, ಇಂಥ ಹೆಸರಿನ ಒಂದು ವಿಶಿಷ್ಟ ಮಾಂಸದ ಮುದ್ದೆಯೇ ತಮ್ಮದೆಂದು ಏಕೆ ಭಾವಿಸಬೇಕು?

ಆದರೆ ಈ ವಿಶಾಲದೃಷ್ಟಿ ಒಮ್ಮೆಲೆ ಬರುವದಿಲ್ಲ. ಮನುಷ್ಯನು ಕ್ರಮವಾಗಿ ಪ್ರಗತಿ ಹೊಂದುತ್ತಾನೆ. ಆಸಕ್ತಿಮಯ ಜೀವನದಿಂದ ನಿರಾಸಕ್ತಿಮಯ ಜೀವನದತ್ತ ಹೊರಳುತ್ತಾನೆ. ನನ್ನ ತಾಯಿ ತಂದೆ ಅಪಾರ ಪ್ರೇಮವನ್ನು ಉಣ್ಣಿಸುತಿದ್ದುದರಫಲವಾಗಿ ಇಂದು ತುಸುವಾದರೂ ಪ್ರೇಮವನ್ನು ಹಂಚಲಿಕ್ಕೆ ಸಮರ್ಥನಾಗಿದ್ದೇನೆ. ಪ್ರೇಮದ ಬೀಜವನ್ನು ನನ್ನಲ್ಲಿ ಚಿಕ್ಕಂದಿನಲ್ಲಿಯೇ ಬಿತ್ತುತ್ತಿದ್ದರು. ಆ ಬೀಜದ ಸಸಿಯೇ ಇನು. ನನಗೂ ಅವರಿಗೂ ತಿಳಿಯದಂತೆ ಇದು ತಾನಾಗಿ ಹುಟ್ಟಿಕೊಂಡಿದೆ. ನನ್ನ ಜೀವನದಲ್ಲಿ ನನ್ನ ಹೃದಯವೆಂಬ ತೋಟದಲ್ಲಿ ನನ್ನ ತಾಯಿ ತಂದೆ ಕೋಮಲ ಮತ್ತು ಪ್ರೇಮಮಯ ಭಾವನೆಗಳ ಸಸಿಯನ್ನು ಹಚ್ಚುತ್ತಿದ್ದರು. ಆ ಕಾರಣದಿಂದಾಗಿಯೇ ಇಂದು ನನ್ನ ಜೀವನದಲ್ಲಿ ತುಸುವಾದರೂ ಆನಂದ ಮತ್ತು ಸೌಗಂಧ ಬೆರೆತುಕೊಂಡಿದೆ. ಇಲ್ಲವಾಗಿದ್ದರೆ ಬಾಡಿ–ಬತ್ತಿ ಬಂಜರವಾಗಿ ಹೋಗುತ್ತಿತ್ತು.

ಹುಡುಗರು ನನ್ನನ್ನು ಕಂಡು ನಕ್ಕರು. "ಇವರೇ ಏನು ನಿನ್ನ ತಂದೆ? ಪಟಗ ಏನು ಸುತ್ತಿದ್ದಾರೆ? ಎಂಥ ಅಸಡ್ಡೆಯಾದ ಕೋಟು?" ಎಂದು ಗೇಲಿ ಮಾಡಿಯಾರೆಂಬ ಚಿಂತೆಯೇ ಚಿಂತೆ. ತಂದೆಯವರ ಹೃದಯವನ್ನು ನಾನು ನೋಡುತ್ತಿರಲಿಲ್ಲ. ನನ್ನದೇ ನನಗೆ ಚಿಂತೆಯಾಗಿದ್ದಿತು. ನನ್ನ ಪ್ರತಿಷ್ಠೆ ಹಾಗು ಪೂಜೆಯ ವಿಚಾರವನ್ನೇ ಮಾಡುತ್ತಲಿದ್ದೆ. ಸಾಮಾನ್ಯವಾಗಿ ನಾವೆಲ್ಲರೂ 'ಅಹಂ ವೇದಿ' ಗಳೇ ಇರುತ್ತೇವೆ. ದ್ವಿವೇದಿ, ತ್ರಿವೇದಿ, ಚತುರ್ವೇದಿಗಳೆಂಬುದೆಲ್ಲ ಸುಳ್ಳು. ನಾವೆಲ್ಲ ಏಕವೇದಿಗಳಾಗಿದ್ದೇವೆ. 'ಅಹಂ!' ಎಂಬುದೇ ಆ ಒಂದು ವೇದದ ಹೆಸರು. ನಮ್ಮ ವಿಚಾರವನ್ನೇ ನಾವು ಮಾಡುತ್ತೇವೆ. ನಮ್ಮ ಮಾನ, ನಮ್ಮ ಸುಖ, ನಮ್ಮ ಆಢ್ಯತೆ, ನಮ್ಮ ಮರ್ಯಾದೆ ಎಲ್ಲವೂ ನಮ್ಮದೇ. ಈ ಕಾರಣದಿಂದಲೇ ನಾವು ದೊಡ್ಡವರಾಗದೆ ಇರುವದು.

ಸ್ವಾರ್ಥವನ್ನು ಬಿಡದವನು ಪ್ರೀತಿಯೆನ್ನೇನು ಮಾಡಬಲ್ಲ ?

ತಂದೆ ಹೇಳಿದರು, " ಶ್ಯಾಮಾ, ನಿನ್ನ ತಾಯಿ ನಿನಗಾಗಿ ಗಣ್ಣ ಕಳಿಸಿದ್ದಾಳೆ. ನಿನಗಾಗಿ ನಾನದನ್ನು ತಂದಿದ್ದೇನೆ. ನೀನೂ ನಿನ್ನ ಗೆಳೆಯರೂ ಕೂಡಿ ತಿಂದು ಈ ಪಾತ್ರೆಯನ್ನು ಬರಿದು ಮಾಡಿಕೊಡಿರಿ. " ಅವರು ಗಣ್ಣದ ಪಾತ್ರೆಯನ್ನು ನನ್ನ ಮುಂದಿಟ್ಟರು. ಬೇರೆ ಹುಡುಗರು ನನ್ನನ್ನು ನೋಡುತ್ತ ಕಿಸಿಕಿಸಿ ನಗುತ್ತಿದ್ದರು. ನನಗೆ ನಾಚಿಕೆ ಎನಿಸಿತ್ತು. ನನ್ನ ತಂದೆ ಮತ್ತೆ ಹೇಳಿದರು, " ಶ್ಯಾಮಾ, ಸುಮ್ಮನೆ ಏನು ನೋಡುತ್ತ ಕುಳಿತೆ? ಬೇಗನೆ ತಿಂದು ಮುಗಿಸಿದರಾಗದೇ ? ನಾಚಿಕೊಳ್ಳಲಿಕ್ಕೇನಾಯಿತು ? ಹುಡುಗರೇ ಬನ್ನಿ, ನೀವೂ ತೆಗೆದುಕೊಳ್ಳಿರಿ. ಒಬ್ಬನೇ ತಿನ್ನಲಿಕ್ಕೆ ಶ್ಯಾಮನು ನಾಚುತ್ತಿರಬಹುದು. ಇಷ್ಟಾಗಿ ಒಬ್ಬರೇ ತಿನ್ನುವದೂ ಸರಿಯಲ್ಲ. ನಾಲ್ಕು ಜನರು ಕೂಡಿ ತಿಂದರೇ ಹಿತವಾಗುವದು. " ಬೇರೆ ಹುಡುಗರು ಹೊರಟು ಹೋದರು. ನಾನು ನನ್ನ ಗೆಳೆಯರು ಮಾತ್ರ ಉಳಿದೆವು. ಗಟ್ಟಿಗನಾದ ಮಿತ್ರನೊಬ್ಬನು ಮುಂದೆ ಬಂದು ಆ ಪಾತ್ರೆಯ ಮೇಲೆ ಕಟ್ಟಿದ ಅರಿವೆಯನ್ನು ಬಿಚ್ಚುತ್ತ ಹೇಳಿದನು, " ಶ್ಯಾಮಾ, ಎಲ್ಲರೂ ಮುಂದೆ ಸರಿಯಿರಿ. ಬೇಗನೇ ತಿಂದು ಮುಗಿಸೋಣ. " ನಾವೆಲ್ಲ ಗಣ್ಣ ಮೆಲ್ಲತೊಡಗಿದೆವು. ತಂದೆಯವರಿಗೆ ಆಯಾಸವಾಗಿದ್ದರಿಂದ ಬದಿಯಲ್ಲಿಯೇ ಗಿಡದ ಅಡಿಯಲ್ಲಿ ಒರಗಿಕೊಂಡಿದ್ದರು. ಅವರು ಗಣ್ಣ ತೆಗೆದುಕೊಳ್ಳಲಿಲ್ಲ. ನಾವು ಕೊಡಹೋದಾಗ 'ಮಕ್ಕಳು ಕೂಡಿ ತಿನ್ನುವದರಲ್ಲಿಯೇ ಮೋಜಿದೆ. ನನಗೇನೂ ಈಗ ಬೇಡ ' ಎಂದು ಸಮಾಧಾನಪಡಿಸಿದರು.

ನಾವು ಗಣ್ಣವನ್ನು ಮುಗಿಸಿಬಿಟ್ಟೆವು. ಬಹಳ ರುಚಿಯಾಗಿತ್ತು. ದಣಿದು ಬಂದ ತಂದೆಯವರಿಗೆ ಜೊಂಪು ಹತ್ತಿತು. ಅಷ್ಟರಲ್ಲಿ ವಿಶ್ರಾಂತಿ ಕಾಲ ಮುಗಿದುದನ್ನು ಸೂಚಿಸುವ ಗಂಟೆ ಬಾರಿಸಿತು. ಅವರು ಒಮ್ಮೆಲೆ ಎಚ್ಚತ್ತು, " ತಿಂದಾಯಿತೇ ಮಕ್ಕಳೇ ? ಪಾತ್ರೆಯನ್ನು ಇಲ್ಲಿ ಕೊಡಿರಿ. ನಾನು ನದಿಯಲ್ಲಿ ಅದನ್ನು ಬೆಳಗಿಕೊಳ್ಳುತ್ತೇನೆ. " ಆ ಪಾತ್ರೆಯನ್ನು ನಾನು ಅವರ ಕೈಯಲ್ಲಿ ಕೊಟ್ಟೆ. ತಂದೆ ಹೊರಟುನಿಂತು ಹೇಳಿದರು, " ಅಭ್ಯಾಸ ಚೆನ್ನಾಗಿ ಮಾಡಪ್ಪ. ಆರೋಗ್ಯ ಕಾಪಾಡಿಕೊಂಡಿರು. ಆಕಳ ಕರು ಚೆನ್ನಾಗಿದೆ. ಒಳ್ಳೆ ಚುರುಕಾದ ಹೋರಿ ಆಗಿದೆ." ಎಂದು ನುಡಿದು ಅವರು ಊರದಾರಿ ಹಿಡಿದರು. ನಾವು ಶಾಲೆಗೆ ಹೋದೆವು.

ನನ್ನದು ನನಗೇ ನಾಚಿಕೆಯೆನಿಸುತ್ತಿತ್ತು. ಇಂಥ ಪ್ರೀತಿಯ ತಾಯಿ ತಂದೆಗಳ ಕೃತಘ್ನ ಮಗನು ನಾನೆಂದು ಮನವು ಹೇಳುತ್ತಿತ್ತು. ಮಾತು ಮಿಂಚಿ ಹೋಗಿತ್ತಾದರೂ ಮನಸ್ಸು ಕೊರಗುತ್ತಲೇ ಇತ್ತು. ಕೇವಲ ಗಿಣ್ಣದ ಸಲುವಾಗಿ ಆರು ಹರದಾರಿ ನಡೆದುಬಂದ ತಂದೆ, ಅವರನ್ನು ಕಳಿಸಿಕೊಟ್ಟ ನನ್ನ ದೊಡ್ಡ ಮನಸ್ಸಿನ ತಾಯಿ ! ಇವರಿಬ್ಬರ ಪ್ರೀತಿಯ ಅನಂತ ಋಣವನ್ನು ಹೇಗೆ ತೀರಿಸಬಲ್ಲೆ ? ನನ್ನ ಸಹಸ್ರಾರು ಸಹೋದರ ಸಹೋದರಿಯರಿಗೆ ನಿರಪೇಕ್ಷ ಪ್ರೇಮದಿಂದ ಸೇವೆ ಸಲ್ಲಿಸಿದರೆ ಮಾತ್ರ ನಾನು ನನ್ನ ತಾಯಿತಂದೆ ಗಳ ಪ್ರೀತಿಯ ಋಣದಿಂದ ಮುಕ್ತನಾಗಬಲ್ಲೆ.

ರಾತ್ರಿ : ೨೮

## : : ಸಾಂಬಸದಾಶಿವ, ಮಳೆ ಸುರಿಸು !

ಆ ವರ್ಷ ಮೊದಲು ಮಳೆ ಚೆನ್ನಾಗಿ ಬಿದ್ದಿತು. ಆಮೇಲೆ ಬೀಳಲೇ ಇಲ್ಲ. ಬಿತ್ತಿಗೆಯಾಗಿತ್ತು. ಆದರೆ ಹೊಲದಲ್ಲಿಯ ಹಸಿಯೆಲ್ಲ ಆರಿಹೋಗಿತ್ತು. ನೆಲ ಬಾಯಿ ಬಿಡಹತ್ತಿತ್ತು. ಸರುವಿನಲ್ಲಿಯ ನೀರು ಸಹ ಬತ್ತಿದ್ದವು. ಬದುವಿ ನಲ್ಲಿಯ ಹುಲ್ಲು ಒಣಗಹತ್ತಿತ್ತು. ಜನರು ಚಿಂತೆಗೊಳಗಾದರು. ಒಕ್ಕಲಿಗನು ಆಕಾಶದತ್ತ ಆಶೆಗಣ್ಣುಗಳಿಂದ ದಿಟ್ಟಿಸುತ್ತಿದ್ದನು. ಎಲ್ಲಿಯಾದರೂ ಕಪ್ಪುಕಲೆ ಕಂಡೀತೇನೋ ಎಂದು ನಿರೀಕ್ಷಿಸುತ್ತಿದ್ದನು. ಮಳೆಯೇ ಎಲ್ಲರ ಆಧಾರ. ಮಳೆಯಿಂದಲೇ ಜಗತ್ತು ನಡೆದಿದೆ. ಅದಿಲ್ಲದಿದ್ದರೆ ಯಾವುದೂ ಇಲ್ಲ. ಜೀವ ನಕ್ಕೆ ನೀರು ಅವಶ್ಯವಾಗಿದೆ. ಆದ್ದರಿಂದಲೇ ನೀರಿಗೆ 'ಜೀವನ' ವೆಂದು ಕರೆದಿ ದ್ದಾರೋ ಏನೋ ? ನನಗೆ ಸಂಸ್ಕೃತ ಭಾಷೆಯ ಬಗ್ಗೆ ಒಮ್ಮೊಮ್ಮೆ ಬಹಳ ಅಭಿಮಾನವೆನಿಸುತ್ತದೆ. ಪೃಥ್ವಿಗೂ, ನೀರಿಗೂ ಇರುವ ಶಬ್ದಗಳಲ್ಲಿ ಕಾವ್ಯವು ತುಂಬಿಕೊಂಡಿದೆ. ಪೃಥ್ವಿಗೆ 'ಕ್ಷಮಾ' ಎಂಬ ಶಬ್ದವನ್ನು ಯೋಚಿಸಿದವನು ಎಷ್ಟು ದೊಡ್ಡ ಕವಿಯಾಗಿರಬಹುದು ! ಅದೇ ರೀತಿ ನೀರಿಗೆ 'ಜೀವನ' ವೆಂದು ಕರೆದವನೂ ವಿಶಾಲಹೃದಯದವನೇ ಸರಿ. ನೀರಿಗೆ ಎಷ್ಟೊಂದು ಮಧುರ ಮಧುರವಾದ ಹೆಸರುಗಳನ್ನು ನಾವು ಕೊಟ್ಟಿದ್ದೇವೆ. ನೀರಿಗೆ ಅಮೃತ, ಪಯ,

ಜೀವನ ಎಂಬ ಸುಂದರವಾದ ಹೆಸರುಗಳನ್ನು ಕೊಟ್ಟಿರುವ ಪೂರ್ವಜರ ಬಗ್ಗೆ ಹೆಮ್ಮೆ ಎನಿಸುತ್ತದೆ. ನೀರಿಗೆ ಅಮೃತವೆನ್ನದೆ ಮತ್ತಾವುದಕ್ಕೆ ಅನ್ನುವದು ? ಬಾಡುತ್ತಿದ್ದ ಹೂವಿನ ಮೇಲೆ ತುಸು ನೀರನ್ನು ಚಿಮುಕಿಸಿರಿ; ಒಣಗುತ್ತಿದ್ದ ಗಿಡಕ್ಕೆ ನೀರೆರೆಯಿರಿ; ಒಣಗಿದ ಹುಲ್ಲಿನ ಮೇಲೆ ಮಂಜಿನ ಹನಿ ಬೀಳಲಿ; ಜೀವನಕ್ಕೆ ಬರುವ ಚೈತನ್ಯವೆಂಥದೆಂಬುದನ್ನು ಆಗ ನೋಡಬಹುದು. ಸಾಯುವವನಿಗೂ ಜೀವ ತಿರುಗಿಸುವ ಮಹಾಶಕ್ತಿ ಈ ನೀರಿನಲ್ಲಿದೆ. ತುಸು ನೀರು ಕುಡಿದರೆ ಸಾಕು, ದಣಿವಾರಿ ಚೈತನ್ಯ ಬರುವದು. ನೀರನ್ನು ವೈದಿಕ ಋಷಿಗಳು 'ಮಾತಾ' ಎಂದು ಕರೆದಿದ್ದಾರೆ. ತಾಯಿ ಮಕ್ಕಳಿಗೆ ಹಾಲು ಕೊಡುತ್ತಾಳೆ. ಆದರೆ ಹಾಲಿಗಿಂತಲೂ ನೀರು ಶ್ರೇಷ್ಠವಾದದ್ದು. ನೀರು ನಿತ್ಯವೂ ಬೇಕು ಮಮತೆಮಾಡುವ ತಾಯಿಯಂತೆ ಈ ನೀರು ಇರುತ್ತದೆಂದು ಋಷಿಗಳ ಹೇಳಿಕೆ. ನೀರಿನಲ್ಲಿರುವಂಥ ಜೀವನಶಕ್ತಿ ಬೇರೆ ಯಾವುದರಲ್ಲಿದೆ ? ನೀರಿನ ಮಹಿಮೆಯನ್ನು ಯಾರು ತಾನೆ ವರ್ಣಿಸಬಹುದು ? ಮೇಲಾಗಿ ಅದು ನಿರಾಡಂಬರ ವಸ್ತು. ಅದಕ್ಕೆ ಬಣ್ಣವಿಲ್ಲ, ವಾಸನೆಯಿಲ್ಲ, ಆಕಾರವಿಲ್ಲ. ಕೊಟ್ಟ ಬಣ್ಣ, ಕೊಟ್ಟ ವಾಸನೆ, ಕೊಟ್ಟ ಆಕಾರವನ್ನು ಅದು ತಾಳಬಹುದು. ನೀರು ಪರಮಾತ್ಮನ ರೂಪಗಳಲ್ಲೊಂದಾಗಿದೆ.

ಆ ವರ್ಷ ಮಳೆ ಹೋಗಿ ಬೆಳೆ ಬಾರದಂತಾಯಿತು. ಬರಗಾಲದ ಲಕ್ಷಣಗಳು ಕಾಣಹತ್ತಿದವು. ಬರಗಾಲದ ಲಕ್ಷಣಗಳು ಹೋಗಿ ಮಳೆಯಾಗಬೇಕೆಂದಿದ್ದಾಗ ನಮ್ಮೂರಲ್ಲಿ ಶಂಕರನಿಗೆ ನೀರು ಕಟ್ಟುವದೊಂದು ಹಿಂದಿನಿಂದ ನಡೆದುಬಂದ ಸಂಪ್ರದಾಯವಿತ್ತು. ಊರಲ್ಲಿ ಶಂಕರನ ಗುಡಿ ಇದೆ. ನೀರಿನಲ್ಲಿ ಶಂಕರನ ಲಿಂಗವನ್ನು ಮುಳುಗಿಸುತ್ತಾರೆ; ಮೂರ್ತಿ ತುಸು ಕೂಡ ಕಾಣಿಸದಷ್ಟು ನೀರು ಹೊಯ್ಯುತ್ತಾರೆ. ಭಟ್ಟರು ರುದ್ರವನ್ನು ಹೇಳುತ್ತಾರೆ. ಕೆಲವರು ನೀರಿನ ಕೊಡಪಾನ ತುಂಬಿ ತಂದು ಸುರುವುತ್ತಿರುತ್ತಾರೆ. ಈ ರೀತಿ ಏಳು ದಿವಸ ಹಗಲಿರುಳು ಅಭಿಷೇಕ ನಡೆಸುತ್ತಾರೆ. ಏಳು ದಿವಸಗಳಲ್ಲಿ ಮಳೆ ಬರದಿದ್ದರೆ ಮಳೆ ಬೀಳುವವರೆಗೂ ಇದು ನಡೆಯತಕ್ಕದ್ದೇ. ಊರ ಜನರೆಲ್ಲ ಸರತಿ ಮಾಡಿಕೊಳ್ಳುತ್ತಾರೆ. ರುದ್ರ ಅನ್ನಲಿಕ್ಕೆ ಬರುವವರದೊಂದು ಯಾದಿ, ನೀರು ತಂದು ಹಾಕುವವರದೊಂದು ಯಾದಿ ಈ ಪ್ರಕಾರ ಮಾಡಿ ಅವರವರಿಗೆ ಸರತಿಯನ್ನು ಮಾಡಿಕೊಡುತ್ತಾರೆ.

ಶಂಕರನ ದೇವಸ್ಥಾನದಲ್ಲಿ ಜನ ತುಂಬ ಸೇರಿತ್ತು. ರುದ್ರದ ಗಂಭೀರ ಸ್ವರವು ಕೇಳಿಬರುತ್ತಿತ್ತು. ರುದ್ರಸೂಕ್ತವು ಗಂಭೀರವಾದದ್ದೂ, ತೇಜಸ್ವಿಯಾದದ್ದೂ, ಉದಾತ್ತವಾದದ್ದೂ ಇದೆ. ಕವಿಯ–ಆ ಋಷಿಯ–ಕಣ್ಣೆದುರಿಗೆ ಇಡೀ ಜಗತ್ತೇ ಇರುವಂತೆ ಕಾಣುತ್ತದೆ. ಸರಸರನೆ ಇಡೀ ಪ್ರಪಂಚವೇ ಅವನ ಕಣ್ಣುಮುಂದೆ ಓಡುತ್ತಿರುವಂತೆ ಕಾಣುತ್ತದೆ. ಅವನು ಜಗತ್ತಿನೊಡನೆ ಏಕ ರೂಪನಾಗಿರುವಂತೆ ಭಾಸವಾಗುತ್ತದೆ. ನಮ್ಮ ತಂದೆಯವರಿಗೂ ರುದ್ರ ಹೇಳಲು ಬರುತ್ತಿತ್ತು. ರಾತ್ರಿ ಹನ್ನೆರಡರ ನಂತರ ಅವರ ಸರತಿ ಬರುತ್ತಿತ್ತು.

ತಾಯಿ ನನಗೆ ಹೇಳಿದಳು, “ದೇವರ ಗುಡಿಗೆ ಹೋಗಲ್ಲ. ನೀನು ನೀರು ತರಲು ನೆರವಾಗುವದಿಲ್ಲವೇನು? ಹೋಗು.”

“ನಾನು ಆ ದೊಡ್ಡ ದೊಡ್ಡ ಕೊಡಪಾನಗಳನ್ನು ಎತ್ತಲಾರೆನಮ್ಮಾ” ಎಂದು ನಾನು ಹೇಳಿದೆ.

“ನಮ್ಮ ಸಣ್ಣ ಬಿಂದಿಗೆಯನ್ನು ತೆಗೆದುಕೊಂಡು ಹೋಗು. ಅದೂ ಭಾರವೆನಿಸಿದರೆ ತಂಬಿಗೆ ತೆಗೆದುಕೊಂಡು ಹೋಗಿ ಬಾವಿಯಲ್ಲಿ ತಂಬಿಗೆ ಮುಳುಗಿಸಿ ಒಂದೊಂದು ತಂಬಿಗೆ ನೀರು ಒಯ್ದು ಹಾಕಿದರೂ ಆದೀತು. ಗಣಪತಿಯ ಬಾವಿಯಲ್ಲಿ ಇಳಿದು ತುಂಬಲಿಕ್ಕೂ ಬರುವದು. ಸುಗಮವಾದ ಮೆಟ್ಟಿಲುಗಳಿವೆ. ಆ ತಂಬಿಗೆ ತೆಗೆದುಕೊಂಡು ಹೋಗು.” ಎಂದು ತಾಯಿ ಹೇಳಿದಳು.

“ಇಷ್ಟು ಸಣ್ಣ ತಂಬಿಗೆ ತೆಗೆದುಕೊಂಡು ಹೋಗುವರೇನು? ನಾಳೆ ನೀನು ತೀರ್ಥದ ಗಿಂಡಿ ತೆಗೆದುಕೊಂಡು ಹೋಗಲು ಹೇಳಬಹುದು. ಅಲ್ಲಿಯ ಜನರು ನಕ್ಕಾರು?” ನಾನು ಮನಸ್ಸಿಲ್ಲದೆ ನುಡಿದೆ.

“ಶ್ಯಾಮೂ, ಸುಮ್ಮನೆ ಯಾರು ಏಕೆ ನಗುವರು? ನೀನು ಹೊರಲಾಗದ ದೊಡ್ಡ ಕೊಡವನ್ನು ತೆಗೆದುಕೊಂಡು ಹೋದರೆ ಮಾತ್ರ ನಗಬಹುದು. ತಮಗೆ ನೀಗದ ಕೆಲಸಕ್ಕೆ ಕೈ ಹಾಕುವದು ಸರಿಯಲ್ಲ. ತಮಗೆ ಶಕ್ಯವಿದ್ದ ಕೆಲಸವನ್ನು ಕೂಡ ಮಾಡದೆ ಸೋಮಾರಿಯಂತೆ ಸುಮ್ಮನೆ ಕುಳಿತುಕೊಳ್ಳುವದು ಮಾತ್ರ ಅಪರಾಧವು. ಇದು ಇಡೀ ಊರಿನ ಕೆಲಸ. ನಿನಗೆ ರುದ್ರ ಅನ್ನಲಿಕ್ಕೆ ಬರದಿದ್ದರೆ ಬರಿ ನೀರು ಹಾಕಬೇಕು. ನಿನ್ನ ಪಾಲಿನ ಕೆಲಸವನ್ನು ನೀನು ಮಾಡಬೇಕು. ಪ್ರತಿಯೊಬ್ಬರೂ ತಮ್ಮ ತಮ್ಮ ಕರ್ತವ್ಯ ಜರುಗಿಸಬೇಕು. ದೊಡ್ಡಸ್ತಿಕೆ ಇಲ್ಲದೆ ನಾಚಿಕೆ ಏಕೆ? ವೈಗಳ್ಳತನ ಸಲ್ಲದು. ಶ್ರೀಕೃಷ್ಣನು ಗೋವರ್ಧನ ಪರ್ವತವನ್ನೆತ್ತಿ

ದಾಗ ಎಲ್ಲ ಗೋಪಾಲರೂ ತಮ್ಮ ತಮ್ಮ ಕೋಲುಗಳಿಂದ ಅದನ್ನು ಎತ್ತಿ ಹಿಡಿದಿದ್ದರು. ಅವರೆಲ್ಲರೂ ಒಂದೇ ಬಗೆಯ ಸಾಮರ್ಥ್ಯದವರಿದ್ದರೇನು ? ನೀನು ಸುಮ್ಮನೆ ಓದುವಿ. ಇದನ್ನೆಲ್ಲ ಓದಿ ಪ್ರಯೋಜನವೇನು ? ಸುಮ್ಮನೆ ತಲೆ ಕೆಡಿಸಿಕೊಳ್ಳುವದು. ಆ ರಾಮನ ಸೇತುವೆಯ ಕಾಲದಲ್ಲಿಯೂ ಇದೇ ರೀತಿ ನಡೆಯಿತಲ್ಲವೇ ? ಹನುಮಂತ, ಸುಗ್ರೀವ, ಅಂಗದ ಮೊದಲಾದ ದೊಡ್ಡ ದೊಡ್ಡ ವಾನರರು ಪರ್ವತವನ್ನು ತರುತ್ತಿರುವಾಗ ಒಂದು ಹದ್ದಿಗೆ ಕೂಡ ರಾಮನ ಸೇತುವೆಗೆ ನೆರವಾಗಬೇಕೆನ್ನಿಸಿತು. ಇದೊಂದು ಪವಿತ್ರವಾದ ಕೆಲಸವೆಂದು ತಿಳಿದುಕೊಂಡಿತ್ತು. ರಾವಣನ ಸಂಹಾರವು ಜಗತ್ತಿನ ಹಿತಕ್ಕಾಗಿ ಇತ್ತು. ಆದುದರಿಂದ ಇಡೀ ಜಗತ್ತು ಅದರಲ್ಲಿ ಭಾಗ ವಹಿಸಬೇಕಾಗಿತ್ತು. ಆ ಹದ್ದು ಉಸುಕಿನಲ್ಲಿ ಹೊರಳಾಡಿ, ತನ್ನ ರೆಕ್ಕೆಗಳಿಗೆ ಹತ್ತಿದ ಉಸುಕನ್ನು ತಂದು ಸೇತುವೆಯ ಹತ್ತರ ಜಾಡಿಸುತ್ತಿತ್ತು. ಹೀಗೆ ಅದು ತನಗೆ ಸಾಧ್ಯವಿದ್ದ ಕೆಲಸವನ್ನು ಮಾಡುತ್ತಿತ್ತು. ನಿನಗೆ ದೊಡ್ಡ ಕೊಡಪಾನ ಎತ್ತದಿದ್ದರೆ ಬಿಂದಿಗೆಯನ್ನು ಎತ್ತು. ಅದು ಭಾರವೆನಿಸಿದಾಗ ತಂಬಿಗೆಯನ್ನು ತೆಗೆದುಕೊ. ಅದೂ ಒಜ್ಜೆ ಎನಿಸಿದರೆ ಸಣ್ಣ ಗಿಂಡಿಯನ್ನು ತೆಗೆದುಕೋ. ಹೋಗು, ಶ್ಯಾಮಾ. ಎಷ್ಟು ಹೇಳಬೇಕು ನಿನಗೆ " ತಾಯಿ ನನಗೆ ತಿಳಿಸಿ ಹೇಳುತ್ತಿದ್ದಳು.

ಕೊನೆಗೆ ನಾನು ಎದ್ದೆ. ಬಿಂದಿಗೆಯನ್ನು ತೆಗೆದುಕೊಂಡು ದೇವಸ್ಥಾನಕ್ಕೆ ಹೋದೆ. ಎಷ್ಟೋ ಹುಡುಗರು ನೀರನ್ನು ಒಯ್ಯುತ್ತಿದ್ದರು. ಶಂಕರನನ್ನು ಮುಳುಗಿಸಿ ನೀರು ಕಟ್ಟುತ್ತಿದ್ದರು. ದೇವಸ್ಥಾನದಲ್ಲಿ ಉಚ್ಚ ಸ್ವರದಲ್ಲಿ ಮಂತ್ರ ಘೋಷಣೆ ಸಾಗಿತ್ತು. ನೀರು ಸುರುವುದು ನಡೆದಿತ್ತು. ಆ ನೋಟವು ಒಳ್ಳೆ ಗಂಭೀರವಾಗಿತ್ತು. ನನಗಿಂತಲೂ ಚಿಕ್ಕ ಚಿಕ್ಕ ಮಕ್ಕಳು ತಂಬಿಗೆ ತುಂಬಿಕೊಂಡು ಹುರುಪಿನಿಂದ ನೀರು ಒಯ್ಯುತ್ತಿದ್ದರು. ನಾನೂ ಅದರಲ್ಲಿ ಸೇರಿಕೊಂಡೆ. ಮೊದಮೊದಲು ತುಸು ನಾಚಿಕೆ ಎನಿಸಿತ್ತು. ಒಬ್ಬ ಭಟ್ಟರು ಕೇಳಿದರು, " ಶ್ಯಾಮೂ, ಇಂದು ನಿನಗೆ ಬರಬೇಕೆನ್ನಿಸಿತೇನು ? ಇಂಗ್ಲೀಸು ಕಲಿತ ಹುಡುಗ ! ನಾಚಿಕೆಯೆನಿಸಿರಬಹುದಲ್ಲದೇ ? " ನಾನು ಬಾಯಿ ಮುಚ್ಚಿಕೊಂಡೇ ಇದ್ದೆ. ಚಿಕ್ಕ ಮಕ್ಕಳು ನೀರು ತರುವಾಗ ಮಂತ್ರ ಜಪಿಸುತ್ತ ಇದ್ದರು. ಅವು ವೇದದಲ್ಲಿಯ ಮಂತ್ರಗಳಾಗಲೀ, ಸಂಸ್ಕೃತ ಮಂತ್ರಗಳಾಗಲೀ ಆಗಿರಲಿಲ್ಲ. ಮಾತೃ ಭಾಷೆಯಲ್ಲಿಯೇ ಹೇಳುತ್ತಿದ್ದ ಸುಲಭ ಮಂತ್ರಗಳಾಗಿದ್ದವು.

‘ ಸಾಂಬ ಸದಾಶಿವ ಮಳೆ ಸುರಿಸು ||
ಭರದಿಂದಲಿ ಹೊಲಗಳ ಬೆಳೆಸು ||
ಕಾಳಿನ ದರಗಳ ನೀನಿಳಿಸು || ’

ಇದೇ ಒಂದು ಅವರ ಮಂತ್ರವಾಗಿತ್ತು. ಮಳೆಯಾಗಲಿ, ಹೊಲ ಬೆಳೆಯಲಿ, ಅಗ್ಗದ ಕಾಲ ಬರಲಿ ಇತ್ಯಾದಿಯಾಗಿ ದೇವರನ್ನು ಆ ಹುಡುಗರು ಪ್ರಾರ್ಥಿಸುತ್ತಿದ್ದರು. ನನಗೆ ಮೊದಲು ನಾಚಿಕೆ ಎನಿಸುತ್ತಿತ್ತು. ಸಂಸ್ಕೃತ ರುದ್ರವೂ ಬರುವಂತಿಲ್ಲ. ಈ ಸುಲಭ ಮಂತ್ರ ಹೇಳಲೂ ಲಜ್ಜೆ. ಆದರೆ ಆ ಹುಡುಗರ ಉತ್ಸಾಹವನ್ನು ಕಂಡು ನನ್ನ ನಾಚಿಕೆ ಓಡಿಹೋಯಿತು. ನಾನು ಗಟ್ಟಿಸಿ ಗಟ್ಟಿಸಿ ‘ ಸಾಂಬ ಸದಾಶಿವ ಮಳೆ ಸುರಿಸು ’ ಎನ್ನತೊಡಗಿದೆ. ನಾನೂ ಆ ಹುಡುಗರಲ್ಲಿ ಕೂಡಿಕೊಂಡು ಬಿಟ್ಟೆ. ಅವರ ಜೊತೆಯಲ್ಲಿಯೇ ಕುಣಿಯತೊಡಗಿದೆ.

ಸಾರ್ವಜನಿಕ ಕೆಲಸಗಳಲ್ಲಿ ತಮಗೆ ಸಾಧ್ಯವಾದಷ್ಟನ್ನು ಮಾಡಬೇಕು. ಅದಕ್ಕೆ ನಾಚಿಕೊಳ್ಳಬಾರದು. ವೈಗಳ್ಳತನ ಮಾಡಬಾರದು. ಇರುವೆಯು ಇರುವೆಯಾಗಿ, ಆನೆಯು ಆನೆಯಾಗಿ ತಮ್ಮ ಪಾಲಿನ ಕೆಲಸ ಮಾಡಬೇಕು.

ರಾತ್ರಿ : ೨೯

## : : ದೊಡ್ಡವನಾಗಲು ಕಳ್ಳತನ

ನಮ್ಮೂರಿನಿಂದ ತುಸು ದೂರದಲ್ಲಿ ಲಾಟವಣವೆಂಬ ಊರಿದೆ. ಅದು ಫಡಕೆಯವರ ಊರು. ಫಡಕೆ ಇನಾಮುದಾರರು ಈಗಲೂ ಅಲ್ಲಿರುತ್ತಾರೆ. ಹರಿಪಂತ ಫಡಕೆಯವರಾದರೂ ಪ್ರಸಿದ್ಧ ಸರದಾರ ಮನೆತನದವರೇ. ಅವರ ಸಂಬಂಧಿಕರಾದ ಬಳವಂತರಾವ ಫಡಕೆ ಅವರಿಗೂ ನಮ್ಮ ತಂದೆಯವರಿಗೂ ಬಹಳ ಸ್ನೇಹ. ಆಗಾಗ್ಗೆ ಅವರು ನಮ್ಮ ಮನೆಗೆ ಬರುತ್ತಿದ್ದರು. ಅವರು ಚಿಕ್ಕವರಾದ ನಮ್ಮೆಲ್ಲರೊಡನೆ ಅಕ್ಕರೆಯಿಂದ ಮಾತನಾಡುತ್ತಿದ್ದರು. ಗರ್ವವೆಂಬುದೇ ಅವರಿಗೆ ಗೊತ್ತಿರಲಿಲ್ಲ. ಸರಳ ಸ್ವಭಾವದವರೂ, ಸಜ್ಜನರೂ ಆಗಿದ್ದರು. ನಾನು ಅವರ ಕೈಯೊಳಗಿನ ಉಂಗುರವನ್ನು ಬಚ್ಚಿಡುತ್ತಿದ್ದೆ. ಆಗ ಅವರು

ಕೇಳುತ್ತಿದ್ದರು, "ಶ್ಯಾಮಾ, ಇದು ನಿನಗೆ ಬೇಕಾಗಿದೆಯೇನು ?" ಹಾಗೆ ಕೇಳಿದಾಗ ನಾನದನ್ನು ನನ್ನ ಬೆರಳುಗಳಿಗೆ ಹಾಕಿಕೊಳ್ಳಲೆತ್ನಿಸುತ್ತಿದ್ದೆ. ಅದು ನನ್ನ ಯಾವ ಬೆರಳಿಗೂ ಸರಿಹೋಗದಷ್ಟು ದೊಡ್ಡದಾಗಿತ್ತು. ಅದು ಕಳಚಿ ಬಿದ್ದು ಬಿಡುತ್ತಿತ್ತು. 'ನೀನು ಮೊದಲು ಪುಷ್ಟನಾಗು. ಆಮೇಲೆ ಅದು ಬರುತ್ತದೆ." ಎಂದು ಅವರು ನಕ್ಕುಬಿಡುತ್ತಿದ್ದರು.

ನಾನು ದಾಪೋಲಿಯಿಂದ ಮನೆಗೆ ಬಂದಿದ್ದೆ. ಆಗ ಬಳವಂತರಾಯರೂ ಮತ್ತೊಬ್ಬರೂ ನಮ್ಮ ಮನೆಗೆ ಅತಿಥಿಯಾಗಿ ಬಂದಿದ್ದರು. ದಾಪೋಲಿಯಲ್ಲಿ ನನಗೆ ಓದುವ ಚಟ ಅಂಟಿಕೊಂಡಿತ್ತು. ಆದರೆ ಒಳ್ಳೆ ಪುಸ್ತಕಗಳು ದೊರೆಯುತ್ತಿರಲಿಲ್ಲ. ದಾಭೋಳಕರ ಮಂಡಳಿಯವರ ಎಲ್ಲ ಪುಸ್ತಕ ಓದುತ್ತಿದ್ದೆ. ಆದರೆ ಅರ್ಥವಾಗುತ್ತಿರಲಿಲ್ಲ. ಸ್ಪೆನ್ಸರನ ಚರಿತ್ರೆಯನ್ನೋದಿದ್ದು ತುಸು ನೆನಪಿದೆ. ಅದೇ ಸಮಯಕ್ಕೆ ಭಾಸ್ಕರಪಂತ ಫಡಕೆಯವರು ರಾಮತೀರ್ಥರ ವ್ಯಾಖ್ಯಾನ ಮಾಲೆಯನ್ನು ಪ್ರಕಟಿಸುತ್ತಿದ್ದರು. ಈ ಫಡಕೆಯವರ ಲೇಖನದ ಪರಿಣಾಮ ನನ್ನಮೇಲೆ ಹೆಚ್ಚಾಗಿ ಆಗುತ್ತಿದ್ದಿತು. ಪ್ರಭಾವಶಾಲಿಯಾದ, ಉಜ್ವಲವಾದ ಭಾಷೆಯು ನನ್ನಲ್ಲಿ ಸ್ಫೂರ್ತಿಯನ್ನು ತುಂಬುತ್ತಿದ್ದಿತು. ನಾನು ಕೆಲವು ವಾಕ್ಯಗಳನ್ನು ಕಂಠಪಾಠ ಮಾಡಿದ್ದೆ. ಆದರೆ ನನಗೆ ರಾಮತೀರ್ಥರ ಪುಸ್ತಕ ದೊರೆತಿರಲಿಲ್ಲ. ನನ್ನ ಯಾವದೋ ಆಪ್ತರಲ್ಲಿ ಅದರ ಒಂದು ಭಾಗವನ್ನು ಕಂಡೆ. ಕೂಡಲೆ ಅದನ್ನು ಕೈಗೆತ್ತಿಕೊಂಡೆ. ಆದರೆ ಆ ಗೃಹಸ್ಥರು ಒಮ್ಮೆಲೆ ಅದನ್ನು ನನ್ನ ಕೈಯಿಂದ ಕಿತ್ತುಕೊಂಡು ಹೇಳಿದರು, "ನಿನಗೇನು ಇವರಲ್ಲಿ ತಿಳಿಯುತ್ತದೆಯೋ ?" ನನಗೆ ಆ ಮಾತಿನಿಂದ ತುಂಬ ವ್ಯಥೆಯಾಯಿತು ಅವರಿಗಿಂತ ನನಗೇ ಅದರ ಅರ್ಥ ತಿಳಿಯಬಹುದಾಗಿತ್ತು. ನಾನು ಕವಿಹೃದಯುವವನಾಗಿದ್ದೆ. ತಾಯಿತಂದೆಗಳು ನನ್ನ ಮನೋಭೂಮಿಕೆಯನ್ನು ಹದಗೊಳಿಸಿದ್ದರು. ಮರಾಠಿಯಲ್ಲಿಯ ಚರಿತ್ರೆ–ಪುರಾಣಗಳನ್ನು ಓದಿ ನನ್ನ ಮನಸ್ಸು ಪ್ರೇಮ ಭಕ್ತಿ ಶ್ರದ್ಧೆ ಮತ್ತು ಭಾವಪೂರ್ಣವಾಗಿದ್ದಿತು. ನನಗೆ ಆ ಪುಸ್ತಕವನ್ನು ಕೊಂಡುಕೊಳ್ಳಬೇಕೆಂದು ಮನಸ್ಸಾಗಿದ್ದಿತು. ಆದರೆ ದುಡ್ಡೊಂದು ಬೇಕಲ್ಲ. ಕ್ಲಾಸಿನ ಪುಸ್ತಕಗಳೇ ನನ್ನಲ್ಲಿ ಪೂರ್ತಿಯಾಗಿ ಇರಲಿಲ್ಲ. ಇಂಗ್ಲೀಷು ಕಲಿಯುತ್ತಿದ್ದೆನಾದರೂ ನನ್ನಲ್ಲಿ ಒಂದಾದರೂ ಶಬ್ದಕೋಶವಿರಲಿಲ್ಲ. ಅಂದಾಜಿನ ಮೇಲೆ ಶಬ್ದಾರ್ಥಗಳನ್ನು ಬರೆದುಕೊಂಡು ಹೋಗುತ್ತಿದ್ದೆ. ರಾಮತೀರ್ಥರ ಭಾಷಣ

ಮಾಲೆ ಬೇಕೆಂದು ನನಗೆ ಅನಿಸಿತ್ತು.

ನಮ್ಮಲ್ಲಿ ಬಂದ ಅತಿಥಿಗಳ ಜೇಬಿನಲ್ಲಿ ಹಣವಿತ್ತು. ಕಟ್ಟುಗಟ್ಲೆ ನೋಟು ಇದ್ದವು. ಅದರಲ್ಲಿ ಒಂದನ್ನು ಹಾರಿಸಿ ಬಿಡಬೇಕೆಂದು ನಾನು ನಿಶ್ಚಯಿಸಿದೆ. ಬೇರೆಯವರ ಹಣವನ್ನು ಅಪಹರಿಸುವದು ಪಾಪವಾಗಿದೆ. ಆದರೆ ಈ ಪಾಪ ಮಾಡಿಯೂ ಪುಸ್ತಕ ಓದುವ ಪುಣ್ಯ ಮಾಡಬೇಕೆಂದು ನನಗೆ ತೋಚಿತು! ನನ್ನ ತಮ್ಮನಿಗೆ ನಾನು ಪದ್ಯವನ್ನು ಕಲಿಸಿ ಕೊಡುತ್ತಿದ್ದೆ.

'ದಯಪಾಲಿಸೆಮಗೆ ಸದ್ಬುದ್ಧಿಯನು ದೇವ ‖'

ಒಳ್ಳೆ ಬುದ್ಧಿಯನ್ನು ಕೊಡುವ ಬಗ್ಗೆ ಪಾಠ ಹೇಳಿಕೊಡುತ್ತಿದ್ದೆ. ಆದರೆ ನಾನಾದರೋ ಕಳ್ಳತನ ಮಾಡಿ ಕುಳಿತುಕೊಂಡಿದ್ದೆ. ನನ್ನ ತಂದೆ ಅತಿಥಿಗಳ ಬಳಿಯಲ್ಲಿಯೇ ಕುಳಿತಿದ್ದರು. ಮತ್ತೆಮತ್ತೆ ಅವರು ನೋಟು ಎಣಿಸಿದರು. ಐದು ರೂಪಾಯಿಯ ಒಂದು ನೋಟು ಕಡಿಮೆ !

"ಭಾವೂರಾಯರೆ, ಐದು ರೂಪಾಯಿ ಹೋದಂತೆ ಕಾಣುತ್ತವೆ" ಎಂದು ಅತಿಥಿಗಳು ಹೇಳಿದರು.

"ಜೇಬುಗಳನ್ನೆಲ್ಲ ಸರಿಯಾಗಿ ನೋಡಿದಿರೇನು? ಮತ್ತಾರಿಗೂ ಕೊಟ್ಟಿಲ್ಲವಷ್ಟೇ ?"

ನನ್ನ ಪದ್ಯಪಾಠ ಅಲ್ಲಿಗೇ ಮುಕ್ತಾಯವಾಯಿತು. ಕಳ್ಳನಿಗೆ ನಿದ್ದೆ ಎಲ್ಲಿ ಬರಬೇಕು? ಒಳಗೆ ತಾಯಿ ಊಟಮಾಡುತ್ತಿದ್ದಳು. ಅವಳ ಹತ್ತರ ಹೋಗಿ ನಾನು ಹರಟುತ್ತ ಕುಳಿತೆ.

"ಅವ್ವಾ, ನಿನಗೆ ಇಷ್ಟು ಅನ್ನ ಸಾಲುವದೇ ? ಇಂದು ಏನೂ ಉಳಿದಂತೆ ಕಾಣಲಿಲ್ಲ." ಎಂದು ನಾನು ಕೇಳಿದೆ. "ಮಗೂ, ಹಸಿವೆಯಾರಿಗಿದೆ ? ಒತ್ತಾಯದಿಂದಲೇ ಎರಡು ತುತ್ತು ಹೊಟ್ಟೆಯಲ್ಲಿ ತುರುಕಿಕೊಳ್ಳುವದು. ಅನ್ನ ನೀರು ಎರಡು ಕೆಲಸ ಮಾಡಲು ಬದುಕಿರಬೇಕಾಗಿದೆಯಲ್ಲ ? ನೀವು ಎಂದಿಗೆ ದೊಡ್ಡವರಾಗುವಿರೋ ಇದನ್ನೇ ನೋಡುತ್ತಿದ್ದೇನೆ ನಾನು." ಎಂದಳು ತಾಯಿ.

"ಅಮ್ಮಾ, ನಿಜವಾಗಿಯೂ ನಾನು ದೊಡ್ಡವನಾಗುತ್ತೇನೆ. ಬಹಳಷ್ಟು ಓದುತ್ತೇನೆ, ಕಲಿಯುತ್ತೇನೆ."

"ಕಲಿ, ಆದರೆ ಒಳ್ಳೆಯವನಾಗು. ಕಲಿತ ಜನರು ಕೆಡುತ್ತಾರೆಂದು ಹೆದರಿಕೆಯಾಗುತ್ತದೆ. ಬಹಳ ಕಲಿಯದಿದ್ದರೂ, ಬಹಳ ದೊಡ್ಡವನಾಗ

ದಿದ್ದರೂ, ಮನಸ್ಸಿನಿಂದ ಒಳ್ಳೆಯವನಾಗಿರು. ' ನನ್ನ ಮಕ್ಕಳು ದೊಡ್ಡವರಾಗದಿದ್ದರೂ ಚಿಂತೆಯಿಲ್ಲ ಗುಣವಂತರಾಗಿ ಇರಲೆಂದು ನಾನು ದೇವರಲ್ಲಿ ಬೇಡಿಕೊಳ್ಳುತ್ತಾ ಇರುತ್ತೇನೆ. " ಎಂದು ತಾಯಿ ಹೇಳಿದಳು. ಪ್ರೇಮಮೂರ್ತಿಯಾದ ನನ್ನ ಮಹಾತಾಯಿ ಹೇಳುವ ಮಾತು ಎಷ್ಟು ಮಧುರವಾಗಿತ್ತು ! ಶಿಕ್ಷಣರಹಿತಳಾದ ನನ್ನ ತಾಯಿ ಇಂಥ ಒಳ್ಳೇ ವಿಚಾರಗಳನ್ನು ಹೇಗೆ ಹೇಳುತ್ತಿದ್ದಳೋ ನನಗೆ ಸೋಜಿಗವೆನಿಸುತ್ತಿತ್ತು. ಮಹಮ್ಮದನಿಗೆ ಜನರು ಕೇಳಿದ್ದರು, " ನೀನು ದೇವರ ಪೈಗಂಬರನಾಗಿದ್ದರೆ ಸೋಜಿಗವನ್ನು ಮಾಡಿ ತೋರಿಸು. " ಆಗ ಮಹಮ್ಮದನೆಂದನು, " ಇಡೀ ಪ್ರಪಂಚವೇ ಸೋಜಿಗವಾಗಿದೆ. ನಾನು ಮತ್ತೆ ಮಾಡುವದೇನಿದೆ ? ಸಮುದ್ರದ ಮೇಲೆ ನಿಮ್ಮ ಚಿಕ್ಕ ಚಿಕ್ಕ ದೋಣಿಗಳು ಗಾಳಿಯಿಂದ ಹೋಗುತ್ತಿವೆ, ಇದು ಸೋಜಿಗವಲ್ಲವೇನು ? ಆ ನೆಲೆಯಿಲ್ಲದ ವಿಶಾಲ ಸಮುದ್ರದ ವಕ್ಷಸ್ಥಳದಲ್ಲಿ ನಿರ್ಭಯವಾಗಿ ಅವು ಕುಣಿಯುತ್ತವೆ, ಅಲ್ಲಾಡುತ್ತವೆ, ಇದು ಸೋಜಿಗವಲ್ಲವೇನು ? ಅಡವಿಗೆ ಮೇಯಲಿಕ್ಕೆ ಹೋದ ದನಗಳು ಪ್ರೀತಿಯಿಂದ ತಾವಾಗಿ ನಿಮ್ಮ ಮನೆಗೆ ಮರಳಿ ಬರುತ್ತವೆ, ಇದು ಸೋಜಿಗವಲ್ಲವೇನು ? ಉಸುಕಿನಲ್ಲಿ ಜುಳು ಜುಳು ಹರಿಯುವ ಝರಿಗಳನ್ನು ಕಾಣುವಿರಿ, ಅದೇ ಉಸುಕಿನಲ್ಲಿ ಮಧುರವಾದ ಖರ್ಜೂರದ ಗಿಡಗಳೂ ಇರುತ್ತವೆ, ಇದು ಚಮತ್ಕಾರವಲ್ಲವೇನು ? " ಹೀಗೆಯೇ ಹೇಳುತ್ತ ಕೊನೆಗೆ ಮಹಮ್ಮದನು ಹೇಳಿದನು, " ನನ್ನಂಥ ಒಬ್ಬ ಹುಂಬನ ಮುಖದಿಂದ ಅವನು ಕುರಾಣವನ್ನು ಹೇಳಿಸುತ್ತಾನೆ, ಇದು ಸೋಜಿಗವಲ್ಲವೇನು ? "

ಗೆಳೆಯರೆ, ನನ್ನ ತಾಯಿಯ ಮುಖದಿಂದ ಅವನು ಕುರಾಣವನ್ನೇ ಹೇಳಿಸುತ್ತಿದ್ದ. ಕುರಾಣವೆಂದರೆ ಹಿಂಡಿ ಹಿಂಡಿ ತೆಗೆದ ಉದ್ಗಾರಗಳು! ತಾಯಿ ಕೂಡ ಅಂತಃಕರಣಪೂರ್ವಕವಾಗಿ ಹೇಳುತ್ತಿದ್ದಳು. ಹೃದಯದಿಂದ ಹಿಂಡಿ ತೆಗೆದ ಶಬ್ದಗಳೇ ಅವು. ಹೃದಯಮಂದಿರದಲ್ಲಿಯ ಪವಿತ್ರ ಶಂಕರಲಿಂಗನ ಧ್ವನಿಯೇ ಆದಾಗಿದ್ದಿತು. ಅವಳ ಮಾತು ನನಗೆ ವೇದವಾಕ್ಯವಾಗಿದ್ದಿತು.

" ದೊಡ್ಡವನಾಗದಿದ್ದರೂ ಗುಣವಂತನಾಗು. " ಘನವಾದ ವಿಚಾರ. ಅದನ್ನು ಕೇಳುತ್ತಿರುವಾಗಲೇ ನನ್ನ ಹೃದಯದಲ್ಲಿ ಚೇಳು ಕುಟುಕುತ್ತಿದ್ದಿತು. ಸರ್ಪವು ಕಚ್ಚುತ್ತಿದ್ದಿತು. ಗೆಳೆಯರೆ, ಇಂಗ್ಲಂಡದಲ್ಲಿ ಟ್ಯೂಡರ್‌ನೆಂಬ ರಾಜನಾಗಿ ಹೋದನು. ಅವನ ಕಾಲಕ್ಕೆ ಎಲ್ಲೆಲ್ಲಿಯೂ ಗುಪ್ತಪೋಲೀಸರ ಪಡೆಯೇ

ಪಡೆ. ಒಬ್ಬ ಇತಿಹಾಸಕಾರನು ಬರೆದಿದ್ದಾನೆ, "ಆ ಕಾಲದಲ್ಲಿ ಪ್ರತಿಯೊಬ್ಬನ ತಲೆದಿಂಬಿನ ಕೆಳಗೂ ಚೇಳು ಇರುತ್ತಿದ್ದವು." ಎಲ್ಲಿಯೂ ಭರವಸೆಯಿಟ್ಟು ತಲೆ ಇಡಲಿಕ್ಕೆ ಆ ರಾಜ್ಯದಲ್ಲಿ ಆಸ್ಪದವಿರಲಿಲ್ಲ. ಹೃದಯ ರಾಜ್ಯದಲ್ಲಿ ಕೂಡ ಚೇಳುಗಳಿವೆ. ಅವು ನಿಮ್ಮನ್ನು ಮಲಗಿಗೊಡುವದಿಲ್ಲ. ಯಾವಾಗಲೂ ನಿಮ್ಮ ಬೆನ್ನಗುಂಟ ಬರುತ್ತವೆ. ಪಾತಾಳಕ್ಕೆ ಹೋದರೂ, ಸ್ವರ್ಗಕ್ಕೆ ಹೋದರೂ ಆ ಗುಪ್ತಚಾರರು ಇರತಕ್ಕವರೇ. ವಿವೇಕದ ಶಿವಿತ ಯಾವಾಗಲೂ ಇರ ತಕ್ಕದ್ದೇ.

"ಮನೆಯಲ್ಲಿಯಂತೂ ಯಾರೂ ಬಂದಿಲ್ಲ. ಸೋಜಿಗವೇ ಎನ್ನಬೇಕು!" ತಂದೆ ಹೇಳಿದರು.

"ಬೇರೆ ಯಾರಾದರೂ ಹುಡುಗರು ಬಂದಿದ್ದರೋ ಹೇಗೆ? ಶ್ಯಾಮನ ನ್ನಾದರೂ ಕೇಳಿರಿ. ಕೆಲವು ಹುಡುಗರು ಕೆಟ್ಟವರಿರುತ್ತಾರೆ. ಇತ್ತೀಚಿನ ಹುಡುಗರು ದುಶ್ಚಟಗಳಿಗೆ ಬಲಿ ಬಿದ್ದಿರುತ್ತಾರೆ. ಚುಟ್ಟ, ಪಾನಬೀಡಾದ ಅಭ್ಯಾಸ ಮಾಡಿಬಿಟ್ಟಿರುತ್ತಾರೆ. ಶ್ಯಾಮಾ, ಎಲೋ ಶ್ಯಾಮಾ," ಬಳವಂತ ರಾಯರು ಕೂಗಿದರು.

"ಏನು?" ನಾನು ಹೋಗಿ ಕೇಳಿದೆ. ಬಳವಂತರಾಯರು ವಿಚಾರಿಸಿ ದರು, "ನಿನ್ನ ಗೆಳೆಯರು ಯಾರಾದರೂ ಬಂದಿದ್ದರೇ ಶ್ಯಾಮಾ? ಐದರ ಒಂದು ನೋಟು ಕಾಣೆಯಾಗಿದೆ."

"ಇಲ್ಲರಪ್ಪಾ, ನಾನೇ ಇಂದು ಹೊರಗೆ ಆಡಲಿಕ್ಕೆ ಹೋಗಿದ್ದೆ. ಸಾಯಂ ಕಾಲ ತಿರುಗಿ ಬಂದೆ."

ನಮ್ಮ ತಂದೆ ವಿಚಾರಿಸಿದರು, "ಶ್ಯಾಮಾ, ನೀನು ತೆಗೆದುಕೊಂಡಿಲ್ಲ ವಷ್ಟೆ? ತೆಗೆದುಕೊಂಡಿದ್ದರೆ ಹೇಳು."

"ಛೀ, ಬಿಡಿರಿ. ಅವನೇಕೆ ತೆಗೆದುಕೊಂಡಾನು?" ಎಂದು ಬಳವಂತ ರಾಯರು ನುಡಿದರು.

ತಾಯಿ ಕೈ ತೊಳೆದುಕೊಂಡು ಬಂದಳು. ಅವಳಿಗೂ ಎಲ್ಲ ಸಮಾ ಚಾರ ಗೊತ್ತಾಯಿತು. ತಂದೆಯವರಿಗೆ ದಿಗಿಲು ಬಿದ್ದಂತಾಯಿತು. ತಮ್ಮ ಮನೆಯಲ್ಲಿ ದುಡ್ಡು ಹೋಗುವದು ಗೌಣವೇ ಆಗಿದ್ದಿತು. ಅವರು ಮತ್ತೆ ನನ್ನನ್ನು ಕೇಳಿದರು, "ಶ್ಯಾಮಾ, ಖಂಡಿತ ನೀನು ದುಡ್ಡನ್ನು ತೆಗೆದುಕೊಳ

ಲಿಲ್ಲವೇ ? ಕಂಪಾಸ ಪೆಟ್ಟಿಗೆಗೆಂದೋ ಮತ್ತೆ ಯಾವುದಕ್ಕಾದರೂ ತೆಗೆದುಕೊಂಡಿದ್ದರೆ ಹೇಳು. ಕಂಪಾಸು ಪೆಟ್ಟಿಗೆಗೆಂದು ಹಣ ಕೇಳುತ್ತಿದ್ದೆ. "

ತಾಯಿ ಹೇಳಿದಳು, " ಶ್ಯಾಮು ತೆಗೆದುಕೊಳ್ಳಲಾರ. ಅವನು ಹಟ ಮಾಡಿದರೂ, ಸಿಟ್ಟಿಗೆದ್ದರೂ ಯಾರ ವಸ್ತುವಿಗೂ ಕೈ ಹಚ್ಚತಕ್ಕವನಲ್ಲ. ಅಷ್ಟೊಂದು ಒಳ್ಳೆ ಗುಣ ಅವನಲ್ಲಿದೆ. ಹಾಗೆ ಮಾಡಿದ್ದೇ ಆದರೂ, ಅವನು ಒಪ್ಪಿಕೊಂಡು ಬಿಡುತ್ತಾನೆ. ಬಚ್ಚಿಡುವದಿಲ್ಲ ಹಿಂದೊನ್ಮೆ ಒಂದು ವಡೆ ತೆಗೆದುಕೊಂಡಿದ್ದಾಗ ಒಮ್ಮೆಲೆ ತಾನು ತೆಗೆದುಕೊಂಡಿರುವುದಾಗಿ ಹೇಳಿಬಿಟ್ಟ. ಶ್ಯಾಮನು ತೆಗೆದುಕೊಂಡಿರಲಾರ. ತೆಗೆದುಕೊಂಡಿದ್ದರೂ ಒಪ್ಪಿಕೊಂಡುಬಿಡುವ. ಶ್ಯಾಮಾ, ನೀನು ಅವರ ಜೇಬಿಗೆ ಕೈಹಾಕಲಿಲ್ಲವಷ್ಟೇ ? "

ತಾಯಿಯದು ನನ್ನ ಮೇಲೆ ಎಷ್ಟೊಂದು ವಿಶ್ವಾಸ ! " ಅವನು ತೆಗೆದುಕೊಳ್ಳಲಾರ, ತೆಗೆದುಕೊಂಡರೆ ಒಪ್ಪಿಬಿಡುತ್ತಾನೆ. " ಎಷ್ಟು ಶ್ರದ್ಧೆಯದು ! ಇಂಥ ತಾಯಿಯ ವಿಶ್ವಾಸಘಾತ ಮಾಡಬಹುದೇ ? ತುಕಾರಾಮರು ತಮ್ಮ ಅಭಂಗದಲ್ಲಿ ಹೇಳಿದ್ದಾರೆ, ' ವಿಶ್ವಾಸಕ್ಕೆ ಅರ್ಹವಾದ ಜಾತಿಯೇ ಶ್ರೇಷ್ಠವಾದ ಜಾತಿ ' ಯೆಂದು. ಅವರೇ ಧನ್ಯರಾದ ಜನರು. ನನ್ನ ಅಸತ್ಯದ ಕೋಟೆ ಕುಸಿಯಿತು. ತಾಯಿಯ ಸರಲ ಹಾಗು ಶ್ರದ್ಧೆಯುಳ್ಳ ಶಬ್ದಮಾತ್ರದಿಂದ ನನ್ನ ಕೋಟೆ ಕಳಚಿ ಬಿತ್ತು. ನೆಲಸಮವಾಯಿತು.

ಕಣ್ಣು ನೀರು ಸುರಿಸತೊಡಗಿದವು. ಆ ನಿರ್ಬಲವಾದ ಕಣ್ಣೀರುಗಳಲ್ಲಿ ಪಾಪದ ಬೆಟ್ಟವು ತೇಲತೊಡಗಿತು. " ಶ್ಯಾಮಾ, ಅಳಬೇಡ. ನೀನೇ ತೆಗೆದುಕೊಂಡೆಯೆಂದು ನಾನೆಲ್ಲಿ ಹೇಳಿದೆ ? ನೀನು ಅಂಥ ಹುಡುಗನೇ ಅಲ್ಲ. ನನಗೆ ಗೊತ್ತೇ ಇದೆ ! " ಎಂದು ತಾಯಿ ಹೇಳಿದಳು.

ತಾಯಿಯ ಮಾತುಗಳಿಂದ ನಾನು ಮತ್ತಷ್ಟು ಕರಗಿ ಹೋದೆ. ಒಮ್ಮೆಲೆ ತಾಯಿಯ ಬಳಿ ಧಾವಿಸಿ ನಾನು ಅಳುತ್ತಳುತ್ತಲೇ ಹೇಳಿದೆ, " ಅಮ್ಮಾ, ನಿನ್ನ ಶ್ಯಾಮನೇ ಆ ನೋಟನ್ನು ತೆಗೆದಿದ್ದ. ತೆಗೆದುಕೋ ಇದನ್ನು. ಅಮ್ಮಾ........ಅಮ್ಮಾ........ ! "

ನನ್ನ ಬಾಯಿಯಿಂದ ಮಾತು ಹೊರಡದಂತಾಯಿತು ತಾಯಿಗೆ ದುಃಖವಾಯಿತು. " ನನ್ನ ಮಗನು ತೆಗೆದುಕೊಳ್ಳಲಾರ ? " ಎಂಥ ವಿಶ್ವಾಸವದು ? ತನ್ನ ಮಗನ ಮೇಲೆ ಇದ್ದ ಅಹಂಕಾರ ಹಾಗು ಅಭಿಮಾನವು ಮಾಯ

ವಾಯಿತು. ಸಂಪೂರ್ಣ ಮಾಯವಾಗಿರಲಿಲ್ಲ. ದೇವರು ಅವಳ ಮಾನ ಉಳಿಸಿದ್ದನು. "ತೆಗೆದುಕೊಳ್ಳಲಾರ, ತೆಗೆದುಕೊಂಡಿದ್ದರೆ ಒಪ್ಪಿಕೊಂಡು ಬಿಡುವ" ಅವಳ ಮುಗನು ಸಂಪೂರ್ಣ ಒರೆಗೆ ಹತ್ತೀದಿದ್ದರೂ ಅರ್ಧದಷ್ಟಾದರೂ ಹತ್ತಿದ್ದ.

"ಶ್ಯಾಮ, ಮತ್ತೆಂದಿಗೂ ಈ ರೀತಿ ಕಳವು ಮಾಡಬೇಡ. ಇದೇ ಮೊದಲನೆಯ ಹಾಗು ಕೊನೆಯದಾಗಲಿ. ನೀನು ಒಪ್ಪಿಕೊಂಡದ್ದು ಒಳ್ಳೆಯದಾಯಿತು. ಸುಮ್ಮನಾಗಿನ್ನು ಅಳಬೇಡ." ತಾಯಿ ನನ್ನನ್ನು ಪರಿಪರಿಯಿಂದ ಸಮಾಧಾನಪಡಿಸಿದಳು.

ಬಳವಂತರಾಯರೂ ನನ್ನನ್ನು ಸಂತೈಸಿದರು. ನನಗಾಗಿ ನಮ್ಮ ತಾಯಿಯ ಕೈಯಲ್ಲಿ ಒಂದು ರೂಪಾಯಿ ಕೊಟ್ಟರು.

"ಶ್ಯಾಮಾ, ಆ ನೋಟನ್ನೇಕೆ ತೆಗೆದು ಕೊಂಡಿದ್ದೆ?" ತಾಯಿ ಕೇಳಿದಳು.

"ಅಮ್ಮಾ, ದೊಡ್ಡವನಾಗಬೇಕೆಂದು, ಪುಸ್ತಕ ಓದಿ ದೊಡ್ಡವನಾಗಬೇಕೆಂದು!"

"ಎಂಥ ಹುಚ್ಚನೋ ನೀನು? ಆ ಮೊದಲನೇ ಪುಸ್ತಕದಲ್ಲಿ, 'ಸುಳ್ಳನಾಡಲು ಬೇಡ ಜನರೊಳು ಕಳ್ಳನೆನಿಸಲು ಬೇಡ.' ಎಂಬುದನ್ನು ಓದಿರುವೆ. ಅದನ್ನೇ ಇನ್ನೂ ಸರಿಯಾಗಿ ಕಲಿತುಕೊಂಡಿಲ್ಲ; ಬೇರೆ ಪುಸ್ತಕಗಳೇಕೆ ಬೇಕು?" ಎಂದು ತಾಯಿ ನುಡಿದಳು. ಅದು ಬಹಳ ಆಳವಾದ ವಿಚಾರವಾಗಿದ್ದಿತು.

ಗೆಳೆಯರೆ, ಪತಂಜಲಿಯ ಭಾಷ್ಯದಲ್ಲಿ ಇಂಥದೇ ಒಂದು ವಾಕ್ಯವಿದೆ. "ಏಕಃ ಶಬ್ದಃ ಸಮ್ಯಕ್ ಜ್ಞಾತಃ ಸ್ವರ್ಗೇ ಲೋಕೇ ಕಾಮಧುಗ್ಭವಂತಿ।" ಒಂದೇ ಶಬ್ದವಿರಲಿ, ಆದರೆ ಅದರ ಸರಿಯಾದ ಜ್ಞಾನವಾಗಿದ್ದರೆ ಮನುಷ್ಯನಿಗೆ ಮೋಕ್ಷವು ದೊರೆಯುತ್ತದೆ. "ಸಮ್ಯಕ್ ಜ್ಞಾತಃ"—ಸರಿಯಾಗಿ ತಿಳಿದುಕೊಂಡವನು; ಬರಿ ಓದಿದವನಲ್ಲ, ಉರು ಹಾಕಿದವನಲ್ಲ, ಸರಿಯಾಗಿ ತಿಳಿದುಕೊಂಡವ. ಸರಿಯಾಗಿ ತಿಳಿದುಕೊಂಡವುಗಳನ್ನು ನಾವು ನಮ್ಮ ಅನುಭವದಲ್ಲಿಯೂ ಆಚರಣೆಯಲ್ಲಿಯೂ ತರುತ್ತೇವೆ. ಚಿಕ್ಕ ಮಗು ಲಾಟನಿಗೆ ಕೈಹಚ್ಚಬೇಕೆನ್ನುತ್ತದೆ. ಲಾಟನಿನ ಗ್ಲಾಸು ಕಾದಿರುತ್ತದೆ. ತಾಯಿ ಮಗುವನ್ನು

ದೂರ ಸರಿಸುತ್ತಾಳೆ. ಮತ್ತೆ ಅದು ದೀಪದ ಬಳಿಗೆ ಹೋಗುತ್ತದೆ. ಕೊನೆಗೆ ತಾಯಿ ಹೇಳುತ್ತಾಳೆ, " ಹಚ್ಚು, ಕೈ ಹಚ್ಚು. " ಆ ಕೂಸು ಕೈಹಚ್ಚುತ್ತದೆ. ಕೈಗೆ ಬಿಸಿ ತಾಗುತ್ತದೆ, ಸುಡುತ್ತದೆ. ಆಮೇಲೆ ಎಂದೂ ಆ ಕೂಸು ಲಾಟನಿಗೆ ಕೈ ಹಚ್ಚುವದಿಲ್ಲ. ಅದಕ್ಕೆ ಪೂರ್ಣ ಜ್ಞಾನವಾಗಿರುತ್ತದೆ. ಅಂತೆಯೇ ಸಾಕ್ರೇಟೀಸನು ಜ್ಞಾನಕ್ಕೆ ಸದ್ಗುಣವೆಂದು ಕರೆದಿದ್ದಾನೆ. ಸಂಸ್ಕೃತದಲ್ಲಿಯೂ ಶ್ರೇಷ್ಠವಾದ ಜ್ಞಾನಕ್ಕೆ ಅನುಭೂತಿಯೆಂಬ ಶಬ್ದವನ್ನು ಉಪಯೋಗಿಸುತ್ತಾರೆ. ಅನುಭೂತಿಯೆಂದರೆ ಅನುಭವ. ಜೀವನದಲ್ಲಿ ಅನುಭವಿಸುವದೇ ಜ್ಞಾನ.

" ಕಳ್ಳನೆನಿಸಲು ಬೇಡ " ಎಂಬ ವಾಕ್ಯವನ್ನು ನಾನು ಓದಿದ್ದೆ. ಆದರೆ ಕಲಿತಿರಲಿಲ್ಲ. ಸತ್ಯ, ದಯೆ, ಪ್ರೇಮ, ಅಹಿಂಸೆ, ಬ್ರಹ್ಮಚರ್ಯ – ಸಣ್ಣ ಸಣ್ಣ ಶಬ್ದಗಳು ! ನಾವು ಸುಲಭವಾಗಿ ಉಚ್ಚರಿಸುತ್ತೇವೆ. ಆದರೆ ಅವುಗಳ ನಿಜ ಜ್ಞಾನವಾಗಲು ನೂರಾರು ಜನ್ಮಗಳಾದರೂ ಸಾಲದು !

ರಾತ್ರಿ : ೩೦

## : : ವಯಸ್ಸಿನಿಂದ ದೊಡ್ಡವನಲ್ಲ....ಮನಸ್ಸಿನಿಂದ

ಮೇ ತಿಂಗಳ ಬಿಡುವು ಮುಗಿಸಿ ನಾನು ಕಲಿಯಲಿಕ್ಕೆ ಮರಳಿ ದಾಪೋಲಿಗೆ ಹೋದೆ. ಶಾಲೆ ಆರಂಭವಾಯಿತು ಮಳೆಗಾಲವೂ ಆರಂಭವಾಯಿತು. ಕಾಯ್ದ ಭೂಮಿಯನ್ನು ಮಳೆರಾಯನು ಶಾಂತಗೊಳಿಸತೊಡಗಿದನು. ಕಾಯ್ದ ಭೂಮಿಯ ಮೇಲೆ ನೀರು ಬಿದ್ದಾಗ ಒಂದು ಬಗೆಯ ಸುಂದರ ವಾಸನೆ ಬಿಡುತ್ತದೆ. " ಗಂಧವತೀ ಪೃಥ್ವೀ " ಎಂಬ ವಚನದ ನೆನಪು ಆ ಕಾಲಕ್ಕೆ ಬರುವದು. ಹೂವು ಮತ್ತು ಹಣ್ಣುಗಳಲ್ಲಿರುವ ರಸ, ಪರಿಮಳ ಮತ್ತು ಮಾಧುರ್ಯವು ಪೃಥ್ವಿಯ ಹೊಟ್ಟೆಯಿಂದಲೇ ಬಂದುದು.

ಮನೆಯಿಂದ ದಾಪೋಲಿಗೆ ಹೋಗುವಾಗ ನಾನೊಂದು ನಿರ್ಧಾರವನ್ನು ಮಾಡಿದ್ದೆ. ರಜೆಯಲ್ಲಿ ಮನೆಯಲ್ಲಿದ್ದಾಗ ಒಂದು ದಿವಸ ನನ್ನ ತಮ್ಮ ಹೊಸ ಅಂಗಿ ಬೇಕೆಂದು ಹಟ ಹಿಡಿದು ಕುಳಿತುಕೊಂಡಿದ್ದ ಆಗ ಅವನನ್ನು ಸಮಾಧಾನಪಡಿಸಲೆಂದು ತಾಯಿ ಹೇಳಿದಳು, " ನಿನ್ನ ಅಣ್ಣಂದಿರು ದೊಡ್ಡವರಾಗಿ ಸಂಪಾದನೆ ಮಾಡಹತ್ತಿದರೆಂದರೆ ನಿನಗೆ ಆರು ತಿಂಗಳಿಗೊಂದು ಅಂಗಿ ಹೊಲಿಸಿ

ಕೊಡುತ್ತಾರೆ. ಈಗ ಹಟ ಹಿಡಿಯಬೇಡ." ಗೆಳೆಯರೇ! ನಾನು ಸಣ್ಣವನಿದ್ದಾಗ ಬಟ್ಟೆಯ ಹಾವಳಿ ಅಷ್ಟೊಂದು ಇರಲಿಲ್ಲ ಕೋಟು ನಮಗೆ ಗೊತ್ತೇ ಇರಲಿಲ್ಲ. ಎರಡು ವರ್ಷಕ್ಕೊಮ್ಮೆ ಹೊಸ ಅಂಗಿಯನ್ನು ಕಾಣುತ್ತಿದ್ದೆವು. ಚಳಿಗಾಲದಲ್ಲಿ ಧೋತರದ ಚೌಕವನ್ನು ಮಾಡಿ ಕೊರಳಿಗೆ ಸುತ್ತಿಕೊಂಡು ಶಾಲೆಗೆ ಹೋಗುತ್ತಿದ್ದೆವು. ಜಾಕೀಟು, ಓವರ್‌ಕೋಟು, ಮಫ್‌ಲರು ಇರಲಿಲ್ಲ. ಈಗ ಪಟ್ಟಣಗಳಲ್ಲಂತೂ ಕೇಳುವದೇ ಬೇಡ. ಹಳ್ಳಿಗಳಲ್ಲಿಯೂ ವಿವಿಧ ಬಗೆಯ ಬಟ್ಟೆಗಳು ಬೇಕಾಗುತ್ತವೆ. ಗಾಳಿ, ಬೆಳಕು ಮೈಗೆ ತಾಕಿದಷ್ಟೂ ಒಳ್ಳೆಯದು. ಗಾಳಿ ಬೆಳಕುಗಳ ರೂಪದಲ್ಲಿ ದೇವರೇ ನಮ್ಮ ಶರೀರವನ್ನು ಸ್ವಚ್ಛ ಮಾಡಲು ಬರುತ್ತಾನೆ. ಆದರೆ ಸೃಷ್ಟಿಕರ್ತನಿಗೆ ನಾವು ಅಂಗಸ್ಪರ್ಶ ಮಾಡಿಗೊಡುವದಿಲ್ಲ. ಇದರಿಂದಾಗಿ ಹಲವಾರು ರೋಗಗಳು ನಮ್ಮಲ್ಲಿ ಮನೆ ಮಾಡಿಕೊಳ್ಳುತ್ತವೆ. ಒಬ್ಬ ರಷ್ಯನ್ ಡಾಕ್ಟರನು ಹೇಳಿದ್ದಾನೆ, "ಜಗತ್ತಿನಲ್ಲಿಯ ಅನೇಕ ರೋಗಗಳು ಹೆಚ್ಚಿನ ಬಟ್ಟೆಗಳಿಂದಲೇ ಆಗುತ್ತವೆ" ರಷ್ಯಾದಲ್ಲಿ ಚಳಿ ಬಹಳ ಇಲ್ಲದಾಗ ಅಲ್ಲಿಯ ಹುಡುಗರು ಬರಿ ಒಂದು ಕಚ್ಚೆ ಸುತ್ತಿಕೊಂಡು ಶಾಲೆಗೆ ಹೋಗುತ್ತಾರೆ. ಬಟ್ಟೆಯನ್ನು ಕಡಿಮೆ ಉಪಯೋಗಿಸುವ ಕ್ರಮವನ್ನು ನೂತನ ರಷ್ಯವು ಆರಂಭಿಸುತ್ತಲಿದೆ. ರಷ್ಯವು ವಿಚಾರಶೀಲ ದೃಷ್ಟಿಯನ್ನು ಇಟ್ಟುಕೊಂಡು, ಅದರಂತೆ ನಡೆಯಬೇಕೆಂದು ಯತ್ನ ನಡೆಸಿದೆ.

ನನ್ನ ತಮ್ಮನ ಅಂಗಿ ಹರಿದಿತ್ತು. ತಾಯಿ ಅದಕ್ಕೆ ಎರಡು ಮೂರು ಪಟ್ಟಿಗಳನ್ನು ಜೋಡಿಸಿ ಹೊಲಿದುಕೊಟ್ಟಿದ್ದಳು. ನನ್ನ ತಮ್ಮನಿಗೆ ಹೊಸ ಅಂಗಿಯನ್ನು ಹೊಲಿಸಿಕೊಂಡು ಹೋಗುವದೆಂದು ನಾನು ನಿರ್ಣಯಿಸಿಕೊಂಡಿದ್ದೆನು. ಆದರೆ ಹಣವನ್ನೆಲ್ಲಿಂದ ತರುವದು?

ನನ್ನ ತಂದೆ ಕೋರ್ಟು ಕಚೇರಿಯ ಕೆಲಸದ ನಿಮಿತ್ತ ಮೇಲಿಂದಮೇಲೆ ದಾಪೋಲಿಗೆ ಬರುತ್ತಿದ್ದರು. ದಾರಿದ್ರ್ಯವು ಗಂಟು ಬಿದ್ದಿತ್ತಾದರೂ ಕಚೇರಿ ಕಟ್ಟೆಯ ದಲ್ಲಾಳಿ ಬಿಟ್ಟಿರಲಿಲ್ಲ. ಅದೂ ಒಂದು ವ್ಯಸನವೇ ಇರುತ್ತದೆ. ಕೆಲವರಿಗಂತೂ ಕೋರ್ಟು ಕಚೇರಿಯ ಕೆಲಸಗಳಿಲ್ಲದೆ ಸಮಾಧಾನವೇ ಆಗುವದಿಲ್ಲ. ಸ್ವಂತ ಕೆಲಸಗಳು ಇಲ್ಲದೆ ಹೋದರೆ ಬೇರೆಯವರ ಕೆಲಸಗಳಲ್ಲಿ ತೊಡಗುತ್ತಾರೆ. "ನಿನ್ನ ಮೊಕದ್ದಮೆ ನಾನು ಗೆದ್ದುಕೊಟ್ಟರೆ ಆದರಲ್ಲಿ ನನಗೆ ಇಂತಿಷ್ಟು ದುಡ್ಡು ಕೊಡಬೇಕು, ಸೋತರೆ ಆದ ವೆಚ್ಚವೆಲ್ಲ ನನ್ನದು" ಎಂದು

ಮಾತು ಮಾಡಿಕೊಂಡು ವ್ಯಾಜ್ಯಗಳ ಗುತ್ತಿಗೆ ವಹಿಸಿಕೊಳ್ಳುವ ಜನರನ್ನು ನಾನು ನೋಡಿದ್ದೇನೆ.

ತಂದೆಯವರು ದಾಪೋಲಿಗೆ ಬಂದಾಗ ಆಣೆ, ಎರಡಾಣೆ ನನಗೆ ತಿಂಡಿ ತಿನ್ನುವದಕ್ಕೆಂದು ಕೊಟ್ಟು ಹೋಗುತ್ತಿದ್ದರು. ತಿಂಡಿಗೋಸ್ಕರ ಕೊಟ್ಟ ಹಣವನ್ನು ನಾನು ವೆಚ್ಚ ಮಾಡದೆ ಕೂಡಿ ಇಡುವದೆಂದು ನಿಶ್ಚಯಿಸಿದೆ. ಜ್ಯೇಷ್ಠ ಮಾಸದಲ್ಲಿ ನಮ್ಮ ಶಾಲೆ ಆರಂಭವಾಯಿತು. ಗಣೇಶಚತುರ್ಥಿಗೆ ಮೂರು ತಿಂಗಳ ಅವಧಿ ಇತ್ತು. ಆ ಮೂರು ತಿಂಗಳಲ್ಲಿ ಒಂದೆರಡು ರೂಪಾಯಿ ಕೂಡಿಬಿದ್ದರೆ ಗಣಪ್ಪನ ಹಬ್ಬಕ್ಕೆ ತಮ್ಮನಿಗೆ ಹೊಸ ಅಂಗಿ ಹೊಲಿಸಿಕೊಂಡು ಹೋಗುವದೆಂದು ಯೋಜನೆ ಮಾಡಿದ್ದೆ.

ಧ್ಯೇಯದ ಮೇಲೆ ಕಣ್ಣಿಟ್ಟಿದ್ದೆ. ಆಗಾಗ್ಗೆ ಕೂಡಿಟ್ಟ ಹಣವನ್ನು ಲೆಕ್ಕ ಮಾಡುತ್ತಿದ್ದೆ. ಗಣೇಶಚತುರ್ಥಿ ಸಮೀಪಿಸುತ್ತಿದ್ದಿತು. ಆಗಾಗಲೆ ನನ್ನಲ್ಲಿ ಒಂದು ರೂಪಾಯಿ ಎರಡಾಣೆ ಗಂಟು ಕೂಡಿತ್ತು. ಗಣಪ್ಪನ ಹಬ್ಬಕ್ಕೆ ಹೊಸ ಬಟ್ಟೆ ಹೊಲಿಸುವದೊಂದು ವಾಡಿಕೆ. ನಮ್ಮೂರ ಹುಡುಗರಿಗೆ ಅವರ ತಾಯಿ ತಂದೆ ಹೊಲಿಸಬಹುದು. ಆದರೆ ನನ್ನ ತಮ್ಮನಿಗೆ ಯಾರು ಹೊಲಿಸಬೇಕು? ಅವನಿಗೆ ನಾನು ಹೊಲಿಸಿ ಕೊಡುವೆನು.

ನಾನು ಸಿಂಪಿಗನಲ್ಲಿ ಹೋದೆ. ನನ್ನ ತಮ್ಮನ ವಯಸ್ಸಿನ ಒಬ್ಬ ಹುಡುಗ ನನ್ನ ಜೊತೆಗೆ ಒಯ್ದಿದ್ದೆ ಅವನ ಮೈ ಅಳತೆ ಕೊಟ್ಟು ಒಂದು ಕೋಟು ಹೊಲಿಯಲಿಕ್ಕೆ ಹೇಳಿದೆ. ಎರಡು ಗಜ ಬಟ್ಟೆ, ಒಂದು ಗಜ ಒಳ ಅರಿವೆ ಕೊಂಡು ಕೊಟ್ಟೆ. ಕೋಟು ಸಿದ್ಧವಾಯಿತು. ಹತ್ತರ ಇದ್ದ ಹಣದಲ್ಲಿ ಎಲ್ಲ ವೆಚ್ಚ ಪೂರೈಸಿತು.

ನಾನು ಆ ಕೋಟನ್ನು ಕೈಯಲ್ಲಿ ತೆಗೆದುಕೊಂಡಾಗ ಕಣ್ಣುಗಳು ಆನಂದ ಬಾಷ್ಪಗಳನ್ನು ಸುರಿಸಿದವು. ಹೊಸ ಬಟ್ಟೆಗೆ ಶುಭ ಸೂಚಕವೆಂದು ಕುಂಕುಮವನ್ನು ಹಚ್ಚುತ್ತಾರೆ. ಆದರೆ ಪ್ರೇಮಸೂಚಕವಾದ ಕಣ್ಣೀರಿನ ಹನಿಗಳನ್ನೇ ಅವುಗಳ ಮೇಲೆ ನಾನು ಉದುರಿಸಿದೆ.

ನಾನು ಊರಿಗೆ ಹೊರಟು ನಿಂತೆ. ಮಳೆ ನಾನೂ ಬರುತ್ತೇನೆಂದು ಹಟ ಹಿಡಿದಿತ್ತು. ನಾನು ಯಾರಲ್ಲಿದ್ದೆನೋ ಆ ಮನೆಯವರು ಹೇಳಿದರು, " ಮಳೆ ಬರುವ ಸಂಭವವಿದೆ. ಹಳ್ಳ-ಕೊಳ್ಳಗಳು ತುಂಬಿ ಬಂದಿರಬಹುದು. ಪಿಸಯೀ

ಹಳ್ಳ, ಸೊಂಡೇಮನೆಹಳ್ಳ ಇವುಗಳಿಗೆ ಮಹಾಪೂರ ಬಂದಿರಬಹುದು. ದಾರಿ ಕಟ್ಟಾಗಿದ್ದರೆ ತೊಂದರೆ ಪಡಬೇಕಾದೀತು. ನಮ್ಮ ಮಾತನ್ನಾದರೂ ಕೇಳು" ನಾನು ಯಾರ ಮಾತನ್ನೂ ಕೇಳಲಿಲ್ಲ. ಹೃದಯದಲ್ಲಿನ ಪ್ರೇಮಕ್ಕೆ ಪೂರ ಬಂದಾಗ ಹಳ್ಳ-ಕೊಳ್ಳಗಳ ಪೂರವನ್ನು ಯಾರು ಲೆಕ್ಕಿಸುತ್ತಾರೆ?

ಹೊಸ ಕೋಟನ್ನು ಸರಿಯಾಗಿ ಕಟ್ಟಿಕೊಂಡು ಹೊರಟೆ. ರೆಕ್ಕೆಗಳಿದ್ದರೆ ಒಮ್ಮೆಲೆ ಹಾರಿ ಹೋಗುತ್ತಿದ್ದೆ. ನಡೆಯುವ ಆಯಾಸವೆನಿಸುತ್ತಿರಲಿಲ್ಲ. ಸುಖ ಸ್ವಪ್ನದಲ್ಲಿ ಮಗ್ನನಾಗಿದ್ದೆ. ತಾಯಿಗೆಷ್ಟು ಸಂತೋಷವಾಗಬಹುದಲ್ಲ- ಎಂಬ ಕಲ್ಪನಾ ವಿಲಾಸದಲ್ಲಿದ್ದೆ. ಒಂದು ಚಿಣಗೀಹಾವು ನನ್ನ ಕಾಲ ಬಳಿಯಲ್ಲಿಯೇ ಹಾಯ್ದು ಹೋಯಿತು. ಅದು ಹಸರು ಬಣ್ಣದ್ದಿತ್ತು. ನಾನು ತುಸು ಅಂಜಿದೆ. ಹುಷಾರಾಗಿ ನಡೆಯತೊಡಗಿದೆ. ಪಿಸಯೀ ಹಳ್ಳ ತುಂಬಿ ಹರಿಯುತ್ತಿತ್ತು. ಸೆಳವು ಹೆಚ್ಚಾಗಿ ಇತ್ತು. ಏನು ಮಾಡುವುದು? ತಾಯಿಯ ಸ್ಮರಣೆಮಾಡುತ್ತ ನೀರಿನಲ್ಲಿ ಸರಸರನೆ ನಡೆಯತೊಡಗಿದೆ ಕುತ್ತಿಗೆಮಟ ನೀರು ಇದ್ದವು. ನನ್ನ ಕೈಯಲ್ಲಿಯ ಕೋಲನ್ನು ಊರುತ್ತ ಧೈರ್ಯದಿಂದ ಅಡಿಯಿಡುತ್ತಿದ್ದೆ. ನಾನು ತೇಲಿ ಹೋಗುವವರಲ್ಲಿಯೇ ಇದ್ದೆ. ಆದರೆ ಹೇಗೆ ಪಾರಾಗಿ ಬಂದೆನೋ ದೇವರಿಗೆ ಗೊತ್ತು. ನನ್ನ ಪ್ರೀತಿಯು ನನ್ನನ್ನು ಕಾಪಾಡುತ್ತಿದ್ದಿತು. ಬೇರೆ ನದಿ-ಹಳ್ಳಗಳಿಗೆ ಪ್ರೀತಿಯಿಂದ ಭೆಟ್ಟಿ ಕೊಡಲಿಕ್ಕೆ ಹೊರಟಿದ್ದ ಆ ಹಳ್ಳವು ನನ್ನನ್ನೇಕೆ ಮುಳುಗಿಸೀತು? ನಾನು ನನ್ನ ತಮ್ಮನ ಭೆಟ್ಟಿಗಾಗಿ ಹೊರಟಿದ್ದೆ. ಆ ಹಳ್ಳದಷ್ಟೇ ಉತ್ಸುಕನಾಗಿ ರಭಸದಿಂದ ಸಾಗಿದ್ದೆ. ಆ ಹಳ್ಳದಂತೆ ಹೃದಯ ತುಂಬಿಯೇ ನಾನೂ ಹೊರಟಿದ್ದೆ.

ದಾರಿಯ ಮೇಲಿನ ಖಡಿಗಳು ಎದ್ದು ಸೂಜಿಯಂತೆ ಚುಚ್ಚುತ್ತಿದ್ದವು. ಆ ಕಡೆಗೆ ನನ್ನ ಗಮನವಿರಲಿಲ್ಲ. ಕತ್ತಲಾಗುವ ಮೊದಲು ಊರು ಸೇರಬೇಕೆಂಬ ಸಾಹಸ ನಡೆಸಿದ್ದೆ. ಆದರೆ ದಾರಿಯಲ್ಲಿಯೇ ಕತ್ತಲಾಯಿತು. 'ಕಡ್ ಕಡ್ ಕಡಲ್' ಎಂದು ಆಕಾಶವು ಗರ್ಜನೆ ಮಾಡುತ್ತಿದ್ದಿತು. ಮಿಂಚಿನ ಅಬ್ಬರ ಒಂದೇಸಮನೆ ನಡೆದಿತ್ತು. ಖಳ ಖಳ ಸದ್ದಿನೊಂದಿಗೆ ನೀರು ಹರಿಯುತ್ತಿತ್ತು. ಆ ಪಂಚ ಮಹಾಭೂತಗಳ ಕುಣಿತದಲ್ಲಿ ನಾನೊಬ್ಬನೇ ಹೊರಟಿದ್ದೆ.

ಕೊನೆಗೊಮ್ಮೆ ಮನೆಗೆ ಬಂದು ಸೇರಿದೆನು. ಮೈಯೆಲ್ಲ ಒದ್ದೆಮುದ್ದೆಯಾಗಿ ಹೋಗಿತ್ತು. 'ಅವ್ವಾ,' ನಾನು ಹೊರಗಿನಿಂದ ಕೂಗಿದೆ. ಮಳೆ

ಯಿಂದಾಗಿ ಹವೆ ಬಹಳ ತಂಪಾಗಿತ್ತು. ತಂದೆಯವರು ಸಂಧ್ಯಾವಂದನೆ ಮಾಡುತ್ತಿದ್ದರು. ಕಾಸಿಕೊಳ್ಳುವದಕ್ಕಾಗಿ ಅಗ್ಗಿಷ್ಟಿಕೆಯಲ್ಲಿ ತಾಯಿ ಕೆಂಡ ಹಾಕಿ ಕೊಟ್ಟಿದ್ದಳು.

"ಅಣ್ಣ ಬಂದ, ಅಮ್ಮಾ, ಅಣ್ಣ ಬಂದ!" ಚಿಕ್ಕ ತಮ್ಮನು ಬಾಗಿಲು ತೆಗೆದನು. ಇಬ್ಬರೂ ತಮ್ಮಂದಿರು ಭೆಟ್ಟಿಯಾದರು.

"ಇಂಥ ಮಳೆಯಲ್ಲಿ ಏಕೆ ಬಂದೆ ಶ್ಯಾಮಾ? ಪೂರ್ಣ ತೊಯ್ದುಕೊಂಡು ಬಂದೆಯಷ್ಟೆ?" ತಾಯಿ ಕೇಳಿದಳು.

"ಸೊಂಡೇಮನೆ ಹಳ್ಳಕ್ಕೆ ನೀರು ಬಂದಿರಲಿಲ್ಲವೇನೋ?" ತಂದೆ ವಿಚಾರಿಸಿದರು.

"ಹೋ, ಬಂದಿತ್ತು. ನಾನು ಹೇಗೋ ದಾಟಿಕೊಂಡು ಬಂದೆ."

"ಆ ದಿವಸ ಒಬ್ಬ ಹೆಣ್ಣುಮಗಳು ಅದರಲ್ಲಿ ತೇಲಿ ಹೋದಳು." ತಂದೆ ನುಡಿದರು.

"ಗಣಪತಿಯ ಕೃಪೆ. ಆಗಲಿ ಮೊದಲು ಒದ್ದೆ ಬಟ್ಟೆಯನ್ನೆಲ್ಲ ಬಿಚ್ಚಿಡು. ಬಿಸಿನೀರಿನಿಂದ ಸ್ನಾನ ಮಾಡು." ತಾಯಿ ಹೇಳಿದಳು.

ನಾನು ಸ್ನಾನಕ್ಕೆ ಹೋದೆ. ಚಿಕ್ಕ ತಮ್ಮನು ನನ್ನ ಸಣ್ಣ ಗಂಟನ್ನು ಬಿಚ್ಚಿದನು. ಮಕ್ಕಳಿಗೆ ಈ ಬಗೆಯ ಅಭ್ಯಾಸ ಬಹಳ. ತಮಗಾಗಿ ಏನಾದರೂ ತಂದಿರಬಹುದೆಂದು ಅವರು ಭಾವಿಸಿಕೊಂಡಿರುತ್ತಾರೆ. ಆದರೆ ನಾನೇನು ತಾನೆ ತರಬಲ್ಲೆ? ಯಾವ ಆಟಿಗೆ ತರಲಿ? ಯಾವ ಮಿಠಾಯಿ ತರಲಿ? ಯಾವ ಚಿತ್ರಗಳನ್ನು ತರಲಿ? ಯಾವ ಪುಸ್ತಕಗಳನ್ನು ತರಲಿ? ನಾನು ಬಡವನಾಗಿದ್ದೆ.

ನನ್ನ ತಮ್ಮನಿಗೆ ಗಂಟಿನಲ್ಲಿ ಏನೋ ದೊರೆಯಿತು. ಕೋಟು ದೊರೆಯಿತು. ಹೊಸ ಕೋಟು! ಅದು ಕೋಟು ಆಗಿರದೆ ಹೃದಯವಾಗಿತ್ತು! ಪ್ರೇಮವಾಗಿತ್ತು! ತಾಯಿ ಕಲಿಸಿದ ಶಿಕ್ಷಣದ ಫಲವಾಗಿತ್ತು!

"ಅಣ್ಣಾ, ಈ ಸಣ್ಣ ಕೋಟು ಯಾರದು? ಈ ಹೊಸ ಕೋಟು ಯಾರಿಗಾಗಿ?" ಚಿಕ್ಕ ತಮ್ಮನು ಕೋಟನ್ನು ತೆಗೆದುಕೊಂಡು ನನ್ನ ಬಳಿಗೆ ಬಂದು ವಿಚಾರಿಸಿದನು.

"ಆಮೇಲೆ ಹೇಳುವೆನು. ಒಳಗೆ ತೆಗೆದುಕೊಂಡು ಹೋಗು" ನಾನೆಂದೆ.

"ಅಮ್ಮಾ, ಈ ಕೋಟು ನೋಡು. ಅಣ್ಣನ ಮೈಗಂತೂ ಬರುವದಿಲ್ಲ.

ಇದನ್ನು ನನಗಾಗಿ ತಂದಿರುವನಲ್ಲವೇ ? " ತಮ್ಮನು ತಾಯಿಯನ್ನು ವಿಚಾರಿಸ ತೊಡಗಿದನು.

ತಾಯಿಯು ಒಣಗಿದ ಧೋತರವನ್ನು ಕೊಟ್ಟಳು. ನಾನು ಒಲೆಯ ಮುಂದೆ ಕಾಸಿಕೊಳ್ಳುತ್ತ ಕುಳಿತುಕೊಂಡೆ.

ತಾಯಿ ಕೇಳಿದಳು, " ಶ್ಯಾಮಾ, ಇದಾರ ಕೋಟು ? "

" ಮೋರೂಜೋಶಿಯವರ ಮನೆಗೆ ಮುಟ್ಟಿಸುವದಿದೆಯೇನು ? ಕ್ಯಾಂಪ್ ನಲ್ಲಿಯ ಮಾಲೀಕನು ಕಳಿಸಿರಬಹುದು ! " ತಂದೆ ನುಡಿದರು.

" ಇಲ್ಲ. ಇದನ್ನು ನಾನು ಪುರುಷೋತ್ತಮನಿಗಾಗಿ ಹೊಲಿಸಿ ತಂದಿದ್ದೇನೆ. " ನಾನು ಹೇಳಿದೆ.

" ಹಣವನ್ನಾರು ಕೊಟ್ಟರೋ ? ಯಾರಿಂದಾದರೂ ಸಾಲ ತೆಗೆದುಕೊಂಡೆಯೋ, ಫೀ ಹಣವನ್ನೇ ಎತ್ತಿ ಹಾಕಿದೆಯೋ ? " ತಂದೆ ವಿಚಾರಿಸಿದರು.

" ಯಾರ ಜೇಬಿಗಾದರೂ ಕೈ ಹಾಕಲಿಲ್ಲ ತಾನೆ ? " ತಾಯಿ ನಡುಗುವ ದನಿಯಿಂದ ಕೇಳಿದಳು.

" ಅಮ್ಮಾ, ಆ ದಿವಸ ನೀನು ಹೇಳಿದ್ದೆ, ' ಇದೇ ಮೊದಲನೆ ಹಾಗು ಕೊನೆಯ ಕಳ್ಳತನ ' ವೆಂದು. ಅದನ್ನು ನಾನು ಮರೆಯುವೆನೇ ? ಸಾಲವನ್ನೂ ತೆಗೆಯಲಿಲ್ಲ, ಕಳ್ಳತನವನ್ನೂ ಮಾಡಲಿಲ್ಲ, ಫೀ ಹಣವನ್ನೂ ಬಳಸಲಿಲ್ಲ. " ನಾನು ಹೇಳಿದೆ.

" ಹಾಗಾದರೆ ಕಡ ಹೇಳಿ ಹೊಲಿಸಿ ತಂದೆಯೇನು ? " ತಂದೆ ಮತ್ತೆ ಕೇಳಿದರು.

" ಭಾವೂ, ನೀವು ಆಗಾಗ್ಗೆ ಆಣೆ, ಎರಡಾಣೆ ಕೊಡುತ್ತ ಬಂದುದನ್ನು ಕೂಡಿಸಿಟ್ಟಿದ್ದೆ. ಕಳೆದ ಎರಡು ಮೂರು ತಿಂಗಳಿಂದಲೂ ಕೂಡಿಸಿಟ್ಟು ಕೋಟು ಹೊಲಿಸಿ ತಂದೆನು. ಪುರುಷೋತ್ತಮನಿಗೆ ತಾಯಿ ಹೇಳುತ್ತಿದ್ದಳು, " ನಿನ್ನ ಅಣ್ಣಂದಿರು ದೊಡ್ಡವರಾದ ಮೇಲೆ ನಿನಗೆ ಹೊಸ ಕೋಟು ಹೊಲಿಸಿ ಕೊಡುತ್ತಾರೆ." ಗಣಪ್ಪನ ಹಬ್ಬದ ಹೊತ್ತಿಗೆ ಒಂದು ಕೋಟು ಹೊಲಿಸಿ ತರುವದೆಂದು ಆವಾಗಲೇ ನಾನು ನಿರ್ಧರಿಸಿದ್ದೆ. ಪುರುಷೋತ್ತಮಾ, ನೋಡು ಇದು ನಿನ್ನ ಮೈಗೆ ಸರಿಹೋಗುವದೇನು ? " ಎಂದು ನಾನು ಆಡಿದೆ.

" ಅಣ್ಣಾ, ಇದು ನೋಡು ಎಷ್ಟು ಚೆಂದ ಕಾಣುತ್ತದೆ ? ಒಳಗೊಂದು

ಜೇಬು! ಇನ್ನು ನನ್ನ ಪಾಟೀಕಡ್ಡಿ ಕಳೆಯಲಾರದು ನೋಡಮ್ಮ!" ಪುರುಷೋತ್ತಮನು ತಾಯಿಗೆ ತೋರಿಸಹತ್ತಿದನು.

ನಾನು ಹೇಳಿದ ಸಮಾಚಾರಗಳನ್ನು ಕೇಳಿ ತಾಯಿಯ ಹೃದಯ ಉಕ್ಕಿ ಬಂದಿತು. ಅವಳೆಂದಳು, "ಶ್ಯಾಮಾ, ನೀನು ವಯಸ್ಸಿನಿಂದ ದೊಡ್ಡವನಲ್ಲ, ದುಡ್ಡಿನಿಂದ ದೊಡ್ಡವನಲ್ಲ, ವಿದ್ಯೆಯಿಂದ ದೊಡ್ಡವನಲ್ಲ, ಆದರೆ ಇಂದು ನೀನು ಮನಸ್ಸಿನಿಂದ ದೊಡ್ಡವನಾಗಿರುವೆ! ಮಕ್ಕಳೇ, ಮುಂದಾದರೂ ಇದೇ ರೀತಿ ಪ್ರೀತಿಯಿಂದ ನಡೆದುಕೊಳ್ಳಿರಿ. ದೇವರೇ ಈ ಪ್ರೇಮಕ್ಕೆ ದೃಷ್ಟಿಯಾಗದಿರಲಿ!"

ತಂದೆಯವರೂ ತಮ್ಮ ಪ್ರೇಮ ಹಸ್ತಗಳನ್ನು ನನ್ನ ಬೆನ್ನ ಮೇಲೆ ಸವರಿದರು. ಅವರು ಮಾತನಾಡಲಿಲ್ಲ. ಆ ಹಸ್ತಗಳಲ್ಲಿಯೇ ಎಲ್ಲ ಮಾತು ಬೆರೆತಿದ್ದವು.

"ಅಮ್ಮಾ, ಇದಕ್ಕೆ ಕುಂಕುಮವನ್ನು ಹಚ್ಚಲಾ?" ಪುರುಷೋತ್ತಮನು ವಿಚಾರಿಸಿದನು.

"ಮಗೂ, ಈಗ ಮಡಿಕೆ ಹಾಕಿ ಇಡು. ನಾಳೆ ಕುಂಕುಮ ಹಚ್ಚಿ ದೇವರಿಗೆ ನಮಸ್ಕಾರ ಮಾಡಿ ತೊಟ್ಟುಕೊಳ್ಳುವೆಯಂತೆ. ಹೊಸ ಕೋಟು ಧರಿಸಿಕೊಂಡು ಗಣಪತಿ ತರಲಿಕ್ಕೆ ಹೋಗುವಿಯಂತೆ." ತಾಯಿ ಹೇಳಿದಳು.

ರಾತ್ರಿ : ೩೧

## : : ಲಾಡಘರದ ತಾಮಸ್ತೀರ್ಥ

ರಾಜನಿಗೆ ಇಂದು ಮರಳಿ ಹೋಗಬೇಕಾಗಿತ್ತು. ಅವನಿಗೆ ವಿಷಾದವೆನಿಸಿತ್ತು. ಶ್ಯಾಮನ ತಾಯಿಯ ಸವಿನೆನಪುಗಳನ್ನು ಕೇಳುವದು ತಪ್ಪುವದಲ್ಲ ಎಂದು ಅವನಿಗೆ ಕಳವಳ. ಆದರೆ ಕರ್ತವ್ಯವು ಕಠೋರವಾದದ್ದು. ಕರ್ತವ್ಯ ಪಾಲನೆಗಾಗಿ ಎಲ್ಲ ಮೋಹಗಳನ್ನೂ ಬಿಡಬೇಕಾಗುವದು. ಒಳ್ಳೇ ಮಾತಿನ ಮೋಹವನ್ನೂ ತ್ಯಜಿಸಬೇಕಾಗುತ್ತದೆ. ಮೋಹವೆಂದರೆ ಕೆಟ್ಟ ಮಾತಿನ ಬಗ್ಗೆ ಮಾತ್ರ ಇರುವದಿಲ್ಲ. ಒಳ್ಳೇ ಮಾತಿನ ಮೋಹವೂ ಇರುವದುಂಟು.

“ಶ್ಯಾಮಾ, ಇನ್ನು ಮತ್ತೆ ನಾವು ಕೂಡುವುದೆಂದು? ನಿನ್ನ ರಸವಾಣಿಯನ್ನು ಮತ್ತೆಂದು ಕೇಳುವೆನು? ನೀನು ಹೇಳುವ ನೆನಪುಗಳು ಸಾದಾ ನೆನಪುಗಳಾಗಿದ್ದರೂ ಅದರಲ್ಲಿ ಸುಂದರವಾದ ಧರ್ಮವನ್ನು ನೀನು ತೋರಿಸುವಿ. ಕೃಷ್ಣನ ಪುಟ್ಟ ಬಾಯಿಯಲ್ಲಿ ಯಶೋದೆಯು ವಿಶ್ವವನ್ನು ಕಂಡಂತೆ ನಿನ್ನ ಸಣ್ಣ ಸಣ್ಣ ಮಾತುಗಳಲ್ಲಿ ಧರ್ಮ ಮತ್ತು ಸಂಸ್ಕೃತಿಯ ವಿಶಾಲವಾದ ದರ್ಶನವಾಗುತ್ತದೆ. ಶ್ಯಾಮಾ, ಇವು ಕಥೆಯಿಂದ ತುಂಬಿದ ಧರ್ಮ ಅಥವಾ ಧರ್ಮದಿಂದ ತುಂಬಿದ ಕಥೆಗಳಾಗಿವೆಯೆಂದು ನಿನ್ನೆಯೇ ನಾನು ರಾಮನ ಮುಂದೆ ನುಡಿದಿದ್ದೇನೆ. ಕಥೆಯ ರೂಪದಲ್ಲಿ ನೀನು ಧರ್ಮವನ್ನು ಬೋಧಿಸುತ್ತಿರುವೆ. ಧರ್ಮರೂಪದಲ್ಲಿ ನೀನು ಕಥೆಗಳನ್ನು ಹೇಳುತ್ತಿರುವೆ. ನಿತ್ಯದ ನಮ್ಮ ಸಾದಾ ಜೀವನದಲ್ಲಿ ಕೂಡ ಎಷ್ಟೊಂದು ಆನಂದವನ್ನು ತುಂಬಲಿಕ್ಕೆ ಬರುವುದೆಂಬುದನ್ನು ನೀನು ತೋರಿಸಿಕೊಡುತ್ತಿರುವಿಯಲ್ಲವೇ? ಈ ಜೀವನಮಾರ್ಗದಲ್ಲಿ ಸುಖ ಮತ್ತು ಸಂಪತ್ತಿನ ಕೊರತೆಯಿಲ್ಲ ಸಹೋದರ-ಸಹೋದರಿಯರ ಮೇಲಿನ ಪ್ರೇಮ, ದನ–ಕರುಗಳ ಮೇಲಿನ ಪ್ರೇಮ, ಪಶು–ಪಕ್ಷಿಗಳ ಮೇಲಿನ ಪ್ರೇಮ ಈ ಎಲ್ಲದರ ಮೂಲಕ ಜೀವನವನ್ನು ಸಮೃದ್ಧ, ಸುಂದರ ಮತ್ತು ಭಾಗ್ಯಶಾಲಿಯನ್ನಾಗಿ ಮಾಡಲಿಕ್ಕೆ ಬರುತ್ತದೆ. ನಿನ್ನ ನೆನಪುಗಳನ್ನು ಕೇಳುತ್ತಿದ್ದಂತೆ ಎಷ್ಟೊಸಲ ಅತ್ತುಬಿಟ್ಟಿದ್ದೇನೆ. ನೀನು ಪ್ರೇಮದ ಹಸಿವೆಯಿಂದ ಕಂಗಾಲಾದ ಬಗ್ಗೆ ವರ್ಣಿಸುತ್ತಿದ್ದಾಗ ನನ್ನ ಹೃದಯ ತುಂಬಿ ಬಂದಿತ್ತು. ಶ್ಯಾಮಾ, ಇನ್ನೆಂದು ನಿನ್ನ ಮುಕ್ತಾಫಲಗಳನ್ನು ಸವಿಯಬಲ್ಲೆ? ನೀನು ಶ್ಯಾಮಸುಂದರ ಕೃಷ್ಣನ ಮುರಲಿಯೇ ಆಗಿಲ್ಲವಷ್ಟೇ?”

“ರಾಜಾ, ಬಣ್ಣಿಸಿ ಮಾತನಾಡುವದೊಂದು ನಿನ್ನ ಅಭ್ಯಾಸವಾಗಿದೆ. ನೀನು ನನ್ನನ್ನು ಪ್ರೀತಿಸುತ್ತಿರುವದರಿಂದ ನಾನು ಹೇಳುವದೆಲ್ಲ ನಿನಗೆ ಒಳ್ಳೆಯದೆಂದು ತೋರುತ್ತದೆ. ನನ್ನಲ್ಲಿ ಇರುವ ಒಂದೇ ಒಂದು ಗುಣವೆಂದರೆ ಆತ್ಮೀಯತೆ. ಆ ಆತ್ಮೀಯತೆಯಲ್ಲಿ ಎಲ್ಲವೂ ಮುಚ್ಚಿ ಹೋಗುತ್ತದೆ. ನಾನು ಕೀರ್ತನ ಮಾಡುವಾಗ್ಗೆ ಸಂಗೀತ ಮತ್ತು ಗಾಯನದ ಕೊರತೆಯನ್ನು ನನ್ನಲ್ಲಿರುವ ಉತ್ಸಾಹ ಮತ್ತು ಆತ್ಮೀಯತೆಯಿಂದ ಹೋಗಲಾಡಿಸುತ್ತೇನೆ. ರಾಜಾ, ನನ್ನಲ್ಲಿ ಬೇರೆ ಏನಿದೆ. ನಿಜಕ್ಕೂ ಯಾವುದೂ ಇಲ್ಲ. ನಾನು ಬರೀ ಮಾತಿನ ಬೊಂಬೆ. ಕೆಲಸವನ್ನೆಲ್ಲ ನೀವು ಮಾಡುತ್ತೀರಿ. ನಾನು ಬರೀ ಕಥೆಗಳನ್ನೂ-

ನೆನಪುಗಳನ್ನೂ ಹೇಳುವೆನು. ಮಾತಿನ ಮಲ್ಲ ನಾನು, ಕ್ಷತಿಯ ವೀರರು ನೀವು. ರಾಜಾ, ಮನದಲ್ಲಿಯೇ ಅದೆಷ್ಟೋ ಸಲ ನಾನು ನಿಮ್ಮ ಚರಣಗಳ ಮೇಲೆ ನನ್ನ ಮಸ್ತಕವನ್ನಿಡುತ್ತೇನೆ. ಭಿಕ್ಕ, ನಾಮದೇವ, ರಾಮ ಇವರು ಎಷ್ಟೊಂದು ಕೆಲಸ ಮಾಡುತ್ತಾರೆ. ನೀವು ನನ್ನನ್ನು ದೊಡ್ಡ ಮನುಷ್ಯನೆಂದು ಭಾವಿಸಿದ್ದರೂ ನನ್ನಲ್ಲಿ ಅಂಥದೇನೂ ಇಲ್ಲವೆಂಬುದನ್ನು ಬಲ್ಲೆನು. ನೀವು ಗುಂಡುಕಲ್ಲಿಗೆ ಕುಂಕುಮ ಹಚ್ಚಿ ನಮಸ್ಕಾರ ಮಾಡುತ್ತಿದ್ದೀರಿ." ಶ್ಯಾಮನು ಹೇಳಿದನು.

ಇಷ್ಟರಲ್ಲಿ ರಾಮನು ಬಂದನು.

"ಏನು ರಾಮಾ, ಬಂಡಿ ಬಂದಿತೇನು ?" ಶ್ಯಾಮನು ವಿಚಾರಿಸಿದನು.

"ಇಲ್ಲ. ವಿಚಾರ ಬದಲಾಗಿದೆ. ಈಗ ಹೊರಡದೆ ರಾತ್ರಿ ಹೊರಡುವ ದೆಂದು ನಿರ್ಧರಿಸಲಾಗಿದೆ. ಇಂದು ರಾತ್ರಿ ಕಥೆ ಕೇಳಿಕೊಂಡೇ ಹೋದರಾಯಿ ತೆಂದು ದಾಜೀ ಹೇಳಿದರು. ರಾಜಾ, ರಾತ್ರಿ ಹೋದರೆ ಸರಿ. ಹೊತ್ತೇನೂ ಆಗುವದಿಲ್ಲ." ರಾಮನು ಹೇಳಿದನು.

"ದೇವರ ಇಚ್ಛೆ." ಎಂದನು ರಾಜ.

ಹೊತ್ತು ಮುಳುಗಿತ್ತು. ಆಕಾಶದಲ್ಲಿ ಬಣ್ಣಬಣ್ಣದ ಪ್ರದರ್ಶನವು ಏರ್ಪಾಟಾಗಹತ್ತಿತು. ಕೆಂಪು, ನೀಲಿ, ಹಳದಿ ಮೊದಲಾದ ಎಲ್ಲ ಬಣ್ಣಗಳು ಅಲ್ಲಿ ಕಾಣಿಸಿಕೊಂಡವು. ನೋಟವು ಭವ್ಯವಾಗಿ ಕಾಣುತ್ತಿದ್ದಿತು. ನದಿಯ ದಂಡೆಯ ಮೇಲೆ ಹೋಗಿ ಶ್ಯಾಮ ಮತ್ತು ರಾಜರು ಮಾತನಾಡುತ್ತ ಕುಳಿತಿ ದ್ದರು. ಮಾತನಾಡುತ್ತಿದ್ದ ಹಾಗೆ ಒಮ್ಮೆಲೆ ಇಬ್ಬರೂ ಮೌನ ತಾಳಿದರು. ಇಬ್ಬರೂ ಒಬ್ಬರ ಕೈಯನ್ನೊಬ್ಬರು ಹಿಡಿದುಕೊಂಡು ಕುಳಿತಿದ್ದರು. ಕೈ ತೆಗೆದು ಕೊಂಡರು. ದನಗಾಹಿಗಳು ದನ ಅಟ್ಟಿಕೊಂಡು ಮನೆಗೆ ಹೊರಟಿದ್ದರು. ಕೆಲ ವರು ಎಮ್ಮೆಯಮೇಲೆ ಕೂತುಕೊಂಡಿದ್ದರು. ಕೆಲವರು ಕೊಳಲನ್ನೂದುತ್ತಿದ್ದರು.

"ಶ್ಯಾಮಾ, ನಡೆ ಇನ್ನು ಹಿಂತಿರುಗೋಣ." ರಾಜ ಹೇಳಿದನು.

"ರಾಜಾ, ಇಂಥ ಭವ್ಯವಾದ ಸೃಷ್ಟಿದರ್ಶನವಾದಾಗ ಎಲ್ಲಿಯೂಹೋಗದೆ ಇಲ್ಲಿಯೇ ಕುಳಿತುಕೊಳ್ಳಬೇಕು, ಸೃಷ್ಟಿಯಲ್ಲಿ ಲೀನವಾಗಿ ಹೋಗಬೇಕು ಎಂದೆ ನಿಸುತ್ತದೆ. ಸೃಷ್ಟಿಯ ಮೂಕವಾದ ಇಂಥ ದೊಡ್ಡ ಸಂಗೀತ ಸಾಗರದಲ್ಲಿ ನಮ್ಮ ಜೀವನ ಬಿಂದುವನ್ನು ಬೆರೆಸಿ ಬಿಡಬೇಕೆನಿಸುತ್ತದೆ." ಶ್ಯಾಮನು

ಮಾತನಾಡುತ್ತಿದ್ದ. ಅವನ ತುಟಿಗಳು ಕಂಪಿಸುತ್ತಿದ್ದವು. ಶ್ಯಾಮನು ಭಾವನೆ-ಅಭಿಲಾಷೆಗಳ ಮೂರ್ತಿಯಾಗಿದ್ದ.

ಕೊನೆಗೆ ಗೆಳೆಯರಿಬ್ಬರೂ ಆಶ್ರಮಕ್ಕೆ ಬಂದರು. ಆಶ್ರಮದ ಅಟ್ಟದ ಮೇಲಿನ ಮುಂಭಾಗದ ಚೌಕಿನಲ್ಲಿ ಜನರು ಸೇರತೊಡಗಿದ್ದರು. ಆಕಾಶದ ಚೌಕಿನಲ್ಲಿ ಒಂದೊಂದೇ ತಾರೆ ಉದಯಿಸುತ್ತ ಇಡೀ ಆಕಾಶವು ತಾರೆಗಳಿಂದ ತುಂಬಿ ಬಿಟ್ಟಿತ್ತು. ಅದೇ ರೀತಿ ಒಬ್ಬೊಬ್ಬರೇ ಬರುತ್ತ ಪ್ರಾರ್ಥನೆಯ ಚೌಕವೆಲ್ಲ ಜನರಿಂದ ಕಿಕ್ಕಿರಿದು ಹೋಯಿತು. ಪ್ರಾರ್ಥನೆ ಶಾಂತ ರೀತಿಯಿಂದ ನೆರವೇರಿತು.

ಶ್ಯಾಮನು ತನ್ನ ಕಥೆಯನ್ನಾರಂಭಿಸಿದನು:

ನಮ್ಮ ಬಾಲ್ಯದಲ್ಲಿ ತಾಯಿಗೆ ಸಂಧಿವಾತ ಪೀಡಿಸುತ್ತಿದ್ದಾಗ ಲಾಡಘರದ ದೇವಿಗೆ ಒಂದು ಹರಕೆ ಕೇಳಿಕೊಂಡಿದ್ದಳು. ಲಾಡಘರವು ದಾಪೋಲಿ ತಾಲೂಕಿನಲ್ಲಿಯ ಒಂದು ಸುಂದರವಾದ ಊರು. ಅದು ಸಮುದ್ರದ ದಂಡೆಯ ಮೇಲಿದೆ. ಲಾಡಘರದಲ್ಲಿ ತಾಮಸ್ತೀರ್ಥವಿದೆ. ಅಲ್ಲಿ ಒಂದೆಡೆಗೆ ಸಮುದ್ರದ ನೀರು ಕೆಂಪು ಬಣ್ಣದಂತೆ ಕಾಣುತ್ತದೆ ಅಂತೆಯೇ ಅದಕ್ಕೆ ತಾಮಸ್ತೀರ್ಥವೆಂದು ಕರೆಯುತ್ತಾರೆ. ಆ ದೇವಿಯ ಹರಕೆಯನ್ನು ಎಷ್ಟೋ ದಿವಸಗಳಿಂದ ಮುಟ್ಟಿಸುವದು ಉಳಿದು ಹೋಗಿತ್ತು. ತಾಯಿಯ ಸಂಧಿವಾತ ಕಡಿಮೆಯಾಗಿತ್ತು. ಮೊದಲಿನಷ್ಟು ಶಕ್ತಿಯುಳ್ಳವಳಾಗಿರದಿದ್ದರೂ ಓಡಾಡಲು ಸಮರ್ಥಳಾಗಿದ್ದಳು. ಲಾಡಘರದ ದೇವಿಗೆ ಕಟ್ಟಿಗೆಯ ಗೊಂಬೆ, ಕಟ್ಟಿಗೆಯ ಕುಂಕುಮ ಕರಡಿಗೆ, ಖಣ, ಕಾಯಿ ಮೊದಲಾದವನ್ನು ಅರ್ಪಿಸಬೇಕಾಗಿತ್ತು. ಈ ಹರಕೆಯನ್ನು ತೀರಿಸುವದಕ್ಕಾಗಿ ತಾಯಿಯು ಪಾಲಗಡದಿಂದ ದಾಪೋಲಿಗೆ ಬರತಕ್ಕವಳಿದ್ದಳು. ಆಮೇಲೆ ದಾಪೋಲಿಯಿಂದ ನಾನು ಲಾಡಘರಕ್ಕೆ ಕರೆದೊಯ್ಯುವದೆಂದು ನಿಶ್ಚಯಿಸಲಾಗಿತ್ತು.

ತಾಯಿ ಯಾವಾಗ ಬರುವಳೋ ಎಂಬ ದಾರಿಯನ್ನೇ ನಾನು ನೋಡುತ್ತಿದ್ದೆ. ಎಷ್ಟೋ ವರ್ಷಗಳ ನಂತರ ತಾಯಿ ಪಾಲಗಡದಿಂದ ಹೊರಗೆ ಹೊರಟಿದ್ದಳು. ಹನ್ನೆರಡು ವರ್ಷಗಳಲ್ಲಿ ಅವಳು ಪಾಲಗಡ ಬಿಟ್ಟು ಹೋಗಿರಲಿಲ್ಲ. ಹವೆ ಬದಲಾವಣೆಗೆಂದು ಕೂಡ ಹೋಗಿರಲಿಲ್ಲ. ತಾಯಿ ಬಂದಳು. ಲಾಡಘರಕ್ಕೆ ಹೋಗುವದಕ್ಕಾಗಿ ಒಂದು ಬಂಡಿಯನ್ನು ಗೊತ್ತು ಮಾಡಿದೆನು.

ದಾಪೋಲಿಯಿಂದ ತೀರ ನಸುಕಿನಲ್ಲಿಯೇ ಹೊರಡುವ ವಿಚಾರ ಮಾಡಿದೆವು. ಲಾಡಘರವು ದಾಪೋಲಿಯಿಂದ ಮೂರು ಹರದಾರಿಯ ಮೇಲೆ ಇದೆ. ಮೂರು ಗಂಟೆಯ ದಾರಿ.

ನಸುಕಿನ ಕೋಳಿ ಕೂಗಿತು. ತಾಯಿ ಎದ್ದಳು. ನಾನೂ ಎದ್ದೆನು. ಗಾಡಿಯವನು ಹೊತ್ತಿಗೆ ಸರಿಯಾಗಿ ಬಂದು ನಮ್ಮನ್ನು ಕರೆದನು. ನಾನು ಎಲ್ಲ ಸಾಮಾನು ತೆಗೆದುಕೊಂಡೆನು. ತಾಯಿ ಮತ್ತು ನಾನು ಗಾಡಿಯಲ್ಲಿ ಹೋಗಿ ಕುಳಿತೆವು. ಲಾಡಘರದಲ್ಲಿ ನಮ್ಮ ದೂರದ ಅಕ್ಕ-ಅತ್ತೆಯ ಮಗಳೊಬ್ಬಳು-ಇದ್ದಳು. ಆವರ ಮನೆಯಲ್ಲಿ ಇಳಿಯುದದೆಂದು ನಿಶ್ಚಯಿಸಿದ್ದೆವು. ಮುಂಜಾನೆ ಏಳು ಎಂಟು ಗಂಟೆಯು ಹೊತ್ತಿಗೆ ತಲಪುವೆವೆಂದು ನಿರೀಕ್ಷಿಸಿದ್ದೆವು.

ಬಂಡಿಯುವನು ಬಂಡಿ ನಡೆಸಿದನು. ಎತ್ತು ಚೆನ್ನಾಗಿದ್ದವು. ಉತ್ಸಾಹ ದಿಂದ ಸಾಗಿದ್ದವು. ನಸುಕಿನ ಪ್ರಶಾಂತವಾದ ಸಮಯ ಬೇರೆ. ಕೃತ್ತಿಕೆಯ ಸುಂದರ ಪುಂಜಾಕಾರವು ಆಕಾಶದಲ್ಲಿ ಕಾಣುತ್ತಿತ್ತು. ಎತ್ತಿನ ಕೊರಳೊಳಗಿನ ಗಂಟೆಯ ಸಪ್ಪಳವು ಆ ಶಾಂತವಾದ ಸಮಯದಲ್ಲಿ ಹರ್ಷವನ್ನುಂಟು ಮಾಡು ತ್ತಿತ್ತು. ಸೃಷ್ಟಿದೇವತೆಯ ಮಂದಿರದಲ್ಲಿಯ ಗಂಟೆಗಳ ಮಧುರ ಸ್ವರವೋ ಎಂಬಂತೆ ಭಾಸವಾಗುತ್ತಿತ್ತು. ಹೂಗಳು ಅರಳಿದ್ದವು. ಗಾಳಿಯು ಮಂದ ವಾಗಿ ಬೀಸುತ್ತಿತ್ತು. ಹಕ್ಕಿಗಳು ಹಾಡುತ್ತಿದ್ದವು. ನಿಸರ್ಗ ಮಂದಿರದಲ್ಲಿ ಆರತಿ ಬೆಳಗುತ್ತಿತ್ತು.

ಗಾಡಿಯಲ್ಲಿ ನಾನು ಮತ್ತು ನನ್ನ ತಾಯಿ ಇಬ್ಬರೇ. ನಾನು ಮತ್ತು ನನ್ನ ತಾಯಿ! ಇಬ್ಬರೇ ಇಬ್ಬರು. ನಮ್ಮಲ್ಲಿ ಗಾಢವಾದ ಪ್ರೇಮವಿತ್ತು. ನನ ಗಾಗ ಹದಿನಾಲ್ಕು-ಹದಿನೈದು ವರುಷಗಳಾಗಿದ್ದರೂ ನಮ್ಮ ತಾಯಿಗೆ ನಾನು ಚಿಕ್ಕವನೇ. ತಾಯಿಗೆ ತನ್ನ ಮಕ್ಕಳು ದೊಡ್ಡವರಾದರೆಂದು ಎಂದಿಗೂ ಅನಿ ಸುವದಿಲ್ಲ. ನಾನು ತಾಯಿಯ ತೊಡೆಯ ಮೇಲೆ ತಲೆಯನ್ನಿಟ್ಟು ಮಲಗಿದ್ದೆ. ಗಾಡಿ ದೊಡ್ಡದಾಗಿತ್ತು ಸಾಕಷ್ಟು ಸ್ಥಳವಿತ್ತು. ತಾಯಿ ನನ್ನ ತಲೆಯ ಮೇಲೆ ನನ್ನ ಕೂದಲುಗಳ ಮೇಲೆ ಪ್ರೀತಿಯಿಂದ ತನ್ನ ಕೈಯಾಡಿಸುತ್ತಿದ್ದಳು.

"ಎಷ್ಟು ಒರಟಾಗಿವೆಯೋ ಈ ಜುಟ್ಟು? ಎಂದೂ ಎಣ್ಣೆ ಹಚ್ಚಿಕೊಳ್ಳುವ ದಿಲ್ಲವೇನೋ ಶ್ಯಾಮಾ?" ತಾಯಿ ಕೇಳಿದಳು. ಆದರೆ ಆ ಕಡೆಗೆ ನನ್ನ ಗಮನವಿರಲಿಲ್ಲ. ನಾನು ಸುಖಾನುಭವದಲ್ಲಿ ಮುಳುಗಿ ಹೋಗಿದ್ದೆ. ತಾಯಿ

ಮತ್ತು ನಾನು ಕೂಡಿ ಎಂದೂ ಪ್ರವಾಸ ಮಾಡಿರಲಿಲ್ಲ. ಇಷ್ಟು ಸ್ವತಂತ್ರ ರೀತಿಯಿಂದ ಎಂದೂ ತಿರುಗಾಡಿರಲಿಲ್ಲ. ತಾಯಿ ಮತ್ತು ನಾನು. ಹೌದು, ಅಂದು ಜಗತ್ತು ನಮ್ಮಿಬ್ಬರದೇ ಆಗಿತ್ತು. ನನ್ನ ಮನಸ್ಸಿನಲ್ಲಿ ಅನೇಕ ಸುಖ ಸ್ವಪ್ನಗಳು ಸಂಚರಿಸತೊಡಗಿದ್ದವು. ನಾನು ಕಲಿತು ದೊಡ್ಡವನಾಗುತ್ತೇನೆ; ನಮ್ಮ ತಾಯಿಗೆ ಯಾವುದರ ಕೊರತೆಯೂ ಆಗದಂತೆ ನೋಡಿಕೊಳ್ಳುತ್ತೇನೆ; ಅವಳನ್ನು ಸುಖದ ಸ್ವರ್ಗದಲ್ಲಿ ಇಡುತ್ತೇನೆ ಇವೇ ಮೊದಲಾದ ಮನೋರಥ ಗಳನ್ನು ಮನಸ್ಸಿನಲ್ಲಿ ಮೆಲಕಾಡಿಸುತ್ತಿದ್ದೆ. ಮನೋರಥವೆಂಬ ಸಾಮ್ರಾಜ್ಯ ವನ್ನು ಕಟ್ಟುವದು, ಕೆಡವುವದು ಇದು ಮನಸ್ಸಿನ ಚಂಚಲ ಸ್ವಭಾವವೇ ಆಗಿದೆ.

ತಾಯಿ ನನಗೆಂದಳು, " ಶ್ಯಾಮಾ, ಮಾತನ್ನೇಕೆ ಆಡುವದಿಲ್ಲವೋ ? ಇನ್ನೂ ನಿದ್ದೆ ಪೂರ್ಣ ಆಗಿಲ್ಲವೆಂದು ಕಾಣುತ್ತದೆ. "

" ತಾಯೀ, ನಿನ್ನ ತೊಡೆಯ ಮೇಲೆ ಮೂಕನಾಗಿ ನಾನು ಮಲಗಬೇಕು ನೀನು ಪ್ರೀತಿಯಿಂದ ನನ್ನನ್ನು ನೋಡಬೇಕು, ನನ್ನ ಮೈಮೇಲೆ ಕೈಯಾಡಿಸ ಬೇಕು ಇದಕ್ಕಿಂತ ಬೇರೆ ಏನೂ ನನಗೆ ಬೇಕಾಗಿಲ್ಲ. ಅಮ್ಮಾ, ನನ್ನನ್ನು ತಟ್ಟು. ಅಮ್ಮಾ, ನಿನ್ನ ಬಳಿಯಲ್ಲಿ ಯಾವಾಗಲೂ ಚಿಕ್ಕ ಮಗುವಾಗಿ ಇರಬೇ ಕೆನಿಸುತ್ತದೆ. ನನಗೆ ಚುಕ್ಕು ಬಡಿ, ಜೋಗುಳ ಪದ ಹೇಳು. " ನನ್ನ ಈ ಮಾತನ್ನು ಕೇಳಿ ನಿಜವಾಗಿ ನನ್ನ ತಾಯಿ ಚುಕ್ಕು ಬಡಿಯಹತ್ತಿದಳು. ಹಾಡು ಹೇಳತೊಡಗಿದಳು. ಅಡವಿಯಲ್ಲಿಯ ಪಕ್ಷಿಗಳು ಕಿಲಿಬಿಲಿ ಸಪ್ಪಳ ಮಾಡುತ್ತಿ ದ್ದವು. ದಾಪೋಲಿಯಿಂದ ಲಾಡಘರಕ್ಕೆ ಹೋಗುವಾಗ ದಾರಿಯಲ್ಲಿ ಎರಡೂ ಬದಿಯಲ್ಲಿ ದಟ್ಟವಾದ ಅಡವಿ ಇದೆ.. ದಾರಿಯಲ್ಲಿ ಸೂರ್ಯಪ್ರಕಾಶವೂ ಬೀಳು ವಂತಿರಲಿಲ್ಲ. ಒಂದೆಡೆಗೆ ಬೆಟ್ಟದೊಳಗಿಂದ ದಾರಿಯ ಮೇಲೆ ಧೋ ಧೋ ಎಂದು ನೀರು ಬೀಳುತ್ತದೆ. ಆ ನೋಟವು ಭವ್ಯವೂ, ದಿಗಿಲುಗೊಳ್ಳುವಂಥದೂ ಇದೆ. ಗೋಡಂಬೆ, ಮಾವು, ಹಲಸು, ಆಲ ಮೊದಲಾದ ಹಲವಾರು ಬಗೆಯ ಗಿಡಗಳು ದಾರಿಯ ಎಡಬಲಗಳಲ್ಲಿ ಸಾಲಾಗಿ ಇವೆ. ಈ ಗಿಡಗಳ ಮೇಲೆ ತರ ತರದ ಹಕ್ಕಿಗಳು ಹಾರಾಡತೊಡಗಿದ್ದವು. ಹಾಡತೊಡಗಿದ್ದವು. ನಿಸರ್ಗವು ಜಾಗೃತವಾಗಬಯಸುತ್ತಿತ್ತು. ಆದರೆ ನಾನು ಮಾತ್ರ ತಾಯಿಯ ತೊಡೆಯ ಮೇಲೆ ಮಲಗಲೆತ್ನಿಸುತ್ತಿದ್ದೆ. ನಿದ್ದೆ ಬಾರದಿದ್ದರೂ ಕಣ್ಣು ಮುಚ್ಚಿಕೊಂಡು

ಬಿದ್ದುಕೊಂಡಿದ್ದೆ. ಪ್ರಪಂಚವೆಲ್ಲ ಏಳುವ ಹೊತ್ತು. ಆದರೆ ನನ್ನ ತಾಯಿ ನನ್ನನ್ನು ಮಲಗಿಸುತ್ತಿದ್ದಳು. ತಾಯಿಯು ಹಾಡನ್ನು ಅನ್ನುತ್ತಿದ್ದ ಹಾಗೆ ಮುಂದಿನ ನುಡಿಯನ್ನು ನುಡಿದಳು. ಕೆಲವು ಸಲ ನಮ್ಮ ತಾಯಿ ಸ್ವಂತ ಹಾಡನ್ನು ಕಟ್ಟಿಯೂ ಅನ್ನುತ್ತಿದ್ದುದನ್ನು ನಾನು ಕೇಳಿದ್ದೇನೆ. ಈಗಲೂ ಅದೇ ಅನುಭವ ಬಂದಿತು.

ಹರಿಯುತಿದೆ ಘೋರೆಂದು ಝರಿಯು ಕಾಡಿನಲಿ।
ಹರಿಯು ತಾ ಬರಲೆನ್ನ ಶ್ಯಾಮನಾತ್ಮದಲಿ ॥

ತಾಯಿಯ ಈ ಜೋಗುಳ ಪದವನ್ನು ಕೇಳುತ್ತಲೇ ನಾನು ತಟ್ಟನೇ ಎದ್ದು ಕುಳಿತೆ. ಘೋರ್ಗರೆಯುವ ನೀರನ್ನು ದಿಟ್ಟಿಸಲು ಎದ್ದು ಕುಳಿತೆ.

ತಾಯಿ ಕೇಳಿದಳು, "ಏಕೋ, ಎದ್ದುಬಿಟ್ಟೆ ? ಬೇಸರ ಬಂದಿತೇನು ? ಮಲಗಿಕೋ. ನನ್ನ ತೊಡೆಯೇನೂ ನೋಯುವದಿಲ್ಲ."

ನಾನು ಹೇಳಿದೆ, "ಅಮ್ಮಾ, ಶ್ಯಾಮನ ಜೀವನದಲ್ಲಿ ನೀನು ದೇವರನ್ನು ಕರೆಯುತ್ತಿರುವೆ. ಅಂದಬಳಿಕ ನಾನು ಮಲಗಿಕೊಂಡಿರುವದು ಹೇಗೆ? ದೇವರು ಬರುವದೆಂದರೆ ಜಾಗೃತಿ ಬರುವದು. ದೇವರು ಎಲ್ಲರಿಗೂ ಜಾಗೃತಿಯನ್ನು ಕೊಡುತ್ತಾನೆ. ಸೂರ್ಯನಾರಾಯಣನು ಜಗತ್ತಿಗೆಲ್ಲ ಚಾಲನೆ ಕೊಡುವನಲ್ಲವೇ ?"

ದೂರದಿಂದ ಸಮುದ್ರದ ಗರ್ಜನೆಯು ಕೇಳಬರುತ್ತಿತ್ತು. ಅಡವಿ ಮುಗಿಯುತ್ತಲೆ ಉಕ್ಕುವ ಸಾಗರವು ಕಾಣತೊಡಗಿತು. ಪ್ರಪಂಚವೆಂಬ ಅಡವಿಯ ಹತ್ತಿರವೇ ಪರಮಾತ್ಮ ಸ್ವರೂಪ ಆನಂದ ಸಮುದ್ರವು ಒಂದೇಸವನೆ ಉಕ್ಕುತ್ತಿರುತ್ತದೆ. ಪ್ರಪಂಚದಿಂದ ತುಸು ಹೊರಗೆ ಹೋದೊಡನೆ ಈ ಆನಂದವು ನಿಮಗೆ ಲಭಿಸಬಹುದು.

ದೂರದಿಂದ ಅಂದವಾದ ಲಾಡಘರ ಊರು ಕಾಣತೊಡಗಿತು. ನಾವು ಊರನ್ನು ಪ್ರವೇಶಿಸಿದೆವು. ಪ್ರತಿಯೊಂದು ತೋಟಗಳಲ್ಲಿಯೂ ಎತ್ತಿನಮೂಲಕ ಕಪ್ಪಲಿ ಹೊಡೆಯುವದು ನಡೆದಿತ್ತು. ಮಡಿಗಳಿಗೆ ನೀರು ಬಿಡುವ ಕೆಲಸವನ್ನು ಕೆಲವರು ನಡೆಸಿದ್ದರು. ಗಡಗಡೆಯ 'ಕುಂವೂ ಕುಂವೂ' ಸಪ್ಪಳ, ಎತ್ತಿನ ಹಿಂದಿನಿಂದ ಬೆತ್ತದ ಕೋಲು ತೆಗೆದುಕೊಂಡು 'ಹೆ, ಹೆ' ಎಂಬ ಬಾಲಕರ ಕೂಗಾಟ ಕೇಳುತ್ತಿದ್ದಿತು. ತೆಂಗು, ಬಾಳೆ, ಅನನ್ನಸ ಮೊದಲಾದ ಗಿಡಗಳಿಗೆ

ಕಾಲುವೆಯ ಮೂಲಕ ನೀರು ಬರುತ್ತಿದ್ದವು. ಪ್ರತಿಯೊಬ್ಬರ ಮನೆಯ ಮುಂದೆ ಮತ್ತು ಬದಿಯಲ್ಲಿ ತೆಂಗು, ಬಾಳೆ, ಅಡಿಕೆ ಮರಗಳು ಗುಂಪುಗುಂಪಾಗಿ ಬೆಳೆದು ನಿಂತಿದ್ದವು. ಆನಂದ ಹಾಗು ಸೌಂದರ್ಯದ ಆಗರವಾಗಿದ್ದಿತಾಊರು. ಸ್ವಚ್ಛ ಹಾಗೂ ಸಮೃದ್ಧಿಯಾದ ನೀರಿನ ಪೂರೈಕೆ, ಆರೋಗ್ಯದಾಯಕ ಹವೆ, ಬೇಕಾದಷ್ಟು ಹೂವು ಹಣ್ಣುಗಳು ಇದ್ದಮೇಲೆ ಕೇಳುವದೇನಿದೆ ?

ನಮ್ಮ ಬಂಡಿ ಊರಲ್ಲಿ ಸಾಗಿತ್ತು. ಇಂಥದೇ ಮನೆಯೆಂಬುದು ನಮಗೆ ಗೊತ್ತಿರಲಿಲ್ಲ. ದಾರಿಯಲ್ಲಿ ಹುಡುಗರ ಶಾಲೆಯಿತ್ತು. ನಮ್ಮ ಗಾಡಿಯನ್ನು ಹುಡುಗರು ನೋಡತೊಡಗಿದರು. ಯಾವುದೊಂದು ಹೊಸ ಬಂಡಿ, ಹೊಸ ಪಕ್ಷಿ, ಅಪರಿಚಿತ ಮನುಷ್ಯರು ಕಣ್ಣಿಗೆ ಬೀಳುತ್ತಲೇ ಹುಡುಗರ ಕುತೂಹಲ ಹೆಚ್ಚುವದು ಸ್ವಾಭಾವಿಕ ಮಾತಾಗಿದೆ.

ಕೊನೆಗೊಮ್ಮೆ ಸುಭಾತಾಯಿಯ ಮನೆ ದೊರೆಯಿತು. ಬಂಡಿಯವನು ಬಂಡಿಯನ್ನು ಒಂದು ಬದಿಗೆ ನಿಲ್ಲಿಸಿದನು. ಎತ್ತುಗಳನ್ನು ಒಂದೆಡೆಗೆ ಕಟ್ಟಿ ಅವಕ್ಕೆ ಹುಲ್ಲು ಹಾಕಿದನು. ನಾವು ಮನೆಯೊಳಗೆ ಹೋದೆವು. ಸುಭಾತಾಯಿಯನ್ನು ನಾನು ಮೊದಲು ಎಂದೂ ಕಂಡಿರಲಿಲ್ಲ. ತಾಯಿಯಾದರೂ ಎಷ್ಟೋ ದಿವಸದ ಮೇಲೆ ನೋಡುತ್ತಿದ್ದಳು. ಸುಭಾತಾಯಿಗಿಂತ ನನ್ನ ತಾಯಿ ವಯಸ್ಸಿನಿಂದ ಹಿರಿಯಳಾಗಿದ್ದಳು. ತಾಯಿಯ ದೊಡ್ಡ ಮಗಳಂತೆ ಸುಭಾತಾಯಿ ಒಪ್ಪುತ್ತಿದ್ದಳು.

ತಾಯಿಯನ್ನು ಕಂಡು ಸುಭಾತಾಯಿ ಒಮ್ಮೆಲೆ ಆಶ್ಚರ್ಯಪಟ್ಟಳು. “ ಅಕ್ಕ, ನಾವು ಎಷ್ಟು ದಿವಸಗಳ ಮೇಲೆ ಭೆಟ್ಟಿಯಾಗುತ್ತಿದ್ದೇವಲ್ಲ ? ” ಎಂದು ಮಧುರವಾದ ನುಡಿಗಳಿಂದ ತಾಯಿಯ ಸ್ವಾಗತ ಮಾಡಿದಳು, “ಇವನಾರು?” ಎಂದು ನನ್ನ ಕಡೆಗೆ ನೋಡುತ್ತ ಕೇಳಿದಳು.

ತಾಯಿ ನುಡಿದಳು, “ ಸುಭಾ, ಇವನು ನಮ್ಮ ಶ್ಯಾಮ. ಸಣ್ಣವನಿದ್ದಾಗ ಹಟ ಮಾಡುತ್ತಿದ್ದನಲ್ಲ–ಎಲ್ಲರೊಡನೆ ಜಗಳ ಮಾಡುತ್ತಿದ್ದನಲ್ಲ–ಅವನೇ ಈತ. ನೀನು ಮರೆತು ಬಿಟ್ಟೆಯೇನು ? ”

“ ತುಂಬ ದೊಡ್ಡವನಾಗಿ ಬಿಟ್ಟಿರುವೆಯಲ್ಲೋ ! ಇಂಗ್ಲೀಷು ಕಲಿಯುತ್ತಿದ್ದೀಯೆಂದು ಕಾಣುತ್ತದೆ.” ಸುಭಾತಾಯಿ ನನ್ನನ್ನು ವಿಚಾರಿಸಿದಳು.

“ಹೌದು, ನಾಲ್ಕನೆ ತರಗತಿಯಲ್ಲಿ ಓದುತ್ತಿದ್ದೇನೆ. ” ನಾನು ಉತ್ತರಿಸಿದೆ.

ಪ್ರೀತಿ ವಿಶ್ವಾಸಗಳಿಂದ ತುಂಬಿದ ಆ ಮನೆಯಲ್ಲಿ ನಾವೂ ಒಮ್ಮೆಲೆ ಮನೆಯವರಂತೆಯೇ ಆಗಿಬಿಟ್ಟೆವು. ಸುಭಾತಾಯಿ ಹೇಳಿದಳು, " ಅಕ್ಕಾ, ಸಮುದ್ರಸ್ನಾನಕ್ಕೆ ಈಗಲೇ ಹೊರಡಿರಿ. ಅಂದರೆ ಹತ್ತು–ಹನ್ನೊಂದು ಗಂಟೆಯಷ್ಟೊತ್ತಿಗೆ ತಿರುಗಿ ಬರುವಿರಿ. ಮಧ್ಯಾಹ್ನದ ಊಟವಾದ ಮೇಲೆ ದೇವಿಯ ದರುಶನಕ್ಕೆ ಹೋಗೋಣ. ಅಂದರೆ ಸಾಯಂಕಾಲ ತಿರುಗಿಹೋಗುವದಕ್ಕಾಗಿ ಚಕ್ಕಡಿಯನ್ನು ಹೂಡಲು ಅನುಕೂಲವಾಗುವದು. ಇರಲಿಕ್ಕೆ ಸಿದ್ಧಳಿಲ್ಲವೆಂದ ಮೇಲೇನು ಮಾಡುವದು? ಅಪರೂಪಕ್ಕೆ ಬಂದಿರುವಿ, ಎಂಟು ದಿವಸ ಉಳಿದು ಹೋಗಿದ್ದರೆ ನಮಗೂ ಸಮಾಧಾನವಾಗುತ್ತಿತ್ತು. ಅತ್ತೆಯ ಮನೆಯಲ್ಲಿದ್ದು ತವರುಮನೆಯ ಸುಖವನ್ನು ಅನುಭವಿಸಲು ಬರುತ್ತಿತ್ತು. ಇದ್ದು ಬಿಡುವಿಯೇನು ? "

" ಸುಭಾ, ಹೋಗಿ–ಬರುವ ಕರಾರು ಮಾಡಿಯೇ ಈ ಚಕ್ಕಡಿಯನ್ನು ತಂದಿದ್ದೇವೆ. ಮೇಲಾಗಿ ಮನೆಯಲ್ಲಿ ಯಾರಿದ್ದಾರೆ ? ಸಣ್ಣವರನ್ನು ಬಿಟ್ಟು ಬಂದಿದ್ದೇನೆ. ಶ್ಯಾಮನ ಶಾಲೆಯೂ ಮುಳುಗಬಹುದು. ಬಹಳ ದಿವಸಗಳ ಮೇಲೆ ಭೆಟ್ಟಿಯಾಯಿತು ಇಷ್ಟೇ ಆನಂದ. ಇರಲಿ. ಈಗ ನಾವು ಸಮುದ್ರದ ಕಡೆಗೆ ಹೋಗಿಬರುತ್ತೇವೆ " ಎಂದು ತಾಯಿ ಹೇಳಿದಳು.

ನಾವು ಬಟ್ಟೆಗಳನ್ನು ತೆಗೆದುಕೊಂಡೆವು. ಸುಭಾತಾಯಿಯ ಗಂಡ ನಮ್ಮ ಜೊತೆಗೆ ಬಂದರು. ಬಂಡಿ ಹೂಡಿಕೊಂಡೇ ಹೊರಟೆವು. ಸಮುದ್ರವು ಸಮೀಪದಲ್ಲಿಯೇ ಇತ್ತು. ಸಮುದ್ರದಗುಂಟ ದಾರಿ ಹೋಗಿತ್ತು. ತಾಮಸ್ತೀರ್ಥಕ್ಕೆ ನಾವು ಹೋಗತಕ್ಕವರಿದ್ದೆವು. ನನ್ನ ದಿಟ್ಟಿಗಳು ಸಮುದ್ರ ತೀರವನ್ನು ನಿಟ್ಟಿಸುತ್ತಿದ್ದವು. ನನ್ನ ಮಾಟಾದ ಕಣ್ಣುಗಳು ಸಮುದ್ರವನ್ನೇ ಎತ್ತಿ ಕುಡಿಯುತ್ತಿದ್ದವೇನೋ. ವಿಶಾಲವಾದ, ಅನಂತವಾದ ಸಮುದ್ರ. ತುದಿಮೊದಲಾವುದೆಂಬುದೇ ತಿಳಿಯದು. ಕೆಳಗೆ ನೀಲವರ್ಣದ ನೀರಿನ ಸಮುದ್ರವಿದ್ದರೆ ಮೇಲೆ ನೀಲವರ್ಣದ ಆಕಾಶಸಮುದ್ರ.

ನಮ್ಮ ಬಂಡಿಯು ಸರಿಯಾದ ಸ್ಥಳಕ್ಕೆ ಬಂದಿತು. ಸುಭಾತಾಯಿಯ ಗಂಡ ಹಾಗು ನಾವು ಕೆಳಗೆ ಇಳಿದೆವು. ಸ್ನಾನ ಮಾಡುವ ಸ್ಥಳವನ್ನು ಅವರು ನಮಗೆ ತೋರಿಸಿದರು. ಸಮುದ್ರದ ಕೆಂಪು ವರ್ಣದ ತೆರೆಗಳು ಅಲ್ಲಿ ಏಳುತ್ತಿದ್ದವು. ಅಲ್ಲಿಯ ಉಸುಕಾದರೂ ಕೆಂಪು ಇದ್ದಂತೆ ಭಾಸವಾಗುತ್ತಿತ್ತು. " ಇಲ್ಲಿ

ಮಾತ್ರ ಕೆಂಪು ನೀರು ಏಕೆ ? ” ನಾನು ಸುಭಾತಾಯಿಯ ಯಜಮಾನರಿಗೆ ಕೇಳಿದೆ.

“ ದೈವೀ ಚಮತ್ಕಾರ ! ” ಎಂದು ಅವರು ನುಡಿದರು.

ತಾಯಿ ಹೇಳಿದಳು, “ ಇಲ್ಲಿ ದೇವರು ದೈತ್ಯರನ್ನು ಸಂಹರಿಸಿರಬಹುದು. ಅದಕ್ಕಾಗಿ ಈ ನೀರು ಕೆಂಪಾಗಿರಬೇಕು. ”

“ ಹಾಗೆ ಇರುವದೂ ಸಾಧ್ಯವಿದೆ. ” ಎಂದರು ಸುಭಾತಾಯಿಯ ಯಜಮಾನರು.

ನನ್ನ ತಾಯಿಯ ದೃಷ್ಟಿಯಲ್ಲಿ ಎಲ್ಲೆಲ್ಲಿಯೂ ದೇವರೇ ಕಾಣುತ್ತಾನೆ. ಪ್ರತಿಯೊಂದು ಮಾತಿಗೂ ದೇವರ ಸಂಬಂಧ, ಎಲ್ಲವೂ ದೇವರ ಕೆಲಸ ಎಂದು ಅವಳು ಭಾವಿಸುತ್ತಿದ್ದಳು. ಶಾಸ್ತ್ರಜ್ಞರು ಕಾರ್ಯಕಾರಣ ಭಾವವನ್ನು ನೋಡುತ್ತಿದ್ದರೆ ನನ್ನ ತಾಯಿ ದೇವರನ್ನು ನೋಡುತ್ತಿದ್ದಳು.

ಕೌಪೀನಧಾರಿಯಾಗಿ ನಾನು ಸಮುದ್ರವಲ್ಲಿ ಅಡಿಯಿಟ್ಟೆ. ಸಣ್ಣ ಸಣ್ಣ ತೆರೆಗಳೊಡನೆ ನಾನು ಆಟವಾಡತೊಡಗಿದೆ. ಬಹಳ ದೂರ ನಾನು ಹೋಗ ಲಿಲ್ಲ. ಸಮುದ್ರಸ್ನಾನದ ಪರಿಚಯ ನನಗೆ ಹೆಚ್ಚಾಗಿ ಇರಲಿಲ್ಲ. ತಾಯಿ ಟೊಂಕಮಟ ನೀರಲ್ಲಿ ಇಳಿದು ಮೈ ತೊಳೆದುಕೊಳ್ಳತೊಡಗಿದಳು. ಸಮುದ್ರವು ನೂರಾರು ಕೈಗಳಿಂದ ಕಟ್ಟಾಡಿಸಲು ನಗುತ್ತ ಕೆಲೆಯುತ್ತ ಓಡೋಡಿ ಬರು ತ್ತಿತ್ತು. ತೆರೆ ಮರಳಿ ಹೋಗುತ್ತಲೆ ಕಾಲಬುಡದಲ್ಲಿಯ ಉಸುಕು ಜಾರಿ ಹೋಗುತ್ತಿತ್ತು. ನಾವು ತಾಯಿಮಕ್ಕಳು ಈಶ್ವರನ ಕೃಪಾಸಾಗರದಲ್ಲಿ ಮುಳುಗು ಹಾಕುತ್ತಿದ್ದೆವು. ಉಪ್ಪುನೀರಾಗಿದ್ದರೂ ತೀರ್ಥವೆಂದು ತಾಯಿ ತುಸು ಕುಡಿ ದಳು. ನನಗೂ ಕುಡಿಯಲಿಕ್ಕೆ ಹೇಳಿದಳು. ತಾಯಿಯು ಸಮುದ್ರಕ್ಕೆ ಅರಿ ಷಿಣ ಕುಂಕುಮವನ್ನೂ ಹೂವನ್ನೂ ಏರಿಸಿದಳು. ಸಮುದ್ರದ ಪೂಜೆಯನ್ನು ಮಾಡಿ ನಾಲ್ಕಾಣೆಯನ್ನು ಸಮುದ್ರದಲ್ಲಿ ಬಿಸಾಡಿದಳು ! ಹೊಟ್ಟೆಯಲ್ಲಿ ರಾಶಿ ರಾಶಿ ಮುತ್ತುಗಳುಳ್ಳಂಥ ರತ್ನಾಕರನಿಗೆ ತಾಯಿಯು ನಾಲ್ಕಾಣೆಯನ್ನು ಕೊಟ್ಟಳು ! ಅದು ಕೃತಜ್ಞತೆಯಾಗಿತ್ತು. ಸೂರ್ಯ ಚಂದ್ರರನ್ನು ನಿರ್ಮಿಸು ವಂಥ ದೇವರಿಗೆ ಭಕ್ತನು ಕರ್ಪುರಾರತಿ, ನೀಲಾಂಜನದಾರುತಿಯನ್ನು ಬೆಳಗು ತ್ತಾನೆ. ಮನುಷ್ಯನು ತನ್ನ ಅಂತಃಕರಣದಲ್ಲಿರುವ ಕೃತಜ್ಞತೆಯನ್ನೂ ಭಕ್ತಿ ಯನ್ನೂ ಒಂದಿಲ್ಲೊಂದು ಬಗೆಯಿಂದ ಬಹಿರಂಗವಾಗಿ ಪ್ರಕಟಿಸಲು ಯತ್ನಿಸು

ತ್ತಾನೆ. ಈ ಅನಂತಸಾಗರವನ್ನು ಕಂಡು ತುಸು ತ್ಯಾಗಬುದ್ಧಿಯನ್ನು ಕಲಿಯ ಬೇಕಲ್ಲವೇ ?

ಒಣಗಿದ ಬಟ್ಟೆಗಳನ್ನಿಟ್ಟು ನಾವು ಮತ್ತೆ ಬಂಡಿಯನ್ನೇರಿದೆವು. ಮನೆಗೆ ಮರಳಿದಾಗ ಸುಮಾರು ಹನ್ನೆರಡು ಗಂಟೆಯಾಗಿತ್ತು. ಹೊಟ್ಟೆ ಚೆನ್ನಾಗಿ ಹಸಿದಿತ್ತು. ಸುಭಾತಾಯಿ ಎಲೆ, ಮಣೆ ಸಿದ್ಧಗೊಳಿಸಿಯೇ ಇಟ್ಟಿದ್ದಳು. ಅವರ ಯಜಮಾನರು ಸ್ನಾನ ಸಂಧ್ಯಾವಂದನೆ, ದೇವರಪೂಜೆಗಳನ್ನೆಲ್ಲ ನಸುಕಿನಲ್ಲಿಯೇ ಮುಗಿಸಿಕೊಂಡು ತೋಟದ ಕೆಲಸಕ್ಕೆ ತೊಡಗುತ್ತಿದ್ದರು.

ನಾವು ಊಟಕ್ಕೆ ಕುಳಿತೆವು. ಸಾದಾ ಊಟವಾಗಿದ್ದರೂ ರುಚಿಕರವಾದದ್ದಿತ್ತು. ಸುಭಾತಾಯಿಯು ಅಲ್ಪಾವಧಿಯಲ್ಲಿಯೇ ನಮಗಾಗಿ ಕುಚ್ಚಿದ ಕಡಬನ್ನು ತಯಾರಿಸಿದ್ದಳು. ಜೊತೆಗೆ ಹಸಿ ಕೊಬ್ಬರಿಯ ಹಾಲು, ಕೊಬ್ಬರಿಯ ಚಟ್ನಿಯನ್ನು ಮಾಡಿದ್ದಳು. ಪ್ರತಿಯೊಂದು ಪದಾರ್ಥಕ್ಕೂ ತೆಂಗಿನಕಾಯಿಯಿಂದ ರುಚಿ ಬಂದಿತ್ತು. ಬದನೆಕಾಯಿ ಮತ್ತು ಮುಲ್ಲಂಗಿಕಾಯಿ ಕೂಡಿಸಿ ಪಲ್ಲೆ ಮಾಡಿದ್ದರು. ಅದು ಬಹಳ ಕಮ್ಮಗೆ ಆಗಿತ್ತು. ಮನೆಯ ಬೆಣ್ಣೆ ಕಾಸಿದ ತಾಜಾ ತುಪ್ಪ ಬಡಸಿದ್ದರು.

“ ಶ್ಯಾಮಾ. ಒಂದು ಒಳ್ಳೆ ಶ್ಲೋಕವನ್ನು ಹೇಳು. ” ತಾಯಿ ನನಗೆ ಹೇಳಿದಳು.

“ ಕೇಯೂರಾ ನ ವಿಭೂಷಯಂತಿ ಪುರುಷಂ ” ಈ ಸಂಸ್ಕೃತ ಶ್ಲೋಕವನ್ನು ನಾನು ಹೇಳಿದೆ. ಸುಭಾತಾಯಿಯ ಗಂಡ ನನ್ನ ಶ್ಲೋಕವನ್ನು ಬಹಳ ಮೆಚ್ಚಿದರು.

“ ಇಂಗ್ಲೀಷು ಶಾಲೆಗೆ ಹೋಗುತ್ತಿದ್ದರೂ ಶ್ಲೋಕ ಹೇಳಲು ನಾಚುವದಿಲ್ಲವೆಂದು ಕಾಣುತ್ತದೆ. ಈಗಿನ ಹುಡುಗರಿಗೆ ನಾಲ್ಕು ಶ್ಲೋಕಗಳೂ ಪಾಠ ಬರುವದಿಲ್ಲ. ಶ್ಯಾಮೂ, ಶಾಲೆಯಲ್ಲಿ ಎಷ್ಟನೇ ನಂಬರು ಇದೆ ನಿನ್ನದು ? ” ಅವರು ವಿಚಾರಿಸಿದರು.

“ ಎರಡನೇ ನಂಬರು. ” ನಾನು ಹೇಳಿದೆ.

“ ಭಲೆ, ಒಳ್ಳೆ ಜಾಣನಾಗಿದ್ದೀ. ” ಅವರೆಂದರು.

ಸುಭಾತಾಯಿಯ ಹುಡುಗ ಐದು ವರುಷದವನೂ ಹುಡುಗಿ ಎರಡು ಎರಡೂವರೆ ವರುಷದವಳೂ ಇದ್ದರು. ಹುಡುಗ ಮಧು ತಂದೆಯವರ ಪಕ್ಕದ

ಲ್ಲಿಯೇ ಊಟಕ್ಕೆ ಕುಳಿತಿದ್ದ. ಅವನೂ ಒಂದು ಒಳ್ಳೆ ಶ್ಲೋಕ ಅಂದು ತೋರಿಸಿದ.

" ಶ್ಯಾಮಾ, ಇನ್ನೆರಡು ಕಡಬು ತೆಗೆದುಕೋ. ನಾಚಿಕೊಳ್ಳಬೇಡ. " ಸುಭಾತಾಯಿ ಹೇಳಿದಳು.

" ಅವನೇನು ಎಲ್ಲರಲ್ಲಿ ದಾಕ್ಷಿಣ್ಯ ಮಾಡಿಕೊಳ್ಳುವವ. ಶ್ಯಾಮಾ, ಇವರಲ್ಲೇನು ನಾಚಿಕೊಳ್ಳುವದು ಬೇಡಪ್ಪ. " ತಾಯಿ ನಗುತ್ತ ಹೇಳಿದಳು. ನಮ್ಮ ತಾಯಿಯೂ ಊಟಕ್ಕೆ ಕುಳಿತಿದ್ದಳು. ಸುಭಾತಾಯಿ ಪ್ರೀತಿಯಿಂದ ನುಡಿದಳು, " ಅಕ್ಕಾ, ಅವರೆಲ್ಲ ಎದ್ದರೆಂದು ನೀನೂ ಏಳಬೇಡ. ನಿಧಾನವಾಗಿ ಊಟಮಾಡು. "

ಎಲ್ಲರ ಊಟ ಮುಗಿಯಿತು. ಹಸಿ ಅಡಿಕೆ ಬೆಟ್ಟವನ್ನು ಸುಲಿದು ಸುಭಾತಾಯಿ ನಮ್ಮ ತಾಯಿಗೆ ಅಡಿಕೆ ತಿನ್ನಲು ಕೊಟ್ಟಳು. ನಾನು ಅಡಿಕೆ ತಿನ್ನುತ್ತಿರಲಿಲ್ಲ. ಆ ಅಡಿಕೆಯಲ್ಲಿರುವ ಕೊಬ್ಬರಿಯನ್ನು ತೆಗೆದುಕೊಂಡು ತಿಂದೆನು. ತಾಯಿ ಮತ್ತು ಸುಭಾತಾಯಿ ಕೂಡಿ ಎಂಜಲು ಮುಸುರೆ ಕೆಲಸ ಮುಗಿಸಿದರು. ಮಾತುಕತೆಯಾಡುತ್ತ ಇಬ್ಬರೂ ತುಸು ಅಡ್ಡಾದರು. ಸುಭಾತಾಯಿಯ ಹುಡುಗನ ಜೊತೆಗೆ ನಾನು ಅವರ ತೋಟದಲ್ಲಿ ಹೋದೆನು. ತೋಟದಲ್ಲಿಯ ವೈಭವವನ್ನು ನೋಡುತ್ತ ನಿಂತೆನು. ಎಷ್ಟೋ ಬಾಳೆಎಲೆಗಳು ಮುರಿಬಿಟ್ಟಿದ್ದವು. ಬಾಳೆ ಹೂಗಳು ತುಂಬಿದ್ದವು. ಅದರ ಕುಸುಮಗಳಿಂದ ಹಿಂಡಿಯನ್ನು ಮಾಡುತ್ತಾರೆ. ಆದರೆ ಅವು ವಿಪುಲವಾಗಿ ಬೆಳೆದಾಗ ಯಾರು ಕೇಳುವರು ? ಅಲ್ಲಲ್ಲಿ ಬಾಳೆಕಾಯಿ ಗೊನೆಗಳೂ ತಲೆಯಲ್ಲಾಡಿಸುತ್ತ ನಿಂತಿದ್ದವು. ಅಲ್ಲಿಯೇ ಒಂದು ಪೇರಲ ಗಿಡವೂ ಇತ್ತು. ನಾನು ಆ ಗಿಡವನ್ನು ಹತ್ತಿದೆ. ಅದರ ಮೇಲೊಂದು ಗಿಳಿ ಕುಕ್ಕಿದ ಪೇರಲ ಹಣ್ಣಿತ್ತು. ಅದನ್ನು ನಾನು ಕೆಡವಿದೆ. ನಾವಿಬ್ಬರೂ ಕೂಡಿ ತಿಂದೆವು. ಅಷ್ಟರಲ್ಲಿ ಸುಭಾತಾಯಿ ಕೂಗಿದ್ದರಿಂದ ನಾನು ಮನೆಯನ್ನು ಸೇರಿದೆ. ಮಧು ಕೂಡ ನನ್ನ ಬೆನ್ನ ಹಿಂದೇ ಬಂದ.

" ಶ್ಯಾಮಾ, ಆ ಪಪ್ಪಾಯಿ ಗಿಡ ಹತ್ತಿ ಎರಡು ಮೂರು ಪಪ್ಪಾಯಿ ಹಣ್ಣು ಕೊಯ್ದುಕೊಂಡು ಬಾ. ಎರಡು ಇಲ್ಲಿ ತಿನ್ನೋಣ, ಒಂದು ಬಂಡಿಯಲ್ಲಿ ತಿನ್ನಲಿಕ್ಕಾಗುತ್ತದೆ " ಎಂದು ಸುಭಾತಾಯಿ ಹೇಳಿದಳು.

“ಎಲ್ಲಿದೆ ಗಿಡ?” ನಾನು ಕೇಳಿದೆ. “ಮಾಮಾ, ನಾನು ತೋರಿಸುತ್ತೇನೆ ಬಾ.” ಎಂದು ಮಧು ನನ್ನ ಕೈಹಿಡಿದು ಕರೆದುಕೊಂಡು ಹೋದ. ಪಪ್ಪಾಯಿಯ ಗಿಡದ ಮೇಲೆ ಸಣ್ಣ ಸಣ್ಣ ತೆಂಗಿನಕಾಯಿ ಗಾತ್ರದ ಹಳದಿ ಬಣ್ಣದ ಪಪ್ಪಾಯಿ ಹಣ್ಣು ಜೋತು ಬಿದ್ದಿದ್ದವು. ನಮ್ಮ ಮನೆಯಲ್ಲಿಯೂ ಪಪ್ಪಾಯಿ ಹಣ್ಣು ಆಗುತ್ತಿದ್ದವು. ಆದರೆ ಇಷ್ಟು ದೊಡ್ಡ ಹಣ್ಣು ಆಗುತ್ತಿರಲಿಲ್ಲ. ಗಿಡವನ್ನೇರಿ ಮೂರು ನಾಲ್ಕು ಪಪ್ಪಾಯಿಹಣ್ಣು ತೆಗೆದೆನು. ಅಡವಿಯಲ್ಲಿ ಹೋಗುವಾಗ ಬಂಡಿಯಲ್ಲಿ ಕುಳಿತು ತಿನ್ನುವದೇ ಮೋಜಿನದಾಗಿರುತ್ತದೆಂದು ನಾನು ಸೂಚಿಸಿದೆನು. ಆದರೆ ಸುಭಾತಾಯಿ ಹೇಳಿದಳು, “ಅಡವಿಯಲ್ಲಿ ನಾವು ಹಸಿ ಕೊಬ್ಬರಿ, ಅವಲಕ್ಕಿ ತಿನ್ನೋಣ. ಪಪ್ಪಾಯಿ ಇಲ್ಲಿಯೇ ಕೊಯ್ದರೆ ಸರಿಯಾಗುವದು.” ಪಪ್ಪಾಯಿಯನ್ನು ಹೋಳುಮಾಡಿ ಎಲ್ಲರೂ ತಿಂದೆವು. ಗಾಡಿಯವನಿಗೂ ನಾಲ್ಕು ತುಂಡು ಕೊಟ್ಟೆನು. ಅವು ಒಳ್ಳೆ ಮಧುರವಾಗಿದ್ದವು.

ದೇವಿಯ ಗುಡಿಗೆ ಹೊರಡುವ ಹೊತ್ತಾಯಿತು. ಬಂಡಿ ಸಿದ್ಧವಾಯಿತು. ಸುಭಾತಾಯಿ, ಅವಳ ಮಕ್ಕಳು, ನಾನು ಮತ್ತು ನನ್ನ ತಾಯಿ ಎಲ್ಲರೂ ಒಳಗೆ ಸಹಜವಾಗಿ ಕುಳಿತೆವು. ಬಂಡಿ ದೊಡ್ಡದೇ ಇತ್ತು. ಊರ ಹೊರಗೆ ಬೆಟ್ಟದ ಅಡಿಯಲ್ಲಿ ಆ ದೇವಿ ಇದ್ದಳು. ತಾಯಿ ದೇವಿಯ ಪೂಜೆ ಮಾಡಿದಳು. ಕಟ್ಟಿಗೆ ಗೊಂಬೆ, ಕರಡಿಗೆ ಮತ್ತು ಬಳೆಗಳನ್ನು ಅವಳ ಚರಣಗಳ ಮೇಲೆ ಇರಿಸಿದಳು. ಕಾಯಿ, ಖಣದಿಂದ ಉಡಿ ತುಂಬಿದಳು. ಎಲ್ಲರೂ ಹಣೆಗೆ ಅಂಗಾರವನ್ನು ಹಚ್ಚಿಕೊಂಡರು. ಮನೆಜನರಿಗಾಗಿ ತಾಯಿಯು ಕಾಗದ ತುಂಡಿನಲ್ಲಿ ಅಂಗಾರವನ್ನು ಕಟ್ಟಿಕೊಂಡಳು. ಆಮೇಲೆ ನಾವು ವನಭೋಜನವನ್ನು ಮಾಡಿದೆವು. ಕಾಯಿ, ಅವಲಕ್ಕಿ ಮತ್ತು ಬೆಲ್ಲ ಅಡವಿಯಲ್ಲಿ ಮೃಷ್ಟಾನ್ನದಂತೆ ಹತ್ತಿದವು. ಅಡವಿಯಲ್ಲಿ ಯಾವಾಗಲೂ ತಮಾಷೆಯಾಗಿರುತ್ತದೆ. ಮನಸ್ಸು ಪ್ರಸನ್ನವಾಗಿರುತ್ತದೆ. ವನಭೋಜನದಲ್ಲಿ ಮನೆಯ ಗೋಡೆಗಳು ಅಡ್ಡಬರುವದಿಲ್ಲ. ನಿಸರ್ಗದ ವಿಶಾಲವಾದ ಬೈಲಲ್ಲಿ ನಾವು ಇರುತ್ತೇವೆ. ಅಲ್ಲಿ ಸಂಕೋಚವೆಂಬುದೇ ಇರುವದಿಲ್ಲ.

ದೇವಿಯ ಪಾದಕ್ಕೆ ಬಿದ್ದು ನಾವು ಮನೆಗೆ ಹೊರಟೆವು. ಆ ಬಳಿಕ ದಾಪೋಲಿಗೆ ಹೋಗತಕ್ಕವರಿದ್ದೆವು. ದಾಪೋಲಿಯಿಂದ ರಾತ್ರಿ ತಾಯಿಯನ್ನು

ಕರೆದುಕೊಂಡು ಎತ್ತಿನ ಬಂಡಿ ಪಾಲಗಡಕ್ಕೆ ಹೋಗುವದಿತ್ತು. ನಾವು ಸಜ್ಜಾಗಿದ್ದೆವು. ನಾನು ಸುಭಾತಾಯಿಗೂ, ಅವಳ ಯಜಮಾನರಿಗೂ ನಮಸ್ಕಾರ ಮಾಡಿದೆನು.

" ಹೇಗೂ ನೀನು ಸಮೀಪದಲ್ಲಿಯೇ ದಾಪೋಲಿಯಲ್ಲಿ ಇರುತ್ತೀ. ಭಾನುವಾರ ಅನುಕೂಲ ಮಾಡಿಕೊಂಡು ಬಂದು ಹೋಗಬೇಕು. ದೂರ ಪಾಲಗಡದ ವರೆಗೆ ನಡೆದುಕೊಂಡು ಹೋಗುತ್ತಿ. ಇಲ್ಲಿ ಬರಲಿಕ್ಕೇನು? ತಿಳಿಯಿತೇ ಶ್ಯಾಮಾ? " ಸುಭಾತಾಯಿ ಹೇಳಿದಳು.

ಅವಳ ಯಜಮಾನರೂ ಆಮಂತ್ರಣ ಕೊಟ್ಟರು, " ಶ್ಯಾಮಾ, ಬಂದು ಹೋಗುತ್ತ ಇರು. ನಾವೇನು ಬೇರೆಯೆಂದು ಭಾವಿಸಬೇಡ. ಬಾರದಹೊರತು ಪರಿಚಯವಾದರೂ ಹೇಗಾಗಬೇಕು? " ನಾನು 'ಹೂಂ' ಎಂದೆ. ನಾವು ದೇವರಿಗೆ ನಮಸ್ಕಾರ ಮಾಡಿದೆವು. ದೇವರ ಮುಂದೆ ಅಡಿಕೆ ಬೆಟ್ಟವನ್ನಿಟ್ಟೆವು. ಸುಭಾತಾಯಿಯು ಹಸಿ ಅಡಿಕೆ, ಒಂದು ಸೀ ಜಾತಿಯ ತೆಂಗಿನಕಾಯಿ, ಒಂದೆರಡು ಪಪ್ಪಾಯಿಹಣ್ಣು ಮನೆಗೆ ಒಯ್ಯುವದಕ್ಕಾಗಿ ಕಟ್ಟಿಕೊಟ್ಟಳು.

" ಸುಭಾ, ಹೋಗಿ ಬರುತ್ತೇನಮ್ಮಾ. " ಎಂದು ತಾಯಿ ಅಪ್ಪಣೆ ಕೇಳಿದಳು.

" ಅಕ್ಕಾ, ಇನ್ನು ಮತ್ತೆ ಎಂದು ನಿನ್ನ ಭೆಟ್ಟಿ? " ಸುಭಾತಾಯಿ ತುಂಬಿದ ಮನಸ್ಸಿನಿಂದ ಕೇಳಿದಳು.

ತಾಯಿಯೆಂದಳು, " ಸುಭಾ, ಅದು ದೇವರ ಕೈಯೊಳಗಿನ ಮಾತು. ಹನ್ನೆರಡು ವರ್ಷಗಳಮೇಲೆ ನಾನು ಇಂದು ಪಾಲಗಡಬಿಟ್ಟು ತುಸು ಹೊರಗೆ ಬಂದದ್ದು. ಹೋಗುವದಾದರೂ ಎಲ್ಲಿಗೆ? ಹೋಗಿಬಂದೂ ನನ್ನ ಸಹೋದರರಿಬ್ಬರು ಪುಣೆ–ಮುಂಬಯಿ ಕಡೆಗೆ ಇದ್ದಾರೆ. ಹೋದರೆ ಅಲ್ಲಿ ಹೋಗಬೇಕು! ಆದರೆ ಅವರಿಗೆ ಅವರ ಪ್ರಪಂಚವಿದೆ. ತಂಗಿಯ ನೆನಪೆಲ್ಲಿ ಬರಬೇಕು ಅಷ್ಟೊಂದು? ಮೇಲಾಗಿ ಕಳೆದ ಐದಾರು ವರ್ಷಗಳಿಂದ ನನಗೆ ಎಡೆಬಿಡದೆ ಚಳಿಜ್ವರವೊಂದು ಗಂಟುಬಿದ್ದಿದೆ. ಜ್ವರ ಬಂದಿತೆಂದರೆ ಹಾಸಿಗೆ ಹಿಡಿಯುವದು, ತುಸು ಬೆವರು ಬಂದು ಹಗುರೆನಿಸಿತೆಂದರೆ ಮತ್ತೆ ಕೆಲಸಕ್ಕೆ ಏಳಬೇಕು. ಮನೆಯಲ್ಲಾದರೂ ಬೇರೆ ಯಾರಿದ್ದಾರೆ? ಬಡವರಿಗೆ ಬೇನೆಬರಬಾರದು ನೋಡು. ಅದೊಂದು ಮಹಾಪಾಪವೇ! ನಾಲಿಗೆಯ ರುಚಿಯೇ ಹೊರಟು

ಹೋಗಿಬಿಡುತ್ತದೆ. ಹಸಿಶುಂಠಿಯ ಚೂರು, ಲಿಂಬೆಹಣ್ಣಿನ ಹೋಳಿಕೆ ಹಚ್ಚಿಕೊಂಡು ಹೇಗಾದರೂ ಎರಡು ತುತ್ತು ಗಂಟಲಕ್ಕೆ ಇಳಿಸುತ್ತೇನೆ. ಆಗಲಿ. ದೇವರ ಇಚ್ಛೆ. ನಾವು ಮನುಷ್ಯರೇನುಮಾಡುವೆವು ? ಬಂದದ್ದನ್ನು ಭೋಗಿಸುತ್ತ ಕಾಲತಳ್ಳುವುದು. ಇದನ್ನಾದರೂ ಯಾರಮುಂದೆ ಹೇಳುವುದು ? ಯಾರಮುಂದೆ ದುಃಖ ತೋಡಿಕೊಳ್ಳುವುದು ? ಇಷ್ಟುದಿವಸಗಳಮೇಲೆ ನೀನು ಭೆಟ್ಟಿಯಾದೆ. ನಿನ್ನ ಪ್ರೀತಿಯ ಸ್ವಭಾವವನ್ನುಕಂಡು ಹೇಳಬೆಕೆನ್ನಿಸಿತು. ನನ್ನ ಹುಡಿಗೆಯಂತೆ ನೀನು. ಚಂದ್ರಿಯೂ ನೀನೂ ಕೂಡಿ ಆಡುತ್ತಿದ್ದಿರಿ. ನಿನಗೆ ಎರೆಯಲಿಕ್ಕೆ ಹಾಕಿದ್ದೇನೆ. ನಿನಗೆ ಲಂಗವನ್ನು ಹೊಲಿದುಕೊಟ್ಟದ್ದೇನೆ. ನೀನೂ ನನ್ನವಳೇ ಎಂದು ಹೇಳಿದೆ. ಮನಸ್ಸು ತುಸು ಹಗುರಾಯಿತು. ಜಗತ್ತಿನಲ್ಲಿ ನಮ್ಮ ದುಃಖದಿಂದ ಬೇರೆಯವರಿಗೆ ದುಃಖವಾಗುವದನ್ನು ಕಂಡು ತುಸು ಆರಾಮು ಅನಿಸುತ್ತದೆ. ಆದರೆ ನಾನು ಯಾರ ಮುಂದೆಯೂ ಮಾತನಾಡುವದಿಲ್ಲ. ಹೇಳಿದರೆ ದೇವರಮುಂದೆ ಹೇಳುವದು, ಮಾತನಾಡುವದು" ಎಂದು ಹೇಳ ಹೇಳುತ್ತ ತಾಯಿಯ ಕಣ್ಣುಗಳು ಹನಿಗೂಡಿದವು. ಸುಭಾತಾಯಿಯ ಕಣ್ಣಲ್ಲಿಯೂ ಒಂದೆರಡು ಹನಿ ಕಾಣಿಸಿಕೊಂಡವು.

"ಅಕ್ಕಾ, ನಮ್ಮ ಮಧೂನ ಮುಂಜಿವೆಯ ಹೊತ್ತಿಗೆ ಬರಬೇಕು ನೋಡು. ಶ್ಯಾಮ ಮೊದಲಾದವರು ದೊಡ್ಡವರಾಗುತ್ತಾರೆ. ಆಮೇಲೇನೂ ನಿಮಗೆ ತೊಂದರೆ ಯಾಗಲಾರದು. ಯಾವ ಕೊರತೆಯೂ ಉಂಟಾಗಲಾರದು ದೇವರದಯದಿಂದ ನಿನಗೆ ಒಳ್ಳೆ ಮಕ್ಕಳು ದೊರೆತಿದ್ದಾರೆ. ಇದೇ ದೊಡ್ಡಪುಣ್ಯ." ಎಂದಳು ಸುಭಾತಾಯಿ.

ತಾಯಿಯೆಂದಳು, "ಹೌದು, ಅದೊಂದು ಸುಖವು ಮಾತ್ರ ಇದೆ. ಶ್ಯಾಮನು ಮನೆಗೆಬಂದನೆಂದರೆ ನನ್ನ ಎಲ್ಲ ಕೆಲಸಗಳನ್ನೂ ಮಾಡಿಕೊಡುತ್ತಾನೆ, ಮತ್ತು ಶಾಲೆಯಲ್ಲಿಯೂ ಜಾಣನಾಗಿದ್ದಾನೆಂದು ಹೇಳುತ್ತಾರೆ. ದೇವರು ಹೇಗೆ ಮಾಡುತ್ತಾನೋ ಹಾಗೆ ಆಗಲಿ. ಹೋಗಿಬರುತ್ತೇನಮ್ಮಾ!" ಹೀಗೆ ನುಡಿದಮೇಲೆ ತಾಯಿಯು ಸುಭಾತಾಯಿಯ ಹುಡುಗರ ಕೈಯಲ್ಲಿ ಒಂದೊಂದು ರೂಪಾಯಿ ಇಟ್ಟಳು. ಸುಭಾತಾಯಿಗೊಂದು ಖಣವನ್ನು ಕೊಟ್ಟಳು.

"ಅಕ್ಕಾ, ರೂಪಾಯಿ ಏತಕ್ಕೆ ಸುಮ್ಮನೆ ?"

" ಇರಲಿ ಬಿಡಮ್ಮಾ, ನಾನು ಇನ್ನೆಂದು ಭೆಟ್ಟಿಯಾಗುವೆನೋ? ಸುಭಾ, ನಿನ್ನ ಅಕ್ಕನೀಗ ಶ್ರೀಮಂತಳಲ್ಲ. ಇರಲಿ ಆ ರೂಪಾಯಿ " ಎಂದುನುಡಿದು ಆ ಹುಡುಗರ ಬೆನ್ನಮೇಲೆ ಕೈಯಾಡಿಸಿ ತಾಯಿ ಹೊರಟಳು.

ನಾವು ತಾಯಿ ಮಕ್ಕಳು ಮತ್ತೆ ಬಂಡಿಯನ್ನೇರಿದೆವು. ಬಂಡಿ ಹೊರಟಿತು. ಎತ್ತುಗಳಿಗೆ ಮರಳಿ ಮನೆಗೆ ಹೋಗುವದಿದ್ದುದರಿಂದ ಅವು ವೇಗದಿಂದ ಸಾಗಿದ್ದವು. ಆದರೆ ಏರು ಇತ್ತು. ಬಹಳ ವೇಗದಿಂದ ಹೋಗುವದು ಸಾಧ್ಯವಿರಲಿಲ್ಲ. ಬರುವಾಗ ಬರಿ ಇಳಕಲಿತ್ತು. ಊರುದಾಟಿ ಬಂಡಿ ಮಾರ್ಗಕ್ಕೆ ಬಂದುಕೂಡಿತು.

ಸಾಯಂಕಾಲವಾಗುತ್ತ ಬಂದಿತ್ತು. ಇಡೀ ಸಮುದ್ರವೇ ತಾಮಸ್ತೀರ್ಥವಾದಂತಿತ್ತು. ನೋಟ ಸುಂದರವಾಗಿತ್ತು. ಸೂರ್ಯನು ತನ್ನ ತಾಯಿಯ ಹೊಟ್ಟೆಯಲ್ಲಿ ಸೇರಿಕೊಳ್ಳುವದರಲ್ಲಿದ್ದ. ಅವನನ್ನು ಕಣ್ಣುತೆರೆದು ನೋಡಬಹುದಾಗಿತ್ತು. ಅವನು ಈಗ ಕೆಂಪು ಮುದ್ದೆಯಾಗಿದ್ದನು. ಸಮುದ್ರವು ಆ ದಣಿದುಬಂದ ಸೂರ್ಯನಿಗೆ ಸಹಸ್ರಾರು ತೆರೆಗಳಿಂದ ಸ್ನಾನ ಹಾಕಲು ಉತ್ಸಾಹಗೊಂಡಿತ್ತು. ಸೂರ್ಯನು ಮುಳುಗಿದನು. ಆ ಕೆಂಪು ಮುದ್ದಿ ಸಮುದ್ರದಲ್ಲಿ ಬಿದ್ದಿತು. ಆ ಕಾಲಕ್ಕೆ ಹಸಿರು, ನೀಲಿ ಬಣ್ಣಗಳು ಕಾಣಿಸಿಕೊಂಡವು. ರಾತ್ರಿ ಇಡೀ ಸಮುದ್ರದ ಮಗ್ಗುಲಲ್ಲಿ ಮಲಗಿ ಮರುದಿವಸ ಮತ್ತೆ ಬರತಕ್ಕವನಿದ್ದ.

ಎರಡೂ ಬದಿಯಲ್ಲಿಗಾಳಿ ಮರಗಳ ' ಕಿರ್ ' ' ಕಿರ್ ' ಸದ್ದು. ಆಕಾಶದಲ್ಲಿ ಅಲ್ಲೊಂದು ಇಲ್ಲೊಂದು ನಕ್ಷತ್ರಗಳು ಕಾಣತೊಡಗಿದವು. ರಾತ್ರಿ ಹೊತ್ತಿನಲ್ಲಿ ಅಡವಿಯಲ್ಲಿ ಹೋಗುವಾಗ ಒಳ್ಳೆ ಗಾಂಭೀರ್ಯ ಕಂಡುಬರುತ್ತದೆ. ರಾತ್ರಿಯ ಹುಳಗಳು ಒದರುತ್ತಿದ್ದವು. ದೂರದಿಂದ ಸಮುದ್ರವು ಭೋರ್ಗರೆಯುತ್ತಿತ್ತು. ತಾಯಿಮಕ್ಕಳು ಗಾಡಿಯಲ್ಲಿ ಮಾತು ಕತೆ ನಡೆಸಿದ್ದೆವು.

" ಅಮ್ಮಾ, ನಾವು ಹೀಗೆಯೇ ಮತ್ತೆ ಎಂದು, ಎಲ್ಲಿಗೆ ಹೋಗುವುದು? ನಿನ್ನ ಜೊತೆಗೆ ನಾನು ಎಂದೂ ತಿರುಗಾಡಿಲ್ಲ. ನಿನ್ನ ಜೊತೆಗೆ ಪ್ರವಾಸಮಾಡಬೇಕು. ನಿನ್ನ ಪ್ರೀತಿಯನ್ನೆಲ್ಲ ಕಸಿದುಕೊಂಡು ಬಿಡಬೇಕೆಂದು ಅನಿಸುತ್ತದೆ. " ನನ್ನ ತಾಯಿಯ ಕೈಯನ್ನು ನನ್ನ ಕೈಯಲ್ಲಿ ತೆಗೆದುಕೊಂಡು ನುಡಿದೆನು.

ತಾಯಿ ಹೇಳಿದಳು, " ನೀವು ದೊಡ್ಡವರಾಗಿ ಸಂಪಾದನೆ ಮಾಡಹತ್ತಿದ

ಬಳಿಕ ನಿಮ್ಮ ಜೊತೆಗೆ ಬರುತ್ತೇನೆ. ಆಗ ನನಗೆ ನೀವು ಪಂಢರಪುರ, ನಾಶಿಕ, ಕಾಶಿ, ದ್ವಾರಕಾ ಮೊದಲಾದ ಎಲ್ಲ ಯಾತ್ರೆಮಾಡಿಸಿರಿ. ನಿನ್ನ ಅಜ್ಜ ಕಾಶಿಗೆ ಹೋಗಿಬಂದಿದ್ದರು. ಇವರು ಕೂಡ ನಾಶಿಕ ಮತ್ತು ಪಂಢರಪುರಕ್ಕೆ ಹೋಗಿ ಬಂದಿದ್ದಾರೆ. ಆದರೆ ನಾನು ಎಲ್ಲಿ ಹೋಗಲಿ ? ನನ್ನನ್ನು ಯಾರು ಒಯ್ಯುತ್ತಾರೆ ? ಅಂಗಳದಲ್ಲಿಯ ತುಳಸಿಯೇ ನನ್ನ ಕಾಶಿ, ನನ್ನ ಪಂಢರಪುರ. 'ಕಾಶಿಯಾತ್ರೆ ಮಾಡಬೇಕು; ಪುಣ್ಯಪಡೆಯಬೇಕು' ಎಂದು ನಿತ್ಯವೂ ಹೇಳುತ್ತ ಇದ್ದರೂ ಪುಣ್ಯ ದೊರೆಯುತ್ತದೆ. ಮೈಮೇಲೆ ನೀರ ಹಾಕಿಕೊಳ್ಳುವಾಗ 'ಹರ ಹರ ಗಂಗಾ-ಭಾಗೀರಥಿ' ಎನ್ನಬೇಕು. ವಿಠೋಬ, ವಿಶ್ವೇಶ್ವರ, ಗೋದಾ ಮತ್ತು ಗಂಗಾ ನಮ್ಮ ಅಂಗಳದಲ್ಲಿಯೇ ಇದ್ದಾರೆ. ಬಡವರಿಗಾಗಿ ಈ ಸೌಕರ್ಯವಿದೆ. ಮಗೂ, ನಾನೆಲ್ಲಿ ಯಾತ್ರೆಗೆ ಹೊರಡುವದಪ್ಪಾ ? ಸಾವಕಾರನ ಕಾರಕೂನರು ನಿತ್ಯವೂ ಮನೆಗೆ ಬಂದು ಧ್ವಜ ಊರುತ್ತಾರೆ. ಜೀವ ಬೇಡವೆನಿಸುತ್ತದೆ, ಸಾಕು ಈ ಸಂಸಾರ, ಎಲ್ಲಿಯ ಯಾತ್ರೆ? ಈ ಸಂಸಾರ ಯಾತ್ರೆಯೇ ದೊಡ್ಡಯಾತ್ರೆಯಾಗಿದೆ. ಮರ್ಯಾದೆಯಿಂದ ಈ ಯಾತ್ರೆ ಜರುಗಿಸಿ ಕಣ್ಣುಮುಚ್ಚಿದರೆ ಸಾಕಾಗಿದೆ."

ಗುಡ್ಡದಿಂದ ಧೋ ಧೋ ಎಂದು ನೀರು ಬೀಳುವ ಸ್ಥಳದವರೆಗೆ ನಾವು ಬಂದಿದ್ದೆವು. ತಾಯಿಯ ಕಣ್ಣುಗಳಲ್ಲಿಯೂ ಶಾಂತವಾದ ಪ್ರವಾಹವು ಹರಿಯುತ್ತಿದ್ದಿತು. ಆ ಪವಿತ್ರ-ಗಂಗೆ-ಯಮುನೆಯರನ್ನು ನಾನು ನನ್ನತಲೆಯಮೇಲೆ ಹೊತ್ತುಕೊಂಡೆ. ನಾನು ನನ್ನ ಮುಖವನ್ನು ತಾಯಿಯ ಸೆರಗಿನಲ್ಲಿ ಮುಚ್ಚಿಕೊಂಡೆ.

"ತಾಯೀ, ನೀನು ನಮಗೆಬೇಕು. ನಿನ್ನಹೊರತು ನಮ್ಮದು ಸಾಗಲಾರದು. ನಾನು ಕಲಿಯುವದೂ ನಿನಗಾಗಿಯೇ. ನೀನು ಇಲ್ಲದೆ ಹೋದರೆ ನಾನು ಯಾರಿಗಾಗಿ ಕಲಿಯಲಿ ? ಯಾರಿಗೋಸ್ಕರ ಜೀವಿಸಲಿ ? ತಾಯಿ, ದೇವರು ನಿನ್ನನ್ನು ಒಯ್ಯಲಾರ !" ಎಂದು ನುಡಿದು ನಾನು ತಾಯಿಯನ್ನು ಗಟ್ಟಿಯಾಗಿ ಹಿಡಿದುಕೊಂಡೆ. ಆಗಲೇ ಮೃತ್ಯುದೇವತೆ ಅವಳನ್ನೆಲ್ಲಿಕೊಂಡೊಯ್ಯುವಳೋ ಎಂಬಂತೆ ಅವಳನ್ನು ಗಟ್ಟಿಯಾಗಿ ಹಿಡಿದುಕೊಂಡಿದ್ದೆ.

"ದೇವರು ಮಾಡುವದದೆಲ್ಲ ಒಳ್ಳೆಯದಕ್ಕಾಗಿಯೇ ಇರುತ್ತದೆ. ನೀವು ಚೆನ್ನಾಗಿ ಇದ್ದರೆ ಸಾಕು." ಎಂದಳು ತಾಯಿ.

ಈಗ ಗಾಡಿಯಲ್ಲಿ ಸ್ತಬ್ಧತೆನೆಲೆಸಿತ್ತು. ಭಕ್ತಿ, ಪ್ರೇಮ, ಕೃತಜ್ಞತೆ ಮೊದಲಾದ ಎಲ್ಲ ಕೋಮಲ ಭಾವನೆಗಳು ಉಕ್ಕಿಬಂದು ನಾನು ನನ್ನ ತಾಯಿಯ ತೊಡೆಯಮೇಲೆ ತಲೆಯನ್ನಿಟ್ಟೆದ್ದೆ. ನಾನು ತುಸು ಹೊತ್ತಾದ ಮೇಲೆ ಮತ್ತೆ ತಾಯಿಗೆ ಹೇಳಿದೆ, " ಅಮ್ಮಾ, ಚಿಕ್ಕವನಿದ್ದಾಗ ನೀನೊಂದು ಕಥೆ ಹೇಳುತ್ತಿದ್ದೆ. ಒಬ್ಬ ತಿರುಕರ ಹುಡುಗನು ದಿನಾಲು ರಾತ್ರಿ ದಾರಿಯ ಮೇಲೆ ತನ್ನ ಜೋಳಿಗೆಯೊಳಗಿನ ನಾಲ್ಕು ಕಾಳುಗಳನ್ನು ಚೆಲ್ಲುತ್ತಿದ್ದ. ಅವು ಬೆಳಗಾಗುವದರಲ್ಲಿ ಬಂಗಾರದ ತುಂಡಾಗಿರುತ್ತಿದ್ದವು. ಅಮ್ಮಾ ಅದೇರೀತಿ ನಮ್ಮ ಭಾಗ್ಯವೂ ತೆರೆಯಬಹುದು. ಅಲ್ಲವೇನಮ್ಮಾ ? ನಮ್ಮ ದಾರಿದ್ರ್ಯವು ಪರಿಹಾರವಾಗಿ ಸುದಿನಗಳು ಬರಬಹುದು. "

" ಶ್ಯಾಮಾ, ದೇವರಿಗೆ ಯಾವುದು ಅಸಾಧ್ಯವಿದೆ ? ರಾತ್ರಿಇದ್ದುದನ್ನು ಹಗಲು ಮಾಡುತ್ತಾನೆ. ವಿಷವಿದ್ದುದನ್ನು ಅಮೃತವನ್ನಾಗಿ ಮಾಡುತ್ತಾನೆ. ಸುದಾಮನಿಗೆ ದೇವರು ಬಂಗಾರದ ಪಟ್ಟಣವನ್ನು ಕೊಡಲಿಲ್ಲವೇ ? ಆದರೆ ನಾವು ಸಾಮಾನ್ಯ-ಸಂಸಾರಿಗರು. ಅಂಥ ಯೋಗ್ಯತೆ ನಮಗೆಲ್ಲಿ ಬರಬೇಕು ? " ಎಂದು ತಾಯಿನುಡಿದಳು.

" ಅಮ್ಮಾ, ದೇವರ ಕೃಪೆ ಯಾವಾಗಲೂ ಇರುತ್ತದಲ್ಲವೇ ? ಬಡತನ ಬರುವದು, ಅಪಮಾನವಾಗುವದು. ಕಷ್ಟನಷ್ಟಗಳನ್ನನುಭವಿಸಬೇಕಾಗುವದು, ಇದು ಕೂಡ ದೇವರ ಕೃಪೆಯೆಂದೇ ಹೇಳುತ್ತಾರೆ. ಅದು ನಿಜವೇನಮ್ಮಾ ? " ಎಂದು ನಾನು ವಿಚಾರಿಸಿದೆ.

" ಮಗೂ, ಇವೆಲ್ಲ ನಿನ್ನ ಅಶಿಕ್ಷಿತಳಾದ ತಾಯಿಗೆ ತಿಳಿಯುವ ವಿಷಯವಲ್ಲ. ದೇವರು ಮಾಡುವದೆಲ್ಲ ಒಳಿತಿಗಾಗಿಯೇ ಎಂಬುದು ಮಾತ್ರ ಗೊತ್ತಿದೆ. ಸಣ್ಣವನಿದ್ದಾಗ ನಿನಗೆ ನಾನು ಹೊಡೆದದ್ದು ನಿನ್ನ ಒಳಿತಿಗಾಗಿಯೇ ಅಲ್ಲವೇ ? ಅಂದಬಳಿಕ ದೇವರು ನನಗಿಂತಲೂ ಎಷ್ಟೋಪಾಲು ದಯಾಳುವಾಗಿದ್ದಾನೆ. ಅವನನ್ನು ನಂಬಬೇಕು. ವಿಷವನ್ನೇ ಕೊಡಲಿ, ಅಮೃತವನ್ನೇ ಕೊಡಲಿ ಅವನಮೇಲೆ ವಿಶ್ವಾಸವನ್ನಿಡಬೇಕು. " ತಾಯಿ ಶ್ರದ್ಧೋಪನಿಷತ್ತನ್ನೇ ಹೇಳತೊಡಗಿದಳು.

ಒಮ್ಮೆಲೆ ದಾರಿಯಕಡೆ ನನ್ನ ಗಮನಹೋಯಿತು. " ಹುಲಿ! ಅಮ್ಮಾ, ಹುಲಿ ! " ನಾನು ಗಾಬರಿಯಿಂದ ನುಡಿದೆ. ಎಂಥ ತೇಜಸ್ವಿಯಾದ ಕಣ್ಣು

ಗಳು ! ಎಂಥ ಭಯನಾಯಕ ಆಕಾರವದು ! ಏನು ಆ ಅಬ್ಬರ ! ಬಲಗಡೆಯ ಕಾಡಿನಿಂದ ಎಡಗಡೆಯ ಕಾಡಿನಲ್ಲಿ ಅದು ಪ್ರವೇಶಿಸಿತು. ರಂಗಭೂಮಿಯ ಮೇಲೆ ಠೀವಿಯಿಂದ ನಟನು ಬಂದು ಹೋಗುವಂತೆ ಅದು ಹೊರಟು ಹೋಯಿತು. ತಾಯಿ ಮಕ್ಕಳ ಪ್ರಿತಿಯ ಮಾತುಗಳನ್ನು ಕೇಳಲಿಕ್ಕೆ ಅದು ಬಂದಿರಬಹುದೇ ? ದೇವರ ದಯೆಯನ್ನು ತಿಳಿಸಿಕೊಡುವುದಕ್ಕಾಗಿ ಅದು ಬಂದಿದ್ದಿತೇ ? ಪಶುಪಕ್ಷಿಗಳೂ, ದನಕರುಗಳೂ, ಬೆಕ್ಕೂ ನನ್ನ ತಾಯಿಯನ್ನು ಪ್ರೀತಿಸುತ್ತಿದ್ದುವು. ಬೆಕ್ಕಿನ ಕಥೆಯನ್ನು ಕೊನೆಗೆ ನಾನು ಹೇಳತಕ್ಕವನಿದ್ದೇನೆ. ಬೆಕ್ಕು ಅಂದರೆ ಹುಲಿಯ ಅಬಚಿ ! ಬೆಕ್ಕು ನನ್ನ ತಾಯಿಯನ್ನು ಪ್ರೀತಿಸುತ್ತಿತ್ತು ಅಂದಬಳಿಕ ಹುಲಿಯೇಕೆ ಪ್ರಿತಿಸಲಾರದು ? ಅದು ನನ್ನ ತಾಯಿಯ ಭೆಟ್ಟಿ ಗಾಗಿ ಬಂದಿತ್ತು. ಕ್ರೂರತನವನ್ನು ದೂರಮಾಡಿ ವಿನಯದಿಂದ ನಮಸ್ಕರಿಸಲು ಬಂದಿತ್ತು.

ದಾಪ್ರೋಲಿ ಊರು ಸಮೀಪಿಸಿತು. ದೂರದ ದೀಪಗಳು ಮಿಂಚುತ್ತಿದ್ದವು. ನಾವು ಮನೆಗೆ ಬಂದು ತಲುಪಿದಾಗ ರಾತ್ರಿ ಒಂಬತ್ತುಗಂಟೆಯಾಗಿತ್ತು. ತಾಯಿ ಅದೇ ದಿನರಾತ್ರಿ ಪಾಲಗಡಕ್ಕೆ ಹೋಗದೆ ಮರುದಿವಸ ಮುಂಜಾನೆ ಹೋದಳು.

ಗೆಳೆಯರೇ, ನನ್ನ ಜೀವನದಲ್ಲಿ ಆ ದಿವಸ ಮತ್ತು ಆ ರಾತ್ರಿ ಅಮರವಾಗಿವೆ. ಆಮೇಲೆ ಎಂದೂ ನಾನು ನನ್ನ ತಾಯಿಕೂಡಿ ಎಲ್ಲಿಯೂ ಹೋಗಲಿಲ್ಲ. ಅದು ಒಂದೇ ಒಂದುದಿವಸ ! ಆ ಒಂದೇ ಒಂದುದಿವಸ ನಾನು ಮತ್ತು ನನ್ನ ತಾಯಿ ಸೃಷ್ಟಿ ಮಾತೆಯ, ಸಮುದ್ರ ಮತ್ತು ವನದೇವತೆಯ ಸಹವಾಸದಲ್ಲಿದ್ದೆವು. ಇಬ್ಬರೂ ಸಂತೋಷ ಹಾಗು ಪ್ರೇಮದಲ್ಲಿ ಮುಳುಗಿದ್ದೆವು. ಹೃದಯ ಹೃದಯಗಳು ಮಾತನಾಡಿದವು. ಆದಿವಸದನಂತರ ನನ್ನ ತಾಯಿಯ ಜೀವನದಲ್ಲಿ ಹೆಚ್ಚು ಹೆಚ್ಚು ಸಂಕಟಗಳೂ, ಕಷ್ಟಗಳೂ ಬರತೊಡಗಿದವು. ದೇವರು ನನ್ನ ತಾಯಿಯ ಜೀವನವೆಂಬ ಬಂಗಾರವನ್ನು ನೂರು ಸಂಬರಿನ ಬಂಗಾರವನ್ನಾಗಿ ಮಾಡಲು ಹವಣಿಸುತ್ತಿದ್ದನು. ಇನ್ನೂ ಪ್ರಜ್ವಲವಾದ ಜ್ವಾಲೆಯಲ್ಲಿ ಅವಳನ್ನು ಹಾಕಹತ್ತಿದ್ದನು. ಮಿತ್ರರೇ, ನನ್ನ ತಾಯಿಯೆಂದರೆ ಶಾಪಭ್ರಷ್ಟ ದೇವತೆಯೇ ಆಗಿದ್ದಳು.

ಹೀಗೆ ಹೇಳಿ ಶ್ಯಾಮನು ಒಮ್ಮೆಲೆ ಎದ್ದು ಹೋದನು. ಎಲ್ಲರೂ ಸ್ತಬ್ಧ

ರಾಗಿ ಕುಳಿತಿದ್ದರು. ತುಸು ಹೊತ್ತಿನಮೇಲೆ ಜನರು ಎಚ್ಚರಗೊಂಡವರಂತಾಗಿ ಎದ್ದು ತಮ್ಮ ತಮ್ಮ ಮನೆಗೆ ಹೋದರು.

ರಾತ್ರಿ : ೩೨

## : : ಸಾಲವೆಂದರೆ ಇಹಲೋಕದ ನರಕ

ಅಂದು ಸಾವುಕಾರರ ಗುಮಾಸ್ತ ಸಾಲ ವಸೂಲಿಗೆಂದು ನಮ್ಮಲ್ಲಿಗೆ ಬಂದಿದ್ದ. ಆ ದೂತನು ನಮ್ಮ ಮನೆಗೆ ಬಂದನೆಂದರೆ ನೆತ್ತಿಯಿಂದ ಪ್ರಾಣ ಹೋದಂತಾಗುತ್ತಿತ್ತು ನಮ್ಮ ತಾಯಿಗೆ. ಸಾಲ ಮಾಡುವವನಿಗೆ ಸುಖವಿಲ್ಲ. ಸಾಲವೆಂದರೆ ನರಕಯಾತನೆ. ಸತ್ತರೂ ಸಾಲಮಾಡಬಾರದು. ಉಪವಾಸ ವಿದ್ದರೂ ಚಿಂತಿಲ್ಲ ಸಾಲ ಮಾಡಬಾರದು. ಸಾಲದಿಂದ ಒಮ್ಮೆಯೇ ಸುಖ ವಾಗುತ್ತದೆ; ಅದು ಸಾಲತೆಗೆದು ಕೊಳ್ಳುವಾಗ್ಗೆ. ಆ ಮೇಲೆ ನಿತ್ಯವೂ ಅದು ಅಳಿಸುತ್ತದೆ. ಬಿಕ್ಕೆ ಬೇಡ ಹಚ್ಚುತ್ತದೆ. ಸಾಲದಿಂದ ಸ್ವಾಭಿಮಾನವು ಇಲ್ಲ ದಂತಾಗುತ್ತದೆ. ಮಾನವು ನಷ್ಟವಾಗುತ್ತದೆ. ಸಾಲ ಮಾಡುವವನ ಗೋಣು ಯಾವಾಗಲೂ ಕೆಳಗೆ ಆಗುತ್ತದೆ. ಸಾಲವೆಂದರೆ ಪರಾವಲಂಬಿಯಾಗು ವದು. ದೀನರಾಗುವದು.

ಸಾವುಕಾರರ ಆಸಾಮಿ ! ತಂದೆಯವರು ಅವನಿಗೆ ಒಳ್ಳೆ ಆತಿಥ್ಯವನ್ನು ಮಾಡುತ್ತಿದ್ದರು. ಮನೆಯಲ್ಲಿ ಉತ್ತಮವಾದ ಪಲ್ಲೆ ಮಾಡಲು ಹೇಳಿದರು. ಬಾಳೆಎಲೆ ತಂದಿಟ್ಟರು. " ಮಜ್ಜಿಗೆ ಹುಳಿ ಮಾಡು. ಅದಕ್ಕೆ ಕರಿಬೇವಿನ ಒಗ್ಗರಣೆ ಕೊಡು ಅಂದರೆ ಪರಿಮಳ ಬರುತ್ತದೆ." ಎಂದು ತಾಯಿಗೆ ಸೂಚನೆ ಕೊಟ್ಟು ತಂದೆಯವರು ಹೊಲಕ್ಕೆ ಹೊರಟು ಹೋದರು. ಆ ಮನುಷ್ಯನು ಪಡಸಾಲೆಯಲ್ಲಿ ಕುಳಿತು ಕೊಂಡಿದ್ದ. ತಾಯಿ ಅವನಿಗೆ ಚಹ ಮಾಡಿಕೊಟ್ಟಳು. ಮನೆಯಲ್ಲಿ ಪುಡಿ ತೀರಿದ್ದರೂ ನೆರೆಮನೆಯಿಂದ ತಾಯಿ ಬೇಡಿತಂದಳು. ಚಹ ಕುಡಿದಾದಬಳಿಕ ಅವನಿಗೆ ಸ್ನಾನಕ್ಕೆ ಬಿಸಿನೀರು ಕೊಟ್ಟಳು. ಆ ಕಾರಕೂನನು ಸ್ನಾನಮಾಡಿ ತನ್ನ ಧೋತರವನ್ನು ಕೂಡ ಒಗೆಯಲಿಲ್ಲ. ಸಾವುಕಾರರ ಕಡೆ ಯವನು ! ಶ್ರೀಮಂತರ ನಾಯಿಕುನ್ನಿಗೂ ಮಾನವಿರುತ್ತದೆ. ಶ್ರೀಮಂತರ

ನಾಯಿಗಳನ್ನೂ ಬಡವರು ಮುದ್ದಿಸ ಬೇಕಾಗುತ್ತದೆ. ಒಮ್ಮೆ ಒಬ್ಬ ಒಕ್ಕಲಿಗ ನನ್ನು ಶ್ರೀಮಂತರ ನಾಯಿಯೊಂದು ಕಚ್ಚಲಿಕ್ಕೆ ಬಂದಿತ್ತು. ಒಕ್ಕಲಿಗನು ಆ ನಾಯಿಯನ್ನು ಕೋಲಿನಿಂದ ಹೊಡೆದನು. ಅದಕ್ಕಾಗಿ ಆ ಶ್ರೀಮಂತನು ಒಕ್ಕಲಿಗನ ಮೇಲೆ ಮೊಕದ್ದಮೆ ಹೂಡಿದನೆಂದೂ, ಆ ಒಕ್ಕಲಿಗನು ಇಪ್ಪತ್ತೈದು ರೂಪಾಯಿ ದಂಡ ಕೊಡಬೇಕೆಂದು ಕೋರ್ಟಿನ ನಿರ್ಣಯವಾಯಿತೆಂದೂ ನಾನು ಪತ್ರಿಕೆಯಲ್ಲಿ ಓದಿದ್ದೇನೆ ! ಒಕ್ಕಲಿಗ ! ಒಕ್ಕಲಿಗನೆಂದರೇನು ಮನುಷ್ಯನೇ ? ಅವನು ಜಗತ್ತಿನ ದಾಸನಾಗಿದ್ದಾನೆ ! ಎಲ್ಲ ಸುಖಲೋಲುಪರನ್ನೂ ಪೋಷಿಸುವ ಒಂದು ಪಶು ! ಹೀಗಿದ್ದು ಶ್ರೀಮಂತನ ನಾಯಿಯನ್ನು ಹೊಡೆಯುವನೇ ? ಗೆಳೆಯರೇ, ಹಿಂದುಸ್ತಾನದಲ್ಲಿ ಮನುಷ್ಯರಿಗಿಂತ ಪಶುಪಕ್ಷಿಗಳಿಗೆ ಹೆಚ್ಚು ಮರ್ಯಾದೆಯಿದೆ. ದೇವಸ್ಥಾನದಲ್ಲಿ ನಾಯಿ, ಕಾಗೆಗಳು ಬಂದರಾಗುತ್ತದೆ; ಮನೆಯಲ್ಲಿ ಗಿಳಿ, ಗೊರವಂಕಗಳು ಇದ್ದರಾಗುತ್ತದೆ; ಆದರೆ ಹರಿಜನರನ್ನು ಕಂಡರಾಗದು ! ಪಶು ಪಕ್ಷಿಗಳನ್ನು ಪ್ರೀತಿಸುತ್ತಿದ್ದರೂ ಮಾನವರನ್ನು ತಿರಸ್ಕರಿಸುವಂಥ ನರಾಧಮರಿದ್ದಲ್ಲಿ ಸುಖವೂ ಸೌಭಾಗ್ಯವೂ ಲಭಿಸಬಹುದೇ ? ಸ್ವಾತಂತ್ರ್ಯವು ಸ್ಥಿರವಾಗಿ ಉಳಿಯಬಹುದೇ ?

ಆ ಸಾವುಕಾರನ ಗುಮಾಸ್ತನ ಅಸಡ್ಡೆಯಾದ ಧೋತರವನ್ನು ಪುಣ್ಯಶೀಲಳಾದ ನನ್ನ ತಾಯಿಗೆ ಒಗೆಯ ಬೇಕಾಯಿತು. ತಾಯಿಯ ಕೈ ಧೋತರಕ್ಕೆ ಹತ್ತಿ ಅದನ್ನು ಉಪಯೋಗಿಸುವವನು ಪವಿತ್ರ ನಾಗಬೇಕೆಂದು ದೇವರ ಇಚ್ಛೆ ಇರಬಹುದು ! ದೇವರ ಉದ್ದೇಶ ತರ್ಕಿಸಲಸಾಧ್ಯ ! ಅವನು ಶುದ್ಧತೆಯ ಕೆಲಸವನ್ನು ಯಾರಿಂದ ಹೇಗೆ ಮಾಡಿಸಿಕೊಳ್ಳುವನೆಂಬುದು ನಿಯಮವಿಲ್ಲ.

ನನ್ನ ತಂದೆ ಹೊಲದಿಂದ ಬಂದರು. " ನಿಮ್ಮ ಸ್ನಾನ ಪಾನಗಳು ಮುಗಿದವೇನು ? " ಎಂದು ಗುಮಾಸ್ತನನ್ನು ವಿಚಾರಿಸಿದರು. ಆಯಿತೆಂದು ಅವನು ಹೇಳಿದನು. ನಿಮ್ಮ ದಾರಿಕಾಯುತ್ತಿದ್ದೆ. ನಿಮ್ಮ ಲೆಕ್ಕಾಚಾರಮಾಡಿ ನಿಮ್ಮಿಂದ ಹಣ ಪಡೆದುಕೊಂಡು ಸಾಯಂಕಾಲ ವಿಸಾಪುರಕ್ಕೆ ಹೋಗತಕ್ಕವನಿದ್ದೇನೆ. ಇಂದು ರಾತ್ರಿ ಅಲ್ಲಿಯೇ ಇರತಕ್ಕವನಿದ್ದೇನೆಂದು ಅವನು ಹೇಳಿದನು. ಆಗಲಿ, ನಾನು ಸ್ನಾನಮಾಡುತ್ತೇನೆ; ಬೇಗನೆ ಪೂಜೆ ಮುಗಿಸುತ್ತೇನೆ ಅಲ್ಲಿಯವರೆಗೆ ನೀವು ವಿಶ್ರಮಿಸಿರಿ; ಎಂದು ಹೇಳಿ ತಂದೆಯವರು ಸ್ನಾನಕ್ಕೆ ಹೋದರು. ಸ್ನಾನಮಾಡಿಬಂದು ಪೂಜೆಗೆ ಕುಳಿತಾಗ ಮೆಲ್ಲನೆ ತಾಯಿಯನ್ನು

ವಿಚಾರಿಸಿದರು, “ ಎಲ್ಲಿಂದಾದರೂ ಸೊಪ್ಪು ಬೇಡಿತಂದು ಅವರಿಗಿಷ್ಟು ಚಹ ಮಾಡಿಕೊಡಬೇಕಾಗಿತ್ತು. ಕೊಟ್ಟೆಯೋ ಇಲ್ಲವೋ ? ” ತಾಯಿ ನುಡಿದಳು, “ ಎಲ್ಲವೂ ಯಥೇಚ್ಛವಾಗಿ ಆಗಿದೆ ! ಅವನ ಧೋತರವನ್ನು ಕೂಡ ಒಗೆದು ಹಾಕಿಯಾಗಿದೆ. ಮಹಾರಾಯ ಒಮ್ಮೆ ಮನೆಬಿಟ್ಟು ಹೋದರೆ ಸಾಕು ! ”

ತಾಯಿಗೆ ವ್ಯಥೆಯಾಗಿತ್ತು. ತಲೆಕಾದು ಹೋಗಿತ್ತು. ತಂದೆ ಶಾಂತ ರೀತಿಯಿಂದ ಪೂಜೆ ಮುಗಿಸಿದರು. ಅವರು ಶಾಂತರಾದರೂ ಮನಸ್ಸಿನಲ್ಲಿಯ ಖಿನ್ನತೆಯು ಹೊರಗೆ ಹಣಿಕಿ ಹಾಕುತ್ತಿದ್ದಿತು. ಮನೆಯ ದೇವರ ಪೂಜೆ ಮುಗಿಸಿ ತಂದೆಯವರು ದೇವಸ್ಥಾನಕ್ಕೆ ಹೋದರು. ತಾಯಿ ಮಣೆ ಹಾಕಿ ನೀರು ಇಟ್ಟಳು. ತಮ್ಮ—ಪುರುಷೋತ್ತಮನು ಶಾಲೆಯಿಂದ ಬಂದಿದ್ದನು. ಅವನು ಎಲೆ ಹಾಕುವಷ್ಟರಲ್ಲಿ ತಂದೆ ಗುಡಿಯಿಂದ ಬಂದರು.

“ ಏಳಿರಿ ವಾಮನರಾಯರೆ, ಕೈಕಾಲು ತೊಳೆದುಕೊಳ್ಳಿರಿ. ” ಎಂದು ತಂದೆಯವರು ಹೇಳಿದರು. ಪುರುಷೋತ್ತಮನು ಅವರಿಗೆ ಕಾಲು ತೊಳೆಯಲು ನೀರು ಕೊಟ್ಟನು.

“ ಬನ್ನಿರಿ, ಇಲ್ಲಿ ಕುಳಿತುಕೊಳ್ಳಿರಿ, ಮಡಿ ಉಟ್ಟು ಕೊಳ್ಳದಿದ್ದರೂ ಆದೀತು. ಏನೂ ಅಡ್ಡಿಯಿಲ್ಲ. ” ಎಂದು ತಂದೆಯವರು ಹೇಳಿದರು. ನಮಗೆ ಮಡಿ ಮೈಲಿಗೆಯ ಬಗ್ಗೆ ಪರಿಪರಿಯಿಂದ ಹೇಳುವ ತಂದೆಯವರಿಗೆ ಆ ಮೈಲಿಗೆಯ ಮನುಷ್ಯನು ಬಳಿಯಲ್ಲಿ ಕುಳಿತರೂ ಅಡಚಣೆಯೆನಿಸಲಿಲ್ಲ. ಸಾವುಕಾರನ ಮನುಷ್ಯನೆಂದರೆ ದೇವರೇ ಅಲ್ಲವೇ ? ಅವನಿಗೆ ‘ ಜೀ ಜೀ ’ ಅನ್ನುವದು, ‘ ನೀವೇ ನೀವೇ ’ ಅನ್ನುವದು ತಂದೆಯವರ ಕೆಲಸವಾಗಿತ್ತು. ಅವರಾದರೂ ಮಾಡಬೇಕೇನು ? ಈ ಪುಕ್ಕತನ, ಅಗೌರವವೃತ್ತಿ, ಸತ್ವಹಾನಿ ಇವೆಲ್ಲಕ್ಕೆ ಕಾರಣವೇನು ? ಸಾಲ ! ಸಾಲ ! ಸಾಲವೇಕಾಯಿತು ? ಲಗ್ನ ಮುಂಜಿವೆಗಳಲ್ಲಿ ಮನಬಂದಂತೆ ವೆಚ್ಚಮಾಡಿದ್ದರಿಂದ; ಹಿಂದಿನಂತೆ ಠೀವಿ ಇಟ್ಟಿದ್ದರಿಂದ, ಅರ್ಥವಿಲ್ಲದ ಕುಲಾಭಿಮಾನದಿಂದ; ಹಾಸಿಗೆ ಇದ್ದಷ್ಟೇ ಕಾಲು ಚಾಚದೆ ಇದ್ದದ್ದರಿಂದ; ವ್ಯಾಜ್ಯಗಳಿಂದ; ದಾಯಾದಿತನದಿಂದ; ಕೋರ್ಟು ಕಚೇರಿಗಳಿಂದ; ಸಾಲತೀರಿಸಲು ಸಕಾಲಕ್ಕೆ ಯತ್ನಿಸದೆ ಇದ್ದುದರಿಂದ; ಸಾಲದ ಶೂಲ ಕುತ್ತಿಗೆಯ ವರೆಗೆ ಬಂದಿದ್ದರೂ ಭೂಮಿಗಳ ಮೇಲಿನ ಮೋಹವನ್ನು ಬಿಡದೆ ಇದ್ದುದರಿಂದ. ಗೆಳೆಯರೇ, ನಿಮ್ಮ ಹೆಂಡರು ಮಕ್ಕಳ ಮರ್ಯಾದೆ

ಉಳಿಯ ಬೇಕೆಂದಿದ್ದರೆ, ನಿಮ್ಮಭಿಮಾನಕ್ಕೆ ಭಂಗಬರಬಾರದೆಂದಿದ್ದರೆ ಸಾಲವನ್ನು ಮಾಡಬೇಡಿರಿ ! ಸಾಲುವಿದ್ದಿದ್ದಾದರೆ ಹೊಲಮನೆ, ವಸ್ತ್ರ–ಒಡವೆ, ಏನೆಲ್ಲವನ್ನೂ ಮಾರಾಟ ಮಾಡಿ ಮೊದಲು ಸಾಲದಿಂದ ಮುಕ್ತರಾಗಿರಿ. ”

ಎಲೆ ಬಡಿಸಿಯಾಯಿತು. ವಾಮನರಾಯರೂ ನಮ್ಮ ತಂದೆಯವರೂ ಊಟಕ್ಕೆ ಕುಳಿತರು. “ ಪುರುಷೋತ್ತಮ, ಒಂದು ಸುಂದರವಾದ ಶ್ಲೋಕ ಹೇಳು. ವಾಮನರಾಯರು ‘ಭಲೆ’ ಎನ್ನುವಂಥ ಶ್ಲೋಕ ಹೇಳು. ” ತಂದೆ ಹೇಳಿದರು. ಪುರುಷೋತ್ತಮನು ಶ್ಲೋಕ ಹೇಳಿದನು. ಆದರೆ ಅವನಿಗೆ ‘ಭಲೆ’ ಎನ್ನುವಷ್ಟು ವಾಮನರಾಯರ ಹೃದಯವು ದೊಡ್ಡದಾಗಿರಲಿಲ್ಲ. ಸಾವು ಕಾರರಲ್ಲಿದ್ದು ಅವರೂ ಪ್ರೇಮಹೀನರೂ, ಅನುದಾರಿಯೂ ಆಗತೊಡಗಿದ್ದರು. ಆಢ್ಯತೆಯುಳ್ಳವರೂ, ಸೊಕ್ಕಿನವರೂ ಆಗಿದ್ದರು.

“ ಸಂಕೋಚ ಮಾಡಿಕೊಳ್ಳಬೇಡಿ ವಾಮನರಾಯರೆ. ಇನ್ನಿಷ್ಟು ಪಲ್ಲೆ ತೆಗೆದುಕೊಳ್ಳಿರಿ. ಇನ್ನೊಂದು ಸವಟು ಪಲ್ಲೆ ನೀಡೇ ಅವರಿಗೆ. ” ಎಂದು ತಾಯಿಗೆ ಹೇಳಿ ಹೇಳಿ ನೀಡಿಸುತ್ತಿದ್ದರು. ವಾಮನರಾಯರು ಹೆಚ್ಚಾಗಿ ಮಾತನಾಡುತ್ತಿರಲಿಲ್ಲ. ಆ ಸಾದಾ ಅಡಿಗೆ ಅವರಿಗೆ ಸೇರಿರಲಿಕ್ಕಿಲ್ಲ ! ವೈಭವದ ಊಟವೇನೂ ಆದಾಗಿರಲಿಲ್ಲ. ಊಟವಾದ ಬಳಿಕ ಪಡಸಾಲೆಯಲ್ಲಿ ತಂದೆಯವರೂ ವಾಮನರಾಯರೂ ಕುಳಿತುಕೊಂಡರು. ವಾಮನರಾಯರಿಗೆ ಅಡಿಕೆ ಮತ್ತು ಲವಂಗ ಕೊಡಲಾಯಿತು. ಅವರಿಗೆ ಕುಡಿಯಲಿಕ್ಕೆ ತಾಜಾ ನೀರು ಬೇಕಾಗಿತ್ತೆಂದು ತಂಬಿಗೆಗೆ ಹಗ್ಗ ಕಟ್ಟಿ ಪುರುಷೋತ್ತಮನು ನೀರು ಎಳೆದು ಕೊಂಡು ತಂದನು. ವಾಮನರಾಯರು ತಣ್ಣಗಿನ ನೀರು ಕುಡಿದರು. ತಾಯಿ ಊಟಕ್ಕೆ ಕುಳಿತುಕೊಂಡಳು.

“ ಇನ್ನೇನು ಭಾವೂರಾಯರೆ, ಬಡ್ಡಿಯ ಹಣ ಕೊಡಿರಿ. ನೀವು ಇಂದು ಕೊಡುವುದಾಗಿ ಹೇಳಿದ್ದಿರಿ. ಇಂದು ೭೫ ರೂಪಾಯಿಗಳನ್ನಾದರೂ ನೀವು ಕೊಡಲೇಬೇಕು ಖಾಲೀ ಮಾಡಬೇಡಿರಿ. ನೀವು ಇಂದು ಬರಲಿಕ್ಕೆ ಹೇಳಿದ್ದರಿಂದ ಬಂದಿದ್ದೇನೆ. ” ಎಂದು ವಾಮನರಾಯರು ಮಾತಿಗೆ ಮೊದಲು ಮಾಡಿದರು.

“ ಅದೆಲ್ಲ ನಿಜ, ವಾಮನರಾಯರೆ. ನನ್ನಲ್ಲಿದ್ದ ಹತ್ತು ಮಣ ಭತ್ತವನ್ನು ಮಾರಿದೆ. ಅದರಿಂದ ತುಸು ಹಣ ಬಂದಿತು. ತುಸು ಸಾವಿ

ಇದ್ದವು ಅವನ್ನೂ ಮಾರಿದೆ. ಹಾಗೂ ಹೀಗೂ ಮಾಡಿ ೨೫ ರೂಪಾಯಿ ನಿಮಗಾಗಿ ಕೂಡಿಸಿಟ್ಟಿದ್ದೇನೆ. ಇವನ್ನು ಸದ್ಯ ತೆಗೆದುಕೊಂಡು ಹೋಗಿರಿ. ನಿಮ್ಮ ಧನಿಯರಿಗೆ ಸಮಾಧಾನ ಹೇಳಿರಿ. ನಮಗಾಗಿ ನಾಲ್ಕು ಮಾತು ನೀವು ಹೇಳಬೇಕು. ಹಣವೇನೂ ಮುಳುಗುವದಿಲ್ಲವೆಂದು ಹೇಳಿರಿ. ನಿಧಾನವಾಗಿ ಎಲ್ಲವನ್ನೂ ತೀರಿಸಿಬಿಡುತ್ತೇನೆ. ಹುಡುಗರು ತುಸು ದೊಡ್ಡವರಾಗಲಿ—ಸಂಪಾದಿಸುವಂತಾಗಲಿ—ಒಬ್ಬನು ಈಸಲ ಪ್ರೀವ್ಹಿಯಸ್‌ನಲ್ಲಿ ಇದ್ದಾನೆ. ವಾಮನರಾಯರೇ ತುಸು ವಿಚಾರ ಮಾಡಿರಿ. ಶಗಣಿಯಲ್ಲಿಯ ಹುಳಗಳೇನು ಅದರಲ್ಲಿಯೇ ಉಳಿದುಬಿಡುವವೇ ? ಅವೂ ಕೆಲವು ಕಾಲದ ಮೇಲೆ ಹೊರಗೆ ಬರತಕ್ಕವೇ. ” ನನ್ನ ತಂದೆಯವರು ವಿನಯದಿಂದ ವಾಮನರಾಯರನ್ನು ಬಿನ್ನವಿಸಿಕೊಳ್ಳತೊಡಗಿದರು.

“ ನನಗೆ ಅದಾವುದೂ ಗೊತ್ತಿಲ್ಲ. ಹಣವನ್ನು ಪಡೆಯದ ಹೊರತು ನಾನು ಇಲ್ಲಿಂದ ಕಾಲ್ತೆಗೆಯಲಾರೆ. ಈ ಹೊಸ ಮನೆ ಕಟ್ಟಿಸಲಿಕ್ಕೆ ನಿಮ್ಮಲ್ಲಿ ಹಣವಿದೆ. ಇಂಗ್ಲೀಷು ಕಲಿಸಲಿಕ್ಕೆ ನಿಮ್ಮಲ್ಲಿ ಹಣವಿದೆ. ಸಾವುಕಾರರ ಸಾಲದ ಹಣ ಕೊಡಲಿಕ್ಕೆ ಮಾತ್ರ ಹಣವಿಲ್ಲವೇನು ? ಸಾಹುಕಾರರ ಹಣ ವಸೂಲಾಗದಿದ್ದರೆ ನಮಗೆ ಸಂಬಳ ದೊರೆಯುವದಾದರೂ ಹೇಗೆ ? ನಾನೇನು ಕೇಳುವದಿಲ್ಲ. ಹಣ ಪಡೆಯದೆ ಒಡೆಯರ ಮುಂದೆ ಹೋಗಲು ನನಗೂ ನಾಚಿಕೆ. ರೂಪಾಯಿ ಕೊಡಿರಿ. ” ವಾಮನರಾಯ ದಯೆ ದಾಕ್ಷಿಣ್ಯಗಳಿಲ್ಲದೆ ಸಿಟ್ಟಿನಿಂದ ನುಡಿಯುತ್ತಿದ್ದನು. ಅವನಾದರೂ ಏನು ಮಾಡಬೇಕು ? ಅವನೂ ಗುಲಾಮನೇ !

“ ವಾಮನರಾವ, ಏನೆಂದು ಹೇಳಲಿ ನಿಮಗೆ. ಅದೆಂಥ ಮನೆ? ಹೆಸರಿಗೆ ಮನೆ ! ಮಣ್ಣಿನ ನಾಲ್ಕು ಗೋಡೆಗಳು ! ಅವಳ ಒತ್ತಾಯಕ್ಕಾಗಿ ಈ ಗುಡಿಸಲನ್ನು—ಕೊಟ್ಟಿಗೆಯಂಥ ಮನೆಯನ್ನು—ಕಟ್ಟಿದ್ದಾಗಿದೆ. ಆದರೆ ಈ ಚಿಕ್ಕ ಮನೆ ಕಟ್ಟಲಿಕ್ಕೂ ಅವಳ ಕೈಯೊಳಗಿನ ಪಾಟ್ಲಿ ಬಳೆ ಮಾರಾಟ ಮಾಡಬೇಕಾಯಿತು. ” ತಂದೆ ಲಜ್ಜೆಯುಳ್ಳವರಾಗಿ ಹೇಳುತ್ತಿದ್ದರು.

ತಂದೆಯವರು ಹೊರಗೆ ಮಾತನಾಡುತ್ತಿದ್ದರು. ಒಳಗೆ ತಾಯಿಯ ಅನ್ನದಲ್ಲಿ ಕಣ್ಣೀರಿನ ಹನಿಗಳು ಪಟ ಪಟ ಬೀಳುತ್ತಿದ್ದವು. ಹೊಟ್ಟೆಯಲ್ಲಿ ದುಃಖ ಹಿಡಿಸದಾಗಿತ್ತು. ಗಂಟಲಲ್ಲಿ ಅನ್ನ ಇಳಿಯದಂತಾಗಿತ್ತು.

" ಮನೆ ಕಟ್ಟುವದಕ್ಕಾಗಿ ಪಾಟ್ಲಿಗಳನ್ನು ಮಾರಿದಿರಿ. ಸಾವುಕಾರನ ಸಾಲ ತೀರಿಸುವದಕ್ಕಾಗಿ ಹೆಂಡತಿಯನ್ನು ಮಾರಿರಿ. " ಎಂದು ನಿರ್ಲಜ್ಯತನ ದಿಂದ ವಾಮನರಾಯನು ನುಡಿದನು.

ಏದ್ಯುದ್ವೇಗದಿಂದ ನಮ್ಮ ತಾಯಿ ಎದ್ದಳು. ಬಚ್ಚಲದಲ್ಲಿ ಕೈ ತೊಳೆದು ಕೊಂಡು ಹೊರಗೆ ಬಂದಳು. ಅವಳ ಕಣ್ಣುಗಳು ಶೋಕ ಮತ್ತು ಸಂತಾಪ ಗಳ ಕಿಡಿಯನ್ನು ಕಾರುತ್ತಿದ್ದವು. ಅವಳು ಕಂಪಿಸುತ್ತಿದ್ದಳು. ಪಡಸಾಲೆಯ ಬಾಗಿಲ ಬಳಿ ನಿಂತು ಸಿಟ್ಟಿನಿಂದ ನುಡಿದಳು, " ನಮ್ಮ ಮನೆ ಬಿಟ್ಟು ಹೊರ ಬೀಳಿರಿ. ಹೆಂಡತಿಯನ್ನು ಮಾರಿರೆಂದು ಹೇಳಲು ನಿಮಗೆ ನಾಚಿಕೆಯಾಗುವ ದಿಲ್ಲವೇ ? ನಾಲಿಗೆಯನ್ನು ತುಸು ಬಿಗಿ ಹಿಡಿದು ಮಾತನಾಡಿರಿ. ನಿಮಗೆ ಹೆಂಡತಿ ಇಲ್ಲವೇನು ? ಇಲ್ಲಿಂದ ಹೊರಟು ಹೋಗಿರಿ. ಬೇಕಾದರೆ ಮನೆ ಮಾರು ಹರಾಜ ಮಾಡೆಂದು ಸಾವುಕಾರನಿಗೆ ಹೇಳಿರಿ. ಆದರೆ ಇಂಥ ಅಭದ್ರ ಮಾತುಗಳನ್ನಾಡಬೇಡಿರಿ. ಡಂಗುರ ಸಾರಿರಿ; ಜಪ್ತಿ ಮಾಡಿಸಿರಿ; ಆದರೆ ಮಕ್ಕಳು ಮರಿಗಳ ಮುಂದೆ ಇಂಥ ಅಸಹ್ಯವಾದ ಮಾತನ್ನಾಡಬೇಡಿರಿ. "

" ಹಾಗೇ ಆಗಲಿ. ನಾವಾದರೂ ಅದರ ದಾರಿಯನ್ನೇ ಕಾಯುತ್ತಿದ್ದೇವೆ. ಈ ತಿಂಗಳಲ್ಲಿ ನಿಮ್ಮ ಹೊಲ-ಮನೆ ಹರಾಜು ಮಾಡಿಸದಿದ್ದರೆ ನಾನು ವಾಮನ ರಾಯನೇ ಅಲ್ಲ. ಒಬ್ಬ ಹೆಣ್ಣುಮಗಳು ನಮ್ಮನ್ನು ಈರೀತಿ ಅವಮಾನಗೊಳಿ ಸಬೇಕೇ ಭಾವೂರಾವ ? " ವಾಮನರಾಯ ತಂದೆಯವರನ್ನು ದುರುದುರು ನೋಡುತ್ತ ನುಡಿದ.

" ನೀನು ಮನೆಯೊಳಗೆ ಹೋಗು. ಹೋಗುವಿಯೋ ಇಲ್ಲವೋ ? " ನಮ್ಮ ತಂದೆ ಸಿಟ್ಟಿನಿಂದ ನುಡಿದರು. ತಾಯಿ ಬಾಯಿ ಮುಚ್ಚಿಕೊಂಡು ಒಳಗೆ ಹೋದಳು. ಒಂದು ಬದಿಗೆ ಅಳುತ್ತ ಕುಳಿತಳು. ಕಣ್ಣೀರಿನ ಹೊರತು ಅವಳಿಗೆ ಬೇರೆ ಯಾವ ಆಧಾರವಿತ್ತು ? ಹೊರಗೆ ಪಡಸಾಲೆಯಲ್ಲಿ ತಂದೆಯ ವರು ವಾಮನರಾಯನನ್ನು ಸಮಾಧಾನಪಡಿಸತೊಡಗಿದರು. ಅವನು ಹಾಗೂ ಹೀಗೂ ಇಪ್ಪತ್ತೈದು ರೂಪಾಯಿ ಪಡೆದುಕೊಂಡು ಹೊರಟುಹೋದನು.

ತಂದೆಯವರು ಮನೆಯೊಳಗೆ ಬಂದು ನುಡಿದರು, " ಹೆಣ್ಣುಮಕ್ಕಳಾದ ನಿಮಗೆ ಎಳ್ಳಷ್ಟೂ ಬುದ್ಧಿ ಇರುವದಿಲ್ಲ. ನಿಮಗೆ ಯಾವುದೂ ತಿಳಿಯುವದಿಲ್ಲ.

ಬೆಳಗಿನಿಂದ ನಾನು ಎಷ್ಟೊಂದು ಹುಷಾರಾಗಿ ಅವನನ್ನು ರಮಿಸುತ್ತ ಬಂದಿದ್ದೆ. ಒಲೆಯ ಮುಂದೆ ಊದುತ್ತ ಕೂಡುವದೊಂದೇ ನಿಮಗೆ ಗೊತ್ತು. ನಾಳಿನ ಸಾವನ್ನು ಇಂದೇ ನೀವು ತಂದುಕೊಳ್ಳುವವರು. ಸಿಟ್ಟಾದ ಮಾತ್ರಕ್ಕೆ ಯಾವು ದಾದರೂ ಕೆಲಸ ಆಗುವದೇನು? ಸವಿಮಾತಿನಿಂದ ಸಾಧಿಸಿ ನೋಡ ಬೇಕಾಗುತ್ತದೆ. ನಮ್ಮದೆಷ್ಟು ಪೇಚಾಟವಾಗುವದೆಂಬುದು ನಿಮಗೇನು ಗೊತ್ತಾಗಬೇಕು ? ”

“ ಬಾರಿ ಬಾರಿಗೂ ಅಪಮಾನ ಮಾಡಿಸಿಕೊಳ್ಳುವದಕ್ಕಿಂತ ಇಂದು ಸಾಯುವದೇನು ಕೆಟ್ಟದ್ದು ? ನಾಯಿಯಂತೆ ಛೀ ಥೂ ಹಾಕಿಸಿಕೊಳ್ಳುತ್ತ ಜೀವಿಸುವದರಲ್ಲೇನು ಸುಖವಿದೆ? ನಾಳೆಗಿಂತಲೂ ಇಂದೇ ಸಾಯುವದು ಲೇಸು. ಜಪ್ತಿ ಮಾಡಿಸಲಿ; ಹರಾಜು ಮಾಡಿಸಲಿ; ನಾವೂ ಕೂಲಿ ಕುಂಬಳಿ ಮಾಡೋಣ ಮುಘುರಿಯ ಕಡೆಗೆ ಇರಲಿಕ್ಕೆ ಹೋಗೋಣ. ಕೂಲಿಯಾಳು ಗಳು ಸಹಿತ ಇಂಥ ಅಭದ್ರ ಮಾತುಗಳನ್ನು ಆಡಿಸಿಕೊಳ್ಳಲಾರರು. ನಡೆಯಿರಿ ಕೂಲಿನಾಲಿ ಮಾಡೋಣ. ಭೂಮಿಯ ಮೇಲೆ ಮಲಗೋಣ; ಝರಿಯ ನೀರು ಕುಡಿಯೋಣ; ಗಿಡಗಳ ತೊಪ್ಪಲವನ್ನು ಹರಿದುಕೊಂಡು ತಿನ್ನೋಣ. ನಡೆಯಿರಿ. ” ತಾಯಿ ಭಾವನಾವಶಳಾಗಿ ನುಡಿದಳು.

“ ಆಡುವದು ಸುಲಭ, ಮಾಡುವದು ಕಠಿಣ. ಮಧ್ಯಾಹ್ನದ ಹೊತ್ತಾ ಯಿತೆಂದರೆ ಎಲ್ಲವೂ ತಿಳಿದೀತು ?” ಎಂದು ನುಡಿದು ತಂದೆ ಹೊರಗೆ ಹೋದರು.

ಸಣ್ಣ ತಮ್ಮ ತಾಯಿಯ ಬಳಿಗೆ ಹೋಗಿ ನುಡಿದ, “ ಅಮ್ಮಾ! ಅಳ ಬೇಡ. ನೀನು ಅಳಹತ್ತಿದರೆ ನಮಗೂ ಅಳು ಬರುತ್ತದೆ. ಅಮ್ಮಾ, ನೀನು ಹೇಳುವ ಕೆಲಸ ಮಾಡಲಿಕ್ಕೆ ಸಿದ್ಧರಿದ್ದೇವೆ. ಅಳಬೇಡವಮ್ಮಾ !.... ”

ಸಣ್ಣ ಮಕ್ಕಳು ದೊಡ್ಡ ತಾಯಿಯ ಸಮಾಧಾನ ಮಾಡುತ್ತಿದ್ದರು! ಹೂಗಳು ಗಿಡಗಳಿಗೆ ಆಧಾರವನ್ನು ಕೊಡುತ್ತಿದ್ದವು. ಕರುಣಾಜನಕವಾಗಿ ದ್ದಿತು ಆ ದೃಶ್ಯ !

## : : ಬಡವರ ಬಯಕೆ

ಶ್ಯಾಮನು ಇತ್ತೀಚೆಗೆ ನೊಂದುಕೊಂಡವರಂತೆ ಕಾಣುತ್ತಿದ್ದನು. ತಾಯಿಯ ನೆನಪಿನ ಪರಿಣಾಮವಾಗಿರಲಿಕ್ಕಿಲ್ಲವಷ್ಟೇ ? ತಾಯಿಯ ದುಃಖ ಮಯ ಹಾಗು ಕಷ್ಟದಾಯಕವಾದ ಜೀವನವು ಕಣ್ಣೆದುರಿಗೆ ಕಟ್ಟಿ ಈ ರೀತಿ ವ್ಯಥಿತನಾಗಿರಲಿಕ್ಕಿಲ್ಲವಷ್ಟೇ ?

" ಶ್ಯಾಮಾ, ನಿನ್ನ ಮುಖದ ಮೇಲಿನ ಹಾಸ್ಯವೀಗ ಅಡಗಿದಂತೆ ಕಾಣುತ್ತದೆ. ನೀನು ಉದಾಸೀನನಾಗಲು ಕಾರಣವೇನು ? ನಿನಗೇನಾಗುತ್ತಿದೆ ? ಮನದಲ್ಲಿ ಯಾವ ವಿಚಾರವು ನಿನ್ನನ್ನು ಕಾಡುತ್ತಿದೆ ? " ಎಂದು ರಾಮನು ಕೇಳಿದನು.

" ರಾಮಾ, ನಮ್ಮ ದೇಶವು ಅಪಾರವಾದ ದುಃಖ, ದೈನ್ಯ ಮತ್ತು ದಾರಿದ್ರ್ಯದಿಂದ ತುಂಬಿಕೊಂಡಿದೆ. ನಾನು ನನ್ನ ತಾಯಿಯ ನೆನಪುಗಳನ್ನು ಹೇಳುತ್ತಿದ್ದೇನೆ. ಆವು ನನ್ನ ಭಾರತ ಮಾತೆಯನೇ ಇರುವಂತೆ ಭಾಸವಾಗುತ್ತಿದೆ. ಈ ಭಾರತಮಾತೆಯು ದಾಸ್ಯ, ಬಡತನ ಮತ್ತು ಸಾಲದಲ್ಲಿ ಮುಳುಗಿ ಹೋಗಿದ್ದಾಳೆ. ಅವಳ ಮಕ್ಕಳಿಗೆ ತಿನ್ನಲು ಆಹಾರವಿಲ್ಲ, ಕುಡಿಯಲು ನೀರಿಲ್ಲ, ಉದ್ಯೋಗವಿಲ್ಲ, ಶಿಕ್ಷಣವಿಲ್ಲ. ನನ್ನ ಕರಳು ಕತ್ತರಿಸಿ ಬೀಳುತ್ತದೆ. ಈ ದುಃಖವನ್ನು ನನ್ನಿಂದ ನೋಡಲಾಗುವದಿಲ್ಲ. ನನ್ನ ಹೃದಯವು ಬಿರಿದು ಹೋಗುತ್ತದೆ. ಪಾರತಂತ್ರ್ಯದಿಂದ ಭಾರತಕ್ಕೆ ತುಂಬ ಹಾನಿಯಾಗಿದೆ. ಎಲ್ಲಿ ನೋಡಿದಲ್ಲಿ ಸಾಲ, ಬರಗಾಲ, ರೋಗ! ಮಕ್ಕಳು ಹುಟ್ಟುವಷ್ಟರಲ್ಲಿಯೇ ಸತ್ತು ಹೋಗುತ್ತವೆ. ಯಾರ ಮುಖದ ಮೇಲೂ ಲಕ್ಷಣವಿಲ್ಲ. ತೇಜ, ಉತ್ಸಾಹಗಳು ಎಲ್ಲಿಯೂ ಕಂಡುಬರುವದಿಲ್ಲ. ಜೀವನದ ಝುರಿಗಳೇ ಬತ್ತಿ ಹೋದಂತಿವೆ. ಪಾರತಂತ್ರ್ಯವು ಸರ್ವಭಕ್ಷಕವಾಗಿದೆ. ಸಕಲರ ನಾಶವನ್ನೂ ಮಾಡುವಂತಹದಾಗಿದೆ. ಹಿಂದುಸ್ಥಾನದಲ್ಲಿ ಇಂದು ಮರಣವಿದೆ, ಜೀವನವಿಲ್ಲ. ದುಃಖವಿದೆ, ಆನಂದವಿಲ್ಲ. ಕೃತಘ್ನತೆಯಿದೆ, ಕೃತಜ್ಞತೆಯಿಲ್ಲ. ಲೋಭವಿದೆ, ಪ್ರೇಮವಿಲ್ಲ. ಪಶುತ್ವವಿದೆ, ಮನುಷ್ಯತ್ವವಿಲ್ಲ. ಕತ್ತಲಿದೆ, ಬೆಳಕಿಲ್ಲ. ಅಧರ್ಮವಿದೆ, ಧರ್ಮವಿಲ್ಲ. ಅಂಜಿಕೆಯಿದೆ, ಶೂರತನವಿಲ್ಲ. ಬಂಧನಗಳಿವೆ, ಬಿಡುಗಡೆ

ಯಿಲ್ಲ. ರೂಢಿಗಳಿವೆ, ವಿಚಾರಗಳಿಲ್ಲ. ಈ ವಿರಾಟ ಸ್ವರೂಪದಲ್ಲಿದ್ದ ದುಃಖವು ಎಲ್ಲೆಲ್ಲಿಯೂ ಹಬ್ಬಿ ನನ್ನ ಚಿಕ್ಕ ಹೃದಯವನ್ನು ದಹಿಸುತ್ತಿದೆ. ನನ್ನ ತಾಯಿಯಂಥ ಲಕ್ಷಾವಧಿ ತಾಯಂದಿರು ಈ ಭಾರತದಲ್ಲಿದ್ದಾರೆ. ಅವರ ಬಂಗಾರದಂಥ ಜೀವನಗಳು ಮಣ್ಣುಗೂಡುತ್ತಿವೆ. ನಾನು ನೊಂದುಕೊಳ್ಳದೆ ಇನ್ನೇನು ಮಾಡಲಿ ? "

ಶ್ಯಾಮನು ಮೂಕನಂತಾದನು. "ಶ್ಯಾಮಾ, ದುಃಖವನ್ನು ಕಂಡು ನಿವಾರಿಸಲು ಸಿದ್ಧರಾಗಬೇಕು. ಕತ್ತಲೆಯನ್ನು ಕಂಡರೆ ಬೆಳಕನ್ನು ತರಲು ಯತ್ನಿಸಬೇಕು. ಸಂಕೋಲೆಗಳನ್ನು ಕಂಡು ಅವುಗಳನ್ನು ಮುರಿದೊಗೆಯಲು ಸಾಹಸ ಮಾಡಬೇಕು ನಿರಾಶೆಗೊಂಡರೇನಾಗುವದು ? ಸಂಕಟಗಳು ಹೆಚ್ಚಿದಷ್ಟೂ ವೀರನಿಗೆ ಉತ್ಸಾಹವೂ ಸ್ಫೂರ್ತಿಯೂ ಹೆಚ್ಚಾಗಬೇಕು" ಎಂದು ರಾಮನು ನುಡಿದನು.

"ಆದರೆ ನಾನು ವೀರನಲ್ಲ. ನೀವು ವೀರರು. ನಿಮ್ಮ ಬಗ್ಗೆ ನನಗೆ ಅಭಿಮಾನವೆನಿಸುತ್ತದೆ. ನಿಮ್ಮಂತೆ ನಾನೂ ನಿರಾಶನಾಗದೆ ಯಾವಾಗಲೂ ಸಾಹಸ ಮಾಡುತ್ತಿರಬೇಕೆನಿಸುತ್ತದೆ. ಆದರೆ ನನ್ನ ಆಶೆಯ ತಂತಿ ಹರಿಯುತ್ತದೆ. ನನ್ನ ಠೀವಿ ಎರವಲು ತಂದ ಠೀವಿಯಾಗಿರುತ್ತದೆ. ಅದು ಸಜೀವ ಆಶೆಯಾಗಿರುವದಿಲ್ಲ." ಶ್ಯಾಮನು ನುಡಿದನು.

"ನಿರಾಶನಾಗುವದೆಂದರೆ ದೇವರನ್ನು ಮರೆಯುವದು. ನಿರಾಶೆಯೆಂದರೆ ನಾಸ್ತಿಕತೆ. ಕೊನೆಗೆ ಎಲ್ಲವೂ ಸುಖಮಯವಾಗುವದು; ಕತ್ತಲಲ್ಲಿಯೇ ಬೆಳಕು ಕಾಣುವದು; ಎಂದು ಭಾವಿಸಿಕೊಳ್ಳುವದೇ ಆಸ್ತಿಕ ಭಾವನೆ" ರಾಮನೆಂದನು.

"ಆದರೆ ಕತ್ತಲೆಯು ಮಾಯವಾಗಿ ಬಂದ ಉಷೆಯು ಮತ್ತೆ ಕತ್ತಲಾಗತಕ್ಕದ್ದೇ ಅಲ್ಲವೇನು ? ಜಗತ್ತು ಇದ್ದಲ್ಲಿಯೇ ಇದೆ. ಈ ಜಗತ್ತಿನಲ್ಲಿ ಯಾವ ಸುಧಾರಣೆಯಾಗತಕ್ಕದ್ದಿದೆಯೋ ತಿಳಿಯುವದಿಲ್ಲ. ಹೋಗಲಿ ಬಹಳ ಆಳ ವಿಚಾರ ಮಾಡುವದರಲ್ಲಿ ಅರ್ಥವಿಲ್ಲ. ನಮಗೆ ಸಾಧ್ಯವಿದ್ದದ್ದನ್ನು ಮಾಡಬೇಕು. ಕಲ್ಲನ್ನು ಎತ್ತಬೇಕು; ಮುಳ್ಳನ್ನು ತೆಗೆದು ಬಿಸಾಡಬೇಕು; ಹೂವಿನ ಗಿಡಗಳನ್ನು ಹಚ್ಚಬೇಕು; ಮಾರ್ಗಗಳನ್ನು ಉಡುಗಬೇಕು; ಎಲ್ಲರ ಜೊತೆಗೆ ಸವಿ ಮಾತನ್ನಾಡಬೇಕು; ನಕ್ಕು ನಲಿಯಬೇಕು; ಬೇನೆಯವರನ್ನು ಉಪಚರಿಸಬೇಕು; ಅಳುವವರ ಕಣ್ಣೊರಸಬೇಕು. ಈ ಜಗತ್ತಿನಲ್ಲಿರುವದು ಎರಡು

ದಿವಸ ! ನನ್ನಂಥವನು ಇದಕ್ಕಿಂತ ಹೆಚ್ಚೇನು ಮಾಡಬಲ್ಲ? ಈ ಹರಿದ ಆಕಾಶಕ್ಕೆ ನನ್ನಂಥ ನಿರ್ಬಲನು ಎಷ್ಟೆಂದು ಪತಿ ಹಚ್ಚಲು ಸಾಧ್ಯ ? ”

“ ಹಾಗಲ್ಲ ಶ್ಯಾಮಾ, ನಾವು ಸಂಘಟನೆ ಮಾಡೋಣ. ಹೊಸ ವಿಚಾರಗಳನ್ನು ಬಿತ್ತೋಣ. ದಾರಿದ್ರ್ಯವನ್ನು ನಿವಾರಿಸಿ ಐಶ್ವರ್ಯವನ್ನು ತರೋಣ. ನನ್ನ ರೋಮ ರೋಮಗಳಲ್ಲಿಯೂ ಆಶೆಯು ಕುಣಿದಾಡುತ್ತಿದೆ. ” ಎಂದು ರಾಮನು ಹೇಳಿದನು.

ಪ್ರಾರ್ಥನೆಯ ಗಂಟೆ ಬಾರಿಸಿತು. ಮಾತು ಅಲ್ಲಿಗೆ ನಿಂತಿತು. ಪ್ರಾರ್ಥನಾ ಮಂದಿರದಲ್ಲಿ ಎಲ್ಲ ಜನರೂ ಸೇರಿದರು. ಗಾಢವಾದ ಶಾಂತತೆ ಅಲ್ಲಿ ನೆಲೆಸಿತ್ತು. ರಾಮನು ಇಂದು ಪದವನ್ನು ಹೇಳತಕ್ಕವನಿದ್ದ. ಗೀತೆಯ ಶ್ಲೋಕಗಳೂ, ಭಜನೆಯೂ ಆದಮೇಲೆ ರಾಮನು ಪದವನ್ನು ಹೇಳಿದನು.

ರಾಮನು ಆಶೆಯ ದಿವ್ಯವಾದ ಪದವನ್ನಂದನು. ಒಂದು ಹಾಸ್ಯದ ತೆರೆ ಶ್ಯಾಮನ ತುಟಿಗಳ ಮೇಲೆ ಸುಳಿಯಿತು. ಒಂದು ಮಹತ್ವದ ಸಂದರ್ಭದಲ್ಲಿ ಶ್ಯಾಮನೇ ಆ ಪದವನ್ನು ರಚಿಸಿದ್ದ. ಆದರೆ ಆ ಉದಾತ್ತವಾದ ಆಶಾವಾದವು ಇಂದು ಅವನಲ್ಲಿ ಇದ್ದಿತೇ ? ಶ್ಯಾಮನೆಂದರೆ ಆಶೆ-ನಿರಾಶೆಗಳ ದ್ವಂದ್ವಯುದ್ಧಗಳ ಆಶ್ರಯಸ್ಥಾನವಾಗಿದ್ದ. ಇಂದು ನಗಬಹುದು; ನಾಳೆ ಅಳಬಹುದು. ಇಂದು ಹಾರಾಡಬಹುದು; ನಾಳೆ ಬಿದ್ದುಕೊಂಡಿರಬಹುದು. ಶ್ಯಾಮನೆಂದರೆ ಒಂದು ಸಮಸ್ಯೆಯಂತಾಗಿದ್ದ.

ಪ್ರಾರ್ಥನೆ ಮುಗಿಯಿತು. ಶ್ಯಾಮನ ಕಥೆಯು ಹೊತ್ತಾಯಿತು. ಶ್ಯಾಮನು ಹೇಳತೊಡಗಿದನು:

ಗೆಳೆಯರೆ, ದಾಪೋಲಿಯಿಂದ ನಿರಾಶನಾಗಿ ನಾನು ಮನೆಗೆ ಹೋಗಿದ್ದೆ. ತಾಯಿಯ ಹತ್ತರ ಏನಾದರೂ ಹೇಳಬೇಕೆಂದು ನಾನು ಹೋಗಿದ್ದೆ

“ ತಾಯೀ, ಇನ್ನು ಈ ಶಾಲೆಯಲ್ಲಿ ಕಲಿಯುವದು ಶಕ್ಯವಿಲ್ಲ. ತಂದೆಯವರು ಫೀ ಹಣ ಕೊಡುವದಿಲ್ಲ. ಶಾಲೆಯವರು ಫೀ ಮಾಫೀ ಮಾಡುವದಿಲ್ಲ. ನಾನಾದರೂ ಏನು ಮಾಡಲಿ ? ಶಾಲೆಯಲ್ಲಿ ಮಾಫಿಗಾಗಿ ಬಿನ್ನವಿಸಿಕೊಳ್ಳಲು ತಂದೆಯವರು ಹೇಳಿದ್ದರು. ನಾನು ವರ್ಗದಲ್ಲಿ ಗುರುಗಳೆದುರು ನಿಂತು ಬೇಡಿಕೊಂಡೆ. “ ಶ್ಯಾಮೂ, ನೀನೇನು ಬಡವನೇ ? ಕುಳಿತುಕೋ ಕೆಳಗೆ ” ಎಂದು ಅವರು ಗದರಿಬಿಟ್ಟರು. ಅಮ್ಮಾ, ನಾವು ಒಂದು ಕಾಲದಲ್ಲಿ

ಶ್ರೀಮಂತರಾಗಿದ್ದೆವು. ಅದು ಜನರಿಗೆ ಗೊತ್ತಿದೆ. ಆದರೆ ಇಂದು ಮನೆಯಲ್ಲಿ ಊಟಕ್ಕೆ ಅಭಾವವಿದೆಯೆಂಬುದು ಅವರಿಗೆ ಗೊತ್ತಿಲ್ಲ. ಹೇಳಿದರೆ ಮನವರಿಕೆಯಾಗುವದಿಲ್ಲ. ಕ್ಲಾಸಿನಲ್ಲಿಯ ಹುಡುಗರು ನನ್ನನ್ನು ನೋಡಿ ನಗುತ್ತಾರೆ. ನಾನು ಸುಮ್ಮನೆ ಕುಳಿತುಕೊಳ್ಳಬೇಕಾಗುತ್ತದೆ. "

" ಶ್ಯಾಮಾ, ನೀನು ಇನ್ನು ಶಾಲೆಗೆ ಶರಣು ಹೊಡೆಯಬೇಕು. " ತಾಯಿ ಶಾಂತ ರೀತಿಯಿಂದ ಹೇಳಿದಳು

" ಅಮ್ಮಾ, ಇದೀಗ ನಾನು ಐದನೆ ತರಗತಿಯನ್ನು ಮಾತ್ರ ಕಲಿತದ್ದಾಯಿತು. ಇಷ್ಟರಲ್ಲಿ ಶಾಲೆ ಬಿಟ್ಟು ಏನು ಮಾಡುವದು ? ಇಂದು ನನ್ನ ಉಪಯೋಗವೇನಿದೆ ? ನಾನು ಇಂದು ಏನು ಸಂಪಾದಿಸಬಲ್ಲೆ ? " ಎಂದು ನಾನು ತಾಯಿಯನ್ನು ವಿಚಾರಿಸಿದೆ.

" ನಿನಗೆ ರೈಲ್ವೆಯಲ್ಲಿ ಎಲ್ಲಿಯಾದರೂ ಸೇರಿಸಿ ಬಿಡಬೇಕೆಂದು ಅವರು ಅನ್ನುತ್ತಿದ್ದರು. ಅವರಾದರೂ ಏನು ಮಾಡಬೇಕು ? ನಿನ್ನ ಫೀ ಕೊಡಲಿಕ್ಕಾಗದೆ ಗೋಳಾಡುತ್ತಿದ್ದಾರೆ. ಶಾಲೆ ಬಿಟ್ಟುಬಿಡುವದೇ ಒಳಿತು. ಎಲ್ಲಿಯಾದರೂ ಕೆಲಸ ಸಿಕ್ಕರೆ ನೋಡು. " ಎಂದಳು ತಾಯಿ,

" ಅಮ್ಮಾ, ಈಗಿನಿಂದಲೇ ನೌಕರಿ ಮಾಡಬೇಕೇ ? ಈ ವಯಸ್ಸಿನಲ್ಲಿ ನೌಕರಿಗಾಗಿ ಅಲೆದಾಡಬೇಕೇ ? ತಾಯೀ, ನನ್ನ ಯೋಜನೆಗಳು, ಅಭಿಲಾಷೆಗಳು, ಬಯಕೆಗಳು, ಸ್ವಪ್ನಗಳು ಎಷ್ಟಿದ್ದವು ! ನಾನು ಹೆಚ್ಚು ಕಲಿಯಬೇಕು, ಕವಿಯಾಗಬೇಕು, ಗ್ರಂಥಕಾರನಾಗಬೇಕು, ನಿನಗೆ ಸೌಖ್ಯವನ್ನುಂಟು ಮಾಡಬೇಕು ಎಂದು ಬಯಸಿದ್ದೆ. ಎಲ್ಲ ಆಶೆಗಳ ಮೇಲೆ ನೀರು ಬಿಡಬೇಕೇ ? ಎಲ್ಲ ಅಭಿಲಾಷೆಗಳನ್ನು ಮಣ್ಣುಪಾಲು ಮಾಡಬೇಕೇ ? " ನಾನು ಕವಿಯೇ ಆಗಿದ್ದಂತೆ ಮಾತನಾಡುತ್ತಿದ್ದೆ. ಭಾವನೆಗಳು ನನ್ನನ್ನು ಹಾಗೆ ಮಾತನಾಡಿಸುತ್ತಿದ್ದವು. ನನ್ನ ತುಟಿಗಳನ್ನು ಕುಣಿಸುತ್ತಿದ್ದವು.

" ಶ್ಯಾಮಾ, ಬಡವರ ಬಯಕೆಗಳು ಮಣ್ಣುಗೂಡಬೇಕಾಗುತ್ತವೆ. ಬಡವರ ಸ್ವಾಭಿಮಾನವು ಮಣ್ಣುಪಾಲಾಗಬೇಕಾಗುತ್ತದೆ. ಬಡವರು ಮುಂದೆ ಬಿದ್ದ ಕೆಲಸವನ್ನು ಮಾಡಬೇಕಾಗುತ್ತದೆ. ಅನೇಕ ಸುಂದರವಾದ ಮೊಗ್ಗೆಗಳನ್ನು ಹುಳಗಳೇ ತಿಂದುಬಿಡುತ್ತವೆ. " ತಾಯಿ ಹೇಳಿದಳು.

" ಅಮ್ಮಾ, ನನಗೆ ಬಹಳ ದುಃಖವಾಗಿದೆ. ನನ್ನ ಬಗ್ಗೆ ನಿನಗೆ ಕೆಡುಕೆ

ನಿಸುವದಿಲ್ಲವೇ ? ನಿನ್ನ ಮಗನ ಜೀವನ ಮಣ್ಣುಗೂಡುವದು ನಿನಗೆ ಸರಿ ದೋರುತ್ತದೆಯೇ ? ನಾನು ದೊಡ್ಡವನಾಗಬೇಕೆಂದು ನಿನಗನಿಸುವದಿಲ್ಲವೇ?" ನಾನು ತಾಯಿಯನ್ನು ಕೇಳಿದೆ.

" ನನ್ನ ಮಗನು ದೊಡ್ಡವನಾಗಬೇಕು, ಆದರೆ ತಂದೆಯನ್ನು ಚಿಂತೆ ಹಾಗು ದುಃಖಗಳಿಗೆ ಈಡು ಮಾಡಿ ಆಗಬಾರದು. ತನ್ನ ಕಾಲಿನ ಮೇಲೆ ತಾನು ನಿಲ್ಲಲು ಸಮರ್ಥನಿದ್ದರೆ ಅವಶ್ಯವಾಗಿ ದೊಡ್ಡವನಾಗಬೇಕು. ತಂದೆಯ ಮೇಲೆಯೇ ಕೈ ಊರಿ ಇರುವುದಾದರೆ ಅವನ ಇಚ್ಛೆಯಂತೆ ನಡೆಯಬೇಕು. " ತಾಯಿ ನುಡಿದಳು.

" ತಾಯೀ, ನಾನು ಏನು ಮಾಡಲಿ ಹೇಳು. ನನಗೆ ದಾರಿ ತೋರಿಸು. ಇಂದಿನವರೆಗೆ ನೀನು ನನಗೆ ಕಲಿಸಿದೆ. ಈಗ ಏನು ಮಾಡಲಿ ? ಅದನ್ನು ನೀನೇ ಹೇಳು " ನಾನು ತಾಯಿಯನ್ನು ವಿಚಾರಿಸಿದೆ.

" ತಾಯಿತಂದೆಗಳನ್ನು ಬಿಟ್ಟು, ಮನೆಮಾರುಗಳನ್ನು ಬಿಟ್ಟು ಧ್ರುವನು ಕಾಡಿಗೆ ಹೋದನು. ಅವನು ದೇವರ ಮೇಲೆ ಹಾಗು ಸ್ವಂತದ ಮೇಲೆ ವಿಶ್ವಾಸವಿಟ್ಟು ಅಡವಿಗೆ ಹೋದಂತೆ ನೀನು ಮನೆ ಬಿಟ್ಟು ಹೋಗಬೇಕು. ಹೊರಗಿನ ವಿಶಾಲ ಜಗತ್ತಿನಲ್ಲಿ ಹೋಗು. ಧ್ರುವನು ದೇವರಿಗಾಗಿ ತಪಸ್ಸು ಮಾಡಿದನು, ಉಪವಾಸ ಮಾಡಿದನು, ಆ ಪ್ರಕಾರ ನೀನು ವಿದ್ಯೆ ಕಲಿಯಲು ಕಷ್ಟಪಡು. ತಪಸ್ಸಿನ ಹೊರತು ಯಾವುದೂ ಸಾಧ್ಯವಿಲ್ಲ. ಸ್ವಂತ ಕಾಲಿನ ಮೇಲೆ ನಿಲ್ಲಬೇಕು, ಉಪವಾಸ ವನವಾಸ ಸಹಿಸಬೇಕು, ಕಷ್ಟ ಭೋಗಿಸ ಬೇಕು ಅಂದರೆ ವಿದ್ಯೆ ಬರುತ್ತದೆ. ದೊಡ್ಡವನಾಗಿ, ವಿದ್ಯಾವಂತನಾಗಿ ಮನೆಗೆ ಬಾ. ನಮ್ಮ ಆಶೀರ್ವಾದ ನಿನ್ನ ಬೆನ್ನಿಗೇ ಇರುತ್ತದೆ. ನೀನು ಎಲ್ಲಿಗೆ ಹೋದರೂ ಮನಸಾ ನಿನ್ನ ಬಳಿಯಲ್ಲಿಯೇ ಇರುತ್ತೇನೆ. ಇದಕ್ಕಿಂತ ಹೆಚ್ಚೇನು ಹೇಳಲಿ ? " ತಾಯಿ ಸ್ವಾವಲಂಬನದ ಉಪದೇಶ ಮಾಡಿದಳು.

" ಅಮ್ಮಾ, ನಾನು ನಿಜವಾಗಿ ಹೋಗಲೇ ? ನನ್ನ ಮನದ ಮಾತನ್ನೇ ನೀನಾಡಿದೆ. ನನ್ನ ಹೃದಯದಲ್ಲಿ ನೀನಿರುವೆ. ಆದಕ್ಕಾಗಿಯೇ ಹೃದಯದ ಮಾತುಗಳೆಲ್ಲ ನಿನಗೆ ಗೊತ್ತಾಗುತ್ತವೆ. ಅಮ್ಮಾ, ಅಲ್ಲೊಂದು ಔಂಧವೆಂಬ ಸಂಸ್ಥಾನವಿದೆ. ಅಲ್ಲಿ ಶಾಲೆಯ ಫೀ ಬಹಳ ಕಡಿಮೆ. ನಾನು ಅಲ್ಲಿಗೆ ಹೋಗಲಾ? ಭಿಕ್ಷಾನ್ನದಿಂದ ಹಸಿವು ಹಿಂಗಿಸಿಕೊಳ್ಳುವೆನು. ಆ ದೂರದ ಊರಲ್ಲಿ

ನನ್ನನ್ನು ಕಂಡು ಯಾರು ನಗುವರು ? ಅಲ್ಲಿ ನನ್ನ ಪರಿಚಯುವಾದರೂ ಯಾರಿಗಿದೆ ? ಯಾರಲ್ಲಾದರೂ ಕೆಲಸಮಾಡಿ ಮೇಲಿನ ವೆಚ್ಚಕ್ಕೆ ಸಂಪಾದಿಸಬಹುದು. ನೀನು ಕೆಲಸದ ರೂಢಿಯನ್ನು ಹೇಗೂ ಮಾಡಿಸಿರುವೆ. ಪರಿಚಯದ ಜನರ ಕಣ್ಣು ಮರೆಯಲ್ಲಿದ್ದರಾಯಿತು. ಹೋಗಬಹುದೇ ? " ನಾನು ತಾಯಿಗೆ ಹೇಳಿದೆ.

" ಹೋಗು. ಭಿಕ್ಷಾನ್ನ ಬೇಡುವದೇನೂ ಪಾಪವಲ್ಲ. ವಿದ್ಯಾರ್ಥಿಗಳಿಗಂತೂ ಅದು ಎಂದಿಗೂ ಅಲ್ಲ. ಸೋಮಾರಿ ಜನರು ಭಿಕ್ಷೆ ಬೇಡುವದು ಪಾಪ. ಹೋಗು. ಬಡ ವಿದ್ಯಾರ್ಥಿಗೆ ಭಿಕ್ಷಾನ್ನದ ಅಧಿಕಾರವಿದೆ, ಯಾವದೇ ರೀತಿಯಾಗಿರು. ಆದರೆ ಸುಳ್ಳುತನ–ಕಳ್ಳತನ ಮಾಡಬೇಡ. ಪಾಪಮಾಡಬೇಡ. ಬೇರೆ ಎಲ್ಲ ಅಭಿಮಾನಗಳನ್ನು ಬಿಡು; ಸತ್ಯದ ಅಭಿಮಾನವನ್ನು ಬಿಡಬೇಡ. ನಿನಗೆ ಸಾಧ್ಯವಿರುವ ಸಹಾಯ ಬೇರೆಯವರಿಗೆ ಸಲ್ಲಿಸು. ಸವಿ ಮಾತಾಡು. ಹಸನ್ಮುಖಿಯಾಗಿರು. ನಾಲಗೆ ಮಧುರವಾಗಿದ್ದವನಿಗೆ ಜಗತ್ತೇ ಮಧುರವಾಗಿರುತ್ತದೆ. ಗೆಳೆಯರ ಬಳಗವನ್ನು ಮಾಡಿಕೋ. ಯಾರಿಗೂ ತಿರಸ್ಕಾರ ಮಾಡಿ ಮಾತನಾಡಬೇಡ. ಯಾರ ಮನಸ್ಸನ್ನೂ ನೋಯಿಸಬೇಡ. ಸತತವಾಗಿ ಅಭ್ಯಾಸ ಮಾಡು. ತಾಯಿತಂದೆಗಳನ್ನು ಮರೆಯಬೇಡ. ಸಹೋದರ ಸಹೋದರಿಯರನ್ನು ಮರೆಯಬೇಡ. ಎಲ್ಲರನ್ನು ನೆನೆಸುವದರಲ್ಲಿ ನಿನ್ನ ಹಿತವಿದೆ. ಇದುವೆ ನಿನ್ನನ್ನು ರಕ್ಷಿಸುವದು. ಸನ್ಮಾರ್ಗಕ್ಕೆ ಹಚ್ಚುವದು. ಹೋಗು. ನಾನು ಅಪ್ಪಣೆ ಕೊಟ್ಟಿದ್ದೇನೆ. ಧ್ರುವನಿಗೆ ನಾರಾಯಣನು ಭೆಟ್ಟಿಯಾದಬಳಿಕ ಅವನು ತಾಯಿತಂದೆಗಳ ಉದ್ಧಾರ ಮಾಡಿದನು. ನೀನಾದರೂ ವಿದ್ಯಾಮಾತೆಯನ್ನು ಮೆಚ್ಚಿಸಿಕೊಂಡು ನಮ್ಮ ಉದ್ಧಾರಮಾಡು. " ತಾಯಿಯು ಉಕ್ಕಿದ ಅಂತಃಕರಣದಿಂದ ಪ್ರೇರಕವಾದ ಮಂತ್ರವನ್ನು ಹೇಳುತ್ತಿದ್ದಳು. ಎಂಥ ಅಮೃತ ವಾಣಿಯದು !

" ಅಮ್ಮಾ, ಭಾವೂ ಅವರಿಗೆ ತಿಳಿಸಿ ಹೇಳಿ ಅವರಿಂದ ಅಪ್ಪಣೆ ಕೊಡಿಸುವೆಯಾ ? "

" ಯೋಚನೆ ಮಾಡಬೇಡ. ನಾನು ಅದನ್ನು ದೊರಕಿಸಿ ಕೊಡುತ್ತೇನೆ. ಅವರು ಕೂಡ ಇದೇ ರೀತಿ ಒಂದು ಸಲ ನನ್ನ ಮುಂದೆ ಆಡಿದ್ದರು. " ತಾಯಿ ಆಶ್ವಾಸನೆಯನ್ನಿತ್ತಳು.

ರಾತ್ರಿಯ ಊಟ ನಡೆದಿತ್ತು. ತಾಯಿ ಹುರುಳಿ ಹಿಟ್ಟಿನ ಸಾರು ಮಾಡಿದ್ದಳು. ಬಾಯಿಗೆ ನಂಜಿಕೊಳ್ಳಲು ಮಾವಿನ ಮಿಡಿಯ ಉಪ್ಪಿನಕಾಯಿ ಇತ್ತು. ತಾಯಿ ಮೆಲ್ಲಗೆ ಮಾತಿಗೆ ಮೊದಲು ಮಾಡಿದಳು, "ಶ್ಯಾಮನು ದೂರ ಎಲ್ಲಿಗೋ ಕಲಿಯಲಿಕ್ಕೆ ಹೋಗಬೇಕೆನ್ನುತ್ತಾನೆ. ಹೋಗಲಿಕ್ಕೆ ಅನುಮತಿ ಕೊಡಿರಿ."

"ಎಲ್ಲಿಗೆ ಹೋಗುವನು ? ಅಲ್ಲಿಗೂ ಹಣ ಕಳಿಸಬೇಕಾಗಬಹುದು. ಒಂದು ರೂಪಾಯಿಯನ್ನು ಕೊಡಲಿಕ್ಕೂ ಸಾಧ್ಯವಿಲ್ಲದಾಗಿದೆ. ಒಂದು ಕಾಲದಲ್ಲಿ ಸಾವಿರಾರು ರೂಪಾಯಿಗಳನ್ನು ಎಣಿಸಿದ ಈ ಕೈಯಲ್ಲಿ........? ಬೇಡ. ಅದರ ನೆನಪನ್ನು ಕೂಡ ತೆಗೆಯುವದು ಬೇಡ. ನನ್ನ ಬುದ್ಧಿಯೇ ಮಂಕಾಗುತ್ತದೆ. ಇಂದು ನಿರುಪಾಯನಾಗಿದ್ದೇನೆ. ಮಕ್ಕಳು ಕಲಿಯಬಾರದೆಂದು ನನಗನಿಸುವದೇನು ? ತನ್ನ ಬುದ್ಧಿವಂತನೂ, ಪ್ರಭಾವಶಾಲಿಯೂ, ಸದ್ಗುಣಿಯೂ ಆದ ಮಗನು ಕಲಿಯಬಾರದೆಂದು ಯಾವ ತಂದೆಯೂ ಬಯಸಲಾರ. ಆದರೆ ಮಾಡುವದೇನು ?" ಎಂದು ಕಳವಳದಿಂದ ತಂದೆ ನುಡಿದರು.

"ಅವನು ಹೋಗುವಲ್ಲಿಗೆ ಹಣ ಕಳಿಸಬೇಕಾಗಿಲ್ಲವಂತೆ. ಪುಕ್ಕಟೆಯಾಗಿ ಶಿಕ್ಷಣ ದೊರೆಯುವದಂತೆ. ಭಿಕ್ಷಾನ್ನದಿಂದ ಊಟ ಮಾಡುತ್ತಾನೆ. ಕೇವಲ ಅವನ ದಾರಿಯ ವೆಚ್ಚಕ್ಕಾಗಿ ಹತ್ತು ರೂಪಾಯಿ ಕೊಟ್ಟರೆ ಸಾಕು." ಎಂದು ತಾಯಿ ನುಡಿದಳು.

"ಆಗಬಹುದು. ಸ್ವತಃ ಸಾಹಸಮಾಡಿ ಕಲಿಯಲಿ. ನೌಕರಿಯನ್ನೇ ಮಾಡಬೇಕೆಂದು ನನ್ನದೇನೂ ಹಟವಿಲ್ಲ. ನಾನು ಹಣ ಕೊಡಲು ಅಸಮರ್ಥನ್ನಾಗಿದ್ದೇನೆಂದು ಹಾಗೆ ಹೇಳಿದ್ದೆ. ಹೋಗಬಹುದು. ನನ್ನ ಆಶೀರ್ವಾದವಿದೆ." ತಂದೆ ಹೇಳಿದರು.

ನಮ್ಮ ಊಟವಾದ ಮೇಲೆ ನಾನು ತಾಯಿಯ ಹತ್ತರ ಮಾತನಾಡುತ್ತ ಕುಳಿತುಕೊಂಡೆ. "ಅಮ್ಮಾ, ಅಣ್ಣನು ದೂರ ಕಲಿಯಲಿಕ್ಕೆ ಹೋಗುವನೇನೇ ? ಹಾಗಾದರೆ ಅವನು ಬೇಗನೆ ತಿರುಗಿ ಬರಲಾರ." ತಮ್ಮ–ಪುರುಷೋತ್ತಮ–ನು ತಾಯಿಯನ್ನು ಪ್ರಶ್ನಿಸುತ್ತಿದ್ದ.

"ಹೌದು ಮಗು; ಅವನು ಕಲಿತು ಬಂದು ನಿಮಗೂ ಕಲಿಸುವನು. ನಿಮಗೆ ಕಲಿಸಬೇಕೆಂಬ ಉದ್ದೇಶದಿಂದಲೇ ಅವನು ದೂರ ಹೊರಟು ನಿಂತಿ

ದ್ದಾನೆ. ” ಎಂದು ತಾಯಿ ಅವನನ್ನು ಸಮಾಧಾನಪಡಿಸುತ್ತಿದ್ದಳು.

ಕೊನೆಗೆ ಔಂಧ ಸಂಸ್ಥಾನಕ್ಕೆ ಕಲಿಯಲಿಕ್ಕೆ ಹೋಗುವದೆಂದು ನಿರ್ಧರಿಸ ಲಾಯಿತು.

ತಂದೆಯವರು ಶುಭ ಮುಹೂರ್ತವನ್ನು ಹುಡುಕಿ ತೆಗೆದರು. ಆ ದಿವಸವು ಸಮೀಪಿಸುತ್ತಿದ್ದಂತೆ ನನ್ನ ಹೃದಯವು ಕಳವಳದಿಂದ ಹಿಂಡಿ ಹಿಪ್ಪಿಯಾಗುತ್ತಿದ್ದಿತು. ಇನ್ನು ನಾನು ತಾಯಿಯ ಭೆಟ್ಟಿಗೆ ಆಗಾಗ್ಗೆ ಬರುವದು ಸಾಧ್ಯವಿರಲಿಲ್ಲ. ಇಷ್ಟುದಿವಸ ಅವಳ ಸಾನಿಧ್ಯದಲ್ಲಿದ್ದೆ. ಬೇಸರ ಬಂದೊಡನೆ ಹಕ್ಕಿಯು ಭುರ್ ಎಂದು ಹಾರಿ ತಾಯಿಯ ಬಳಿ ಓಡಿ ಬರುತ್ತಿತ್ತು. ಆದರೆ ಈಗ ಅದು ದೂರ ದೂರ ಹೋಗುತ್ತಿತ್ತು. ತಾಯಿಗೆ ನೆರವಾಗಿ ಅವಳ ಕೃಪಾದೃಷ್ಟಿಯನ್ನು ಪಡೆಯಲು ನಾನು ಶನಿವಾರ ಭಾನುವಾರ ಹೋಗುತ್ತಿದ್ದೆ. ಈಗ ಆ ಭಾಗ್ಯ ತಪ್ಪುತ್ತಿತ್ತು. ಈಗ ದೊಡ್ಡ ದೊಡ್ಡ ರಜೆಗಳಲ್ಲಿ ಕೂಡ ಮನೆಗೆ ಬರುವದು ಅಸಾಧ್ಯವಿತ್ತು. ಹಣವಿಲ್ಲದೆ ದೂರದ ಪ್ರವಾಸವು ಹೇಗೆ ಸಾಧ್ಯ ? ಪ್ರತಿಯೊಂದು ಮಾತಿಗೂ ದುಡ್ಡುಬೇಕು ! ನನಗೆ ಹತ್ತು ರೂಪಾಯಿ ಕೊಟ್ಟು ಕಳಿಸುವದಕ್ಕೂ ತಂದೆಯವರು ಹತ್ತಾರು ಜನರಲ್ಲಿ ಬಾಯಿ ತೆರೆಯ ಬೇಕಾಯಿತು. ಆದರೆ ನಾನು ಕಲಿಯಲಿಕ್ಕೆ ಹೊರಟಿದ್ದೆ. ಮುಂದೆ ತಂದೆ ತಾಯಿಗಳಿಗೆ ಸುಖವನ್ನು ಕೊಡುವ ಉದ್ದೇಶದಿಂದ ಹೊರಟಿದ್ದೆ. ತಾಯಿಯ ಸೇವೆಗೆ ಇನ್ನಷ್ಟು ಯೋಗ್ಯನಾಗಬೇಕೆಂದು ಹೊರಟಿದ್ದೆನೆಂಬುದೊಂದೇ ನನಗೆ ಧೈರ್ಯವನ್ನು ಕೊಡುತ್ತಿದ್ದಿತು; ಕಣ್ಣೀರನ್ನು ನಿಲ್ಲಿಸುತ್ತಿದ್ದಿತು. ಆದರೆ ನಾನು ದೂರ ಹೋದ ಮೇಲೆ ತಾಯಿಯ ಗತಿಯೇನು ? ರಜೆಯಲ್ಲಿ ಬಂದು ಅವಳ ಕಾಲನ್ನಾರು ಒತ್ತುವರು ? “ ಶ್ಯಾಮಾ, ನಿನ್ನ ಕೈ ಎಷ್ಟು ತಣ್ಣಗಿವೆಯೋ ನನ್ನ ಸುಡುತ್ತಿರುವ ಹಣೆಯ ಮೇಲಾದರೂ ಇಡು; ಹಿತವಾಗಿ ಅನಿಸುತ್ತದೆ. ” ಎಂದು ತಾಯಿ ಯಾರಿಗೆ ಹೇಳುವಳು ? ಅವಳ ಸೀರೆಯನ್ನಾರು ಒಗೆಯುವರು ? ಅವಳು ಒಂದೆರಡು ತುತ್ತು ಹೆಚ್ಚು ಊಟ ಮಾಡಲೆಂದು ಅವಳ ಬಳಿ ಕುಳಿತು ಸಂತೋಷದ ಮಾತು ಕತೆಗಳನ್ನಾಡುವವರು ಯಾರು ? ಬೀಸಲಿಕ್ಕೆ ಹಿಡಿಯುವವರಾರು ? ಹಿತ್ತಲದಲ್ಲಿಯ ಕಟ್ಟಿಗೆ ತಂದು ಕೊಡುವವರು ಯಾರು ? ಅಗ್ಗಿಷ್ಟಿಕೆ ಹೊತ್ತಿಸಲು ನೆರವಾಗುವವರು ಯಾರು ? ಅಂಗಳ ಸಾರಿಸಲಿಕ್ಕೆ ಶೆಗಣಿಯನ್ನು ತಂದು ಕೊಡುವವರು ಯಾರು ? ಬಾವಿಯಿಂದ

ನೀರು ತಂದು ಕೊಡುವವರು ಯಾರು? ನಾನು ಮನೆಗೆ ಹೋದಾಗ ತಾಯಿ ಈ ಎಲ್ಲ ಸಹಾಯವನ್ನು ಮಾಡುತ್ತಿದ್ದೆ. ಆದರೆ ಇನ್ನು ನಾನು ಏರುವ ಹಿಂದಿರುಗಿ ಬಂದೇನೆಂಬುದರ ನಿಯಮವಿರಲಿಲ್ಲ. ಆದರೆ ನಾನು ಯಾರು? ತಾಯಿಗೆ ಸುಖ ಕೊಡಬೇಕೆನ್ನುವವನು ನಾನಾರು? ನನಗೇಕೆ ಆ ಅಭಿಮಾನ? ದೇವರಿದ್ದಾನೆ. ಅವನು ಮೂರುಲೋಕದ ತಾಯಿ–ತಂದೆ. ಅವನಿಗೆ ಎಲ್ಲರ ಚಿಂತೆಯಿದೆ. ದೇವರಿಗೆ ಎಲ್ಲರ ದಯೆ, ಎಲ್ಲರ ಚಿಂತೆ! ನನ್ನ ತಾಯಿಯ ಮತ್ತು ಇಡೀ ಜಗತ್ತಿನ ಆಧಾರಸ್ತಂಭನೇ ಅವನು. ಅವನೊಬ್ಬನೇ!

ನಾನು ನನ್ನ ಅರಿವೆ–ಅಂಚಡಿ, ಪಾಟಿ–ಪುಸ್ತಕಗಳನ್ನು ಕಟ್ಟಿಕೊಳ್ಳ ತೊಡಗಿದ್ದೆ. ರಾತ್ರಿಯ ಸಮಯದಲ್ಲಿ ಎತ್ತಿನ ಗಾಡಿ ಹೊರಡುವದಿತ್ತು. ಇಂದು ರಾತ್ರಿ ಹೊರಡತಕ್ಕವನು. ಖಂಡಿತ ಹೊರಡತಕ್ಕವನು. ತಾಯಿ ಯನ್ನು ಬಿಟ್ಟು ಹೊರಡತಕ್ಕವನು! ತಾಯಿ ಎರಡು ಸ್ವಚ್ಛವಾದ ಕಂಬಳಿ ಗಳನ್ನು ತೆಗೆದಳು. ನಾನು ಅದರಲ್ಲಿಯ ಒಂದು ಕಂಬಳಿ ತೆಗೆದುಕೊಂಡು ಹೇಳಿದೆ, "ನನಗೆ ಒಂದು ಕಂಬಳಿಸಾಕು. ಹಾಸಲಿಕ್ಕೆ ತರಟು ಇದೆ. ನಿನಗೆ ಚಳಿತುಂಬಿಬಂದಾಗ ಹೊದ್ದುಕೊಳ್ಳಲಿಕ್ಕೆ ಈ ಕಂಬಳಿ ಇರಲಿ."

"ಬೇಡಪ್ಪಾ. ದೂರದ ಪರಸ್ಥಳದಲ್ಲಿ ನೀನು ಇರತಕ್ಕವ. ಅಲ್ಲಿ ಯಾರ ಗುರುತೇ ಯಾರ ಪರಿಚಯವೇ? ಜಡ್ಡು–ಜಾಪತ್ರಿ ಏನಾದರೂ ಆದರೆ ಹತ್ತಿರ ಇರುತ್ತದೆ. ಇಲ್ಲಿ ನಮ್ಮದು ಹೇಗೂ ನಡೆಯುತ್ತದೆ." ಎಂದು ಹೇಳಿ ತಾಯಿ ನನ್ನ ಹಾಸಿಗೆಯಲ್ಲಿ ಕಂಬಳಿಗಳನ್ನು ಸುತ್ತಿದಳು. ನನಗೆ ತುಸು ಹಚ್ಚಿದ ಅವ ಲಕ್ಕಿ ಕಟ್ಟಿಕೊಟ್ಟಳು. ಚಳಿಗಾಲದಲ್ಲಿ ತುಟಿ ಒಡೆಯಬಾರದೆಂದು ಸೋಲ ಮೇಣದ ಒಂದು ತುಂಡನ್ನೂ ಹಡಗಿನಲ್ಲಿ ಕುಳಿತಾಗ ತಲೆತಿರುಗಿ ತೊಂದರೆ ಯಾಗಬಾರದೆಂದು ನೆಲ್ಲೀಕಾಯಿಯ ನಾಲ್ಕು ವಡೆಗಳನ್ನೂ ಕೊಟ್ಟಳು. ಮಮತೆಯ ಮತ್ತು ಶ್ರಮಜೀವಿಯಾದ ತಾಯಿಗೆ ಸಣ್ಣ ಪುಟ್ಟ ವಿಷಯಗಳ ಕಡೆಗೂ ಲಕ್ಷವಿರುತ್ತಿತ್ತು.

ರಾತ್ರಿ ಒಂಬತ್ತು ಗಂಟೆಗೆ ಚಕ್ಕಡಿ ಹೊರಡುವದಿತ್ತು. ಹೇಗಾದರೂ ಊಟ ಮುಗಿಸಿದೆ. ಮೊದಲೇ ಹೊಟ್ಟೆ ತುಂಬಿಬಂದಿತ್ತು. ತಾಯಿ ಅನ್ನದ ಮೇಲೆ ಮೊಸರು ಹಾಕಿದ್ದಳು. ಊಟವಾದ ತುಸು ಹೊತ್ತಿನಲ್ಲಿಯೇ ಗಾಡಿ ಬಂದಿತು. ತಂದೆಯವರು ಸಾಮಾನುಗಳನ್ನು ಗಾಡಿಯಲ್ಲಿ ಒಯ್ದು ಇಟ್ಟರು.

ನಾನು ತಮ್ಮನಿಗೆ ಹೇಳಿದೆ, " ಇನ್ನು ನೀನು ಹಟಮಾಡುತ್ತ ಇರಬೇಡ. ತಾಯಿಗೆ ನೆರವಾಗಬೇಕು. ತಾಯಿಗೆ ನೀನೇ ಇನ್ನು ಆಧಾರ " ಎಂದು ನುಡಿದು ಅವನ ಬೆನ್ನ ಮೇಲೆ ಕೈಯಾಡಿಸಿದೆ. ನಾನು ದೇವರಿಗೆ ನಮಸ್ಕಾರ ಮಾಡಿದೆ. ತಾಯಿ ಕೊಟ್ಟ ಅಡಿಕೆ ಬೆಟ್ಟವನ್ನು ದೇವರ ಮುಂದೆ ಇಟ್ಟೆ. ಆ ಮೇಲೆ ತಂದೆಯವರ ಕಾಲಿಗೆರಗಿದೆ. ಅವರು ಬೆನ್ನಮೇಲೆ ಕೈಯಾಡಿಸಿದರು. ಯಾವ ಮಾತನ್ನು ಆಡದಂತಾಗಿದ್ದರು. ಆ ಮೇಲೆ ನಾನು ತಾಯಿಯ ಪಾದಗಳಮೇಲೆ ನನ್ನ ತಲೆಯನ್ನಿಟ್ಟೆ. ಅವು ಅಶ್ರುಗಳಿಂದ ತೊಯ್ದು ಹೋದವು. ತಾಯಿ ಒಲೆಯಲ್ಲಿಯ ಅಂಗಾರವನ್ನು ತಂದು ಹಚ್ಚಿದಳು. ನೆರೆಮನೆಯ ಜಾನಕೀ ಕಕ್ಕಿಯವರ ಮನೆಗೆ ಹೋಗಿ ಅವರಿಗೆ ನಮಸ್ಕಾರ ಮಾಡಿ ಹೇಳಿದೆ, " ನಮ್ಮ ತಾಯಿಯನ್ನು ನೀವು ನೋಡಿಕೊಳ್ಳಿರಿ. ಕಾಹಿಲೆಬಿದ್ದಾಗ ನೆರವಾಗಿರಿ. " " ಹೋಗು ಶ್ಯಾಮಾ, ನಿನ್ನ ತಾಯಿಯ ಚಿಂತೆಯನ್ನು ಬಿಡು. ನಾವೆಲ್ಲ ಇದ್ದೇವೆ " ಎಂದು ಅವರು ಸಮಾಧಾನ ಹೇಳಿದರು. ಮತ್ತೆ ತಾಯಿಯ ಹತ್ತಿರ ಹೋದೆ. " ಜೋಕೆಯಿಂದಿರು " ಎಂದು ಅವಳು ಹೇಳಿದಳು. ನಾನು ' ಹೂಂ ' ಎಂದು ಗೋಣು ಹಾಕಿ ಹೊರಟೆ. ಪುರುಷೋತ್ತಮನು ಮತ್ತೆ ನನ್ನ ಹತ್ತಿರ ಬಂದು ನಿಂತನು. ನಾನು ಅವನನ್ನು ಅಪ್ಪಿಕೊಂಡು ಸಮಾಧಾನ ಹೇಳಿ ಬಂಡಿಯನ್ನೇರಿದೆ. ತಂದೆ ಹಿಂದಿನಿಂದ ನಡೆಯುತ್ತ ಬಂದರು. ಗಣಪತಿಯ ದೇವಸ್ಥಾನದ ಹತ್ತಿರ ನಾನು ಇಳಿಯಬೇಕಾಗಿತ್ತು. ಕೂಟದ ಹತ್ತರ ಗಾಡಿ ನಿಂತಿತು. ನಾನುತಂದೆಯವರೊಡನೆ ದೇವರ ದರುಶನಕ್ಕೆ ಹೋದೆ. ಗಣಪತಿಗೆ ನಮಸ್ಕಾರ ಮಾಡಿ, ತೀರ್ಥ ತೆಗೆದುಕೊಂಡು ಕಣ್ಣಿಗೆ ಹಚ್ಚಿಕೊಂಡೆ. ಗಣಪತಿಯ ಪಾದದ ಬಳಿ ಇದ್ದ ಕುಂಕುಮವನ್ನು ಹಣೆಗೆ ಹಚ್ಚಿಕೊಂಡೆ. " ನನ್ನ ತಾಯಿ ತಂದೆಗಳನ್ನು ಕಾಪಾಡು " ಎಂದು ದೇವರನ್ನು ಬೇಡಿಕೊಂಡೆ. ಮತ್ತೊಮ್ಮೆ ತಂದೆಯವರ ಕಾಲಿಗೆಬಿದ್ದೆ. " ಹುಷಾರಾಗಿ ಇರು ಮಗು " ಎಂದು ಅವರು ನುಡಿದರು.

ನಾನು ಗಾಡಿಯಲ್ಲಿ ಕುಳಿತುಕೊಂಡೆ. ತಂದೆಯವರು ಕ್ಷಣ ಹೊತ್ತು ನಿಂತುಕೊಂಡು ಗಾಡಿ ಹೊರಟಮೇಲೆ ಮನೆಯ ಕಡೆಗೆ ತಿರುಗಿದರು. ಗಾಡಿ ಹೊರಟಿತು. ಎತ್ತು ಓಡತೊಡಗಿದವು. ಗಂಟೆ ಬಾರಿಸತೊಡಗಿದವು. ನನ್ನ ಜೀವನದ ಗಾಡಿಯೂ ಆರಂಭವಾಯಿತು. ಹೊರಗಿನ ಜೀವನ ಸಮುದ್ರದಲ್ಲಿ

ನಾನೊಬ್ಬನೇ ಹೋಗತಕ್ಕವನಿದ್ದೆ. ಆ ಸಮುದ್ರದಲ್ಲಿ ಸಾಯುವೆನೋ, ಮುಳುಗುವೆನೋ ಅಥವಾ ಮುಳುಗಿ ಮುತ್ತುಗಳನ್ನು ತೆಗೆಯುವೆನೋ ? ಈ ಸಮುದ್ರದಲ್ಲಿ ಯಾರು ಯಾರು ಭೆಟ್ಟಿಯಾಗುವರೋ ? ಯಾರು ಯಾರು ಕೂಡಿ ಕೊಳ್ಳುವರೋ ? ಕೂಡಿಕೊಂಡು ಯಾರು ಯಾರು ಮತ್ತೆ ಮರಿಗಡೆ ಯಾಗುವರೋ ? ಜೀವನ ನೌಕೆ ಎಲ್ಲಿ ಮುಳುಗುವದೋ ಎಲ್ಲಿ ತೇಲಿ ಹೋಗು ವದೋ ಎಲ್ಲವೂ ಅನಿಶ್ಚಿತವಾಗಿತ್ತು. ತಾಯಿಯು ಕೊಟ್ಟ ಸ್ಫೂರ್ತಿಯಿಂದ ನಾನು ಹೊರಟಿದ್ದೆ. ಅವಳು ಕೊಟ್ಟ ಧೈರ್ಯದ ರೆಕ್ಕೆಗಳನ್ನು ಹಚ್ಚಿಕೊಂಡು ಹಾರಿ ನಡೆದಿದ್ದೆ. ‘ ಧ್ರುವನಂತೆ ಹೋಗು ’ ಎಂದು ಅವಳು ಹೇಳಿದ್ದಳು ! ಮಹಾ ಮೇರುವಿನಂಥ ನಿಶ್ಚಯವುಳ್ಳ ತೇಜಸ್ವಿಯೂ ಪರಮ ಪವಿತ್ರನೂ ಆದ ಧ್ರುವನೆತ್ತ ! ಹೆಜ್ಜೆ ಹೆಜ್ಜೆಗೂ ತಪ್ಪು ಮಾಡುವ, ಜಾರಿ ಬೀಳುವ, ಚಂಚಲ ವೃತ್ತಿಯ ಅಳುಬುರುಕ ಶ್ಯಾಮನೆತ್ತ ! ನಾನು ಅಳುತ್ತಲಿದ್ದೆ. ಹೊರಗೆ ಕತ್ತಲು ಪಸರಿಸಿತ್ತು. ಮೂಕ ಅಶ್ರುಗಳನ್ನು ನಾನು ಸುರಿಸುತ್ತಿದ್ದೆ. ಊರ ನದಿ ದಾಟಿತು. ಝೋಳಾಯಿ ಸೋಮೇಶ್ವರವೂ ದಾಟಿತು. ಪಾಲಗಡದ ಗಡಿ ಯಾವಾಗಲೋ ಮುಗಿದಿತ್ತು. ಆದರೆ ಆ ಕಡೆ ನನ್ನ ಗಮನವಿರಲಿಲ್ಲ. ಅನೇಕ ನೆನಪುಗಳು ಚಿಮ್ಮಿಬಂದು ಹೃದಯವನ್ನು ಬಾಧಿಸುತ್ತಿದ್ದವು. ತಾಯಿ! ಅವಳ ಕೃಪಾದೃಷ್ಟಿಯೊಂದಿದ್ದರೆ ಸಾಕು. ಆ ಬಳಿಕ ನನಗೆ ಭಯವಿಲ್ಲ. ಅವಳ ಆಶೀರ್ವಾದವೊಂದೇ ನನಗೆ ಅಭೇದ್ಯವಾದ ಕವಚ ಕುಂಡಲಿಯಾಗಿತ್ತು. ಅದನ್ನು ತೆಗೆದುಕೊಂಡು ನಾನು ಹೊರಟಿದ್ದೆ. ಮಗನಿಗೆ ಈಜು ಕಲಿಸಿ ತಾಯಿಯು ಅವನನ್ನು ಅನಂತವಾದ ಸಮುದ್ರದಲ್ಲಿ ಬಿಟ್ಟುಕೊಟ್ಟಳು. ಈ ಸಮುದ್ರದಲ್ಲಿ ನಾನು ಅನೇಕ ಸಲ ಮುಳುಗಿ ಹೋಗುವದರಲ್ಲಿದ್ದೆ. ಕೆಲವು ಸಲ ತೆರೆಗಳು ಮುಳುಗಿಸಿದವು. ಆದರೆ ಮತ್ತೆ ಮತ್ತೆ ಮೇಲೆಬಂದು ಬದುಕಿ ಕೊಂಡೆ. ಈಗಲೂ ಎಲ್ಲ ಗಂಡಾಂತರಗಳಿಂದ ಮುಕ್ತನಾಗಿದ್ದೇನೆಂದು ಹೇಳ ಲಾರೆ. ಇನ್ನೂ ಇವೆ. ಯಾವ ತಾಯಿಯ ಕೃಪೆಯಿಂದ ಈವರೆಗೆ ತೇಲುತ್ತ ಬಂದೆನೋ, ಸಾವಿನಿಂದ ಪಾರಾದೇನೋ, ಬಿದ್ದವನು ಎದ್ದೆನೋ ಅದೇ ತಾಯಿಯ ಕೃಪೆಯು ಮುಂದಾದರೂ ರಕ್ಷಿಸಬಹುದು. ಇಂದು ನನ್ನಬಳಿ ಯಲ್ಲಿ ನನ್ನ ತಾಯಿ ಇರದಿದ್ದರೂ ಅವಳ ಕೃಪೆಯ ಸೆಲೆಯು ಬತ್ತದಂಥ ಸೆಲೆ ಯಾಗಿದೆ.

## : : ನಿರ್ಧನಿಕರ ತಿರಸ್ಕಾರ

ನಮ್ಮ ಸಾಲ ದಿನದಿನಕ್ಕೂ ಏರುತ್ತಲಿತ್ತು. ಹೊತ್ತು ಹೊತ್ತಿಗೆ ಬಡ್ಡಿಯನ್ನು ಕೊಡಲಿಕ್ಕೆ ಆಗುತ್ತಿರಲಿಲ್ಲ. ನಮಗೆ ಕೆಲವು ಹೊಲಗಳಿದ್ದವು. ತಂದೆಯವರು ಅವುಗಳಲ್ಲಿ ಒಂದೆರಡು ದೊಡ್ಡ ಹೊಲಗಳನ್ನು ಮಾರಿಬಿಟ್ಟಿದ್ದರೆ ಎಲ್ಲ ಸಾಲ ಮೊದಲೇ ತೀರಬಹುದಾಗಿತ್ತು. ಹೊಟ್ಟೆಯ ಮಟ್ಟಿಗೆ ಬೇರೆ ಹೊಲ ಉಳಿಯುತ್ತಿದ್ದವು. ಆದರೆ ತಂದೆಯವರಿಗೆ ಅದು ಸರಿಬಿದ್ದಿರಲಿಲ್ಲ. ಹೊಲಗಳನ್ನು ಮಾರುವದೆಂದರೆ ಪಾಪವೂ ಅಪಮಾನವೂ ಎಂದು ಭಾವಿಸಿದ್ದರು.

ಆ ರಾತ್ರಿ ತಾಯಿಯತಂದೆ—ನಮ್ಮ ಅಜ್ಜ—ನಮ್ಮ ಮನೆಗೆ ಬಂದಿದ್ದರು. ನಾವು ಅವರಿಗೆ ನಾನಾ ಅನ್ನುತ್ತಿದ್ದೆವು. ನಮ್ಮ ತಂದೆಯವರಿಗೆ ಒಂದೆರಡು ಉಪದೇಶಪರ ಮಾತುಗಳನ್ನು ಹೇಳಬೇಕೆಂದು ಬಂದಿದ್ದರು. ತಂದೆಯವರಿಗೆ ತಮ್ಮ ಮಾತು ಒಪ್ಪಿಗೆಯಾಗುವದೇನೋ ನೋಡಬೇಕೆಂದು ಅವರು ಮಾಡಿದ್ದರು. ಅಜ್ಜ ಬುದ್ಧಿವಂತರೂ ವ್ಯವಹಾರಚತುರರೂ, ಒಳ್ಳೆ ಲೆಕ್ಕಾಚಾರದವರೂ, ಧುರೀಣರೂ ಆಗಿದ್ದರು. ಆದರೆ ತಮ್ಮ ಜಾಣತನದ ಬಗ್ಗೆ ಅಹಂಕಾರ ವಿದ್ದಿತವರಿಗೆ. ಅವರ ಮಾತಿನ ವಿರುದ್ಧ ಯಾರಾದರೂ ನಡೆದಲ್ಲಿ ತಪ್ತರಾಗಿ ಬಿಡುತ್ತಿದ್ದರು. ಮೊದಲೇ ಸಿಟ್ಟಿನ ಸ್ವಭಾವ. ಕುಶಾಗ್ರ ಬುದ್ಧಿಯವರು ಬೇರೆಯವರಿಗೆ ಬುದ್ಧಿ ಕಡಿಮೆಯೆಂದು ಭಾವಿಸಿ ಕೊಳ್ಳುವದುಂಟು. ಬುದ್ಧಿಯ ಎಲ್ಲ ಗುತ್ತಿಗೆ ತಮಗೇ ಇರುತ್ತದೆಂದು ಅವರು ತಿಳಿಯುತ್ತಾರೆ. ನಾನಾ ಅವರ ಸ್ವಭಾವವೂ ಇದೇ ಬಗೆಯ ದಾಗಿತ್ತು.

ನನ್ನ ತಂದೆಯವರು ಪಡಸಾಲೆಯಲ್ಲಿ ಚೀಲ ಹಾಸಿಕೊಂಡು ಕುಳಿತಿದ್ದರು. ಅವರ ಊಟ ಆಗಿತ್ತು. ತಾಯಿ ಮಾತ್ರ ಒಳಗೆ ಊಟಕ್ಕೆ ಕುಳಿತಿದ್ದಳು. ಹೊರಗೆ ಅಜ್ಜ ಬಂದು ತಂದೆಯವರ ಜೊತೆಗೆ ಮಾತನಾಡತೊಡಗಿದರು.

ನಾನಾ ಮಾತನಾರಂಭಿಸುತ್ತ ನುಡಿದರು, " ಇದು ನೋಡಿರಿ ಭಾವೂ

ರಾಯರೆ, ಇಂದು ನಿಮಗೆ ಕೊನೆಯ ಮಾತನ್ನು ಹೇಳಲು ಬಂದಿದ್ದೇನೆ. ನಾನು ಈ ಮೊದಲು ಅನೇಕಸಲ ಸೂಚಿಸಿದ್ದರೂ ನೀವು ಮನಸ್ಸಿನಮೇಲೆ ತೆಗೆದುಕೊಳ್ಳಲಿಲ್ಲ. ಈಗ ಪ್ರಸಂಗ ಕುತ್ತಿಗೆಗೆ ಬಂದಿದೆ. ಈಗಲಾದರೂ ಎಚ್ಚರಿಕೆ ವಹಿಸಬೇಕು.-ನೀವು ನಿಮ್ಮ ಹೊಲಗಳನ್ನು ಮಾರಬೇಕು. ಆ ಮಾರ ವಾಡಿಯ ಸಾಲವನ್ನಾದರೂ ಮೊದಲು ತೀರಿಸಬೇಕು. ಬೇರೆ ಸಾವುಕಾರರ ವಿಚಾರ ಹಿಂದಿನಿಂದ ನೋಡೋಣ. ಅವರು ತುಸು ತಡೆಯಬಹುದು. ಅವರ ಬಡ್ಡಿಯೂ ಬಹಳ ಇಲ್ಲ. ಕ್ಯಾಂಪಿನಲ್ಲಿಯ ಮಾರವಾಡಿಯ ಸಾಲವೇ ಮುಖ್ಯವಾದದ್ದು. ದಿವಸ ದಿವಸಕ್ಕೂ ಸಾಲ ಹೆಚ್ಚುತ್ತಲಿದೆ. ಅಡಚಣೆ ಹೆಚ್ಚುತ್ತಿವೆ. ಇದರಿಂದ ಸರ್ವನಾಶವಾದೀತು. ನನ್ನ ಅಭಿಪ್ರಾಯವನ್ನು ಮನ್ನಿಸಿರಿ. ”

“ ಏನೇ ಇರಲಿ. ನನ್ನ ಚಿಂತೆ ನಿಮಗೇಕೆ ? ಬಡಮನುಷ್ಯನಿಗೆ ಎಲ್ಲರೂ ಸಲಹೆ ಕೊಡಲಿಕ್ಕೆ ಬರುತ್ತಾರೆ. ಬಡವನಿಗೆ ಯಾವುದೂ ತಿಳಿಯುವದಿಲ್ಲ ವೇನು ? ನಾನಾ, ನನ್ನ ಸಾಲದ ಚಿಂತೆ ನನಗಿದೆ. ನೀವು ಚಿಂತೆ ಹಚ್ಚಿಕೊಳ್ಳ ಬೇಡಿ. ” ತಂದೆಯವರು ಮಾತನಾಡುತ್ತಿದ್ದರು.

“ ಭಾವೂ, ನನ್ನಿಂದ ಸುಮ್ಮನೆ ಇರುವದು ಆಗಲಿಲ್ಲವೆಂದು ಬಂದೆ. ಹೊಟ್ಟೆಯ ಕರುಳು ನಿಲ್ಲಗೊಡದ್ದರಿಂದ ಬಂದೆ. ಕರುಳು ಇಲ್ಲಿಯೂ ಸುತ್ತಿ ಕೊಂಡಿದೆಯಲ್ಲವೆ ? ಹೊಟ್ಟೆಯ ಮಗಳನ್ನು ನಿಮಗೆ ಕೊಟ್ಟಿದ್ದೇನೆ. ಅದಕ್ಕಾಗಿ ಇಂಥ ರಾತ್ರಿಯಲ್ಲಿ ಹುದುಲಿನಲ್ಲಿ ನಡೆದುಕೊಂಡು ಬಂದೆ. ನನ್ನ ಬಂಗಾರ ದಂಥ ಮೊಮ್ಮಕ್ಕಳಿಗೆ ತುಸು ಹೊಲ ಉಳಿಯಲಿ, ಪೂರ್ವಜರ ಆಸ್ತಿಯಿದ್ದ ಊರಲ್ಲಿ ಅವರು ಪರದೇಶಿಗಳಾಗದಿರಲಿ, ನಿರಾಧಾರಿಗಳಾದದಿರಲಿ ಎಂದು ತಿಳಿದು ಬಂದೆ. ಬೇಗ ಹರಾಜು ಆಗಬಹುದು. ಆಮೇಲೆ ಕಾಸಿನ ಬೆಲೆ ಯಲ್ಲಿ ಮಾರಾಟ ಮಾಡಬೇಕಾದೀತು. ಆ ನಿಮ್ಮ ಪಾಯರೀ ಹೊಲವನ್ನು ವಿಸಾಪುರದವರು ಹದಿನೈದುನೂರು ರೂಪಾಯಿಗಳಿಗೆ ಬೇಡುತ್ತಿದ್ದಾರೆ. ಕೊಟ್ಟು ಬಿಡಿರಿ. ನಾಳೆ ಬೆಳೆ ಬರಲಿಕ್ಕಿಲ್ಲ. ಮಾರವಾಡಿ ಎದೆಯ ಮೇಲೆ ಕೂಡ್ರ ಬಹುದು. ” ಎಂದು ನಾನಾ ಅವರು ಹೃದಯವನ್ನು ಬಿಚ್ಚಿ ಮಾತನಾಡಿದರು.

“ ನಾನಾ, ಪಾಯರೀ ಹೊಲವನ್ನು ಹೇಗೆ ಮಾರುವದು ? ಆ ಹೊಲ ದಿಂದಲೇ ನಾವು ಬೆಳೆದುದೊಡ್ಡವರಾದೆವು. ಆ ಹೊಲವನ್ನೂ ಬೆಳಸಿ ದೊಡ್ಡದು

ಮಾಡಿದೆವು. ನಟ್ಟು ಕಡಿಸಿ ಹಸನು ಮಾಡಿದೆವು. ಸುರಂಗ ಹಚ್ಚಿ ಕರಿ ಕಲ್ಲು ಗಳನ್ನೆಲ್ಲ ತೆಗೆದು ಭತ್ತದ ಭೂಮಿಯನ್ನು ಮಾಡಿದೆವು. ಹತ್ತು ಮಣದ ಭೂಮಿಯನ್ನು ಮೂರು ಖಂಡಿಯ ಭೂಮಿಯನ್ನಾಗಿ ಮಾಡಿದೆವು. ಅಲ್ಲಿ ಬಾವಿಯನ್ನು ತೋಡಿಸಿದೆವು. ಈ ಪಾಯರೇ ಹೊಲವನ್ನು ಮಾರಬೇಕೆ? ಈ ಹೊಲದ ಮೇಲೆ ಮಕ್ಕಳಿಗೆಷ್ಟು ಪ್ರೀತಿ. ಶನಿವಾರ–ಭಾನುವಾರಗಳಲ್ಲಿ ಈ ಹೊಲದಲ್ಲಿಯೇ ಅವರು ಆಟವಾಡುವರು. ಅಲ್ಲಿಯೇ ದೂರ್ವೆಯ ಅಜ್ಜಿಯೊಡನೆ ಅನ್ನ, ಬದನೇಕಾಯಿ ಭಜ್ಜಿ ತಿನ್ನುವರು. ಅಲ್ಲಿ ಹೂವಿನ ಗಿಡಗಳನ್ನೂ ಮಾವಿನ ಗಿಡಗಳನ್ನೂ ಹಚ್ಚಿದೆವು. ಅದಕ್ಕೂ ನಮಗೂ ಬಹಳ ಸಂಬಂಧವಿದೆ. ಭೂಮಿಯಾದರೂ ಅಪರೂಪವಾದದ್ದು. ಬಂಗಾರ ಕೂಡ ಅಲ್ಲಿ ಬೆಳೆಯ ಬಹುದು. ಇಂಥ ಉತ್ತಮವಾದ ಹೊಲ. ನಾವು ದುಡಿದು ಭೂಮಿಯನ್ನು ಗಳಿಸದಿದ್ದರೂ ಹಿರಿಯರು ಗಳಿಸಿಟ್ಟುದನ್ನಾದರೂ ಕಾಯ್ದು ಇಡಬೇಕಲ್ಲವೇ ? ಭೂಮಿಯ ಒಂದು ತುಂಡನ್ನೂ ನಾನು ಮಾರಲಾರೆ. ಹೃದಯದ ತುಂಡನ್ನು ಎಂದಾದರೂ ಮಾರುವದು ಸಾಧ್ಯವಿದೆಯೇ ? ನಮ್ಮ ಭೂಮಿಯನ್ನು ನಮ್ಮ ಕೈಯಿಂದ ಮಾರುವದೇ? ತಮ್ಮ ತಾಯಿಯನ್ನೂ, ಆಕಳನ್ನೂ ಮಾರು ವದು ಹೇಗೆ ಪಾಪವೋ ಹಾಗೆಯೇ ತಮ್ಮ ಭೂಮಿಯನ್ನು ಮಾರುವದೂ ಪಾಪವಾಗಿದೆ. ಭೂಮಿಯೆಂದರೆ ತಾಯಿ. ಅವಳ ಕಾಳಿನಮೇಲೆಯೇ ನಾವು ಬದುಕಿಕೊಂಡಿದ್ದೇವೆ. ” ಎಂದು ತಂದೆ ಹೇಳಿದರು.

“ ಭಾವೂ, ಬಡಾಯಿ ಕೊಚ್ಚಿದ ಮಾತ್ರಕ್ಕೆ ಜಗತ್ತಿನಲ್ಲಿ ಯಾವ ಕಾರ್ಯವೂ ಸಾಧಿಸಲಾರದು. ಬಡಾಯಿಯದೇ ಸಾರು, ಬಡಾಯಿಯದೇ ಅನ್ನ ಉಂಡ ಮಾತ್ರದಿಂದ ಹೊಟ್ಟೆ ತುಂಬಲಾರದು. ಭೂಮಿ ತಾಯಿಯಂತೆ ! ಮಾರಬಾರದಂತೆ! ಬೇರೆಯವರದನ್ನು ತೆಗೆದುಕೊಳ್ಳಲಡ್ಡಿಯಿಲ್ಲವೇನೋ ? ಅಪಹರಿಸಲು ಬರುವದೇನೋ ? ಅಂಥ ಪ್ರಸಂಗದಲ್ಲಿ ಭೂಮಿಯು ಬೇರೆಯ ವರ ತಾಯಿ ಎಂಬ ಕಲ್ಪನೆ ಬರುವದಿಲ್ಲವಲ್ಲವೇ ? ನೀತಿಯ ನಟನೆ ನನ್ನ ಮುಂದೆ ಮಾಡಬೇಡಿ. ಒಂದು ಕಾಲದಲ್ಲಿ ಬೇರೆಯವರ ಭೂಮಿಯನ್ನು ಜಪ್ತು ಮಾಡಿಸುತ್ತಿದ್ದಿರಿ, ಹರಾಜು ಮಾಡಿಸುತ್ತಿದ್ದಿರಿ, ಈ ತಾಯಂದಿರ ಮೇಲೆ ಬಲಾತ್ಕಾರ ಮಾಡುತ್ತಿದ್ದಿರಿ. ಭೂಮಿಯನ್ನು ಕೊಳ್ಳುತ್ತಾರೆ, ಮಾರುತ್ತಾರೆ. ಬಂದ ಪ್ರಸಂಗವನ್ನು ನೋಡಬೇಕು. ಮುಂದೆ ದೇವರ ದಯೆಯಿಂದ ಮಕ್ಕಳು

ದೊಡ್ಡವರಾಗಿ ಸಂಪಾದನೆ ಮಾಡಹತ್ತಿದರೆ ಮತ್ತೆ ಭೂಮಿ ಕೊಳ್ಳಬಹುದು. ಈ ಭೂಮಿಯಿಲ್ಲದಿದ್ದರೆ ಮತ್ತೊಂದು ಭೂಮಿ. ಸಾಲದ ಹೊರೆಯನ್ನು ಹೊತ್ತುಕೊಂಡು ಭೂಮಿಯನ್ನು ಜತನ ಮಾಡುವುದಾದರೂ ಹೇಗೆ? ರಕ್ಷಿಸಿ ಕೊಳ್ಳುವ ಬಗೆಯಾದರೂ ಯಾವುದು ? ಜಪ್ತಿಯ ಡಂಗುರ ಸಾರಬಹುದು, ಪೋಲೀಸರು ಬರಬಹುದು. ಹರಾಜು ಮಾಡಬಹುದು, ಮನೆಗೆ ಕೀಲಿ ಜಡಿಯ ಬಹುದು. ಈ ರೀತಿ ನಾಲ್ಕು ಜನರೆದುರು ಮಂಗಳಾರತಿ ಬೆಳಗಿಸಿಕೊಳ್ಳುವದು ಸರಿಯೇನು? ನಾವಾಗಿ ಅಂಥ ಹೊತ್ತು ಬರದಂತೆ ಮೊದಲೇ ದಕ್ಷರಾಗಿರು ವದು ಒಳಿತಲ್ಲವೇ ? " ನಾನಾ ವಿಚಾರಿಸಿದರು.

"ನನ್ನ ಮಾನಾಪಮಾನಗಳನ್ನು ನಾನು ನೋಡಿಕೊಳ್ಳುತ್ತೇನೆ. ನನ್ನ ಮಾನವೆಂದರೆ ನಿಮ್ಮದೇನೂ ಅಲ್ಲವಷ್ಟೇ ? " ಭಾವೂ ನುಡಿದರು. "ನನ್ನದೂ ಇದೆ ಯೆಂದೇ ನಾನು ಬಂದೆ. ಎಷ್ಟೆಂದರೂ ನೀವು ನನ್ನ ಅಳಿಯ ಅಲ್ಲವೇ ? ನಿಮ್ಮ ಅಳಿಯನ ಮನೆ ಹರಾಜಾಯಿತೆಂದು ಜನರೆನ್ನಬಹುದು. ನಿಮ್ಮ ಅಪಮಾನ ವೆಂದರೆ ನನ್ನದೂ ಅಪಮಾನವೇ. ನನ್ನ ಮಗಳ ಮರ್ಯಾದೆ ಯೆಂದರೆ ನನ್ನದೇ ಅಲ್ಲವೇ ? ತುಸು ವಿಚಾರ ಮಾಡಿರಿ. ಹುಚ್ಚರಂತೆ ನಡೆ ಯುವದು ಸರಿಯಲ್ಲ " ಎಂದು ನಾನಾ ಹೇಳಿದರು.

"ಹುಚ್ಚನೆಂದು ಕರೆಯಿರಿ ಅಥವಾ ಮತ್ತೆ ಏನಾದರೂ ಕರೆಯಿರಿ. ನನ್ನನ್ನು ಮನಬಂದಂತೆ ಕರೆಯಲು ನಿಮಗೂ ಜಗತ್ತಿಗೂ ಪೂರ್ಣ ಅಧಿಕಾರ ವಿದೆ, ಒಳ್ಳೇ ಸಂಧಿಯಿದೆ. ಹುಂಬನೆಂದು ಕರೆದರೂ ಅಡ್ಡಿಯಿಲ್ಲ. "

"ಅನ್ನತಕ್ಕವನೇ. ಸುಮ್ಮನೆ ಇರುವೆನೇನು? ದೊಡ್ಡ ಸರದಾರ ಮನೆತನದವರಂತೆ ! ಸರದಾರರ ಮನೆತನವೆಂದು ತಿಳಿದು ನಾವು ಹುಡುಗಿ ಯನ್ನು ಕೊಟ್ಟೆವು. ಹುಡುಗಿಯ ಸಂಸಾರ ಸುಖಮಯವಾಗಲೆಂದು ವರ ದಕ್ಷಿಣೆಯನ್ನು ಸುರಿದೆವು ! ಅವಳ ಮರ್ಯಾದೆ ಕಾಸಿಗೆ ಪಂಥೇರಾಗಬೇಕೆಂದು ನಾವು ಅವಳನ್ನು ಕೊಡಲಿಲ್ಲ. ನೀವು ಸರದಾರರಲ್ಲವೇ ? ಇದೆಯೇ ನಿಮ್ಮ ಸರದಾರಿಕೆ ? ಹೆಂಡತಿಯ ಮೈ ಮೇಲೆ ಗುಂಜಿ ಬಂಗಾರವಿಲ್ಲ, ಮೈ ಮೇಲೆ ಗಟ್ಟಿಯಾದ ಬಟ್ಟೆಗಳಿಲ್ಲ, ತಿನ್ನುಣ್ಣಲು ಸರಿಯಾಗಿ ದೊರೆಯುವದಿಲ್ಲ, ಇದು ನಿಮ್ಮ ಸರದಾರಿಕೆಯ ಲಕ್ಷಣವೇ ? ಬಾಗಿಲಲ್ಲಿ ಸಾವುಕಾರರ ಕಾವಲು........ ಹೆಂಡತಿಗೆ ಬೇಕಾದಂತೆ ಆಡುವದು........ಎಂಥ ಸರದಾರಿಕೆ ಇದು ? ಇರಲಿಕ್ಕೆ

ಸರಿಯಾದ ಮನೆಕೂಡ ಇಲ್ಲದ ಸರದಾರರಿವರು! ನಿಮಗೆ ಸರದಾರರೆಂಬ ಬಿಂಕ ಎಷ್ಟಿತ್ತು ! ಮೂವತ್ತು ವರ್ಷ ಬಾಳುವೆ ನಡೆಸಿ ಏನು ಸಂಪಾದಿಸಿರಿ ? ಕಾಸಿನ ಬುದ್ಧಿಯನ್ನು ಕೂಡ ಗಳಿಸಲಿಲ್ಲ. ಎಲ್ಲರೂ ನಿಮ್ಮನ್ನು ಮೋಸಗೊಳಿಸಿ ಹೊರಗೆ ಹಾಕಿದರು. ಸರದಾರರೆ, ಇನ್ನಾದರೂ ಕಣ್ಣು ತೆರೆಯಿರಿ. ಸರದಾರರೆಂದು ಹೇಳಿಕೊಳ್ಳುವದು, ನೋಡಿದರೆ ಭಿಕ್ಷುಕರ ಲಕ್ಷಣ! ಸ್ವಂತಕ್ಕೆ ಬುದ್ಧಿ ಇಲ್ಲದಿದ್ದರೆ ಬೇರೆಯವರ ಮಾತನ್ನಾದರೂ ಕೇಳಬೇಕು. ಭಾವ್ರೂ, ಈ ಹುಚ್ಚಾಟ ಸಾಕಿನ್ನು. ನಾನು ಹೇಳುವಂತೆ ಕೇಳಿರಿ" ಎಂದು ನಾನಾ ಮಾತನಾಡುತ್ತಿದ್ದಾಗ ಒಳಗಡೆಯಿಂದ ತಾಯಿ ಹೊರಗೆ ಬಂದಳು.

ಆ ಮಾತುಗಳು ತಾಯಿಗೆ ಅಸಹ್ಯವೆನಿಸಿದ್ದವು. ಆದರೂ ಬಹಳ ಕಷ್ಟದಿಂದ ಕೇಳಿಕೊಳ್ಳುತ್ತಿದ್ದಳು. ಈಗ ಅವಳ ಶಾಂತತೆಗೆ ಭಂಗ ಬಂದಿತು. ಅವಳು ಹೊರಗೆ ಬಂದು ಹೇಳಿದಳು, "ನಾನಾ, ನೀವು ನನ್ನ ಮನೆಯಲ್ಲಿ ಕುಳಿತುಕೊಂಡಿದ್ದೀರಿ. ನೀವು ನಿಮ್ಮ ಮಗಳನ್ನೊಮ್ಮೆ ಬೇರೆಯವರಿಗೆ ಕೊಟ್ಟುಬಿಟ್ಟಿರುವಿರೆಂಬುದನ್ನು ಮರೆಯಬೇಡಿರಿ. ಈಗ ನಿಮಗೆ ಸಿಕ್ಕಾಪಟ್ಟೆ ಮಾತನಾಡಲು ಅಧಿಕಾರವಿಲ್ಲ. ಎಲ್ಲರೂ ಕಲ್ಲು ಎಸೆಯುತ್ತಾರೆಂದು ನೀವೂ ಎಸೆಯಬಾರದು. ನಾನಾ, ನಿಮ್ಮ ಮಗಳ ಪುಣ್ಯವೇ ಕಡಿಮೆಯದೆಂದು ಈ ತುಂಬಿದ ಮನೆಗೆ ಶನಿ ಹಿಡಿಯಿತು. ಕೆಟ್ಟ ಕಾಲ ಬಂದವು. ನಿಮ್ಮ ಮಗಳು ಈ ಮನೆಗೆ ಬರುವ ಮೊದಲು ಇವರ ವ್ಯವಹಾರ ಭರದಿಂದ ನಡೆದಿತ್ತು. ಅವರ ಸರದಾರಿಕೆಯನ್ನೇಕೆ ಹೀಯಾಳಿಸುವಿರಿ ? ಸ್ವಂತ ಮಗಳ ದೈವವು ಕೆಟ್ಟದ್ದೆಂದು ಹೇಳಿರಿ. ಇಂದಿನವರಗೆ ನಾನು ಸುಖದಿಂದ ಜೀವಿಸಿದ್ದು, ದಿನಗಳೆದದ್ದು ಇವರ ಪುಣ್ಯದಿಂದಲೇ. ನಾನು ಅಭಾಗಿನಿ! ನಿಮ್ಮ ಮಗಳು ಅಭಾಗಿನಿ! ಹೊಲ ಮಾರಲು ಅವರಿಂದ ಆಗದಿದ್ದರೆ ಇಲ್ಲ. ಆಗುವದು ಆಗಲಿ! ಆದರೆ ಮನಸ್ಸನ್ನು ನೋಯಿಸಬೇಡಿರಿ. ಆಗುವದು ಆಗಿ ಹೋದೀತು; ಆದರೆ ಮುರಿದ ಮನಸ್ಸು ಮಾತ್ರ ಮುರಿದೇ ಹೋದಾವು! ಮನಸ್ಸು ಮುರಿದರೆ ಕೂಡದು, ಮುತ್ತು ಒಡೆದರೆ ಕೂಡದು, ಎಂಬುದನ್ನು ಮರೆಯಬೇಡಿರಿ. ಅವರ ಮನಸ್ಸನ್ನು ನೋಯಿಸಬೇಡಿರಿ. ನನ್ನಮುಂದೆ ಹೀಗೆಲ್ಲ ಮನಬಂದಂತೆ ಆಡಬೇಡಿರಿ. ಸ್ವಂತ ಮಗಳ ಮುಂದೆ ಅವಳ ಪತಿಯ ತಿರಸ್ಕಾರವನ್ನು ನೀವು ಮಾಡಲಾರಿರಿ. ಹೇಗಿದ್ದರೂ ಅವರು ನನ್ನ ಪತಿ! ನಮ್ಮದೇನಾಗುವದೋ

ಆಗಲಿ. ಅವರಾರದರೂ ಒಳ್ಳೆಯದಕ್ಕೇ ಮಾಡುತ್ತಾರೆ. ಮಕ್ಕಳು ಮರಿಯ ಅಕಲ್ಯಾಣವನ್ನು ಅವರೇನು ಬಯಸುವರೇ ? ದೇವರಿಗೆ ಎಲ್ಲವೂ ತಿಳಿಯುತ್ತದೆ. ಅವನೇ ಎಲ್ಲರಿಗೆ ಬುದ್ಧಿಯನ್ನು ಕೊಡುತ್ತಾನೆ. ನಾನಾ, ಸುಮ್ಮನೆ ಬೈಯ್ದು ಹೋಗುವದಕ್ಕಾಗಿ ಮತ್ತೊಮ್ಮೆ ಈ ಗುಡಿಸಿಲಿನಲ್ಲಿ ಕಾಲಿಡಬೇಡಿರಿ. ಮಗಳಿಗೂ ಅವಳ ಗಂಡನಿಗೂ ಆಶೀರ್ವಾದವನ್ನು ಕೊಡುವದಕ್ಕೆ ಮಾತ್ರ ಬರಬಹುದು. ಎರಡು ಸವಿಮಾತುಗಳನ್ನಾಡಲು ಬರಬಹುದು. ನಿಮ್ಮ ಆಶೀರ್ವಾದ ಮತ್ತು ಪ್ರೇಮವು ಬೇಕು, ಬೇರೆ ಯಾವುದೂ ಬೇಕಾಗಿಲ್ಲ. ಹೀಗೆ ಕಟುವಾಗಿ ನುಡಿಯುವೆನೆಂದು ಸಿಟ್ಟಾಗಬೇಡಿರಿ. ಸರದಾರರ ಮನೆತನ ! ನಾನಾ, ಸರದಾರ ಮನೆತನವೆಂಬುದೇನು ಸುಳ್ಳೇ ? ಇಡೀ ಊರು ಮನ್ನಿಸುತ್ತಿದ್ದಿಲ್ಲವೇ ? ನೀವೇ ನೋಡಿರಲಿಲ್ಲವೇ ? ಎಲ್ಲ ದಿನಗಳೂ ಒಂದೇ ಬಗೆಯಾಗಿರುವದಿಲ್ಲ. ಈ ವರುಷ ಎಲ್ಲ ಮಾವಿನಕಾಯಿ ಉದುರಿ ಹೋದರೂ ಮುಂದಿನವರ್ಷ ಮತ್ತೆ ಬಿಟ್ಟೇ ಬಿಡುತ್ತವೆ. ಒಣಗಿ ಹೋದ ಮರವು ಮತ್ತೆ ಚಿಗುರಿಕೊಳ್ಳುತ್ತದೆ. ನಾನಾ, ಸಿಟ್ಟಾಗಬೇಡಿರಿ. ನಾನು ನಿಮ್ಮ ಕಾಲಿಗೆ ಬೀಳುತ್ತೇನೆ. ನಮ್ಮ ದೈವವಿದ್ದಂತೆ ಆಗುವದು. ಆದರೆ ನೀವು ಇನ್ನು ಮುಂದೆ ಅವರಿಗೆ ಚುಚ್ಚು ಮಾತುಗಳನ್ನಾಡಬೇಡಿರಿ. ಇಷ್ಟೇ ನನ್ನ ಬೇಡಿಕೆ ಇದೆ." ಹೀಗೆ ನುಡಿದು ತಾಯಿಯು ನಿಜಕ್ಕೂ ನಾನಾ ಅವರ ಕಾಲು ಬೀಳಲು ಹೋದಳು.

"ಮಗಳೇ, ಏಳು. ನಿನ್ನ ಇಚ್ಛೆಯಂತೆಯೇ ಆಗಲಿ. ಇದೋ ಹೊರಟು ಬಿಟ್ಟೆ. ಇಂದಿನಿಂದ ನಿಮ್ಮ ಅಂಗಳಕ್ಕೆ ಕಾಲಿಟ್ಟರೆ ಕೇಳು. ತಿಳಿಯಿತೇ ? ನನ್ನದೇನು ಕಾಯ್ದುನಿಂತಿದೆ ? " ಎಂದು ನಾನಾ ಎದ್ದರು.

"ನಾನಾ, ಹೀಗೆ ನನ್ನ ಮಾತಿನ ಅಪಾರ್ಥ ಮಾಡಿಕೊಳ್ಳಬೇಡಿರಿ. ಬೇಸರ ಮಾಡಿಕೊಳ್ಳಬೇಡಿರಿ. ಬರುತ್ತಾ ಇರಿ. ನಿಮಗೆ ನಾನು ಹುಡುಗಿಯು ಹೇಗೋ ಹಾಗೆ ಅವರಿಗೆ ಹೆಂಡತಿ. ನಾನು ಎಲ್ಲರ ಹಿತನೋಡಬೇಕಾಗುತ್ತದೆ. ನನಗೆ ನೀವೂಬೇಕು. ಅವರೂಬೇಕು. ನಾನಾ, ಶಿರಿಯು ನಮ್ಮ ಕೈಬಿಟ್ಟಿತು, ಸಹೋದರರು ನಮ್ಮನ್ನು ದೂಡಿಕೊಟ್ಟರು, ನೀವೂ ನಮ್ಮ ಕೈ ಬಿಡುವಿರಾ ? ನಾನಾ, ನೀವು ಬರುತ್ತಾ ಇರಿ. ಪ್ರೀತಿಯಿಂದ ನಮ್ಮನ್ನು ಕಾಣಲು ಬನ್ನಿರಿ. ನಿಮ್ಮ ಮಗಳನ್ನು ನೋಡಲಿಕ್ಕೆಂದು ಬಂದು ಹೋಗಿ

ಮಾಡಿರಿ. ಬರುವಿರಲ್ಲವೇ ? ” ತಾಯಿಯ ಕಂಠ ಬಿಗಿದುಬಂದಿತು.

“ ಇಲ್ಲ, ನಾನಿನ್ನು ಬರತಕ್ಕವನಲ್ಲ. ನನ್ನಮಾತಿಗೆ ಬೆಲೆಯಿಲ್ಲದಲ್ಲಿ ಏಕೆ ಬರುವದು ? ” ಎಂದುನುಡಿದು ನಾನಾ ಹೊರಟುಹೋದರು.

“ ನಾನಾ, ನಿಮ್ಮ ಹೊಟ್ಟೆಯ ಮಗಳಿಗಿಂತ ತುಟಿಯಿಂದ ಹೊರಟ ಶಬ್ದಗಳೇ ಹೆಚ್ಚಿನವೇ ? ಹೋದರು ! ಏನುಮಾಡುವದು ? ಹೋಗಲಿ. ನೀವಿನ್ನು ಸ್ವಸ್ಥವಾಗಿ ಮಲಗಿಕೊಳ್ಳಿರಿ. ತಲೆಗೆ ಎಣ್ಣೆತಿಕ್ಕಿಕೊಡಲೇನು ? ಅಂದರೆ ಸಮಾಧಾನವಾಗಬಹುದು. ” ತಾಯಿ ತಂದೆಯವರಿಗೆ ಹೇಳಿದಳು.

“ ಈ ತಲೆತಿರುಕನ •ತಲೆಗೆ ಎಣ್ಣೆ ಏತಕ್ಕೆ ? ನೀನು ಹೋಗು ಒಳಗೆ. ನಾನೊಬ್ಬನೇ ಇಲ್ಲಿ ಬಿದ್ದುಕೊಂಡಿರುತ್ತೇನೆ ” ತಂದೆ ಖಿನ್ನಮನಸ್ಕರಾಗಿ ನುಡಿದರು.

ಪಾಪ ! ಬಡತಾಯಿ ! ಎದ್ದು ಒಳಗೆಹೋದಳು. ಪುಟ್ಟ ಪುರುಷೋತ್ತಮ ಮಲಗಿಕೊಂಡಿದ್ದ. ಅವನ ಹೊದಿಕೆಯನ್ನು ಸರಿಪಡಿಸಿ, ಅವಳು ಹೋದಳು. ಎಲ್ಲಿಗೆ ? ಎಲ್ಲಿಗೇನು ? ಅಂಗಳದಲ್ಲಿ ತುಳಸೀಕಟ್ಟೆಯಹತ್ತರ ಹೋಗಿ ತುಳಸಿಯಮುಂದೆ ಕಣ್ಣೀರು ಹರಿಸುತ್ತ ಕುಳಿತುಕೊಂಡಳು ಬದಿಯಲ್ಲಿದ್ದ ಪ್ರಚಂಡವಾದ ಮಾವಿನ ಮರವು ಗಂಬೀರವಾಗಿ ನಿಂತುಕೊಂಡಿತ್ತು. ಗಾಳಿ ಸ್ತಬ್ಧವಾಗಿತ್ತು. ಆಕಾಶವೂ ಸ್ತಬ್ಧವಾಗಿತ್ತು. ನನ್ನ ತಾಯಿ ಅಳುತ್ತ ಕುಳಿತಿದ್ದಳು. ಸಾಲದ ಚಿಂತೆಯು ತಾಯಿಯನ್ನು ಅಳಿಸುತ್ತಿದ್ದಿತು. ನನ್ನ ತಾಯಿಯನ್ನು ಹಗಲಿರುಳು ಸಾಲವು ಬಾಧಿಸುತ್ತಿತ್ತು.

**ರಾತ್ರಿ : ೪೫**

## : : ತಾಯಿಯ ಚಿಂತಾಮಯ ಜೀವನ

ಶಿಕ್ಷಣ ಪಡೆಯುವದಕ್ಕಾಗಿ ನಾನು ಒಂಥ ಸಂಸ್ಥಾನಕ್ಕೆ ಹೋಗಿದ್ದೆನು. ಆದರೆ ಅಲ್ಲಿಂದ ಸ್ಥಳಾಂತರಿಸಬೇಕೆಂದು ದೇವರ ಇಚ್ಛೆ ಇತ್ತು. ನಾನು ಹೇಗೆ ಹೇಗೋ ಅಲ್ಲಿ ದಿನಗಳೆಯುತ್ತಿದ್ದೆ. ಅದನ್ನೆಲ್ಲ ಈಗ ಹೇಳುತ್ತ ಕೂಡುವದಿಲ್ಲ. ಎಲ್ಲ ಬಡವರ ಪಾಡು ಅದೇ ಬಗೆಯದಾಗಿರುತ್ತದೆ. ತಾಯಿಯ ನೆನವು

ಗಳನ್ನು ಮಾತ್ರ ನಾನು ಹೇಳುವದಿದೆ. ಆದಕ್ಕೆ ಸಂಬಂಧಪಟ್ಟ ವಿಷಯಗಳನ್ನಷ್ಟೆ ಹೇಳುವೆನು.

ಪುಣೆಯಲ್ಲಿ ನನ್ನ ಅಬಚಿಯ ಹತ್ತಿರ ನಮ್ಮ ಚಿಕ್ಕ ತಮ್ಮ ಸದಾನಂದ ಇರುತ್ತಿದ್ದ. ಮೊದಲಿನ ಯಶವಂತನೇ ಮತ್ತೆ ತಾಯಿಯ ಹೊಟ್ಟೆಯಲ್ಲಿ ಬಂದಿದ್ದಾನೆಂದು ನಮಗೆಲ್ಲರಿಗೆ ಅನಿಸುತ್ತಿತ್ತು. ಆದರೆ ಪುಣೆಯಲ್ಲಿ ಗಂಟು ಬೇನೆಗೆ ಒಮ್ಮಿಂದೊಮ್ಮೆ ಸದಾನಂದ ಬಲಿಯಾದ. 'ದತ್ತ ಗುರು, ದತ್ತ ಗುರು' ಎನ್ನುತ್ತ ಹೊರಟು ಹೋದ. "ಅದೋ ನೋಡಿರಿ, ನನ್ನನ್ನು ಕರೆಯುತ್ತಾರೆ, ನಾನು ಹೋಗುತ್ತೇನೆ" ಎಂದೆನ್ನುತ್ತ ಹೋಗಿಬಿಟ್ಟ.

ನಾನು ಔಂಧದಲ್ಲಿದ್ದೆ. ಅಲ್ಲಿಯೂ ಗಂಟುಬೇನೆ ತಲೆ ಎತ್ತಿತು. ಬಂಗಾರದಂಥ ಮಗ ಸತ್ತುಹೋದ. ಇನ್ನೊಬ್ಬ ದೂರ ಒಬ್ಬನೇ! ಅಲ್ಲಿಯೂ ಗಂಟುಬೇನೆ ಆರಂಭವಾದದ್ದನ್ನು ಕೇಳಿ ನಮ್ಮ ತಾಯಿಯ ಜೀವ ಕೆಳಗೆ ಮೇಲೆ ಆಗ ಹತ್ತಿತು. ಸದಾನಂದನ ಮರಣದ ದುಃಖ ಇನ್ನೂ ಅಳಿಸಿರಲಿಲ್ಲ. ಎಷ್ಟುದಿವಸಗಳಾದರೂ ಅವಳ ಕಣ್ಣೀರು ಆರಿರಲಿಲ್ಲ. ಅವಳ ದುಃಖ ಕಡಿಮೆಯಾಗುವಷ್ಟರಲ್ಲಿ ನನ್ನ ಚಿಂತೆ ಅವಳನ್ನು ದಹಿಸತೊಡಗಿತು. ಅವಳ ಜೀವನ ಚಿಂತಾಮಯವಾಗಿದ್ದಿತು.

ಪ್ಲೇಗಿನ ನಿಮಿತ್ತವಾಗಿ ಔಂಧದ ಶಾಲೆ ಮುಚ್ಚಲಾಯಿತು. ಪರಊರಿನ ವಿದ್ಯಾರ್ಥಿಗಳು ಹೊರಟು ಹೋಗಬೇಕೆಂದು ಅಪ್ಪಣೆ ಹೊರಟಿತು. ನಾನೆಲ್ಲಿಗೆ ಹೋಗುವುದು? ಬಳಿಯಲ್ಲಿ ಹಣವಾದರೂ ಎಲ್ಲಿತ್ತು? ನಾನು ನನ್ನಲ್ಲಿರುವ ಕಂಬಳಿಯನ್ನು ಮಾರಿದೆ. ಕೆಲವು ಒಳ್ಳೆ ಪುಸ್ತಕಗಳನ್ನು ಮಾರಿದೆ. ಹಾಗು ಹೀಗೂ ಮಾಡಿ ಎರಡು ರೂಪಾಯಿ ಕೂಡಿಸಿ ಔಂಧ ಬಿಟ್ಟು ಹೊರಟೆ. ಎರಡು ಮೂರು ತಿಂಗಳು ಶಾಲೆ ಮುಚ್ಚಿಕೊಂಡೇ ಇರುವ ಲಕ್ಷಣಗಳಿದ್ದವು.

ನಾನು ಹರ್ಣೆ ಬಂದರದಲ್ಲಿ ಇಳಿದೆ. ಬಂಡಿಯನ್ನು ಗೊತ್ತು ಮಾಡಿಕೊಂಡು ಪಾಲಗಡಕ್ಕೆ ಬಂದೆ. ನಸುಕಿನಲ್ಲಿಯೇ ನಾನು ಗಾಡಿಯಿಂದ ಇಳಿದದ್ದು. ಆಲದ ಗಿಡದ ಮೇಲೆ ಬಂದು ಕುಳಿತ ಗರುಡಪಕ್ಷಿಯು ಗಟ್ಟಿಯಾಗಿ ಒದರುತ್ತ ಊರನ್ನು ಎಚ್ಚರಿಸುತ್ತಿತ್ತು. ಕೆಲವೆಡೆಯಲ್ಲಿ ಉದಯರಾಗಗಳೂ, ಕೆಲವು ಕಡೆಯಲ್ಲಿ ವೇದಪಠಣವೂ ಕೇಳಿಬರುತ್ತಿತ್ತು. ನಾನು ಗಾಡಿಯವನಿಗೆ ಬಾಡಿಗೆ ಹಣ ಕೊಟ್ಟು ನಮ್ಮ ಅಂಗಳವನ್ನು ಪ್ರವೇಶಮಾಡಿದೆ. ನನ್ನನ್ನು

ಕಂಡು ತಾಯಿಗೆಲ್ಲಿ ಸದಾನಂದನ ನೆನಪಿನಿಂದ ದುಃಖ ಉಕ್ಕಿ ಬರುವದೋ ಎಂದು ನನಗೆ ಭಯವೆನಿಸಿತು. ಮೆಲ್ಲಮೆಲ್ಲನೆ ನಾನು ಅಂಗಳಕ್ಕೆ ಬಂದೆ. ಅಂಗಳದಿಂದ ಪಡಸಾಲೆಗೆ ಕಾಲಿಟ್ಟೆ. ತಾಯಿ ಮನೆಯಲ್ಲಿ ಮಜ್ಜಿಗೆ ಮಾಡುತ್ತಿದ್ದಳು. ಮಜ್ಜಿಗೆ ಕಡೆಯುತ್ತಲೇ ಶಾಂತ ರೀತಿಯಿಂದ ಕೃಷ್ಣನ ಹಾಡನ್ನು ಹೇಳುತ್ತಿದ್ದಳು. ಎಷ್ಟು ಮಾಧುರ್ಯ ತುಂಬಿದ್ದಿತಾಹಾಡಿನಲ್ಲಿ!

ಬಾರೋ ಬಾರೋ ಗೋಪಾಲಕೃಷ್ಣ ನನ್ನ ಮನೆಗೆ ।
ಕಾಮ ಕ್ರೋಧ ಲೋಭ ಮೋಹ ಮದ ಮತ್ಸರಗಳನುಳಿದು ।
ಸೋಮಾ ನಿನ್ನ ಪಾವನವಾದ ಪಾದವನ್ನು ಪಿಡಿದುಕೊಂಬೆ ॥
ಬಾರೋ ಬಾರೋ ॥
ಭಾವವೆಂಬುವ ಬೆಣ್ಣೆಯ ಮುದ್ದಿ, ಸೇವಾ ಸಕ್ಕರೆಯಲ್ಲಿ ಬೆರೆಸಿ ।
ಭಕುತಿಯೆಂಬುವ ಮಜ್ಜಿಗೆ ಸುರಿದು, ಸಜ್ಜುಮಾಡಿ ನೀಡುವೆ ನಿನಗೆ॥
ಬಾರೋ ಬಾರೋ ॥

ನಾನು ಪಡಸಾಲೆಯಲ್ಲಿ ಹಾಡನ್ನು ಕೇಳುತ್ತ ನಿಂತುಬಿಟ್ಟೆ. ಬಾಗಿಲವನ್ನು ದೂಡುವ ಧೈರ್ಯವಾಗಲಿಲ್ಲ. ಆದರೆ ಎಷ್ಟು ಹೊತ್ತು ಹಾಗೇ ನಿಲ್ಲಬಹುದು? ಕೊನೆಗೊಮ್ಮೆ ಬಾಗಿಲು ತಟ್ಟಿದೆ.

"ಯಾರದು?" ತಾಯಿ ವಿಚಾರಿಸಿದಳು.

"ನಾನು, ಶ್ಯಾಮ"

"ಶ್ಯಾಮಾ, ಬಂದೆಯಾ ಮಗನೆ? ನಿಲ್ಲು, ಬಾಗಿಲು ತೆಗೆಯುತ್ತೇನೆ" ಎಂದೆನ್ನುತ್ತ ಧಾವಿಸಿ ಬಂದು ತಾಯಿ ಬಾಗಿಲ ತೆರೆದಳು. ತಾಯಿ ನನ್ನನ್ನು ಎದೆಗೆ ಅವಚಿಕೊಂಡಳು. "ದೇವರಿಗೆ ನಮಸ್ಕಾರ ಮಾಡು. ನಾನು ನೈವೇದ್ಯಕ್ಕೆ ಮೊದಲು ಬೆಲ್ಲ ಇಡುತ್ತೇನೆ. ಕುಳಿತುಕೋ. ನಿನ್ನ ದಾರಿಯನ್ನು ಎಷ್ಟು ಕಾಯುತ್ತಿದ್ದೆ ಬಲ್ಲೆಯಾ? ಒಬ್ಬನನ್ನಂತೂ ದೇವರು ಒಯ್ದುಬಿಟ್ಟ. ಎರಡನೆಯವನಾದರೂ ಕಣ್ಣಿಗೆ ಬೀಳುವನೋ ಇಲ್ಲವೋ ಎನಿಸಿತ್ತು" ಹೀಗೆನ್ನುವಾಗ ತಾಯಿಯ ಕಂಠ ಬಿಗಿದು ಬಂದಿತ್ತು. ನಾನೂ ಕಣ್ಣೀರು ಸುರಿಸಿದೆ.

ತಂದೆಯವರು ಬಹಿರ್ದೆಶೆಗೆ ಹೋಗಿದ್ದರು. ಅವರು ಅಂಗಳಕ್ಕೆ ಕಾಲಿಡುತ್ತಲೇ ತಾಯಿ ಮುಂದಾಗಿ ಹೋಗಿ ಹೇಳಿದಳು, "ನೋಡಿ, ನಮ್ಮ ಶ್ಯಾಮ ಬಂದ. ಇದೀಗ ಬಂದ." ಅವರು ಕಾಲು ತೊಳೆದುಕೊಂಡು ಒಳಗೆ

ಬಂದರು. ನಾನು ಅವರಿಗೆ ನಮಸ್ಕಾರ ಮಾಡಿದೆ. "ಶ್ಯಾಮಾ, ನಾನು ನಿತ್ಯವೂ ಗಣಪತಿಯ ಅಭಿಷೇಕ ಮಾಡುತ್ತಿದ್ದೆ. ಬಂದೆಯಾ? ಚೆನ್ನಾಗಿದ್ದೀಯಲ್ಲವೇ? ಸದಾನಂದನು ಹೊರಟು ಹೋದನು." ಎಂದು ನುಡಿದು ತಂದೆಯವರು ಧೋತರ ಚುಂಗಿನಿಂದ ಕಣ್ಣೊರಸಿಕೊಂಡರು.

"ಹೊರಗೆ ಇನ್ನೂ ಚಳಿ ಇದೆ. ತುಸು ಮಲಗಿಕೋ. ಅಲ್ಲಿಯೇ ಹಾಸಿಗೆ ಇದೆ ನೋಡು" ಎಂದು ತಾಯಿ ಹೇಳಿದಳು. ನಾನು ಮೈಮೇಲಿನ ಬಟ್ಟೆ ಕಳಚಿ ಇಟ್ಟೆ. ಬಾಯಿ ಮುಕ್ಕಳಿಸಿ ಬಂದು ತಾಯಿಯ ಹಾಸಿಗೆಯ ಮೇಲೆ ಮಲಗಿಕೊಂಡೆ. ತಾಯಿಯ ದುಪ್ಪಟಿಯನ್ನು ಹೊದ್ದುಕೊಂಡೆ. ಅಲ್ಲ-ತಾಯಿಯ ಪ್ರೇಮವನ್ನೇ ಹೊದ್ದುಕೊಂಡಿದ್ದೆ. ತಾಯಿಯ ಮಗ್ಗುಲಲ್ಲಿಯೇ ಮಲಗಿದ್ದೇನೆಂದು ನನಗನಿಸುತ್ತಿತ್ತು. ಅಂದು ನಸುಕಿನಲ್ಲಿ ತಾಯಿಯ ಹಾಸಿಗೆಯಮೇಲೆ ಮಲಗಿದ್ದು ಮತ್ತು ಅವಳ ದುಪ್ಪಟಿಯನ್ನು ಹೊದೆದುಕೊಂಡದ್ದು ಈಗಲೂ ನನ್ನ ನೆನಪಿಗೆ ಬರುತ್ತದೆ. ಎಷ್ಟೋ ಸಲ ನಾನು ಹಾಸಿಗೆಯಲ್ಲಿರುವಾಗ ತಾಯಿಯ ಬಳಿಯಲ್ಲಿಯೇ ಮಲಗಿದ್ದೇನೆಂದು ಭಾಸವಾಗುತ್ತದೆ. ಈ ಭಾವವು ನನ್ನ ಜೀವನದಲ್ಲಿ ತುಂಬಿಕೊಂಡಿದೆ. ತಾಯಿ ನನ್ನ ಮೈಮೇಲೆ ಕೈ-ಯಾಡಿಸುತ್ತಿದ್ದಾಳೆಂಬಂತೆ ತೋರಿ ಎಷ್ಟೋ ಸಲ ಆನಂದಿಸಿದ್ದೇನೆ.

ಮನೆಗೆಬಂದು ಹೊಸಬನಾಗಿದ್ದವನು ಹಳಬನಾದೆ. ಚಿಕ್ಕ ಪುರುಷೋತ್ತಮನು ಮನೆಯಲ್ಲಿ ಹಾಗು ಊರಲ್ಲಿಯ ಸಮಾಚಾರಗಳನ್ನು ಹೇಳುತ್ತಿದ್ದ. ನಾನು ಅವನಿಗೆ ನನ್ನ ಕಥೆಗಳನ್ನು ಹೇಳುತ್ತಿದ್ದೆ. ಔಂಧದಲ್ಲಿ ಬೆಳವಲ ಹಣ್ಣಿನ ಬಗ್ಗೆ ನನಗಾದ ಪೀಕಲಾಟವನ್ನು ತಿಳಿಸಿದೆ. ಬೆಳವಲಹಣ್ಣು ನಮ್ಮ ಕೊಂಕಣದಲ್ಲಿ ಇರುವದಿಲ್ಲ. ಬೆಳವಲ ಹಣ್ಣಿಗೆ ಮರಾಠಿಯಲ್ಲಿ ಕವಠ ಎನ್ನುತ್ತಾರೆ. ಕೊಂಕಣದಲ್ಲಿ ಕೋಳಿತತ್ತಿಗೆ ಕವಠ ಎನ್ನುತ್ತಾರೆ. ನಿನಗೆ ಕವಠ ಸೇರುತ್ತದೋ ಎಂದಾಗ ಒಮ್ಮೆಲೆ ನಾನು ಔಂಧದ ಗೆಳೆಯರಮೇಲೆ ರೇಗಿಕೊಂಡಿದ್ದೆ. ಆಗ ಅವರು ನಕ್ಕುಬಿಟ್ಟಿದ್ದರು. ಅಲ್ಲಿದ್ದಾಗ ನಾನೊಂದುಸಲ ಕೆರೆಯಲ್ಲಿ ಮುಳುಗಿದ್ದನ್ನು, ಅಲ್ಲಿಯ ಯಮಾಯೀ ಮಂದಿರವನ್ನು, ಅಡವಿಯಲ್ಲಿಯ ನವಿಲುಗಳನ್ನು, ಎಲ್ಲವನ್ನೂ ಕುರಿತು ಹೇಳುತ್ತಾ ಇದ್ದೆ. ಪಾಟೀಲವಾಡಿಯವನೊಬ್ಬನು ಹುಲ್ಲಿಗೆ ಹೋದಾಗ ಹಾವು ಕಡಿದು ಸತ್ತದ್ದನ್ನು, ಯಾರದೋ ಆಕಳು ಮೇಯುತ್ತಿರುವಾಗ ಮುಳ್ಳೆಲೆ ನುಂಗಿ ಪ್ರಾಣ ನೀಗಿದ್ದನ್ನು ಪುರುಷೋ

ತ್ತಮನು ಹೇಳಿದ. ಹೀಗೆ ಆ ಕತೆ ಈ ಕತೆ ಹೇಳುವದರಲ್ಲಿ ಎಷ್ಟೋ ದಿವಸ ಗಳು ಕಳೆದವು.

ಒಂದುತಿಂಗಳು ಮುಗಿಯುತ್ತ ಬಂದಿದ್ದರೂ ಔಂಧದ ಶಾಲೆ ತೆರೆಯಲಿಲ್ಲ. ನನ್ನ ತಂದೆಯವರಿಗೆ ಅದು ಸತ್ಯವೆಂದು ತೋರಲಿಲ್ಲ. ಅಲ್ಲಿ ನನಗೆ ತೊಂದರೆ ಯಾಗಿ ಕೈಬೀಸಿಕೊಂಡು ಬಂದಿರುವೆನೆಂದು ಅವರು ಭಾವಿಸಿದರು. ಈ ಸಂದೇಹ ಅವರಲ್ಲಿ ಬೆಳೆಯುತ್ತಿತ್ತು. ಒಂದುದಿವಸ ರಾತ್ರಿ ಪುರುಷೋತ್ತಮನ ಜೊತೆಗೆ ಮಾತನಾಡುತ್ತ ಹಾಸಿಗೆಯಲ್ಲಿ ಬಿದ್ದುಕೊಂಡಿದ್ದೆ. ಸಹೋದರ ರಿಬ್ಬರೂ ಒಂದೇ ಹೊದಿಕೆಯಲ್ಲಿ ಅಕ್ಕರೆಯಿಂದ ಮಾತನಾಡುತ್ತ ಮಲಗಿ ಕೊಂಡಿದ್ದೆವು. ಪ್ರೀತಿಯಿಂದ ಒಬ್ಬರಮೈ ಮೇಲೊಬ್ಬರು ಕೈ ಹಾಕಿಕೊಂಡು ಮಲಗಿದ್ದೆವು. ಕಥೆ ಕೇಳುತ್ತಿದ್ದ ಹಾಗೆ ಪುರುಷೋತ್ತಮನಿಗೆ ನಿದ್ದೆ ಹತ್ತಿತು. ನಾನೂ ನಿದ್ದೆಹೋದೆ.

ಆದರೆ ಒಮ್ಮೆಲೆ ಹೌಹಾರಿದವನಂತಾಗಿ ಎಚ್ಚತ್ತೆ. ಯಾವದೋ ಗುಡ್ಡದ ಮೇಲಿಂದ ಬಿದ್ದಹಾಗೆ ಕನಸು ಬಿದ್ದಿತ್ತು. ನಾನು ಎಚ್ಚತ್ತಾಗ ಮುಂದಿನ ವಾದ ವಿವಾದಗಳು ನನ್ನ ಕಿವಿಗೆ ಬಿದ್ದವು.

ತಾಯಿ ಚವಳೀಕಾಯಿ ನಾರು ತೆಗೆದು ಮುರಿದು ಇಡುತ್ತಿದ್ದಳು. ಮರು ದಿವಸದ ಪಲ್ಲೆಯ ಸಿದ್ಧತೆ ನಡೆಸಿದ್ದಳು. ತಂದೆಯವರೂ ಅದೇ ಕೆಲಸದಲ್ಲಿ ಸಹಾಯ ಮಾಡುತ್ತ ಕುಳಿತಿದ್ದರು. ಕೆಲಸ ನಡೆದಿರುವಾಗಲೇ ತಂದೆ ನುಡಿ ದರು, " ಅವನಿಂದ ಅಲ್ಲಿ ಕಲಿಯಲಿಕ್ಕಾಗದೆ ಬಂದಿದ್ದಾನೆ. ಸುಮ್ಮನೆ ಗಂಟು ಬೇನೆಯ ನೆಪ ಹೇಳುತ್ತಾನೆ. "

" ಅವನು ಸುಳ್ಳಾಡುವವನೆಂದು ತಿಳಿದಿರೇನು ? ಅಲ್ಲಿ ಅವನಿಗೆ ಕಷ್ಟ ವಿದ್ದರೂ ಅವನು ಹೋಗತಕ್ಕವನಿದ್ದಾನೆ. ಇಲ್ಲಿ ಬಿಟ್ಟೀಕೂಳು ತಿನ್ನಲಿಕ್ಕೇನೂ ಉಳಿಯಗೊಡುವದಿಲ್ಲ. " ತಾಯಿಯು ನನ್ನ ಪಕ್ಷಕಟ್ಟಿ ಮಾತನಾಡಿದಳು.

" ಪಟವರ್ಧನ ಗೋಪಾಳನು ರೈಲ್ವೆಯಲ್ಲಿ ಕೆಲಸ ಹಚ್ಚಿಕೊಡುತ್ತಿದ್ದ. ಒಳ್ಳೆಯದಾಗುತ್ತಿತ್ತು. ಈ ಕಾಲದಲ್ಲಿ ನೌಕರಿ ಸಿಗುವದೂ ದುಸ್ತರ. ನನ್ನ ಮಾತು ತಾಯಿ ಮಕ್ಕಳಿಗೆ ಸರಿಬೀಳಲಿಲ್ಲವಲ್ಲ ?" ತಂದೆ ಪುತ್ತೆ ನುಡಿದರು.

" ಇಷ್ಟರಲ್ಲಿ ಅವನು ನೌಕರಿ ಮಾಡಬಯಸುವದಿಲ್ಲ. ಅವನು ಕಲಿಯು ತ್ತಾನೆ. ಅವನು ಹೋಗುತ್ತಾನೆ. ಮನೆಹಿಡಿದು ಕೂಡುವದಿಲ್ಲ. ಭೂಮಿಗೆ

ಭಾರವಾಗಿ ಇರುವವನಲ್ಲ. ” ಎಂದು ತಾಯಿ ಹೇಳಿದಳು.

“ನಿನಗೆ ಯಾವಾಗಲೂ ನಿನ್ನಮಕ್ಕಳು ಒಳ್ಳೆಯವರೇ. ನನ್ನ ಮಾತು ಸತ್ಯವೆಂದು ಬೇಗನೆ ತಿಳಿದುಬಂದೀತು. ಅವನಿಗೆ ಅಲ್ಲಿ ಸರಿಯಾಗಿಲ್ಲವೆಂದೇ ಬಂದಿದ್ದಾನೋ ಇಲ್ಲವೋ ನೋಡುವಿಯಂತೆ. ” ತಂದೆ ತಮ್ಮ ಮಾತನ್ನೇ ಸಮರ್ಥಿಸುತ್ತಿದ್ದರು.

ನನಗೆ ಸಹಿಸದಾಯಿತು. ನಾನು ಹಾಸಿಗೆಯಮೇಲೆ ಎದ್ದು ಕುಳಿತು ಹೇಳಿದೆ. “ ಭಾವೂ, ನಾನೇನು ಕದ್ದು ಕೇಳುತ್ತಿರಲಿಲ್ಲ. ಒಮ್ಮೆಲೆ ಎಚ್ಚರವಾಯಿತು. ನಿಮ್ಮ ಮಾತು ಕಿವಿಗೆ ಬಿದ್ದವು. ನಾನು ನಾಳೆಯೇ ಇಲ್ಲಿಂದ ಹೊರಡುತ್ತೇನೆ. ಔಂಧದಲ್ಲಿ ಪ್ಲೇಗು ಇರಲಿ, ಬಿಡಲಿ. ನನ್ನಮೇಲೆ ನಂಬಿಗೆ ಇಲ್ಲವೆಂದಮೇಲೆ ನಾನೇಕೆ ಇಲ್ಲಿ ಇರಬೇಕು ? ನಾನು ಕೇವಲ ತಿನ್ನುವವಕ್ಕಾಗಿ, ನೊಣ ಜಾಡಿಸುತ್ತ ಕುಳಿತುಕೊಳ್ಳುವದಕ್ಕಾಗಿ ಇಲ್ಲಿಗೆ ಬಂದಿಲ್ಲ. ಬರುಹೋಗುವ ವೆಚ್ಚದ ತೊಂದರೆಗಾಗಿ ಪ್ಲೇಗು ಇದ್ದರೂ ನಾನು ಅಲ್ಲಿಯೇ ಇರಬೇಕೆಂದು ಮಾಡಿದ್ದೆ. ಆದರೆ ಪರಸ್ಥಳದ ವಿದ್ಯಾರ್ಥಿಗಳಿಗೆ ಹೋಗಲು ಎಲ್ಲರೂ ಒತ್ತಾಯ ಮಾಡಿದ್ದರಿಂದ ನಾನು ಬರಬೇಕಾಯಿತು. ನಾನು ನಾಳೆಯೇ ಹೋಗುತ್ತೇನೆ. ಅಮ್ಮಾ, ನಾನು ನಾಳೆಯೇ ಹೊರಡುತ್ತೇನೆ. ”

“ ಅವರ ಮಾತನ್ನು ಮನಸ್ಸಿಗೆ ಹಚ್ಚಿಕೊಳ್ಳಬೇಡ. ಶ್ಯಾಮಾ ಅಲ್ಲಿ ಪ್ಲೇಗು ಕಡಿಮೆಯಾದಮೇಲೆ ಹೋಗುವಿಯಂತೆ ಈ ಹುಚ್ಚಿಯ ಮಾತನ್ನಷ್ಟು ಕೇಳು. ” ಎಂದಳು ತಾಯಿ.

“ ನಾನು ನಿಲ್ಲಲಾರೆ. ನನ್ನನ್ನು ಕಳಿಸಿಕೊಡು. ಭಾವೂ, ಮತ್ತೊಮ್ಮೆ ಹತ್ತು ರೂಪಾಯಿ ಕೇಳಬೇಕಾಗಿದೆ. ಹೇಗಾದರೂ ಮಾಡಿರಿ. ತಾಯೀ, ಚಿಂತಿಸಬೇಡ. ಪಾರುಮಾಡಬೇಕೆಂದು ದೇವರ ಮನಸ್ಸಿನಲ್ಲಿದ್ದರೆ ಸಾವು ಎಂದಿಗೂ ಬರಲಾರದು. ಬದುಕಿಸಬೇಕೆಂದಿದ್ದರೆ ಎಂಥ ಭಾರಿ ಬೇನೆ ಇದ್ದರೂ ಬದುಕಿಸುವನು. ವಿಶಾಲವಾದ ಸಮುದ್ರದಿಂದಲೂ ರಕ್ಷಿಸಬಹುದು. ”

“ ನೀನೂ ಅವರ ಮಗನೇ ಅಲ್ಲವೇ ? ಹಟಮಾರಿತವನ್ನೇಕೆ ಬಿಡುವಿ ? ಹೋಗಪ್ಪಾ ಹೋಗು. ಎಲ್ಲಿಯಾದರೂ ಸುಖವಾಗಿರು ಅಂದರಾಯಿತು. ದೇವರು ಅಭಾಗಿನಿಯಾದ ನನ್ನ ಕಣ್ಣನ್ನೇಕೆ ಮುಚ್ಚುವದಿಲ್ಲವೋ ತಿಳಿಯಲಾಗಿದೆ. ಬಂಗಾರದಂಥ ಮಕ್ಕಳನ್ನು ಒಯ್ದು ನಮ್ಮನ್ನು ಅಳಹಚ್ಚುತ್ತಾನೆ. ”

ಎಂದು ತಾಯಿ ಅಳುತ್ತ ನುಡಿದಳು.

ರಾತ್ರಿಕಳೆದು ಹಗಲು ಬಂದಿತು. ನಾನು ತಾಯಿಗೆ ಹೇಳಿದೆ. " ನಾನು ಹೊರಡುವದನ್ನು ನಿರ್ಧರಿಸಿದ್ದೇನೆ. ಇಂದಿಲ್ಲದಿದ್ದರೂ ತಿಂಗಳಮೇಲಾದರೂ ಹೋಗಲೇ ಬೇಕಲ್ಲವೇ ? ನೀನು ಅಪ್ಪಣೆಕೊಡಮ್ಮ. "

ಕೊನೆಗೆ ತಾಯಿ ಅಪ್ಪಣೆ ಕೊಟ್ಟಳು. ಬೇರೆಯವರಮೇಲೆ ಒತ್ತಾಯ ಹೇರುವ ಸ್ವಭಾವ ಅವಳದಾಗಿರಲಿಲ್ಲ. ಶರಣಾಗತಿಯೇ ಅವಳ ಬಲವಾಗಿದ್ದಿತು. ಯಾವದೇ ಆತಂಕ ಅವಳು ಮಾಡುತ್ತಿರಲಿಲ್ಲ. ಅವಳ ಪ್ರೇಮವು ಬಂಧನವಾಗಿರಲಿಲ್ಲ. ಬಿಡುಗಡೆ ಹಾಗು ಸ್ವಾತಂತ್ರ್ಯಕ್ಕೆ ಎಡೆಕೊಡುತ್ತಿತ್ತು.

ತಂದೆಯುವರ ಮೇಲೆ ಸಿಟ್ಟಾಗಿ ನಾನು ಹೊರಟುನಿಂತಿದ್ದೆ. ತಾಯಿಗೆ ಅಳು ತಡೆಯದಂತಾಗಿತ್ತು. ಗಂಟುಬೇನೆಗೆ ಒಬ್ಬ ಮಗನು ಬಲಿಯಾಗಿದ್ದನು. ಇನ್ನೊಬ್ಬನು ಗಂಟುಬೇನೆ ಇದ್ದಲ್ಲಿಗೆ ನಡೆದಿದ್ದನು. ಆವಳೇನು ಮಾಡಬೇಕು? ತಂದೆ ಮಕ್ಕಳ ಜಗಳದಲ್ಲಿ ಅವಳು ಕಣ್ಣೀರು ಹರಿಸಬೇಕಾಗಿತ್ತು. ನಾನು ತಾಯಿಯ ಕಾಲಿಗೆರಗಿದೆ. ತಂದೆಯವರಿಗೂ ನಮಸ್ಕಾರಮಾಡಿ ಇಬ್ಬರಿಂದಲೂ ಆಶೀರ್ವಾದ ಪಡೆದುಕೊಂಡು ಹೊರಟೆ. ಅಭಾಗಿಯಾದ ಶ್ಯಾಮನು ತಾಯಿಯ ಮಾತನ್ನು ಕೇಳದೆ ಹೊರಟುಬಿಟ್ಟನು.

ನಾನು ಬಂಡಿಯನ್ನೇರಿದೆ. ಗೆಳೆಯರೇ, ನನ್ನದು ಅದೇ ತಾಯಿಯ ಕೊನೆಯ ದರುಶನವಾಗಿತ್ತು. ಆಮೇಲೆ ಬದುಕಿರುವ ತಾಯಿ ನನ್ನದೃಷ್ಟಿಗೆ ಬೀಳಲಿಲ್ಲ. ಅವಳ ಭಸ್ಮಮಯ ಮೂರ್ತಿಯನ್ನು ಕಡೆಗೆ ಸ್ಮಶಾನದಲ್ಲಿ ಕಂಡೆನು. ತಾಯಿಯ ಅದೇ ಕೊನೆಯ ಭೆಟ್ಟಿ, ಅದೇ ಕೊನೆಯ ಅಮೃತವಾಣಿಯೆಂಬ ಕಲ್ಪನೆ ನನಗೆ ಬಂದಿರಲಿಲ್ಲ. ಆದರೆ ಮಾನವನ ಇಚ್ಛೆಯೊಂದಿದ್ದರೆ ದೇವರ ಇಚ್ಛೆಯು ಬೇರೆಯೇ ಆಗಿರುತ್ತದೆಂಬ ಕಠೋರ ಸತ್ಯದ ಅನುಭವವು ನನಗಾಯಿತು.

ರಾತ್ರಿ : ೩೭

## : : ಎಣ್ಣೆ ಇದ್ದರೆ ಉಪ್ಪು ಇಲ್ಲ

ಇಂದಿನ ಹಂಜಿಗಳು ಚೆನ್ನಾಗಿಲ್ಲ. ಒಂದೇಸನನೆ ದಾರ ಹರಿಯುತ್ತಿದೆ. ಸರಿಯಾಗಿ ಅರಳೆ ಹಿಂಜಿಲ್ಲವೆಂದು ಕಾಣುತ್ತದೆ. ಗೋವಿಂದ ಹತ್ತಿ

ಯನ್ನು ನೀನು ಹಿಂಜಿದೆಯೇನು ? ” ಭಿಕ್ಕನು ವಿಚಾರಿಸಿದನು.

“ ಇಂದಿನ ಹಂಜಿ ಶ್ಯಾಮನವು. ಅವನು ಇಂದು ಹಿಂಜಿದ್ದಾನೆ. ” ಗೋವಿಂದನು ಹೇಳಿದನು.

ಇಷ್ಟರಲ್ಲಿ ರಾಮನು ಅಲ್ಲಿಗೆ ಬಂದನು. ಅವನು ಆ ಮಾತನ್ನು ಕೇಳಿ ನುಡಿದನು, “ ಇತ್ತೀಚೆಗೆ ಶ್ಯಾಮನ ಮನಸ್ಸು ದುಃಖಗೊಂಡಿದೆ. ಆ ದುಃಖ ಮಯ ಮನಸ್ಸು ಯಾವ ಕೆಲಸವನ್ನೂ ಚೆನ್ನಾಗಿ ಮಾಡಗೊಡುವದಿಲ್ಲ. ಕೈ-ಯಿಂದ ಚೆನ್ನಾಗಿ ಕೆಲಸವಾಗಬೇಕೆಂದಿದ್ದರೆ ಮನಸ್ಸು ಪ್ರಫುಲ್ಲವಾಗಿರಬೇಕು. ” ಎಂದು ರಾಮನು ನುಡಿದನು.

ಸುಪ್ರಸನ್ನವಾದ ಮನಸ್ಸೇ ಎಲ್ಲ ಸಿದ್ಧಿಗೂ ಕಾರಣವಾಗಿದೆಯೆಂದು ಸಂತ ತುಕಾರಾಮರವರು ಕೂಡ ಒಂದೆಡೆಗೆ ಹೇಳಿದ್ದಾರೆ.

“ ಶ್ಯಾಮನು ಎಲ್ಲಿದ್ದಾನೆ ಗೋವಿಂದಾ ? ” ರಾಮನು ಕೇಳಿದನು.

“ ಆಗಂತೂ ಅವರು ಮೇಲ್ಗಡೆ ಇದ್ದರು. ” ಭಿಕ್ಕನು ಹೇಳಿದನು.

“ ಅವರು ಆ ಐಲಾಬಾಯಿಯ ಕಡೆಗೆ ಹೋಗತಕ್ಕವರಿದ್ದರು. ಅವಳಿಗೆ ತುಂಬ ಕಾಹಿಲೆಯೆಂದು ಹೇಳುತ್ತಾರೆ. ” ಗೋವಿಂದನೆಂದ.

“ ಏನು ವಿಚಿತ್ರ ಹೆಸರು. ಐಲಾಬಾಯಿಯಂತೆ ! ಇದೆಂಥ ಹೆಸರಪ್ಪಾ?” ಭಿಕ್ಕನು ವಿಚಾರಿಸಿದನು.

“ ಐಲಾಬಾಯಿಯೆಂದರೆ ಅಹಿಲ್ಯಾಬಾಯಿ. ಅಹಿಲ್ಯೆ ಎಂಬುದರ ಅಪ ಭ್ರಂಶವಿದು. ಹೆಸರಿನಲ್ಲಿ ಹುದುಗಿರುವ ಅರ್ಥವನ್ನು ಕಂಡುಹಿಡಿಯಬೇಕಾಗು ತ್ತದೆ. ” ರಾಮನು ಉತ್ತರಿಸಿದನು. ಅವನು ಈ ರೀತಿ ಹೇಳುವಷ್ಟರಲ್ಲಿ ಶ್ಯಾಮನು ಬಂದನು.

“ ಏನು ಮಾಡುತ್ತೀರೋ ಗೋವಿಂದಾ ? ” ಶ್ಯಾಮನು ಕೇಳಿದನು.

“ ಏನೂ ಇಲ್ಲ. ಆ ಐಲಾಬಾಯಿಗೆ ಹೇಗಿದೆ ? ”

“ ಅವರು ಅವಳನ್ನು ಪಟ್ಟಣಕ್ಕೆ ಕಳಿಸಿಕೊಟ್ಟರು. ”

“ ಗುಣವಾಗಬಹುದೇ ? ಪಾಪ ! ಮಕ್ಕಳು ಇನ್ನೂ ಸಣ್ಣವರಿದ್ದಾರೆ.” ಭಿಕ್ಕನು ನುಡಿದನು.

“ ಯಾರು ಬಲ್ಲರು ? ನಾವಾದರೂ ಏನು ಮಾಡುವದಿದೆ ? ” ಶ್ಯಾಮನೆಂದನು.

" ಭಿಕ್ಕೂ, ಇಂದು ನೀನು ಪಾತ್ರೆ ಚೆನ್ನಾಗಿ ಬೆಳಗಿಲ್ಲ. ನಿನ್ನ ಲಕ್ಷ ಬೇರೆ ಕಡೆಗಿತ್ತೆಂದು ಕಾಣುತ್ತದೆ. " ಪಾತ್ರೆಗಳು ಕಣ್ಣಿಗೆ ಬಿದ್ದದ್ದರಿಂದ ಶ್ಯಾಮನು ಕೇಳಿದನು.

" ಹತ್ತಿಯನ್ನು ಹಿಂಜುವಾಗ್ಗೆ ನಿಮ್ಮ ಲಕ್ಷ್ಯವು ಇದ್ದಂತೆಯೇ ! " ಭಿಕ್ಕನು ಉತ್ತರಿಸಿದನು.

" ಇಂದು ಹಂಜಿ ಚೆನ್ನಾಗಿ ಆಗಿರಲಿಲ್ಲವೇನು ? " ಶ್ಯಾಮನು ಕೇಳಿದನು.

" ಆದರಲ್ಲಿ ಕಸರು ತುಂಬಿತ್ತು. " ಗೋವಿಂದನೆಂದನು.

" ನನ್ನದಂತೂ ದಾರ ಹರಿಯುಲಿಲ್ಲವಲ್ಲ ? "

" ನಿಮ್ಮ ಹಂಜಿ ಮೊದಲಿನವು ಇರಬೇಕು. " ಎಂದನು ಭಿಕ್ಕ.

" ಇಂದು ತಯಾರಿಸಿದ ಹಂಜಿಗಳನ್ನೇ ನಾನು ಇಟ್ಟುಕೊಂಡಿದ್ದೆ. "

" ನಾನು ಬದಲಾಯಿಸಿದ್ದೆ. ನನ್ನಲ್ಲಿ ಒಳ್ಳೆಯ ಹಂಜಿ ಇದ್ದವು. ಅದನ್ನು ನಿಮ್ಮ ಪೆಟ್ಟಿಗೆಯಲ್ಲಿಟ್ಟು ನಾನು ಆ ಹಂಜಿಗಳನ್ನು ತೆಗೆದುಕೊಂಡಿದ್ದೆ. ನೀವು ರಾತ್ರಿ ನೂಲತಕ್ಕವರು. ನಿಮಗೆ ತೊಂದರೆಯಾಗಬಾರದೆಂದು ಹಾಗೆ ಮಾಡಿದ್ದೆ. " ಎಂದು ಗೋವಿಂದ ಹೇಳಿದ.

" ಶ್ಯಾಮಾ, ನೀನು ರಾತ್ರಿ ನಿದ್ದೆಗೆಡುವದು ಸರಿಯಲ್ಲ " ರಾಮು ಹೇಳಿದ.

" ನಿದ್ದೆ ಬರುವದಿಲ್ಲ ಏನು ಮಾಡಲಿ ? ಸುಮ್ಮನೆ ಬಿದ್ದುಕೊಂಡಿರುವ ದಕ್ಕಿಂತ ನೂಲು ತೆಗೆಯುತ್ತ ಕುಳಿತುಕೊಳ್ಳುತ್ತೇನೆ. " ಶ್ಯಾಮನು ಉತ್ತರಿಸಿದ.

" ನಿದ್ದೆ ಬಾರದೇನು ? ನಮಗಂತೂ ಚೆನ್ನಾಗಿ ನಿದ್ದೆ ಬರುತ್ತದೆ. " ಎಂದ ರಾಮು.

" ನೀವು ತುಂಬ ಕೆಲಸಮಾಡುತ್ತೀರಿ. ನಿದ್ದೆ ಬರಬೇಕಾದರೆ ಹಗಲು ತಪಸ್ಸು ಮಾಡಬೇಕಾಗುತ್ತದೆ. ಶರೀರವನ್ನು ಸವೆಸಬೇಕಾಗುತ್ತದೆ. "

" ನೀನೇನು ಕೆಲಸಮಾಡುವದಿಲ್ಲವೇನು ? ನಸುಕಿನಲ್ಲಿ ಬಾವಿಯ ಹತ್ತರ ಇಂದು ನೀನೇ ಕಸಗೂಡಿಸುತ್ತಿದ್ದೆಯಲ್ಲ ? "

" ಇಲ್ಲ ರಾಮೂ. ಗೋವಿಂದ ಮತ್ತು ನಾಮದೇವರು ನನಗೆಲ್ಲಿ ಕೆಲಸ ಮಾಡಲು ಬಿಡುತ್ತಾರೆ ? ನಾನು ಕೆಲಸ ಮಾಡಬಾರದೆಂದು ನಿಮಗೆ ತೋರುತ್ತದೆ. ನೀವು ಮಾತ್ರ ಪುಣ್ಯವಂತರಾಗಬೇಕೇನು ? ನಾನು ಮಾತ್ರ ಆಗ ಬಾರದೇ ? "

"ನಿನಗೆ ಮೈಯಲ್ಲಿ ಚೆನ್ನಾಗಿಲ್ಲವೆಂದು ಅವರು ಕೆಲಸ ಮಾಡಗೊಡುವದಿಲ್ಲ." ರಾಮನು ಸಮಾಧಾನದ ಮಾತು ಹೇಳಿದನು.

"ಜನರು ಬರಲಾರಂಭಿಸಿದರು. ಗಂಟೆ ಹೊಡೆಯಬೇಕಿನ್ನು" ಗೋವಿಂದನೆಂದನು.

ಗಂಟೆ ಬಾರಿಸಿತು. ಪ್ರಾರ್ಥನೆ ಮುಗಿದು ಶ್ಯಾಮನ ಕಥೆಗೆ ಮೊದಲಾಯಿತು:

ನಮ್ಮ ಮನೆಯಲ್ಲಿ ಎಲ್ಲ ಬಗೆಯಿಂದಲೂ ಅಡಚಣೆಯುಂಟಾಗಿತ್ತು. ಮನೆಯಲ್ಲಿ ಎಲ್ಲದರ ಕೊರತೆಯೇ ಕಂಡುಬರತ್ತಿತ್ತು. ಎಣ್ಣೆ ಇದ್ದರೆ ಉಪ್ಪಿಲ್ಲ, ಉಪ್ಪಿದ್ದರೆ ಮೆಣಸಿನಕಾಯಿಯಿಲ್ಲ. ಕೆಲವು ಸಲ ಒಲೆ ಹೊತ್ತಿಸಲಿಕ್ಕೆ ಕುಳ್ಳು ಇರುತ್ತಿರಲಿಲ್ಲ; ಕೆಲವು ಸಲ ಕಟ್ಟಿಗೆ ಇರುತ್ತಿರಲಿಲ್ಲ. ತಾಯಿ ಹಿತ್ತಲಿಗೆಹೋಗಿ ಒಣಗಿದ ಕಂಟಿಗಳನ್ನೋ ಒಣ ಮಾವಿನಎಲೆಗಳನ್ನೋ ತಂದು ಅನ್ನ ಬೇಯಿಸಬೇಕಾಗಿತ್ತು. ಕೆಲವು ಬಾರಿ ಒಗ್ಗರಣೆಗೆ ಎಣ್ಣೆ ಇರುತ್ತಿರಲಿಲ್ಲ. ತಾಯಿಯ ಕಣ್ಣೀರಿನ ಒಗ್ಗರಣೆಯೇ ಇರುತ್ತಿತ್ತು. ಅದರಿಂದಲೇ ಪಲ್ಲೆ ರುಚಿಯಾಗುತ್ತಿತ್ತೋ ಏನೋ! ಮರ್ಯಾದೆಯಿಂದ ದಿನಗಳೆಯುತ್ತಿದ್ದಳು. ತಾಯಿಯ ತಂದೆತಾಯಿ ಈಗ ಪಾಲಗಡದಲ್ಲಿರಲಿಲ್ಲ. ಪುಣೆ, ಮುಂಬೈಕಡೆಗೆ ಮಕ್ಕಳ ಬಳಿಗೆ ಹೋಗಿದ್ದರು. ತವರುಮನೆಗೆ ಬೀಗ ಹಾಕಿದ್ದರು. ತಾಯಿ ಮನೆಯಹೊರಗೆ ಕಾಲನ್ನೇ ಹಾಕುತ್ತಿರಲಿಲ್ಲ. ಅಶಕ್ತಳೂ ಆಗಿದ್ದಳು. ಮೇಲಾಗಿ ಹೊರಗೆ ಹೋಗಲು ನಾಚಿಕೆ. ಮನೆಯಲ್ಲಿಯೇ ಕುಳಿತು ಕಾಲಕಳೆಯುತ್ತಿದ್ದಳು.

ಆಗ ನಮ್ಮೂರಲ್ಲಿ ಯಾರೋಒಬ್ಬ ಪೆನ್ಶನ್‌ದಾರರು ಬಂದು ಇರತೊಡಗಿದ್ದರು. ಅವರು ನಮ್ಮ ಊರಿನವರೇನೂ ಅಲ್ಲ. ಆದರೆ ನಮ್ಮೂರಿನ ಹವೆ ಚೆನ್ನಾಗಿದ್ದುದರಿಂದಲೂ, ಬ್ರಾಹ್ಮಣರ ವಸತಿ ಹೆಚ್ಚಾಗಿದ್ದುದರಿಂದಲೂ, ಮೇಲಾಗಿ ಅವರು ನಮ್ಮೂರ ಗಣಪತಿಯ ಭಕ್ತರಾಗಿದ್ದುದರಿಂದಲೂ ಅಲ್ಲಿಯೇ ಬಂದು ವಾಸಮಾಡಿದ್ದರು. ನಮ್ಮ ಮನೆಯ ಹತ್ತಿರದಲ್ಲಿಯೇ ಒಂದು ಸುಂದರವಾದ ಬಂಗಲೆಯನ್ನು ಕಟ್ಟಿಸಿದ್ದರು.

ತಾಯಿಗೆ ಈ ಹೊಸಮನೆಯ ಪರಿಚಯವಾಯಿತು. ಪೆನ್ಶನ್‌ದಾರರ ಹೆಂಡತಿ ರಾಧಾಬಾಯಿ ದೊಡ್ಡಮನಸ್ಸಿನವರು. ತಾಯಿ ಆಗಾಗ್ಗೆ ಅವರ ಮನೆಗೆ ಹೋಗುತ್ತಿದ್ದಳು. ಅವರೂ ನಮ್ಮ ಮನೆಗೆ ಬರುತ್ತಿದ್ದರು. ಒಂದು

ದಿವಸ ಅವರಿಗೆ ತಾಯಿ ಹೇಳಿದಳು, “ ರಾಧಾಭಾಯಿ, ನಿಮ್ಮಲ್ಲಿ ಕೆಲಸವೇನಾದರೂ ಇದ್ದರೆ ಹೇಳಿರಿ. ಬೀಸುವ ಕೆಲಸವನ್ನೂ ಮಾಡಿಕೊಡುವೆನು. ನನಗೂ ತುಸು ಸಹಾಯವಾದೀತು. ”

ರಾಧಾಬಾಯಿ ಪಟ್ಟಣದಲ್ಲಿದ್ದು ಬಂದವರು. ನಗದು ಹಣಕೊಟ್ಟು ಬೀಸಿತರುವ ಪರಿಪಾಠವಿತ್ತು. ತಾಯಿಯ ಕಡೆಯಿಂದ ಬೀಸಿಸಿಕೊಳ್ಳಲು ಒಪ್ಪಿದರು. ತಾಯಿಯಲ್ಲಿ ಏನು ಸಾಮರ್ಥ್ಯವಿತ್ತು? ಆದರೆ ಮಾಡುವಳೇನು? ತಂದೆಯವರು ನಸುಕಿನಲ್ಲೆದ್ದು ಹೊರಗೆ ಹೋದೊಡನೆ ಬೀಸಲು ಕೂಡವಳು. ಶಾಲೆಯ ಹೊತ್ತಿನವರೆಗೂ ಪುರುಷೋತ್ತಮನು ಕೈ ಹಿಡಿಯುತ್ತಿದ್ದನು. ಆ ಮೇಲೆ ಅವಳೊಬ್ಬಳೇ ನಿಂತು, ತಡೆದು, ಬೀಸಿ ಮುಗಿಸುತ್ತಿದ್ದಳು. “ ಶ್ಯಾಮನಿಲ್ಲ; ಇದ್ದಿದ್ದರೆ ಎಲ್ಲ ಬೀಸಬಹುದಾಗಿತ್ತು” ಎಂದು ಅವಳ ಮನಸ್ಸಿನಲ್ಲಿ ಬರುತ್ತಿತ್ತು. ನಾನು ಸಿಟ್ಟಾಗಿ ಹೋದದ್ದನ್ನು ನೆನೆದು ಕಣ್ಣೀರು ಹರಿಸುತ್ತಿದ್ದಳು. ಬೀಸ ಬೀಸುತ್ತ ಕಣ್ಣುತುಂಬಿ, ಕಂಠತುಂಬಿ, ಹೃದಯತುಂಬಿ ಗೋಳಾಡುತ್ತಿದ್ದಳು. ಕೈಸೋತು ಹೋಗುತ್ತಿದ್ದವು. ಶ್ರಮಪಟ್ಟು ಬೀಸಿ ದೊರಕಿಸಿದ ಹಣದಿಂದ ಎಣ್ಣೆ, ಉಪ್ಪು ತರಿಸುತ್ತಿದ್ದಳು. ಕ್ಷಣಿಕ ಸಂಸಾರವನ್ನು ಸುಖದಿಂದ ನಡೆಸುತ್ತಿದ್ದಳು.

ದೀಪಾವಳಿ ಸಮೀಪಿಸುತ್ತಿದ್ದಿತು. ಮನೆಯಲ್ಲಿ ತುಸು ಹೆಚ್ಚು ಎಣ್ಣೆ ಬೇಕಾಗಿತ್ತು. ಎರಡಾದರೂ ಪಣತಿ ಹಚ್ಚಬೇಕಲ್ಲವೇ ? ಒಂದಾನೊಂದು ಕಾಲದಲ್ಲಿ ನಮ್ಮಮನೆಯಲ್ಲಿ ದೀಪಾವಳಿಯಲ್ಲಿ ನಿತ್ಯವೂ ಥಡೆಗಟ್ಲೆ ಎಣ್ಣೆ ವೆಚ್ಚವಾಗುತ್ತಿತ್ತು. ನೂರಾರು ಪಣತಿಗಳಿಂದ ನಮ್ಮ ವಠಾರವು ಬೆಳಗುತ್ತಿದ್ದಿತು. ತಾಯಿಗೆ ಈಗ ಅವೆಲ್ಲ ಕಣ್ಣಿಗೆ ಕಟ್ಟಿದಂತಾಗುತ್ತಿದ್ದವು. ದೀಪಾವಳಿಯನ್ನು ಹೇಗೆ ಆಚರಿಸುವದು ? ತಾಯಿ ರಾಧಾಬಾಯಿಗೆ ಹೇಳಿದಳು, “ ನಿಮ್ಮ ಬಟ್ಟೆ ಒಗೆಯುವ ಕೆಲಸವನ್ನೂ ನಾನು ಮಾಡುವೆನು. ಮತ್ತೇನಾದರೂ ಕೆಲಸವಿದ್ದರೂ ಹೇಳಬಹುದು. ”

ರಾಧಾಬಾಯಿಯ ಮಗಳು ತವರುಮನೆಗೆ ಬಂದಿದ್ದಳು. ಅವಳ ಹೆಸರು ಇಂದಿರೆ. ಹಡೆದು ಎದ್ದಬಳಿಕ ಅವಳು ಕಾಹಿಲೆ ಬಿದ್ದಿದ್ದಳು; ಬಹಳ ಅಶಕ್ತಳಾಗಿದ್ದಳು. ಹವೆ ಬದಲಾವಣೆಗೆಂದು ಅವಳು ತವರಿಗೆ ಬಂದಿದ್ದಳು. ರಾಧಾಬಾಯಿ ಹೇಳಿದರು, “ ಇಂದೂನ ಮೈಗೆ ಎಣ್ಣೆಹಚ್ಚಿಕೊಡುವಿರಾ ? ಅವಳ

ಕೂಸಿಗೆ ಎರೆದು–ಹೂಸಿ ಮಾಡುವಿರಾ ? ”

ತಾಯಿಯೆಂದಳು, “ಸಂತೋಷದಿಂದ ಮಾಡುವೆನು. ಈ ಕೆಲಸಮಾಡಲು ನನಗೆ ಒಳ್ಳೆ ಹುರುಪು. ಹಿಂದೆ ಬಹಳ ವರ್ಷಗಳ ಮೊದಲು ನಮ್ಮ ಚಂದ್ರಿ ಮನೆಗೆ ಬಂದಿದ್ದಳು. ಆಗ ನಾನೇ ಅವಳಿಗೆ ಎಣ್ಣೆ ಹಚ್ಚುತ್ತಿದ್ದೆ. ”

ತಾಯಿ ಇಂದೂನ ಶುಶ್ರೂಷೆಗಾಗಿ ನಿತ್ಯವೂ ನಸುಕಿನಲ್ಲಿಯೇ ಹೋಗ ತೊಡಗಿದಳು. ಬೀಸುವ ಕೆಲಸವನ್ನು ಮೂರೂಸಂಜೆಗೆ ಮಾಡತೊಡಗಿದಳು. ಮನಃಪೂರ್ವಕ ಕೆಲಸ ಮಾಡುವದೇ ತಾಯಿಯ ಸ್ವಭಾವವಾಗಿತ್ತು. ಕೂಸನ್ನು ಕಾಲಮೇಲೆ ಮಲಗಿಸಿಕೊಂಡು ಅದರ ಕೋಮಲವಾದ, ಮೆತ್ತನ್ನ ನೆತ್ತಿಯಮೇಲೆ ಎಣ್ಣೆಹಾಕಿ ‘ ತೋ ತೋ ತೋ ’ ಎಂದು ಮಮತೆಯಿಂದ ಕೈ ಸವರುತ್ತಿದ್ದಳು. ತಾಯಿಯ ವಾತ್ಸಲ್ಯಪೂರ್ಣ ಸೇವೆಯಿಂದಾಗಿ ಆ ಮಗು ಪುಷ್ಟವಾಗತೊಡಗಿತು. ಇಂದಿರೆಯ ಆರೋಗ್ಯವೂ ಸುಧಾರಿಸಿ ಮುಖದಮೇಲೆ ಒಂದು ಬಗೆಯ ತೇಜವು ಮೂಡಿತು.

ರಾಧಾಬಾಯಿ ತಾಯಿಯನ್ನು ವಿಶ್ವಾಸಪೂರ್ವಕ ಕಾಣತೊಡಗಿದರು. ತಿಂಗಳು ಮುಗಿಯುತ್ತಲೇ ತಾಯಿಯ ಕೈಮೇಲೆ ಎರಡು ರೂಪಾಯಿ ಇಟ್ಟರು. “ ಎರಡು ಏಕೆ ? ಒಂದು ಸಾಕಲ್ಲ ?” ತಾಯಿ ಹೇಳಿದಳು.

“ ಇರಲಿ ಯಶೋದಾಬಾಯಿ. ಹಬ್ಬಬಂದಿದೆ. ನೀವು ಮನಃಪೂರ್ವಕ ಮಾಡಿದ ಕೆಲಸದ ಬೆಲೆ ಕಟ್ಟುವದು ಸಾಧ್ಯವೇ ? ಹಾಗೆ ಬೆಲೆಕಟ್ಟಬಾರದು. ” ಎಂದರು ರಾಧಾಬಾಯಿ.

ತಾಯಿ ಮನೆಗೆ ಬಂದು ಕೈಮುಗಿದು ದೇವರ ಆಭಾರ ಮನ್ನಿಸಿದಳು. “ದೇವರೇ, ನನ್ನ ಮರ್ಯಾದೆ ಉಳಿಸುವವನು ನೀನೇ ” ಎಂದು ನುಡಿದಳು. ಎರಡು ರೂಪಾಯಿಗಳಲ್ಲಿ ತುಸು ಎಣ್ಣೆ, ತುಸು ತುಪ್ಪ ತರಿಸಿದಳು. ಒಂದು ಕಾಯಿ ತರಿಸಿದಳು. ಕೆಲವು ಕರಜೀಕಾಯಿ, ಚರೂಟಿ ಮಾಡಿದಳು. ದೀಪಾವಳಿಯ ನಾಲ್ಕುದಿವಸಗಳಲ್ಲಿ ಹೊರಗೆ ಎರಡು ಹಣತೆ ಉರಿಸಿದಳು. ಭಾವ ಬಿದಿಗೆಯ ದಿವಸ ಪುರುಷೋತ್ತಮನು ಇಂದಿರೆಯ ಮನೆಗೆ ಹೋಗಿದ್ದ. ಇಂದು ಅವನಿಗೆ ಆರತಿ ಬೆಳಗಿದಳು. ಪುರುಷೋತ್ತಮನು ನಾಲ್ಕಾಣೆ ಕಾಣಿಕೆ ಹಾಕಿದನು. ಪತಾಕ್ಷಿಗೆ ಬದಲು ತಾಯಿಯು ಪುರುಷೋತ್ತಮನಿಗೆ ಪೆಟ್ಲ ಕೊಳವೆ ಮಾಡಿಕೊಟ್ಟಿದ್ದಳು. ಅದನ್ನೇ ಸಂತೋಷದಿಂದ ಅವನು ಹಾರಿಸು

ತ್ತಿದ್ದನು. ಪತಾಕ್ಷಿಗಾಗಿ ಎಂದೂ ಹಟಹಿಡಿಯಲಿಲ್ಲ.

ಆದರೆ ಮೊದಲೇ ನೊಂದು, ಬೆಂದು ಹೈರಾಣಾದ ನನ್ನತಾಯಿ ಇಂಥ ಕಷ್ಟ ಜೀವನವವನ್ನು ಎಷ್ಟುದಿನ ಸಾಗಿಸಬಲ್ಲಳು ? ಅವಳಿಗೆ ಜ್ವರ ಬರುತ್ತಿತ್ತು. ತುಸು ದಮ್ಮೂ ಬರುತ್ತಿತ್ತು. ಆದರೂ ಸಂಸಾರ ರಥವನ್ನು ಎಳೆದುಕೊಂಡು ನಡೆದಿದ್ದಳು. ತುಳಸಿಯ ಮದುವೆ ಬಂದಿತು. ಪುರುಷೋತ್ತಮನು ತೋಟ ದಿಂದ ನೆಲ್ಲೀಕಾಯಿ, ಹುಣಸೇಕಾಯಿ ಮತ್ತು ಚೆಂಡಹೂ ತಂದನು. ತುಳ ಸಿಯ ಮದುವೆ ನೆರವೇರಿತು. ತುಳಸಿಗೆ ಅರಿಷಿಣ ಕುಂಕುಮವನ್ನೇರಿಸುವಾಗ್ಗೆ ತಾಯಿ ನುಡಿದಳು, " ತುಳಸಾದೇವಿ ! ಮರ್ಯಾದೆ ಇರುವಾಗಲೇ ನನ್ನ ಕಣ್ಣುಮುಚ್ಚಿಸಿ, ಮರ್ಯಾದೆ ಮತ್ತು ಸೌಭಾಗ್ಯದೊಂದಿಗೆ ನನ್ನನ್ನು ಕರೆದು ಕೊಂಡು ಹೋಗು. "

ರಾತ್ರಿ : ೩೭

## : : ಮಾನಗೇಡಿತನ

ಶ್ಯಾಮನು ಆರಂಭಿಸಿದನು:

ಕೊನೆಗೊಂದು ದಿವಸ ಮಾರವಾಡಿಯು ನಮ್ಮ ಮೇಲೆ ಫಿರ್ಯಾದು ಮಾಡಲು ನಿರ್ಧರಿಸಿದನು. ಕೋರ್ಟಿನಲ್ಲಿ ಫಿರ್ಯಾದೆ ನಮೂದಾಯಿತು. ಬಡ್ಡಿ ಮತ್ತು ಅಸಲು ಕೂಡಿ ನಾಲ್ಕು ಸಾವಿರಕ್ಕೆ ಅವನು ಫಿರ್ಯಾದು ಕೊಟ್ಟಿ ದ್ದನು. ಮೊಕದ್ದಮೆ ಆರಂಭವಾಯಿತು ಸಾವುಕಾರನ ಬೇಡಿಕೆಯು ಯೋಗ್ಯ ವಾದುದೆಂದು ಕೋರ್ಟು ಮನ್ನಿಸಿತು. ಇದ್ದುಬಿದ್ದುದನ್ನೆಲ್ಲ ಜಪ್ತು ಮಾಡಿ ಅದನ್ನು ಹರಾಜು ಮಾಡಬೇಕೆಂದು ತೀರ್ಪನ್ನು ಸಾರಲಾಯಿತು.

ಅಂದು ಊರಲ್ಲಿ ಡಂಗುರ ಸಾರಲಾಗುವದಿತ್ತು ! ತಾಯಿಗೆ ಎರಡು ದಿವಸ ದಿಂದ ಒಂದು ತುತ್ತಾದರೂ ಊಟ ಹೋಗಿರಲಿಲ್ಲ. ಕಣ್ಣಿಗೆ ನಿದ್ದೆ ಹತ್ತಿರಲಿಲ್ಲ. " ತಾಯೀ, ಜಗದಂಬೆ, ಈ ಕಣ್ಣುಗಳೆದುರಿನಲ್ಲಿಯೇ ಮರ್ಯಾದೆಯ ದಿವಾಳಿ ಯಾಗುವದಲ್ಲವೇ ? ಈ ಕಿವಿಗಳು ಆ ಕಠೋರ ಡಂಗುರವನ್ನು ಕೇಳಬೇಕೆ ? ನನ್ನ ಪ್ರಾಣವನ್ನು ತೆಗೆದುಕೋ. ತಾಯೀ, ಈ ಜೀವನ ನನಗೆ ಬೇಡ. "

ಎಂದು ಅವಳು ಪ್ರಾರ್ಥನೆ ಮಾಡುತ್ತಿದ್ದಳು.

ಪುರುಷೋತ್ತಮನು ಶಾಲೆಗೆ ಹೋಗಿದ್ದ. ಮನೆಯಲ್ಲಿ ತಾಯಿಗೆ ವಿಪರೀತ ಜ್ವರ ಬಂದು ಹಾಸಿಗೆಯ ಮೇಲೆ ಹೊರಳಾಡುತ್ತಿದ್ದಳು. ಅವಳು ಕಳವಳದಿಂದ ಒದ್ದಾಡುತ್ತಿದ್ದಳು.

• ಮುಂಜಾನೆ ೯ ಗಂಟೆಯ ಸಮಯ. ಹೊಲೆಯನು ಹಲಗೆ ಹೊಡೆಯುತ್ತ ಊರಲ್ಲಿ ಡಂಗುರ ಸಾರುತ್ತಿದ್ದನು. ಅವನು ಅಲ್ಲಲ್ಲಿ ನಿಂತುಕೊಂಡು " ಇಂದು ಮಧ್ಯಾಹ್ನ ಭಾವೂರಾಯರ ಮನೆಯು ಜಪ್ತಿ ಆಗುವದಿದೆ. " ಎಂದು ಒದರುತ್ತಿದ್ದನು. ಬೇರೆಯವರ ಮಾನಹಾನಿಯಿಂದ ಆನಂದಪಡುವಂಥ ಕೆಲವು ಜನರೂ ಇರುತ್ತಾರೆ. ಅವರಿಗೆ ಮಾತ್ರ ಇದರಿಂದ ಆನಂದವಾಗುತ್ತಿತ್ತು. ಮರ್ಯಾದೆಯುಳ್ಳ ಮನೆತನಸ್ಥರಿಗೆ ಇದನ್ನು ಕೇಳಿ ವಿಷಾದವಾಗುತ್ತಿತ್ತು.

ಹೊಲೆಯನು ಡಂಗುರ ಹೊಡೆಯುತ್ತ ಸಾಗಿದ್ದನು. ಶಾಲೆಯ ಹತ್ತಿರ ಬಂದು ಅವನು ಹಲಿಗೆ ಬಾರಿಸಿದನು. ಎಲ್ಲ ಹುಡುಗರೂ ಕೇಳತೊಡಗಿದರು. ಅವರು ಆ ಹೊಲೆಯನ ಡಂಗುರದ ಅಣಕು ಮಾಡುತ್ತ ನನ್ನ ತಮ್ಮನ ಬೆನ್ನು ಹತ್ತಿದರು. " ಪುರುಷ್ಯಾನ ಮನೆ ಜಪ್ತಿಯಾಗುವದು ಢುಮ್, ಢುಮ್, ಢುಮ್" ಹೀಗೆ ಅವರು ಹೇಳುತ್ತಲೆ ಪುರುಷೋತ್ತಮನು ಅಳುತ್ತಿದ್ದನು. ಅವನ ಕಣ್ಣಲ್ಲಿ ನೀರು ಬಂದುಬಿಡುತ್ತಿದ್ದವು. ಅವನು ಗುರುಗಳ ಹತ್ತಿರ ಹೋಗಿ, ಕೇಳಿದ, " ನಾನು ಮನೆಗೆ ಹೋಗಲಾ ? "

ಮಾಸ್ತರರೆಂದರು, " ಎಲ್ಲಿಗೆ ಹೋಗುತ್ತೀ ನಿಲ್ಲು. ಅರ್ಧ ಗಂಟೆಯಲ್ಲಿ ಶಾಲೆಯೇ ಬಿಡುತ್ತದೆ ! " ಗುರುಗಳಿಗೆ ನನ್ನ ತಮ್ಮನ ಹೃದಯದಲ್ಲಿರುವ ಕಳವಳವು ತಿಳಿಯಿತೋ ಇಲ್ಲವೋ ?

ಹತ್ತು ಗಂಟೆಗೆ ಶಾಲೆ ಬಿಟ್ಟಿತು. ತೋಳವು ಕುರಿಯನ್ನು ಹಿಂಸಿಸುವಂತೆ ಹುಡುಗರು ನನ್ನ ತಮ್ಮನನ್ನು ಪೀಡಿಸಿದರು. 'ಢುಮ್ ಢುಮ್ ಢುಮ್' ಎಂದು ಅವನ ಬೆನ್ನುಗುಂಟ ಸಾಗಿದ್ದರು. ಅವನು ಅಳುತ್ತಳುತ್ತ ಮನೆಗೆ ಬಂದು ತಾಯಿಯ ಬೆನ್ನು ಬಿದ್ದ.

" ' ನಿನ್ನ ಮನೆ ಜಪ್ತಿ ಮಾಡುತ್ತಾರೆ, ಸಾಮಾನು ಹರಾಜು ಮಾಡುತ್ತಾರೆ. ' ಎಂದು ಎಲ್ಲರೂ ಹೀಗೇಕೆ ನನ್ನ ಬೆನ್ನು ಹತ್ತಿದ್ದಾರಮ್ಮ ? ನಮ್ಮನ್ನು ಮನೆಬಿಟ್ಟು ಹೊರಗಟ್ಟುವರೇ ? ಅಮ್ಮಾ, ಏನಾಯಿತೆ ? " ಎಂದು ಪುರುಷೋ

ತ್ತವನು ತಾಯಿಗೆ ಕೇಳತೊಡಗಿದ.

" ಮಗೂ, ದೇವರ ಇಚ್ಛೆ. ನಾನಾದರೂ ಏನೆಂದು ಹೇಳಲಿ ?" ಎಂದು ಆ ಮಗುವನ್ನು ಎದೆಗೆ ಹಿಡಿದುಕೊಂಡು ಅವನಿಗೆ ಕಣ್ಣೀರಿನ ಸ್ನಾನ ಹಾಕಿದಳು. ತಾಯಿ ಮಕ್ಕಳು ಶೋಕಸಾಗರದಲ್ಲಿ ಮುಳುಗಿ ಹೋಗಿದ್ದರು. ಕೊನೆಗೆ ತಾಯಿ ಅವನಿಗೆ ಹೇಳಿದಳು, " ಹೋಗು ಮಗು. ಕೈಕಾಲು ತೊಳೆದುಕೋ. ಇಂದು ಇಂದಕ್ಕ ನಿನ್ನನ್ನು ಕರೆದಿದ್ದಾಳೆ. ರಾಧಾಬಾಯಿಯವರಲ್ಲಿಗೇ ಊಟಕ್ಕೆ ಹೋಗು. "

ಚಿಕ್ಕ ತಮ್ಮ ! ಅವನಿಗೇನು ತಿಳಿಯಬೇಕು ? ಅವನು ರಾಧಾಬಾಯಿಯ ಮನೆಗೆ ಊಟಕ್ಕೆ ಹೊರಟು ಹೋದ.

ಅಂದು ತಂದೆಯವರು ಊಟ ಮಾಡಲಿಲ್ಲ. ಅವರು ಸ್ನಾನ ಮಾಡಿದರು. ದೇವರಪೂಜೆ ಮಾಡಿದರು. ನಾಚಿಕೆಯಾಗುತ್ತಿದ್ದರೂ ದೇವಸ್ಥಾನಕ್ಕೆ ಹೋದರು. ಕೆಳಗೆ ಮುಖ ಹಾಕಿಕೊಂಡೇ ಹೋಗಿ ಬಂದರು. ಯಾವ ಊರಿನಲ್ಲಿ ಅವರು ಸರದಾರರಾಗಿದ್ದರೋ, ಯಾವ ಊರಿನಲ್ಲಿ ಅವರು ಪಂಚರಾಗಿದ್ದರೋ, ಯಾವ ಊರಿನಲ್ಲಿ ಅವರಿಗೆ ಮಾನ-ಸನ್ಮಾನಗಳು ದೊರೆಯುತ್ತಿದ್ದವೋ ಅಂಥ ಆ ಊರಿನಲ್ಲಿ ಇಂದು ನಾಯಿ ನರಿಗಳು ಕೂಡ ಅವರನ್ನು ಗಮನಿಸುತ್ತಿರಲಿಲ್ಲ ಗೌರವದಿಂದ ತಲೆ ಎತ್ತಿಕೊಂಡು ಅಡ್ಡಾಡುತ್ತಿದ್ದ ಊರಿನಲ್ಲಿ, ಅವರ ಪ್ರತಿಯೊಂದು ಮಾತಿಗೂ ಬೆಲೆಯಿದ್ದ ಊರಿನಲ್ಲಿ ಇಂದು ಚಿಕ್ಕ ಮಕ್ಕಳು ಕೂಡ ಅವರನ್ನು ತಿರಸ್ಕರಿಸತೊಡಗಿದ್ದರು. ಹೂವನ್ನು ಆರಿಸಿದ ಸ್ಥಳದಲ್ಲಿ ಶಗಣಿಯನ್ನು ಆರಿಸುವ ಹೊತ್ತು ನಮ್ಮ ತಾಯಿಗೆ ಬಂದಿತ್ತು. ಇಂದಿನವರೆಗೆ ತಾಯಿ ಹೇಗೋ ಮರ್ಯಾದೆಯಿಂದ ಕಾಲ ಕಳೆದಿದ್ದಳು. ಆದರೆ ದೇವರು ಇನ್ನೂ ಹೆಚ್ಚಿನ ಪರೀಕ್ಷೆ ಮಾಡಬೇಕೆಂದಿದ್ದ. ಮಾನದ ಅತ್ಯುನ್ನತ ಶಿಖರಗಳನ್ನೂ, ಅಪಮಾನದ ಆಳವಾದ ಕೊಳ್ಳಗಳನ್ನೂ ಎರಡೂ ಬಗೆಯ ದೃಶ್ಯಗಳನ್ನು ತಾಯಿಗೆ ದೇವರು ತೋರಿಸಬೇಕೆಂದಿದ್ದ. ಪೂರ್ಣ ಸುಖ ಹಾಗೂ ಪೂರ್ಣ ದುಃಖಗಳೆರಡರ ಪರಿಚಯವನ್ನೂ ಮಾಡಿಕೊಡಬೇಕಾಗಿತ್ತು. ಅಮಾವಾಸ್ಯೆ ಮತ್ತು ಹುಣ್ಣಿವೆ ಎರಡರ ದರುಶನವೂ ಆಗಬೇಕು. ಈ ಪ್ರಪಂಚದ ಪೂರ್ಣ ಜ್ಞಾನವನ್ನು ಆ ದೊಡ್ಡ ತಾಯಿ ನಮ್ಮ ಚಿಕ್ಕ ತಾಯಿಗೆ ಮಾಡಿಕೊಡುತ್ತಿದ್ದಳು.

ಮಧ್ಯಾಹ್ನದಲ್ಲಿ ಪೋಲೀಸರು, ಕಾರಕೂನರು, ತಲಾಠಿಗಳು, ಸಾವುಕಾರರು ಮತ್ತು ಸಾಕ್ಷಿದಾರರು ನಮ್ಮ ಮನೆಗೆ ಬಂದರು. ಮನೆಯಲ್ಲಿ ಅಡಿಗೆಗೆಂದು ನಾಲ್ಕು ಪಾತ್ರೆ ಬಿಟ್ಟು ಮಿಕ್ಕೆಲ್ಲ ಪಾತ್ರೆ ಪಣಿಗೆಗಳನ್ನು ಒಂದು ಕೋಣೆಯಲ್ಲಿ ಹಾಕಿ ಬೀಗ ಜಡಿದರು. ಮಂಗಳಸೂತ್ರದ ಹೊರತು ತಾಯಿಯ ಮೈಮೇಲೆ ಬೇರೆ ಆಭರಣಗಳು ಇರಲೇ ಇಲ್ಲ. ಮಿಕ್ಕ ಇದ್ದ ಬಿದ್ದ ಸಾಮಾನುಗಳನ್ನೆಲ್ಲ ಆ ಕೋಣೆಯಲ್ಲಿ ಹಾಕಿಬಿಟ್ಟರು. ದೊಡ್ಡಮನಸ್ಸು ಮಾಡಿ ನಮಗೆ ಇರುವದಕ್ಕಾಗಿ ಎರಡು ಕೋಣೆಗಳನ್ನು ಬಿಟ್ಟುಕೊಟ್ಟರು.

ಆ ಜನರೆಲ್ಲ ಹೊರಟು ಹೋದರು. ತಾಯಿ ಇದುವರೆಗೂ ನಿಂತುಕೊಂಡೇ ಇದ್ದಳು. ಬಾಳೆಯ ಗಿಡದ ಎಲೆಯಂತೆ ಅವಳು ಥರ ಥರ ನಡುಗುತ್ತಿದ್ದಳು. ಮೈಯಲ್ಲಿ ಜ್ವರದ ತಾಪ! ಹೃದಯದಲ್ಲಿ ಮನಸ್ತಾಪ! ಒಳಗಿನಿಂದಲೂ ಹೊರಗಿನಿಂದಲೂ ಅವಳು ಬೇಯುತ್ತಿದ್ದಳು. ಜನರೆಲ್ಲ ಹೋದ ಮೇಲೆ ತಾಯಿ ಧೊಪ್ಪನೆ ಕೆಳಗೆ ಬಿದ್ದಳು. 'ಅಮ್ಮಾ, ಅಮ್ಮಾ,' ಎಂದು ಪುರುಷೋತ್ತಮನು ಅಳತೊಡಗಿದನು. ತಂದೆಯವರು ತಾಯಿಯ ಬಳಿಗೆ ಹೋದರು. ಅವಳನ್ನು ಹಾಸಿಗೆಯ ಮೇಲೆ ಮಲಗಿಸಿದರು. ತುಸು ಹೊತ್ತಿನ ಮೇಲೆ ಅವಳಿಗೆ ಪ್ರಜ್ಞೆ ಬಂದಿದು. ಅವಳೆಂದಳು, "ಯಾವುದಕ್ಕಾಗಿ ಅಂಜುತ್ತಿದ್ದೆನೋ ಅದು ಕೊನೆಗೂ ಆಗಿ ಹೋಯಿತು. ಇನ್ನು ಜೀವಿಸುವದೂ, ಸಾಯುವುದೂ ಎಲ್ಲ ಒಂದೇ."

ರಾತ್ರಿ : ४೮

## : : ತಾಯಿಯ ಅಂತಿಮ ಬೇನೆ

ಶ್ಯಾಮನು ಕಾಹಿಲೆ ಬಿದ್ದಿದ್ದ. ಮೈಯಲ್ಲಿ ಜ್ವರವಿತ್ತು. ಕಣ್ಣು ಮುಚ್ಚಿಕೊಂಡು ಮಲಗಿದ್ದ, "ಶ್ಯಾಮಾ, ಕಾಲು ಹಿಸುಕಲಾ ?" ಗೋವಿಂದನು ವಿಚಾರಿಸಿದನು.

"ಬೇಡ. ನನ್ನ ಕಾಲು ಹಿಸುಕಿ ಏನು ಪ್ರಯೋಜನ? ನನ್ನ ಸೇವೆ ಮಾಡುವ ಅಗತ್ಯವಿಲ್ಲ. ನೀವು ನಿಮ್ಮ ಕೆಲಸವನ್ನು ಮಾಡಿರಿ. ಆ ಮೋಹನ

ಪಾಟೀಲನ ತಾಗೆಯನ್ನು ಬೇಗನೆ ನೇಯ್ದು ಕೊಡಿರಿ. ನನ್ನ ಹತ್ತರ ಕುಳಿತು ಕೊಂಡರೇನಾಗುವದು ? ರಾಮ ರಾಮ ಎನ್ನುತ್ತ ನಾನು ವಿಶ್ರಮಿಸುತ್ತೇನೆ. ”

“ ಶ್ಯಾಮಾ, ಬೇರೆ ಯಾರಾದರೂ ಕಾಹಿಲೆ ಬಿದ್ದರೆ ಅವರಲ್ಲಿಗೆ ಹೋಗಿ ಅವರ ಬಳಿ ಕುಳಿತುಕೊಳ್ಳುತ್ತೇವೆ. ನಮ್ಮ ಆಶ್ರಮದಲ್ಲಿ ಯಾರಾದರೂ ಕಾಹಿಲೆ ಬಿದ್ದರೆ ಅವರ ಬಳಿ ಕುಳಿತುಕೊಳ್ಳಬಾರದೇನು ? ” ರಾಮನು ಪ್ರಶ್ನಿಸಿದನು.

“ ಅಲ್ಲವೋ, ನನಗೇನು ಅಷ್ಟೊಂದು ಕಾಹಿಲೆಯೋ ? ನೀವು ನನ್ನನ್ನು ಪ್ರೀತಿಸುತ್ತೀರಿ. ನಾನು ಎಷ್ಟು ಉಂಡರೂ ಹೊಟ್ಟೆತುಂಬ ಉಂಡಿಲ್ಲವೆಂದೇ ನೀವು ಅನ್ನುವಿರಿ. ನಾನು ಒಳಿತಾಗಿದ್ದರೂ ನಿಮಗದು ಸತ್ಯವೆನಿಸುವದಿಲ್ಲ. ನಾನು ಚೆನ್ನಾಗಿದ್ದರೂ ನೀವು ಕಾಹಿಲೆ ಕೆಡವತಕ್ಕವರು. ಏನಾದರೂ ಜೇರು ಆದಾಗ ಬಂದು ಕುಳಿತುಕೊಳ್ಳಿರಿ. ನೀವು ಕೆಲಸಕ್ಕೆ ಹೋದರೇ ನನಗೆ ಸಮಾಧಾನ. ಗೋವಿಂದಾ, ಹೋಗು. ರಾಮಾ, ನೀನೂ ಹಿಂಜುವ ಕೆಲಸಕ್ಕೆ ನಡೆ. ” ಶ್ಯಾಮನು ಸ್ಪಷ್ಟವಾಗಿ ಹೇಳಿದ್ದರಿಂದ ಎಲ್ಲರೂ ಹೊರಟುಹೋದರು.

ಸಾಯಂಕಾಲ ಶ್ಯಾಮನಿಗೆ ಕೊಂಚ ಆರಾಮಾಗಿತ್ತು. ಹಾಸಿಗೆಯಲ್ಲಿಯೆ ಕುಳಿತುಕೊಂಡು ದೇವರ ಸ್ತೋತ್ರಗಳನ್ನು ಹೇಳುತ್ತಿದ್ದ. ಅಷ್ಟರಲ್ಲಿ ಅಲ್ಲಿ ಕೆಲವು ಚಿಕ್ಕ ಹುಡುಗರು ಕಾಣಿಸಿಕೊಂಡರು.

“ ಈಗೇಕೆ ಬಂದಿರೋ ? ” ಶ್ಯಾಮನು ಕೇಳಿದನು.

“ನೀವು ರಾತ್ರಿ ಕಥೆ ಹೇಳುವಿರಲ್ಲವೇ ?” ಅದರಲ್ಲೊಬ್ಬ ವಿಚಾರಿಸಿದನು.

“ ಓಹೋ, ಅವಶ್ಯ ಹೇಳುತ್ತೇನೆ. ನೀವೆಲ್ಲ ಬನ್ನಿ. ” ಶ್ಯಾಮನೆಂದ.

“ ನೋಡಿರಿ, ನಿಮಗಾಗಿ ನಾವು ಸುಂದರ ಸುಂದರವಾದ ಕಲ್ಲು–ಹರಳುಗಳನ್ನು ಆರಿಸಿ ತಂದಿದ್ದೇವೆ. ಆ ಗುಡ್ಡದಮೇಲೆ ನಾವು ತಿರುಗಾಡಲು ಹೋಗಿದ್ದೆವು. ” ಎಂದು ಹೇಳಿ ಒಬ್ಬ ಹುಡುಗನು ಹರಳಿನ ರಾಶಿಯನ್ನು ಶ್ಯಾಮನ ಮುಂದೆ ಹಾಕಿದನು.

“ ನಿಜಕ್ಕೂ – ಎಷ್ಟು ಸುಂದರವಾಗಿವೆ ಇವು ! ಕುಳಿತುಕೊಳ್ಳಿ, ಚಿತ್ರ ತಯಾರಿಸೋಣ. ನಾನು ಗಿಳಿಯನ್ನು ತಯಾರಿಸುತ್ತೇನೆ. ” ಎಂದು ಶ್ಯಾಮನು ಆ ಹರಳುಗಳಿಂದ ಗಿಳಿಯನ್ನು ತಯಾರಿಸತೊಡಗಿದನು. ಹುಡುಗರು ಒಂದೊಂದೇ ಹರಳು ಅವನ ಕೈಗೆ ಕೊಡುತ್ತಿದ್ದರು.

"ಇನ್ನು ಕೊಕ್ಕೆಗೆ ಒಂದು ಕೆಂಪು ಉದ್ದ ಹರಳು ಬೇಕಲ್ಲ?" ಎಂದು ಶ್ಯಾಮ ಹೇಳಿದ.

"ಇದೋ, ಈ ಹರಳು ಅದಕ್ಕೆ ಸರಿಹೋಗುತ್ತದೆ." ಎಂದು ನುಡಿದು ಒಬ್ಬ ಹುಡುಗನು ಒಂದು ಹರನ್ನು ಕೊಟ್ಟನು. ಶ್ಯಾಮನು ಅದನ್ನು ಜೋಡಿಸಿ ಗಿಳಿಯನ್ನು ತಯಾರಿಸಿದನು.

"ಇನ್ನು ನವಿಲನ್ನು ಮಾಡಿರಿ." ಬೇರೊಬ್ಬ ಹುಡುಗನು ಹೇಳಿದನು.

"ನೀವೇ ಅದನ್ನು ತಯಾರಿಸಿರಿ." ಶ್ಯಾಮ ಹೇಳಿದ.

"ನಮಗೆ ಚೆನ್ನಾಗಿ ಬರುವದಿಲ್ಲ."

"ಆಗಲಿ. ನಾಳೆ ಮಾಡೋಣ. ಈಗ ನೀವು ಮನೆಗೆ ಹೋಗಿರಿ. ಬೇಗ ಊಟ ಮುಗಿಸಿ ಬನ್ನಿರಿ" ಶ್ಯಾಮನು ಹೇಳಿದ.

"ನಡೆಯಿರೋ, ಬೇಗ ಉಂಡು ಬರೋಣ" ಒಬ್ಬ ತಿಳಿವಳಿಕೆಯುಳ್ಳ ಹುಡುಗನು ಹೇಳಿದನು. ಆ ಬಾಲ ಹಕ್ಕಿಗಳು ಹಾರಿದವು.

ಶ್ಯಾಮನು ವಿವಿಧ ಬಣ್ಣದ ಆ ಕಲ್ಲು–ಹರಳುಗಳನ್ನು ನೋಡುತ್ತ ಕುಳಿತನು. ಈ ಸಣ್ಣ ಕಲ್ಲುಗಳಲ್ಲಿ ದೇವರು ಎಷ್ಟೊಂದು ಸೌಂದರ್ಯವನ್ನು ಸುರುವಿದ್ದಾನೆಂಬ ವಿಚಾರ ಮನದಲ್ಲಿ ಬರಲು ಅವನು ಆ ಹರಳುಗಳನ್ನು ಎದೆಗೆ ಅವಚಿಕೊಂಡನು. ಸೌಂದರ್ಯಸಾಗರನಾದ ಪರಮಾತ್ಮನ ಮೂರ್ತಿಗಳೇ ಅವಾಗಿದ್ದವು. ಭಕ್ತರಿಗೆ ಎಲ್ಲೆಲ್ಲಿಯೂ ಈಶ್ವರನ ಮೂರ್ತಿಗಳು ಕಾಣಿಸುತ್ತವೆಂಬ ಅಲ್ಪಾನುಭವವು ಅವನಿಗೆ ಆಗುತ್ತಿದ್ದಿತು. ಒಂದು ಬಗೆಯ ಕೋಮಲಭಾವವು ಅವನ ಮುಖದ ಮೇಲೆ ಮೂಡಿದ್ದಿತು.

ಗೋವಿಂದ, ರಾಮು, ನಾಮದೇವ ಎಲ್ಲರೂ ಅವನ ಬಳಿಗೆ ಬಂದರು.

"ಶ್ಯಾಮಾ, ಏನಿವೆ ನಿನ್ನ ಕೈಯಲ್ಲಿ? ಹೂವು ಏನು?" ರಾಮನು ವಿಚಾರಿಸಿದನು.

"ನಾನು ಎಂದಾದರೂ ಈ ಮಲಿನವಾದ ಮತ್ತು ಪಾಪೀ ಕೈಗಳನ್ನು ಹೂವಿಗೆ ತಾಕಿಸುವೆನೋ? ದೂರದಿಂದಲೇ ಅವಕ್ಕೆ ಕೈ ಮುಗಿಯುತ್ತೇನೆ." ಶ್ಯಾಮನು ಹೇಳಿದನು.

"ಹಾಗಾದರೆ ಏನಿದೆ ಕೈಯಲ್ಲಿ?" ನಾಮದೇವನು ವಿಚಾರಿಸಿದನು.

"ದೇವರ ಮೂರ್ತಿಗಳು!"

" ನಿಮ್ಮ ಗಣಪತಿಯ ಮೂರ್ತಿಯನ್ನಂತೂ ಬಾಬೂನಿಗೆ ಕೊಟ್ಟುಬಿಟ್ಟಿಲ್ಲವೇ ? " ಭಿಕ್ಕನು ಕೇಳಿದನು.

" ಹೌದು, ಆದರೆ ನನ್ನಲ್ಲಿ ಎಷ್ಟೊಂದು ಮೂರ್ತಿಗಳಿವೆ. "

" ನೋಡೋಣ ತಾ ಇಲ್ಲಿ. " ಎನ್ನುತ್ತ ಗೋವಿಂದನು ಶ್ಯಾಮನ ಕೈ ಹಿಡಿದು ಮುಷ್ಟಿಯನ್ನು ಬಿಚ್ಚಿಸಿದನು. ಆ ಮುಷ್ಟಿಯಿಂದ ಮುತ್ತು-ಮಾಣಿಕಗಳು ಹೊರಬಿದ್ದವು.

" ಇವು ನನ್ನ ರತ್ನ ! ಇವು ನನ್ನ ದೇವರು ! ಸಮುದ್ರದ ಅಡಿಯಲ್ಲಿ ಮುತ್ತುಗಳೂ ಪೃಥ್ವಿಯ ಹೊಟ್ಟೆಯಲ್ಲಿ ರತ್ನಗಳೂ ಇರುತ್ತವೆಂದು ಜನರು ಹೇಳುತ್ತಾರೆ. ಆದರೆ ನನಗೆ ಪ್ರತಿಯೊಂದು ನದಿಯ ಮಳಲಿನಲ್ಲಿಯೂ, ಗುಡ್ಡದ ತುದಿಯಲ್ಲಿಯೂ ಮುತ್ತು-ರತ್ನಗಳು ಕಾಣಿಸುತ್ತವೆ. ನೋಡು. ಇವುಗಳ ಬಣ್ಣದ ವೈಖರಿ ! " ಎನ್ನುತ್ತ ಶ್ಯಾಮನು ಅವನ್ನು ತೋರಿಸತೊಡಗಿದನು.

" ಶ್ಯಾಮಾ, ಇಂದು ನೀನು ಮಾತನಾಡುವಿಯೇನು ? " ರಾಮನು ಕೇಳಿದನು.

" ಹೌದು. ಆ ಹುಡುಗರಿಗೆ ಊಟ ಮಾಡಿ ಬರಲು ಹೇಳಿಕಳಿಸಿದ್ದೇನೆ. ಅವರೇ ಈ ಸುಂದರವಾದ ಹರಳುಗಳನ್ನು ತಂದುಕೊಟ್ಟರು. ಅವರೇ ಈ ಆನಂದವನ್ನೂ ಉತ್ಸಾಹವನ್ನೂ ಕೊಟ್ಟವರು. ಈಗ ನಾನು ಎರಡು ತಾಸುಗಳ ವರೆಗೂ ಮಾತನಾಡಬಹುದು. ಪ್ರಾರ್ಥನೆಯ ಹೊತ್ತು ಸಮೀಪಿಸಿರಬಹುದಲ್ಲವೇ ? " ಶ್ಯಾಮನು ವಿಚಾರಿಸಿದನು.

ಪ್ರಾರ್ಥನೆಯ ಹೊತ್ತಾಗಿತ್ತು. ಶ್ಯಾಮನು ಧೋತರ ಹೊದೆದುಕೊಂಡು ಕುಳಿತಿದ್ದನು. ಪ್ರಾರ್ಥನೆಯ ನಂತರ ಅವನ ಕಥೆಗೆ ಆರಂಭವಾಯಿತು:

ಜಪ್ತಿಯ ಕಾಲಕ್ಕೆ ನಮ್ಮ ದೂರ್ವೆಯ ಅಜ್ಜಿ ಮನೆಯಲ್ಲಿರಲಿಲ್ಲ. ಅವಳು ಯಾವದೋ ಊರಿಗೆ ಹೋಗಿದ್ದವಳು ಮರಳಿ ಬಂದಳು. ತಾಯಿ ಆ ದಿವಸದಿಂದ ಹಾಸಿಗೆಯನ್ನೇ ಅಂಟಿಕೊಂಡು ಬಿಟ್ಟಳು. ಮೈಯೊಳಗಿನ ಜ್ವರ ಆರುತ್ತಿರಲಿಲ್ಲ. ಆರೈಕೆಯನ್ನಾದರೂ ಯಾರು ಮಾಡಬೇಕು ? ಅಜ್ಜಿ ತನ್ನ ಕೈಲಿಂದಾದಷ್ಟು ಕೆಲಸ ಮಾಡುತ್ತಿದ್ದಳು. ರಾಧಾಬಾಯಿ ಆಗಾಗ್ಗೆ ಬಂದು ನೆಲ್ಲಿಕಾಯಿ ಪಾಕವನ್ನೋ, ಪಿತ್ತದ ಮಾತ್ರೆಯನ್ನೋ ಕೊಟ್ಟು ಹೋಗುತ್ತಿದ್ದರು.

ಜಾನಕೀಕಕ್ಕಿ, ನರ್ಮದಕ್ಕ ಬಂದುಹೋಗುತ್ತಿದ್ದರು.

"ಆದರೆ ಈಗ ಮನೆಯಲ್ಲಿ ಕೆಲಸವನ್ನಾರು ಮಾಡಬೇಕು? ನೆರೆ ಮನೆಯ ಶರದ್‌ನಿಗೆ ಎರೆಯಲಿಕ್ಕೆ ಯಾರು ಹಾಕಬೇಕು? ತಾಯಿ ಸಂಪಾದಿಸುತ್ತಿದ್ದ ಎರಡು ರೂಪಾಯಿ ನಿಂತು ಹೋಯಿತು. ತಂದೆ ಬಂದರೆಂದರೆ ದೂರ್ವೆಯ ಅಜ್ಜಿ ಗಲಾಟೆ ಶುರುಮಾಡಿ ಬಿಡುತ್ತಿದ್ದಳು:

"ಸುಟ್ಟ ಅಡಿಗೆಯನ್ನಾದರೂ ಹೇಗೆ ಮಾಡಬೇಕು? ಒಲೆಗೆ ಉರಿಸಲಿಕ್ಕೆ ಸೌದೆ ಇಲ್ಲ, ಕುಳ್ಳು ಇಲ್ಲ. ಪಲ್ಲೆಯಲ್ಲಿ ಹಾಕಲಿಕ್ಕೆ ಎಣ್ಣೆ ಇಲ್ಲ, ಉಪ್ಪು ಇಲ್ಲ. ಬರೀ ಅನ್ನ, ಸೊಪ್ಪು ಹಾಗೇ ಬೇಯಿಸಬೇಕೇ?"

ನನ್ನ ತಂದೆ ಶಾಂತಚಿತ್ತರಾಗಿ ಹೇಳುತ್ತಿದ್ದರು, "ಬರೀ ಅಕ್ಕಿಯನ್ನು ಕುದಿಸಿ ಹಾಕು ದ್ವಾರಕಕ್ಕ. ನಮ್ಮ ಮರ್ಯಾದೆಯಂತೂ ಹೋಗಿದೆ. ಇನ್ನಷ್ಟು ಬೈಲಿಗೆಳೆಯಬೇಡ."

ಆ ದಿವಸ ತಾಯಿ ಪುರುಷೋತ್ತಮನಿಗೆ ಹೇಳಿದಳು, "ಪುರುಷೋತ್ತಮಾ, ನಿನ್ನ ಅಬಚಿಗೆ ಪತ್ರ ಬರೆ. ಇನ್ನು ಕೊನೆಯ ಕಾಲದಲ್ಲಿ ಅವಳೇ ಸಹಾಯಕ್ಕೆ ಬರಬಹುದು. ಅವಳಿಗೆ ಬರೆ ಅಂದರೆ ಬರಬಹುದು. ರಾಧಾಬಾಯಿಗೆ ಒಂದು ಕಾರ್ಡು ಕೊಡಲು ತಿಳಿಸಿದ್ದೇನೆ. ಹೋಗಿ ತೆಗೆದುಕೊಂಡು ಬಾ. ಇಲ್ಲವಾದರೆ ಇಂದಕ್ಕನಿಗೆ ಕರೆದಿದ್ದೇನೆಂದು ಹೇಳು. ಅವಳೇ ಚೆನ್ನಾಗಿ ಬರೆದುಕೊಡುವಳು. ಹೋಗು ಮಗು, ಕರೆದುಕೊಂಡು ಬಾ."

ಪುರುಷೋತ್ತಮನ ಹೇಳಿಕೆಯಂತೆ ಇಂದಿರೆಯು ಕಾರ್ಡು ತೆಗೆದು ಕೊಂಡು ಬಂದಳು.

"ಯಶೋದಕ್ಕಾ, ಬಹಳ ತ್ರಾಸಾಗುತ್ತದೇನು? ತಲೆ ಒತ್ತಲಾ?" ಅವಳು ಅಕ್ಕರೆಯಿಂದ ಕೇಳಿದಳು.

"ಬೇಡ ಇಂದೂ, ಕೇಳಿದ್ದೇ ಹೆಚ್ಚಾಯಿತು. ಒತ್ತಿದರೆ ತಲೆ ಇನ್ನೂ ಹೆಚ್ಚು ನೋವಾಗುವದು. ಪತ್ರ ಬರೆಯುವದಕ್ಕಾಗಿ ನಿನ್ನನ್ನು ಕರೆಸಿದ್ದೇನೆ. ನನ್ನ ತಂಗಿ ಸಖೂಗೆ ಒಂದು ಪತ್ರ ಬರೆ. ಅವಳಿಗೆ ನನ್ನ ಪರಿಸ್ಥಿತಿಯನ್ನೆಲ್ಲ ತಿಳಿಸಿ ನಾನು ಕರೆದಿದ್ದೇನೆಂದು ತಿಳಿಸು. ಹೇಗೆ ಹೇಗೆ ಬರೆಯಬೇಕೋ ನಿನಗೇ ಗೊತ್ತು. ಎಲ್ಲವನ್ನೂ ಸರಿಯಾಗಿ ಬರೆದು ಬಿಡು." ಎಂದು ತಾಯಿ ನುಡಿದಳು.

ಇಂದಿರೆಯು ಪತ್ರ ಬರೆದು, ವಿಳಾಸವನ್ನೂ ಬರೆದು ಪುರುಷೋತ್ತಮನ ಕೈಯಲ್ಲಿ ಕೊಟ್ಟು ಪೋಸ್ಟಿನ ಡಬ್ಬಿಯಲ್ಲಿ ಹಾಕಲು ತಿಳಿಸಿದಳು. ಆ ಮೇರೆಗೆ ಅವನು ಡಬ್ಬಿಯಲ್ಲಿ ಹಾಕಿ ಬಂದನು. ಕೂಸು ಮನೆಯಲ್ಲಿ ಎದ್ದಿದೆಯೆಂದು ಕರೆ ಬಂದದ್ದರಿಂದ ಇಂದಿರೆ ಹೊರಟುಹೋದಳು.

"ಮಗೂ, ನೀರು ಕೊಡಪ್ಪ." ತಾಯಿ ನನ್ನ ತಮ್ಮನಿಗೆ ಹೇಳಿದಳು. ಅವನು ಒಮ್ಮೆಲೆ ಬಾಯಿಯಲ್ಲಿ ನೀರು ಸುರಿಯ ಹೋದನು. "ಹಾಗೆ ಸುರುವ ಬೇಡಪ್ಪ. ಚಮಚೆಯಿಂದ ಹಾಕು. ಚಮಚೆ ಸಿಗದಿದ್ದರೆ ತೀರ್ಥದ ಸವಟು ತೆಗೆದುಕೊಂಡು ಹಾಕು." ಎಂದು ತಾಯಿ ಹೇಳಿದಳು. ಅದರಂತೆ ಪುರುಷೋತ್ತಮನು ನೀರು ಕುಡಿಸಿದನು.

"ಬರ್‍ರಿ, ಜಾನಕೀಬಾಯಿ. ಕುಳಿತುಕೊಳ್ಳಿರಿ." ಜಾನಕೀಬಾಯಿ ಕ್ಷೇಮಸಮಾಚಾರ ತಿಳಿದುಕೊಂಡು ಹೋಗಲು ಬಂದಿದ್ದರು. "ಕೈ-ಕಾಲು ತುಸು ಹಿಸುಕಬೇಕೇನು?" ಅವರು ತಾಯಿಯನ್ನು ವಿಚಾರಿಸಿದರು.

"ಬೇಡ ಜಾನಕೀಬಾಯಿ. ಹಿಸುಕುವದರಿಂದ ಈ ಎಲವುಗಳು ನೋಯ ಹತ್ತುತ್ತವೆ. ಹತ್ತಿರ ಕುಳಿತುಕೊಳ್ಳಿರಿ, ಅಂದರೆ ಆಯಿತು." ತಾಯಿ ಹೇಳಿದಳು.

"ನೆಲ್ಲಿಕಾಯಿಯ ವಡಿಯನ್ನು ತಂದು ಕೊಡಲೇನು? ನಾಲಗೆಗೆ ತುಸು ರುಚಿಯನ್ನು ಕೊಟ್ಟೀತು."

"ಆಗಬಹುದು. ಒಂದು ತುಂಡನ್ನು ಕಳಿಸಿಕೊಡಿರಿ." ಕ್ಷೀಣ ಸ್ವರದಲ್ಲಿ ತಾಯಿ ನುಡಿದಳು.

ಜಾನಕೀಬಾಯಿ ಪುರುಷೋತ್ತಮನನ್ನು ಕರೆದುಕೊಂಡು ಹೋಗಿ ಅವನ ಕೈಯಲ್ಲಿ ಒಂದೆರಡು ವಡಿ ಕಳಿಸಿಕೊಟ್ಟರು. ಪುರುಷೋತ್ತಮನು ತಾಯಿಗೆ ತಂದು ಕೊಟ್ಟನು. ತಾಯಿ ಅದರಲ್ಲೊಂದು ತುಂಡನ್ನು ದವಡೆಯಲ್ಲಿ ಹಿಡಿದುಕೊಂಡಳು. ಪುರುಷೋತ್ತಮನು ಹತ್ತಿರವೇ ಕುಳಿತುಕೊಂಡಿದ್ದ.

"ಮಗೂ, ಬೇಸರ ಬಂದಿದ್ದೀತು. ತುಸು ಆಟವಾಡಿ ಬಾ. ಶಾಲೆಗೆ ಹೋಗುವದೇನೂ ಬೇಡ. ನನಗೆ ಗುಣವಾದ ಮೇಲೆಯೇ ಇನ್ನು ನಿನ್ನ ಶಾಲೆ. ನೀನಲ್ಲದೆ ಬೇರೆ ಯಾರಿದ್ದಾರೆ?" ತಾಯಿ ಅವನ ಬೆನ್ನಮೇಲೆ ಕೈಯಾಡಿಸುತ್ತ ನುಡಿದಳು.

ಪುರುಷೋತ್ತಮನು ಹೊರಗೆ ಆಟವಾಡಲು ಹೋದನು.

ಮೂರು ಗಂಟೆಯ ಸುಮಾರಿಗೆ ನರ್ಮದಕ್ಕ ತಾಯಿಯ ಕಡೆ ಬಂದಿದ್ದಳು. ಅವಳು ತಾಯಿಯ ಬಾಲ್ಯದ ಗೆಳತಿ. ಊರಲ್ಲಿಯೇ ಅವಳನ್ನು ಕೊಡಲಾಗಿತ್ತು. ಚಿಕ್ಕಂದಿನಲ್ಲಿ ಇಬ್ಬರೂ ಆಟಿಗೆ ಸಾಮಾನು ತೆಗೆದುಕೊಂಡು ಗೊಂಬೆಯಾಟ ಆಡಿದ್ದರು. ಇಬ್ಬರೂ ತೂಗುಮಂಚದ ಮೇಲೆ ಉಯ್ಯಾಲೆ ಆಡಿದ್ದರು. ಇಬ್ಬರೂ ಒಂದೆಡೆಗೆ ಮಂಗಳಗೌರೀ ಪೂಜೆಯನ್ನು ಮಾಡಿದ್ದರು. ನರ್ಮದಕ್ಕನಿಗೆ ತಾಯಿಯ ಕಡೆಗೆ ಬಾರಿಬಾರಿಗೆ ಬರುವದು ಸಾಧ್ಯವಿರಲಿಲ್ಲ. ಅವಳ ಮನೆ ಊರ ಒಂದು ತುದಿಯಲ್ಲಿತ್ತು. ಮೇಲಾಗಿ ಅವಳಿಗೂ ಆಗಾಗ್ಗೆ ಕಾಹಿಲೆ ಇರುತ್ತಿತ್ತು.

" ಬಾ, ನರ್ಮದಾ, ಬಾ. ಹೇಗೆ ಇರುವೆ ನೀನು ? ನಿನ್ನ ಕಾಲಿಗೆ ತುಸು ಬಾವು ಬಂದಿತ್ತಲ್ಲ, ಈಗ ಹೇಗಿದೆ ? " ತಾಯಿ ಅವಳನ್ನು ವಿಚಾರಿಸಿದಳು.

" ಚೆನ್ನಾಗಿದ್ದೇನೆ. ಸಂಪಿಗೆ ಎಲೆಯಿಂದ ಕಾವು ಕೊಟ್ಟೆ. ಬಾವು ಇಳಿದಿದೆ. ನಿನ್ನ ಕಾಹಿಲೆ ಹೇಗಿದೆ. ವೈಯಸ್ಸೇ ತೆಗೆದುಬಿಟ್ಟಿರುವೆ. ಜ್ವರವು ಆರಲೇ ಇಲ್ಲವಲ್ಲ ? " ನರ್ಮದಕ್ಕ ತಾಯಿಯ ಮೈಮುಟ್ಟಿ ನೋಡಿ ನುಡಿದಳು

" ನರ್ಮದಾ, ನಿನ್ನ ಜೊತೆಗೆ ಪುರುಷೋತ್ತಮನನ್ನು ಕಳಿಸುತ್ತೇನೆ. ಒಂದು ಥಾಲಿ ಒಳ್ಳೆಎಣ್ಣೆ ಕೊಟ್ಟು ಕಳಿಸುವೆಯಾ ? ಒಂದು ಹನಿಯೂ ಎಣ್ಣೆ ಮನೆಯಲ್ಲಿ ಇಲ್ಲ. ದ್ವಾರಕಾಬಾಯಿ ಕೂಗಿಕೊಳ್ಳುತ್ತಿದ್ದಾರೆ. ನಿನಗೆಲ್ಲ ತಿಳಿದ ವಿಷಯವಾಗಿದೆ. ನಾನೇನೂ ಬೇರೆ ಹೇಳಬೇಕಾಗಿಲ್ಲ. ನೀನಾದರೂ ದೊಡ್ಡ ಶ್ರೀಮಂತಳಲ್ಲ. ಬಡವೆಯಾದರೂ ನನ್ನ ಗೆಳತಿಯೆಂದು ಕೇಳಿದೆ. " ತಾಯಿ ನುಡಿದಳು.

" ಅದೇನು ದೊಡ್ಡ ಮಾತು ? ಅಷ್ಟೊಂದು ಮನಸ್ಸಿಗೆ ಹಚ್ಚಿಕೊಳ್ಳಬೇಡ. ನಿನ್ನ ರೋಗವೇ ಮನೋರೋಗವಾಗಿದೆ. ನೀನು ಎಲ್ಲ ವಿಷಯಗಳನ್ನೂ ಮನಸ್ಸಿಗೆ ಬಹಳ ಹಚ್ಚಿಕೊಳ್ಳುವಿ. ಹೀಗೆಲ್ಲ ಮಾಡಬೇಡ. ನೀನು ಹುಡುಗರ ಮೋರೆ ನೋಡಿಯಾದರೂ ಬಾಳಬೇಕಾಗಿದೆ. ಧೈರ್ಯ ತಾಳು " ನರ್ಮದಕ್ಕ ಸಮಾಧಾನ ಹೇಳಿದಳು.

" ನರ್ಮದಾ, ಇನ್ನು ಬದುಕುವ ಇಚ್ಛೆಯೇ ಇಲ್ಲ. ಆಗುವದೆಲ್ಲ ಆಗಿ

ಹೋಯಿತು. ಸಾಕು ಇನ್ನು."

" ದೀಪ ಹಚ್ಚುವ ಹೊತ್ತಾಗಿದೆ. ಇಂಥ ಅಮಂಗಲ ಮಾತನ್ನಾಡಬೇಡ. ನಾಳೆ ನಿನಗೆ ಮೆತ್ತನ್ನ ಅನ್ನ ಮಾಡಿ ತರುತ್ತೇನೆ. ಒಂದು ತುತ್ತು ಉಣ್ಣುವಿಯಲ್ಲವೇ ?"

" ನರ್ಮದಾ, ಇನ್ನು ಕಣ್ಣು ಮುಚ್ಚುವದೇ ಒಳ್ಳೇದು. ಎಷ್ಟೊಂದು ಪರಾಧೀನತೆ ನಾಚಿಕೆಗೇಡು ಬಾಳು ಸಾಕಪ್ಪಾ ಇನ್ನು" ಕಣ್ಣೀರು ಸುರಿಸುತ್ತ ತಾಯಿ ನುಡಿದಳು.

" ಹೀಗೆಲ್ಲ ಆಡಬೇಡ. ಗುಣವಾದೀತು ನಿನಗೆ. ಒಳ್ಳೆ ದಿನಗಳು ಬಂದಾವು. ನಿನ್ನ ಶ್ಯಾಮೂ, ಗಜಾನನ ದೊಡ್ಡವರಾಗಿ ನಿನಗೆ ನೆರವಾದಾರು ? ಗಜಾನನನಿಗೆ ನೌಕರಿ ಸಿಕ್ಕಿತೇನು ?" ನರ್ಮದಾಬಾಯಿ ವಿಚಾರಿಸಿದಳು.

" ಒಂದು ತಿಂಗಳ ಹಿಂದೆ ಹತ್ತಿದೆ. ಆದರೆ ಬರೀ ಹತ್ತೊಂಬತ್ತು ರೂಪಾಯಿ ಸಂಬಳ. ಮುಂಬೈಯಂಥ ಪಟ್ಟಣದಲ್ಲಿ ಇರಬೇಕು. ಅವನೇನು ತಿನ್ನಬೇಕು ? ನಮಗೇನು ಕಳಿಸಬೇಕು ? ಆದರೂ ಪಾಠ ಹೇಳುವ ಕೆಲಸ ಮಾಡಿ ಮೇಲೆ ಎಂಟ್ಹತ್ತು ರೂಪಾಯಿ ಸಂಪಾದಿಸುತ್ತಾನೆ. ಅಷ್ಟರಲ್ಲೇ ತನ್ನ ಹೊಟ್ಟೆ ಕಟ್ಟಿ ಮೊನ್ನೆ ಮೊನ್ನೆ ಐದು ರೂಪಾಯಿ ಕಳಿಸಿದ್ದ." ತಾಯಿ ಹೇಳುತ್ತಲಿದ್ದಳು.

" ಶ್ಯಾಮನಿಗೆ ನಿನ್ನ ಕಾಹಿಲೆಯ ಸುದ್ದಿಯನ್ನು ತಿಳಿಸಿರುವಿರೇನು ?" ನರ್ಮದಾಬಾಯಿ ವಿಚಾರಿಸಿದಳು.

" ಅವನಿಗೆ ತಿಳಿಸಬೇಡಿರೆಂದು ಅವರಿಗೆ ಹೇಳಿದ್ದೇನೆ. ಸುಮ್ಮನೆ ಅಲ್ಲಿ ಅವನ ಅಭ್ಯಾಸಕ್ಕೆ ತೊಂದರೆ. ಚಿಂತೆಗೆ ಗುರಿಮಾಡಿ ಪ್ರಯೋಜನವೇನು ? ಬರಲಿಕ್ಕೆ ಅವನ ಬಳಿ ಹಣವೆಲ್ಲಿ ಬರಬೇಕು ? ಹೇಗೂ ಬಂದಾನು ? ಮರಳಿ ಹೋಗಲಿಕ್ಕಾದರೂ ಅವನಿಗೆ ಹಣ ಬೇಕಲ್ಲ ? ದುಡ್ಡಿಲ್ಲದೆ ದೂರಿನ ಪ್ರವಾಸ ಸಾಧ್ಯ ಹೇಗಾದೀತು ? ಇಲ್ಲಿಯೇ ಕ್ಯಾಂಪಿನಲ್ಲಿದ್ದಾಗ ಬಂದುಹೋಗಿ ಮಾಡುತ್ತಿದ್ದ. ಆದರೆ ಶಿಕ್ಷಣಕ್ಕಾಗಿ ದೂರ ಹೋಗಿದ್ದಾನೆ. ಅವನನ್ನು ದೇವರು ಸುಖವಾಗಿಡಲಿ ಅಂದರೆ ಸಾಕು. ನನ್ನದೇನು ?" ತಾಯಿ ನುಡಿದಳು.

ನರ್ಮದಕ್ಕ ಹೊರಟು ನಿಂತಳು. " ಕುಂಕುಮ ಹಚ್ಚಿಕೋ. ಆ ಗೂಡಿನಲ್ಲಿ ಕುಂಕುಮ ಕರಡಿಗೆ ಇದೆ ನೋಡು." ತಾಯಿ ಹೇಳಿದಳು.

ನರ್ಮದಕ್ಕ ತಾನು ಕುಂಕುಮ ಹಚ್ಚಿಕೊಂಡು ತಾಯಿಗೂ ಹಚ್ಚಿ ಹೊರಟು ಹೋದಳು.

"ಅಮ್ಮಾ, ಇದು ನೋಡು ಅಬಚಿಯ ಪತ್ರ. ನನಗೆ ಅಕ್ಷರ ಗೊತ್ತಾಗುತ್ತವೆ. ಓದಲೇನು ?" ಎಂದು ನುಡಿದು ಪುರುಷೋತ್ತಮನು ಅಬಚಿಯ ಪತ್ರವನ್ನು ಓದಿ ತೋರಿಸಿದನು. ಅಬಚಿಯ ಅಕ್ಷರಗಳು ಥಾಳಾಗಿ ನೀಟಾಗಿ ಇದ್ದವು. ಅಬಚಿ ಬರತಕ್ಕವಳಿದ್ದಳು. ತಾಯಿಗೆ ಹಿಡಿಸಲಾರದಷ್ಟು ಆನಂದವಾಗಿತ್ತು. ಅಷ್ಟರಲ್ಲಿ ಇಂದಕ್ಕ ಬಂದಳು.

"ಇಂದೂ, ನಮ್ಮ ಸಖು ನಾಳೆ ಬರುತ್ತಾಳೆ. ನೀನು ಪತ್ರ ಬರೆದಿದ್ದೆಯಲ್ಲ. ಅದಕ್ಕೆ ಅವಳು ಉತ್ತರ ಬರೆದಿದ್ದಾಳೆ. ನೋಡು ಆ ಪತ್ರ." ಎಂದು ತಾಯಿ ಹೇಳಿದಳು.

ಇಂದಿರೆಯು ಪತ್ರವನ್ನು ಓದಿ ಹೇಳಿದಳು, "ಒಳ್ಳೇದಾಯಿತು. ಅವರನ್ನೂ ನೋಡಿದ ಹಾಗಾಗುತ್ತದೆ. ನೀವು ಅವರ ಸುದ್ದಿ ಹೇಳುತ್ತಿದ್ದಿರಿ. ಆಗಲೇ ಅವರನ್ನು ನೋಡಬೇಕೆನಿಸಿತ್ತು."

ಇಂದಿರೆಯ ತಾಯಿಯು ಕೂಗಿದ್ದರಿಂದ ಅವಳು ಹೊರಟುನಿಂತು ನುಡಿದಳು, "ಪುರುಷೋತ್ತಮ, ನಮ್ಮ ಮನೆಗೆ ನಡೆ. ತಾಯಿ ಸಜ್ಜಿಗೆ ಮಾಡಿದ್ದಾಳೆ. ತಿಂದು ಬರುವಿಯಂತೆ." ಪುರುಷೋತ್ತಮನು ತಾಯಿಯ ಕಡೆ ನೋಡತೊಡಗಿದನು.

"ಹೋಗು ಮಗು, ಅವರೇನು ಬೇರೆಯವರಲ್ಲ." ಎಂದು ತಾಯಿ ನುಡಿದ ಬಳಿಕ ಅವನು ಹೋದನು.

"ನನ್ನ ಸಲುವಾಗಿ ನಿನಗೆ ಇಷ್ಟೊಂದು ತಾಪತ್ರಯ. ನಿನಗೆ ಸರಿಯಾಗಿ ತಿನ್ನುಣ್ಣಲೂ ನಾನು ಕೊಡಲಿಲ್ಲ. ನಾನು ದುರ್ಭಾಗ್ಯನು. ನಾನಾದರೂ ಏನು ಮಾಡಲಿ ?" ತಂದೆಯವರು ತಾಯಿಯ ಬಳಿಯಲ್ಲಿ ಕುಳಿತು ನುಡಿಯುತ್ತಿದ್ದರು.

"ಇದೇನು ಹೀಗೆಲ್ಲ ? ನೀವೇ ಹೀಗೆ ಅಧೈರ್ಯವುಳ್ಳವರಾಗಿ ಅಳುತ್ತ ಕುಳಿತರೆ ಚಿಕ್ಕ ಪುರುಷೋತ್ತಮನು ಏನು ಮಾಡಬೇಕು? ಗಂಡಸರು ಧೈರ್ಯ ಬಿಡಬಾರದು. ನೀವು ಏನೂ ಮನಸ್ಸಿಗೆ ಹಚ್ಚಿಕೊಳ್ಳಬೇಡಿ. ನಿಮ್ಮ ಜೀವದ ಮೇಲೆ ಮೊದಲು ನಾನು ಹಾರಾಡಿದ್ದೇನೆ. ಎಲ್ಲ ಸೌಖ್ಯವನ್ನೂ ಭೋಗಿಸಿ

ದ್ದೇನೆ. ವೈಭವದಲ್ಲಿ ಹೊರಳಾಡಿದ್ದೇನೆ. ನನಗೇನೂ ಕೊರತೆಯಿಲ್ಲ. ಏನೋ ನಾಲ್ಕು ಕೆಟ್ಟದಿವಸ ಬಂದಿವೆ. ಹೋದಾವು. ನಾನು ನೋಡದಿದ್ದರೂ ನೀವಾದರೂ ಮಕ್ಕಳ ವೈಭವವನ್ನು ನೋಡಿರಿ. ನಿಮ್ಮ ಕಣ್ಣಲ್ಲಿ ನಾನು ಬಂದು ಕುಳಿತುಕೊಳ್ಳುತ್ತೇನೆ. ” ಎಂದು ತಾಯಿ ಹೇಳಿದಳು.

“ ನಿನಗೂ ಗುಣವಾಗುತ್ತದೆ. ಸಖೂ ಬರುತ್ತಾಳೆ. ಅವಳು ನಿನ್ನನ್ನು ಗುಣಪಡಿಸುತ್ತಾಳೆ. ” ತಂದೆ ನುಡಿದರು.

“ ಸುಳ್ಳು ಆಶೆಯನ್ನೇಕೆ ಹಿಡಿಯುವಿರಿ ? ಗಿಡವು ಒಳಗಿನಿಂದ ಪೊಳ್ಳಾಗಿದೆ. ಅದು ಬೀಳತಕ್ಕದ್ದೇ. ಹೋದರೆ ಬಂಗಾರವಾಗುತ್ತದೆ. ತುಂಬಿದ ಕೈಯಿಂದ–ಸುವಾಸಿನಿಯಾಗಿದ್ದು ನಾನು ಹೋಗುವೆನು. ನಿಮಗೆ ಯಾರಿನ್ನು ಎಂದು ಮಾತ್ರ ನನಗೆ ವಿಷಾದವಾಗುತ್ತದೆ. ಇಲ್ಲದೆ ಹೋದರೆ, ನಿಮ್ಮ ತೊಡೆಯಮೇಲೆ, ನಿಮ್ಮ ಸಾನಿಧ್ಯದಲ್ಲಿ ಬರುವ ಮರಣಕ್ಕಿಂತ ಬೇರೆ ಭಾಗ್ಯ ಯಾವುದಿದೆ ? ಈ ಭಾಗ್ಯದ ಎದುರಿನಲ್ಲಿ ಬೇರೆ ಎಲ್ಲ ಸುಖಗಳೂ ತುಚ್ಛವಾದವುಗಳು. ಈ ಭಾಗ್ಯದಬಗ್ಗೆ ಆನಂದವಾಗಿ ಎಲ್ಲ ದುಖಃಗಳೂ ನನಗೆ ಸುಖಮಯವಾಗಿಯೇ ಕಾಣುತ್ತವೆ. ” ಎಂದು ನುಡಿಯುತ್ತ ತಾಯಿಯು ತಂದೆಯವರ ತೊಡೆಯ ಮೇಲೆ ಸುಡುವ ತನ್ನ ಕೈಯನ್ನು ಇಟ್ಟಳು. ಮಾತಿನಿಂದ ತಾಯಿಗೆ ದಣಿವು ಆಗಿತ್ತು.

“ ನೀರು ! ತುಸು ನೀರುಕುಡಿಸಿರಿ ನಿಮ್ಮ ಕೈಯಿಂದ. ” ತಾಯಿ ಪ್ರೀತಿಯಿಂದ ಹೇಳಿದಳು. ತಂದೆಯವರು ಗಿಂಡಿಯ ಸೊಂಡಿಲಿನಿಂದ ಬಾಯಿಯಲ್ಲಿ ತುಸು ನೀರು ಹಾಕಿದರು.

“ ನಿಮ್ಮ ಕೈಯಿಂದ ದೊರೆತ ನೀರೆಂದರೆ ಪವಿತ್ರ ಗಂಗೆ ! ಅಮೃತಕ್ಕಿಂತಲೂ ಮಧುರವಾಗಿದೆ. ಇಂದು ನನ್ನ ಹತ್ತರ ಕುಳಿತುಕೊಳ್ಳಿರಿ. ಎಲ್ಲಿಯೂ ಹೋಗ ಬೇಡಿರಿ. ನಾನು ಕಣ್ಣು ಮುಚ್ಚಿ ನಿಮ್ಮ ಧ್ಯಾನವನ್ನು ಮಾಡುತ್ತೇನೆ.” ಹೀಗೆ ನುಡಿದು ತಂದೆಯವರ ಕೈಯನ್ನು ತನ್ನ ಕೈಯಲ್ಲಿ ಹಿಡಿದುಕೊಂಡು ತಾಯಿ ಕಣ್ಣು ಮುಚ್ಚಿ ಧ್ಯಾನಮಗ್ನಳಾದಳು. ಬಹಳ ಹೃದಯಸ್ಪರ್ಶಿಯಾದ ದೃಶ್ಯವಾಗಿತ್ತದು.

ಅಷ್ಟರಲ್ಲಿ ರಾಧಾಬಾಯಿ ಬಂದರು. ಹತ್ತಿರ ತಂದೆಯವರು ಕುಳಿತದ್ದನ್ನು ಕಂಡು ಅವರು ತಿರುಗಿ ಹೋಗತಕ್ಕವರಿದ್ದರು. “ ಬರ್ರಿ. ರಾಧಾ

ಬಾಯಿ ಬರ್ರಿ. ” ಎಂದು ನುಡಿದು ವಿನಯಶಾಲಿಗಳಾದ ತಂದೆಯವರು ಹೊರಗೆ ಹೋದರು. ರಾಧಾಬಾಯಿ ತಾಯಿಯ ಹತ್ತರ ಕುಳಿತುಕೊಂಡರು. ತಾಯಿಯ ಕುದಲುಗಳನ್ನು ತಮ್ಮ ಕೈಗಳಿಂದ ನೇವರಿಸುತ್ತ “ ಬೆಳಿಗ್ಗೆ ನಿಮ್ಮ ತಂಗಿ ಬರುತ್ತಾಳೆಂದು ಕಾಣುತ್ತದೆ ? ” ಎಂದು ಕೇಳಿದರು.

“ ಹೌದು, ಪತ್ರ ಬಂದಿದೆ. ನಿಮ್ಮ ಇಂದೂನೇ ಓದಿದಳು. ”

“ ನನಗೂ ಅವಳಿಂದಲೇ ತಿಳಿಯಿತು. ಬಹಳ ಒಳ್ಳೆಯದಾಯಿತು. ಪ್ರೇಮದ ಜನ ಹತ್ತಿರ ಇದ್ದರೆ ಸಮಾಧಾನವಿರುತ್ತದೆ. ” ಎಂದರು ರಾಧಾಬಾಯಿ.

“ ಎಲ್ಲರೂ ಪ್ರೇಮದ ಜನರೇ. ಅವರು ಬಳಿಯಲ್ಲಿ ಇದ್ದಾರೆ. ನಿಮ್ಮ ಆಶ್ರಯವಿದೆ. ಇನ್ನೇನುಬೇಕು ? ” ತಾಯಿ ನುಡಿದಳು.

ತುಸು ಹೊತ್ತು ಕುಳಿತುಕೊಂಡು ರಾಧಾಬಾಯಿ ಹೋದರು.

ಅಬಚಿ ನಸುಕಿನಲ್ಲಿ ಬರತಕ್ಕವಳಿದ್ದಳು. ಪುರುಷೋತ್ತಮನು ತೀರ ನಸುಕಿನಲ್ಲಿ ಎದ್ದು ಕುಳಿತ್ತಿದ್ದ. ಅವನು ಕಿವಿಗೊಟ್ಟು ಬಂಡಿಗಳ ಸದ್ದನ್ನೇ ಕೇಳುತ್ತ ಇದ್ದ. ಹಡಗದಿಂದ ಇಳಿದ ಜನರು ಬರುವ ಎತ್ತಿನ ಬಂಡಿಗಳು ನುಸುಕಿನ ಸಮಯದಲ್ಲಿಯೇ ಪಾಲಗಡಕ್ಕೆ ಬರುತ್ತವೆ. ಅಂಗಳದಹತ್ತರ ಗಾಡಿ ನಿಂತ ಹಾಗೆ ತೋರಿದೊಡನೆ ಪುರುಷೋತ್ತಮನು ಹೊರಗೆಹೋಗಿ ನೋಡಿ ಬರುತ್ತಿದ್ದನು. ಆ ಗಾಡಿ ಮುಂದೆ ಹೋಗಲು ನಿರಾಶೆಗೊಂಡು ಒಳಗೆ ಬರುತ್ತಿದ್ದನು. ಕೊನೆಗೊಮ್ಮೆ ಒಂದು ಗಾಡಿ ನಮ್ಮ ಅಂಗಳದ ಮುಂದೆ ನಿಂತು ಬಿಟ್ಟಿತು.

“ ನಮ್ಮ ಮನೆಯ ಮುಂದೆಯೇ ಗಾಡಿ ನಿಂತಿತು !” ಅಜ್ಜಿ ಹೇಳಿದಳು. ದೂರ್ವೆಯ ಅಜ್ಜಿ ಹೊರಗೆ ಹೊಸ್ತಿಲು ಸಾರಿಸುತ್ತಿದ್ದಳು. ಪುರುಷೋತ್ತಮನು ಓಡಿ ಹೋದನು. ತಂದೆಯವರೂ ಆತುರದಿಂದ ಹೋದರು. ನಿಜ, ಅವಳು ಅಬಚಿಯೇ ಆಗಿದ್ದಳು. ಪುರುಷೋತ್ತಮನು ಬುಟ್ಟಿಯನ್ನೂ, ತಂದೆಯವರು ಟ್ರಂಕನ್ನೂ ತೆಗೆದುಕೊಂಡು ಒಳಗೆ ಬಂದರು. ಅಬಚಿ ಹಾಸಿಗೆ ಸುರುಳಿಯನ್ನು ಎತ್ತಿಕೊಂಡು ಇವರ ಹಿಂದಿನಿಂದ ಬಂದಳು. ಬಾಡಿಗೆ ಹಣ ಪಡೆದುಕೊಂಡು ಬಂಡಿಯವನು ಹೊರಟು ಹೋದನು.

“ ಅಮ್ಮಾ , ಅದೋ ನೋಡು, ಅಬಚಿ ಬಂದಳು. ” ಎಂದು ತಾಯಿ

ಯನ್ನು ಅಲುಗಾಡಿಸುತ್ತ ಪುರುಷೋತ್ತಮ ಹೇಳಿದ. ನಸುಕಿನ ಸಮಯದಲ್ಲಿ ತಾಯಿ ಕನಸು ಕಾಣುತ್ತಿದ್ದಳು.

" ಬಂದಳೇ ? ನನ್ನ ದಾರಿಯಿನ್ನು ಸುಗಮವಾಯಿತು. " ತಾಯಿ ನುಡಿದಳು. ಅರ್ಧಮರ್ಧ ಎಚ್ಚರಿಕೆ ಅವಳಿಗಿತ್ತು. ಅಬಚಿ ತಾಯಿಯ ತೀರ ಸಮೀಪ ಹೋಗಿ ಕುಳಿತಳು. ಅಕ್ಕ ತಂಗಿಯರು ಒಬ್ಬರನ್ನೊಬ್ಬರು ಕಂಡದ್ದು ಎಷ್ಟೋ ವರ್ಷಗಳಮೇಲೆ. ತಾಯಿಯ ಆ ಎಲುಬಿನ ಹಂದರದಂತಾಗಿರುವ ಶರೀರವನ್ನು ಕಂಡು ಅಬಚಿಯ ಕಣ್ಣುಗಳಲ್ಲಿ ನೀರೂರಿದವು.

" ಅಕ್ಕಾ, " ಅಬಚಿ ಕೂಗಿದಳು. ಆ ಎರಡು ಅಕ್ಷರಗಳಲ್ಲಿ ಅಬಚಿಯ ಪ್ರೇಮಾಂತಃಕರಣಗಳು ಉಕ್ಕಿ ಹೊರಸೂಸಿದ್ದವು.

" ಬಂದೆಯಾ ಸಖೂ, ನಿನ್ನ ದಾರಿಯನ್ನೇ ಕಾಯುತ್ತಿದ್ದೆ. ಯಾವಾಗ ಬರುವೆಯೋ ಎಂದು ಕುತ್ತಿಗೆಯಲ್ಲಿ ಜೀವ ಹಿಡಿದುಕೊಂಡೇ ಇದ್ದೇನೆ. ಬೇಗ ಬಂದೆ ಸಂತೋಷವಾಯಿತು. ಈ ಹುಡುಗರನ್ನು ನಿನ್ನ ಉಡಿಯಲ್ಲಿ ಹಾಕಿ ಹೋಗಬೇಕೆಂದು ಕಾದಿದ್ದೇನೆ ಸಖೂ. " ತಾಯಿ ಅಳಹತ್ತಿದಳು.

" ಅಕ್ಕಾ, ಇದೇನು ಹುಚ್ಚಿಯಹಾಗೆ ಮಾಡುತ್ತಿರುವೆ ? ನಾನು ಬಂದಿದ್ದೇನೆ. ಇನ್ನು ನಿನಗೆ ಗುಣವಾಗುತ್ತದೆ. ನಿನ್ನ ಆರೋಗ್ಯ ಸುಧಾರಿಸಿತೆಂದರೆ ನಿನ್ನನ್ನೂ ಪುರುಷೋತ್ತಮನನ್ನೂ ಕರೆದುಕೊಂಡು ಹೋಗುತ್ತೇನೆ. ಈಗ ನನಗೆ ನೌಕರಿ ದೊರೆತಿದೆ " ಅಬಚಿ ಹೇಳಿದಳು.

" ಬೇಡಮ್ಮ, ಇನ್ನೆಲ್ಲಿ ಹೋಗುವದೂ ಬರುವದೂ ಬೇಡ. ಇನ್ನು ದೇವರ ಕಡೆಗೊಂದೇ ಹೋಗುವದು. ಈ ಪರ್ಣಕುಟೀರದಲ್ಲಿಯೇ ನನ್ನ ಅವಸಾನವಾಗಲಿ. ಹಟಹಿಡಿದು ಈ ಗುಡಿಸಲವನ್ನು ಕಟ್ಟಿಸಿದ್ದೇನೆ. ಈ ಸ್ವತಂತ್ರ ಗುಡಿಸಲು! ಇದೇ ನನ್ನ ಅರಮನೆ ! ಇಲ್ಲಿಯೇ ನನ್ನ ದೇಹ ಬೀಳಲಿ! ಅವರ ತೊಡೆಯಮೇಲೆ–ನಿನ್ನ ಸಮಕ್ಷಮದಲ್ಲಿ ಸಾವು ಬರಲಿ. ' ತಾಯಿ ಸತ್ತರೂ ಚಿಂತಿಲ್ಲ ಅಬಚಿ ಬದುಕಲಿ ' ಎಂದು ಹೇಳುತ್ತಾರೆ. ಆ ಮಾತು ಸತ್ಯವಾಗಲಿ. ಸಖೂ, ನಿನಗೆ ಮಕ್ಕಳಿಲ್ಲ, ಮರಿಯಿಲ್ಲ ದೇವರು ನಿನ್ನ ಸಂಸಾರವನ್ನು ಕೊನೆಗಾಣಿಸಿದ್ದಾನೆ. ನನ್ನ ಮಕ್ಕಳ ರಕ್ಷಣೆಗಾಗಿಯೇ ನಿನಗೆ ದೇವರು ಹಾಗೆ ಹೊತ್ತು ತಂದನೋ ಏನೋ ? ನನ್ನ ಮಕ್ಕಳನ್ನು ನೀನೇ ನೋಡಿಕೋ ! ನೀನೇ ಅವರ ತಾಯಿಯಾಗು ! " ತಾಯಿ ಮಾತನಾಡು

ತ್ತಿದ್ದಳು.

“ ಅಕ್ಕಾ, ಹೀಗೆಲ್ಲ ಏನಾದರೂ ಆಡಬೇಡ. ಮಾತನಾಡಿ ಆಯಾಸ ಮಾಡಿಕೊಳ್ಳಬೇಡ. ತುಸು ಮಲಗಿಕೋ. ನಾನು ತಟ್ಟುತ್ತೇನೆ. ” ಎಂದು ನುಡಿದು ಅಬಚಿಯು ಜೊತೆಗೆ ತಂದ ರಗ್ಗನ್ನು ತಾಯಿಯ ಮೈಮೇಲೆ ಹೊದಿಸಿದಳು. ತಾಯಿಯ ಶರೀರಕ್ಕೆ ರಗ್ಗು ತಾಕಿದ್ದು ಜೀವನದಲ್ಲಿ ಅದೇ ಮೊದಲು ಬಾರಿಯಾಗಿತ್ತು. ದುಪ್ಪಟಿ, ಕಂಬಳಿಯ ಹೊರತು ಬೇರೆಯಾವದೂ ಅವಳಿಗೆ ಗೊತ್ತಿರಲಿಲ್ಲ.

ಅಬಚಿಯು ನಿಜವಾಗಿಯೂ ತಾಯಿಗೆ ಚುಕ್ಕು ಬಡಿಯುತ್ತ ಕುಳಿತುಕೊಂಡಳು. ಗಂಗೆ, ಯಮುನೆಯರ ಪಾವಿತ್ರ್ಯವು ಅಲ್ಲಿ ನೆಲೆಸಿತ್ತು. ಪ್ರಾತಃಕಾಲ ಹಾಗು ಸಾಯಂಕಾಲಗಳೆರಡರ ಭೆಟ್ಟಿಯ ಗಾಂಭೀರ್ಯವಿತ್ತು.

**ರಾತ್ರಿ : ೩೯**

## : : ಎಲ್ಲರೂ ಪ್ರೀತಿಯಿಂದ ಬಾಳಿರಿ

ಶ್ಯಾಮನ ಕತೆ ಆರಂಭವಾಗಿತ್ತು. ದೂರದಿಂದ ನಾಯಿಗಳು ಬೊಗಳುತ್ತಿದ್ದವು. ಲಮಾಣಿಗರ ತಂಡ ಬೀಡುಬಿಟ್ಟಿತ್ತು. ಅವು ಅವರ ನಾಯಿಗಳಾಗಿದ್ದವು.

“ ನಮ್ಮ ಅಬಚಿ ಹಗಲು ರಾತ್ರಿಯೆನ್ನದೆ ನಮ್ಮ ತಾಯಿಯ ಆರೈಕೆ ಮಾಡುತ್ತಿದ್ದಳು. ಅವಳು ಹುಟ್ಟುವಾಗಲೇ ಶುಶ್ರೂಷೆಮಾಡುವ ಪೂರ್ಣ ಜ್ಞಾನವನ್ನು ಪಡೆದುಕೊಂಡು ಬಂದಿದ್ದಳೋ ಎಂಬಷ್ಟು ಹುಷಾರಾಗಿ ನೋಡಿಕೊಳ್ಳುತ್ತಿದ್ದಳು. ತಾಯಿಗೆ ಸ್ವಚ್ಛವಾದ ಹಾಸಿಗೆಯನ್ನು ಹಾಸಿಕೊಟ್ಟಳು. ತನ್ನ ಹಾಸಿಗೆಯ ಮೇಲಿನ ಚದ್ದರವನ್ನು ಅವಳಿಗೆ ಹಾಸಿಕೊಟ್ಟಳು. ತಲೆಗೆ ಮೆತ್ತನ್ನ ದಿಂಬನ್ನು ಕೊಟ್ಟಳು. ಒಂದು ಬಟ್ಟಲದಲ್ಲಿ ಬೂದಿಯನ್ನು ಹಾಕಿ ಉಗುಳುವಕ್ಕಾಗಿ ತಾಯಿಯ ಸಮೀಪದಲ್ಲಿಯೇ ಇಟ್ಟಳು. ಅದರ ಮೇಲೊಂದು ಹಲಗೆಯ ತುಂಡನ್ನು ಮುಚ್ಚಳವಮಾಡಿ ಇಟ್ಟಿದ್ದಳು. ಪ್ರತಿನಿತ್ಯ ಅಬಚಿಯು ಆ ಬಟ್ಟಲವನ್ನು ಬೆಳಗಿ ಇಡುತ್ತಿದ್ದಳು. ಎರಡು ದಿವಸಕ್ಕೊಮ್ಮೆ ಬಾಗಿಲು

ಇಕ್ಕಿಕೊಂಡು ಬಿಸಿನೀರಿನಲ್ಲಿ ಬಟ್ಟೆ ನೆನಿಸಿ ತಾಯಿಯ ಮೈಯನ್ನು ಒರೆಸಿ ಒಗೆದ ಬಟ್ಟೆಗಳನ್ನು ಉಡಿಸುತ್ತಿದ್ದಳು. ಅವಳು ಜೊತೆಗೆ ಥರ್ಮಾಮಿಟರ್ ತಂದಿದ್ದಳು. ಆಗಾಗ್ಗೆ ಜ್ವರವೆಷ್ಟಿದೆ ಪರೀಕ್ಷಿಸುತ್ತಿದ್ದಳು. ಜ್ವರವು ಏರುತ್ತಿದ್ದಾಗ ಹಣೆಯಮೇಲೆ ಕೋಲನ್‌ವಾಟರ್ ಪಟ್ಟಿಯನ್ನು ಹಾಕುತ್ತಿದ್ದಳು. ಮೇಣ ಗಮಟೆನಮೇಲೆ ಕಾಗದ ಹಾಸಿ ತಾಯಿಯ ಮಲವಿಸರ್ಜನೆ ಮಾಡಿಸಿ ಅದನ್ನು ದೂರ ಚಲ್ಲಿ ಬರುತ್ತಿದ್ದಳು. ಸಾಧ್ಯವಿದ್ದಷ್ಟೆಲ್ಲ ಸೇವೆಯನ್ನು ಅಬಚಿಯು ಮಾಡಿದಳು. ಬರುವಾಗ್ಗೆ ತಂದ ಮುಸಂಬೆ ಹಣ್ಣುಗಳನ್ನು ಕಾಯ್ದಿರಿಸಿ ಅವು ತೀರುವವರೆಗೆ ರಸ ತೆಗೆದು ಕೊಟ್ಟಳು. ತಾಯಿಗೆ ಅನ್ನವನ್ನು ಕೊಡುತ್ತಿದ್ದಿಲ್ಲ. ಹಾಲು ಹೆಪ್ಪುಹಾಕಿ, ಕಡೆದು ಬೆಣ್ಣೆತೆಗೆದ ತಾಜಾ ಮಜ್ಜಿಗೆಯನ್ನು ಸೋಸಿ ಕೊಡುತ್ತಿದ್ದಳು. ಆಯುಷ್ಯದಲ್ಲಿಯೇ ಎಂದೂ ಪಡೆಯದಂಥ ಉಪಚಾರವನ್ನು ನಮ್ಮತಾಯಿ ಸಾಯುವಾಗ್ಗೆ ಅಬಚಿಯಿಂದ ಪಡೆದಳು. ಅಬಚಿಯೆಂದರೆ ಸಾಕ್ಷಾತ್ ಅಂತಃಕರಣ ಮತ್ತು ಸೇವೆಯ ಮೂರ್ತಿಯಾಗಿದ್ದಳು. ಅಚ್ಚುಕಟ್ಟುತನ ಮತ್ತು ನಿರಾಲಸ್ಯತನಗಳು ಅವಳ ವೈಶಿಷ್ಟ್ಯಗಳಾಗಿದ್ದವು.

" ಆ ಮಥೂ ಒಂದೇಸವನೆ ಒದರುತ್ತಿದೆ. ಅದಕ್ಕೆ ಇಂದು ಅನ್ನ ಹಾಕಿಲ್ಲವೇನು ? " ತಾಯಿ ಕೇಳಿದಳು. ತಾಯಿಯ ಪ್ರೀತಿಯ ಬೆಕ್ಕಿನ ಹೆಸರು ಮಥೂ ಎಂಬುದಾಗಿತ್ತು. ಆ ಬೆಕ್ಕು ತಾನಾಗಿ ಹಾಲು ಮೊಸರುಗಳಿಗೆ ಬಾಯಿ ಹಾಕುತ್ತಿರಲಿಲ್ಲ. ಅನ್ನದೊಡನೆ ತುಸು ಹಾಲು ಹಾಕಿದರೇ ಸರಿ ತಿನ್ನುತ್ತಿತ್ತು. ಅಂಥ ದೊಡ್ಡ ಗುಣ ಅದರದು. ತಾಯಿ ಕಾಹಿಲೆ ಇದ್ದಾಗಲೂ ಆ ಬೆಕ್ಕಿನ ಸಮಾಚಾರ ತೆಗೆದುಕೊಳ್ಳುತ್ತಿದ್ದಳು.

" ಅಕ್ಕಾ, ಅದಕ್ಕೆ ಹಾಲು ಅನ್ನ ಹಾಕಿದೆ. ಅದು ತಿನ್ನಲಿಲ್ಲ. ಬರೀ ಮೂಸಿನೋಡಿ ಹಿಂದೆ ಸರಿಯುತ್ತಿತ್ತು. ಇಲಿ–ಗಿಲಿ ಏನಾದರೂ ತಿಂದಿರಬಹುದು. " ಅಬಚಿ ಹೇಳಿದಳು.

" ಹೊಟ್ಟೆ–ಗಿಟ್ಟೆ ನೋಯುತ್ತಿದ್ದರೂ ಇರಬಹುದು. ಪಾಪ ! ಮೂಕ ಪ್ರಾಣಿ ! ಅದು ತನ್ನ ಕಷ್ಟ ಹೇಗೆ ಹೇಳಬೇಕು ? " ತಾಯಿ ನುಡಿದಳು.

ತಾಯಿಯ ಬೇನೆ ಹೆಚ್ಚುತ್ತಲೇ ಇದ್ದಿತು. ಬೇನೆಯ ಕಾಲು ಮುಂದೆಯೇ ಇತ್ತು. ಮುಂಬಯಿಯಿಂದ ನಮ್ಮ ಅಣ್ಣ–ಗಜಾನನ ನಾಲ್ಕುದಿವಸಗಳ ರಜೆ ಪಡೆದು ತಾಯಿಯ ಭೆಟ್ಟಿಗೆ ಬಂದಿದ್ದ. ಈಗ ತಾನೆ ನೌಕರಿ ಸಿಕ್ಕಿತ್ತು. ರಜೆ

ಸಿಗುವದು ದುಸ್ತರವಾಗಿತ್ತು. ಬಹಳ ಪ್ರಯಾಸದಿಂದ ನಾಲ್ಕುದಿವಸಗಳ ರಜೆ ಪಡೆದುಕೊಂಡಿದ್ದ.

ತಾಯಿಯ ಸ್ಥಿತಿಯನ್ನು ಕಂಡು ಅವನ ಹೃದಯಕ್ಕೆ ಆಘಾತವಾದಂತಾಯಿತು. " ಅವ್ವಾ, ಏನಿದು ಅವಸ್ಥೆ ? ನೀನು ಒಬ್ಬಳೇ ಇಲ್ಲಿದ್ದು ದುಡಿಯುತ್ತಿದ್ದೆ. ನಾವು ಮಾತ್ರ ಅಲ್ಲಿ ಚಿಕ್ಕಂದವಾಗಿದ್ದೆವು. ಸುಖವಾಗಿ ಉಣ್ಣುತ್ತಿದ್ದೆವು. ನಿನಗೆ ಒಂದು ತುತ್ತಿಗೂ ಅಭಾವವಿತ್ತು. " ಎಂದು ನುಡಿದು ಅಳತೊಡಗಿದನು. ಚಿಕ್ಕಪುರುಷೋತ್ತಮನು ಎಲ್ಲ ಸಮಾಚಾರಗಳನ್ನೂ ಬಂದೊಡನೆ ತಿಳಿಸಿಬಿಟ್ಟಿದ್ದನು. ಡಂಗುರ ಸಾರಿದ ಹೃದಯದ್ರಾವಕತೆ, ತಾಯಿಯ ಕಷ್ಟ, ಎಲ್ಲವನ್ನೂ ಹೇಳಿದ್ದನು. ಅಣ್ಣನ ಹೃದಯ ಸೀಳಿದಂತಾಗಿತ್ತು.

ತಾಯಿ ಹೇಳಿದಳು, "ಹೊರಟು ನಿಂತಿದ್ದೇನೆ. ಮಕ್ಕಳಿರಾ, ಈ ದೇಹಕ್ಕೆ ಒಳ್ಳೆಯದನ್ನು ಕೊಟ್ಟರೇನು? ಕೆಟ್ಟದ್ದನ್ನು ಕೊಟ್ಟರೇನು? ದೇವರಿಚ್ಛೆ ಇರುವವರೆಗೆ ಈ ಯಂತ್ರವು ನಡೆಯತಕ್ಕದ್ದೇ. ನೀನು ಕೆಡುಕೆನ್ನಿಸಿಕೊಳ್ಳಬೇಡ. ನೀವೇನು ಅಲ್ಲಿ ಸುಖವಾಗಿರುವದು ಅಷ್ಟರಲ್ಲಿಯೇ ಇದೆ. ಹಗಲೆಲ್ಲ ದುಡಿಯಬೇಕು. ನೀನು ೫ ರೂಪಾಯಿ ಕಳಿಸಿದಾಗ್ಗೆ ನನಗೆ ಧನ್ಯತೆಯೆನಿಸಿತ್ತು. ದೊರೆಯುವ ಹತ್ತೊಂಬತ್ತು ರೂಪಾಯಿಗಳಲ್ಲೇ ಐದುರೂಪಾಯಿ ಅವರಿಗೆ ಕಳಿಸಿದ್ದೆ. ಆಗ ನನಗೆ ಎಲ್ಲಿಲ್ಲದ ಬಲಬಂದಿತ್ತು. ಮಗನಿಂದ ಬಂದ ಮೊದಲನೆ ಮನಿಯಾರ್ಡರ್ ಎಂದು ಅವರಿಗೆ ಹಿಡಿಸಲಾರದ ಹಿಗ್ಗು ! ಇನ್ನು ನನ್ನ ಚಿಂತೆ ದೂರಾಯಿತು. ನಿಮ್ಮನ್ನು ಸಮರ್ಥರನ್ನಾಗಿ ಮಾಡುವದೊಂದೇ ನನ್ನ ಕೆಲಸವಾಗಿತ್ತು. ನೀವು ಸದ್ಗುಣಿಗಳಾಗಿದ್ದೀರಿ. ನನ್ನ ಬಯಕೆ ಈಡೇರಿತು. ನಿಮಗೆ ಹಣ ಸಿಗಲಿ ಸಿಗದಿರಲಿ ನಿಮ್ಮಲ್ಲಿ ಗುಣದ ಸಂಪತ್ತು ಇದೆ. ನನಗಿನ್ನು ನಿಮ್ಮ ಚಿಂತೆಯಿಲ್ಲ. ಶ್ಯಾಮನು ಅತ್ತ ಓದುತ್ತಿದ್ದಾನೆ. ಈ ಪುರುಷೋತ್ತಮನು ನನ್ನು ಅಬಚಿ ತಯಾರಿಸುತ್ತಾಳೆ. ಒಬ್ಬರಿಗೊಬ್ಬರು ಪ್ರೀತಿಸಿರಿ. ಒಬ್ಬರನ್ನೊಬ್ಬರು ಮರೆಯಬೇಡಿರಿ " ತಾಯಿ ಕೊನೆಯ ಸಂದೇಶವನ್ನು ಹೇಳುತ್ತಿದ್ದಳು.

" ಅವ್ವಾ, ನಾನು ಇಲ್ಲಿಯೇ ನಿನ್ನ ಬಳಿಯಲ್ಲಿ ಇರಲೇನು ? ಆ ನೌಕರಿಯನ್ನು ತೆಗೆದುಕೊಂಡೇನು ಮಾಡುವದು ? ತಾಯಿಯ ಸೇವೆಗೆ ಅಡ್ಡ ಬರುವ ಆ ನೌಕರಿಯಾದರೂ ಏತಕ್ಕೆ ? ಅವ್ವಾ, ನನಗೆ ನೌಕರಿಯ ಅಭಿ

ಲಾಷೆಯಿಲ್ಲ. ನಿಜವಾಗಿಯೂ ಇಲ್ಲ. ನಿನ್ನ ಪಾದಸೇವೆಗಿಂತ ಮೇಲಧಿಕಾರಿಗಳ ಬೂಟು ನನಗೆ ಪೂಜ್ಯವಲ್ಲ! ಅಮ್ಮಾ! ನಿನ್ನ ಚರಣಸೇವೆಯಲ್ಲಿಯೇ ನನ್ನ ಕಲ್ಯಾಣವಿದೆ. ಅದುವೇ ನನ್ನ ಮೋಕ್ಷ. ಅದುವೇ ನನಗೆ ಭಾಗ್ಯ. ಅಮ್ಮಾ, ಅಪ್ಪಣೆ ಕೊಡು. ರಾಜೀನಾಮೆ ಬರೆದುಕೊಂಡು ಬಂದಿದ್ದೇನೆ. ನಿನ್ನ ಆಜ್ಞೆಯೇ ನನಗೆ ಮಾನ್ಯ!" ಅಣ್ಣಾ ಕನಿಕರದ ಕಣ್ಣೀರು ಹರಿಸುತ್ತ ನುಡಿದ.

ತಾಯಿ ಆಲೋಚಿಸಿ ಮೆಲ್ಲಗೆ ಹೇಳಿದಳು, "ಗಜೂ, ಈಗಂತೂ ನಿನ್ನ ಸಖೂ–ಅಬಚಿ ಇದ್ದಾಳೆ. ಮೊದಲೇ ನೌಕರಿ ಸಿಗುವದಿಲ್ಲ. ದೊರೆತದ್ದನ್ನು ಕಾಪಾಡಿಕೋ. ಅವರಿಗೆ ಐದು ರೂಪಾಯಿ ಕಳಿಸುತ್ತಾ ಇರು. ಎರಡು ರೂಪಾಯಿ ಕಳಿಸಿದರೂ ಆದೀತು. ಮರೆಯದೆ ಮಾತ್ರ ಕಳಿಸುತ್ತಾ ಇರು. ಅವರ ಸೇವೆಯಲ್ಲಿಯೇ ನನ್ನ ಸೇವೆ ಇದೆ. ನಾನು ಇಷ್ಟರಲ್ಲಿ ಸಾಯುವದಿಲ್ಲ. ಆ ಪುಣ್ಯ ನನಗಿಲ್ಲ! ನವೆದು ನವೆದು ನಾನು ಸಾಯತಕ್ಕವಳು. ಬಹಳ ಜೋರಾಗಿದೆಯೆಂದು ಕಂಡರೆ ಮತ್ತೆ ನಿನ್ನನ್ನು ಕರೆಯಿಸಿಕೊಳ್ಳುತ್ತೇನೆ."

ಅಣ್ಣಾನು ಮುಂಬಯಿಗೆ ಹಿಂತಿರುಗಿ ಹೊರಟನು. ದುರ್ದೈವಿಯಾದ ಶ್ಯಾಮನಂತೆ ಅಣ್ಣಾನೂ ಅಗಲಿ ಹೊರಟಿದ್ದ. ಇದೇ ತಾಯಿಯ ಕೊನೆಯ ಭೆಟ್ಟಿಯೆಂದು ಅವನಿಗೆನಿಸಿರಲಿಲ್ಲ. ತಾಯಿಯ ಚರಣಗಳ ಮೇಲೆ ತನ್ನ ಮಸ್ತಕವನ್ನಿಟ್ಟ. ತಾಯಿ ಅವನ ಮುಖದ ಮೇಲೆ, ತಲೆಯ ಮೇಲೆ ತನ್ನ ಕೃಶವಾದ ಕೈಗಳನ್ನು ಆಡಿಸಿದಳು. ಪವಿತ್ರವಾದ ಕೈಗಳನ್ನು ಆಡಿಸಿದಳು. "ಹೋಗು, ಮಗನೇ ಚಿಂತಿಸಬೇಡ. ಶ್ಯಾಮನಿಗೆ ನಾನು ಒಳಿತಾಗಿದ್ದೇನೆಂದೇ ಪತ್ರ ಬರೆ. ಅವನಿಗೂ ಸುಮ್ಮನೆ ಯೋಚನೆ ಬೇಡ. ಎಲ್ಲರೂ ಪ್ರೀತಿಯಿಂದ ಇರಿ. ಒಬ್ಬರನ್ನೊಬ್ಬರು ದೂರ ಮಾಡಲು ಯತ್ನಿಸಬೇಡಿರಿ." ತಾಯಿ ತನ್ನ ಅಮೃತ ವಾಣಿಯನ್ನು ಬೀರಿದಳು.

ಭಾರವಾದ ಹೃದಯದಿಂದ ಅಣ್ಣಾನು ಹೋದನು. ಕರ್ತವ್ಯಪಾಲನೆಗಾಗಿ ಹೋದನು. ಪ್ರಪಂಚವು ಕಠಿಣವಾದದ್ದೇ ನಿಜ.

ರಾತ್ರಿ : ೪೦

# : : ಕೊನೆಯ ಸಂದೇಶ

" ಆ ಲಿಂಬೇ ಗಿಡಕ್ಕೆ ನೀರು ಹಾಕಿರೋ ಒಣಗಿ ಹೋದೀತು ? ಆ ಹೊಸ ಹಲಸಿನ ಮರಕ್ಕೂ ನೀರು ಹಣಿಸಿರಿ " ತಾಯಿ ವಾಯು ವಿಕಾರ ದಲ್ಲಿಯೇ ಮಾತಾಡುತ್ತಿದ್ದಳು. ಆ ವಾಯುವಿನಲ್ಲಿ ತಾನು ಹೊಸತಾಗಿ ಹಚ್ಚಿದ ಗಿಡಗಳು ಅವಳಿಗೆ ಕಾಣುತ್ತಿದ್ದವು. ಕಾಹಿಲೆಯವಳೂ ಅಶಕ್ತಳೂ ಇದ್ದಾಗ್ಯೂ ಅವಳು ಆ ಗಿಡಗಳಿಗೆ ನೀರು ಗೊಬ್ಬರ ಹಾಕುತ್ತಾ ಇದ್ದಳು. ಅವು ಗಳ ಎಲೆ ಎಲ್ಲಿ ಹುಳಿಯುತ್ತವೋ ಎಂದು ಆಗಾಗ್ಗೆ ನಿರೀಕ್ಷಿಸುತ್ತಿದ್ದಳು. ತಾಯಿಯು ಸ್ವತಃ ಹಚ್ಚಿದ ಎಷ್ಟೋ ಗಿಡಗಳು ನಮ್ಮ ಹಿತ್ತಲದಲ್ಲಿದ್ದವು. ನಾನು ದಾಪೋಲಿಯಲ್ಲಿದ್ದಾಗ ಚಂದನದ ಗಿಡವನ್ನು ಒಯ್ದಿದ್ದೆ. ಎಲ್ಲ ಗಿಡ ಗಳು ಸತ್ತುಹೋದರೂ ತಾಯಿ ಹಚ್ಚಿದ ಆ ಗಿಡ ಮಾತ್ರ ಇನ್ನೂ ಬದುಕಿದೆ. ಪ್ರೀತಿಯಿಂದ ಹಚ್ಚಿದ ಗಿಡವೆಂದು ಬದುಕಿದೆಯೇನು ?

ನಸುಕಿನ ವೇಳೆಯಾಗಿತ್ತು. ವಾಯುವಿನಲ್ಲಿ ತಾಯಿ ಮಾತನಾಡುತ್ತಿ ದ್ದಳು. ಆ ಮಾತಿನಲ್ಲಿ ಒಂದಕ್ಕೊಂದು ಸಂಬಂಧವಿದ್ದಿಲ್ಲ. " ಗಿಡಗಳಿಗೆ ನೀರು ಹಾಕಿರಿ " ಎಂದು ಹೇಳುತ್ತಿರುವಷ್ಟರಲ್ಲಿ " ಆಗೋ ನೋಡಿರಿ, ಡಂಗುರ ಸಾರು ತ್ತಿದ್ದಾರೆ. ನಾನು ಕಿವಿ ಮುಚ್ಚಿಕೊಳ್ಳುತ್ತೇನೆ " ಎಂದೆನ್ನುತ್ತಿದ್ದಳು. ಪುರು ಷೋತ್ತಮನು ಮಾತ್ರ ಮಲಗಿಕೊಂಡಿದ್ದ. ಮಿಕ್ಕವರೆಲ್ಲ ತಾಯಿಯ ಸುತ್ತಲೂ ಕುಳಿತಿದ್ದರು. ಎಲ್ಲರ ಮುಖಗಳೂ ಇಳಿದು ಹೋಗಿದ್ದವು. ಬಾಡಿ ಹೋಗಿ ದ್ದವು. ಮೃತ್ಯುವೇ ಆ ಮನೆಯಲ್ಲಿ ಬಂದು ನೆಲೆಸಿರುವನೋ ಎಂಬಂತೆ ಕಾಣುತ್ತಿತ್ತು.

" ಅದೋ ಆ ಗೂಟದ ಮೇಲೆ ಶ್ಯಾಮ ಕುಳಿತಿದ್ದಾನೆ. ಕೆಳಗೆ ಬಾರೋ ಕಳ್ಳಾ ! ಬಾಲ್ಯದ ಹಟ ಇನ್ನೂ ಕಡಿಮೆಯಾಗಿಲ್ಲವೇನು ? ಬಾ. ನನ್ನ ಬಳಿಗೆ ಬಾ. ತಾಯಿಯ ಹತ್ತಿರ ಹಟ ಮಾಡದೆ ಇನ್ನಾರ ಹತ್ತಿರ ಮಾಡುವದು ? ಆದರೆ ಸಾಕು ನಿನ್ನ ಹಟ. ನನ್ನನ್ನು ನೋಡು ಬಾ. " ತಾಯಿ ಬಡಬಡಿ ಸುತ್ತಲೇ ಇದ್ದಳು.

“ ಅಕ್ಕಾ, ಅಕ್ಕಾ, ” ಅಬಚಿ ತಾಯಿಯನ್ನು ಕರೆಯುತ್ತಿದ್ದಳು. ಅವಳನ್ನು ಪ್ರಜ್ಞೆ ಬರುವಂತೆ ಮಾಡಲು ಯತ್ನಿಸುತ್ತಿದ್ದಳು.

“ ನಮಾ, ನಿನ್ನ ಎಣ್ಣೆ ಮರಳಿ ಕೊಡಲಿಲ್ಲ. ಸಿಟ್ಟಾಗಬೇಡ. ಶ್ಯಾಮಾ, ಬಾ. ನಿನ್ನ ತಣ್ಣನ ಕೈ ನನ್ನ ಹಣೆಯ ಮೇಲೆ ಇಡು. ” ತಾಯಿಯ ಈ ಪರಿಯ ಮಾತುಗಳನ್ನು ಕೇಳಿ ಎಲ್ಲರೂ ಮೂಕರಾಗಿದ್ದರು, ಸ್ತಬ್ಧರಾಗಿದ್ದರು.

“ ನಿಮ್ಮ ತೊಡೆಯೇ ನನ್ನ ಮಾನ–ಮರ್ಯಾದೆ. ಡಂಗುರ ಸಾರುವರೇ ? ಸಾರಲಿ. ನಿಮ್ಮ ಚರಣಗಳಿವೆ ನನಗೆ. ಹಣೆಗೆ ಕುಂಕುಮ ಇದೆಯಲ್ಲವೇ ? ಯಾರು ನನ್ನ ಮರ್ಯಾದೆ ಹರಣಮಾಡುವರು ? ಯಾವ ಸಾವುಕಾರನು ನನ್ನ ಮಾನ ತೆಗೆದುಕೊಳ್ಳುವನು ? ನನ್ನ ಮಾನವು ಆಭರಣಗಳಲ್ಲಿಲ್ಲ, ಹೊಲಮನೆಗಳಲ್ಲಿಲ್ಲ. ಅವರ ಪಾದ, ಅವರ ತೊಡೆ, ಅವರ ಪ್ರೇಮ ಇದರಲ್ಲಿ ನನ್ನ ಮಾನವಿದೆ. ಕೊಡಿರಿ, ಅವರ ತೊಡೆಯನ್ನು ಕೊಡಿರಿ.” ಎಂದು ಕೂಗಿಕೊಂಡು ತಾಯಿ ಏಳತೊಡಗಿದಳು. ಯಾರಿಗೂ ಅಸುಗೊಳ್ಳದಾಗಿದ್ದಳು. ಎಲ್ಲರೂ ಗಟ್ಟಿಹಿಡಿದು ಮಲಗಿಸಿದರು.

ತಂದೆಯವರು ತಮ್ಮ ತೊಡೆಯ ಮೇಲೆ ತಾಯಿಯ ತಲೆಯನ್ನಿರಿಸಿಕೊಂಡರು. “ ನೀರು, ನೀರು ” ಎಂದು ತಾಯಿ ಕೇಳಿದಳು.

ಅಬಚಿಯು ತಾಯಿಯ ಬಾಯಲ್ಲಿ ನೀರು ಹಾಕಿದಳು.

“ ಅಕ್ಕಾ, ” ಅಬಚಿ ಕೂಗಿದಳು. ತಾಯಿ ನೆಟ್ಟ ದೃಷ್ಟಿಯಿಂದ ನೋಡಿ ಏನೂ ಇಲ್ಲ, ಏನೂ ಇಲ್ಲ ಎಂದು ಕೈಸನ್ನೆ ಮಾಡಿ ತೋರಿಸಿದಳು. ತುಸು ಹೊತ್ತು ಅವಳು ಶಾಂತಳಾಗಿದ್ದಳು. “ ನನ್ನ ತಲೆಯನ್ನು ತೊಡೆಯ ಮೇಲೆ ಇರಿಸಿಕೊಂಡಿರಾ ? ” ತಾಯಿ ಕೇಳಿದಳು.

“ ಹೌದು, ಇದು ನೋಡು ನಾನು ನಿನ್ನ ಬಳಿಯಲ್ಲಿಯೇ ಕುಳಿತಿದ್ದೇನೆ. ಮಾತಾಡಬೇಡ ” ಎಂದು ತಂದೆ ನುಡಿದರು.

ತುಸು ಹೊತ್ತಿನ ಮೇಲೆ ಮತ್ತೆ ತಾಯಿಯ ಮಾತಿಗೆ ಆರಂಭವಾಯಿತು. “ ನನಗೇಕೆ ಭೆಟ್ಟಿಯಾಗಲು ಬಂದೆಯೋ ? ಚಂದ್ರಿಯೂ ಬಂದಳಲ್ಲ ? ಬರ್‍ರಿ. ಎಲ್ಲರೂ ಬರ್‍ರಿ. ನೀನು ನಿನ್ನ ಅಭ್ಯಾಸ ಬಿಟ್ಟು ಏಕೆ ಬಂದೆ ? ನಾನು ಯಾವಾಗಲೂ ನಿನ್ನ ಬಳಿ ಇರುತ್ತೇನಲ್ಲ. ಆಗಲಿ. ಶ್ಯಾಮಾ, ನೀನು ರೇಗಿಕೊಂಡು ಕೂಡಬೇಡ. ನಾನು ಬೀಸಲಿಕ್ಕೆ ಹಚ್ಚಿದೆನೆಂದು ಕೋಪವೇನು ? ಇನ್ನೇನೂ

ಹಚ್ಚಲಾರೆ. ಮುಗಿಯಿತು ಇಲ್ಲಿಗೆ. ಬಾ ಶ್ಯಾಮಾ. ಇಲ್ಲವೇನು ಅನ್ನುತ್ತೀರಿ– ಅದೋ ಎದುರಿಗೇ ನಿಂತಿದ್ದಾನಲ್ಲವೇ ?– ಅವನೇ ಶ್ಯಾಮ – ನಿಮಗೆ ಗುರುತು ಸಿಕ್ಕದಿದ್ದರೆ ಅವನ ತಾಯಿಗೂ ಸಿಗುವದಿಲ್ಲವೇನು ?"

ಇಂಥ ಸನ್ನಿಪಾತದಲ್ಲಿಯೇ ರಾತ್ರಿಗಳೆಯಿತು. ಸೂರ್ಯೋದಯವಾಯಿತು. ಪುರುಷೋತ್ತಮನಿಗೆ ಅಬಚಿ ಹೇಳಿದಳು, "ರಾಧಾಬಾಯಿಯವರಿಂದ ಹೇಮಗರ್ಭ ಮಾತ್ರೆಯನ್ನು ತಂದಿಡು. ಹೋಗು." ಹೇಮಗರ್ಭದ ಮಾತ್ರೆಯನ್ನು ಕೊನೆಯ ಗಳಿಗೆಯಲ್ಲಿ ಕೊಡುತ್ತಾರೆ. ಅಂದರೆ ಎರಡು ನಿಮಿಷ ಹೆಚ್ಚು ಸ್ಮೃತಿ ಇರುವದಂತೆ. ಅಬಚಿಗೆ ತಾಯಿಯ ಲಕ್ಷಣಗಳೇನೂ ಸರಿಗಾಣಲಿಲ್ಲ. ಒಂದೇ ರಾತ್ರಿಯಲ್ಲಿ ತಾಯಿಯ ಕಣ್ಣು ಒಳಗೆ ಸೇರಿಬಿಟ್ಟಿದ್ದವು.

ಆ ದಿವಸ ಸಂಕಷ್ಟ ಚತುರ್ಥಿಯಾಗಿತ್ತು. ತಂದೆಯವರಿಗೆ ಉಪವಾಸ. ಆದರೆ ಅವರು ಅಶಕ್ತರಾದಾಗಿನಿಂದ ಮಧ್ಯಾಹ್ನ ಫಲಾಹಾರವನ್ನಾಗಲೀ ಅಕ್ಕೀ ಉಸುಳಿಯನ್ನಾಗಲೀ ತಿನ್ನುತ್ತಿದ್ದರು. ತಾಯಿ ಅವರಿಗೆ ಹೇಳಿದಳು, "ಇಂದು ಚತುರ್ಥಿಯಲ್ಲವೇ ? ಹೋಗಿ ಸ್ನಾನ ಮಾಡಿ ತುಸು ಫಲಾಹಾರ ತೆಗೆದುಕೊಳ್ಳಿರಿ. ನಿಮ್ಮ ಜೀವವನ್ನು ಹೀಗೆ ಬಳಲಿಸಬೇಡಿರಿ." ತಾಯಿ ತಡೆದು ತಡೆದು ನಿಧಾನವಾಗಿ ಮಾತನಾಡುತ್ತಿದ್ದಳು. ತಂದೆಯವರು ಎದ್ದು ಸ್ನಾನ ಮಾಡಿ ದೇವಸ್ಥಾನಕ್ಕೆ ಹೋಗಿ ಬಂದರು. ಗಣಪತಿಯ ತೀರ್ಥವನ್ನು ತಂದು ತಾಯಿಗೆ ಕುಡಿಸಿದರು.

ತಾಯಿಯು ಪುಟ್ಟ ಪುರುಷೋತ್ತಮನನ್ನು ಬಳಿಯಲ್ಲಿ ಕರೆದಳು. ಅವನ ಮುಖದ ಮೇಲೆ ಕೈ ಆಡಿಸುತ್ತ ಕ್ಷೀಣ ಸ್ವರದಲ್ಲಿ ಹೇಳಿದಳು, "ಮಗೂ, ಒಳ್ಳೆಯವನಾಗಿರು. ಹಟ ಮಾಡಬೇಡ. ಶ್ಯಾಮಣ್ಣ, ಗಜಣ್ಣ ಇದ್ದಾರೆ. ಅಬಚಿ ಇದ್ದಾಳೆ. ಸರಿಯಾಗಿ ನಡೆದುಕೋ." ಪುರುಷೋತ್ತಮನು ಅಳತೊಡಗಿದನು. ತಾಯಿ ಒಂದೇಸಮನೆ ಅವನ ಬೆನ್ನಮೇಲೆ ಕೈ ಎಳೆಯುತ್ತಿದ್ದಳು.

"ಸಖೂ, ಎಲ್ಲರ ಊಟವಾಯಿತೇ ?" ತಾಯಿ ವಿಚಾರಿಸಿದಳು.

"ಆಯಿತಕ್ಕಾ."

"ಸಖೂ, ಎಲ್ಲರೂ ನಿನ್ನವರೇ. ತಾಯಿ ಸತ್ತು ಅಬಚಿ ಬದುಕಲಿ ! ಪುರುಷೋತ್ತಮ, ಶ್ಯಾಮ, ಗಜೂ, ಚಂದ್ರಿ ಎಲ್ಲರೂ ನಿನ್ನವರೇ.........." ತಾಯಿ ಅಂತಿಮ ಸಂದೇಶವನ್ನು ಹೇಳುತ್ತಿದ್ದಳು.

" ಹೌದಕ್ಕಾ, ಯಾರು ಅಲ್ಲ ಅನ್ನುತ್ತಾರೆ ? " ಅಬಚಿ ನುಡಿದಳು.

" ಶ್ಯಾಮು....ಬಡವ....ಸದ್ಗುಣಿ....ಚಂದ್ರಿ, ಗಜು.... ದೇವರಿದ್ದಾನೆ.... ಎಲ್ಲರಿಗೂ ಅವನೇ.... " ತಡೆದು ತಡೆದು ತಾಯಿ ನುಡಿಯುತ್ತಿದ್ದಳು.

ಎಲ್ಲರೂ ತಾಯಿಯ ಸುತ್ತಲೂ ಕುಳಿತಿದ್ದರು. ದೂರ್ವೆಯ ಅಜ್ಜಿಯನ್ನು ನೋಡಿ ತಾಯಿ ಹೇಳಿದಳು, " ಕ್ಷಮಿಸಿರಿ, ಏನೇನೋ....ಆಡಿದೆ....ಮರೆಯಿರಿ."

ಅಜ್ಜಿ ಕರಗಿ ಹೋಗಿ ಕಣ್ಣೀರು ಹರಿಸಿದಳು.

" ಸಖೂ, ನಾನಾ ಅವರಿಗೆ ಕ್ಷಮಿಸಲು ಹೇಳು. ನಾನು ಅವರ ಮಗಳೇ ಅಲ್ಲವೇ....? "

ತುಸು ಹೊತ್ತು ಮೌನ. ನಡುವೇ ಕಣ್ಣು ಗಿರಿಗಿರಿ ತಿರುಗಿಸುವಳು. ಒಮ್ಮೆ ಮುಚ್ಚಿಕೊಳ್ಳುವಳು.

" ಶ್ಯಾಮೂ.... " ಒಂದೇ ಶಬ್ದ.

" ಅಕ್ಕಾ, ಇಂದು ಅವನಿಗೆ ಬರಹೇಳುತ್ತೇನೆ. " ಅಬಚಿ ನುಡಿದಳು. ಆಮೇಲೆ ಅಬಚಿ ನಮ್ಮ ತಂದೆಯವರಿಗೆ ಹೇಳಿದಳು, " ಭಟ್ಟರನ್ನು ಕರೆದು ಗೋದಾನದ ಸಂಕಲ್ಪ ಬಿಡಿಸಿರಿ. "

ಸಾಯುವ ಮುಂದೆ ಆಕಳ ದಾನ ಮಾಡಬೇಕೆಂಬ ರೂಢಿಯಿದೆ. ಆಕಳು ಇಲ್ಲದಿದ್ದರೆ ತುಸು ಹಣವನ್ನು ಗೋದಾನದ ಬದಲು ದಾನ ಮಾಡಿಸುತ್ತಾರೆ. ತಾಯಿಯ ಕೈಯಿಂದ ಗೋದಾನದ ಸಂಕಲ್ಪ ಮಾಡಿಸಲಾಯಿತು.

ತಾಯಿ ಮಾತನಾಡದಾದಳು. ವಾಣಿ ಅಡಗಿತು. ಬರೀ ನೋಡುತ್ತಿದ್ದಳು. ಪುರುಷೋತ್ತಮನ ಮೈಮೇಲೆ ಕೈಎಳೆಯುತ್ತಿದ್ದಳು. ನಡುವೇ ಬೆರಳು ಎತ್ತಿ ದೇವರ ಕಡೆಗೆ ಹೋಗುವೆನೆಂದು ಸೂಚಿಸುತ್ತಿದ್ದಳು. ಎಷ್ಟೋ ಹೊತ್ತಿನ ಮೇಲೆ ಇದ್ದಬಿದ್ದ ಶಕ್ತಿಯನ್ನೆಲ್ಲ ಒಟ್ಟುಗೂಡಿಸಿ ಭಾವೂ ಅವರಿಗೆ ಹೇಳಿದಳು, " ನೀವು ಜೋಕೆಯಿಂದ ಇರಿ. ವ್ಯಥೆಪಟ್ಟುಕೊಳ್ಳಬೇಡಿರಿ. ನಾನು ಸುಖದಿಂದ ಈ ತೊಡೆಯ ಮೇಲೆ.... " ಮುಂದೆ ಮಾತು ಹೊರಡಲಿಲ್ಲ.

ಎಲ್ಲರೂ ಶಾಂತರಾಗಿದ್ದರು. ತಾಯಿಯ ಶ್ವಾಸ ಕೆಳಗೆ ಮೇಲೆ ಆಗ ಹತ್ತಿತು. ಊರ ವೈದ್ಯರಾದ ಕುಶಾಅಪ್ಪ ಬಂದರು. ನಾಡಿ ಪರೀಕ್ಷೆಮಾಡಿದರು. " ಅರ್ಧ ಗಳಿಗೆ " ಅವರು ಖಿನ್ನರಾಗಿ ನುಡಿದರು. ನೆರೆಮನೆಯ ಜಾನಕೀ ಬಾಯಿ ಮತ್ತು ರಾಧಾಬಾಯಿ ಬಂದಿದ್ದರು. ನರ್ಮದಾಬಾಯಿ, ಇಂದಕ್ಕ

ಕೂಡ ಇದ್ದರು.

ಅಲ್ಲಿ ಸ್ಮಶಾನ ಶಾಂತತೆಯು ನೆಲಸಿತ್ತು. ಇನ್ನು ತಾಯಿ ಹೋಗತಕ್ಕವಳೆಂದು ಎಲ್ಲರೂ ತಿಳಿದಿದ್ದರು.

"ಅವಳಿಗೆ ಶ್ಯಾಮ, ಚಂದ್ರಿ ಭೆಟ್ಟಿಯಾಗಲಿಲ್ಲ. ಗಜೂ ಭೆಟ್ಟಿಯಾಗಿ ಹೋದ" ತಂದೆ ನುಡಿದರು.

"ಅವರ ನೆನಪನ್ನು ತೆಗೆಯುತ್ತಿರಬಹುದಲ್ಲವೇ?" ಜಾನಕೀಬಾಯಿ ವಿಚಾರಿಸಿದರು.

ತಾಯಿಯ ತುಟಿ ಅಲುಗಾಡಿದಂತೆ ಕಂಡವು. ಏನು ಆಡಬೇಕಾಗಿತ್ತೋ, ಏನು ಹೇಳುವದಿತ್ತೋ? ಮಾತು ಬಾರವು. ತುಟಿಗಳಿಂದ 'ರಾಮ' ಎನ್ನುತ್ತಿದ್ದಳೋ, 'ಶ್ಯಾಮ' ಎನ್ನುತ್ತಿದ್ದಳೋ? ರಾಧಾಬಾಯಿ ಹೇಮಗರ್ಭ ಮಾತ್ರೆ ತೆಯ್ದು ಕುಡಿಸಿದರು. "ಎಲ್ಲರೂ ಸುಖವಾಗಿರಿ" ತಾಯಿ ಹೇಳಿದಳು.

"ಮತ್ತೇನಾದರೂ ಹೇಳುವದಿದೆಯೋ?" ರಾಧಾಬಾಯಿ ಗಟ್ಟಿಯಾಗಿ ಕಿವಿಯಲ್ಲಿ ಕೇಳಿದರು. ತಾಯಿಯು "ಏನೂ ಇಲ್ಲ" ಎಂದು ಕೈ ಮಾಡಿ ಹೇಳಿದಳು.

ಕೊನೆಯ ಲಕ್ಷಣಗಳು ಕಾಣಿಸಿಕೊಂಡವು. ನಾಲಿಗೆ ಒಳಗೆಸೇದುತ್ತಿತ್ತು. ರಾಧಾಬಾಯಿ ಗಂಗೆಯ ಎರಡು ಹನಿ ಬಾಯಲ್ಲಿ ಹಾಕಿದರು. ಮೇಲೊಂದು ತುಳಸೀಪತ್ರವನ್ನಿಟ್ಟರು. ತಾಯಿಯನ್ನು ಕಂಬಳಿಯ ಮೇಲೆ ಮಲಗಿಸಿದರು. ದೇವರ ಕಡೆಗೆ ಹೋಗುವಾಗ್ಗೆ ವಿರಕ್ತರಾಗಿ ಹೋಗುವದಿರುತ್ತದೆ.

ತುಸು ಹೊತ್ತಿನ ಮೇಲೆ 'ರಾಮ' ಎಂಬ ಶಬ್ದ ಹೊರಬಿತ್ತು. ಎಲ್ಲರನ್ನೂ ದುಃಖಸಾಗರದಲ್ಲಿ ಮುಳುಗಿಸಿ ತಾಯಿ ಹೋದಳು. ದೇವರ ಕರೆ ಬಂದದ್ದರಿಂದ ಅವಳು ಹೋದಳು. ಆ ಕರೆಯನ್ನು ಯಾರೂ ತಪ್ಪಿಸುವದು ಸಾಧ್ಯವಿಲ್ಲ. ಶ್ಯಾಮನ ತಾಯಿ ಹೋದಳು. ಭಾವೂ ಅವರ ಪುಣ್ಯ ತೀರಿತು. ಪುರುಷೋತ್ತಮನ ಕೃಪಾಛತ್ರ ಹೋಯಿತು. ಶ್ಯಾಮ ಮತ್ತು ಗಜಾನನರ ಸ್ಫೂರ್ತಿದೇವತೆ ಮಾಯವಾದಳು! ಚಂದ್ರಿಯ ತವರುಮನೆ ಲೋಪವಾಯಿತು! ನಾನಾ ಅವರ ದುರ್ದೈವೀ ಮಗಳು ಇಲ್ಲವಾದಳು! ಆಳುಮಕ್ಕಳ ತಾಯಿ ಮರೆಯಾದಳು. ಜಗತ್ತಿನ ಜಂಜಾಟವನ್ನು ತೊರೆದು ತಾಯಿಯು ದೊಡ್ಡತಾಯಿಯ ಆಶ್ರಯದಲ್ಲಿ ಪ್ರೀತಿಯಿಂದ ವಿರಮಿಸುವದಕ್ಕಾಗಿ ಹೊರಟು ಹೋದಳು.

## : : ಭಸ್ಮಮಯ ಮೂರ್ತಿ

ತಾಯಿಯ ಬಳಿಯಲ್ಲಿ ನಾನಿರಲಿಲ್ಲ. ನಾನು ಕಲಿಯುವದಕ್ಕಾಗಿ ದೂರ ಇದ್ದೆ. ತಾಯಿಯ ಸೇವೆಯನ್ನು ಮಾಡದೆ ಕಲಿಯುತ್ತಿದ್ದೆನು; ಆದರೆ ತಾಯಿಯ ಸೇವೆ ಮಾಡಲು ಅನುಕೂಲವಾಗಲೆಂದು ಕಲಿಯುತ್ತಿದ್ದೆನು. ಆ ದಿವಸ ನನ್ನ ಕನಸಿನಲ್ಲಿ ತಾಯಿ ಬಂದು ಹೇಳಿದಳು, "ನನ್ನ ಭೆಟ್ಟಿಗೆ ಏಕೆ ಬರಲಿಲ್ಲ? ಅವರು ನಿನಗೆ ತಿಳಿಸಲಿಲ್ಲವೇನು? ಅಂದು ರೇಗಿಕೊಂಡು ಹೋಗಿದ್ದೆ. ಇನ್ನೂ ಸಿಟ್ಟು ಇಳಿಯಲಿಲ್ಲವೇನು? ಚಿಕ್ಕವರ ಸಿಟ್ಟು ಬೇಗ ಇಳಿಯುತ್ತದೆ. ನಿನ್ನ ಸಿಟ್ಟು ಹೇಗೆ ಕಡಿಮೆಯಾಗಲಿಲ್ಲ? ಬಂದು ನನಗೆ ಭೆಟ್ಟಿ ಕೊಟ್ಟು ಹೋಗು." ನಸುಕಿನಲ್ಲಿ ಎದ್ದು ಆ ಕನಸನ್ನು ನೆನಿಸಿಕೊಂಡಾಗ ಹೇಗೆ ಹೇಗೋ ಆಯಿತು. ಇಂದು ತಾಯಿಗೆ ಹೆಚ್ಚು ಕಾಹಿಲೆ ಇರಲಿಕ್ಕಿಲ್ಲ ವಷ್ಟೇ. ರೆಕ್ಕೆಗಳಿದ್ದರೆ ತಾಯಿಯ ಬಳಿ ಹಾರಿ ಹೋಗುತ್ತಿದ್ದೆನೆನ್ನಿಸಿತು. ಎಷ್ಟು ದೂರ ಹೋಗುವದಿತ್ತು! ಕಡಮೆಯೆಂದರೂ ಎರಡು ದಿವಸ ಹಿಡಿಯುತ್ತಿದ್ದವು. ಉಗಿಬಂಡಿ, ಹಡಗ, ಆಮೇಲೆ ಎತ್ತಿನ ಬಂಡಿಯ ಪ್ರವಾಸ ಇಷ್ಟೆಲ್ಲ ಮಾಡಬೇಕಾಗಿತ್ತು.

ನನಗೆ ಕೆಡುಕೆನಿಸಿತು. ಮನಸ್ಸಿಗೆ ನೆಮ್ಮದಿ ಇರಲಿಲ್ಲ. ಮನೆಗೆ ಹೋಗಿ ತಾಯಿಯನ್ನು ಭೆಟ್ಟಿಯಾಗಿ ಬರಬೇಕೆನಿಸಿತು. ಆದರೆ ಹಣ?

ನನಗೊಬ್ಬ ಹೊಸ ಗೆಳೆಯ ಸಿಕ್ಕಿದ್ದ. ಅವನ ಹೆಸರು ನಾಮದೇವ. ಭಕ್ತ ನಾಮದೇವನು ಪಂಢರಪುರದ ವಿಠ್ಠಲನನ್ನು ಪ್ರೀತಿಸುತ್ತಿದ್ದಂತೆ ಈ ನಾಮದೇವನು ಶ್ಯಾಮನನ್ನು ಪ್ರೀತಿಸುತ್ತಿದ್ದನು. ನಾನೇ ಅವನು, ಅವನೇ ನಾನು ಎಂಬಂತೆ ಆತ್ಮೀಯರಾಗಿದ್ದೆವು. ಹೇಳದಿದ್ದರೂ ನನ್ನ ಹೃದಯದಲ್ಲಿದ್ದುದು ಅವನಿಗೆ ಗೊತ್ತಾಗುತ್ತಿತ್ತು. ಸುಖದುಃಖಗಳು ಅವನಿಗೆ ಗೊತ್ತಾಗುತ್ತಿದ್ದವು. ನನ್ನ ಜೀವನಗ್ರಂಥ, ನನ್ನ ಹೃದಯಗ್ರಂಥವನ್ನು ಅವನು ಓದಿಕೊಂಡಿದ್ದನು. ನನ್ನ ಕಣ್ಣು, ನನ್ನ ಚರ್ಯೆಗಳಿಂದ ಅವನು ಎಲ್ಲವನ್ನು ಅರಿತುಕೊಳ್ಳುತ್ತಿದ್ದ. ನಮ್ಮಿಬ್ಬರಲ್ಲಿ ಅಷ್ಟು ಸ್ನೇಹವಿತ್ತು. ಎರಡು ದೇಹಗಳಲ್ಲಿ ಒಂದೇ ಮನಸ್ಸು, ಒಂದೇ

ಹೃದಯ ಇದ್ದಿತೆಂಬಂತೆ ನಾವಿದ್ದೆವು.

"ನಾಮದೇವ, ನನಗೆ ಊರಿಗೆ ಹೋಗಬೇಕೆನಿಸಿದೆ. ತಾಯಿ ಬಹಳ ಕಾಹಿಲೆಯಿದ್ದಂತೆ ಅನಿಸುತ್ತದೆ. ಒಂದೇಸಮನೆ ಚಡಪಡಿಕೆಯಾಗಿದೆ" ಎಂದು ನಾನು ಹೇಳಿದೆ.

"ಹಾಗಾದರೆ ಹೋಗು. ಭೆಟ್ಟಿಯಾಗಿ ಬಾ."

"ತಾಯಿಯನ್ನು ಕಣ್ಣುತುಂಬ ನೋಡಿ ಬರಬಹುದು. ಆದರೆ ಹಣ?"

"ನಿನ್ನೆ ನನ್ನ ಮನಿಯಾರ್ಡರು ಬಂದಿಲ್ಲವೇನು? ಅದು ನಿನಗಾಗಿಯೇ ಬಂದ ಹಾಗಿದೆ. ಹತ್ತು ರೂಪಾಯಿ ಬಂದಿವೆ. ನಿನಗೆ ಸಾಲಬಹುದು. ತಾಯಿಯನ್ನು ಭೆಟ್ಟಿಯಾಗಿ ಬಾ. ನನ್ನ ನಮಸ್ಕಾರಗಳನ್ನು ತಿಳಿಸು." ನಾಮದೇವನೆಂದನು.

ಕೆಲವೇ ಸಾಮಾನುಗಳನ್ನು ತೆಗೆದುಕೊಂಡು ನಾನು ಹೊರಟೆ. ನಾಮದೇವನು ನನ್ನನ್ನು ಕಳಿಸಲಿಕ್ಕೆ ರೈಲ್ವೆ ನಿಲ್ದಾಣಕ್ಕೆ ಬಂದಿದ್ದ. ನಾನು ಉಗಿ ಬಂಡಿಯಲ್ಲಿ ಕುಳಿತುಕೊಂಡೆ. ಇಬ್ಬರ ಕಣ್ಣು ತುಂಬಿಬಂದಿದ್ದವು.

"ಶ್ಯಾಮಾ, ಹೋದಕೂಡಲೆ ಪತ್ರ ಬರೆ" ನಾಮದೇವನು ಹೇಳಿದನು.

"ಆಗಲಿ" ನಾನೆಂದೆ.

"ನಿನ್ನ ಜೊತೆಗೇ ನಾನೂ ಬರಬಹುದಾಗಿತ್ತು. ಹಣವಿಲ್ಲ." ಅವನೆಂದನು.

"ನೀನು ನನ್ನ ಜೊತೆಗೆ ಇದ್ದೇಇರುವಿ." ನಾನು ಸಮಾಧಾನ ಹೇಳಿದೆ.

ರೈಲು ಹೊರಟಿತು. ಪ್ರೀತಿಯ ನಾಮದೇವನು ಕಣ್ಮರೆಯಾದನು. ಹೃದಯ ತುಂಬಿಬಂದಿತ್ತು. ಕಣ್ಣುಗಳಿಗೆ ಮಹಾಪೂರ ಬಂದಿತ್ತು. ಕಿಡಿಕಿಯಲ್ಲಿ ಗೋಣು ಹಾಕಿದ್ದೆ. ಕಣ್ಣೀರಿನ ಥಳಿ ಹಾಕುತ್ತ ಸಾಗಿದ್ದೆ.

ಬೋರೀಬಂದರದಲ್ಲಿ ಇಳಿದು ನೇರವಾಗಿ ಬಂದರಕ್ಕೆ ಹೋದೆ. ಅಣ್ಣನ ಭೆಟ್ಟಿಗೆಂದು ಗಿರಗಾಂವಕ್ಕೆ ಹೋಗಿದ್ದರೆ ಹಡಗು ತಪ್ಪಿ ಹೋಗುತ್ತಿತ್ತು. ನಾನು ಹಡಗವನ್ನೇರಿದೆ. ತೆರೆಗಳ ಮೇಲೆ ಹಡಗು ಕುಣಿಯುತ್ತಿತ್ತು. ನೂರಾರು ಭಾವನೆಗಳಿಂದಾಗಿ ನನ್ನ ಹೃದಯವೂ ಕುಣಿಯುತ್ತಿದ್ದಿತು. ರವೀಂದ್ರನಾಥರ ಗೀತಾಂಜಲಿಯು ನನ್ನ ಕೈಯಲ್ಲಿತ್ತು.

"ತಾಯೀ ನನ್ನ ಕಣ್ಣೀರಿನ ಮಾಲೆಯು ನಿನ್ನ ವಕ್ಷಸ್ಥಳವನ್ನು ಅಲಂಕ

ರಿಸೀತು ? ” ಇದನ್ನು ನಾನು ಓದುತ್ತಿದ್ದೆ. ನಿಜ ! ನಾನು ನನ್ನ ಬಡ ತಾಯಿಗೆ ಬೇರೆ ಏನನ್ನು ಕೊಡಬಲ್ಲೆ ? ಕಣ್ಣೀರಿನ ಹೊರತು ನನ್ನಲ್ಲಿ ಬೇರೆ ಏನೂ ಇರಲಿಲ್ಲ. ನಡುವೇ ಗೀತಾಂಜಲಿಯನ್ನು ಮುಚ್ಚಿ ಎದುರಿನಲ್ಲಿರುವ ಸಮುದ್ರವನ್ನು ನೋಡುತ್ತಿದ್ದೆ. ನೂರಾರು ತೆರೆಗಳು ಅಪ್ಪಳಿಸುತ್ತ ಸಾಗಿದ್ದವು. ಒಂದು ತೆರೆ ಮತ್ತೊಂದು ತೆರೆಗೆ ಜನ್ಮ ಕೊಡುತ್ತಿತ್ತು. ನನ್ನ ಹೃದಯಸಾಗರ ದಲ್ಲಿಯೂ ನೂರಾರು ಸ್ಮೃತಿಗಳು ತಾಕಲಾಟ ನಡೆಸಿದ್ದವು. ಒಂದು ಮತ್ತೊಂ ದಕ್ಕೆ ಜನ್ಮ ಕೊಡುತ್ತಿತ್ತು. ತಾಯಿಯ ನೂರಾರು ನೆನಪುಗಳು, ನೂರಾರು ಭಾವನಾಮಯ ಪ್ರಸಂಗಗಳು, ಕಣ್ಣೆದುರಿಗೆ ಬರುತ್ತಿದ್ದವು. ಸ್ಮೃತಿ ಪ್ರಪಂಚ ದಲ್ಲಿ ಧ್ಯಾನಮಗ್ನನಾದ ಋಷಿಯಂತೆ ನಾನು ತಲ್ಲೀನನಾಗಿದ್ದೆನು. ತಾಯಿಯ ಸ್ಮೃತಿಸಾಗರದಲ್ಲಿ ಈ ಶ್ಯಾಮನೆಂಬ ಮೀನ ಹಾರಾಡುತ್ತಿತ್ತು, ತೇಲಾಡುತ್ತಿತ್ತು ಕುಣಿದಾಡುತ್ತಿತ್ತು.

ಹರ್ಣೇ ಬಂದರದ ದೀಪಸ್ತಂಭ ಕಾಣತೊಡಗಿತು. ‘ ಹರ್ಣೆ, ಹರ್ಣೆ ’ ಎಂದು ಅಂಬಿಗರು ಕೂಗಹತ್ತಿದರು. ಅಲ್ಲಿ ಇಳಿಯುವವರು ತಮ್ಮ ಗಂಟು-ಮೂಟೆ ಸರಿಸಡಿಸಿಕೊಳ್ಳಹತ್ತಿದರು. ನನ್ನ ಚಿಕ್ಕ ಸಾಮಾನುಗಳ ಗಂಟನ್ನು ಕಟ್ಟಿಕೊಂಡು ಸಿದ್ಧನಾದೆ. ‘ ಇನ್ನು ಏಳೆಂಟು ತಾಸುಗಳನ್ನು ಕಳೆದ ಕೂಡಲೆ ನನ್ನ ಪ್ರೀತಿಯ ತಾಯಿಯನ್ನು ಕಾಣುತ್ತೇನೆ. ’ ಎಂದು ಮನದಲ್ಲಿಯೇ ಹೇಳಿ ಕೊಳ್ಳುತ್ತಿದ್ದೆ.

ಹರ್ಣೇಬಂದರ ಬಂದಿತು. ದೋಣಿ ಹಡಗದ ಹತ್ತಿರ ಬಂದು ನಿಂತಿತು. ನಾವೆಲ್ಲ ಅದರಲ್ಲಿ ಕುಳಿತೆವು. ಬಂದರದ ಮೇಲೆ ನಿಂತ ಒಂದು ವ್ಯಕ್ತಿ ನನ್ನ ಕಡೆಗೆ ದಿಟ್ಟಿಸಿ ನೋಡುತ್ತಿತ್ತು. ನನ್ನ ಗಮನ ಆ ಕಡೆಗೆ ಹೋಗಿರಲಿಲ್ಲ. ನನ್ನನ್ನು ಕಂಡು ಬಂದರದ ಮೇಲಿದ್ದ ವ್ಯಕ್ತಿಯ ಕಣ್ಣು ತುಂಬಿಬಂದಿದ್ದವು. ಯಾವ ಮೂರ್ತಿ ಅದು ?

ದೋಣಿ ದಡಕ್ಕೆ ಬಂದು ಸೇರಿತು. ನಾನು ಚೆಂಗನೆ ಕೆಳಗೆ ಹಾರಿ ಕೊಂಡೆ. ನೀರಿನಿಂದ ಬಂದರಕ್ಕೆ ಬಂದೆ. ರಭಸದಿಂದ ನಾನು ಸಾಗಿದ್ದೆ. ಅಷ್ಟ ರಲ್ಲಿ ಅಬಚಿ ಕಣ್ಣಿಗೆ ಬಿದ್ದಳು.

“ ಅಬಚೀ, ನೀನು ಈಕಡೆ ಎಲ್ಲಿ ? ಪುಣೆಗೆ ಮರಳಿ ಹೊರಟಿಯೇನು ? ತಾಯಿಗೆ ಪೂರ್ಣ ಗುಣವಾಯಿತೇ ? ” ಎಂದು ನಾನು ಕೇಳಿದ ಪ್ರಶ್ನೆಗೆ ಅಬ

ಚಿಯ ಗಂಗೆ–ಯಮುನೆಯರೇ ಉತ್ತರ ಕೊಟ್ಟರು.

“ ಅಬಚೀ, ಮಾತನ್ನೇಕೆ ಆಡುವದಿಲ್ಲ ” ನಾನು ಕಕ್ಕಾವಿಕ್ಕಿಯಾಗಿ ಕೇಳಿದೆ.

“ ಶ್ಯಾಮಾ, ನಿನ್ನ ತಾಯಿ – ನನ್ನ ಅಕ್ಕ – ದೇವರಬಳಿಗೆ ಹೋದಳು.”

ನನ್ನ ಶೋಕಸಾಗರವು ನನ್ನನ್ನು ತಡೆದು ನಿಲ್ಲಿಸದಾಯಿತು. ನಾವು ಹತ್ತಿರದ ಧರ್ಮಶಾಲೆಗೆ ಹೋದೆವು. ಇಬ್ಬರ ಬಾಯಿಂದಲೂ ಮಾತು ಹೊರಡ ದಂತಾಗಿತ್ತು.

“ ನನ್ನನ್ನೇಕೆ ಕರೆಸಲಿಲ್ಲ? ನನಗೆ ಕನಸು ಬಿದ್ದಿತೆಂದು ನಾನು ಹೊರಟು ಬಂದೆ. ಕನಸಿನಲ್ಲಿ ತಾಯಿ ನನ್ನನ್ನು ಕರೆಯುತ್ತಿದ್ದಳು. ಆದರೆ ಹೋದಳಲ್ಲ ನನ್ನ ತಾಯಿ. ಶಾಶ್ವತವಾಗಿ ಹೋಗಿ ಬಿಟ್ಟಳು ! ” ಎಂದು ನುಡಿದು ನಾನು ಅಳತೊಡಗಿದೆ.

“ ಶ್ಯಾಮಾ, ಆ ದಿವಸ ಬಾರಿಬಾರಿಗೂ ಅವಳು ನಿನ್ನನ್ನು ನೆನೆಸುತ್ತಿ ದ್ದಳು. ಒಂದೇಸಮನೆ ಅವಳಿಗೆ ನೀನು ಕಾಣಿಸುತ್ತಿದ್ದೆ. ಇನ್ನೂ ಶ್ಯಾಮನು ಹಟಮಾರಿಯಾಗಿದ್ದಾನೆಂದು ಹೇಳುತ್ತಿದ್ದಳು. ಎರಡೇ ದಿವಸಗಳಲ್ಲಿ ಅಕ್ಕನು ಸಾಯುವಳೆಂದು ಅನಿಸಿರಲಿಲ್ಲ. ನಿನ್ನನ್ನು ಕರೆಸಬೇಕೆಂದು ನಾನು ನಿರ್ಧರಿ ಸಿದ್ದೆ. ಆದರೆ ಆ ದಿವಸವೇ ಅವಳು ನಮ್ಮನ್ನಗಲಿದಳು. ಬಹಳ ಯತ್ನ ಮಾಡಿದೆವು. ಅವಳಿಗೆ ಯಾವ ತೊಂದರೆಯೂ ಆಗದಂತೆ ಎಚ್ಚರಿಕೆ ವಹಿಸಿ ದೆವು. ಎಲ್ಲವೂ ವ್ಯರ್ಥವಾಯಿತು. ಶ್ಯಾಮಾ, ಅಕ್ಕನು ನಿಮ್ಮನ್ನು ನನ್ನ ಉಡಿ ಯಲ್ಲಿ ಹಾಕಿದ್ದಾಳೆ. ನಾನು ನಿಮ್ಮ ಸೇವೆ ಮಾಡುತ್ತೇನೆ. ಯಾವುದಕ್ಕೂ ಚಿಂತಿಸಬೇಡ. ಎಷ್ಟು ಅತ್ತರೇನು, ಹೋದ ಜೀವ ಬರುವದೇ ? ” ಅಬಚಿ ಸಮಾಧಾನ ಹೇಳುತ್ತಿದ್ದಳು.

“ ಅಬಚೀ, ಮನಸ್ಸಿನಲ್ಲಿ ಎಂಥೆಂಥ ಅಭಿಲಾಷೆಗಳಿದ್ದವಲ್ಲ ? ನನ್ನ ತಾಯಿಗೆ ಸುಖಿಯನ್ನಾಗಿ ಮಾಡಬೇಕು, ಹೂವಿನಂತೆ ಅವಳನ್ನು ಸಲಹ ಬೇಕು, ಎಂದು ನಾನು ನಿಶ್ಚಯ ಮಾಡಿದ್ದೆ. ಆದರೆ ಇನ್ನು ಕಲಿಯುವದಾ ದರೂ ಏಕೆ ? ಕಲಿತು ತಾಯಿಯ ಸೇವೆಯನ್ನು ಮಾಡಲಿಕ್ಕೆ ಸಾಧ್ಯವಿಲ್ಲದ ಬಳಿಕ ಯಾವುದಕ್ಕೆಂದು ಕಲಿಯಬೇಕು ? ” ನಾನು ಹೇಳಿದೆ.

“ ನೀನು ನಿನ್ನ ತಮ್ಮನಿಗಾಗಿ, ತಂದೆಯವರಿಗಾಗಿ ಕಲಿ. ನನಗಾಗಿ

ಕಲಿ. ಜಗತ್ತಿಗಾಗಿ ಕಲಿ. ತಾಯಿಯನ್ನು ಪ್ರೀತಿಸುವಂತೆ ಜಗತ್ತನ್ನು ಪ್ರೀತಿಸು. ಜಗತ್ತಿನಲ್ಲಿ ದುಃಖಪಡುತ್ತಿದ್ದ ಮಾತೆಯರನ್ನು ಪ್ರೀತಿಸು." ಅಬಚಿಯು ಹೊಸ ದೃಷ್ಟಿಯನ್ನು ಕೊಡುತ್ತ ಹೇಳಿದಳು.

" ಅಬಚೀ, ನೀನೇಕೆ ಹಿಂತಿರುಗಿ ಹೊರಟೆ ? "

" ನನಗೆ ಅಲ್ಲಿ ನಿಲ್ಲಲು ಮನಸ್ಸಾಗಲಿಲ್ಲ. ನಾಳೆ ಮೂರನೆಯ ದಿವಸ. ಅಸ್ಥಿಯನ್ನು ಆರಿಸುವದು ನಾಳೆ. ನೀನು ಅವಳ ಪ್ರೀತಿಯ ಮಗ, ಅದಕ್ಕೆಂದೆ ಉತ್ತರಕ್ರಿಯೆಗೆ ಬಂದೆ. ಬರುವಾಗ್ಗೆ ಅಸ್ಥಿಯನ್ನು ತೆಗೆದುಕೊಂಡು ಬಾ. ಗಂಗೆಯಲ್ಲಿ ಒಯ್ದು ಹಾಕೋಣ. " ಎಂದು ಅಬಚಿ ಹೇಳಿದಳು.

" ಅಬಚೀ, ನಾನು ಮನೆಯಲ್ಲಿ ಹೇಗೆ ಹೋಗಲಿ ? ಕತ್ತಲು ತುಂಬಿದ ಮನೆಯಲ್ಲಿ ಹೇಗೆ ಅಡಿಯಿಡಲಿ ? "

" ಆ ಕತ್ತಲಲ್ಲಿ ತಾಯಿಯ ಮುಖಚಂದ್ರವಿರದಿದ್ದರೂ ತಂದೆಯೆಂಬ ನಕ್ಷತ್ರ, ತಮ್ಮನೆಂಬ ನಕ್ಷತ್ರ ಇರುತ್ತವೆ. ಅಲ್ಲಿ ಪೂರ್ಣ ಕತ್ತಲೆಯಿಲ್ಲ. ಅಲ್ಲಿ ಪ್ರೇಮದ ಪ್ರಕಾಶವಿದೆ. ಮನೆಗೆ ಹೋಗಿ ಅವರಿಗೆ ಧೈರ್ಯ ಕೊಡು. ನೀನು ಜಾಣನು. ವಿಚಾರವಂತನು. ಗೀತಾಂಜಲಿ ಮತ್ತು ಗೀತೆಯನ್ನು ಓದುವವನು. " ಆಬಚಿ ಹೇಳಿದಳು.

" 'ಶ್ಯಾಮಾ, ಬಂದೆಯಾ ? ತಡೆ, ದೇವರ ಮುಂದೆ ಬೆಲ್ಲವನ್ನು ಇಡುತ್ತೇನೆ' ಎಂದು ಇನ್ನು ಯಾರು ಹೇಳುತ್ತಾರೆ ಅಬಚಿ ? " ನಾನು ವಿಚಾರಿಸಿದೆ.

" ಶ್ಯಾಮಾ. ಈ ಪ್ರೇಮದ ಸ್ಮೃತಿಗಳು ನಿನ್ನಲ್ಲಿವೆ. ತಾಯಿ ಹೋದರೂ ಪ್ರೇಮರೂಪದ ತಾಯಿಯು – ಸ್ಮೃತಿರೂಪದ ತಾಯಿಯು – ನಿನ್ನ ಬಳಿಯಲ್ಲಿ ಇದ್ದಾಳೆ. ನೀನು ಹೋದಲ್ಲೆಲ್ಲ ಅವಳು ಇರತಕ್ಕವಳೇ. ನಡೆ, ಇನ್ನು ನಿನಗಾಗಿ ಒಂದು ಬಂಡಿಯನ್ನು ಗೊತ್ತು ಮಾಡೋಣ " ಎಂದು ನುಡಿದು ಅಬಚಿಯು ಒಂದು ಎತ್ತಿನ ಬಂಡಿ ಗೊತ್ತುಮಾಡಿ ಕೊಟ್ಟಳು. ಆಬಚಿ ಹೋಗುವ ಹಡಗ ದೂರ ಕಾಣುತ್ತಿತ್ತು. ಇನ್ನು ದೋಣಿಗಳು ಬಿಡುವ ಹೊತ್ತಾಯಿತೆಂದು ಅಬಚಿ ಹೊರಟು ಹೋದಳು.

ನಾನು ಎತ್ತಿನ ಬಂಡಿಯಲ್ಲಿ ಕುಳಿತುಕೊಂಡೆನು. ತಾಯಿಯ ನೆನಪು ಬರುತ್ತಿದ್ದವು! ನನ್ನ ಜೀವನ ಸಮುದ್ರದಲ್ಲಿ ಮತ್ತೆ ಮತ್ತೆ ತಾಯಿಯ ದಿವ್ಯ ಮೂರ್ತಿಯು ನೂರಾರು ತೆರೆಗಳಲ್ಲಿಂದ ಮೇಲೆಬರುತ್ತಿರುವಂತೆ ನನಗೆಕಂಡಿತು.

ತಾಯಿಯ ಕಷ್ಟಗಳು ಸಂಕಟಗಳು ನನಗೆ ಕಾಣಹತ್ತಿದವು. ಕಾರುಣ್ಯಮೂರ್ತಿ ತಾಯಿ! ಅವಳ ಪ್ರೇಮ, ತ್ಯಾಗ, ಸೇವೆ ಪರ್ವತಪ್ರಾಯವಾಗಿ ಕಾಣತೊಡಗಿದವು.

ಕೊನೆಗೊಮ್ಮೆ ನಾನು ಮನೆಗೆ ಬಂದೆ. ಹಿಂದೊಮ್ಮೆ ನಸುಕಿನಲ್ಲಿ ಇದೇ ರೀತಿ ಬಂದಿದ್ದೆ. ಆಗ ಮಜ್ಜಿಗೆ ಕುಡಿಯುವಾಗ ತಾಯಿ ಕೃಷ್ಣನ ಮಂಜುಳ ಗೀತಗಳನ್ನು ಹಾಡುತ್ತಿದ್ದಳು. ಇಂದು ಮನೆಯಲ್ಲಿ ಆ ಹಾಡು ಎಲ್ಲಿ ಬರಬೇಕು? ಅಲ್ಲಿ ಹಾಹಾಕಾರ ಉಂಟಾಗಿತ್ತು. ಮೂಲೆಯಲ್ಲೊಂದು ಮಿಣಿ ಮಿಣಿ ದೀಪ ಉರಿಯುತ್ತಿತ್ತು. ಗಾಢವಾದ ಶಾಂತತೆಯಿತ್ತು. ನಾನು ಬಾಗಿಲು ದೂಡಿದೆ. ಬಾಗಿಲಕ್ಕೆ ಒಳಗಡೆಯಿಂದ ಚಿಲಕ ಹಾಕಿರಲಿಲ್ಲ. ಅದು ತೆರೆಯಿತು. ತಂದೆಯವರು ಒಂದು ಗೋಣೀಪಾಟಿನ ಮೇಲೆ ಕುಳಿತುಕೊಂಡಿದ್ದರು.

“ಶ್ಯಾಮಾ, ನೀನು ಬರಲಿಕ್ಕೆ ಎರಡು ದಿವಸ ವಿಲಂಬವಾಯಿತು. ನಿನ್ನನ್ನು ಬಿಟ್ಟು ಹೋದಳು ಮಗನೇ,” ಎಂದು ಅವರು ನುಡಿದರು

ಪುರುಷೋತ್ತಮನು ಎಚ್ಚತ್ತನು. ‘ಅಣ್ಣಾ, ಅಣ್ಣಾ’ ಎಂದು ಕೂಗಿ ಅವನು ಅಳತೊಡಗಿದನು.' ಗಟ್ಟಿಯಾಗಿ ನನ್ನನ್ನು ಅವಚಿಕೊಂಡು ಅಳತೊಡಗಿದನು. ಆಗ ಇಬ್ಬರೂ ಮೂಕರಾಗಿದ್ದೆವು.

ದೂರ್ವೆಯ ಅಜ್ಜಿ ಹೇಳಿದಳು, “ಶ್ಯಾಮಾ, ಅವಳು ನಿನ್ನ ನೆನಪನ್ನೇ ಮಾಡುತ್ತಿದ್ದಳು. ಅವಳ ಪ್ರೀತಿಯ ಮಗ ನೀನು. ಅವಳ ಉತ್ತರಕ್ರಿಯೆಗಾದರೂ ಬಂದೆ. ಒಳ್ಳೆಯದಾಯಿತು. ಅಳಬೇಡ. ಇನ್ನು ಉಪಾಯವೇನಿದೆ? ನೀವು ದೊಡ್ಡವರಾಗುವ ವರೆಗೆ ಅವಳು ಇರಬೇಕಾಗಿತ್ತು. ಆದರೆ ದೇವರ ಮನಸ್ಸಿಗೆ ಬರಲಿಲ್ಲ.” ನಾನು ಕೇಳುತ್ತಲಿದ್ದೆ.

ಅಸ್ಥಿಗಳನ್ನು ಆರಿಸುವದಕ್ಕಾಗಿ ನಾನು ನದೀತೀರಕ್ಕೆ ಹೋದೆ. ಭಟ್ಟರೂ ನನ್ನ ಜೊತೆಗೆ ಇದ್ದರು. ಹೊಳೆಯ ದಂಡೆಯ ಮೇಲೆ ತಾಯಿಯ ಪುಣ್ಯದೇಹದ ಅಗ್ನಿಸಂಸ್ಕಾರ ಮಾಡಲಾಗಿತ್ತು. ತಾಯಿಯ ಭಸ್ಮಮಯ ಮೂರ್ತಿ ಅಲ್ಲಿ ಮಲಗಿದ್ದಿತು. ಭಸ್ಮಮಯ ದೇಹವು ಇದ್ದಕ್ಕಿದ್ದ ಹಾಗೆಯೇ ಇತ್ತು. ಗಾಳಿಯಿಂದ ಅಳಿದಿರಲಿಲ್ಲ. ಆ ಭಸ್ಮಮಯ ಮೂರ್ತಿಗೆ ನಾನು ಸಾಷ್ಟಾಂಗ ವೆರಗಿದೆ. ಅದು ಪಾರ್ಥಿವತೆಯನ್ನು ತೊರೆದು ಪವಿತ್ರ ಭಸ್ಮಮಯವಾದ ದೇಹವಾಗಿತ್ತು. ಪರಿಶುದ್ಧವಾದ ಭಸ್ಮಮಯ ಆಕಾರವನ್ನು ತಳೆದಿತ್ತು. ಬಾಳಿನ

ಲ್ಲಿಯ ತಪಶ್ಚರ್ಯದಿಂದ ಮೊದಲೇ ಅವಳ ದೇಹ ಸುಟ್ಟು ಭಸ್ಮವಾಗಿತ್ತು. ಒಳಗಿನಿಂದ ಬೆಂದು ಹೋಗಿತ್ತು. ಶಂಕರನ ಮೈಮೇಲಿನ ಭಸ್ಮದಂತೆಯೇ ಅದು ಪವಿತ್ರವಾಗಿತ್ತು. ಪವಿತ್ರ ಮನಸ್ಸಿನ, ಪರಿಶುದ್ಧ ಹೃದಯದ ಮಾತೆಯ ಚಿತಾಭಸ್ಮವದು !

ನಾನು ಅಸ್ಥಿಗಳಿಗಾಗಿ ಕೈ ಚಾಚಿದೆ ಭಸ್ಮಮಯ ಮೂರ್ತಿಯು ಭಿನ್ನವಾಯಿತು. ನನ್ನ ಹೃದಯದಲ್ಲಿ ಅಭಿನ್ನ ಮೂರ್ತಿಯನ್ನು ನಿರ್ಮಿಸಿಕೊಂಡು ಆ ಭಸ್ಮಮಯ ಮೂರ್ತಿಯನ್ನು ನಾನು ಭಿನ್ನಗೊಳಿಸಿದೆ. ಈ ನಶ್ವರ ಮೂರ್ತಿಗೆ ಬೇರೊಬ್ಬರ ಹೃದಯದಲ್ಲಿ ಅನಶ್ವರಮೂರ್ತಿಯನ್ನು ನಿರ್ಮಿಸಲು ಬರುವದೊಂದು ಭಾಗ್ಯವೇ ಅಲ್ಲವೇನು ? ನಾನು ಅಸ್ಥಿಗಳನ್ನು ಆರಿಸಿದೆ. ಮಂಗಳಸೂತ್ರದಲ್ಲಿಯ ಮಣಿಯೊಂದು ಸಿಕ್ಕಿತು. ಅದು ಸೌಭಾಗ್ಯ ಚಿಹ್ನವೆಂದು ಕಕ್ಕನು ತನ್ನ ಹೆಂಡತಿಯ ಕೊರಳಲ್ಲಿ ಹಾಕುವದಕ್ಕಾಗಿ ತೆಗೆದುಕೊಂಡು ಹೋದನು.

ಎಲ್ಲ ವಿಧಿಗಳನ್ನೂ ಪೂರೈಸಿಕೊಂಡು ನಾವು ಮನೆಗೆ ಹೋದೆವು. ಒಂದೊಂದೇ ದಿವಸ ಹೇಗೋ ಹೊರಟು ಹೋಗುತ್ತಿದ್ದವು. ಪುರುಷೋತ್ತಮನಿಂದ ಕಥೆಗಳನ್ನು ಕೇಳುತ್ತ ದಿನಗಳೆಯುತ್ತಿದ್ದೆ. ತಾಯಿಯ ನೆನಪಿನ ಪವಿತ್ರ ಗುರುಪುರಾಣವನ್ನು ಪುರುಷೋತ್ತಮನು ಹೇಳುತ್ತಿದ್ದ. ನಾನು ಶ್ರವಣಮಾಡುತ್ತಿದ್ದೆ. ನೆರೆಮನೆಯ ಇಂದಕ್ಕ ಮತ್ತು ರಾಧಾಬಾಯಿಯವರೂ ತಾಯಿಯ ಕರುಣಕಥೆಯನ್ನು ಹೇಳುತ್ತಿದ್ದರು. ತಾಯಿ ಪಟ್ಟಂಥ ಕಷ್ಟಗಳನ್ನು ಕೇಳಿ ನನ್ನ ಹೃದಯವು ಹಿಂಡಿಹಿಪ್ಪೆಯಾಯಿತು.

ತಾಯಿಯ ಪಿಂಡದಾನದ ದಿವಸ ಬಂದಿತು. ತಾಯಿಯ ಪಿಂಡಗಳನ್ನು ಕಾಗೆ ಒಮ್ಮೆಲೆ ಮುಟ್ಟುವವೋ ಇಲ್ಲವೋ, ಅವಳ ಮನೋಭಿಲಾಷೆಗಳೇನೇನು ಇದ್ದವೋ ಎಂದು ನನಗೆ ಸಂದೇಹ ಬರತೊಡಗಿತ್ತು. ಕಾಗೆಯು ಪಿಂಡವನ್ನು ಮುಟ್ಟದಿದ್ದರೆ ಮೃತಾತ್ಮರಿಗೆ ಶಾಂತಿಯಿಲ್ಲವೆಂದು ಹೇಳುತ್ತಾರೆ. ನಾವು ಹೊಳೆಗೆ ಹೋದೆವು ಪಿಂಡವನ್ನು ತಯಾರಿಸಿದವು. ಎಲ್ಲ ವಿಧಿಗಳೂ ಮುಗಿದ ಮೇಲೆ ಪಿಂಡಗಳನ್ನು ದರ್ಭದ ಮೇಲೆ ಇಡಲಾಯಿತು. ಅಲ್ಲಿ ಎಲ್ಲಿಯೂ ಕಾಗೆ ಕಾಣಿಸಲಿಲ್ಲ. ಭಟ್ಟರು ಕಾವ್ ಕಾವ್ ಎಂದು ಕಾಗೆಗಳಿಗೆ ಆಮಂತ್ರಣ ಕೊಟ್ಟರು. "ಬಂತು, ಅಲ್ಲೊಂದು ಕಾಗೆ ಬಂತು. ಅದರ ಹಿಂದೆಯೇ ಮತ್ತೊಂದು ಇದೆ." ಕಕ್ಕ ನುಡಿದರು. ನಮಗೆ ಸಮಾಧಾನವೆನಿಸಿತು.

ಪಿಂಡವನ್ನು ಇಟ್ಟು ನಾವು ಬದಿಗೆ ಸರಿದೆವು. ಕಾಗೆಗಳು ಪಿಂಡದ ಬಳಿಗೆ ಬಂದು ಕುಳಿತುಕೊಳ್ಳುತ್ತಿದ್ದವಾದರೂ ಅವನ್ನು ಮುಟ್ಟುತ್ತಿರಲಿಲ್ಲ. ಏನು ಮಾಡಬೇಕು? ಪಿಂಡದ ಸುತ್ತಲೂ ಸುತ್ತಾಡುತ್ತಿದ್ದರೂ ಮುಟ್ಟುತ್ತಿರಲಿಲ್ಲ. ನನ್ನ ಮನಸ್ಸಿಗೆ ನೋವಾಗಹತ್ತಿತು. ನಾನು ಹೇಳಿದೆ, "ಅಮ್ಮಾ, ನಿನ್ನ ಇಚ್ಛೆಯಿದ್ದರೆ ನಾನು ಮದುವೆಯಾಗುತ್ತೇನೆ. ವೈರಾಗಿಯಾಗುವದಿಲ್ಲ." ಆದರೂ ಕಾಗೆ ಮುಟ್ಟಲಿಲ್ಲ. ಕಕ್ಕ ಹೇಳಿದರು, "ನಾವು ಭಾವೂ ಅವರನ್ನು ದ್ವೇಷಿಸುವದಿಲ್ಲ. ಅವರನ್ನು ಪ್ರೀತಿಸುತ್ತೇವೆ." ಆದರೂ ಕಾಗೆ ಮುಟ್ಟಲಿಲ್ಲ. ಪಿಂಡಗಳನ್ನು ತೆಗೆದುಕೊಂಡು ಸ್ಥಳದಿಂದ ಸ್ಥಳಕ್ಕೆ ನಾನು ಅಲೆದಾಡಿದೆ. ನನಗೆ ದುಃಖ ಒತ್ತರಿಸಿ ಬಂದು ಬಿಟ್ಟಿತು. ಕಾಗೆ ಮುಟ್ಟದೆ ಹೋದರೆ ದರ್ಭದ ಕಾಗೆ ಮಾಡಿ ಮುಟ್ಟಿಸುತ್ತಾರೆ. ಆದರೆ ಆ ಸಂಗತಿಯ ಬಗ್ಗೆ ಊರಲ್ಲೆಲ್ಲ ಜನ ಆಡಿ ಕೊಳ್ಳತೊಡಗುತ್ತಾರೆ. ನನಗೆ ವಿಷಾದವೆನಿಸಿತು. ನಾನು ಹೇಳಿದೆ, "ಪಿಂಡ ವನ್ನು ತೆಗೆದುಕೊಂಡು ಮನೆಗೆ ಹೋಗೋಣ. ಅಲ್ಲಿ ಒಂದು ವೇಳೆ ಕಾಗೆ ಮುಟ್ಟಬಹುದು. ಇಷ್ಟರಲ್ಲಿ ದರ್ಭದ ಪ್ರಯೋಗ ಬೇಡ."

ಹೊಳೆಯಿಂದ ಭಾರವಾದ ಅಂತಃಕರಣದಿಂದ ಮನೆಗೆ ಬಂದೆವು. ಅಂಗ ಳದ ತುದಿಯಲ್ಲಿ ಬಾಳೆಗಿಡದ ಹತ್ತಿರ ಪಿಂಡವನ್ನು ಇಟ್ಟೆವು. ಸುತ್ತಲೂ ಕಾಗೆ ಸೇರಿದವು. ಆದರೆ ಒಂದು ಸಹ ಅದನ್ನು ಮುಟ್ಟಲಿಲ್ಲ.

ಕೊನೆಗೆ ನಮ್ಮ ದೂರ್ವೆಯ ಅಜ್ಜಿ ಮನೆಯಿಂದ ಹೊರಗೆ ಬಂದಳು ಅವಳು ಹೇಳಿದಳು, "ಯಶವದಾ, ಪುರುಷೋತ್ತಮನನ್ನು ನೋಡಿಕೊಳ್ಳಲು ನಾನಿದ್ದೇನೆ. ಏನೂ ಚಿಂತಿಸಬೇಡ. ಅವನಿಗೆ ಯಾವ ಕೊರತೆಯನ್ನೂ ಮಾಡು ವದಿಲ್ಲ." ಏನಾಶ್ಚರ್ಯವದು? ಅಜ್ಜಿಯ ಆಶ್ವಾಸನದ ನುಡಿಯನ್ನು ಕೇಳಿ ದೊಡನೆಯೇ ಕಾಗೆ ಬಂದು ಪಿಂಡವನ್ನು ಸ್ವೀಕರಿಸಿತು.

ನನ್ನ ಕಣ್ಣುಗಳಲ್ಲಿ ನೀರೂರಿದವು. ಅಬಚಿಯು ಹೊರಟುಹೋಗಿದ್ದಳು ಪುಟ್ಟ ಪುರುಷೋತ್ತಮನೊಬ್ಬನೆ ಮನೆಯಲ್ಲಿ ಅಜ್ಜಿಯ ಬಳಿ ಇರತಕ್ಕವನು ಅವನು ತುಸು ತುಂಟನಾಗಿದ್ದ. ಅವನಿಗೆ ಕಷ್ಟವಾದೀತು, ಹೊಡೆತ ತಿಂದಾನು ತಿರಸ್ಕರಿಸಲ್ಪಟ್ಟಾನು ಇವೇ ಮೊದಲಾದ ಚಿಂತೆ ತಾಯಿಗೆ ಇದ್ದಿತು. ತಾಯಿ, ಎಂಥ ಪ್ರೇಮ ನಿನ್ನದು! ನಿನ್ನ ಪ್ರೇಮಕ್ಕೆ ಅಳತೆ-ತೂಕಗಳಿಲ್ಲ. ಅದು ಆಕಾಶಕ್ಕಿಂತಲೂ ದೊಡ್ಡದಾಗಿದೆ. ಸಮುದ್ರಕ್ಕಿಂತಲೂ ಆಳವಾಗಿದೆ. ಈಶ್ವರನ

ಎಷ್ಟೊಂದು ಪ್ರೇಮಮಯನಾಗಿದ್ದಾನೆಂಬುದರ ಕಲ್ಪನೆಯು ಈ ಪ್ರಪಂಚ ದಲ್ಲಿಯ ತಾಯಿಯ ಮೇಲಿಂದ ಸಹಜವಾಗಿ ಬರಬಹುದು. ಸ್ವಂತ ಪ್ರೇಮದ ಅರಿವನ್ನು ಜಗತ್ತಿಗೆ ಮಾಡಿಕೊಡುವುದಕ್ಕಾಗಿಯೇ ಆ ಜಗನ್ಮಾತೆಯು ತಾಯಿ ಯನ್ನು ಕಳಿಸಿಕೊಟ್ಟಿರುತ್ತಾಳೆ.

ಗೆಳೆಯರೇ, ನನ್ನ ತಾಯಿ ಹೋದಳು. ಅವಳ ಜೀವನವು ಕೊನೆಗಂಡಿ ದ್ದರೂ ಅವಳ ಚಿಂತೆಯು ಮುಗಿದಿರಲಿಲ್ಲ. ತಾಯಿಯ ಮಕ್ಕಳೆಲ್ಲ ಸುಖಿಗಳಾ ಗಿರುವ ತನಕ ಅವಳಿಗೆ ಸುಖವಿಲ್ಲ. ತಾಯಿಯ ಎಲ್ಲ ಮಕ್ಕಳ ವಿಕಾಸವಾ ಗುವವರೆಗೂ ಅವಳಿಗೆ ಶಾಂತಿಯಿಲ್ಲ. ಎಲ್ಲಿಯವರೆಗೆ ಯಾವನೊಬ್ಬನ ಕಣ್ಣಲ್ಲಿ ನೀರು ತಪ್ಪುವದಿಲ್ಲವೋ, ಅನ್ನ, ವಸ್ತ್ರ, ಜ್ಞಾನಗಳ ಅಭಾವದಿಂದಾಗಿ ಯಾವ ನೊಬ್ಬನು ಗೋಳಾಡುವನೋ, ಅಲ್ಲಿಯ ವರೆಗೆ ಅವಳಿಗೆ ಸಮಾಧಾನವಿಲ್ಲ. ಸಹೋದರರು ಪರಸ್ಪರರನ್ನು ಪ್ರೀತಿಸುತ್ತ ಒಬ್ಬರಿಗೊಬ್ಬರು ಸಹಾಯ ಮಾಡುತ್ತ ಇರುವವರೆಗೆ, ಶ್ರೇಷ್ಠ-ಕನಿಷ್ಠರೆಂದು ಬಡಿದಾಡದೆ ಒಬ್ಬರನ್ನೊಬ್ಬರು ಸಾಕಿ ಸಲಹುತ್ತ ಹರ್ಷಚಿತ್ತರಾಗಿರುವರೆಂದು ತಾಯಿಗೆ ಮನವರಿಕೆಯಾಗುವ ವರೆಗೆ ಅವಳಿಗೆ ಶಾಂತಿ ಇಲ್ಲ. ಮುಕ್ತಿಯಿಲ್ಲ. ಅಲ್ಲಿಯವರೆಗೆ ಅವಳು ಅಳು ತ್ತಲೇ ಇರುವಳು! ಅವಳ ಚಿಂತಾಗ್ನಿಯು ಧಗಧಗಿಸುತ್ತಲೇ ಇರುವದು.

ರಾತ್ರಿ : ೪೨

## : : ತಾಯಿಯ ಸ್ಮೃತಿ ಶ್ರಾದ್ಧ

ಗೆಳೆಯರೇ, ಇಂದು ಕೊನೆಯನೆನಪನ್ನು ಹೇಳತಕ್ಕವನಿದ್ದೇನೆ. ಈ ನನ್ನ ಸ್ಮೃತಿ ಶ್ರಾದ್ಧವನ್ನು ಇಂದಿಗೆ ಮುಗಿಸತಕ್ಕವನಿದ್ದೇನೆ. ನನ್ನ ಹೃದಯಾ ಕಾಶದಲ್ಲಿ ಸ್ಮೃತಿಗಳ ಅನಂತ ನಕ್ಷತ್ರಗಳಿವೆ. ಅದರಲ್ಲಿಯ ಕೆಲವು ಪ್ರಮುಖ ನಕ್ಷತ್ರಗಳನ್ನು ಮಾತ್ರ ಬೆಳಗಿಸಿದ್ದೇನೆ. ಇಂದು ಕೊನೆಯ ತಾರೆಯನ್ನು ಬೆಳ ಗಿಸುವೆನು.

ನನ್ನ ತಾಯಿಯನ್ನು ಆಳುಕಾಳುಗಳು ಪ್ರೀತಿಸುತ್ತಿದ್ದಂತೆಯೇ ಪಶುಪಕ್ಷಿ ಗಳು ಕೂಡ ಪ್ರೀತಿಸುತ್ತಿದ್ದವು. ತಾಯಿಯನ್ನು ಕಪಿಲೆ ಆಕಳು ಎಷ್ಟೊಂದು

ಪ್ರೀತಿಸುತ್ತಿದ್ದಿತೆಂಬುದನ್ನು ಈಮೊದಲೇ ಉಲ್ಲೇಖಿಸಲಾಗಿದೆ. ಈಗ ಬೆಕ್ಕಿ: ಕತೆ ಹೇಳಬೇಕಾಗಿದೆ. ಆ ಬೆಕ್ಕಿನ ವಿಷಯವನ್ನು ಈ ಮೊದಲು ತುಸು ಹೇ ದ್ದೇನೆ. ಆ ಬೆಕ್ಕಿನ ಹೆಸರು ಮಥೂ. ಅದು ತಾಯಿಯ ನೆಚ್ಚಿನ ಬೆಕ್ಕಾಗಿತ್ತ ತಾಯಿಯ ಎಲೆಯ ಹತ್ತಿರ ಊಟ ಮಾಡುತ್ತಿತ್ತು. ಬೇರೆಯವರು ಹ ದ್ದನ್ನು ಅದು ತಿನ್ನುತ್ತಿರಲಿಲ್ಲ. ತಾಯಿ ಊಟಕ್ಕೆ ಕುಳಿತಳೆಂದರೆ ಅ. ಊಟಕ್ಕೆ ಬರುತ್ತಿತ್ತು.

ಮಥೂ ಯಾವಾಗಲೂ ತಾಯಿಯಸುತ್ತಲೂ ಸುಳಿಯುತ್ತಿತ್ತು. ತಾಯಿ ಹೊರಕಡೆಗೋ, ನೀರಿಗೋ ಹೋದರೆ ಅಲ್ಲಿಗೂ ಅದು ಹೋಗುತ್ತಿತ್ತು. ತನ್ನ ಬಾಲದಿಂದ ತಾಯಿಯ ಕಾಲನ್ನು ತಟ್ಟುತ್ತ ಕುಣಿಯುತ್ತಿತ್ತು. ಅದು ನನ್ನ ತಾಯಿಯನ್ನು ಬಹಳ ಪ್ರೀತಿಸುತ್ತಿತ್ತು.

ತಾಯಿಯ ಕಾಹಿಲೆ ಹೆಚ್ಚಿದಂತೆಲ್ಲ ಮಥೂ ಕೂಡ ಸರಿಯಾಗಿ ತಿಂದು ಉಂಡು ಮಾಡುತ್ತಿರಲಿಲ್ಲ. ತಾಯಿ ಕಲಸಿದ ಅನ್ನ ಅದಕ್ಕೆ ದೊರೆಯದಾಯಿತು ಬೇರೆಯವರು ಹಾಲು, ಮೊಸರು, ತುಪ್ಪ ಸೇರಿದ್ದ ಅನ್ನ ಹಾಕಿದರೂ ಅ ಎರಡು ತುತ್ತು ತಿಂದು ಹೊರಟು ಹೋಗುತ್ತಿತ್ತು. ತಾಯಿ ಬರಿ ಅನ್ನ ಹಾಕು ತ್ತಿದ್ದರೂ ಅದರಲ್ಲಿ ಅದಕ್ಕೆ ಹಾಲು, ತುಪ್ಪ ಇದ್ದಷ್ಟು ಆನಂದವಿರುತ್ತಿತ್ತು ಬೇರೆಯವರ ಹಾಲು, ತುಪ್ಪ ಅದಕ್ಕೆ ರುಚಿಸುತ್ತಿರಲಿಲ್ಲ.

ತಾಯಿ ಸತ್ತ ದಿವಸ ಅದು ಒಂದೇ ಸವನೆ ' ಮಿಯಾವ್, ಮಿಯಾವ್ ಮಾಡುತ್ತಿತ್ತು. ಅದರ ಪ್ರೀತಿಯ ಗಂಟನ್ನೇ ಹೊತ್ತುಕೊಂಡು ಹೋದಷ ದುಃಖ ಅದಕ್ಕೆ ಆಗಿತ್ತು. ಹಾಲು ತುಪ್ಪದ ಹೊಳೆಯನ್ನೇ ಯಾರೋ ಒ ಹಾಗೆ ಅದಕ್ಕೆ ವ್ಯಥೆಯಾಗಿತ್ತು. ಆ ದಿವಸದಿಂದ ಮಥೂ ಅನ್ನಕ್ಕೆ ಬ ಹಚ್ಚಲಿಲ್ಲ. ತಾಯಿ ಸತ್ತ ಕೋಣೆಯಲ್ಲಿ ಮೃತಾತ್ಮಕ್ಕೆಂದು ನಾವು ಹಾಲ ನೀರು ಇಡುತ್ತಿದ್ದೆವು. ಆ ರೂಢಿ ನಮ್ಮಲ್ಲಿದೆ. ಆದರೆ ಮಥೂ ಆ ಹಾಲನ್ನು ಕೂಡ ಮುಟ್ಟಲಿಲ್ಲ. ತಾಯಿ ಸತ್ತ ಕೋಣೆಯಲ್ಲಿಯೇ ಅದು ಬಿದ್ದುಕೊಂಡು ಇತ್ತು. 'ಮ್ಯಾಂವ್, ಮ್ಯಾಂವ್' ಎಂದು ಕೂಗುವದನ್ನೂ ಬಿಟ್ಟಿತು. ಅದು ಉಪವಾಸ ಮತ್ತು ಮೌನವ್ರತವನ್ನು ಹಿಡಿದು ಕುಳಿತುಕೊಂಡಿತ್ತು! ಮೂರನೆಯ ದಿವಸ ಅದು ತಾಯಿ ಸತ್ತ ಸ್ಥಳದಲ್ಲಿಯೇ ತನ್ನ ಪ್ರಾಣವನ್ನು ಬಿಟ್ಟಿತು. ನನ್ನ ತಾಯಿಯ ಮಮತೆಯ ಬೆಕ್ಕು ತಾಯಿಯ ಜೊತೆಗೇ ಹೊರಟು

ಹೋಯಿತು. ನನ್ನ ತಾಯಿಯ ಪ್ರೇಮವನ್ನುಳಿದು ಈ ಜಗತ್ತಿನಲ್ಲಿ ಬಾಳುವವೇ ಅದಕ್ಕೆ ದುಸ್ತರವೆನಿಸಿತ್ತು. ನಮ್ಮ ತಾಯಿಯ ಮೇಲೆ ನಮ್ಮ ಪ್ರೀತಿಗಿಂತಲೂ ಆ ಬೆಕ್ಕಿನ ಪ್ರೀತಿಯೇ ಹೆಚ್ಚಾಗಿದ್ದಿತು. ನಮ್ಮ ಪ್ರೀತಿಯ ಬಗ್ಗೆ ನಮಗೆ ನಾಚಿಕೆಯಾಯಿತು. ನಾನು ಮನಸ್ಸಿನಲ್ಲಿಯೇ ಹೇಳಿಕೊಂಡೆ, "ತಾಯಿ, ನನ್ನ ಪ್ರೇಮ ನಿನ್ನ ಮೇಲಿದೆಯೆಂದು ಯಾವ ಮುಖದಿಂದ ಹೇಳಲಿ ? ಈ ಬೆಕ್ಕಿನ ಪ್ರೇಮದ ಮುಂದೆ ನನ್ನ ಪ್ರೇಮವು ತುಚ್ಛವಾದದ್ದು!"

ಗೆಳೆಯರೇ, ಹೀಗೆ ನನ್ನ ತಾಯಿಯಿದ್ದಳು. ಪ್ರಪಂಚದ ಪೇಟೆಯಲ್ಲಿ ಇಂಥ ತಾಯಿ ದೊರೆಯಲು ಭಾಗ್ಯ ಬೇಕಾಗುವದು. ನನಗೆಲ್ಲವನ್ನೂ ಕೊಟ್ಟವಳು ನನ್ನ ತಾಯಿ. ನನ್ನಲ್ಲಿರುವ ಒಳ್ಳೆ ಹಾಗು ಪವಿತ್ರ ಗುಣಗಳು ಅವಳವು. ನನ್ನ ತಾಯಿ ಹೋದರೂ ಭಾರತಮಾತೆಯ ಸೇವೆಗಾಗಿ ನನ್ನನ್ನು ಅಣಿಗೊಳಿಸಿ ಹೋಗಿದ್ದಾಳೆ. ಜಪಾನದ ತಾಯಿಯೊಬ್ಬಳು ತನ್ನ ಎದೆಯಲ್ಲಿ ಚೂರಿಯನ್ನು ಚುಚ್ಚಿಕೊಂಡು ಆತ್ಮಹತ್ಯೆ ಮಾಡಿಕೊಂಡಳು. ಆಗ ಅವಳು ತನ್ನ ಮಗನಿಗೊಂದು ಪತ್ರ ಬರೆದಿಟ್ಟಿದ್ದಳು, "ನನ್ನ ಸಲುವಾಗಿ ನೀನು ಯುದ್ಧಕ್ಕೆ ಹೋಗುತ್ತಿಲ್ಲ, ನನ್ನ ಮೋಹದಲ್ಲಿ ನೀನು ಸಿಲುಕಿಕೊಂಡಿರುವಿ. ನಿನ್ನ ದಾರಿಯಲ್ಲಿಯ ಮುಳ್ಳನ್ನು ನಾನು ತೆಗೆದು ಒಗೆದಿದ್ದೇನೆ." ನನ್ನ ತಾಯಿಯ ದಿವ್ಯ ದೃಷ್ಟಿಗಾದರೂ ಇದೇ ರೀತಿ ಕಂಡಿರಬೇಕು. 'ಈ ಶ್ಯಾಮನು ನನ್ನ ಮೋಹದಲ್ಲಿಯೇ ತೊಡಗಬಹುದು. ಕೇವಲ ನನ್ನ ಈ ಮೂರೂವರೆ ಮೊಳದ ದೇಹದ ಪೂಜೆ ಮಾಡುತ್ತ ಕುಳಿತುಕೊಳ್ಳಬಹುದು' ಎಂದು ಅವಳಿಗೆ ಕಂಡಿರಬಹುದು. ಬೇರೆ ಬಂಧು ಭಗಿನಿಯರ ಸೇವೆಗೆ ಅವನು ಹೋಗಲಿಕ್ಕಿಲ್ಲ, ಮಾತೃಮೋಹದಿಂದ ಅವನು ಸ್ವಾತಂತ್ರ್ಯ ಯುದ್ಧದಲ್ಲಿ ಧುಮುಕಲಿಕ್ಕಿಲ್ಲ, ಎಂದು ತಾಯಿಯು ಕಣ್ಮರೆಯಾಗಿರಬಹುದು. ಭಾರತದಲ್ಲಿಯ ಎಲ್ಲ ತಾಯಿಯರೂ ನನ್ನ ಶ್ಯಾಮನ ತಾಯಿಯರಾಗಲಿ, ಒಬ್ಬಳ ಬದಲು ನೂರಾರು ತಾಯಿಯರು ಶ್ಯಾಮನಿಗೆ ದೊರೆಯಲಿ, ಎಂಬ ವಿಚಾರದಿಂದ ತಾಯಿ ಹೋಗಿರಬಹುದು. ಈ ಅಸಂಖ್ಯ ತಾಯಿಯರನ್ನು ಕಾಣುವ ದಿವ್ಯ ದೃಷ್ಟಿಯನ್ನು ಕೊಟ್ಟು ತಾಯಿ ಹೋದಳು. ಈಗ ಎಲ್ಲೆಲ್ಲಿಯೂ ನನ್ನ ತಾಯಿಯರೇ. ಉತ್ತಮನ ತಾಯಿ ನನ್ನ ತಾಯಿಯೇ, ದತ್ತನ ತಾಯಿ ನನ್ನ ತಾಯಿಯೇ, ಗೋವಿಂದನ ತಾಯಿ ನನ್ನ ತಾಯಿಯೇ, ವಸಂತರಾಯರ ತಾಯಿ ನನ್ನ

ತಾಯಿಯೇ, ಎಲ್ಲರೂ ನನ್ನ ತಾಯಿಯರೇ. ಹೌದು, ಎಲ್ಲರೂ ನನ್ನ ತಾಯಿಯರು! ಇದನ್ನೆಲ್ಲ ನೋಡಲು ದಿವ್ಯದೃಷ್ಟಿಯನ್ನು ಕೊಟ್ಟು, ಆ ದಿವ್ಯ ದೃಷ್ಟಿಯು ಬರಬೇಕೆಂದು ತನ್ನ ಶರೀರ ತ್ಯಾಗವನ್ನು ಮಾಡಿದ ಆ ಮಹಾ ಮಾತೆಯ ಗುಣಗಾನವನ್ನು ಎಷ್ಟೆಂದು ಮಾಡಲಿ? ಈ ತುಟಿಗಳಿಗೆ ಶಕ್ತಿ ಸಾಲದು. ಆ ಪ್ರೇಮ, ಆ ಕೃತಜ್ಞತೆ, ಆ ಕರ್ತವ್ಯ ಬುದ್ಧಿ, ಆ ಸಹಿಷ್ಣುತೆ, ಆ ಮಧುರತೆ, ನನ್ನ ಪ್ರತಿಯೊಂದು ಕೃತಿಗಳಲ್ಲಿಯೂ ಪ್ರಕಟವಾಗಲಿ. ಒಂದು ದಿವಸ ಈ ಮಾತೆಯ ಸೇವೆಯನ್ನು ಮಾಡುತ್ತಿರುವಾಗ-ಈ ಭವ್ಯವಾದ ಮತ್ತು ವಿಶಾಲವಾದ ತಾಯಿಯ ಸೇವೆಯನ್ನು ನನ್ನ ಶಕ್ತ್ಯಾನುಸಾರ, ಗುಣಧರ್ಮಾನುಸಾರ, ಮಾಡುತ್ತಿರುವಾಗ - ಮಥೂ ಬೆಕ್ಕಿನಂತೆ ನನ್ನ ಮಾತೃಪ್ರೇಮವು ಅಮರವಾಗಲಿ! ನನ್ನ ತಾಯಿಯೂ ಅಮರಳಾಗಿದ್ದಾಳೆ! ಅವಳ ಶ್ಯಾಮನೂ ಅಮರನಾಗಲಿ!

❀ ಜಯ್ ಹಿಂದ್! ❀